ಪಯಣ

ಜಯಂತಿ

ಜೂನ್ ೧೯೪೪

ವಾರ್ಷಿಕ ವರ್ಗಣಿ . . ೪—೮—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಸೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್.ಜಿ. ಬೇಂದ್ರೆ

ಪ್ರಕಾಶಕರು— ಶ್ರೀ. ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೪೦	ಒಂದು ಸಲ
½	,,	,,	೨೫	,,
¼	,,	,,	೧೫	,,
೧/೮	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

—೦—

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.

For particulars write to

Advt: *Manager*, Jayanti; Dharwar

ನಮ್ಮ ಮುಂಬಯಿಯ ಏಜಂಟರು—

BOMBAY BOOK AGENCY .

Dadar, BOMBAY.

ಈ ಸಂಚಿಕೆಯಲ್ಲಿ:

ಹೊದಿಕೆಯ ಮೇಲಿನ ಚಿತ್ರ ಶ್ರೀಯುತ ಶಂಕರರಾವ ಕಿಲ್ಲೋಸ್ಕರ್ ಅವರದು.

ಕಲ್ಕಿ ಉದಯ (ಕವನ)
'ಅಂಬಿಕಾತನಯ ದತ್ತ' ೧

ಜಯಂತಿಯ ಹೊಸವರ್ಷ (ಸಂಪಾದಕೀಯ)
ಸಂಪಾದಕರು ೨

ದಿಕ್ಕೆಟ್ಟ ಸಂಧ್ಯಾರಾಗ (ಒಂದು ಜೀವನ ಚಿತ್ರ)
ಶ್ರೀ. ರಂ. ಸ್ವಾ. ದೇಶಪಾಂಡೆ, ಆಲದಕಟ್ಟಿ ೫

ಆಶಾಕುಸುಮ (ಕವನ)
ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ ೧೨

ರಾಮರಾಜನ ವಿನೋದ (ಐತಿಹಾಸಿಕ ಸಂಗತಿ)
ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ ೧೩

ಕಿಲ್ಲೋಸ್ಕರ ಶಂಕರರಾಯರು (ವ್ಯಕ್ತಿಪರಿಚಯ)
ಶ್ರೀ. ಬಾ. ಕೃ. ಗಲಗಲಿ, ಕಿಲ್ಲೋಸ್ಕರವಾಡಿ ೧೬

ಓಂಗ ನಡದಂದ ನೋಡ್ರಿ! (ವ್ಯಂಗ್ಯದೃಶ್ಯ)
ಶ್ರೀ. ವೆಂಕಣ್ಣಾಚಾರ್ಯ ಪಪ್ಪು ಎಲ್ಎಲ್.ಬಿ. ಹುಬ್ಬಳ್ಳಿ ೧೯

ಕಲೆಯೋ ಕನಸೋ? (ವಿವೇಚನಾತ್ಮಕ ಪ್ರಬಂಧ)
ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ ೨೩

ಆಪತ್ತಿ (ಸಣ್ಣಕತೆ)
ಶ್ರೀ ಎಸ್. ಶ್ರೀಕೃಷ್ಣ, ಪೆರಡಾಲ ೨೭

ಅಂದಿನಿಂದ ಇಂದಿನ ವರೆಗೆ (ವಿಚಾರ ಪ್ರಚೋದಕ ಪ್ರಬಂಧ)
ಶ್ರೀ. ದ. ರಾ. ಬೇಂದ್ರೆ ಎಂ ಎ. ಸೊಲ್ಲಾಪುರ ೩೨

ಪಿಯೆಚ್ಡಿ. ಡೊಂಕ (ವ್ಯಕ್ತಿಚಿತ್ರ)
ಶ್ರೀ. ಕೈಂತಜೆ ಗೋವಿಂದ ಭಟ್ಟರು ಬಿ.ಎ.,ಬಿ.ಎಲ್ ೩೪

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ ಎಲ್. ವಿ. ಜೋಶಿ, ಹುಬ್ಬಳ್ಳಿ ೩೭

ಉ.ಕ. ಜಿಲ್ಲೆಯ ಜನಪದ ಸಾಹಿತ್ಯ (೨ನಕೆವಾಡು)
ಶ್ರೀ. ಉಪೇಂದ್ರ ನಾಯಕ, ಕಾರವಾರ ೪೦

ಪುಸ್ತಕವಿಮರ್ಶೆ (ವಿಜಯಯಾತ್ರೆ ಮತ್ತು ಬಾಳಿನ ಚಿತ್ರ)
ಶ್ರೀ. ಗಳಾದ ಬಸವರಾಜ ಮತ್ತು ಎನ್. ಎಸ್. ಜಿ. ೪೧

ನಗೀಗೆ ನೈವೇದ್ಯ
'ನಕ್ಕೇ ನಾರಾಯಣಾಚಾರ್ಯ' ೪೩

ಸಾದರ ಸ್ವೀಕಾರ ೪ ಮತ್ತು ೪೪

ವರ್ಷ ೧೫
ಜೂನ್
ಸಂಚಿಕೆ ೧
೧೯೪೯



ಕಲ್ಕಿ ಉದಯ

' ಅಂಬಿಕಾತನಯದತ್ತ '

★

ಬುದ್ಧ.... ಬುದ್ಧ....
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ.

ಮಡದಿ, ಮಗು, ಮನೆ-ಮಾರು, ರಾಜ್ಯಗೀಜ್ಯ
ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ.
ಹಿಂದೆ ಬಿದ್ದುವು ಎಲ್ಲೊ ಕುದುರೆ-ಕಾಲಾಳು ;
ಬೆಚ್ಚಿ ಉದುರಿತು ಎಲ್ಲೊ ಮನದ ಬಾಳು ;
ಹೊರಟ, ಹೊರಟೇ ಹೊರಟ — ಹೊರಟನೆತ್ತೋ
ಸಾಹಸಿಯ ಗೊತ್ತು–ಗುರಿ ಅವಗು ಗೊತ್ತೊ !

ಕಾಮ–ಕ್ರೋಧವ ದಾಟಿ, ಮದ-ಮತ್ಸರವ ತುಳಿದು
ಮೋಹ-ಲೋಭವ ಮೆಟ್ಟಿ ಆಡಿಕಿತ್ತಿ ಇಟ್ಟ.
ಇದೊ ತಗ್ಗು, ಅದೊ ಗುಡ್ಡ, ಅದೊ ಮಲೆಯು, ಬೆಟ್ಟ–
ನೆಲ ಕೆಳಗೆ ಬಿಟ್ಟ.

ಏರಿದೇರಿದನೇರಿ ಗಾಳಿಗುದುರೆ ಸವಾರಿ—
ಚಂದ್ರಕಿರಣವ ಮೀರಿ ಸೂರ್ಯ ಸೇರಿ,
ಬೆಳಕನ್ನೆ ಹಿಂದೊಗೆದು ತಮದ ಒಸಿರನೆ ಬಗೆದು

ಅಸ್ಪರ್ಶ ಅವಕಾಶದಲ್ಲಿ ಇದ್ದ ;
ಬುದ್ಧ.... ಬುದ್ಧ.... ಬುದ್ಧ.... !

ಶಬ್ದನಾದ–ಧ್ವನಿಯ ಸದ್ದ ಮೀರಿದ್ದ
ಇಲ್ಲ ಎಂಬುವ ಕೊನೆಗೆ ಆತ್ಮಶುದ್ಧ
ಇದ್ದರೇನಿಲದಿದ್ದರೇನೆನಲು ಗೆದ್ದ.

ಆಲ್ಲಿಂದ ಇಲ್ಲಿವರೆ ಹೊರಳಿ ನೋಡಿ,
ಇದ್ದು ದಿದ್ದಂತಿತ್ತು ಜನನ-ಮರಣದ ಜೋಡಿ
ಗೆದ್ದುದೇನೆಂದೆನುತ ಮರಳಿ ಜಿಗಿದ,
ಭೂತಜಾತದ ಎದೆಯ ಸೀಳಿ ಸಿಗಿದ,
ಅದೆ ತನ್ನ ಮನೆಯೆಂದು ಸಿದ್ಧ ಬಗೆದ.

' ಬುದ್ಧನೆಂಬವನೊಬ್ಬ ಎಂದೊ ಇದ್ದ '
ಎನುವಂತೆ ಇಂದಿಗೂ ಇಲ್ಲೆ ಇಲ್ಲ !
ಬುದ್ಧ ಹುಟ್ಟಿದ ಮೇಲೆ ಹಳೆಯ ಜಗ ಸತ್ತು
ಇದ್ದು ಇಲ್ಲದ ಹಾಗೆ — ಹಾಂಗೆ ಇತ್ತು.
' ಬುದ್ಧ ಸತ್ತನು ' ಎಂದು ಯಾರೆಂದರೂ
ಬುದ್ಧನ ಜಯಂತಿಗಿದೆ ಜಯವೆಂದಿಗೂ.

ಬುದ್ಧನ ಸಮಾಧಿಯದು ಮಾನವನ ಹೃದಯ—
ಅದುವೆ ಕಾಯುತ್ತಲಿದೆ ಕಲ್ಕಿ ಉದಯ !

ಜಯಂತಿಯ ಹೊಸವರ್ಷ

ಇದೀಗ ಕೈಯಲ್ಲಿರುವ ಸಂಚಿಕೆಯಿಂದ ಜಯಂತಿಯ ೧೨ನೆಯ ವರ್ಷ ಪ್ರಾರಂಭವಾಯಿತು. ಈ ಕಾಲದಲ್ಲಿ ಕನ್ನಡನಾಡಿನಲ್ಲಿ ಜಯಂತಿಯಂತಹ ಪತ್ರಿಕೆಗಳು ಸುಯಂತ್ರಿತವಾಗಿ ಮುಂದುವರಿಯಲಿಕ್ಕೆ ಅನುಕೂಲ ಪರಿಸ್ಥಿತಿಯಿಲ್ಲವೆಂಬುದು ನಮ್ಮ ಅನುಭವದ ಸಂಗತಿ. ಜನಸಾಮಾನ್ಯರಲ್ಲಿ ದೈನಂದಿನ ರಾಜಕೀಯ ವಿಚಾರಗಳನ್ನಷ್ಟೆ ತಿಳಿದುಕೊಳ್ಳಬೇಕೆಂಬ ಲವಲವಿಕೆ ಮೂಡಿದುದರಿಂದ, ನಿತ್ಯಪತ್ರಿಕೆಗಳನ್ನೋದಿ ಅವರು ತಮ್ಮ ವಾಚನದ ಹಸಿವನ್ನು ಕಳೆದುಕೊಳ್ಳುವರು. ನಿತ್ಯಪತ್ರಿಕೆಗಳಿಗಾದರೂ ಇದರಿಂದ ನಮ್ಮಲ್ಲಿ ಅನುಕೂಲಾವಕಾಶವು ಉಂಟಾದುದು ಸಮಾಧಾನದ ಸಂಗತಿಯೆ. ನಿತ್ಯಪತ್ರಿಕೆಯ ತರುವಾಯ ಎರಡನೆಯ ಸ್ಥಾನವನ್ನು ವಾರಪತ್ರಿಕೆಗಳು ಹಿಡಿದಿರುವುವು. ಅಂಚೆಯ ದೈನಂದಿನ ಅನುಕೂಲತೆಯಿಲ್ಲದ ಹಳ್ಳಿಗಳ ಜನರ ರಾಜಕೀಯ ವಾರ್ತಾವಾಚನದ ಹಸಿವನ್ನು ತಣಿಸುವ ಸಾಧನಗಳಿವು. ಆದುದರಿಂದಲೆ ವಾರಪತ್ರಿಕೆಗಳೂ— ಹಲವಾರು— ನಮ್ಮಲ್ಲಿ ತುಂಬುಮೈಯಿಂದ ಪ್ರಕಟವಾಗುತ್ತಲಿವೆ; ಅವುಗಳಿಗೂ ಆರ್ಥಿಕ ಅನುಕೂಲತೆಯಿರಬಹುದೆಂಬ ನಂಬುಗೆಯುಂಟಾಗುವಂತಿದೆ.

ಮಾಸಪತ್ರಿಕೆಗಳ ವಾಚಕವರ್ಗ ನಮ್ಮಲ್ಲಿ ತೀರ್ಣಿಕಡಿಮೆ. ಕೆಲವು ಪತ್ರಿಕೆಗಳಿಗೆ ಇರುವರಿಂದರೆ, ಅಂತಹ ಪತ್ರಿಕೆಗಳಲ್ಲಿ ಬರುವ ವಿಷಯಗಳು—ನಮ್ಮ ಸಮಾಜಕ್ಕೆ ವಿಧಾಯಕವೆನಿಸುವಂತಹ ಸಾಂಸ್ಕೃತಿಕ, ಜ್ಞಾನದಾಯಕ, ಗಂಭೀರವಿಚಾರಗಳಿಂದ ಕೂಡಿರದೆ, ಕೇವಲ ಮನಸ್ಸನ್ನು ಉದ್ರೇಕಗೊಳಿಸುವಂತಹ ಚಲಚ್ಚಿತ್ರ, ಲೈಂಗಿಕಚರ್ಚೆ, ವ್ಯಕ್ತಿ-ವ್ಯಕ್ತಿಗಳಲ್ಲಿಯ ಚುಚ್ಚುಮಾತು, ರಾಜಕೀಯದ ಉತ್ಪ್ರೇಕ್ಷೆ ಇವುಗಳಿಂದ ತುಂಬಿರುವುವು. ಬರಿಯ ರಾಜಕೀಯ ವರ್ತಮಾನ, ಉದ್ರೇಕಗೊಳಿಸುವ ಮಾತು-ಕತೆ ಇವುಗಳಿಂದ ನಾವು ನಮ್ಮ ಜನರನ್ನು ನಿಜವಾದ ಮಾನವರನ್ನಾಗಿಸಲಾರೆವು. ವ್ಯಕ್ತಿಗಳಲ್ಲಿ ಮಾನವತೆ ಮೂಡದೆ ನಮ್ಮ ಸಮಾಜ ಸುಸಂಘಟಿತವಾಗದು. ಅಸಂಘಟಿತ ಸಮಾಜವೆಂದೂ ಸ್ವತಂತ್ರ ರಾಷ್ಟ್ರವನ್ನು ಕಟ್ಟಲಾರದು—ಬೆಳಸಿ ಉಳಿಸಲಾರದು. ವಿಕಾಸಹೊಂದಿದ ಮಾನವತೆಯ ಗುರುತೆಂದರೆ ವ್ಯಕ್ತಿ-ವ್ಯಕ್ತಿಗಳ ಸತ್ಯನಿಷ್ಠೆ, ಆದರ್ಶನಿಷ್ಠೆ, ಜ್ಞಾನೋಪಾಸನೆ, ಸೌಂದರ್ಯೋಪಾಸನೆ, ಪ್ರಾಮಾಣಿಕತೆ, ಪರಸ್ಪರ ಮೈತ್ರೀಭಾವ ಮೊದಲಾದ ಸದ್ಗುಣಗಳು. ಇಂತಹ ಸದ್ಗುಣಗಳು ಹೆಚ್ಚಿದ ರಾಷ್ಟ್ರವನ್ನು ಯಾವ ದುಶ್ಶಕ್ತಿಯೂ ಗೆಲ್ಲಲಾರದು; ಒತ್ತಾಯದಿಂದ ಆಳಲಾರದು. ಲೋಕದಲ್ಲಿಯ ಸಚ್ಛಕ್ತಿಗಳೆಲ್ಲದರ ಸಹಕಾರ-ಸಹಾನುಭೂತಿಗಳು ಇಂತಹ ರಾಷ್ಟ್ರದ ಜನತೆಗೆ ಸಿಕ್ಕುವುವು. ಇಂತಹ ಸಮಾಜದಲ್ಲಿ ಯಾವಾಗಲೂ ಶಾಂತಿ-ಪುಷ್ಟಿ-ತುಷ್ಟಿಗಳಿಗೆ ಎಡೆ ಇರುವುದು.

ಕನ್ನಡಹೃದಯದಲ್ಲಿ ಇಂತಹ ಮಾನವತೆಯನ್ನು ಮೂಡಿಸಿ ರೂಢಿಸಬೇಕೆಂಬುದು ಜಯಂತಿಯ ಹಂಬಲು. ಹುಟ್ಟಿದಂದಿನಿಂದಲೂ ಅದೇ ದಾರಿಯಿಂದ ಇದು ಕೆಲಸಮಾಡುತ್ತ ಹೊರಟಿದೆ. ದಾರಿಯಲ್ಲಿ ಅನೇಕ ವಿಘ್ನಗಳು; ಅನೇಕ ಆಪತ್ತಿ-ವಿಪತ್ತಿಗಳು! ಎಲ್ಲವುಗಳನ್ನೂ ಒಂದು ಬಗೆಯ ಆಶಾವಾದದ ಧೈರ್ಯದಿಂದ ಎದುರಿಸುತ್ತ, ವಿರೋಧಪರಿಸ್ಥಿತಿಯೊಂದಿಗೆ ಹೋರಾಡುತ್ತ, ಹನ್ನೊಂದು ವರ್ಷಗಳ ತನ್ನ ಆಯುಷ್ಯವನ್ನು ಮುಂದುವರಿಸಿ ಹನ್ನೆರಡನೆಯ ವರ್ಷದಲ್ಲಿ ಕಾಲಿಟ್ಟಿದೆ. ಸಮಾಜಜೀವನದಲ್ಲಿ ಇದೊಂದು ತೀರ ಚಿಕ್ಕ ಕಾಲಖಂಡವಾದರೂ, ವ್ಯಕ್ತಿಯಜೀವನದಲ್ಲಿ ಸಾಕಷ್ಟು ದೊಡ್ಡದಾದುದೆಂದೇ ಹೇಳಬಹುದು. ಈ ಕಾಲಖಂಡದಲ್ಲಿ ನಡೆದ ಜಾಗತಿಕ ವಿಪ್ಲವ-ಪ್ರಲಯಗಳ ಪರಿಣಾಮದಿಂದ ಜಯಂತಿ ತುಂಬ ಕಷ್ಟ-ನಷ್ಟಗಳನ್ನು ಸಹಿಸಿದೆ. ದುರ್ಮಿಳವಾದ ಉಪಕರಣಗಳನ್ನು ದೊರೆಕಿಸಲಿಕ್ಕೆ ಅಂದುಮಾಡಿದ ಸಾಲದ ಭಾರದಿಂದ ಅದು ತುಂಬ ತೊಂದರೆಯನ್ನು ಅನುಭವಿಸುತ್ತಲಿದೆ. ಆದರೂ ತನ್ನ ಆದರ್ಶವಾದ ಸಂಸ್ಕೃತಿಪ್ರಚಾರಕ್ಕಾಗಿ ದುಡಿಯಲು ಸಿದ್ಧವಾಗಿದೆ.

ಎಷ್ಟೇ ದೃಢನಿಶ್ಚಯಿಯಾದ ಕೆಲಸಗಾರನಿರಲಿ; ಅವನನ್ನು ಶೋಷಿಸುವಂತಹ ಸಂಕಟಕ್ರಿಮಿಗಳು ಅಂಟಿಕೊಂಡಿರುವಾಗ, ಅವನಿಂದ ಆಗಬೇಕಾದಷ್ಟು ಕೆಲಸವಾಗುವುದಕ್ಕೆ ಸಾಧ್ಯವಿರುವುದಿಲ್ಲ. ಜಯಂತಿ ಈ ನಿಯಮಕ್ಕೇನೂ ಹೊರತಿಲ್ಲ. ಇದಕ್ಕೆ ಬಂಡವಾಳದ ಬಲವಿಲ್ಲವಿಷ್ಟೇ ಅಲ್ಲ, ಸಾಲದ ಭಾರಕ್ಕಾಗಿ ಇದ್ದ ಬಲವನ್ನೂ ಕುಂದಿಸಿಕೊಳ್ಳಬೇಕಾದ ಸಂದರ್ಭವಿದೆ. ಸಂಸ್ಕೃತಿಪ್ರಸಾರದ ಅವಶ್ಯಕತೆ– ಅಗತ್ಯಗಳ ತಿಳಿವಳಿಕೆಯಿದ್ದ ನಾಡಿನ ಸಿರಿವಂತರು ನೆರವುಕೊಟ್ಟು, ಸಾಲದ ಭಾರವನ್ನು ಕಡಿಮೆ ಮಾಡಬೇಕು. ಸಿರಿವಂತರಲ್ಲದವರಾದ ಸಾಮಾನ್ಯಜನರು, ಇದೂ ಒಂದು ನಿತ್ಯದ ಅವಶ್ಯಕ ವೆಚ್ಚದ ಭಾಗವೆಂದು ತಿಳಿದು ಚಂದಾದಾರರಾಗಿ, ಜಯಂತಿಯ ಬಲವನ್ನು ಬೆಳೆಯಿಸಬೇಕು. ನಾಲ್ಕುನರೆ ರೂಪಾಯಿ ಚಂದಾಹಣದಲ್ಲಿ ಇಂತಹದೊಂದು ಮಾಸಪತ್ರಿಕೆಯನ್ನು ತಪ್ಪದೆ ತಿಂಗ-ತಿಂಗಳೂ ಒದವಿಸಿಕೊಡುವುದರ ಕಡೆಗೆ ಕಣ್ಣಿರಿಸಬೇಕು. ಆರ್ಥಿಕ ಅನುಕೂಲತೆಯುಂಟಾದಂತೆ ಜಯಂತಿ ತನ್ನ ಅಂತರಂಗ–ಬಹಿರಂಗ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವುದೆಂಬುದನ್ನು ವಿಶ್ವಾಸದಿಂದ ನೋಡಬೇಕು.

ಕಳೆದ ವರ್ಷ

ಜಯಂತಿ ೧೧ನೆಯ ವರ್ಷದಲ್ಲಿ ತನ್ನ ಕಲ್ಪನೆಗಿಂತ ಹೆಚ್ಚಿನ

ಕೆಲಸಮಾಡಿದೆ. ಡೆವಿಾ ೫ಿದ ಸುಮಾರು ೬೦೦ ಪುಟಗಳನ್ನು---ಇಂತಹ ವಿರೋಧಪರಿಸ್ಥಿತಿಯಲ್ಲಿಯೂ— ನಾಲ್ಕುವರೆ ರೂಪಾಯಿ ಚಂದಾಹಣದಲ್ಲಿಯೆ ಒದಗಿಸಿಕೊಟ್ಟುದು ಸಣ್ಣ ಮಾತೇನೂ ಅಲ್ಲ— ಎಂಬುದು, ಇಂದು ಪ್ರಕಟವಾಗುತ್ತಿರುವ ಪುಸ್ತಕಗಳ ಮೇಲೆ ಇರುವ ಬೆಲೆಗಳ ಮೇಲಿಂದ ಯಾರಿಗೂ ಗೊತ್ತಾಗಬಹುದು. ನವ್ಹಂಬರ್ (ದೀಪಾವಳಿ), ಮೇ (ಕಥಾವಿಷಯಕ)ಸಂಚಿಕೆಗಳು ವಿಶೇಷ ಸಂಚಿಕೆಗಳಾಗಿ ಹೊರಟು, ನಮ್ಮ ಅಭಿಮಾನಿವರ್ಗದಿಂದ ಮೆಚ್ಚುಗೆಯನ್ನು ಪಡೆದಿವೆ. ಜಯಂತಿಯಲ್ಲಿ ಈ ವರ್ಷ ಬಂದಿರುವ ಲೇಖನಗಳ ವಿಚಾರದಲ್ಲಿ ಬೇರೆಯಾಗಿ ಹೇಳುವುದೇ ಬೇಕಾಗಿಲ್ಲ. ಎಲ್ಲವೂ ತಜ್ಞರಿಂದ ಬರೆದುವುಗಳಾಗಿದ್ದು ಸೂಕ್ಷ್ಮವಿಮರ್ಶಕರ ಒರೆಗಲ್ಲಿಗೆ ಹತ್ತಿಬಂದುವುಗಳಾಗಿವೆ. ಬಹಳ ದಿನಗಳ ವರೆಗೆ ಕಾಯ್ದಿಟ್ಟು ಮತ್ತೆ ಮತ್ತೆ ಓದಿ ಮೆಲುಕುಹಾಕಿ ಸತ್ತ್ವಸ್ವೀಕರಿಸಬಹುದಾದ ವೈಚಾರಿಕ-ಸಾಹಿತ್ಯವಿಷಯಕ ಲೇಖನಗಳು ಹಲವಾರು ಅಚ್ಚಾಗಿವೆ. ಈ ವರ್ಷ ಪ್ರಕಟವಾಗಿರುವ ೨೫-೩೦ ಸಣ್ಣಕತೆಗಳಲ್ಲಿ, ಬಹುಸಂಖ್ಯಾಕವಾದುವು ಮೇಲ್ಮಟ್ಟದುವೂ ಬಹುಕಾಲ ಬಾಳುವಂತಹವೂ ಆಗಿವೆಯೆಂದು ತಜ್ಞವಿಮರ್ಶಕರು ಆಗಾಗ ಬರೆದು ಪ್ರಕಟಿಸಿಯೂ ಬಿಟ್ಟಿದ್ದಾರೆ.

ಸಂಪಾದಕೀಯ ವಿಭಾಗಗಳೂ ಲೋಕಪ್ರಿಯವಾಗಿವೆ. 'ನಗೀಗೆ ನೈವೇದ್ಯ' ಇನ್ನೂ ಹೆಚ್ಚಾಗಿ ಬರಬೇಕೆಂಬ ಸೂಚನೆಗಳು ಹಲವರಿಂದ ಬಂದಿವೆ. 'ವಿಮರ್ಶೆಯ ಶಿಕ್ಷಣರಂಗ'ವಂತೂ ತುಂಬ ಯಶಸ್ವಿಯಾಗಿ ಕಾರ್ಯಮಾಡುತ್ತಲಿದೆ. 'ಮಹಿಳೆಯರ ಮಾತು-ಕತೆ'ಯನ್ನು, ನಮ್ಮ ಮಹಿಳೆಯರ ಸರಿಯಾದ ಸಹಕಾರ ದೊರೆಯದುದಕ್ಕಾಗಿ ಸದ್ಯ ತಡೆದುಹಿಡಿಯಲಾಗಿದೆಯಾದರೂ, ಬಹಳ ಜನರಿಗೆ ಬೇಕೆನಿಸಿದರೆ ಆ ವಿಭಾಗವನ್ನು ಮತ್ತೆ ಪ್ರಾರಂಭಿಸಬೇಕೆಂಬ ವಿಚಾರವೂ ಇದೆ.

'ನಾಲ್ಕಾನಿಟ್ಟಿನ ನೋಟ'ವನ್ನು ನಿಲ್ಲಿಸಿದುದಕ್ಕಾಗಿ ನಮ್ಮ ವಾಚಕರಲ್ಲಿಯ ಅನೇಕರು ಕಾರಣಗಳನ್ನು ಕೇಳಿದರು. ಸದ್ಯದ ರಾಜಕೀಯ ಪರಿಸ್ಥಿತಿ ತೀರ ವಿಚಿತ್ರವಾದುದಾಗಿದೆ. ನಮ್ಮ ರಾಷ್ಟ್ರೀಯ ಮಹಾಸಭೆಯೂ ಅದರ ಸರಕಾರಗಳೂ ಸತ್ಯ-ಶಾಂತಿಗಳ ತತ್ತ್ವದ ಪುರಾಣಗಳನ್ನು ಹೇಳುತ್ತಿರುವುದೇ ಹೊರತು, ಅವುಗಳಲ್ಲಿಯ ಮುಕ್ಕಾಲು ಮೂರುಪಾಲು ವ್ಯಕ್ತಿಗಳು ತತ್ತ್ವಗಳನ್ನು ತುಳಿದು ಹೊರಟಿದ್ದಾರೆ. ಇಂತಹ ಸಂದರ್ಭದಲ್ಲಿ ನಿರ್ದಾಕ್ಷಿಣ್ಯವಾದ ಅಭಿಪ್ರಾಯಗಳನ್ನು ಪ್ರಕಟಿಸುವುದಾದರೆಯೇ ರಾಜಕೀಯ ವಿಷಯಗಳನ್ನು ಸ್ಪರ್ಶಿಸಬೇಕು. ಮುಂದಾಳುಗಳೂ ಸರಕಾರಗಳೂ ಮಾಡುತ್ತಿರುವುದೆಲ್ಲ ಒಳ್ಳೆಯದೆಂದು ಹೇಳುವ ವಂದಿಮಾಗಧರಾಗಿ ನಡೆಯುವುದು ನಮಗೆ ಬೇಕಾಗಿಲ್ಲ. ಇಂದು ಪ್ರಾಂತೀಯ ಸರಕಾರಗಳಲ್ಲಿ, ಆಳುವವರೂ ನ್ಯಾಯನಿರ್ಣಾಯಕರೂ ಮೇಲಾಳುಗಳೇ ಆಗಿರುವುದರಿಂದ, ಸತ್ಯಾಭಿಪ್ರಾಯಕ್ಕೆ ಎಂತಹ ಫಲವನ್ನು ಅನುಭವಿಸಬೇಕಾದೀತೆಂಬುದನ್ನು ಹೇಳಲು ಬರುವಂತಿಲ್ಲ. ಆದುದರಿಂದ ಸಾಂಸ್ಕೃತಿಕಪ್ರಚಾರದ ಗುರಿಯನ್ನೇ ಮುಖ್ಯವಾಗಿ ಇರಿಸಿಕೊಂಡಿರುವ ನಾವು, ರಾಜಕೀಯ ಟಿಪ್ಪಣಿ ಬರೆಯುವುದನ್ನು ನಿಲ್ಲಿಸಿದ್ದೇವೆ. ಆದರೂ ಆಗಾಗ ಅತ್ಯಗತ್ಯವೆನಿಸಿದ ರಾಜಕೀಯ ವಿಷಯಗಳ ಚರ್ಚೆ ಸಂಪಾದಕೀಯ ಲೇಖನಗಳಲ್ಲಿಯೂ ಬೀರಣ್ಣನ ಬಡಿನುಡಿಗಳಲ್ಲಿಯೂ ಆಗಿರುವುದನ್ನು ನೋಡಿದರೆ, ಜಯಂತಿಯ ರಾಜಕೀಯ ಅಭಿಪ್ರಾಯ ಪ್ರಣಾಲಿ ಎಂತಹದಿದೆಯೆಂಬುದು ಗೊತ್ತಾಗಬಹುದು. ಜಯಂತಿಯ ಚಂದಾದಾರರು ೧೨ ಸಂಚಿಕೆಗಳನ್ನೂ ಸೇರಿಸಿ ಕಟ್ಟಿ ಇರಿಸಿ, ಅದರ ಗಾತ್ರವನ್ನೂ ಪುಟ-ಪುಟಗಳಲ್ಲಿಯೂ ತುಂಬಿ ಬಂದ ವಿಷಯವನ್ನೂ ಸಮಗ್ರವಾಗಿ ನೋಡಿದರೆ, ಜಯಂತಿ ಕಳೆದ ವರ್ಷ ಸಲ್ಲಿಸಿದ ಸಾಹಿತ್ಯೋಪಹಾರದ ಬೆಲೆಯಂತಹದೆಂಬುದು ಗೊತ್ತಾಗುವುದು. ಹನ್ನೊಂದನೆಯ ವರ್ಷಕ್ಕಿಂತ ಹೆಚ್ಚಿನ ಕಾರ್ಯವನ್ನು ಹೊಸ ವರ್ಷದಲ್ಲಿ ಮಾಡಿ ತೋರಿಸಬೇಕೆಂದು ತುಂಬ ಆಶೆಯಿದೆ. ಆದರೆ ವಾಚಕವರ್ಗದ ಪ್ರೋತ್ಸಾಹವಿಲ್ಲದೆ ನಮ್ಮ ಆಶೆ ಕೊನೆಗೊಳ್ಳಲಾರದು.

ಜಯಂತಿಯ 'ಕಥಾಸಂಚಿಕೆ'ಗಳು ಕೆಲವು ಮಾತ್ರ ಉಳಿದಿವೆ. ಬೇಕಾದವರು ಬೇಗನೆ ತರಿಸಿಕೊಳ್ಳಿರಿ! ಬೆಲೆ ೦—೧೨—೦.

ಜಯಂತಿಯ ಪೋಷಕರು

★

ಹೈದರಾಬಾದಿನ ಕನ್ನಡ ಅಭಿಮಾನಿಗಳೂ ಕನ್ನಡಕಾರ್ಯಕ್ಕಾಗಿ ಉದಾರ ಹಸ್ತದಿಂದ ನೆರವನ್ನು ಕೊಡುವವರೂ ಆದ

ಶ್ರೀಯುತ ಬಿ. ಜಿ. ಚಿಮ್ಮಲಗಿ ಅವರು, ತಮ್ಮ ಅರುವತ್ತು ವರ್ಷ ಪೂರ್ತಿಯ ಉತ್ಸವದ ನಿಮಿತ್ತವಾಗಿ, ಜಯಂತಿಯ ಪೋಷಕರಾಗಲು ಒಪ್ಪಿ ಈಗಾಗಲೆ ೧೦೧ ರೂಪಾಯಿ ಬೆಳಕನ್ನು ಸಲ್ಲಿಸಿಬಿಟ್ಟಿದ್ದಾರೆ. ನಮ್ಮಲ್ಲಿಯ ಶ್ರೀಯುತರೆಲ್ಲ ಶ್ರೀ. ಚಿಮ್ಮಲಗಿಯವರಂತೆ ಔದಾರ್ಯವನ್ನು ತೋರಿಸಿದರೆ, ಜಯಂತಿಯ ಕಾರ್ಯವು ಎಷ್ಟೊಂದು ಸುಲಭವಾಗಿ ಸಾಗೀತು—ಎಷ್ಟೊಂದು ಯಶಸ್ವಿಯಾಗಿ ನಡೆದೀತು!

ಇನ್ನೊಂದು ವಿಷಯವೆಂದರೆ ಕನ್ನಡನಾಡಿನಲ್ಲಿರುವ ವಾಚನಮಂದಿರಗಳಿಗೆಲ್ಲ ಜಯಂತಿ ಬೆಲೆ ಬಾಳುವ ಪುಸ್ತಕಗಳನ್ನು ಸಲ್ಲಿಸುವುದಾಗಿ ಶ್ರೀ. ಚಿಮ್ಮಲಗಿಯವರು ಸಂಕಲ್ಪ ಮಾಡಿಬಿಟ್ಟಿದ್ದಾರೆ. ಇವರ ಶುಭಕಾರ್ಯವನ್ನು ನಮ್ಮ ಕನ್ನಡ ವಾಚನ ಮಂದಿರಗಳೆಲ್ಲ ಪಡೆದುಕೊಳ್ಳಬೇಕು.

ಶ್ರೀ. ಬಿ. ಜಿ. ಚಿಮ್ಮಲಗಿಯವರು ಆಯುರಾರೋಗ್ಯ ಸಂಪನ್ನರಾಗಿ ಬಹುಕಾಲ ಬಾಳಲೆಂದು ತಮ್ಮ ಹಾರೈಕೆ.

—ಸಂ. ಜ.

ಶ್ರೀ. ಭೀಮಾಚಾರ್ಯ ಚಿಮ್ಮಲಗಿಯವರು.

ಸಾದರ ಸ್ವೀಕಾರ

೧. **ನಿಸರ್ಗ ಚಿಕಿತ್ಸಕ.** (ನವೀನ ತ್ರೈಮಾಸ ಪತ್ರಿಕೆ). ಕಳೆದ ಯುಗಾದಿಯಿಂದ ಪ್ರಕಟವಾಗಲು ತೊಡಗಿದೆ. ಸಂಪಾದಕರು: ಶ್ರೀ. ಶಾಮರಾವ್ ಚಿತ್ರಗಾರ, ಎರೆಬೂದೀಹಾಳ, ಪೋಸ್ಟ್ ಲಕ್ಷ್ಮೇಶ್ವರ. ಕ್ರೌ. ಆ. ೧೬ ಪುಟಗಳು. (ಮುಂದಿನ ಸಂಚಿಕೆಗಳು ೩೨ ಪುಟದವಾಗುವುವಂತೆ). ವಾ. ಚಂ. ೨ ರೂಪಾಯಿ. ಬಿಡಿಸಂಚಿಕೆಗೆ ೦-೮-೦.

ಜೀವನದಲ್ಲಿ ಯಾವುದೇ ವಿಷಯದ ಅತಿಸೇವನ, ಹೀನಸೇವನಗಳು ಮಾನವನ ರೋಗಕ್ಕೆ ಕಾರಣವಾಗುವುವು. ಸಮಸೇವನವು ಆರೋಗ್ಯವನ್ನು ಕಾಪಾಡುವುದು. 'ಸಮರಸವೇ ಜೀವನ' ಎಂದುದು ಕೇವಲ ಕವಿಯ ಕಲ್ಪನಾಲೋಕದ ವಿಚಾರವಲ್ಲ; ನಿಸರ್ಗನಿಯಮದ ನೆಲೆಯನ್ನು ಕಂಡು ಆಡಿದೆ ತತ್ತ್ವದ ಮಾತು. ಸಮರಸವನ್ನು ಸಾಧಿಸುವುದೆಂದರೆಯೇ ಯೋಗ. ಆದುದರಿಂದಲೆ ಯೋಗಿ ಯಾವಾಗಲೂ ನಿಸರ್ಗನಿತ್ಯ. ನಿಸರ್ಗನಿಯಮವನ್ನನುಸರಿಸಿ ತನ್ನ ಜೀವನವನ್ನು ನಡೆಯಿಸುವನಾದುದರಿಂದಲೇ ಅವನು ರೋಗ-ಜರಾ-ಮರಣರಹಿತನಾಗಿ ಬಾಳಬಲ್ಲನು. ಸರ್ವ ಸಾಮಾನ್ಯರ ಜೀವನವೆಂದರೆ ನಿಸರ್ಗದ ಅತಿಕ್ರಮಣಗಳಿಂದಲೇ ತುಂಬಿರುವುದರಿಂದ, ಅವರೆಲ್ಲ ಒಂದಿಲ್ಲೊಂದು ರೋಗದಿಂದ ಬಳಲುತ್ತಿರುವರು. ನಿಸರ್ಗನಿಯಮದಂತೆ ನಡೆವುದೇ ಸದಾಚಾರ; ಅದಕ್ಕೆ ವಿರೋಧವಾಗಿ ನಡೆವುದೆಲ್ಲ ಅನಾಚಾರ. ಇದನ್ನೆಲ್ಲ ಕನ್ನಡ ಜನರಿಗೆ ತಿಳುಹಲು ಮುಂದೆ ಬಂದಿರುವ ಈ 'ನಿಸರ್ಗ ಚಿಕಿತ್ಸಕ' ಬಹುಕಾಲ ಬಾಳಲಿ. ಇದರ ಆವಶ್ಯಕತೆಯನ್ನು ಅರಿತು ಕನ್ನಡ ಜನತೆ ತಕ್ಕ ಸಹಾಯ-ಸಹಕಾರಗಳನ್ನು ಒದವಿಸಿ ಕೊಡಲಿ!

೨. **ಕರ್ನಾಟಕ ಚರಖಾಸಂಘದ ಪಾದೀನ್ಯತ್ತ.** (ನೈಮಿತ್ತಿಕ ಪತ್ರಿಕೆ). ಸಂಪಾದಕರು ಶ್ರೀ. ಶ್ರೀ. ರಾ. ಸಾವಕಾರರು. ಪ್ರಕಾಶಕರು ಶ್ರೀ. ರಾ. ವೆಂ. ವಡವಿ, ಮಂತ್ರಿ ಕರ್ನಾಟಕ ಶಾಖಾ, ಹುಬ್ಬಳ್ಳಿ. ಕ್ರೌ. ಅ. ೩೬ ಪುಟಗಳು. ವಾ. ಚಂ. ೫ ರೂಪಾಯಿ. ಬಿ. ಸಂ. ೦-೮-೦.

೩. **ಬಸವೇಶ್ವರರ ಲಾವಣಿ ಪದ.** ಬರೆದವರು ಶ್ರೀಮಾನ್ ಕುಲಕರ್ಣಿ ಕೇಶವರಾಯರು. ಪ್ರಕಾಶಕರು ಶ್ರೀ. ಬಿ. ಜಿ. ಅವಧಾನಿ,

(೪೪ ನೆಯ ಪುಟ ನೋಡಿರಿ)

ದಿಕ್ಕೆಟ್ಟ ಸಂಧ್ಯಾರಾಗ

(ಒಂದು ಜೀವನಚಿತ್ರ)

ಶ್ರೀ. ರಂ. ಸ್ವಾ. ದೇಶಪಾಂಡೆ, ಆಲದಕಟ್ಟೆ

★

ಮಾನವತೆಯನ್ನು ಮರೆತು ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವ ನಮ್ಮ ವರ್ತಮಾನ ಜೀವನದ ಒಂದು ವಾಸ್ತವ ಚಿತ್ರವಿದು! ಇಂತಹ ಚಿತ್ರವಿಂದು ಮೂರು ಗುಡಿಸಿಲಿನ ಹಳ್ಳಿಯಲ್ಲಿಯೂ ಕಾಣುತ್ತಿರುವುದು.

★

೧

"ಇದೇನು, ಸರದಾರ್ ಶೇಷಣ್ಣನವರು? ಅಪರೂಪಕ್ಕೆ ದರ್ಶನ?"

"ತಮ್ಮ ದರ್ಶನಕ್ಕಽ ಬಂದದ್ದು ವಸಂತರಾವ್! ಕಾಂಗ್ರೆಸ್ ರಾಜ್ಯದಲ್ಲಿ ಬಿರುದು-ಬಾವಲಿಗಳನ್ನು ಕೊಡಬಾರದೆಂದು ನಿರ್ಣಯಿಸಿದಾಗ 'ಸರ್ದಾರ್' ಪದವಿಯನ್ನು ನೀನು ಕೊಡುತ್ತೀಯಾ? ಆಗಲಯ್ಯಾ, ಬಹು ಸಂತೋಷ!" ಎಂದು ನಗುತ್ತ—ಮೊಗಸಾಲೆಯ ತುದಿಗೆ ಬಂದು ಸ್ವಾಗತಿಸಿದ—ವಸಂತನ ಕೈಕುಲುಕುತ್ತ ಶೇಷಣ್ಣನು ಹೇಳಿದನು.

ಅತಿಥಿಯಾದ ಶೇಷಣ್ಣನು ಬಹು ಸಂತೋಷದಿಂದ ಲೋಡುತಿವಾಸಿಗೆಯಲ್ಲಿ ವಸಂತನೊಡನೆ ಕುಳಿತು, ತಲೆಯ ಮೇಲಿನ ಟೊಪ್ಪಿಗೆಯನ್ನು ಕೆಳಗಿರಿಸಿ, ಎಡಗೈಯಿಂದ ಕ್ರಾಪನ್ನು ಸರಿಪಡಿಸುತ್ತ, ಮೊಗಸಾಲೆಯ ನಾಲ್ಕೂ ನಿಟ್ಟಿಗೂ ದೃಷ್ಟಿಯನ್ನೊಮ್ಮೆ ಹೊರಳಿಸಿದನು. ಭವ್ಯವಾದ ಮೊಗಸಾಲೆಯ ಪ್ರತಿಯೊಂದು ಅಂಕಣದಲ್ಲಿಯೂ ದೇವ-ದೇವತೆಗಳ ಸೊಗಸಾದ ಚಿತ್ರಪಟಗಳೂ, ಮಹಾತ್ಮಾ ಗಾಂಧೀ ಮೊದಲಾದ ದೇಶಭಕ್ತರ ಭಾವಚಿತ್ರಗಳೂ ಶೋಭಿಸುತ್ತಿದ್ದುವು. ಎದುರಿನ ಒಂದಂಕಣದಲ್ಲಿ ಗೋಡೆಗೆ ಹೊಂದಿ ಸಾಲಾಗಿಟ್ಟ ಖುರ್ಚಿಗಳೂ, ಮಧ್ಯದಲ್ಲೊಂದು ಪಕ್ಷಿ-ಬಳ್ಳಿಗಳ ನಕ್ಷೆಯಿದ್ದ ಕಸೂತಿಯ ಹೊದಿಕೆಯನ್ನು ಹೊಚ್ಚಿದ ದುಂಡು ಮೇಜೂ, ಅದರ ಮೇಲೊಂದು ಚಿತ್ರವಿಚಿತ್ರವಾಗಿ ರೇಖಿಸಿದ ಗಾಜಿನ ಹೂಪಾತ್ರೆಯೂ, ಅದರಲ್ಲಿ ಅರಳಿದ—ಅರ್ಧ ಅರಳಿದ ಬಿಳಿ, ಕೆಂಪು, ಹಳದಿಬಣ್ಣದ ಎಲೆಸಹಿತ ಗುಲಾಬಿಯ ಗೊಂಚಲವೂ ಅಂದವಾಗಿ ಕಂಗೊಳಿಸುತ್ತಿದ್ದುವು. ಗೋಡೆಯ ಬದಿಗಿದ್ದ ಮತ್ತೊಂದು ಬಿಳಿಯ ವಸ್ತ್ರದಿಂದಾಚ್ಛಾದಿತವಾದ ದೊಡ್ಡ ಮೇಜಿನ ಮೇಲೆ, ಮಧ್ಯದಲ್ಲೊಂದು ನಿಲುಗನ್ನಡಿಯೂ ಎಡಬಲಕ್ಕೆ ವ್ಯವಸ್ಥಿತವಾಗಿರಿಸಿದ ಪುಸ್ತಕಗಳೂ, ಲೇಖನಸಾಮಗ್ರಿಗಳೂ ಇದ್ದುವು. ಗೂಟಗಳಿಗೆ ಮುಖ್ಯ ಮುಖ್ಯ ದಿನಪತ್ರಿಕೆ-ವಾರಪತ್ರಿಕೆಗಳ ಫಾಯಿಲುಗಳು ನೇತಾಡುತ್ತಿದ್ದುವು. ಇವೆಲ್ಲವನ್ನೂ ನೋಡಿದರೆ, ವಸಂತರಾಯನ ಅಜ್ಜುಕಟ್ಟುತನ ವ್ಯಕ್ತವಾಗುತ್ತಿತ್ತು.

ಔಪಚಾರಿಕ ಕ್ಷೇಮ-ಸಮಾಚಾರದ ಮಾತು-ಕಥೆಗಳು ಮುಗಿದ ಕೆಲ ನಿಮಿಷಗಳ ಮೇಲೆ, ಮಾಣಿಯು ಬಾಗಿಲಲ್ಲಿ ಹಣೆಯಿಕ್ಕಿದ್ದನ್ನು ನೋಡಿ ವಸಂತರಾಯನು ಒಳಗೆ ಹೋಗಿ ಬಂದು, ಶೇಷಣ್ಣನನ್ನು ಭೋಜನಶಾಲೆಗೆ ಕರೆದುಕೊಂಡು ಹೋದನು. ಅಲ್ಲಿ ಎರಡು ಮಣೆಗಳು; ಅವುಗಳ ಮುಂದೆ ಉಂಡಿ, ನೇವು, ಕರಿದವಲಕ್ಕಿಗಳ ತಟ್ಟೆಗಳನ್ನಿರಿಸಿ, ಬದಿಯಲ್ಲಿಯೇ ಸುಲಿದಿಟ್ಟ ಬಾಳೆಹಣ್ಣುಗಳ ತಟ್ಟೆಯೂ ಜಜ್ಜದ ಡಿಕಾಕ್ಶನ್—ಸಕ್ಕರೆ-ಹಾಲುಗಳನ್ನೊಳಗೊಂಡ ಟೀ ಸೆಟ್ಟೂ, ಮಡಿಕೆಮಾಡಿದ ಎರಡು ಸಣ್ಣ ಟಾವೆಲ್ಲುಗಳೂ ಇಡಲ್ಪಟ್ಟಿದ್ದುವು.

"ಇದೇನು ವಸಂತ? ತಾಜಮಹಾಲ್ ಹಾಟೇಲಿನಲ್ಲಿಯ ಸತ್ಕಾರಕೂಟ ಏರ್ಪಟ್ಟಂತಿದೆ? ಭೇಷ್."

"ಬಹುದಿನಕ್ಕೆ ಅತಿಥಿಯಾಗಿ ಬಂದ ಸರ್ದಾರ್ ಶೇಷಣ್ಣನವರಿಗೆ ಸತ್ಕಾರಮಾಡಬೇಡವೇ?" ಎಂದು ನಗುತ್ತ ಫಲಾಹಾರಕ್ಕೆ ಪ್ರಾರಂಭಿಸಿದರು.

ಮೆಲುದನಿಯಲ್ಲಿ ದೇವರನಾಮದ ಸುಳಾದಿಗಳನ್ನು ಹೇಳುತ್ತ ದೇವರ ಕೋಣೆಯಿಂದ ಹೊರಬಿದ್ದ ಮುದುಕಿ (ಶಾರದಮ್ಮನವರು) ಬಾಗಿಲ ಬಳಿಯಲ್ಲಿಯೇ ನಿಂತು "ಇದಾರು? ನಮ್ ಕಮಲಕ್ಕನ್ಮಗಾ ಶೇಷಣ್ಣನೇನು?" ಎಂದು ಕೇಳಿದಳು. ತತ್‌ಕ್ಷಣ ಶೇಷಣ್ಣನೆದ್ದು ಶಾರದಮ್ಮನವರಿಗೆ ತಲೆವಾಗಿ ನಮಸ್ಕಾರ ಮಾಡುತ್ತಲೇ "ಆಯುಷ್ಮಂತಾಗು ಭಾಗ್ಯವಂತಾಗು" ಎಂದು ಮನಃಪೂರ್ವಕವಾಗಿ ಹರಸಿ "ಮನೆಯಲ್ಲೆಲ್ಲಾ ಸೌಖ್ಯ?" ಎಂದು ಕೇಳಿದಳು.

"ನಿಮ್ಮ ಆಶೀರ್ವಾದದಿಂದ ಎಲ್ಲ ಸೌಖ್ಯ; ನಿಮ್ಮ ಆರೋಗ್ಯ ನೆಟ್ಟಗಷ್ಟೆ?"

"ಈ ಹಾಳು ಆರೋಗ್ಯ ಯಾತಕಪಾ ಇನ್ನ! ಲಗೂನ ನಮ್ಮಣ್ಮಚ್ಚಬೇಕ್ಪಾ ದೇವರಿನ್ನ!"

"ಯಾಕ ಅಬಚೀ, ಇಷ್ಟಾಯ್ಕ ಬೇಸರಾ? 'ಯಾರಾಮಾಯದಿಜ ರಮಾ' ಅಂತೇನೋ ಹೇಳ್ತಾರಲ್ಲಾ ಪುರೋಹಿತರು! ಹಾಂಗ ನಮ್ಮ ವಸಂತನ ಭರಭರಾಟೆಯ ಸಂಸಾರದಲ್ಲಿ ನಿನಗೇನು ಕಡಿಮ್ಯಾಗೇದಽ"

"ದೇವರ ದಯದಿಂದ ಏನೂ ಕಡ್ಮಿಲ್ಲಪಾ, ಸುಳ್ಯಾಕ್ಹೇಳಬೇಕೂ! ಕಣ್ಣೂ ಕೈಕಾಲೂ ಘಟ್ಟಿದ್ದಾಗಽ ಯಾತ್ರೀ ತೀರ್ಥಾ ಮಾಡಿಸಿದಾ ನಮ್ಮ ವಸಂತಾ. ದಾನಾ-ಧರ್ಮಾ ಮಾಡಸ್ತಾನ! ಇತ್ಲಾಗಿನ್ಸಷ್ಟೀ ಶಗದಿತ್ನಾಗಿಜೋ ಹಾಂಗಿಲ್ಲಾ! ಸಂಸಾರದ್ಯಾಳಜ್ಞ ಒಂದಿಲ್ಲ

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ನೋಡ್ನನಗ! ಅದನ್ನೋರ್ಡೈಷೂ, ಜೀವ್ಯಾಬ್ಯಡಾಗ್ಹೋಗೇದ!"

"ಆಬಚೀ, ಆದರಽ ಅಂತ ಅಂತೀಯಲ್ಮತ್ತ? ನೈನೀ ತವರ್ಮನಿಗ್ಹೋಗ್ಯಾರೇನು?" ಎಂದು ವಸಂತನ ಕಡೆಗೆ ಹೊರಳುವಷ್ಟರಲ್ಲಿ, ಅವನು ಮಣೆಯ ಮೇಲಿಂದೆದ್ದು ಚಿಟಕ್ಕನೇ ಒಳಗೆ ಹೋದನು. ಶೇಷಣ್ಣನ ಮನಸ್ಸಿನಲ್ಲಿದ್ದ ಸಂಶಯವು ಮತ್ತಿಷ್ಟೂ ಬಲಪಟ್ಟಿತು. ದೊಡ್ಡದೊಂದು ಉಸುರ್ಗರೆದು ಸುಮ್ಮನೆ ಕುಳಿತನು.

"ಶೇಷೂ, ನಾಽನು ಲಗೂನಽ ಕಣ್ಮುಚ್ಚೇಕಂತ ಅಂದದ್ದಕ್ಕ ನೀಯೇನೋ ವಿಪರೀತ ಅರ್ಥಾ ಮಾಡಿಕೊಂಡ್ಹಾಂಗ ಕಾಣಸ್ತಽದ. ಇಲ್ಲಪ್ಪಾ ಇಲ್ಲಾ; ಸುಽಮ್ಮನೇ ಒಬ್ಬರ ಮಕ್ಕಳಿಗ್ಹೆ ಸರಿಡಬಾರದು! ವಸಂತನ ಹೆಂಡತಿ, ಲಕ್ಷುಂಬಾಯಿ ಅಂದ್ರ ಲಕ್ಷ್ಮೀದೇವಿ; ಗೃಹಲಕ್ಷ್ಮೀಯಾಕಿ! ನಿಂತಲ್ನೀರು—ಕೂತಲ್ಕಣೀ ಮಾಡಿ, ನನ್ಹೊಟ್ಟೀ ಮಗಳ್ಗಿಂತಾ ಹೆಚ್ಚೋಡತಾಳಪ್ಪಾ ನನ್ನ. ಮನಿತನದ ಭಾರಾ ಎಲ್ಲಾ ಆಕೀ ಮ್ಯಾಲಽ ಹಾಕಿ, ರಾಮರಾನೂ ಅಂತ—ಒಂದ್ಯಾಳ ಜೀಯಿಲ್ದೇ ಇದ್ದೇನ್ನೋಡ್ನಾನು!"

"ಇಷ್ಟೊತ್ತನ್ಯಾ ಗಾಳಿಲ್ಲದ ಗವೀಹೊಕ್ಹಾಂಗಿತ್ತುನನಗ! ಈಗ ಸಮಾಧಾನಾಯಿತ್ನೋಡಬಚೀ! ನಾರದರ್ಸ್ಗಂಜಾರಿಲ್ಲಾಗೇದೊಂತ್ಹೆದರಿದ್ದೆ!"

ಇದೇ ಹೊತ್ತಿಗೆ ಸುರೇಂದ್ರನನ್ನೆತ್ತಿಕೊಂಡು, "ಕಾಕಾ ಬಂದಾನ್ನೋಡ ಕಾಕಾ! ಪೌಂವ್ಪಾಂವ್ತಂದಾನ್ನೋಡ ಪೌಂವ್ಪಾಂವ! ಪೌಂವ್ಪಾಂವ್ ತಂದಾನ, ಅಳಬೇಕೇನ್ಲುಚ್ಚ!" ಎನ್ನುತ್ತ ವಸಂತನು ಬಂದನು. ಶೇಷಣ್ಣನು ಸುರೇಂದ್ರನನ್ನು "ಲುಚ್ಚ್ಯಾ, ಪೌಂವ್ಪಾಂವ್ ಬೇಕಽ ನಿನಗ? ಕೊಡತೇನ್ಪಾ", ಎನ್ನುತ್ತ ಮಗುವನ್ನು ಎತ್ತಿಕೊಂಡು ಮುದ್ದಿಟ್ಟನು. ಇದೇ ಹೊತ್ತಿಗೆ ಲಕ್ಷ್ಮೀಬಾಯಿಯು ಬಾಗಿಲಲ್ಲಿ ಬಂದದ್ದು ನೋಡಿ ಶಾರದಮ್ಮನವರು "ಲಕ್ಷುಂಬಾಯೀ, ಶೇಷಣ್ಣಂದಾನ್ನೋಡು; ನಮಸ್ಕಾರಾ ಮಾಡು, ಭಾಽಳದಿನಕ್ಕೆಬ್ಟ್ಟೇ ಕೊಟ್ಟ ನಮ್ಮ ಶೇಷಣ್ಣಾ. ಭಾಽಳಂತಃಕರಣಿ" ಎಂದರು. ಅತ್ತೆಯವರ ಮಾತಿಗೆ ಮನ್ನಣೆಕೊಟ್ಟು ಲಕ್ಷ್ಮೀಬಾಯಿ ಶೇಷಣ್ಣನಿಗೆ ನಮಸ್ಕಾರ ಮಾಡಿದಳು.

"ಲಕ್ಷುಂಬಾಯೀ, ಇನ್ನೊಂದ್ಹೊಸಾ ಸುದ್ದಿ: ಅತ್ತೀ.ಸೊಸೀ ನ್ಯಾಯಾಡ್ತಾರಽ ಅಂತ ಶೇಷಣ್ಣೆಳಕೊಂಡ್ಹಾಬರ್ಯಾಗ್ಬಿಟ್ಟಿದ್ನವ್ವಾ!" ಎಂದು ಶಾರದಮ್ಮನವರು ಗಟ್ಟಿಯಾಗಿ ನಕ್ಕುಬಿಟ್ಟರು "ಹೀಽಂಗಽ; ಕವಿಕಲ್ಪನೆಗೆ ತುದಿಮೊದಲಿಲ್ಲ್ಯದ? ಹೆಸರಿನ ಸಾಮ್ಯದಿಂದ ಹೊಸಾ ಸಂದರ್ಭ ಹೊಂದಿಸಿಕೊಂಡಿದ್ದರೇನೋ!" ಎಂದು ನಸುನಗುತ್ತ, ಶಾಲೀನತೆಯಿಂದ ಅರ್ಥಗರ್ಭಿತವಾಗಿ ಉತ್ತರಿಸಿದಳು.

"ಕವಿಕಲ್ಪನೆಯಲ್ಲ ನೈನೀ, ಆಬಚೀ ಮಾತಿನಿಂದ ಮನಸ್ಸಿನಲ್ಲೇನೋ ಇಲ್ಲದ ಸಂಶಯ ಬಂತು. ವಸಂತನಂಥ ವಿಧೇಯ ಮಗ, ನಿನ್ನಂಥ ಸುಶೀಲ ಸೊಸಿ (ಸುರೇಂದ್ರನಿಗೆ ಮುತ್ತಿಟ್ಟು), ಬಾಲಕೃಷ್ಣನಂಥ ಈ ಮುದ್ದು ಸುರೇಂದ್ರ! ಮನುಷ್ಯ ಬೇಡಿ ಬಯಸುವ ಸುಖ ಸಂಪತ್ತಿನ ಸಂಸಾರದಲ್ಲಿದ್ದೂ ಜೀವಬೇಸರಾಗಿ, ಬೇಗ ಕಣ್ಮುಚ್ಚಬೇಕೆಂದು ಆಬಚೆಗೆ ಯಾಕೆ ಅನಿಸಿತು? ಇದೇ ಒಂದು ದೊಡ್ಡ ಗುಂಭ ಬಿದ್ದು, ಬರಬಾರದ ಸಂಶಯ ಮನಸ್ಸಿನಲ್ಲಿ ಬಂತು ನನಗ. ಮನಸ್ಸಿಗೆ ಭಾಳ ಹಳಹಳಿಯಾಯಿತು!"

"ಅಯ್ಯಽ! ಹೀಽಂಗಽ ಶೇಷೂ! ನನಗ್ಜೀವ್ನೇಜಾರ್ಬಂದದ್ದು ಇದಕಲ್ಲೋ; ದಿನಮಾನಾ ನೋಡಿದ್ಯಾ....ಹೆಂತಾ ಕೆಟ್ಟಂದೂ! ದೈವಿಬ್ದೂ ದರಿದ್ರತಾನಾ ಅನುಭೋಗಸೋ ಕಾಲಾ ಬಂದೂವಲ್ಲಾಽಂತ! ಹಿಂದಿನ್ದಾಂಗ ಸುಖಾ ಅನುಭೋಗಸೋ ಕಾಲ್ಬರೂದಿಲ್ಲಪಾ ಇನ್ನಽ; ಇನ್ನೂ ಹೆಂತೆಂತಾ ದಿನಮಾನ್ಬರತಾವೋ ಏನೋ! ಆದಕಽ ಇದ್ದದ್ರಾಗ ಛೆಲೋ ದಿನಮಾನ್ದಾಗ ನಾರಾದರ ಪುಣ್ಯವಂತ್ರಾಗತೇನಂತ, ಲಗೂನಽ ಕಣ್ಮುಚ್ಚಲೀ ಅಂದೆ."

"ಅಬಚೀ. ಯಾರ ಕೈಯಾಗೇನದಽವಾ; ದೇವರಿಟ್ಟಾಂಗಿರೋದು. ಈಗಂತೂ. ಸ್ವಾತಂತ್ರ್ಯದ ಸುಖದ ಕಾಲ!"

"ಅಯ್ಯಽ ನನ ಸ್ವಾಂತಂತ್ರ್ಯಽನ! ಉಳ್ಳಿಕ್ಕೆ ಉಡ್ಲಿಕ್ಕೆ ಸ್ವಾತಂತ್ರಿಲ್ಲದ್ಸ್ವಾತಂತ್ರ್ಯ; ಹೆಂತಾ ಸ್ವಾಂತಂತ್ರ್ಯನೋ ಇದು? ಹೋದ್ವರ್ಷ ಮೆರವಣ್ಗೀಮಾಡಿ, ಸಭಾಮಾಡಿ, ಆಕೆಂಪ್ಕಾರೀ ಸಾಯೇಬ್ರೊ್ಹೀದ್ರು, ಇನ್ನೇನಾಸ್ವಾತಂತ್ರ್ಯ; ನಮ್ದೇರಾಜ್ಯ; ಸೌಖ್ಯ; ಅಂತೇನೇನೋ ಹೇಳಿದ್ರು. ಅದ್ರ ವಸ್ತ್ರಂಬ್ಲಿಲ್ಲಾ; ಮತ್ತೆ ಈ ಕಂಟ್ರೋಲಂತ; ಈಽ ರೇಶನ್ನಂತ; ಮನೀಗ್ಮಂದೀನ್ನೂಟಕ್ಕರೀ

ಬ್ಯಾಡ್ರಿ; ಹೊಲದಿಂದ್ಮನೀಗ್ಯಾಳ್ತರಬ್ಯಾಡ್ರಿ; ಹೊಟ್ಟಗೇ ಬಟ್ಟಗೇ ಬೇಕಾದ್ರ ಕಚೇರಿಗೆಡತಾಕಿ, ಪರವಾನ್ಗೀ ಚೀಟೇ ತಗೊಂಡ್ಬರ್ರೀ! ಆಹಾ— ಏನಪಾ ಈ ಸ್ವಾತಂತ್ರ್ಯ, ಈ ಸುಖಾ! ಕಲ್ಲಾಕಲೀ, ಈಗೀರಡ್ತಿಂಗಳ್ದಿಂದ್ನೋಡೂ: ನಮ್ಯಾಕಮನೀ ಗೋವಿಂದ್ರಾಯನ್ಸೊಸೀ ತವರ್ಮನಿಗೆ ಹಡೀಲಿಕ್ಕೊಂಡ್ಲು. ಆಲ್ಲೆ ಆಕ್ಕಿ ಸಿಗೋದಿಲ್ಲಾ,ಪಾಪಾ, ಬಾಣಂತಿ ಅಕ್ಕೀಯನ್ನಾ ಉಣ್ಲೇ ಅಂತ, ಮನ್ಯಾಗಿನ ಒಂದ್ ಚಿಟ್ಟ ಅಕ್ಕೀ ಒಯ್ದರ, ಆಗೋವಿಂದ್ರಾಯರ್ಯಾಳ ಖಟ್ಲೇಹಾಕ್ಯಾರಂತ! ಏನ್ದೊಡ್ಡಾತಪ್ಪಾಯಿದು? ಏನ್ಕಳವುಮಾಡಿದ್ರಕ! ಏನಪಾ ಇದು ಹುಚ್ಚುಚ್ಚಾಟ? ಸ್ವಾತಂತ್ರ್ಯೇನ್ಸರಕಾರಕ್ಕೋ ಮಂದಿಗೋ?" ಎಂದು ಶಾರದಮ್ಮನವರು ಸಾತ್ವಿಕತ್ವೇಷದಿಂದ ಬಡ ಬಡ ಮಾತಾಡಿಬಿಟ್ಟರು.

"ಒಂದೂರಿಂದ ಮತ್ತೊಂದೂರಿಗೆ ಕಾಳು ಒಯ್ಯಬಾರದೂಂತ ಸರಕಾರದವರು ಕಾಯದೇ ಮಾಡ್ಯಾರ. ಪರವಾನಿಗೀ ತಗೋಬೇಕಿತ್ತು; ಪಾಪ, ಗೋವಿಂದರಾಯನಿಗೆ ಗೊತ್ತಿದ್ದಿಲ್ಲೇನೋ!"

"ನಾನೂ ಅಂಬೂದೂ ಅದೇನೋ ಶೇಷೂ! ಒಂದ್ತಿಟ್ಟ ಅಕ್ಕಿಗೆ ಎಡತಾಕಿ ಕಷ್ಟಪಟ್ಟು ಪರವಾನಿಗೀ ತಗೋಬೇಕೂಂತ ಕಾಯದೇ ಮಾಡ್ಯಾರಂತಂದ್ರ, ವಿಚಾರಿಲ್ಲದ ರಾಜನ್ಪಟ್ಟಣಾಕ್ಕೂಂತೇನಿ; ಟ್ರಕ್ಕಾಗಟ್ಲೇ ಒಯ್ಯವರಿಗೇನೂಯಿಲ್ಲಾ; ಚಿಟ್ಟೇ ಒಯ್ಯವನ್ಮ್ಯಾಲ ಮಾತ್ರ ಖಟ್ಲೇ! ಅದಕೇ ಮರ್ಯಾದಸ್ತರ್ದಿವಸಿಲ್ಲಪಾ; ಮರ್ಯಾದಿಂದಕ ಪಾರಾಗ್ಹೋಗೋದ್ಬಲೋಪಾಕ— ಅಂದೆ" ಎಂದು ಮತ್ತೆ ದೇವರ ಮನೆಯೊಳಗೆ ಹೊರಟುಹೋದರು ಶಾರದಮ್ಮನವರು.

೨

"ಏನಯ್ತೋ ಏನೋ ಯವ್ವಾ, ದೇಸ್ಕೆಟ್ಟೈತ್ರೀ! ಬರ್ಬರ್ಕ ಬುದ್ದಿ ಕೆಟಗೊಂಕಕ ಹೊಂಡ್ತಿ ಜನರ್ದು! ದೀಡ್ದಮ್ಮೀ ಕಿಮ್ಮತ್ತಿಲ್ದೋರಿಗೆ ಬಂದ್ದೋಗೇತ್ಪದವಿ! ಮೂಳಗೋಳು ಈಟೇಟ್ದುಡುಗರ ದಿವಾಕಾರ ಏನೆವ್ವಾ! ಅವರ ಮಾತೇನ, ಅವರ ಜಂಭೇನ! ನಮ್ಮಂಕರ್ಯಾ — ನಮ್ಮಂಕ್ರ್ಯಾ, ನಮ್ಮಡುವಲ್ನವನ ಮಗಾ — ಕೀಟ್ಬೈತೀ— ಸಾಲಿಂದ ಮನೀಗ್ಬರೂದ್ರಾಗಕ ಚಾದಂಗಡೀ ಹೊಕ್ಕಕ ಬರತೈತಿ! ಬ್ಯಾಡೋಂದ್ರ ತಿರ್ತಿರಿಗೇ ಅಂತೈತಿ! ಯವ್ವಾ ಅದರ್ಬಡ ಗಾಡ್ನುಂಗ್ಲೀ; ಚಾದಂಗಡ್ಯಾರಕ ಏಸಾಕೊಂದಾದೂರೀ ಊರಾಗ! ಟಣ್ಯಾಗೆಡ್ಡಿದ್ದು! ನೀ ಬೇಕಾದ್ದೆಳೆವ್ವಾ, ಈ ಚಾದಂಗಡೀನಕ ಹೋಡ್ನ ಮ್ಯಾಲೇಸಾಕೆಡಿಸಿದ್ದೂ! ಜಾಕತಿಲ್ಲಾ, ಕೋಕತಿಲ್ಲಾ ಎಲ್ಲಾರೂ ಹೋಗೂದೂ, ಎಮ್ಮಿ ಮುಸರೀ ಕುಡವ್ಹಾಂಗ ಕುಡದ್ಬರೂದು!"

"ಕಲಿಯುಗಾನಕ ಈರಮ್ಮಾ ಇದು! ಕಲಿಯೂದ್ದೆಚ್ಚಾಟ್ಹಾಂಗ.... ಕಲಿರಾಜನ ಮಹಾತ್ಮೀನೂ ಹೆಚ್ಚಾತು!"

"ಕಲಿಯೂದ್ದೆಚ್ಚಾದ್ರ ಹೀಂಗ್ಹುಚ್ಚುಚ್ಚಾರ್ಯಾಡಬೇಕಂತ್ತೇತ್ರೀ! ಸ್ವಾಮಾರಕ್ಕೊಮ್ಮೆ ಶಂಕರ್ಲಿಂಗಪ್ಪನ್ಬಲ್ಲಕ್ಕೀ ಹೊರಡ್ತಮ್ರು; ಅದೆಲ್ಲಾ ಬಟ್ಟಕಬಟ್ರು! ಚಾದಂಗಡ್ಯಾನ್ಸೊಸೀನೋ ಕೇಳಿಕೊಂಕ್ಯುಂಡರ್ತಾರ್ ಮೂಳಗೋಳು! ದೇವರ್ಚಾಕ್ರೀ ಮಾಡಿದ್ರ ನುಳೀ ಬೆಳೀ ಚಿಲೊಕ್ಕಾಳ್ಯಂಗ ಕೊಟ್ಬಾನವ್ವಾ ಶಿವಾ; ಅದಕಕ ನೋಡ್ಲಿಂತಾ ದಿನಾ ಬಂದೂ! ಒಂದೊರ್ಸ ಬೆಳದರ, ಮತ್ತೊಂದೊರ್ಸರಿಸಾಲ! ವರ್ಸಾ ಶಿವರಾತ್ರಿಗೆ ತೇರ್ಕ್ಯಾಡತಿದ್ರಕ ಯನ್ವಾ; ಈಗ್ನಾಕೊರ್ಸಾತು; ಮುಗ್ಗಿಹೋತದು. ಒಬ್ಬರ ಮಾತ್ಕ್ಯಾಗ ಒಬ್ರಿಲ್ಲಾ. ದೇವ್ರಿಲ್ಲಾ! ದಿಂಡ್ರಿಲ್ಲಾ; ಕುಲಾಯಿಲ್ಲಾ; ಶೀಲಿಲ್ಲಾ!"

"ಮನ್ನೇ ಪುರಾಣದಾಗ ಧರ್ಮರಾಜಗ, ಮಾರ್ಕಾಂಡೇಯ ಋಷಿ ಕಲೀಮಹಾತ್ಮೀ ಹೇಳಿದ್ದನ್ಹೇಳಿದರು. ಅದನ್ಹೇಳಿದರ ನೋಡವ್ವಾ, ಈಗೇನಾಗೇದೆಲ್ಲಾ ಬರದಾರ; ಇನ್ಮುಂದಾಗೂದನ್ಹೇಳಿದರನಕಾಕ, ಪೈಮ್ಯಾಲ್ಮಳ್ಳಿರತಾವ! ಕಲೀ ಹೆಚ್ಚಾದ್ದಾಂಗ ಕುಲಾಕೆಟ್ಗೋತಕ ಹೋಗೂದ! ಸರ್ಕಾರದವ್ರು ಪೆಜ್ಜೆಚಾ ಕರಾ ಹಾಕತಾರಂತ; ಜನಾನೂ ಬ್ಯಾಸತ್ಹೋಗತದಕ ಅಂತ!"

"ಐ. ನಮ್ಮವ್ವಾ; ಸರಕಾರದೋವ್ರು ಒಂದೊಂದ್ಮಾಡತಾರೊಂದೊಂದಿಲ್ಲಕ! ಅದೇನೋ ಸಾಲಾ ಮುಣಗುಸೂ ಕಾಯ್ದೇ ಮಾಡ್ಯಾರಂತ. ಈಗಿಪ್ಪತ್ಕ್ಯಾವಶ್ವರ್ಸದ್ದಿಂದ ನಮ್ಗೂಳ್ಯಾಕುಟ್ಟದ್ದಿಂತಾ ಮುಂಜೇನ್ನಕ ನೋಡು: ಆ ಕರಗೂಳಿಯವರ ಹೊಲಾ


ದಮ್ಮು
ಕೆಟ್ಟಗಾದೀತು
ಆದರೆ
ಪುರೋಹಿತ ಶ್ವಾಸಹಾರಿಯಿಂದಲೇ
ಏಕೇ ನಿಮಿಷದಲ್ಲಿ, ಒಂದೇ ರಾತ್ರಿಯಲ್ಲಿ ದಮ್ಮು ಕೆಟ್ಟಗೆ ಮಾಡೀವು ಎಂಬ ಉಪಾಯಗಳಿಂದ ದಮ್ಮು ಗುಣಪಡಿಸಿ ಹೆಚ್ಚುವದು. ಪುರೋಹಿತ ಶ್ವಾಸಹಾರಿಯು ಮಾತ್ರ ಇಂಥ ಔಷಧವಿದೆ; ಅದನ್ನು ತೆಗೆದುಕೊಳ್ಳಲು ಪ್ರಾರಂಭಿಸಿದ ಕೂಡಲೇ ಕೆಮ್ಮು ಕಡಿಮೆ ಹೋಗುವುದು. ಕಫವನಿಸ್ಸರಣೆ ಹೆಚ್ಚುವುದು. ಪುನಃ ಗಟ್ಟಿಮುಟ್ಟಾಗಿ ದಮ್ಮು ಖಂಡಿತವಾಗಿ ಹೋಗಿ ಬಿಟ್ಟು ಹೋಗುವುದು.
೩-೦, ೬ ಮತ್ತು ೧೦ ರೂ. ಪ್ಯಾಕಿಂಗದಲ್ಲಿ ಎಲ್ಲ ಕಡೆಗೂ ಸಿಗುವದು. ಇಲ್ಲವೆ ಡಾ. ಪುರೋಹಿತ ಫಾರ್ಮಸಿ ಕೊಲ್ಹಾಪುರ, ಇವರಿಂದ ತರಿಸಿಕೊಳ್ಳಬೇಕು.
ಗಂಟಲನ್ನು ಮತ್ತು ಶ್ವಾಸಕೋಶ ಕಾಯಿಲೆಗಳನ್ನು ಗುಣಪಡಿಸಲು ಇದೊಂದೇ ಪೈದ್ಯರ ಔಷಧ
ಪುರೋಹಿತ ಶ್ವಾಸಹಾರೀ
DR. PUROHIT PHARMACY, KOLHAPUR

ಕರೂದೀ ಹಿಡಿದಿನ್ನಲ್ಲನಮ್ಹಿರ್ಯಾ! ಅದನ್ಬಿಡಿಸಿ ಕೊಡಬೇಕೂಂತ ಕೋಟ್ನಾಗ್ ನ್ಯಾಯಾ ಹೊಡ್ಯಾನ್ನೋಡವಾ ಈಗ! ಹೊಲ್ದೊಡ್ಯಾಗ ಹೊಲ್ವಾಗ್ಬೆಳ್ಳಾಳ ಕೊಡಬಾರ್ದೂಂತ ಕಾಯದೇ ಮಾಡ್ಯಾರಂತ. ಹೆಂತೆಂತಾ ದಿನಾ ಬಂದೂರೀ ಇವು? ನಾಕಿಪ್ಪತ್ತೊ ಸ್ಯಾದೂರೀ ನನಗೂ; ಹಿಂತಾ ದಿನಾ ಮಾತ್ರ ನಾ ನೋಡಿದ್ದಿಲ್ಲನ ಹಡದವ್ವಾ! ಕೊಡೋವ್ನ ಕೊಡಬ್ಯಾಡಾಂತ್ಹೇಳೋ ಮೂಳಾ—ಹಿಂದಕ್ಕೊಬ್ಬ ಹೊಗ್ಗಳ್ಳೀ ಹೊನ್ನಪ್ಪಾಂತಿದ್ನಂತ್ರೀ! ಈವತ್ತಿಗಾ ಮೂಳನ್ನೊಂಬೀ-ಮೌಡಿ, ತೂ, ನಾಕಿಪೀ ಚಾಂಡಾಳೀಂತ ಮಾರೀಮ್ಯಾಗುಗಳಿ, ಬಾಯಾಗ್ಮಣ್ಣಾಕಿ ಕೂಡ್ಸತ್ತಾನ್ನೋಡ್ರಿ ಆಟದೋರು! ಎವ್ವಾಽ ಡೊಗ್ಗಳ್ಳೀ ಹೊನ್ನಪ್ಪನ್ಕಾರಬಾರಾಗೇತಿರೀ ಈಗ!"

"ಸರ್ಕಾರದವ್ರ್ಹೀಗೆಲ್ಲಾ ಯಾಕ್ಕಾಡ್ಯಾರಽ ಈರಮ್ಮಾ! ಸರಕಾರಂದ್ರ ಧರ್ಮದಿಂದಽ ರಾಜ್ಯ ಆಳೂದವ್ವಾ! ಕೊಟ್ಗಂಟ್ಮುಣಸೂಂತ್ಹೇಳೋ ಹೊಗ್ಗಳ್ಳಿ ಹೊನ್ನಪ್ಪಾ— ನಡುವಿನ ಕಿಡಿಗೇಡಿಯಾವನರಽ ಆಗಿದ್ದಾನು."

ವಸಂತರಾಯನ ಒಕ್ಕಲಾದ ನಿಂಗಜ್ಜನ ಹೆಂಡತಿ ಈರಮ್ಮ ಹಾಗೂ ಶಾರದಮ್ಮನವರ ನಡುವೆ ನಡೆದ ಮೇಲಿನ ಸಂಭಾಷಣೆಯ ಕೊನೆಯ ಭಾಗವನ್ನು, ಅದೇ ತೋಟದಿಂದ ತಿರುಗಿ ಬಂದ ವಸಂತ-ಶೇಷಣ್ಣರ ಕಿವಿಗೆ ಬಿದ್ದುವು.

"ಕೇಳಿದೆಯಾ ವಸಂತ, ಸರಕಾರದ ಧೋರಣೆಯ ಉಪಮಾನ ಉಪಮೇಯಗಳು ನೆನಪಿನಲ್ಲಿಡುವಂಥವು ನೋಡು! ಇದೇ ಜನಪದಸಾಹಿತ್ಯ!" ಎಂದು ಗಂಭೀರವಾಗಿ ಶೇಷಣ್ಣ ಕುಳಿತ.

"ಯಾರವರು? ಈರಮ್ಮನೇನು? ಏನಬೇ ಯಮ್ಮಾ, ಇವತ್ಯಾಕೋ ದಾರೀ ತಪ್ಸಿದ್ದಾಂಗ್ಕಾಣತಽತೀ" ಎಂದು ವಸಂತನು ತನ್ನ ತಾಯಿಯಿದ್ದೆಡೆಗೆ ಹೋದನು.

"ನೀ ತ್ಹಾಟಕ್ಕಾನಗಾರಽ ಬರಽವಾ; ಬರೂದಽ ಬಿಟ್ಟಿಬಿಟ್ಟೈಪ್ಪಾ ಈಗ! ಶಾರದಮ್ಮವರದೂ ಬಿಟ್ಟ್ಯಾಗದಽ ಬಾಳ ದಿನಾ ಆಗಿತ್ತಽ.... ಜೀವ ಚುರುಚುರೂ ಅನ್ನಾಕ್ಹತ್ತೀ; ಬೆಟ್ಟೇ ತೊಗೊಂಹ್ಹೋಗೂ-ನಾಂತ ಬಂದಿದ್ದೆ."

"ನಿಮ್ತ್ಹಾಟಕ್ಕಽ ಹೋಗಿಬಂದಿವಿಬೇಯೀಗ! ನಮ ಚಿಗವ್ವನ್ಮಗಾ ಶೇಷಣ್ಬಂದಿದ್ನಽ; ತ್ಹಾಟಾ ತೋರಿಸ್ಕೊಂಡು ಎಳ್ನೀರ್ಕುಡದ್ಬಂದ್ವಿ."

"ಅತ್ಹಾಡಾತ್ನನ್ಮಗನಽ! ಹೀಂಗ ಮ್ಯಾಗಽ ಮ್ಯಾಗಽ ಯಾವಾಗಾರ ಹೋಕ್ಕೊಂತಽ ಬರ್ಕೊಂತ ಇರ್ನನ್ನೊಡ್ಯಾ!"

"ಹ್ಯಾದ ಸರ್ತಿಗೊಮ್ಮೆ ಹೆತ್ಹತ್ತಿಳ್ನೀರ್ಗಾಯಿ ನಿಂಬೀಹಣ್ಣೂ ಖರ್ಚಾಗ್ತಾವಬೇ ಮುದಿಕೀ, ನಿಮ್ತ್ಹಾಟದಾಗಿನ್ನೂ!"

"ಐಯ್ ಬಿಡ್ನನ್ಮಪ್ಪಾಽ! ಕೆರೀನೀರ್ಕೆರೀಗ್ಹಾಕಿ ವರವಣಿಡಕೊಂಡ್ಹಾಂಗಪಾ. ನಿಂ ತ್ಹಾಟದಾನ್ಹಣ್ಣು ನಿನಗಲ್ದಽ ಮತ್ತ್ಯಾರಿಗ್ಹಾಡೂದೂ! ಅಲ್ಲೆ ನಮ್ಹಿರ್ಯಾನೂ ಇಪ್ಪೇಽನ?"

"ಹಿರ್ಯಾ ಅಂದ್ರ್ಯಾರಬೇ."

"ಐಯ್ ನೋಡ್ರೀ ಶಾರದಮ್ಮೋರಽ, ವಸಂತಪ್ಪ ನನ್ಮಕ್ಕಡಿಂದಽ ಹೆಸರ್ಹೇಳಿಸ್ಕೋಬೇಕಂತ ಮಾಡ್ಯಾನ! ಮುದಿಕೆಪಾ, ಇನ್ನೇನ್ಹೆಂದೋ? ಅಲ್ಲಿದ್ನೇನೂ?

"ಇಲ್ಲ, ಇದ್ದಿದ್ದಿಲ್ಲ!"

"ಯಾಕೋ ತುರ್ತಾತುರ್ತ ಬಿಟ್ಟ್ಯಾಗಬೇಕಂತಿದ್ನೋ ನಿನ್ನಽ! ನಾಽಕೆ ಕಳ್ಸಿಕೊಡ್ಲಾ?"

"ಹೂಂ, ನಾಳೆ ಕಳಿಸಿಕೊಡು!"

೩

ತಾಲೂಕಿನ ವತಿಯಿಂದ ರೈತಸಭೆಯೊಂದನ್ನು ಊರಲ್ಲಿ ಮಾಡುವದನ್ನು ತಮ್ಮಲ್ಲಿ ನಿಶ್ಚಯಿಸಿಕೊಂಡು, ಸ್ಥಾನಿಕ ಕಾಂಗ್ರೆಸ್ ಕಮೀಟಿಯ ಜೆಅರ್‌ಮನ್ ಚೆನಬಸಯ್ಯನವರು, ಸೆಟ್ಟರ ನಿಂಗಪ್ಪನವರನ್ನೂ ಸಾವಕಾರ ವೀರಭದ್ರಪ್ಪಸಪರನ್ನೂ ಗಡ್ಡೀ ಭೀಮಾಚಾರ್ಯರನ್ನೂ ಕೂಡಿಕೊಂಡು, ವಸಂತರಾಯನಲ್ಲಿಗೆ ಬಂದರು. ದೇಶದ ಪರದೇಶದ ಪರಿಸ್ಥಿತಿಯಿಂದ ಪ್ರಾರಂಭವಾದ ಮಾತು-ಕಥೆಗಳು, ಅಲ್ಲಿ ಇಲ್ಲಿ ಸುತ್ತಾಡಿ, ಹತ್ತೊಂಬತ್ತುನೂರಾ ನಾಲ್ವತ್ತೈರ-ಡನೆಯ ಚಳವಳಿಗೆ ಸಂಬಂಧಿಸಿದುವು. ಆಗ ಜೆಅರ್‌ಮನ್ ಚೆನಬಸಯ್ಯನವರಿಗೆ ಒಳ್ಳೇ ಹುರುಪುಬಂದು "ಹಾಂಗ್ಮಾಡದಿದ್ರ ಇಂಗ್ಲೀಷರು ಮಣೀತಿದ್ರೇನ್ರೀ? ಚಾವಡೀ—ಸಾಲೀ—ಸುಟ್ಟು, ಟಪಾಲೂ—ಹಪ್ತೇದ್ದಣಾ ಹೊಡದ್ವೀ ಅಂತ, ಗಡಾ ಗುಡಜಾಪೀ ಕಟ್ಟದ್ರು! ನಿನ್ಸುಳ್ಳೀಲಿದ್ರೂ ಕೇಳ್ತೀರೀ, ಕರೇವ್ಹೇಳಿದ್ರೂ ಕೇಳ್ತೀರೀ: ಮಾದೇವಪ್ಪಾ— ನಾವೂ— ಒಂದ್ಯಾವಡೀ ಹೊಡ್ಯಾಕ್ಹೋದಾಗ, "ಗಾಂದೀ ಮಾರಾಜಕೀ ಜೈ" ಅಂತೊದರಿ, ಪೋಲೀಸ್ಸಿಪಾಯೀ ಕೈಯಾನ್ಬಂದೂಕ್ಕೊಸರಿ ಕಸ್ಕೊಂಡರ, ಚಣ್ಣಾದಾಗೆಲ್ಲಾ ರಾಡೀ ಮಾಡ್ಕೊಂಡಿತ್ತಾ ಕರೇ ಡಗಲೀದು! ಒಮ್ಹಿಂಗಾತ್ರೀ: ಓಡ್ಲ ಕೊಪ್ಪದ್ಗೌಡಾ ಪಿತೂರೀ ಕೊಟ್ಬಾಂಽತಿಳೀತು: ಗೌಹನ್ಮಾತ್ಕೇ ಪೌಜದಾರಾ-ಪೋಲಿಸ್ಸಾಬಾ—ಹಂಗಽ ಹಂಗಽ ನಮ್ಮ ಗ್ಯಾಂಗ ಕೈಗ್ಸಿಕ್ತೂಂತ ಒಳ್ಳೆ ಕುಸೀಲೆ ಬಂದಿದ್ವಿ! ಆವೂರ ಹುಸೇನ್ಸಿಯಾ ಅನ್ಸಾವಾ, ನಮಗೊಳ್ಳೇ ದೋಸ್ತಿ. ನಾವ್ಹೇಲಿನಾಗಿದ್ದಾಗ ಅವಗೂ ದರೂಡೀ ಕಟ್ಲೇದಾಗ ಜೇಲಾಗಿ ಅಲ್ಲಿಗೆ ಬಂದಿದ್ದ ಪೊಲೀಸರ್ಬಂದಿನಾಗಽ ಹುಸೇನ್ಸಾಬನ್ಮುದಿಕೀ ಶ್ರವಾ ಆತು ನಾಯೇನ್ಹಂಚಿಕೀ ಮಾಡಿದ್ಹೊತ್ತಾತ್ತೇನ್ರಿ? ಆ ಶ್ರವಾ ಹಾಕೀ ಡೋಲ್ಯಾಗ ಮನಕೊಂಡ್ಬಿಟ್ಟಿ. ಆತ್ರಿ, ಹಲ್ಬಿದಾಯಾ ಹೇಳಿ ಕೊಂತ ದೂರ ಹುಗ್ಯಾಕ್ಹೊಗೊಂಡ್ಹೋಗಿಬಿಟ್ರು! ಹಿಡಕೊಳ್ನನ್ನಽ ಅಂದೆ ಪೌಜದಾರಗ. ಹ್ಯಾಂಗತೀ ಯುಗತೀ" ಎಂದ ಮುಮ್ಮಜಲಿನ ನಗೆ ನಕ್ಕರು.

"ಬಲೇ ಯುಗ್ತೀ ಮಾಡಿದೇಽಳ್; ಅಂತೂ ಕಂಬೀರ್ನಪಾ ನಿ ಚೆನಬಸಯ್ಯಾ, ಸೈ ಅಂದೇನ್ನಿನಗ!" ಎಂದು ಬೆನ್ನು ಚಿಪ್ಪರಿಸುತ್ತ ಸಂಗಪ್ಪಸೆಟ್ಟರು ನಕ್ಕರು.

"ಏನ್ಮಾಡ್ತೀರೀ ಸೆಟ್ಟರಽ! ಮಾದೇವಪ್ಪ ಬದಿಕಿದ್ರಽ ತಾಲೂಕ್ಕಚೇರೀನಽ ಹೊಡೀಬೇಕಂತ್ಮಾಡಿದ್ವಿ! ಅಟ್ರಾಗಽ ದೇವರ್ಬೆಳಗ್ಮಾಡಿದಾ! ರಿತ್ತಿಗ್ಹೋಗೋಣ್ಬಾಡೋಂತ ಕೈಯಾಗ್ಕಡ್ಡೀ ಕೊಟ

ಹೇಳದೆನ್ರೀ ಮಾದೇವಪ್ಪ! ಬಿಕ್ಕಡ್ಡಿ ಬಂತು; ಕಾಗೆಡಾ ಕಟ್ತು; ಹಂಗ್ಬಲಾಕಟ್ತು. ಶಕಣ ಚಿಲೋ ಆಗಲಿಲ್ಲಾ, ಬ್ಯಾಡೋಂತ್ಹೀಳಿದೆ; ಕೇಳ್ಲಿಲ್ರೀ ಮಾದೇವಪ್ಪಾ!"

"ಸಾಕ್ಮಾಡ್ನಿ೦ದಿನ್ಪುರಾಣಾ! ಯಾಕ್ಬಂದಿದ್ರೀಗಽ ಅನ್ನೂದಽಟು ನಮ್ಯಾಯಗೆ ತಿಳಸೀಗ" ಎಂದು ಸೆಟ್ಟರ ಸಿದ್ರಾಮಪ್ಪನವರು ಬೇಸರದ ಧ್ವನಿಯಲ್ಲಿ ಅಂದರು.

ಕಾರ್ಯದ ಪ್ರಸ್ತಾವನೆ ಮಾಡುತ್ತ ಚೆನಬಸಯ್ಯನವರು "ರಾಯರಽ, ಈ ಊರಾಗೊಂದ್ರೈತ್ಸಬಾ ಕರೀಬೇಕಂತ್ಮಾಡೇವೀ ಆ ಸಬಾಕ ಸ್ವಾಗತ್ಸಮೀಟೀ ಚೆರಮನ್ರು ನೀವಽ ಆಗ್ಬೇಕ್ರೀ ಮತ್ತ....ಯಾಕ್ರೀ ಸೆಟ್ರ?"

"ನನಗೇನೂ ಪ್ರತಿಷ್ಠೆಯ ಹಂಬಲವಿಲ್ಲಾ; ಇರಲಿ, ಈ ಸಭಾದಿಂದ ರೈತರಿಗೇನಾ್ಲಭ ನನಗಂತೂ ತಿಳಿಯದು!" ಎಂದು ವಸಂತರಾಯನು ತನ್ನ ಅಸಮ್ಮತಿಯನ್ನು ವ್ಯಕ್ತಗೊಳಿಸಿದನು.

"ಅದ್ಯಾಕ್ರೀ! ಕೆರೀ, ಕಾಲೀ, ಕುಡಿಯೂ ನೀರಿನ್ಬಾವಿ— ನಮ್ಮೂರಿಗಾಗೂದೆಷ್ಟ ಜರೂರೈತಿ ನೋಡ್ರಿ! ಈಗ್ನೋಡ್ರೀ, ರೈತರಿಗೆ ಕುಡಾ-ಕಬ್ಬಣಾ ಸಿಗೂದೆಷ್ಟ್ಕಂಚೇತಾಗೇತಿ! ನಮಗೇನೇನಡಚಣೀ ಅದಾವ— ಎಲ್ಲಾ ಟರಾವ್ಯಾಡಿ, ಸರಕಾರದ್ವಜೀ ಕಳಸಾಕ ಬೇಶಾಗೂದಿಲ್ರೀ? ಅಂದ್ರ ಗಡಾ ಕೆಲ್ಸಾಗತಾವ!" ಎಂದರು ಚೆನಬಸಯ್ಯನವರು.

"ಸಭಾ ಮಾಡಲಿಕ್ಕೆ ನಾ ಬ್ಯಾಡಾ ಅಂತೇನಿ ಅಂತ ತಿಳಕೋಬ್ಯಾಡ್ರಿ ಸೆಟ್ರಽ, ಚನಬಸಯ್ಯನವರಽ! ಆದರ ರೈತರಿಗೆ ಖರೋಖರ ಹಿತಾ ಆಗಬೇಕಾಗಿದ್ರ, ಈ ಸಭಾ ಕರಿಯೋದಕ್ಕಿಂತಾ ರೈತರೆಲ್ಲರದೂ ಒಂದು ಸಹಕಾರೀ ಸಂಘ ಮಾಡ್ರಿ---ಇಂಥ ಸಂಘಕ್ಕೆ ಟ್ರ್ಯಾಕ್ಟರು, ಉತ್ತಮ ಬೀಜ,ಗೊಬ್ಬರ,ಕುಡಾ-ಕಬ್ಬಿಣಾ, ರೈತರಿಗೆ ಒಕ್ಕಲತನಕ್ಕೆ ಬೇಕಾಗುವ ಅವಶ್ಯವಿರುವ ಸಾಮಾನುಗಳನ್ನು ಸರಕಾರದವರು ಕೂಡಲೆ ಪೂರಯಿಸುವೆನೆಂದು ಆಶ್ವಾಸನ ಕೊಟ್ಟಿದ್ದಾರೆ. ಇದಲ್ಲದೆ ಆಡಚಣೀ ವ್ಯಾಳ್ಯಕ್ಕೆ ಬೇಕಾಗುವ ಹಣವೂ ಸಿಗುವದು. ಇದರಿಂದ ರೈತರ ಹಿತವಾಗುವದಲ್ಲದೆ--- ಬರೇ ಎಲ್ಲೆಲ್ಲಿಯವರೋ ಕೂಡಿ ಉದ್ದುದ್ದ ಮಾತಾಡುವದರಿಂದ ಏನೂ ಆಗಲಿಕ್ಕಿಲ್ಲ!"

"ಅತ್ರೀ ರಾಯ್ರು; ಹಿಂತಾದಽ ಒಂದ್ ಟರಾವ್ಪಾಸ್ಮಾಡ್ಬಿಟ್ರಾತು ಸಬಾದಾಗ!" ಎಂದರು ಚೆನಬಸಯ್ಯನವರು.

"ಅಲ್ರೀ ಅಯ್ನವರಽ, ಸಭಾದಾಗ ಠರಾವ್ಪಾಸ್ಮಾಡಿದರ ಸಹಕಾರೀ ಸಂಘ ಸ್ಥಾಪನಾ ಆಗೂದಿಲ್ಲಾ! ರಜಿಸ್ಟರರ ಕಡೆಗೆ ಶೇಅರಿನ ಹಣಾ ಕೂಡಿಸಿ ಅರ್ಜೀ ಮಾಡಬೇಕಾಗತಽದ!"

"ಸಬಾದ್ಕೆಲಸ್ಮುಗದ್ಮೂಡ್ಲೆ ಅದಽ ಕೆಲಸಕ್ಕಽ ಕೈಹಚ್ಚಿ ಬಿಡೋಣ್ರೀ."

"ಅಂತೂ ರೈತಸಬಾ ಕೂಡ್ಸೀ ಬಿಡಬೇಕಂತೀರೇನ ಚೆನಬಸಯ್ನಾರ!"

"ಹೌದ್ರೀ, ಮ್ಯಾಗಿನವ್ರ ಮುರ್ವತ್ತಿಗೆ ಮಾಡ್ಬೇಕಾಗೇತಿ! ಜಿಲ್ಲಾ ಕಮೀಟಿಂದ ಮ್ಯಾಗಽ ಮ್ಯಾಗಽ ಹೇಳಿ ಕಳಸ್ತಾರ."

"ಹಾಂಗಾದರೆ ಚೆನಬಸಯ್ಯನವರೇ, ಸ್ವಾಗತಕಮಿಟೀ ಚೇರಮನ್ನರ ಜಾಗಾಕ್ಕೆ ಮತ್ತಾಬ್ಬರನ್ನಾದರೂ ನೋಡಿಕೊಳ್ಳುವದು ಉತ್ತಮ!"

"ಅದ್ಯಾಕ್ರೀ?"

"ನಾನು ಆ ಮಾನಕ್ಕೆ ಯೋಗ್ಯನಲ್ಲಾ ಇಸ್ಟೇ."

"ಚೆನಬಸಯ್ನೋರಽ, ರಾಯ್ರು, ನಮ್ಮಿಮ್ಯಾಂಗ ದಡ್ರಲ್ಲಾ. ಯಾಕೇ ಪ್ರಸಂಗಾ ನೋಡಿ ಮುಂದಕ್ಹೆಜ್ಜೀ ಇಡೋರು! ದಿನಮಾನ್ನಾಜೂಕ್ಬಂದೂ, ಕಾಯ್ದೇ ಕೆಟ್ಟಾದೂ! ರೈತರ ಹಿತಾ ಆಗಲೀ ಅಂತ್ಮಾಡಿದರಽ, ಕೆಲವರಿಗ್ಮಂಗ್ಯಾಗ್ಹೆಂಡಾ ಕುಡಿಸಿದತಂಗಾಗೇತಿ. ಸಬಾ ಅಂತ್ಯಾಕ್ಕಾಗ, ಆಲ್ಲೀಯನರಿಲ್ಲೀಯವರ್ಕೂಡವರಽ....ಮತ್ತೇನಾರಽ ಕೆತ್ತೇಬಜೆ ಟರಾವ್ತರೋನರಽ! ಹುಚ್ಚರಲ್ಲ ರಾಯರ್ಮಾತಿನಾಗ್ಸಿಗಾಕ! ಅಂ. ತಿಳೀತೇನು ಅಯ್ನಾರಽ!"

"ಹೌದೋ ಚೆನಬಸಯ್ಯಾ, ಈಗ ತಣ್ಣಾಣಗದೇವೀ. ಊರಾಗಽ ಸಬಾ ಕರದು, ಮಲಗಿದ್ದಂಡನ್ನೆಬ್ಸಿ ಮೂಲಾಮಾಡಿಕೊಂಡ್ರೂ ಅನ್ನೋಹಾಂಗಾದೀತು!"

೩೦-೩೨ ವರ್ಷಗಳಿಂದಲೂ ಸಾವಿರಾರು ಜನರನ್ನು ರೋಗಮುಕ್ತಗೊಳಿಸಿ ಅನುಭವಪಡೆದುಕೊಂಡ

ಶಕ್ತಿವರ್ಧಕ ಧಾತುಪೌಷ್ಟಿಕ ಪಾಕ

ಅವಿವಿಂಪ ಮೂತ್ರಪಿಂಡಗಳಿಂದಲೂ—ಸ್ಪಷ್ಟದಲ್ಲಿ—ವೀರ್ಯಸ್ಖಲನ, ಶೀಘ್ರಸ್ಖಲನ, ಸ್ವಪ್ನದೋಷ ಮುಂತಾದ ಅಶಕ್ತತೆ, ನಪುಂಸಕತ್ವ, ಇಂದ್ರಿಯಶೈಥಿಲ್ಯ ಇವುಗಳನ್ನೆಲ್ಲ ಹೊಡೆದೋಡಿಸಿ, ವೀರ್ಯವನ್ನು ಸಶಕ್ತಗೊಳಿಸಿ ಸ್ತ್ರೀಯರಲ್ಲಿ ಸಂತಾನಶಕ್ತಿಯನ್ನುಂಟುಮಾಡುವದು. ಮಲಶುದ್ಧಿ ಯಾಗಿ ತುಂಬ ಹಸಿವೆಯಾಗುವದು. ಶರೀರದ ಇದರ ಪ್ರಯೋಜನ ಪಡೆಯುವುದಿಷ್ಟೆ ಅಲ್ಲ; ೬೦-೭೦ ವಯಸ್ಸಿನ ಮುದುಕರೂ ಇದರ ಸೇವನೆಯಿಂದ ನವತಾರುಣ್ಯದ ಉತ್ಸಾಹ ಹೊಂದುವುದರಲ್ಲಿ ಸಂದೇಹವಿಲ್ಲ. ಹೆಣ್ಣುಮಕ್ಕಳ ರಕ್ತಪ್ರದರ, ಶ್ವೇತಪ್ರದರ, ಬಂಜೆತನ ಅಥವಾ ಅದ ಮಕ್ಕಳು ಕೂಡಲೆ ಸಾಯುವದು, ಹೊದಲಾದುವುಗಳ ಮೇಲೆ ಇದು ರಾಮಬಾಣವೇ ಆಗಿದೆ. ಇದರಲ್ಲಿ ಹಲವು ಗಿಡಮೂಲಿಕೆ, ಭಸ್ಮ, ಸುವರ್ಣಮಾಲಿನೀವಸಂತ ಮೊದಲಾದ ಬೆಲೆಯುಳ್ಳ ಔಷಧಗಳನ್ನು ಕೂಡಿಸಲಾಗಿದೆ.

೧ ಡಬ್ಬಿಯ ಬೆಲೆ ೧೨ ರೂ. ೬ ದಿನಗಳಲ್ಲಿ ಗುಣ. ನಂ ೨ರ ಬೆಲೆ ೬ ರೂ. ೧೫ದಿನಗಳಲ್ಲಿ ಗುಣ. ಶ್ರೀಮಂತ ಸೆಟ್ಟಿ-ಸಾಹುಕಾರರ ಸಲುವಾಗಿ ಸ್ಪೆಶಲ್ ಡಬ್ಬಿಗೆ ೨೬ ರೂ. ಕೂಡಲೇ ಗುಣ. ಇದರಲ್ಲಿ ಅನೇಕ ಬೆಲೆಯುಳ್ಳ ಶಕ್ತಿವರ್ಧಕ ಔಷಧಗಳು ಕೂಡಿವೆ.

ಅರ್ಜರ್ ಜೊತೆಗೆ ಪ್ರತಿಯೊಂದು ಡಬ್ಬಿಗೆ ೧ ರೂ. ಯಂತೆ ಆರ್ಡಾನ್ಸು ಕಳುಹಬೇಕು. ಅದನ್ನು ಪಡಾವಣಿ ಉಳಿದ ಹಣಕ್ಕೆ ವಿ. ಪಿ. ಪಾಡುತ್ತೇವೆ. ಪತ್ರವೇನೂ ಇಲ್ಲ. ೧ಡಬ್ಬಿ ೩ಲ ದಿನಕ್ಕೆ ಸಾಲುವದು. ೩ ಡಬ್ಬಿ ತೆಗೆದುಕೊಳ್ಳುವವರಿಗೆ ಅಂಚೆಯು ವೆಚ್ಚವಿಲ್ಲ. ೪ ಡಬ್ಬಿಕೊಳ್ಳುವವರಿಗೆ ೧ ಡಬ್ಬಿ ಬಕ್ಷೀಸು. ಗುಣದ ಬಗೆ ಅನೇಕ ಸರ್ಟಿಫಿಕೇಟುಗಳು ಬಂದಿವೆ.

ವಿಳಾಸ:— **ಮ್ಯಾ. ಡಿ. ಎಸ್. ಅ್ಯಂಡ್ ಕೊ. ಔಷಧಾಲಯ**

ಮು. ಪೋ. **ಮಿರಜ** (ಎಸ್. ಎಂ. ಸಿ.)

"ಜಿಲ್ಲಾಕಮೀಟಿಂದ ಬಾಕಳಿ ಒತ್ತಾಯಾಗೇತಿ. ಇದನ್ಮಾಡದಕ ಇದ್ರ ಮುಂದ್ಯಾದರಾಗೂ ನಮ್ ನೀರಕ ಯೇರೋಂಗಿಲ್ಲಾ. ಸಣ್ಣಟ್ನಾಗ್ಮಾಡ್ಬಿಡದೇಕೂಂತ! ಅಲ್ರೀ ಸೆಟ್ರಕ, ಇಲ್ಲೀತನಾ ಊರಾಗೇನಕರ ಗದ್ಲಾ ಗಡಿಬಿಡೀ ಆಗೇತ್ರೀ ! ಹಿಂಗೇನಾರಕ ಅದ್ರ ನಾವ್ಜಬಾಬದಾರ್ರೆಸಾ!" ಎಂದು ಚಿನಬಸಯ್ಯನವರು ಒತ್ತಿ ಹೇಳಿದರು.

"ನಿಮ್ಕಮೀಟಿಯವರ್ಮಾಡಿದ್ದಕ ಮಟ್ಟಪಾ....ಕಟ್ಟಿದ್ದಕ ಪಟ್ಟಪಾ! ಮಂತ್ರಿಂದ್ದಿಡದೂ ಮಾಮಲ್ಲಾರ್ತನಕಾ— ನಿವ್ಹೇಳಿದ್ಹಾಂಗಕ ನಡೀತಕತಿ! ಸರಕಾರೀ ಆದಿಕಾರಸ್ತ್ರೇನ್ರಿ! ತೋರ್ಮಕದ ಗೊಂಬಿ. ಸೂಸ್ರಾ ಆಗಳ್ಯಾಡುಸೋರೆಲ್ಲಾ ನೀನೇಪಾ. ನಿಮ್ಮಾತ್ಗಿಡ್ಡೀ-ಮಾತಾಡೂ ಕೂವತ್ತ್ಯಾವಂದೈತೀ? ಆಗ್ಲೀ. ನಮ್ಕೈಲಾದಕಟು ನಾವೂ ದುಡೀತೇವಿ."

"ದುಡ್ಯಾಕ ಸೊಯಂಸೇವಕರದಾರೇಳ್ರಿ; ನೀವ್ಬಟ್ಟೇ ಒಂದು ಕೊಟ್ಬಿಟ್ರಾ ಸ್ನಕು."

"ಕಮೀಟೀ ಚೇಆರ್‌ಮನ್ನ್ರಕ ಅದೀರಿ. ಪಂಡೆತ್ತಿದ್ನಿಮ್ಮಡೇನಕ ಅಕತಿ! ಆಗ್ಲೆಲಾ ಅದರಾಗಕ" ಎಂದು ಸೆಟ್ಟರೆಂದರು.

ಆ ಮಾತು ಕೇಳಿಯೂ ಕೇಳಿಸದವನಂತೆ ಚಿನಬಸಯ್ಯನವರು "ವಸಂತ್ರಾಯ್ರಕ, ನಮ್ಸೆಟ್ರು ಇನ್ನೂರ್ರುಪಾಯ್ಕೊಡತೇವಂತ್ಹೇಳ್ಯಾರಕ; ನಿವ್ದೇನ್ರಿ?"

"ಅಲಲಲಾ, ಏಸಂದ್ರೀ ಚೆಆರ್‌ಮನ್ಸಾಯಬ್ರಕ? ಇನ್ನೊನ್ನೂ-ರ್ಹೆಚ್ಚನ್ನಾಕಿಲ್ರೀ!"

"ಬ್ಲಾಕ್ಮಾರ್ಕೇಟ್ನಾಗ ಒಂದ್ಸಾರಿಗ್ಗೆ 'ಪೆಂಡ್ಗಟ್ಲೆ ಹಸನೋರ್ಟಕ ಹೊಡದಿರ್ತೀರಿ. ಅದರಾಗಿನ್ನೊಟ್ಟಿಡ್ನೂರ್ರುಪಾಯ್ಕೊಡೋಬಾಗೂ-ದಿಲ್ರೀ ನಿಮಗ?"

"ಯೇಸ್ಸಾರಿಗೀ ಬ್ಲಾಕ್ಮಾರ್ಕೇಟ್ಮಾಡಿದ್ರೂ, ನಾವ್ದುಡದ-ದ್ದಿಲ್ಲಾ.... ಅದೇನೋ ಹೇಳ್ತಾರಲ್ಲಾ.... ಅಜ್ಜಿನೂತದ್ದಿಲ್ಲಾ ಮುಮ್ಮಗನ ಉಡದಾರಕ್ಕಾತೂಂಕ. ಹಾಂಗ ಲಂಚಕ್ಕಕ ಹೊಕ್ಕಕತಿ. ನೀವಕ ನಡಬರಕ್ಕದ್ಯಸ್ತೀಮಾಡವ್ರೂ, ನಿಮಗಕ ಗೊತ್ತಿಲ್ರೀ? ಏನಿರೂ ಮಜಾ ಈಗ್ನಿಮ್ಮಡ ಅಕತಿ ನೋಡ್ರಿ!"

"ನಾವೇನ್ರೀ ಹೇಳ್ಕೇಳಿ ದೇತ್ಕೇವಕರು!"

"ಸೇವಕರ್ಯಾಕ್ರಪಾ ಅದಿಕಾರಸ್ತರು! ಕಲೀಕಟರ್ರುದ್ದೀದಾಗ ಅದಾರ್ ಹುದ್ದೇ ನಿಮ್ದೂ."

"ಅತ್ಬಿಡ್ರೀ ನಿಮ್ದಾಳ್ಕಗಳೀ! ವಸಂತ್ರಾಯರೇನ್ಸಹಾಯ್ಮಾಡ-ಕಾರ್ಕೇಳ್ಬಿಡ್ರಿ!"

"ನಾ ಏನ್ಹೇಳೋದೂ? ನೀವಕ ಹೇಳಬಿಡ್ರಿ!" ಎಂದು ವಸಂತ-ರಾಯರೆಂದರು."

"ಹೇಳೂದೇನ್ರಾಯ್ರಕ,ಸಬಾಕ್ಕಂದ ನಿಮ್ಮಂದ್ಗಂತೂ ನಿಮ್ಮಲ್ಲೇ ಊಟಾಗ್ತೈತ್ರೆ. ಇನ್ಯಾಕೀ ಮಂದ್ಗೆ ಬ್ಯಾರೇ ಅಡ್ಡೀಮಾಡಸ್ತೇವು. ಕ್ಯೇ-ಬ್ಯಾಳೀ ಅದರ್ಕೆಲ್ಲಾ ನೀವಕ ನೋಡ್ಕೊಂಡ್ಬಿಡ್ರಿ!"

"ಅನ್ನ ಖರ್ಚು ಹೌದಲ್ಲೋ!? ನಿಮ್ಮೆಲ್ಲರ ಸರ್ವಿಸ್ಗೆ ಒಂದ ಹಾಗೇ ಆಗಲಿ!" ಎಂದು ವಸಂತರಾಯರು ಆಶ್ವಾಸನವನ್ನಿತ್ತರು. ಮುಂದೆ ಕೆಲವು ವೇಳೆ ಸ್ವಾಗತಕಮೀಟಿಯ ಚೆಆರ್‌ಮನ್, ಅಧ್ಯಕ್ಷರ ಆಯ್ಕೆ ಮೊದಲಾದ ಸಭೆಯ ಸಂಬಂಧದ ವಿಷಯಗಳ ಊಹಾ-ಪೋಹವಾಗಿ, ಎಲ್ಲರೂ ತಮ್ಮ ತಮ್ಮ ಮನೆಗೆ ಹೋದರು.

೪

ರೈತ ಸಭೆಯು ಗೊತ್ತಾದ ದಿನ ಬೆಳಗಾಯಿತು. ಊರಲ್ಲಿ ಎಲ್ಲಿ ನೋಡಿದರೂ ಉತ್ಸಾಹ. ಗೊತ್ತಾದ ವೇಳೆಗೆ ಬ್ಯಾಂಡು-ಬಜಂತ್ರಿ-ಕಾಳಿ, ಹಲಿಗೆ, ಕರಡೀಮಜಲು, ಡೊಳ್ಳು ಮೊದಲಾದ ವಾದ್ಯಗಳ ರಭಸ; ನಡುನಡುವೆ 'ಮಹಾತ್ಮಾ ಗಾಂಧೀ ಮಹಾರಾಜಕೀ ಜೈ' 'ಭಾರತ ಮಾತಾಕೀ ಜೈ' 'ವಂದೇಮಾತರಂ' ಮೊದಲಾದ ರಾಷ್ಟ್ರೀಯ ಘೋಷಣೆಗಳು. ತಿರಂಗೀ ರಾಷ್ಟ್ರೀಯ ನಿಶಾನೆಯನ್ನು ಹಿಡಿದ ನೂರಾರು ಸ್ವಯಂಸೇವಕರ ನಡುವೆ ಜೂಲ, ಹರಳಿನ ಹಣೆಕಟ್ಟು, ಕೋಡಣಸು, ಗೆಜ್ಜೆ-ಗಂಟೆಗಳ ಸರಗಳಿಂದ ಸಿಂಗರಿಸಿದ ಐವತ್ತೊಂದು ಎತ್ತುಗಳನ್ನು ಹೂಡಿದ— ಗೊನೆಬಾಳೆ, ಆಡಿಕೆಯ ಸಿಂಗಾರ, ಪುಷ್ಪಮಾಲೆಗಳಿಂದ ಅಲಂಕೃತವಾದ—ಬಂಡಿಯಲ್ಲಿ ರೈತಸಭೆಯ ಅಧ್ಯಕ್ಷ ಹಾಗೂ ಉದ್ಯಾಟಕರ ಸಡಗರದ ಮೆರವಣಿಗೆಯು ಹೊರಟಿತು. ತಳಿರು-ತೋರಣ-ಧ್ವಜ-ಪತಾಕೆಗಳಿಂದ ಅಲಂಕರಿಸಿದ ಊರಬೀದಿಗಳಲ್ಲಿ ಸುತ್ತಿ ಸಭಾಮಂಟಪಕ್ಕೆ ಬಂತು. ಜಯಘೋಷ-ಕರತಾಡನಗಳ ಮಧ್ಯದಲ್ಲಿ ಸಭಾಪ್ರವೇಶವಾಯಿತು. ಜನರ ಕಣ್ಣಲ್ಲಿ ತಾವು ಮುಂದಾಳುಗಳೆಂದು ಭರಾಯಿಸಿ ಪ್ರತಿಷ್ಠೆಯನ್ನು ಪಡೆಯಬೇಕೆಂಬ ಜನರ ಗದ್ದಲವೇ—ಅಧ್ಯಕ್ಷರ ಸುತ್ತಲೂ ವೇದಿಕೆಯ ಮೇಲೆ—ನೆರೆಯಿತು. ಪ್ರೇಕ್ಷಕರಿಗಾಗಿ ಹಾಕಿದ ಮುಂದಿನ ಮಂಟಪವಂತೂ ಜನರಿಂದ ಕಿಕ್ಕಿರಿದು ತುಂಬಿತ್ತು.

ಸ್ವಾಗತಪದ್ಯವಾದ ಮೇಲೆ ಉದ್ಯಾಟಕರ ಭಾಷಣವಾಯಿತು. ಅಧ್ಯಕ್ಷರ ಪ್ರಾಸ್ತಾವಿಕ ಭಾಷಣವಾದ ಮೇಲೆ, ರೀತಿಯಂತೆ ನೇಹರು ಸರಕಾರದಲ್ಲಿ ವಿಶ್ವಾಸಪ್ರದರ್ಶನದ ಠರಾವು ಅವರಿಂದಲೇ ಮಂಡಿಸಲ್ಪಟ್ಟು, ಸರ್ವಾನುಮತದಿಂದ ಪಾಸಾಯಿತು. ಆಮೇಲೆ ಹೊಲದ ಸಾಗುವಳಿ, ರೈತರ ಋಣವಿಮೋಚನ, ಅನ್ನ ಬಟ್ಟೆಯ ನಿಯಂತ್ರಣ ಮೊದಲಾದ ಸರಕಾರದ ಧೋರಣೆಯ ವಿಷಯವಾಗಿ ಒಂದೊಂದೇ ಠರಾವುಗಳು ಸಭೆಯು ಮುಂದೆ ಬಂದುವು. ಈ ಠರಾವುಗಳ ವಾಕ್‌ಸರಣಿಯ ವಿಷಯವಾಗಿ ಅಧ್ಯಕ್ಷ-ಉದ್ಯಾಟಕರಲ್ಲಿ ತೀವ್ರ ಮತಭೇದವಾಯಿತು. ತೀಕ್ಷ್ಣವಾದ ಶಬ್ದಗಳೂ ಬಳಸಲ್ಪಟ್ಟವು. ಈ ವಾಗ್ಯುದ್ಧದಿಂದ ವೇದಿಕೆಯ ಮೇಲಿನ ವಾತಾವರಣವು ಬಿಸಿಯಾಗಿ, ಮುಂದಾಳುಗಳಲ್ಲಿಯೇ ಇಬ್ಭಣವಾಯಿತು. ಪ್ರೇಕ್ಷಕರು ದೊಡ್ಡಾಟವನ್ನು ನೋಡಲಿಕ್ಕೆ ಕುಳಿತವರಂತೆ—ಮಾತುಗಳ ಅರ್ಥ ಜಿನ್ನಾಗಿ ತಿಳಿಯದಿದ್ದರೂ—ಹಾವಭಾವಗಳಿಗೆ ಮನಸೋತು ಕೆಲವರು "ಭಲೇ" ಎಂದರೆ ಕೆಲವರು "ಛೀ ಯೇಳಲೇ, ಇದೇನಿದು!" ಎಂದು ತಮ್ಮತಮ್ಮೊಳಗೆ ಮಾತಾಡುತ್ತಿದ್ದರು.

ವೇದಿಕೆಯ ಮೇಲಿನ ವಾಗ್ಯುದ್ಧವು ಸ್ವಲ್ಪ ವಿರಾಮವಾದ ಅವಕಾಶ ನೋಡಿ, ವ್ಯಾಸಪೀಠದ ತೀರ ಹತ್ತಿರವೇ ಕುಳಿತ ಒಬ್ಬ ದಿನಗಳೆದ ರೈತನು ಎದ್ದು "ಯಪಾ, ಇದ್ರೈತರ್ಸ್ಬಾಂತ್ಮಾಡೀರಲ್ಲಕ! ರೈತರಿಗಾಗೋ ಸುಕ-ದುಕ್ಕದ ಮಾತಕ ಹೊಂಡ್ಲಿಲ್ಲ. ಸರಕಾರದವ್ರು ರೈತರ್ಹಿತಾ ಆಗುವಂತಾ ಕಾಯ್ದೇ ಮಾಡ್ಯಾರಂತ್ಹೇಳ್ತೀರಿ; ಅದರ ದಸಿಂದಕನಕ ನಿಮ್ನಿಮ್ನಿನ್ಮೊಳಗಕ ಹಾಕ್ಯಾಡೂಹಾಂಗ್ಮಾಣತಕತಿ! ಯಾವ್ಮಾದೇದಿಂದೇನ್ಹಿತಾ ಆಗೇತೀ? ಸಾಲಾ ಮುಣಗುಸೂ ಕಾದೇ ಆತು. ನ್ಯಾಲಿಗೀ ತಿರವ್ಹಾಕಾಕ್ಹತ್ತಿ ಹೊತ್ತಿಗೇ ಯಾಳ್ಯಾಕಕ ಒಂದುಡ್ಡುಟ್ಟದಾಂಗಾತು! ಕಂಟ್ರೋಲ್ಮಾದೇ ಅಂತ ಮಾಡಿದಿರೀ. ಒಕ್ಕಲ್ತನಕ್ಕೇಕಾಗೊ ಕಬ್ಬಣಾ-ಕುಡಾ ಸಿಗದಾಂಗಾತು! ದೀಪಾ ಹಚ್ಚಾಕ್ಟಿಮಣೇಯೆಣ್ಣೆ ಸಿಗಾಣಿಲ್ಲ. ಬೆಳದ ಕಾಳಿಗೆ ಹೆಚ್ಚಾರ್ಣಿ ಬರೂಹಾಂಗ್ಮಾಡೇತೀ ಸರಕಾರಾಂತ ನೀವ ಅಂತೀರಿ. ನಮಗ ಬಾಳೀಕ್ಕೇಕಾಗೂ ಸಾ ಮೂ ನಾ ಒಂದಕ್ಹತ್ತೊಕ್ಟುತೊಗೋಳೂ ಮಾತ್ಯಾರೂ ಆಡೂದಿಲ್ಲ. ಬಿಟ್ರ ನಡ್ಯಾಂಗಿಲ್ಲಾ; ತೊಗೊಂಡ್ರ ಬರಿಗೈ. ಹಳ್ಳಿಳ್ಳಿಗೆ ಕೆರೀ, ಕಾಲೇ, ಅದೇನೋ— ಇಲೆಕಟರ್ದೀಪಾ ಮಾಡತೇವಂತ ಹೇಳೀ ಹೇಳ್ತಾರ. ಒಂದಕ್ಕೂಟಕಾಣಿಲ್ಲಾ. ತಂಬಾಕಾ— ಆಡಿಕೀ ಮ್ಯಾಗ್ಸುಂಕಂಜ, ಬಡಮೂಳಗೋಳಿಗದೂ ಸಿಗದಾಂಗಾಗೇತಿ. ಚಾದಂಗಡೊಂದ್ಬಾಳಾಗ್ಯಾವನೋಡ್ರಿ! ರೈತಕ್ಕೈಯಾನ್ದಣಾನೂ ಹೋತೂ ಗುಣಾನೂಹೋತೂ ಅಂತಾಗೇತಿ!ರೈತಗ್ಹ್ಹಾಂಗ್ಮಾಡತೀವ್ನಿಂಗ್ಮಾಡತೀವಂತ್ಬಾಳ್ಬಾಳ್ಹೇಳಿದ್ರಾತಕ? ಬಾಳ್ಬಾಳ್ಹೇಳ್ಬಾಳೊತ್ನಾಗೆದ್ದು ಹೋದರಂತ!"

ಪ್ರೇಕ್ಷಕರಲ್ಲಿ ಕೆಲವರು "ಬಿಶ್ಪಾ ಹೇಳ್ಹೇಳ ಹೇಳೂಕೈಲೆ ಆಟೂ ಹೇಳ್ಬಿಡು" ಎಂದು ಕೆಲವರು ಮುದುಕನಿಗೆ ಪ್ರೋತ್ಸಾಹನೆ ಕೊಟ್ಟರೆ "ಕೂಡ್ರು ಕೂಡ್ರು" ಎಂದು ಒದರಿ ಹಿಂಜಗ್ಗುವವರೂ ಇದ್ದರು. ಮುದುಕನು ಯಾರ ಮಾತನ್ನೂ ಲಕ್ಷಕ್ಕೆ ತಾರದೆ "ಡಿಳ್ಳ್ಯಾಗ್ಯುಂತ್ಕೊಂಡವ್ನ ಹಳ್ಳ್ಯಾಗಿಂದೇನ್ತಿಳೀಬೇಕು? ಓಟಿನ ದಸಿಂದ ಈ ಸೆವಿಸೆವಿಮಾತು! ಕುರ್ಚೇಸಿಕ್ಯಾಳ್ನೀವ್ಯಾರೋ ನಾವ್ಯಾರೋ!"

"ಸುಮ್ನೀ ಕೂಡಸಲೇ ಅವನ್ನಕ" ಎಂದು ವೇದಿಕೆಯ ಮೇಲಿನ ಉದ್ಘಾಟಕರೇ ಮೊದಲಾದವರು ಕೋಪಾಟೋಪದಿಂದ ಒದರಿಕೊಳ್ಳಹತ್ತಿದರು. ಸ್ವಯಂಸೇವಕನಾಗಿ ನಿಂತವನೊಬ್ಬನು ಮುದುಕನನ್ನು ಹತ್ತಿ ಕ್ಕಿಕೂಡ್ರಿಸಲು, ಅವನ ಹೆಗಲ ಮೇಲೆ ಎರಡೂ ಕೈಗಳನ್ನಿಟ್ಟನು. ಕರ್ಮಧರ್ಮಸಂಯೋಗದಿಂದ,ಮುದುಕನ ಮನೆತನದ ಮರ್ಯಾದೆಗೆ ಕುಂದು ತರುವಂಥ ಅಕಾರ್ಯಮಾಡಿದನೆಂಬ ಕಾರಣದಿಂದ ಮನಸ್ತಾಪಕ್ಕೆ ಕಾರಣನಾಗಿದ್ದವನೇ ಆ ಸ್ವಯಂಸೇವಕನಾಗಿದ್ದನು, ಅವನ ಸಹಾಯಕ್ಕಾಗಿ ಬಂದ ಮತ್ತೊಬ್ಬ ಸ್ವಯಂಸೇವಕನೂ ಶಂಪೆ ಮಾಡಿದ ಹೊಲ ಬಿಡಿಸಿಕೊಡಬೇಕೆಂದು ಬೋರ್ಡಿನಲ್ಲಿ ಮುದುಕನ ವಿರುದ್ಧ ದಾವೇ ಮಾಡಿ ಸೋತವನಾಗಿದ್ದನು. ಮುದುಕನು ಮತ್ತಿಷ್ಟು ರೊಚ್ಚಿಗೆದ್ದು "ಯಾಕ? ಇದು ನವ್ಸುಬಾ! ರೈತ್ಸಬಾ! ನಾನೂ ರೈತಾ. ನನ್ನೂ ಮಾತಾಡಾಕ್ಹತ್ತಾಕ್ಕೆ ಕೃತಿ. ನೀವ್ಯಾರ್ಕುಂಡ್ರಂತ್ಹೇಳವ್ರು?" ಎಂದು ಅಕ್ಕಸದಿಂದ ಕೊಸರಿಕೊಳ್ಳುವಾಗ, ಕುಳಿತವರ ಮೇಲೆ ಜೋಲಿತಪ್ಪಿ ಬಿದ್ದನು. ಹತ್ತಿರ ಕುಳಿತ ಆಪ್ತಮಿತ್ರರು, ಬೇಕೆಂತಲೇ ಸ್ವಯಂಸೇವಕರು ಮುದುಕನನ್ನು ಕೆಡವಿದರೆಂದು ಅವರ ಮೇಲೆ ಏರಿಹೋದರು. ಕೂಡಲೇ ಜನಜಂಗುಳಿಯಲ್ಲಿ ಒಂದೇ ಒಂದು ಗೊಂದಲ.

ವೇದಿಕೆಯ ಮೇಲಿನ ಮುಂದಾಳುಗಳಲ್ಲಿಯೂ ಗೊಂದಲ. ಮಂಟಪದಲ್ಲಿ ಕುಳಿತ ಪ್ರೇಕ್ಷಕರಲ್ಲಿಯೂ ಒಂದೇ ಒಂದು ಗೊಂದಲ. ಇದನ್ನು ಕಂಡು ಪರಿಸ್ಥಿತಿಯು ವಿಕೋಪಕ್ಕೆ ಹೋಗುವುದೆಂದು ತಿಳಿದು, ಅಧ್ಯಕ್ಷರು ತಮ್ಮ ಅನುಯಾಯಿಗಳೊಡನೆ ಸಭಾತ್ಯಾಗ ಮಾಡಿದರು.

ವಸಂತರಾಯನೂ ಲಿಂಗಪ್ಪಸೆಟ್ಟರೂ ಸಾವಕಾರಸಿದ್ರಾಮಪ್ಪನವರೂ ಅಧ್ಯಕ್ಷರನ್ನು ಕರೆದುಕೊಂಡು ವಸಂತರಾಯರಲ್ಲಿಗೆ ಹೋದರು.

೫

ಅಧ್ಯಕ್ಷರೂ ಉದ್ಘಾಟಕರೂ ತಮ್ಮ ತಮ್ಮ ಬಿಡಾರದಲ್ಲಿ— ಊಟವಾದಮೇಲೆ—ತಮ್ಮ ಮತವನ್ನೇ ಸಮರ್ಥಿಸಿ ಮಾತಾಡುತ್ತ, ರಾತ್ರಿಯು ಬಹಳವಾದದ್ದರಿಂದ ಮಲಗಿಕೊಂಡರು.

ರೈತಸಭೆಗಾಗಿ ದುಡಿದು ದಣಿದ ಸ್ವಯಂಸೇವಕರೇ ಮೊದಲಾದವರು ಕೆಲವರು ಮಲಗಿದ್ದರು; ಕೆಲವರು ನಕಲೀಮಾಡುತ್ತ ಚೇಷ್ಟೆಯಿಂದ ವೇಳೆಗಳೆಯುತ್ತಿದ್ದರು. ಇನ್ನು ಕೆಲವರು ಆ ದಿನದ ವಿಷಯವನ್ನೇ ಚರ್ಚಿಸುತ್ತ ಕುಳಿತಿದ್ದರು. ಊರಲ್ಲಿಯೂ ಕೆಲವೊಂದು ಕಡೆಗೆ ಕಟ್ಟೆಗಳ ಮೇಲೆ ಒಬ್ಬಿಬ್ಬರೇ ಕುಳಿತು ಮಧ್ಯಾಹ್ನದ ವಿಷಯವನ್ನೇ ಚರ್ಚಿಸುತ್ತಿದ್ದರು.

ಮಧ್ಯರಾತ್ರಿಯ ಸಮಯ. ಊರಲ್ಲೆಲ್ಲ ಬಹುಮಟ್ಟಿಗೆ ಸ್ತಬ್ದವಾಗಿದ್ದರೂ ಆಡವಿಯಲ್ಲಿ "ಕುಹು ಕುಹು ಕುಹೂ" ಎಂದು ಕರ್ಣಕರ್ಕಶ ಅಮಂಗಳವಾಗಿ ಕೂಗುವ ನರಿಗಳ ಕೂಗಾಟ, ನಡುನಡುವೆ ನಾಯಿಗಳ ಬೊಗಳಾಟ. ಒಮ್ಮಿಂದೊಮ್ಮೆಲೇ ಕೇಕೆಯ ಧ್ವನಿ— ಕೇಕೆಹೊಡೆಯುವ ದೊಡ್ಡಹೂಲಿಯೇ ಎದ್ದಿತು. ಜನರು ಏನು ಪ್ರಸಂಗವಿದೆಯೋ ಎಂದು, ಹೂಲಿ ಎದ್ದಕಡೆ ಓಡಿ ಹೋಗಹತ್ತಿದರು. ಗದ್ದಲಕ್ಕೆ ಮನೆಗಳಲ್ಲಿ ಮಲಗಿರುವವರು ಎಚ್ಚತ್ತು, ಪೊಣೆಯಲ್ಲಿ ಬಂದುನೋಡುವಷ್ಟರಲ್ಲಿ, ಸಂಧ್ಯಾರಾಗ! ಅಗ್ನಿಜ್ವಾಲೆಯಿಂದುಂಟಾದ ದೊಡ್ಡ ಬೆಳಕು! ಈ ದಿಕ್ಕೆಟ್ಟ ಸಂಧ್ಯಾರಾಗದ—ಕಾರಣ, ಹೊಣೆ, ಕಾಲನ ಒಡಲಿನಿಂದ ಎಂದಾದರೂ ಹೊರಬೀಳುವುದೇ.?

ಆಶಾಕುಸುಮ

ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ

★

ಇರುಳ ತೆರೆಯ ನೆರಳಿನಲ್ಲಿ,
ಬನದ ಮರದ ಕೋಟೆಯಲ್ಲಿ,
ಎಲೆಯ ಹಸಿರುಮಡಲಿನಲ್ಲಿ,
—ಮುಂದೆ ಬರುವ ಬೆಳಗಿನೊಳೇ
ಅರಳಲಿದ್ದ—ಮೊಗ್ಗೆಯೊಂದು
ಇಂತು ಮನದಿ ನೆನೆಯಿತು:

"ವಿಶ್ವವೆಲ್ಲ ಬೆಳಗಿನೊರತೆ!
ಇಲ್ಲ ಇಲ್ಲಿ ಚಿಂತೆ ಕೊರತೆ!
ಕೆಳಗೆ ಬುವಿಯು ಮೇಲೆ ಮುಗಿಲು!
ಹಾಡುತಿಹುದು ಹಕ್ಕಿಗೊರಲು.
ಸುತ್ತಲೆತ್ತ ಮಧುರ ಮುತ್ತು!
ಸವಿವ ಸೊಬಗು ತಾಯ ತುತ್ತು!
ಜಗದ ಅಂದವೆನಿತು ಚೆಂದ?
ನನ್ನ ಮನವು ಇದಕೆ ಬಂಧ!
ಇಲ್ಲಿ ಕತ್ತಲೆಲ್ಲಿದೆ?—
ಬೆಳಕುಚಿಲುಮೆ ಚಿಮ್ಮಿದೆ!"

ಇಂತು ನಿನ್ನೆ ಪಕ್ಕಕಿದ್ದ
ಗೆಳೆಯನೊಬ್ಬ ಹೇಳುತಿದ್ದ.
ಇಳೆಯ ಕಳೆಯ ಸರಸ ಸುಡಿಯ
ಚಿತ್ರ ಬರೆದು ತೋರುತಿದ್ದ!
ಕಾಣದಿರುವ ಜಗದ ಸಿರಿಯ
ಸೊಬಗ ನೋಡೆ ಬಯಕೆಬುಗ್ಗೆ
ಪುಟಿಯುತಿಹುದು ಒಳಗೆ ನನಗೆ!
ಕಣಿವೆನೇನೊ ಇಂದು ಬೆಳಗೆ!
ಇಂತು ಮನವು ನೆನೆದಿದೆ—
ಬರುವ ಬೆಳಗ ಕಾದಿದೆ!

*　　*　　*　　*

ಇರುಳ ಕಪ್ಪು ಕರಗುತಿತ್ತು,
ಬೆಳಗು ಭರದಿ ಬರುತಲಿತ್ತು,
ಬೀಸುವೆಲರ ಮಂಚದಲ್ಲಿ
—ಜಗವ ಕಾಂಬ ಆಶೆಯಲ್ಲಿ—
ಕುಸುಮ ನಸುವೆ ಬಿರಿಯುತಿತ್ತು!
ಆದರೇನು, ಕಾಣದೇನು!
ನುಗಿಲ ಮನೆಯ ಕುಳಿರು-ಮಂಜು
ಧಾರೆಧಾರೆಯಾಗಿ ಸುರಿದು
ಕುಸುಮದೆಳೆಯ ಮೈಯಕೊರೆದು
ಅದರ ಹೃದಯ ಹಿಂಡಿತು—
ಇಂತು ಪ್ರಾಣ ಹೀರಿತು!

ಏನಿದೇನಿದೇನಿದಾಟ!
ಕ್ರೂರ ವಿಧಿಯು ಗೈದ ಮಾಟ!
ಅರುಣನೆದೆಯ ರಾಗದೊಡನೆ,
ಹಕ್ಕಿಗೊರಲ ಹಾಡಿನೊಡನೆ,
ಜಗದ ಸೊಬಗ ಕಾಣಲಿಲ್ಲ!
ತಮದ ಬಲೆಗೆ ಸಿಲುಕಲಿಲ್ಲ!
ಸರಸ-ವಿರಸ ಸವಿಯಲಿಲ್ಲ!
ಈ ಪಿಪಾಸೆ ತಣಿಯಲಿಲ್ಲ!
ಇದುವೆ ಪಾಲ ಭಾಗ್ಯವು—
ಇಂತು ಬಾಳೆ ಯೋಗ್ಯವು?

*　　*　　*　　*

ದಿನಪನೆದೆಯ ಬಿಸಿಲಿನಲ್ಲಿ,
ನಗುವ ಜಗದ ನಡುವಿನಲ್ಲಿ,
ಬನದ ಮರದ ಕಾಲಕೆಳಗೆ,
ಧೂಳಿ-ಮಣ್ಣ ಮಡಲಿನೊಳಗೆ,
ಬಯಸುತಿದ್ದ ಜಗವ ಮರೆತು,
ಇಂತು ಕುಸುಮ ಒಣಗಿತು!

ರಾಮರಾಜನ ವಿನೋದ

ವಿಜಯನಗರದ ವಿನಾಶ

(ಒಂದು ಐತಿಹಾಸಿಕ ಸಂಗತಿ) ★ ಶ್ರೀ. ಗೌರೀಶ ಕಾಯಿಕಿಣಿ, ಗೋಕರ್ಣ

ರಾಜದೂತನೊಬ್ಬನ ಮತವಿಷಯಕವಾದ ಅಂಧಶ್ರದ್ಧೆ, ಭದ್ರವಾಗಿದ್ದ ರಾಜ್ಯಸಿಂಹಾಸನವನ್ನೇ ಹೇಗೆ ತಲೆಕೆಳಗೆ ಮಾಡಿತೆಂಬುದರ ಪ್ರತ್ಯಕ್ಷಪಾಠವಿದು!

★

ವಿಜಯನಗರದ ಇತಿಹಾಸದ ಕೆಲವು ಹೊಸ ಸಾಧನಗಳನ್ನು ಮದ್ರಾಸ ವಿಶ್ವವಿದ್ಯಾಲಯವು ಪ್ರಸಿದ್ಧಮಾಡಿದೆ. ಅವುಗಳಲ್ಲಿ ವಿಜಯನಗರದ ವಿನಾಶಕ್ಕೆ ಕಾರಣವಾದ ತಾಳಿಕೋಟೆಯ ಕಾಳಗದ ತಾತ್ಕಾಲಿಕ ಕಾರಣವು ಒಳ್ಳೇ ಸೊಜಿಗವೂ ಮೋಜಿನದೂ ಆಗಿ ಬಣ್ಣಿಸಲ್ಪಟ್ಟಿದೆ. ಈ ವರ್ಣನೆಯು ಒಂದು ಕನ್ನಡ "ಬಖರಿ" ನಲ್ಲಿಯೇ ಬಂದಿದೆ. ಅದನ್ನು ಪುಣೆಯ ಸುಪ್ರಸಿದ್ಧ ಇತಿಹಾಸಜ್ಞ ಲೇಖಕರಾದ ಪ್ರೊ. ತ್ರ್ಯಂಬಕ ಶಂಕರ ಶೇಜವಲಕರ ಇವರು, ಮರಾಠೀ ವಾಚಕರಿಗಾಗಿ ಭಾಷಾಂತರಿಸಿ 'ಪೇಶವೆ' ವೆಂಬ ಮಾಸಿಕದಲ್ಲಿ ಪ್ರಕಟಿಸಿದ್ದರು. ಅದು ಕನ್ನಡ ರಸಿಕರಿಗೂ ಮನೋರಂಜಕವೂ ಉದ್ಬೋಧಕವೂ ಆಗಬಹುದೆಂದು ನಂಬಿ, ಇಲ್ಲಿ ಕನ್ನಡಿಸಿ ಕೊಡಲಾಗಿದೆ. *

ಒಮ್ಮೆ ಹೀಗೆ ಆಯಿತು: ಅಲ್ಲೀ ಆದಿಲಶಾಹನ ಒಬ್ಬ 'ಮಹಾಲದಾರ'ನು ವಿಜಯನಗರಕ್ಕೆ ಬಂದು, ತಾನು ಬಂದ ಸಮಾಚಾರವನ್ನು ರಾಜದ್ವಾರದಲ್ಲಿ ತಿಳಿಸಿದನು. ಆವನ ಬಿನ್ನಹವನ್ನು ಕೇಳಿ ರಾಜನು ದಳವಾಯಿಯನ್ನು ಕರೆಯಲು ಕಳುಹಿಸಿದನು. ಮತ್ತು ಮಹಲದಾರನನ್ನು ಜಾಸೂದೀ ಚಾವಡಿ– ಹಜಾರ ಚಾವಡಿಗಳ ಆಚೆಗೆ ಇರುವ ಆನಂದಮಹಲಿನಲ್ಲಿ ಇಳಿದುಕೊಳ್ಳಲು ಸ್ಥಳವನ್ನುಕೊಟ್ಟು, ಅವನ ಯೋಗ್ಯತೆಗೆ ತಕ್ಕಂತೆ ವೆಚ್ಚಕ್ಕೆ ದ್ರವ್ಯವನ್ನು ಕೊಡಲು ಆಜ್ಞಾಪಿಸಿದನು. ಆ ಮೇರೆಗೆ ದಳವಾಯಿಯ ಆಳು ಆನಂದಮಹಲಿನಲ್ಲಿ ಆ ಮಹಲದಾರನನ್ನು ಮುಟ್ಟಿಸಿ, ಅವನಿಗೆ ಬೇಕಾದಂತೆ ವ್ಯವಸ್ಥೆ ಹಚ್ಚಿಕೊಟ್ಟು, ಮರಳಿ ಬಂದು ದೊರೆಗೆ ವರದಿಯನ್ನೊಪ್ಪಿಸಿದನು. ಕಿ.

ಇರುಳು ಕಳೆಯಿತು. ನಸುಕು ಹರಿಯಿತು. ಮಹಲದಾರನು ವಿಶ್ರಾಂತಿ ಪಡೆದೆದ್ದು, ಕೈ-ಕಾಲು-ಮೋರೆ ತೊಳಕೊಂಡು, ತನ್ನ ಧರ್ಮಕ್ಕೆ ಅನುಸಾರವಾಗಿ ಪ್ರಾರ್ಥನೆಗೆ ಕೂತನು. ಪ್ರಾರ್ಥನೆ ಮುಗಿದ ಮೇಲೆ ಅವನಿಗೆ ಒಂದು ದೀರ್ಘವಿಚಾರವು ಹೊಳೆಯಿತು: 'ಅಲ್ಲೀ ಆದಿಲಶಾಹನಿಂದ ಪತ್ರಗಳನ್ನು ತಂದ ನನ್ನನ್ನು ರಾಮರಾಜನು ಕೂಡಲೇ ಭೆಟ್ಟಿಗೆ ಕರೆಯಿಸಿಕೊಳ್ಳಲಿಲ್ಲವೇಕೆ? ಇದರಿಂದ, ನಮ್ಮನ್ನು ಅವನು ಕೆಳತರಗತಿಯವರೆಂದು ಭಾವಿಸುತ್ತಾನೆಂದು ಸ್ಪಷ್ಟವಾಗುತ್ತದೆ. ಆದರೆ ಮಾಡುವದೇನು? ಸದ್ಯಕ್ಕೆ ಈ ವಿಷಯ ಮಾತನಾಡಲೂ ಉಪಾಯವಿಲ್ಲದಾಗಿದೆ. ನಾನು ಒಬ್ಬ ಸಾಮಾನ್ಯ ಚಾಕರಿಯಂತ. ನನ್ನದೇ ಆಪಮಾನವಾಗುವದು. ಆದ್ದರಿಂದ ಸುಮ್ಮನಿರುವದೇ ಅವಶ್ಯವು.!" ಹೀಗೆ ವಿಚಾರಿಸಿ, ಅವನು ರಾಜನ ಕಡೆಗೆ ನಿರೂಪಕಳಿಸಿದನೇನೆಂದರೆ: "ಆದಿಲಶಾಹನ ಪತ್ರಗಳನ್ನು ತೆಗೆದುಕೊಂಡು ತಮ್ಮ ದರ್ಶನಕ್ಕೆ ಬಂದರೂ ನನ್ನನ್ನು ಕಂಡು ಮಾತಾಡಿಸುವಷ್ಟು ತಮ್ಮ ವೃತ್ತಿಯು ಸುಪ್ರಸನ್ನವಿಲ್ಲ. ಪತ್ರಗಳು ಮಹತ್ತ್ವದುವಿವೆ. ಈಗಲಾದರೂ ಅವುಗಳನ್ನು ಹಾಜರುಪಡಿಸುವ ಅಪ್ಪಣೆಯಾಗಬೇಕು!"

ಆಮೇಲೆ ರಾಜಾಧಿರಾಜನು ಕರೆಕಳುಹಿಸಿ ಮಹಲದಾರನನ್ನು ತನ್ನೆದುರು ತರಿಸಿದನು; ಪತ್ರಗಳನ್ನು ಸ್ವೀಕರಿಸಿದನು. ಮಹಲದಾರನು ರಾಜನನ್ನು ಬಹುಪರಿಯಾಗಿ ಸ್ತುತಿಸಿದನು. ನವಕೋಟ ನಾರಾಯಣನೆಂದು ಹೊಗಳಿದನು. ರಾಜನು ಪತ್ರಗಳನ್ನು ತನ್ನ ಸ್ಥಾನಪತಿಯ ಕೈಯಿಂದ ಓದಿಸಿ ಕೇಳಿ ಆನಂದಪಟ್ಟನು. ಕಡೆಗೆ ಆನಂದಮಹಲಿನಲ್ಲಿ ದೊರೆಯು ಓಲಗವನ್ನು ನೆರೆಯಿಸಿದನು. ಅಲ್ಲಿ ತನ್ನ ದರಬಾರಿಗಳ ಮುತ್ತೂ ಒಂ ನಿಯೋಗಿಗಳ ನಡುವೆ ಸ್ಥಾನಾ-

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಕಾಮಶಾಸ್ತ್ರ (ವಾತ್ಸ್ಯಾಯನ ಸೂತ್ರಸಾರ) .	೧—೮—೦
ಸೌಂದರ್ಯ ವಿಚಾರ	೦—೪—೦
ಲೈಂಗಿಕ ಸಮಸ್ಯೆಗಳು (ಸಚಿತ್ರ ಭಾಗ ೧) .	೨—೦—೦
ಸುಲಭ ಚಿಕಿತ್ಸೆ	೨—೦—೦
ಬಾಳಿನ ಗುಟ್ಟು	೧—೧೨—೦

ಹಣ ಮುಂಗಡ ಕಳಿಸಬೇಕು.

ಶ್ರೀಕಾಂತ ಮತ್ತು ಕಂಪನಿ, ಧಾರವಾಡ

* ಶ್ರೀಯುತ ಟಿ. ಟಿ. ಶರ್ಮರು ಪ್ರಕಟಿಸಿದ 'ರಾಮರಾಯನ ಬಖ್ಖರ' ಎಂಬ ಪುಟ್ಟ ಪ್ರಕಟನೆಯೊಂದರಲ್ಲಿ ಈ ಸಂಗತಿ— ಬಹಳ ವಿಸ್ತಾರವಾಗಿ ಹಿಂದೆಯೆ— ಪ್ರಕಟವಾಗಿದೆ. —ಸಂ. ಜ.

ಮನೋಹರ ಗ್ರಂಥಮಾಲೆ, ಧಾರವಾಡ.

೧೫ ವರ್ಷಗಳಿಂದಲೂ ಹೊರಡುತ್ತಲಿದ್ದು, ಈಗಾಗಲೇ ೯೦ ಕ್ಕಿಂತ ಹೆಚ್ಚಿಗೆ ಕಥೆ-ಕಾದಂಬರಿ-ನಾಟಕಗಳನ್ನು ಬೆಳಕಿಗೆ ತಂದಿದೆ.

ಶ್ರೀ. ರಂ. ಶ್ರೀ. ಮುಗುಳಿಯವರ 'ಅನ್ನ' (ಸಾ. ಕಾದಂಬರಿ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರ 'ಪರಿವರ್ತನ' (ಸಾ. ನಾಟಕ)
ಇದೀಗ ಪ್ರಕಟವಾಗಿವೆ. ವಾ. ಚಂ. ಸ್ಥಳಿಕರಿಗೆ ೫-೮-೦
ಪರಸ್ಥಳದವರಿಗೆ ೬-೮-೦.

ಪನ್ನನಾದನು. ಆಗ ಅಲ್ಲಿ ತೆಲುಗು ಸೀಮೆಯ ಡೊಂಬರು ಬಂದರು. ಅವರ ಆಟಗಳು ರಾಜಾಂಗಣದಲ್ಲಿ ಆರಂಭವಾದವು. ಈ ಆಟ-ಪಾಟಗಳು ಒಳ್ಳೇ ನಾಲ್ಕೈದು ಘಂಟೆ ಕಾಲ ನಡೆದುವು. ಆಟ ಮುಗಿದ ಮೇಲೆ ದೊರೆಯು ಡೊಂಬರಿಗೆ ವಿಳ್ಯಕೊಟ್ಟು ಇನಾಮುಗಳನ್ನು ಹಂಚಿದನು. ಆ ಮೇಲೆ ಆ ಡೊಂಬರು ರಾಮರಾಜನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ತಮಗೆ ಊಟಕ್ಕಾಗಿ ಹತ್ತು ಹಂದಿಗಳನ್ನು ಕೊಡಿಸಬೇಕೆಂದು ಅರಿಕೆಮಾಡಿಕೊಂಡರು. ದೊರೆಯು ಕೂಡಲೇ ಹಂದಿಗಳನ್ನು ತರಿಸಿ ಇವರಿಗೆ ಕೊಡಿಸಿದನು. ಡೊಂಬರು ಹಿಗ್ಗಿ ಹೊರಟು ಹೋದರು.

ಇದೆಲ್ಲ ಸಂಗತಿ ಆದಿಲಶಾಹನ ಮಹಲದಾರನ ಇದುರಿಗೆ ನಡೆಯಿತು. ಹಂದಿಗಳನ್ನು ತರಿಸಿದೊಡನೆಯೇ ಅವನು ತನ್ನ ಮೋರೆಯನ್ನು ಕೈಗಳಿಂದ ಮುಚ್ಚಿಕೊಂಡನು. "ನಾನು ಮುಸಲ್ಮಾನನು, ನನ್ನ ಮುಂದೆ ಈ ಭ್ರಷ್ಟ ಪಶುಗಳು ಬರಕೂಡದು. ಅವುಗಳನ್ನು ತಂದರೂ ನಾನು ನೋಡಕೂಡದು!" ಎಂದು ಉದ್ಗರಿಸಿದನು! ಆಗ ರಾಮರಾಜನು, "ನೀವು ಮುಸಲ್ಮಾನರು ಕೋಳಿಗಳನ್ನು ತಿನ್ನುವಿರಿ. ಕೋಳಿತಿನ್ನುವವನೂ (ಹಂದಿಯಂತೆ) ಸಹಜವಾಗಿ ಹೊಲಸು ಪ್ರಾಣಿಯೇ ಆಗುವನು!"

ಇದಕ್ಕೆ ಮಹಲದಾರನು ಉದ್ಧಟ ಉತ್ತರವನ್ನು ಕೊಟ್ಟನು: "ನೀವು ಹಿಂದುಗಳು ಭ್ರಷ್ಟ ಪಶುಗಳನ್ನು ತಿನ್ನುವಿರಿ. ಆದ್ದರಿಂದಲೇ ನಿಮ್ಮ ಜಾತಿಯು ಹೀನ!"

ಈ ಶಬ್ದಗಳನ್ನು ಕೇಳಿ ರಾಮರಾಜನು ಉರಿದೆದ್ದನು. ಅವನು ನಗರದಲ್ಲಿಯ ಎಲ್ಲ ಹಂದಿಗಳನ್ನು ಒತ್ತಟ್ಟಿಗೆ ತರಿಯಿಸಿದನು; ಒಂದು ದೊಡ್ಡ ದಡ್ಡಿಯಲ್ಲಿ ಕಟ್ಟಿ ಇರಿಸಿದನು. ಅವುಗಳ ಇದುರು ಸೆಜ್ಜೆ, ಜೋಳಗಳನ್ನು ರಾಶಿರಾಶಿಯಾಗಿ ತಿನ್ನಲು ಹಾಕಿಸಿದನು. ಆಮೇಲೆ ಅರಸನ ಅಪ್ಪಣೆಯಂತೆ ಆ ದಡ್ಡಿಗೆ ಬೀಗಮುದ್ರೆ ಹಾಕಿಡಲಾಯಿತು.

ಮರುದಿನ ಮುಂಜಾನೆ ಆ ಮಹಲದಾರನ ಮುಂದೆಯೇ ದಡ್ಡಿಯ ಬೀಗ ತೆಗೆದು ಬಾಗಿಲು ತೆರೆಯಲಾಯಿತು. ಒಳಗೆ ನೂರಾರು ಕೋಳಿಗಳನ್ನು ಬಿಡಲಾಯಿತು. ಒಳಗೆ ರಾತ್ರಿಯೆಲ್ಲ ಹಂದಿಗಳು ಹೊಟ್ಟೆ ಬಿಗಿಯುವಷ್ಟು ಕಾಳು ತಿಂದು ಕೋಣೆಯತುಂಬ ಹೊಲ ಮಾಡಿಟ್ಟಿದ್ದುವು. ಒಳನುಗ್ಗಿದ ಕೋಳಿಗಳು ಆ ಮಲದೊಳಗಿ ಕಾಳು ಕಡಿಗಳನ್ನು ಹೆಕ್ಕಿ ಹೆಕ್ಕಿ ಹಿರಿಹಿಗ್ಗಿನಿಂದ ತಿನ್ನಲಾರಂಭಿದುವು. ಆಗ ದೊರೆಯು ಮಹಲದಾರನಿಗೆ ಇಂತೆಂದನು: "ಹಂಗಳು ಹೊಲಸು ಪ್ರಾಣಿಗಳನ್ನು ತಿನ್ನುವರೆಂದು ನಿನ್ನೆ ನೀ ಅಂದಿದ್ದಿ; ಇಲ್ಲಿ ನೋಡು, ಈ ಕೋಳಿಗಳು ಹಂದಿಯ ಹೊಲಸಿನ ಕೂಡ ಕಾಳುಗಳನ್ನು ಹೇಗೆ ಹೆಕ್ಕಿ ತಿನ್ನುವವೆಂತ—ಮತ್ತು ಈ ಹೇಳು, ಹೀಗೆ ಹೊಲಸಿನೊಳಗಿನ ಕಾಳು ಹೆಕ್ಕುವ ಕೋಳಿಗಳನ್ನು ಬಾಯ ಚೆಪ್ಪರಿಸುತ್ತ ತಿನ್ನುವ ಆ ನಿಮ್ಮ ಜಾತಿಯು ಎಷ್ಟು ಉಚ್ಚವಾದದ್ದು?"

ಈ ಪ್ರಶ್ನೆಯನ್ನು ಕೇಳಿ ಮಹಲದಾರನು ಕಂಗೆಟ್ಟನು. ಕೋಗೊಂಡು ಅಲ್ಲಿಂದ ಹೋಗಲೆದ್ದನು. ಆದರೆ ದೊರೆಯು ಅವನನ್ನು ಮರಳಿ ಕರೆಯಿಸಿದನು. ಮನ್ನಣೆಯಿಂದ ನಡೆಸಿ ಅವನ ಮನಸ್ಸನ್ನು ಸಮಾಧಾನ ಪಡಿಸಲು ಯತ್ನಿಸಿದನು. ಕೊನೆಗೆ ವಿಳ್ಯವನ್ನು ಆನೇಕ ಉಡುಗೊರೆಗಳನ್ನೂ ಕೊಟ್ಟು ಅವನಿಗೆ ಹೋಗಲು ಅಪ್ಪಣೆ ಕೊಟ್ಟನು.

ಹಾಗೆಯೇ ಮಹಲದಾರನು ಮರಳಿ ತನ್ನ ಸುಲ್ತಾನನ ಹತ್ತಿ ಬಂದನು. ಆದಿಲಶಾಹನ ಇದುರಿಗೆ ಬಂದೊಡನೆಯೇ ತಲೆರುಮಾಲನ್ನು ಬಿಚ್ಚಿ ಕೊರಳಿಗೆ ಸುತ್ತಿಕೊಂಡು, ಒಳ್ಳೇ ರೊಚ್ಚಿನಿಂದ ಅಂದನು: "ಬಾದಶಹಾ, ನಿಮಗೆ ಶಾಂತಿ ಇರಲಿ. ನಿಮ್ಮ ರಾಜ್ಯ ಕೊನೆಗಾಲ ಬಂದಂತೆ ತೋರುತ್ತದೆ. ಮುಸಲ್ಮಾನರ ಆಚಾರಗಳನ್ನು ಇನ್ನು ಯಾರೂ ಮನ್ನಿಸುವದಿಲ್ಲ. ಕಾಫಿರರು ಧಿಟ್ಟರಾಗಿದ್ದಾರೆ. ಮುಸಲ್ಮಾನರ ಮಾನಾಪಮಾನದ ಪರಿವೆಯೆ ಅವರಿಗೆ ಇಲ್ಲವಾಗಿದೆ. ಮುಸಲ್ಮಾನರ ಮಾನ ಉಳಿಯಬೇಕೆಂ ಇಚ್ಛೆ ಇದ್ದರೆ, ಹಜರತರು ಮೊದಲು ಆ ರಾಜನ ನಾಶಮಾಡಬೇಕು ಕರ್ನಾಟಕದ ರಾಜ್ಯದಲ್ಲಿ ಎಲ್ಲೆಡೆಯಲ್ಲಿ ನಮ್ಮ ಲಷ್ಕರೀ ತಾಣಗಳನ್ನು ಇಡಬೇಕು. ಇಲ್ಲವಾವರೆ ನಮ್ಮ ಮುಸಲ್ಮಾನರ ಪ್ರತಿಷ್ಠೆಯ ಲೇಶವಾದರೂ ಉಳಿಯಲಾರದು. ಆದ್ದರಿಂದ ಖಾವಂದರೆ ಕೂಡಲೇ ಕರ್ನಾಟಕದ ಮೇಲೆ ಕೂಚು ಮಾಡಬೇಕು!"

ಇದಕ್ಕೆ ಬಾದಶಹನು ಉತ್ತರವಿತ್ತನು: "ನನಗೆ ರಾಮರಾಯ ದೊಶೆಯ ಫರ್ಜಂದ್ (ಪುತ್ರ) ನೆಂದುಕೊಳ್ಳುವ ಮಾನ ದೊರೆತಿ ಆದ್ದರಿಂದ ಆವನನ್ನು ನೋಯಿಸುವದು ನನಗೆ ಶಕ್ಯವಿಲ್ಲ. ರಾಮರಾಜರು ನನಗೆ ಹಿರಿಯರು. ಅವರ ವಿರುದ್ಧ ಏಳುವದು ನನಗೆ ಯೋಗ್ಯವಲ್ಲ."

ಮಹಾಲದಾರನು ಈ ಉತ್ತರವನ್ನು ಕೇಳಿ, ಬಾದಶಹನ ಒಪ್ಪಿಗೆಯನ್ನು ಪಡೆಯುವೇ ದರಬಾರದಿಂದ ಹೊರಟುಹೋದನು. ಬೆ ಮೂರು ಬಾದಶಹರ ಭೆಟ್ಟಿ ತೆಗೆದುಕೊಂಡನು. ಈ ಮೂವ ಬಾದಶಾಹರೆಂದರೆ (೧) ಜಹಾಲನಾಪುರದ ಅಖುಬಗರ್ ಜುಲಾ ಬಾದಶಾಹ (೨) ನಿಜಾಮಶಾಹ ಬೈರೀ ಬಾದಶಾಹ ಮತ್ತ (೩) ಸವಾಯಿ ಜಗದ್ಗುಂಪ ಸುಗುಣ ಕನ್ನಡ ಜಾಣ ಬಾದಶಾ

ಮೂವರೂ ಆಗ ಜಹಾಲಾನಪುರದಲ್ಲಿ ವಸಂತಮಹಲಿನೆಲ್ಲಿ ಒಲಗ ಕಟ್ಟಿಕೊಂಡು ಕುಣಿತ ನೋಡುತ್ತ ಕೂತಿದ್ದರು. ಅವರ ಮುತ್ತಲೂ ೫೬ ದೇಶಗಳ ಅರಸರೂ ೭೨ ನಿಯೋಗಿಗಳೂ ೧೮ ಭಂಡಾರಖಾನೆಯವರೂ ೧೨ ಮಹಾಲುಗಳ ಅಧಿಕಾರಿಗಳೂ ಅನೇಕ ವಿದ್ವಾನರೂ ಕೂತಿದ್ದರು. ಸೂಳೆಯರು ಕುಣಿಯುತ್ತಿದ್ದರು; ಹಾಡುಗಾರರು ಹಾಡುತ್ತಿದ್ದರು; ವೈಣಿಕರು ವೀಣೆಯನ್ನು ನುಡಿಸುತ್ತಿದ್ದರು. ಮಹಾಲದಾರನು ಮೂರೂ ಬಾದಶಾಹರಿಗೆ ಮುಜುರೆ ಮಾಡಿ, ತನ್ನ ವಿಜಯನಗರದ ಅನುಭವವನ್ನು ನಿವೇದಿಸಿದನು.

ಅವನ ಮಾತು ಕೇಳಿಕೊಂಡು ಅವರು ಅಂದರು: "ನೀನು ಅಲ್ಲೀ ಆದಿಲಶಾಹನ ಸೇವಕನು; ಅವನ ಕಡೆಗೆ ದೂರು ಒಯ್ಯುವ ಹೊದಲು ನಮ್ಮ ಹತ್ತಿರ ಹೇಗೆ ಬಂದೆಯೊ? ಇದರಿಂದ ನೀನು ನಿನ್ನ ಒಡೆಯನ ಅನುಮತಿಯನ್ನು ಪಡೆಯದೆ ಬಂದಂತೆ ಕಾಣುವದು." "ನಾನು ಇದೆಲ್ಲ ಸಮಾಚಾರವನ್ನು ಆದಿಲಶಾಹನ ಕಿವಿಗೆ ಹಾಕಿದ್ದೆನು. ಆದರೆ ತಾನು ರಾಮರಾಜನ ಫರ್ಜಂದ್ ಆದ್ದೇನೆಂದು ಹೇಳಿ, ಆ ರಾಜನ ವಿರುದ್ಧ ಕೈ ಎತ್ತುವದಿಲ್ಲವೆಂದು ಅವನು ಅಂದನು. ಅಂತೆಯೇ ನಿಮ್ಮ ಕಡೆಗೆ ಬಂದಿದ್ದೇನೆ" ಎಂದು ಮಹಾಲದಾರನು ಅರಿಕೆಮಾಡಿಕೊಂಡನು.

ಎಲ್ಲ ವೃತ್ತಾಂತ ಕೇಳಿ ಬಾದಶಹರು ವಿಚಾರಮಗ್ನರಾದರು, ಆದ ಸಂಗತಿಯ ಬಗ್ಗೆ ಕೋಪಗೊಂಡರು. ರಾಮರಾಜನ ಮೇಲೆ ದಂಡಯಾತ್ರೆ ಹೊರಡುವ ನಿಶ್ಚಯಮಾಡಿದರು. ಅಷ್ಟಪ್ರಧಾನ, ಸೇನಾಪತಿಗಳನ್ನೆಲ್ಲ ಕರೆದು, ಯುದ್ಧಸಿದ್ಧತೆಯ ಆಜ್ಞೆ ಒಟ್ಟರು. ಪಟ್ಟಣದ ಹೊರಗೆ ಬೀಡು ಬಿಟ್ಟರು. ರಾಮರಾಜನ ಹೇಜೀಬ (ರಾಯಭಾರಿ?) ತಿಮ್ಮಾಜಿ ಭೀಮಾಜಿಯು ಆ ದರಬಾರದಲ್ಲಿ ಇದ್ದನು. ಅವನು ಈ ವೃತ್ತಾಂತವನ್ನು ವಿಜಯನಗರಕ್ಕೆ ತನ್ನ ದೊರೆಗೆ ಅರುಹಿದನು. ಅದನ್ನು ಕೇಳಿ ರಾಮರಾಜನು ನಿಜಯುದಶಮಿಯ ಮುಹೂರ್ತಕ್ಕೆ ದರಬಾರ ನೆರೆಯಿಸಿ, ಯುದ್ಧದ ಸಿದ್ಧತೆಗಾಗಿ ಆಜ್ಞೆ ಹೊರಡಿಸಿದನು.

ಹೀಗಿದೆ ಬಖರಿನಲ್ಲಿ ಬಂದ ಹೊಸ ಕತೆ. ರಾಮರಾಜನ ವಿನೋದಬುದ್ಧಿ, ಜಾತ್ಯತೀತ ವೃತ್ತಿ ಇಲ್ಲಿ ವ್ಯಕ್ತವಾಗಿದೆ. ಕತೆಯೊಳಗಿನ ಘಟನೆಗಳು ಸಟೆ ಇರಲಿ ದಿಟವಿರಲಿ, ಸೋಜಿಗವಾಗಿವೆ. 'ಪೆರತಳ್' ಎಂಬ ಚೆಲುವೆಯ ಬೇಟಕ್ಕಾಗಿ ಘೋರಯುದ್ಧದ ಬೇಟೆ ಆಡಿ ವಿಜಯನಗರದ ವಿನಾಶಕ್ಕೆ ಮುಳುವಾದ ರಾಮರಾಯನ ಪ್ರಣಯದ ಪ್ರಳಯದ ಕತೆ ಪ್ರಸಿದ್ಧವೇ ಇದೆ. ಅದಕ್ಕಿಂತ ಈ ವೃತ್ತಾಂತವು ಹೆಚ್ಚು ಸಾತ್ತ್ವಿಕವು; ಅಷ್ಟೇ ಸ್ವಾರಸ್ಯದ್ದು.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇಸಿಕೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಕಿಕ್ಕಯಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಅಜೀರ್ಣ, ಕಂತಿ, ಮೈಕೈನೋವು, ಹುಳುನೋವು, ಮಕ್ಕಳ ಲಾಸ ವಿಕಾರ ಇತ್ಯಾದಿ ಅಷ್ಟೇ ಚುಟುಕು ದೊಡ್ಡ ಬೇಸಿಕೆಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ಖಿಶ್ಚಯವಾಗಿ ಗುಣಪಡಿಸುತ್ತದೆ. ಕಾಲರಾ ಮತ್ತು ಅಮಾಂಶಯಕಂತ ಭಯಾನಕವಾದ ಹೊಂಬು ನೋಗಗಳ ಮೇಲೆ ಜಾದೂವಂತೆ ಇದರ ಅಭಿಪೋಗವಾಗುತ್ತದೆ. ಪಾತ್ಖರಿಲ್ಲದಾಗ ದೂರವಾಗಲೂ ಇದನ ಉಪಯೋಗವಾಗುವದರಿಂದ ಇದ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಮತ್ತು ಪ್ರವಾಸದಲ್ಲಿ ಕಟ್ಟಿರಲು ಇಟ್ಟುಕೊಳ್ಳುವದು (ಉತ್ಕೃಷ್ಟ ಸುಂಗಾಗ್ರತೆಯ ಔಷಧವಾಗಿದೆ) ದೊಡಮೊತ್ತದ ಲಕ್ಷಣವಾಗಿದೆ. ತಿಮ್ಮರ್ಧದಿಯೂ (ವಿಷದ ವ್ಯಾಧಿಗಳಲ್ಲಿಯೂ) ಹಸ್ಯಗಳಲ್ಲಿ ಅಂಗವಿಕಾರದಲ್ಲಿಯೂ ದೋಸಿಯುತ್ತದೆ.

ಬಿಡಿ ಬಾಟ್ಲಿ ಜವೇರಿಯನ್ ಮಿಶ್ರಣ
ಪ್ರಿನ್ಸೆಸ್ ಸರ್ಕಲ್, ಮುಂಬಾಯಿ ೩

ಮಕ್ಕಳು ಶಕ್ತಿವಂತರು ತೇಜಸ್ವಿಗಳು ಆಗಬೇಕಿದ್ದಲ್ಲಿ ಬಾಯೋಟೊನಾ ಅವಶ್ಯ ಕೊಡಿರಿ

ಫಾಸ್ಫೊರಾ
ಏಕನೇವ ಟಾನಿಕ್



"ಯಾವುದೇ ಕಾರಣದಿಂದ ಉಂಟಾದ ದೌರ್ಬಲ್ಯವನ್ನು ಕೋಗದ ಸರಿಯಾದ ನಿದಾನದಿಂದಲೆ ಗುಣಪಡಿಸಬಹುದು.

ಫಾಸ್ಫೊರಾದಿಂದ ಈ ಅನುಭವ ಬರುವುದು.

ರಾಯ್, ಮತ್ತು ಕಂ.
ಮುಂಬಯಿ

ಕಾರ್ಯಮೂರ್ತಿ ಕಿಲ್ರೋಸ್ಕರ (ಶ್ರೀ ಶಂಕರರಾಯರು)

ಶ್ರೀ. ಜಾ. ಕೃ. ಗಲಗಲಿ, ಕಿಲ್ರೋಸ್ಕರವಾಡಿ

★

ಅನುಕೂಲ ಪರಿಸ್ಥಿತಿಯಿದ್ದರೆ ಶ್ರೀ. ಕಿಲ್ರೋಸ್ಕರ ಶಂಕರರಾಯರ ಕಾರ್ಯಕ್ಷೇತ್ರ ಕರ್ನಾಟಕವೇ ಆಗುತ್ತಿತ್ತು. ಅವರ ಕಾರ್ಯಶಕ್ತಿಯ ಫಲ ನಮ್ಮ ನಾಡಿಗೆ ದೊರೆಯುತ್ತಿತ್ತು. ಆದರೆ ಅದು 'ರೆ' ರಾಜ್ಯದ ಮಾತಾಯಿತು.

★

ಕಳೆದ ಮಾರ್ಚ್ ತಿಂಗಳಲ್ಲಿ, ಹುಬ್ಬಳ್ಳಿಯಲ್ಲಿ ಸೇರಿದ ಕರ್ನಾಟಕ ಔದ್ಯೋಗಿಕ ಪ್ರದರ್ಶನದ ಕಾಲದಲ್ಲಿ, ಅಧ್ಯಕ್ಷರೆಂದು ಶ್ರೀಯುತ ಕಿಲ್ರೋಸ್ಕರ ಶಂಕರರಾಯರು, ಕರ್ನಾಟಕ ಪ್ರಾಂತದ ಔದ್ಯೋಗೀಕರಣವನ್ನು ಕುರಿತು ಮನನೀಯ ಭಾಷಣವನ್ನಿತ್ತರು.



ಕಿಲ್ರೋಸ್ಕರ ಶಂಕರರಾಯರು

ಕಿಲ್ರೋಸ್ಕರ ಕಾರಖಾನೆಯ ಮುಖ್ಯ ಸಂಚಾಲಕರೂ, ಮುಂಬಯಿ ಚೇಂಬರ್ ಆಫ್ ಕಾಮರ್ಸ್ ಹಾಗು ಡೆಕ್ಕನ್ ಮ್ಯಾನ್ಯುಫ್ಯಾಕ್ಚರರ್ಸ್ ಆ್ಯಂಡ್ ಎಂಪ್ಲಾಯರ್ಸ್ ಅಸೋಸಿಯೇಶನ್ನಿನ ಅಧ್ಯಕ್ಷರೂ ಎಂದು ಕಾರ್ಯಮಾಡುತ್ತಿರುವ ಅವರು, ಔದ್ಯೋಗಿಕ ಪ್ರಶ್ನೆಗಳ ಬಗೆಗೆ ಅಧಿಕಾರಯುಕ್ತವಾಗಿ ಅಭಿಪ್ರಾಯ ಕೊಡಬಲ್ಲರು. ಈಗ ೩೫ ವರ್ಷಗಳಿಂದಲೂ ಅವರು ಈ ಕ್ಷೇತ್ರದಲ್ಲಿ ದುಡಿಯುತ್ತಿದ್ದು, ಅವರ ಅನುಭವವು ವಿಪುಲವೂ ಕಾರ್ಯಕ್ಷವೂ ಆಗಿದೆ. ವ್ಯಾಪಾರಿ ಪತ್ರವ್ಯವಹಾರ, ಜಾಹೀರಾತು, ಮಾರಾಟ ಇವುಗಳ ಸಂಘಟನೆಯಲ್ಲಿ ಅವರು ಪಡೆದ ಯಶಸ್ಸು ಅಸಾಧಾರಣವಾಗಿದೆ. ಇದಕ್ಕಾಗಿಯೇ ಅವರು ವಿಲಾಯತಿಗೆ ಹೋಗಿ, ತಾವು ಅಲ್ಲಿ ಸಂಪಾದಿಸಿದ ಜ್ಞಾನವನ್ನು ಕಿಲ್ರೋಸ್ಕರ ಕಾರಖಾನೆಯ ಅಭಿವೃದ್ಧಿಯಲ್ಲಿ ಕಾರ್ಯರೂಪಕ್ಕೆ ತಂದರು. ತಮ್ಮ ಸರಕನ್ನು ಪರರು ಕೊಳ್ಳುವಂತೆ ಮಾಡುವುದು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಮಾತಷ್ಟೇ ಅಲ್ಲ, ಮಾನಸಶಾಸ್ತ್ರಕ್ಕೂ ಸಂಬಂಧಿಸಿದುದು; ಮಾರಾಟದ ಕಲೆಯಲ್ಲಿ ಇದಕ್ಕಿರುವಷ್ಟು ಮಹತ್ತ್ವ ಮಿಕ್ಕ ಯಾವ ಬಾಬಿಗೂ ಇಲ್ಲ—ಎಂಬುದು ಶಂಕರರಾಯರ ಸಿದ್ಧಾಂತ. **'ಮಾರಾಟದ ದ್ವಾದಶ ಸೂತ್ರಗಳು'** ಮತ್ತು **'ವ್ಯಾಪಾರದ ವ್ಯಾಕರಣ'** ಎಂಬೆರಡು ಲೇಖನಮಾಲೆಗಳನ್ನು 'ಕಿಲ್ರೋಸ್ಕರ ಖಬರ್'ದಲ್ಲಿ ಕ್ರಮಶಃ ಬರೆದು, ಅವನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದರು. ಈ ಗ್ರಂಥಗಳಲ್ಲಿಯೂ ಇವರು ಇದೇ ಶಕ್ತ್ಯಂಗಳನ್ನು ಒತ್ತಿಹೇಳಿದ್ದಾರೆ. ಇವರು ಒಳ್ಳೇ ಮಾನಸಶಾಸ್ತ್ರಜ್ಞರು— ಎಂದು ಜನ ಹೇಳುತ್ತಿರುವುದು ಸುಳ್ಳಲ್ಲ. ತಮ್ಮ ವ್ಯವಸಾಯದಲ್ಲಿ ಈ ತಮ್ಮ ಜ್ಞಾನವನ್ನು ಅವರು ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ. ಮೊದಲ ನೋಟಕ್ಕೇ ಕಣ್ಣಲ್ಲಿ ತುಂಬುವಂತಹದು ಅವರ ಬೀಸಾದ ನಿಲುವುಳ್ಳ ಶರೀರ! ಎರಡನೆಯದು ಅವರ ವಾಣಿಯಲ್ಲಿಯ ವಿಲಕ್ಷಣ ಮಾಧುರ್ಯ. ಅವರು ಯಾವ ವಿಷಯವನ್ನೇ ಎತ್ತಿ ಮಾತನಾಡಲಿ; ಕೇಳುವವರು ಕಿವಿಸೋತು, ಮನಸೋತು ಕೇಳುವಂತೆ ಮಾಡುವ ಶಕ್ತಿ ಅವರಿಗೆ ದೈವದತ್ತವಾಗಿದೆ. ಆದರಿಂದ ಅವರನ್ನು ವಿರೋಧಿಸಲು ಬಂದವರು ನಗುಮುಖದಿಂದ, ಪ್ರಸನ್ನ ಚಿತ್ತರಾಗಿ ಹಿಂದಿರುಗಿದುದನ್ನು ಅನೇಕ ಸಲ ಕಂಡಿದ್ದೇನೆ

ನಾನು ಅವರ ಕೈಯಲ್ಲಿ ಕೆಲಸಕ್ಕೆ ಸೇರಿದ ಕೆಲ ದಿನಗಳಲ್ಲಿಯೇ, ನನ್ನ ಗುರುತಿನ ವಿಮಾ ಏಜಂಟರೊಬ್ಬರು ಶಂಕರರಾಯರನ್ನು ಕಾಣಲು ನನ್ನ ಕಡೆಗೆ ಬಂದರು. ಅವರನ್ನು ಕರೆದುಕೊಂಡು ನಾನು ಶಂಕರರಾಯರ ಮನೆಗೆ ಹೋದೆ. ಮಾತಿಗೆ ಮಾತು ಹೊರಟು, ವಿಲಾಯತಿಯಲ್ಲಿ ಯಾವುದೇ ಉದ್ಯಮದ ಪ್ರಚಾರ—ಪ್ರಸಾರ— ಕ್ಯಾನ್‌ವಾಸಿಂಗ್ ಇವುಗಳ ಬಗೆಗೆ ಹೇಗೆ ಕ್ರಮಬದ್ಧವಾದ ಶಿಕ್ಷಣವು ಕೊಡಲ್ಪಡುವುದೆಂಬುದನ್ನು ಅವರು ಕೆಲವೇ ಮಾತಿನಲ್ಲಿ ಚೆನ್ನಾಗಿ ತಿಳಿಹೇಳಿದರು. ಒಂದು ಕ್ಯಾಟಲಾಗನ್ನು ಗಿರಾಕಿಯ ಕೈಯಲ್ಲಿರಿಸುವಾಗಲೂ, ಅದನ್ನು ಜೊಪ್ಪನೆ ಅವರೆದುರು ಎಸೆಯದೆ, ಅದೊಂದು ತಮ್ಮ ಮೌಲಿಕವಾದ ಸೊತ್ತು ಎಂಬ ಭಾವನೆಯಿಂದ, ತಮ್ಮ ಸುಂದರವಾದ ಬ್ಯಾಗಿನೊಳಗಿಂದ ನಾಜೂಕಾಗಿ ಹೊರಕ್ಕೆ ತೆಗೆದು, ಅತ್ಯಂತ ಸೌಜನ್ಯದಿಂದ ಅವರೆದುರು ಇರಿಸಬೇಕೆಂಬುದನ್ನೂ ಮತ್ತು ಮಾತನಾಡುವಾಗ ಧ್ವನಿಯಲ್ಲಿ ಯಾಚನೆಯ ದೈನ್ಯತೆಯನ್ನು ತೋರದೆ ಉಚಿತವಾದ ಅನುನಯ-

ದೊಡನೆ ಹೇಗೆ ಗಿರಾಕಿಯನ್ನು ಒಲಿಸಿಕೊಳ್ಳಬೇಕೆಂಬುದನ್ನೂ ಅವರು ಪ್ರತ್ಯಕ್ಷವಾಗಿಯೇ ತೋರಿಸಿಕೊಟ್ಟರು. ನನ್ನ ಎಜಂಟ್ ಮಿತ್ರನಿಗೆ ಇದೆಲ್ಲ ಹೊಸತೇ ಎನಿಸಿತು.

ತಮ್ಮ ಕಾರಖಾನೆಯ ಸರಕನ್ನು ಪ್ರಸಾರಗೊಳಿಸಲು, ಬಲವಾದ ಸಾಧನವೊಂದು ಬೇಕೆಂಬ ಉದ್ದೇಶದಿಂದ ಅವರು '**ಕಿರ್ಲೋಸ್ಕರ ಖಬರ್**' ಎಂಬ ವೈಶಿಷ್ಟ್ಯಪೂರ್ಣವಾದ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಆದರೆ ತಮ್ಮ ಸರಕಿನ ಜಾಹೀರಾತು, ಪ್ರಸಾರ ಇವುಗಳಿಗಿಂತಲೂ ಮಹತ್ತ್ವದ ಕಾರ್ಯವು ಈ ಪತ್ರಿಕೆಯ ಮುಖಾಂತರ ನಡೆಯಿತು. ಜನರಲ್ಲಿ ಉದ್ಯೋಗ–ಉತ್ಸಾಹ–ಆತ್ಮೋನ್ನತಿಗಳ ಬಗ್ಗೆ ಪ್ರೀತಿಯನ್ನು ಹುಟ್ಟಿಸುವುದೇ ಇದರ ಧ್ಯೇಯವಾಗಿದ್ದಿತು. ಇದರ ಜೊತೆಗೆ, '**ಉತ್ಕರ್ಷ ಮಂಡಲ**' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ವ್ಯವಸಾಯದಲ್ಲಿ ಉತ್ಕರ್ಷವನ್ನು ಹೊಂದಬಯಸುವ ಸದಸ್ಯರಿಗೆ 'ಉತ್ಕರ್ಷಪಾತ್ರ'ವನ್ನು ಕೊಡುವ ಅಭಿನವಯೋಜನೆಯೂ ಅವರದೇ. '**ಕಿರ್ಲೋಸ್ಕರ ವಾರ್ತೆ**' ಎಂಬ ಹೆಸರಿನಿಂದ 'ಕಿರ್ಲೋಸ್ಕರ ಖಬರ್'ದ ಕನ್ನಡ ಆವೃತ್ತಿಯೊಂದು ಪ್ರಾರಂಭಕ್ಕೆ ಪ್ರಕಟವಾಗುತ್ತಿದ್ದುದೂ, ಆ ಪತ್ರಿಕೆಯ ಸಂಪಾದನ ಕೆಲಸವನ್ನು ಶ್ರೀ. ಬಾಗಲರೆಂಬ ಕನ್ನಡಿಗರು ಮಾಡುತ್ತಿದ್ದುದೂ ಅನೇಕರಿಗೆ ಗೊತ್ತಿರಲು ಸಾಕು. ದುರ್ದೈವವೆಂದ ಇಂಥ ವೈಶಿಷ್ಟ್ಯಪೂರ್ಣವಾದ ಪತ್ರಿಕೆ, ಶ್ರೀ. ಶಂಕರರಾಯರು ಲೋಕಾಯತಿಗೆ ಹೋದುದರಿಂದ, ಕೆಲ ದಿನಗಳಲ್ಲಿಯೇ ನಿಂತುಹೋಯಿತು. ಬುದ್ಧಿವಾದಿ ಹಾಗು ಪ್ರಗತಿಶೀಲವಿಚಾರಗಳನ್ನು ಓದುಗರಿಗೆ ನಿರ್ಭೀತಿಯಿಂದ ಇಡುವ ಕಾರ್ಯವನ್ನು ಇಂದು ಕಿರ್ಲೋಸ್ಕರ ಪತ್ರಿಕೆಯು ಪ್ರಾಮುಖ್ಯವಾಗಿ ಮಾಡುತ್ತಬಂದಿದೆ. '**ಮನೋರಂಜನ,**' '**ರತ್ನಾಕರ,**' '**ಪ್ರತಿಭಾ,**' ಮುಂತಾದ—ಕೇವಲ ಸಾಹಿತ್ಯಕ್ಕೇ ಮೀಸಲಾದ—ಪತ್ರಿಕೆಗಳೊಂದಿಗೆ '**ಕಿರ್ಲೋಸ್ಕರ**' ಪತ್ರಿಕೆಯನ್ನು ಹೋಲಿಸಿ, ದೋಷಗಳನ್ನೆಣಿಸುವ ಹವ್ಯಾಸವನ್ನು ಕೆಲವು ಮರಾಠೀ ಟೀಕಾಕಾರರು ಇಂದಿಗೂ ಮಾಡುತ್ತಿರುತ್ತಾರೆ. ಕೇವಲ ಸಾಹಿತ್ಯಪ್ರಚಾರವೇ ಕಿರ್ಲೋಸ್ಕರ ಪತ್ರಿಕೆಯ ಧೋರಣೆಯಾಗಿಲ್ಲವೆಂಬುದನ್ನು ನಾವು ಗಮನಿಸಬೇಕು. ಇಂಗು ಮರಾಠಿ ಭಾಷೆಯಲ್ಲಿ, ಕಿರ್ಲೋಸ್ಕರ ಪತ್ರಿಕೆಗಿರುವಷ್ಟು ಓದುಗರ ಸಂಖ್ಯೆ ಇನ್ನಾವ ಪತ್ರಿಕೆಗೂ ಇಲ್ಲ.

ಕಿರ್ಲೋಸ್ಕರ ಪತ್ರಿಕೆಯ ಇಂದಿನ ಯಶಸ್ಸಿಗೆ ಶಂಕರರಾಯರೇ ಕಾರಣರು. ಆದರದೊಂದು ವೈಶಿಷ್ಟ್ಯ ಹೀಗಿದೆ: ಅದರಲ್ಲಿ ಪ್ರಕಟವಾಗುವ ಯಾವುದೇ ಮಜಕೂರು-ಲೇಖನಕ್ಕಾಗಿ **ಲೇಖಕನಿಗೆ**—ಅವನು ಬೇಡದೆಯೇ— ಪ್ರತಿಫಲ— ಅದು ಕೂಡ ಸಂಚಿಕೆ ಪ್ರಕಟವಾದ ದಿನವೇ— ಕಳಿಸಲಾಗುತ್ತದೆ! ಕಾಗದ-ಮುದ್ರಣಗಳಿಗಾಗಿ ನಮ್ಮ ಸಂಪಾದಕರು ಬೇಕಾದಷ್ಟು ಹಣವನ್ನು ವೆಚ್ಚಮಾಡುತ್ತಾರೆ; ಆದರೆ ಬಡ ಲೇಖಕನಿಗೆ ಕೊಡಬೇಕಾದ ಪ್ರತಿಫಲವನ್ನು ಮಾತ್ರ ಮುಳುಗಿಸುತ್ತಾರೆ. ನಮ್ಮ ಪತ್ರಿಕೆಗಳು ಬಹುಕಾಲ ಬಾಳದಿರುವುದಕ್ಕೆ ಇದೇ ಮುಖ್ಯಕಾರಣವೆಂಬುದು ಅನುಭವದ ಮಾತು. ನಮ್ಮ ಕನ್ನಡ ಸಂಪಾದಕರು ಕಿರ್ಲೋಸ್ಕರ ಪತ್ರಿಕೆಯ ಈ ಉದಾಹರಣೆಯನ್ನು ಕಲಿತರೆ ಎಷ್ಟು ಒಳಿತಾದೀತು?

ಶ್ರೀ. ಶಂಕರರಾಯರು ಒಳ್ಳೆ ಚಿತ್ರಕಾರರೂ ಆಗಿದ್ದಾರೆ. ಲಾಹೋರದ ಪಂಡಿತ ಸಾತವಳೇಕರ್ ಇವರಿಂದ ಹಾಗು ಮುಂಬಯಿಯ ಆರ್ಟ್ಸ್‌ಸ್ಕೂಲಿನಲ್ಲಿ ಇವರು ಚಿತ್ರಕಲೆಯ ಅಭ್ಯಾಸವನ್ನು ಮಾಡಿದ್ದಾರೆ. ರೇಖಾಚಿತ್ರಗಳನ್ನು ತೆಗೆಯುವುದು ಇವರ ಅತ್ಯಂತ ಮೆಚ್ಚಿಕೆಯ ವ್ಯಾಸಂಗ. ನಾನು ಮೊದಲ ಸಲ ಇವರನ್ನು ಕಂಡುದು ಬೆಳಗಾಂವಿಯಲ್ಲಿ. ಅಂದು ಇವರು ವಸಂತವ್ಯಾಖ್ಯಾನಮಾಲೆಯಲ್ಲಿ ಚಿತ್ರಕಲೆಯ ಮೇಲೆ ಉಪನ್ಯಾಸ ಕೊಡಲು ನಿಂತಿದ್ದರು. ಕೈಯಲ್ಲಿ ಖಡುವಿನ ಕಡ್ಡಿ, ಬದಿಗೆ ಫಲಕ. ಮಾತು ನಡೆ-ನಡೆದಾಗಲೆ ಸರ್ರನೆ ಒಂದೆರಡು ಗೆರೆ ಎಳೆದು, ಸುಂದರವಾದ ರೇಖಾಚಿತ್ರವನ್ನು ಮೂಡಿಸಿ ತೋರಿಸುತ್ತಿದ್ದರು. ಅವರ ಮಾತಿಗೂ ಚಿತ್ರಕೌಶಲ್ಯಕ್ಕೂ ಬೆರಗಾಗಿ ಕೇಳುಗರು ಮಂತ್ರಮುಗ್ಧರಾಗಿ ಕುಳಿತು ಬಿಟ್ಟಿದ್ದರು. ಅವರ

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ
ವಿ ಎಸ್ ಕಾಪಸೇಯವರ
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ಮರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಜೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಜಕಂದ ಮೊನಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ಆಳ ತೊಲೆಯ ಒಂದು ಡಬ್ಬಿಗೆ ೫–೮–೦; ಅಂಚೆಯ ವೆಚ್ಚ ೧–೬–೦. ಶೀಘ್ರಗುಣಕಾರಿಯಾದ ಸ್ಪೇಶಲ್‌ಡಬ್ಬಿಗೆ ೧೦–೮–೦. (ಇವರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬–೦. ೩ ಡಬ್ಬಿಗೆ ೧೫–೦–೦ ಅಂಚೆಯವೆಚ್ಚ ೨–೧೩–೦. ಒನ್ಮೈಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮೂಲಕ: **ವಿ. ಎಸ್. ಕಾಪಸೇ** ಮು. ಪೋ. ಮಿರಜ

ಕಾರ್ಯಮೂರ್ತಿ ಕಿಲ್ರೋಸ್ಕರ (ಕೃತಿ ಪರಿಚಯ)

ಶೀ. ಜಾ. ಕೃ. ಗಲಗಲಿ, ಕಿಲ್ರೋಸ್ಕರವಾಡಿ

★ ಶಂಕರರಾಯರು

ಅನುಕೂಲ ಪರಿಸ್ಥಿತಿಯಿದ್ದರೆ ಶ್ರೀ. ಕಿಲ್ರೋಸ್ಕರ ಶಂಕರರಾಯರ ಕಾರ್ಯಕ್ಷೇತ್ರ ಕರ್ನಾಟಕವೇ ಆಗುತ್ತಿತ್ತು. ಅವರ ಕಾರ್ಯಶಕ್ತಿಯ ಫಲ ನಮ್ಮ ನಾಡಿಗೆ ದೊರೆಯುತ್ತಿತ್ತು. ಆದರೆ ಅದು 'ರ' ರಾಜ್ಯದ ಮಾತಾಯಿತು.

★

ಕಳೆದ ಮಾರ್ಚ್‌ತಿಂಗಳಲ್ಲಿ, ಹುಬ್ಬಳ್ಳಿಯಲ್ಲಿ ಸೇರಿದ ಕರ್ನಾಟಕ ಔದ್ಯೋಗಿಕ ಪ್ರದರ್ಶನದ ಕಾಲದಲ್ಲಿ, ಅಧ್ಯಕ್ಷರೆಂದು ಶ್ರೀಯುತ ಕಿಲ್ರೋಸ್ಕರ ಶಂಕರರಾಯರು, ಕರ್ನಾಟಕ ಪ್ರಾಂತದ ಔದ್ಯೋಗೀಕರಣವನ್ನು ಕುರಿತು ಮನನೀಯ ಭಾಷಣವನ್ನಿತ್ತರು. ಕಿಲ್ರೋಸ್ಕರ ಕಾರಖಾನೆಯ ಮುಖ್ಯ ಸಂಚಾಲಕರೂ, ಮರಾಠಾ ಚೇಂಬರ್ ಆಫ್ ಕಾಮರ್ಸ್ ಹಾಗು ಡೆಕ್ಕನ್ ಮ್ಯಾನ್ಯುಫ್ಯಾಕ್ಚರರ್ಸ್ ಆ್ಯಂಡ್ ಎಂಪ್ಲಾಯರ್ಸ್ ಅಸೋಸಿಯೇಶನಿನ ಅಧ್ಯಕ್ಷರೂ ಎಂದು ಕಾರ್ಯಮಾಡುತ್ತಿರುವ ಅವರು, ಔದ್ಯೋಗಿಕ ಪ್ರಶ್ನೆಗಳ ಬಗೆಗೆ ಅಧಿಕಾರಯುಕ್ತವಾಗಿ ಅಭಿಪ್ರಾಯ ಕೊಡಬಲ್ಲರು. ಈಗ ೩೫ ವರ್ಷಗಳಿಂದಲೂ ಅವರು ಈ ಕ್ಷೇತ್ರದಲ್ಲಿ ದುಡಿಯುತ್ತಿದ್ದು, ಅವರ ಅನುಭವವು ವಿಪುಲವೂ ಕಾರ್ಯಕ್ಷಮವೂ ಆಗಿದೆ. ವ್ಯಾಪಾರಿ ಪತ್ರವ್ಯವಹಾರ, ಜಾಹೀರಾತು, ಮಾರಾಟ ಇವುಗಳ ಸಂಘಟನೆಯಲ್ಲಿ ಅವರು ಪಡೆದ ಯಶಸ್ಸು ಅಸಾಧಾರಣವಾಗಿದೆ. ಇದಕ್ಕಾಗಿಯೇ ಅವರು ವಿಲಾಯತಿಗೆ ಹೋಗಿ, ತಾವು ಅಲ್ಲಿ ಸಂಪಾದಿಸಿದ ಜ್ಞಾನವನ್ನು ಕಿಲ್ರೋಸ್ಕರ ಕಾರಖಾನೆಯ ಅಭಿವೃದ್ಧಿಯಲ್ಲಿ ಕಾರ್ಯರೂಪಕ್ಕೆ ತಂದರು. ತಮ್ಮ ಸರಕನ್ನು ಪರರು ಕೊಳ್ಳುವಂತೆ ಮಾಡುವುದು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಮಾತಷ್ಟೇ ಅಲ್ಲ, ಮಾನಸಶಾಸ್ತ್ರಕ್ಕೂ ಸಂಬಂಧಿಸಿದುದು; ಮಾರಾಟದ ಕಲೆಯಲ್ಲಿ ಇದಕ್ಕಿರುವಷ್ಟು ಮಹತ್ವ ಮಿಕ್ಕ ಯಾವ ಬಾಬಿಗೂ ಇಲ್ಲ—ಎಂಬುದು ಶಂಕರರಾಯರ ಸಿದ್ಧಾಂತ. '**ಮಾರಾಟದ ದ್ವಾದಶ ಸೂತ್ರಗಳು**' ಮತ್ತು '**ವ್ಯಾಪಾರದ ವ್ಯಾಕರಣ**' ಎಂಬೆರಡು ಲೇಖನಮಾಲೆಗಳನ್ನು 'ಕಿಲ್ರೋಸ್ಕರ ಖಬರ್'ದಲ್ಲಿ ಕ್ರಮಶಃ ಬರೆದು, ಅವನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದರು. ಈ ಗ್ರಂಥಗಳಲ್ಲಿಯೂ ಇವರು ಇದೇ ತತ್ತ್ವಗಳನ್ನು ಒತ್ತಿಹೇಳಿದ್ದಾರೆ.



ಕಿಲ್ರೋಸ್ಕರ ಶಂಕರರಾಯರು

ಇವರು ಒಳ್ಳೇ ಮಾನಸಶಾಸ್ತ್ರಜ್ಞರು— ಎಂದು ಜನ ಹೇಳುತ್ತಿರುವುದು ಸುಳ್ಳಲ್ಲ. ತಮ್ಮ ವ್ಯವಸಾಯದಲ್ಲಿ ಈ ತಮ್ಮ ಜ್ಞಾನವನ್ನು ಅವರು ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ. ಮೊದಲ ನೋಟಕ್ಕೇ ಕಣ್ಣಲ್ಲಿ ತುಂಬುವಂತಹದು ಅವರ ಬೀಸಾಡ ನಿಲುವುಳ್ಳ ಶರೀರ! ಎರಡನೆಯದು ಅವರ ವಾಣಿಯಲ್ಲಿಯ ವಿಲಕ್ಷಣ ಮಾಧುರ್ಯ ಅವರು ಯಾವ ವಿಷಯವನ್ನೇ ಎತ್ತಿ ಮಾತನಾಡಲಿ; ಕೇಳುವವರು ಕಿವಿಸೋತು, ಮನಸೋತು ಕೇಳುವಂತೆ ಮಾಡುವ ಶಕ್ತಿ ಅವರಿಗೆ ದೈವದತ್ತವಾಗಿದೆ. ಆದರಿಂದ ಅವರನ್ನು ವಿರೋಧಿಸಲು ಬಂದವರು ನಗುಮುಖದಿಂದ ಪ್ರಸನ್ನ ಚಿತ್ತರಾಗಿ ಹಿಂದಿರುಗಿದುದನ್ನು ಅನೇಕ ಸಲ ಕಂಡಿದ್ದೇನೆ

ನಾನು ಅವರ ಕೈಯಲ್ಲಿ ಕೆಲಸಕ್ಕೆ ಸೇರಿದ ಕೆಲ ದಿನಗಳಲ್ಲಿಯೇ, ನನ್ನ ಗುರುತಿನ ವಿಮಾ ಏಜಂಟರೊಬ್ಬರು ಶಂಕರರಾಯರನ್ನು ಕಾಣಲು ನನ್ನ ಕಡೆಗೆ ಬಂದರು. ಅವರನ್ನು ಕರೆದುಕೊಂಡು ನಾನು ಶಂಕರರಾಯರ ಮನೆಗೆ ಹೋದೆ. ಮಾತಿಗೆ ಮಾತು ಹೊರಟು, ವಿಲಾಯತಿಯಲ್ಲಿ ಯಾವುದೇ ಉದ್ಯಮದ ಪ್ರಚಾರ—ಪ್ರಸಾರ— ಕ್ಯಾನ್‌ವಾಸಿಂಗ್ ಇವುಗಳ ಬಗೆಗೆ ಹೇಗೆ ಕ್ರಮಬದ್ಧವಾದ ಶಿಕ್ಷಣವು ಕೊಡಲ್ಪಡುವುದೆಂಬುದನ್ನು ಅವರು ಕೆಲವೇ ಮಾತಿನಲ್ಲಿ ಜೆನ್ನಾಗಿ ತಿಳಿಹೇಳಿದರು. ಒಂದು ಕ್ಯಾಟಲಾಗನ್ನು ಗಿರಾಕಿಯ ಕೈಯಲ್ಲಿರಿಸುವಾಗಲೂ, ಅದನ್ನು ದೊಪ್ಪನೆ ಅವರೆದುರ ಎಸೆಯದೆ, ಅದೊಂದು ತಮ್ಮ ಮೌಲಿಕವಾದ ಸೊತ್ತು ಎಂಬ ಭಾವನೆಯಿಂದ, ತಮ್ಮ ಸುಂದರವಾದ ಬ್ಯಾಗಿನೊಳಗಿಂದ ನಾಜೂಕಾಗಿ ಹೊರಕ್ಕೆ ತೆಗೆದು, ಅತ್ಯಂತ ಸೌಜನ್ಯದಿಂದ ಅವರೆದುರಿಡಿಸಬೇಕೆಂಬುದನ್ನೂ ಮತ್ತು ಮಾತನಾಡುವಾಗ ಧ್ವನಿಯಲ್ಲಿ ಯಾಚನೆಯ ದೈನ್ಯತೆಯನ್ನು ತೋರದೆ ಉಚಿತವಾದ ಅನುನಯ

ದೊಗನೆ ಹೇಗೆ ಗಿರಾಕಿಯನ್ನು ಒಲಿಸಿಕೊಳ್ಳಬೇಕೆಂಬುದನ್ನೂ ಅವರು ಪ್ರತ್ಯಕ್ಷವಾಗಿಯೇ ತೋರಿಸಿಕೊಟ್ಟರು. ನನ್ನ ಏಜಂಟ್ ಮಿತ್ರನಿಗೆ ಇದೆಲ್ಲ ಹೊಸತೇ ಎನಿಸಿತು.

ತಮ್ಮ ಕಾರಖಾನೆಯ ಸರಕನ್ನು ಪ್ರಸಾರಗೊಳಿಸಲು, ಬಲವಾದ ಸಾಧನವೊಂದು ಬೇಕೆಂಬ ಉದ್ದೇಶದಿಂದ ಅವರು 'ಕಿರ್ಲೋಸ್ಕರ ಖಬರ್' ಎಂಬ ವೈಶಿಷ್ಟ್ಯಪೂರ್ಣವಾದ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಆದರೆ ತಮ್ಮ ಸರಕಿನ ಜಾಹೀರಾತು, ಪ್ರಸಾರ ಇವುಗಳಿಗಿಂತಲೂ ಮಹತ್ತ್ವದ ಕಾರ್ಯವು ಈ ಪತ್ರಿಕೆಯ ಮುಖಾಂತರ ನಡೆಯಿತು. ಜನರಲ್ಲಿ ಉದ್ಯೋಗ-ಉತ್ಸಾಹ-ಆತ್ಮೋನ್ನತಿಗಳ ಬಗ್ಗೆ ಪ್ರೀತಿಯನ್ನು ಹುಟ್ಟಿಸುವುದೇ ಇದರ ಧ್ಯೇಯವಾಗಿದ್ದಿತು. ಇದರ ಜೊತೆಗೆ, 'ಉತ್ಕರ್ಷ ಮಂಡಲ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ವ್ಯವಸಾಯದಲ್ಲಿ ಉತ್ಕರ್ಷವನ್ನು ಹೊಂದಬಯಸುವ ಸದಸ್ಯರಿಗೆ 'ಉತ್ಕರ್ಷಪಾತ್ರ'ವನ್ನು ಹಂಚುವ ಅಭಿನವಯೋಜನೆಯೂ ಅವರದೇ. 'ಕಿರ್ಲೋಸ್ಕರ ವಾರ್ತೆ' ಎಂಬ ಹೆಸರಿನಿಂದ 'ಕಿರ್ಲೋಸ್ಕರ ಖಬರ್'ದ ಕನ್ನಡ ಆವೃತ್ತಿಯೊಂದು ಪ್ರಾರಂಭಕ್ಕೆ ಪ್ರಕಟವಾಗುತ್ತಿದ್ದುದೂ, ಆ ಪತ್ರಿಕೆಯ ಸಂಪಾದನ ಕೆಲಸವನ್ನು ಶ್ರೀ. ಬಾಗಲರೆಂಬ ಕನ್ನಡಿಗರು ಮಾಡುತ್ತಿದ್ದುದೂ ಅನೇಕರಿಗೆ ಗೊತ್ತಿರಲು ಸಾಕು. ದುರ್ದೈವದಿಂದ ಇಂಥ ವೈಶಿಷ್ಟ್ಯಪೂರ್ಣವಾದ ಪತ್ರಿಕೆ, ಶ್ರೀ. ಶಂಕರರಾಯರು ನಿಲಾಯತಿಗೆ ಹೋದುದರಿಂದ, ಕೆಲ ದಿನಗಳಲ್ಲಿಯೇ ನಿಂತುಹೋಯಿತು. ಬುದ್ಧಿವಾವಿ ಹಾಗು ಪ್ರಗತಿಶೀಲವಿಚಾರಗಳನ್ನು ಓದುಗರಿದುರು ನಿರ್ಭೀತಿಯಿಂದ ಇಡುವ ಕಾರ್ಯವನ್ನು ಇಂದು ಕಿರ್ಲೋಸ್ಕರ ಪತ್ರಿಕೆಯು ಪ್ರಾಮುಖ್ಯವಾಗಿ ಮಾಡುತ್ತಬಂದಿದೆ. 'ಮನೋರಂಜನ,' 'ರತ್ನಾಕರ,' 'ಪ್ರತಿಭಾ,' ಮುಂತಾದ--ಕೇವಲ ಸಾಹಿತ್ಯಕ್ಕೇ ಮೀಸಲಾದ— ಪತ್ರಿಕೆಗಳೊಂದಿಗೆ 'ಕಿರ್ಲೋಸ್ಕರ' ಪತ್ರಿಕೆಯನ್ನು ಹೋಲಿಸಿ, ದೋಷಗಳನ್ನೆಣಿಸುವ ಹವ್ಯಾಸವನ್ನು ಕೆಲವು ಮರಾಠೀ ಟೀಕಾಕಾರರು ಇಂದಿಗೂ ಮಾಡುತ್ತಿರುತ್ತಾರೆ. ಕೇವಲ ಸಾಹಿತ್ಯಪ್ರಚಾರವೇ ಕಿರ್ಲೋಸ್ಕರ ಪತ್ರಿಕೆಯ ಧೋರಣೆಯಾಗಿಲ್ಲವೆಂಬುದನ್ನು ನಾವು ಗಮನಿಸಬೇಕು. ಇಂದು ಮರಾಠಿ ಭಾಷೆಯಲ್ಲಿ, ಕಿರ್ಲೋಸ್ಕರ ಪತ್ರಿಕೆಗಿರುವಷ್ಟು ಓದುಗರ ಸಂಖ್ಯೆ ಇನ್ನಾವ ಪತ್ರಿಕೆಗೂ ಇಲ್ಲ.

ಕಿರ್ಲೋಸ್ಕರ ಪತ್ರಿಕೆಯ ಇಂದಿನ ಯಶಸ್ಸಿಗೆ ಶಂಕರರಾಯರೇ ಕಾರಣರು. ಅದರದೊಂದು ವೈಶಿಷ್ಟ್ಯ ಹೀಗಿದೆ: ಅದರಲ್ಲಿ ಪ್ರಕಟವಾಗುವ ಯಾವುದೇ ಮಜಕೂರು-ಲೇಖನಕ್ಕಾಗಿ ಲೇಖಕನಿಗೆ— ಅವನು ಬೇಡದೆಯೇ— ಪ್ರತಿಫಲ— ಅದು ಕೂಡ ಸಂಚಿಕೆ ಪ್ರಕಟವಾದ ದಿನವೇ-- ಕಳಿಸಲಾಗುತ್ತದೆ! ಕಾಗದ-ಮುದ್ರಣಗಳಿಗಾಗಿ ನಮ್ಮ ಸಂಪಾದಕರು ಬೇಕಾದಷ್ಟು ಋಣವನ್ನು ವೆಚ್ಚಮಾಡುತ್ತಾರೆ; ಆದರೆ ಬಡ ಲೇಖಕನಿಗೆ ಕೊಡಬೇಕಾದ ಪ್ರತಿಫಲವನ್ನು ಮಾತ್ರ ಮುಳುಗಿಸುತ್ತಾರೆ. ನಮ್ಮ ಪತ್ರಿಕೆಗಳು ಬಹುಕಾಲ ಬಾಳದಿರುವುದಕ್ಕೆ ಇದೇ ಮುಖ್ಯಕಾರಣವೆಂಬುದು ಅನುಭವದ ಮಾತು. ನಮ್ಮ ಕನ್ನಡ ಸಂಪಾದಕರು ಕಿರ್ಲೋಸ್ಕರ ಪತ್ರಿಕೆಯ ಈ ಉದಾಹರಣೆಯನ್ನು ಕಲಿತರೆ ಎಷ್ಟು ಒಳಿತಾದೀತು?

ಶ್ರೀ. ಶಂಕರರಾಯರು ಒಳ್ಳೆ ಚಿತ್ರಕಾರರೂ ಆಗಿದ್ದಾರೆ. ಲಾಹೋರದ ಪಂಡಿತ ಸಾತವಳೇಕರ್ ಇವರಿಂದ ಹಾಗು ಮುಂಬಯಿಯ ಆರ್ಟ್ಸ್‌ಸ್ಕೂಲಿನಲ್ಲಿ ಇವರು ಚಿತ್ರಕಲೆಯ ಅಭ್ಯಾಸವನ್ನು ಮಾಡಿದ್ದಾರೆ. ರೇಖಾಚಿತ್ರಗಳನ್ನು ತೆಗೆಯುವುದು ಇವರ ಅತ್ಯಂತ ಮೆಚ್ಚಿಕೆಯ ವ್ಯಾಸಂಗ. ನಾನು ಮೊದಲ ಸಲ ಇವರನ್ನು ಕಂಡುದು ಬೆಳಗಾಂವಿಯಲ್ಲಿ. ಅಂದು ಇವರು ವಸಂತವ್ಯಾಖ್ಯಾನಮಾಲೆಯಲ್ಲಿ ಚಿತ್ರಕಲೆಯ ಮೇಲೆ ಉಪನ್ಯಾಸ ಕೊಡಲು ನಿಂತಿದ್ದರು. ಕೈಯಲ್ಲಿ ಖಡುವಿನ ಕಡ್ಡಿ, ಬದಿಗೆ ಫಲಕ. ಮಾತು ನಡೆ-ನಡೆದಾಗಲೆ ಸರ್ರನೆ ಒಂದೆರಡು ಗೆರೆ ಎಳೆದು, ಸುಂದರವಾದ ರೇಖಾಚಿತ್ರವನ್ನು ಮೂಡಿಸಿ ತೋರಿಸುತ್ತಿದ್ದರು. ಆವರ ಮಾತಿಗೂ ಚಿತ್ರಕೌಶಲ್ಯಕ್ಕೂ ಬೆರಗಾಗಿ ಕೇಳುಗರು ಮಂತ್ರಮುಗ್ಧರಾಗಿ ಕುಳಿತು ಬಿಟ್ಟಿದ್ದರು. ಅವರ

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ವಿರಜಿಯು ವೈದ್ಯ
ವಿ ಎಸ್ ಕಾಪಸೇಯವರ
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೊತ್ತದಲ್ಲಿ ಸ್ವಪ್ನಗಳಲ್ಲಿ ವೀರ್ಯಸ್ಖಲನ, ಸ್ಮರತಿಯಿಂದುಂಟಾದ ಅರಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ-- ಇವೆಲ್ಲ ನಷ್ಟವಾಗಿ, ಜೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮುಶ್ರಿ, ಪಂಜಾಬ ಮಿಶ್ರಿ-ವಜಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧ ಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೩೧ ದಿನಗಳಿಗೆ ಸಾಲಬಹುದಾದ ಲಳ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರೆಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: ವಿ. ಎಸ್. ಕಾಪಸೇ ಮು. ಪೋ. ಮಿರಜ

'ಟೊಕಾಂಟ್ಯಾ ಭೇಕಿ' ಎಂಬ ಕೇಖಾಚಿತ್ರದ ಪುಸ್ತಕದ ಮೂರನೆಯ ಮುದ್ರಣ ಇದೀಗ ಹೊರಬಿದ್ದಿದೆ.

'ಕಿರ್ಲೋಸ್ಕರ' ಪತ್ರಿಕೆಯೇ ಮರಾಠಿಯಲ್ಲಿಯ ಮೊದಲನೆಯ ಸಚಿತ್ರ ಮಾಸಪತ್ರಿಕೆ. ಪ್ರತಿಯೊಂದು ಕತೆಗಷ್ಟೇ ಅಲ್ಲ, ಲೇಖನ-ಕವಿತೆಗೂ ಚಿತ್ರ ಬೇಕೇಬೇಕು—ಎಂಬುದು ಶಂಕರರಾಯರ ಹಿರಿಯಾಸೆ. ಇದಕ್ಕೆ ಕಿರ್ಲೋಸ್ಕರ ಪತ್ರಿಕೆ ಗಮನಕೊಡುವಷ್ಟು ಇನ್ನಾವ ಪತ್ರಿಕೆಯೂ ಕೊಡುತ್ತಿಲ್ಲ.

ನಾಟಕ ಅವರ ಇನ್ನೊಂದು ಪ್ರೀತಿಯ ವಿಷಯ. ಆದ್ಯ ನಾಟಕಕಾರರಾದ ದಿ. ಅಣ್ಣಾ ಕಿರ್ಲೋಸ್ಕರರ ವಂಶದಲ್ಲಿ ಹುಟ್ಟಿದ ಶಂಕರರಾಯರಿಗೆ ನಾಟಕಕಲೆಯಲ್ಲಿ ಆಸಕ್ತಿ ಇರದಿದ್ದರೆಯೇ ಆಶ್ಚರ್ಯ. ಅವರು ನಾಟಕಗಳನ್ನು ದಿಗ್ದರ್ಶಿಸುವುದಷ್ಟೇ ಅಲ್ಲದೆ ಅದರಲ್ಲಿ ಪಾತ್ರವನ್ನೂ ವಹಿಸುತ್ತಾರೆ. ದಿ. ನ. ಚಿ. ಕೇಳಕರರ 'ತೋತಯಾಜೀ ಬಂಡ' ಎಂಬ ಪ್ರಸಿದ್ಧ ನಾಟಕದಲ್ಲಿಯ ಅವರ ನಾನಾ ಫಡಣೀಸನ ಪಾತ್ರವನ್ನು ನಾನು ನೋಡಿದ್ದೇನೆ. ಅಭಿನಯಕಲೆಯನ್ನು ಅವರು ಆತ್ಮವಶಮಾಡಿಕೊಂಡಿದ್ದಾರೆಂಬುದು ನನಗೆ ಆಗ ಮನದಟ್ಟಾಯಿತು. ಸಂಗೀತ—ಅಭಿಜಾತ ಶಾಸ್ತ್ರೀಯ ಸಂಗೀತ—ಅವರ ಇನ್ನೊಂದು ಪ್ರೀತಿಯ ವಿಷಯ. ನುರಿತ ಗಾಯಕ-ವಾದಕರಿಗೆ ಅವರಲ್ಲಿ ಯಾವಾಗಲೂ ಸ್ವಾಗತವಿದೆ.

ಕ್ರಿಕೆಟ್ ಅವರ ತೀರ ಮೆಚ್ಚಿಕೆಯ ಆಟವಾದರೆ, ಬೇಟೆಯು ಅವರನ್ನು ಆಗಾಗ ಪ್ರಚೋದಿಸುವ ವಿಲಾಸ. ವಯಸ್ಸು ಅರುವತ್ತಕ್ಕೆ ಸಮೀಪಿಸಿದ್ದರೂ, ಕ್ರಿಕೆಟ್ ಪಿಚ್ಚಿನ ಮೇಲೆ ಬ್ಯಾಟ್ ಹಿಡಿದು ಏಟನಿಂದ ನಿಂತುದನ್ನು ನೋಡಿದರೆ, ಎಂಥವರಿಗೂ ಉತ್ಸಾಹ ತುಂಬುತ್ತದೆ. ಪಂಚಕ್ರೋಶಿಯಲ್ಲಿ ತಮ್ಮ ಶಿಕಾರಿಯ ಕೈಚಳಕದಿಂದ ಹಿಂಸ್ರಪಶುಗಳನ್ನಷ್ಟೇ ಅಲ್ಲ; ಹಿಂಸ್ರಮಾನವರನ್ನೂ ಅವರು ಸೆರೆ ಬಡಿದಿದ್ದಾರೆ.

ಹೀಗೆ ಶಂಕರರಾಯರ ವ್ಯಕ್ತಿತ್ವವು ಸರ್ವತೋಮುಖವಾದುದಾಗಿದೆ. ಯಾವುದೇ ಕಾರ್ಯದಲ್ಲಿ ತಾವು ಗೆಲುವನ್ನು ಪಡೆಯುವುದಲ್ಲದೆ, ಇತರರ ಗೆಲುವಿಗೂ ಪ್ರೇರಕರಾಗಿದ್ದಾರೆ ಅವರು. ಅಂತೆಯೇ, ಲಕ್ಷಾವಧಿ ಜನರಿಗೆ ಮಾರ್ಗದರ್ಶನದ ಕಾರ್ಯವನ್ನು ಕೈಕೊಂಡ ದೀಪದಂತೆ, ತಮಗೂ ಮಾರ್ಗದರ್ಶಕರಾಗಿದ್ದಾರೆಂದು, ಕಿರ್ಲೋಸ್ಕರದ ವಾಚಕರು ಶಂಕರರಾಯರ ವಿಷಯದಲ್ಲಿ ಭಾವನೆಮಾಡಿಕೊಂಡಿದ್ದರೆ ಆಶ್ಚರ್ಯದ ಮಾತಲ್ಲ.

ಕನ್ನಡಿಗರಿಗೂ ಅವರ ಪರಿಚಯ ಉದ್ಬೋಧಕವಾಗಲಿ ಎಂದು ಈ ನಾಲ್ಕು ಮಾತುಗಳನ್ನು ಬರೆದಿದ್ದೇನೆ.

ಶಂಕರರಾಯರ ಜೀವನದಲ್ಲಿಯ ಮುಖ್ಯ ಸಂಗತಿಗಳು

★

ಜನ್ಮ— ಸೊಲ್ಲಾಪುರ. ೮-೧೦-೧೮೯೧

ಶಿಕ್ಷಣ— ಬೆಳಗಾಂವಿ. ೧೯೦೧-೪. ಸರದಾರ ಹೈಸ್ಕೂಲು. ಸೊಲ್ಲಾಪುರ ನಾರ್ಥ್‌ಕೋಟ್ ಹೈಸ್ಕೂಲು— ೧೯೦೪-೮. ಪುಣೆಯ ಡೆಕ್ಕನ್ ಕಾಲೇಜ್ ೧೯೦೮-೧೦. ಲಾಹೋರ ಪಂಡಿತ ಸಾತವಳೇಕರ ಹಾಗು ಮುಂಬಯಿ ಆರ್ಟ್ಸ್ ಸ್ಕೂಲ್ ೧೯೧೧-೧೪.

೧೯೧೪— ಕಿರ್ಲೋಸ್ಕರವಾಡಿ ಕಾರಖಾನೆಯಲ್ಲಿ ಜಾಹೀರಾತು, ಪತ್ರವ್ಯವಹಾರ, ಮಾರಾಟದ ಕೆಲಸ.

೧೯೧೫— ಮೊದಲನೆಯ ಮದುವೆ.

೧೯೧೬— ಕಿರ್ಲೋಸ್ಕರ ಖಬರ್ ಪತ್ರಿಕೆಯ ಜನ್ಮ.

೧೯೧೭— ಇಂಡಿಯನ್ ಡಿಫೆನ್ಸ್ ಫೋರ್ಸ್‌ನಲ್ಲಿ ಲಷ್ಕರಿ ಶಿಕ್ಷಣ.

೧೯೨೩— ಇಂಗ್ಲಂಡಿನಲ್ಲಿ ಲಂಡನ್ ಸ್ಕೂಲ ಆಫ್ ಕಾಮರ್ಸದ ಡಿಪ್ಲೊಮಾ— ಸೇಲ್ಸ್ ಮ್ಯಾನೇಜರ್ಸ್ ಅಸೋಶಿಯೇಶನಿನ ಮೊದಲನೆಯ ಹಿಂದೀ ಸಭಾಸದ.

೧೯೨೪— ಯುರೋಪದ ಪ್ರವಾಸ.

೧೯೩೦— 'ಸ್ತ್ರೀ' ಮಾಸಪತ್ರಿಕೆಯ ಪ್ರಾರಂಭ.

೧೯೩೪— 'ಮನೋಹರ' ಮಾಸಿಕದ ಪ್ರಾರಂಭ.

೧೯೩೮— ಎರಡನೆಯ ಮದುವೆ.

೧೯೩೯— ಅಹಮ್ಮದ ನಗರದಲ್ಲಿ ಸೇರಿದ ಚಿತ್ರಕಲಾಪ್ರದರ್ಶನದ ಅಧ್ಯಕ್ಷರು.

೧೯೪೧— ಕೊಲ್ಹಾಪುರ ಚಿತ್ರಕಲಾ ಪ್ರದರ್ಶನದ ಅಧ್ಯಕ್ಷರು.

೧೯೪೪— ಔಂಧ ಸಂಸ್ಥಾನದ ಮಂತ್ರಿ.

೧೯೪೬—ಮರಾಠಾ ಚೇಂಬರ್ ಆಫ್ ಕಾಮರ್ಸ್ ಹಾಗು ಡೆಕ್ಕನ್ ಮ್ಯಾನ್ಯುಫ್ಯಾಕ್ಚರರ್ಸ್ ಅಸೋಶಿಯೇಶನಿನ ಅಧ್ಯಕ್ಷರು.

ಹೀಂಗ ನಡದsದ ನೋಡ್ರಿ

(ವ್ಯಂಗ್ಯ ದೃಶ್ಯ)

ಆ. ವೆಂಕಟಾಚಾರ್ಯ ಹಪ್ಪು ಬಿ. ಎ., ಎಲ್. ಎಲ್. ಬಿ. ವಕೀಲ, ಹುಬ್ಬಳ್ಳಿ

★

ಮೋಜ-ರಾವ್ಯಗಳೆ ಸಂಪೂರ್ಣ ಕಲ್ಪನೆಯಿಲ್ಲದವರಿಗೆ ಆಳುವ ಅಧಿಕಾರ ಸಲ್ಲದು; ಬಾಳುವ ಸಾಮರ್ಥ್ಯವೂ ಇರದು. ಅಧಿಕಾರಲಾಲಸೆಯಿರುವ ಆಳುವವರೂ, ಸ್ವಾರ್ಥಸಾಧನೆಯನ್ನೆ ಗುರಿಯಾಗಿರಿಸಿಕೊಂಡ ಜನತೆಯೂ ಇರುವಲ್ಲಿ, ಸ್ವಾತಂತ್ರ್ಯದ ಸುಖವು ಎಂದೂ ಸಿಕ್ಕಲಾರದು!

★

(ಹಳ್ಳಿಯ ಬೀದಿ— **ಕಲ್ಲಪ್ಪ, ಮಲ್ಲಪ್ಪ.**)

ಕಲ್ಲಪ್ಪ:— ಏನೋ ಮಲ್ಯಾ! ಊರು ಭಲ್ ಸಿಂಗಾರಾಗೈತಲ್ಲಲೇ?

ಮಲ್ಲಪ್ಪ:— ಮಂತ್ರಿಗೋಳು ಬರತಾರ.

ಕ:— ಮಂತ್ರಿಗಿಂತಾ ಗೋಳs ಕರೆ ನೋಡು! ಯಾವ ಮಂತ್ರಿ?

ಮ:—ಆ ಮೂಲೀಮನಿ ಮಾದಣ್ಣನ ಮಗಾಲೇ....ನಿಂಗಪ್ಪಾ! ಊರs ಅಂತೈತಿ: ನಿಂಗಪ್ಪನ್ಹಾಂಗ ಮಂತ್ರಿ.....

ಕ:—ಯಾಕ! ನಿನ್ನ ಮಗ್ಗ ನೌಕ್ರಿ ಗಿವ್‌ಕ್ರಿ ಕೊಡತಾನೇನು?

ಮ:—ನೌಕರೀ ಏನ ಮಾಡತಿ? ಹತ್ತಹಳ್ಳೀ ರೇಶನ್ ಅಂಗಡಿ ಕೊಡಸತಾನ!

ಕ:— ಅದರಾಗ ಏಟ ಪಾಯಿದೆ ಬರತೈತಿ?

ಮ:— ಪಾಯದೆ.... ಮುಂದ ರೇಶನ್ ಅಂಗಡಿ, ಹಿಂದ, ಬ್ಲಾಕ್....!

ಕ:— ಕಟ್ಲೆ ಹಾಕಿದ್ರ....?

ಮ:— ಕಟ್ಲೆ ಇಲ್ಲಾ ಗಿಟ್ಲೆ ಇಲ್ಲಾ. ಮಂತ್ರೀ ಚೀಟ ಪೋಲಿಸ ಸಾಬಗ ಕೊಟ್ರ ಎಲ್ಲಿ ಕಟ್ಲೆ?

ಕ:— ವಕೀಲೀ, ಲಂಚಾ, ಬ್ಲಾಕ್!

ಮ:—ಹಿಂಗ ಮಾತಾಡಿದ್ರ ನೋಡು, ಮಂತ್ರಿಪಾರ್ಟಿಯವರು ಗುಂಡಾಕಾಯಿದೇ ತರಿಸಿ ದೇಶಾಬಿಟ್ಟು ಹೊರಗ ಹಾಕ್ಯಾರ.

ಕ:—ವರ್ತಮಾನಪತ್ರದಾಗ ಕೊಡಸಸತೇನಿ—ಗುಂಡಾಕಾಯಿದೆ ತರಸೋದು ಸುಲಭ ಐತೇನು?

ಮ:— ಯಾಂವನಪಾ, ವರ್ತಮಾನಪತ್ರದಂವಾ? ಅಂವಗ ವರ್ತಮಾನಪತ್ರ ಬೇಕೋ ಬ್ಯಾಡೋ? ಮುದ್ರಾರಾಕ್ಷಸ ಕಾಯಿದೆ, ಅವಂದು ಅವನ ಪತ್ರದ್ದು ಕುತಿಗೀನ ಹಿಚಕೀತು!

ಕ:— ಅಸಂಬ್ಲ್ಯಾಗ ಪ್ರಸ್ನೀ ಕೇಳಸತೇವಿ, ಬಿಡ ಇದನ್ನ!

ಮ:— ಅದ್ಯಾಂವಪಾ ಅಸೆಂಬ್ಲ್ಯಾಗ ಬಾಯಿತೆಗಿಯೊ ಅಂವಾ. ಅಂವಗ ಪಗಾರ ಬೇಕೋ ಬ್ಯಾಡೋ? ಬರೇ ಪಗಾರ ಅದ್ರ ಆಟ ಹೆದರಾಕಿಲ್ಲಾ. ಪರಮೇಟು ಲೈಸನ್ಸು ಒಂದs ಎರಡs! ನಿನ್ನ ಪ್ರಸ್ನಿ ಕೇಳಿ ಅಂವೇನು ಹಳ್ಳಾಹಿಡದು ಹೊಕ್ಯಾನ! ಇರುವ್ದಪಕ್ಸಾ ಅಂತೂ ಇಲ್ಲೇ ಇಲ್ಲಾ ಪ್ರಸ್ನಿ ಕೆಳಸಾಕ.

ಕ:—ಆಕೋ, ಅಲ್ಲೆ ಮಾದರ-ಹೊಲದ ಮ್ಯಾಗಿಗೆ ಯಾರ್ಯಾರೊ ಕಾಣಾಕ ಹತ್ತ್ಯಾರ.

ಮ:— ಅವರs ಮಂತ್ರಿ. ಈಗ ಬರತಾರು. ನೀ ಅಂದದ್ದೆಲ್ಲಾ ಅವರ ಮುಂದ ಈಟs ಅನಬಾರದs?

ಕ:—ಎಲೆ! ಅನ್ನಾಕ ಅವರ ತನಕಾ ನನ್ಮನ್ನ ಯಾಂವ ಬಿಡತಾನ? ಊರಾಗಿನ ಕಾಂಗ್ರೆಸ ಮುಂದಿ ಮಂತ್ರಿನ್ನ ಗೊಂಬೀ ಆಡಿಸಿದ್ಹಾಂಗ ಆಡಸತಾರ. ನಾವು ಜನರ ಮಂತ್ರೀ ಅಂತ ಏನಾರ ಹೇಳಾಕ ಹೋದ್ರ 'ಯಾಳ್ಯಾ ಇಲ್ಲಾ, ಯಾಳ್ಯಾ ಇಲ್ಲಾ!'. ಏನ ಯಾಳ್ಯಾಲೇ? ಚಹಾದ ಅಂಗಡೀ ಉದ್ಘಾಟನ ಮಾಡಾಕ ಯಾಳ್ಯಾ ಇರತೈತಿ!.....

(ಅಸಂತುಷ್ಟ ಕಾಂಗ್ರೆಸಪ್ಪ ಮಂತ್ರಿ ಮುಂತಾದವರು ಬರುವರು)

ಮಂತ್ರಿ:— ಏನ್ರೀ, ನಿಮ್ಮ ಹಳ್ಳಿಗೆ ಏನ ಕಠಿಣ ದಾರಿ? ದನಾ ಸಹಿತ ಓಡ್ಯಾಡೋದು ದುಸ್ತರಾ; ಜನಾ ಏನು ಓಡಾಡಬೇಕು?

ಅಸಂತುಷ್ಟ ಕಾಂಗ್ರೇಸಪ್ಪ:— ಮಂತ್ರಿಮಹಾಶಯರೇ, ತಮ್ಮದೇ ಈ ಪಕ್ಷ. ಸಾವಿರಾ ವರ್ತಿ ಇದೇ ದಾರಿ ತುಳದು ದೊಡ್ಡವರಾಗೀರಿ! ೬೦೦೦ ಮೈಲಿನಿಂದ ಬಂದ ಬಿಳೀಮಂತ್ರಿಯಂತೆ ಬಿನ್ ಜವಾಬ್‌ದಾರಿ ಸರಕಾರೀ ಭಾಷಾ ಉಪಯೋಗಿಸಲಿಕ್ಕೆ ಹತ್ತೀದಿರಲ್ಲಾ ತಾವೂ!

ಮಂ:— ನಾನಾದರೂ ಅನ್ನುವದು ಇದೇ! ಮಾಡಲಿಕ್ಕೆ ಎಷ್ಟು ಕೆಲಸಗಳನೆ ನೋಡ್ರಿ! ಮೊದಲು ಎಲ್ಲ ಹಳ್ಳಿಗಳಿಗೆ ದೊಡ್ಡ

ದೊಡ್ಡ ರಾಜ— ಅಲ್ಲ— ರಾಷ್ಟ್ರಬೀದಿಗಳಾಗಬೇಕು. ಬೀದಿಗಳ ರಬರೀಕರಣವಾಗಬೇಕು!

ಅ. ಕಾಂ:— ದೂರದರ್ಶಿ ಮಂತ್ರಿಗಳು ತಾವು, ಯಾವಾಗಲೂ ತಮ್ಮ ಕಣ್ಣು ಮುಂದೆ ಸಾವಿರಾರು ವರ್ಷಗಳಾಚಿನ ಶಾಂತಿ-ಸಮೃದ್ಧಿ-ಸುಖಮಯ ಹಿಂದುಸ್ತಾನದ ಅಲ್ಲ— ಇಂಡಿಯನ್ ಯೂನಿಯನ್ನಿನ ಚಿತ್ರ! ಸದ್ಯಕ್ಕೆ ನಡೆದ ಹೊಟ್ಟೆಯ ಹೋರಾಟ, ಬಟ್ಟೆಯ ಬರಗಾಲ, ವಸತಿಯ ಕೊರತೆ ಇವೆಲ್ಲವನ್ನು ಕಾಣದೆ, ಅವುಗಳನ್ನೇ ಎಡವಿಬೀಳಕೊಡಗಿರುವಿರಿ. ವಸತಿ, ವಸ್ತ್ರ, ಅನ್ನ ಇವು ಜೈನೀವಸ್ತುಗಳಾಗಿವೆ. ಮುನಸಿಪಾಲ್ಟಿ ನಮೂನೆಯ ನಮ್ಮ ಸರಕಾರ ಬಂದ ಮೇಲಂತೂ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಅಪಾರ ಸ್ವಾರ್ಥತ್ಯಾಗ ಮಾಡಿ, ಅನಂತ ಕಷ್ಟ-ನಷ್ಟಗಳನ್ನು ಅನುಭವಿಸಿ ಪಡೆದ ಸ್ವರಾಜ್ಯ-ಶಕಟವು ಹೀಗೇ ಸಾಗಿದರೆ.... ಇದರಿಂದ ದೇವರೇ ನಮ್ಮನ್ನು ರಕ್ಷಿಸಲಿ!!.....ಕಾಪಾಡಲಿ!

ಮುಂ:— ನೀವು ಯೋಗ್ಯದಾರಿಯಿಂದ ನಿಮ್ಮ ದೂರುಗಳನ್ನು ಕಳಿಸುವದಿಲ್ಲ. ಅತ್ಯಾತುರದಾಗಿ ಬಾಯಿಗೆ ಬಂದದ್ದನ್ನು.....

ಅ. ಕಾಂ:— ಮತ್ತ! ಕ್ಷಮಿಸಿರಿ, ಮತ್ತು ಸರಕಾರಿ ಭಾಷೆ! ನಮ್ಮವರೇ ಆದ ನಿಮಗೆ ನಮ್ಮ ದೂರುಗಳ ಅರಿವು ಇಲ್ಲದ್ದು ಶೋಚನೀಯ. ಇವೇ ದೂರುಗಳ ಸರವನ್ನು ಬ್ರಿಟಿಶರಿಗೆ ನೀವೇ ಕಟ್ಟಿ ಕಳಿಸಲಿಲ್ಲವೆ? ಇಷ್ಟು ತೀವ್ರ ಸ್ಮೃತಿಭ್ರಂಶ?

(ಮಂತ್ರಿಗಳು ಸಭಾಮಂಟಪದಲ್ಲಿ ಬಂದರು. ಸತ್ತವರಿಗಾಗಿ ಕಾದಿಟ್ಟ ಅರಿವೆಯಿಂದ ಛತ್ತು ಹೊಡೆಯಲಾಗಿತ್ತು. ಕುರಿಹಾಲಿನ ಪುಡಿಯ ಚಹಾಕುಡುಕರಿಂದ ತುಂಬಿದ ಸಭಾಮಂಟಪದಲ್ಲಿ ಸ್ಮಶಾನಶಾಂತತೆಯು ನಲಿದಾಡುತ್ತಿತ್ತು. ಮಂತ್ರಿವರ್ಯರಿಗೆ ಪ್ರಮುಖರ ಪರಿಚಯಮಾಡಿಕೊಡುವ ಘಟನೆ:]

ಸ್ವಾಗತಾಧ್ಯಕ್ಷರು:— (ರಾಜಪ್ಪನವರ ಪರಿಚಯವನ್ನು ಮಂತ್ರಿಗಳಿಗೆ ಮಾಡಿಕೊಡುತ್ತ) ಇವರು ನಮ್ಮೂರ ಪ್ರಸಿದ್ಧ ಹರಿಜನರು!

ಮುಂ:— (ನಾಟಕದ ಮುಗುಳ್ನಗೆಯಿಂದ) ನಮಸ್ಕಾರ.

ಸ್ವಾ. ಅ. :— ಸೇಂದಿ ಸೇವನದಲ್ಲಿ ತಮ್ಮ ಹೊಲ-ಮನೆಗಳನ್ನೆಲ್ಲ ಕಳೆದುಕೊಂಡು, ಪಾನನಿರೋಧ ಸುರುವಾದ ಕೂಡಲೇ ನೀರಾಕ್ಕೆ ಗಂಟು ಬಿದ್ದಿರುತ್ತಾರೆ.... (ಎರಡನೆಯವರು) ಇವರು ಕಳ್ಳಪೇಟೆ ಕರೆಪ್ಪನವರು. ಸರಕಾರದ ಸೀದಾ ಸಾಲದ್ದರಿಂದ ಸಾವಿರಾರು ಜನರು ಸಾಯುವ ಸಂದರ್ಭದಲ್ಲಿ, ಕಳ್ಳಪೇಟೆ ಮಾಡಿ ಕಾಳೊವಗಿಸಿಕೊಟ್ಟು, ಸಾವಿನ ದವಡೆಯಿಂದ ಸಾವಿರಾರು ಜನರನ್ನು ಮುಕ್ತಮಾಡಿ ಆರ್ಥಿಕ ದೃಷ್ಟಿಯಿಂದ ಅವರನ್ನು (ಮಂತ್ರಿಗಳ ನಮಸ್ಕಾರ ಚಾಲು) ಜೀನಂತ ಹೆಣಮಾಡಿದ ಅಖಂಡ ಶ್ರೇಯಸ್ಸು ಇವರದು!....ಇವರು ಗೌಡಪ್ಪನವರು....ಹಾಲೀ ಸಸ್ಪೆಂಡೀಗೌಡರು, (ಮಂತ್ರಿಗಳ ಕಿವಿಯಲ್ಲಿ) ಇವರ ವಿಷಯಕ್ಕೆ ಹಿಂದುಗಡೆ ಹೇಳುವೆ.... (ಮಂತ್ರಿಗಳ ನಮಸ್ಕಾರ ಚಾಲೂ) ಇವರು ಇಟ್ಟಪ್ಪನವರು. ಹಳ್ಳಿವಾಡದ ಹಿಟ್ಲರೆಂದು ಇವರ ಪ್ರಸಿದ್ಧಿಯಿದೆ. ಇವರೇನು ತಮಗೆ ಅಪರಿಚಿತರಲ್ಲ. ಹಿಂದಿನ ಇಲೆಕ್ಶನ್ ವೇಳೆಯಲ್ಲಿ ತಮಗೆ ತುಂಬಾ ಸಹಾಯ ಮಾಡಿದವರು ಮತ್ತು ಮುಂದಿನ ಇಲೆಕ್ಶನ್‌ದಲ್ಲಿ ಸಹಾಯ ಮಾಡುವವರು!

ಮುಂ.:— (ನಡುವೆ ಬಾಯಿ ಹಾಕಿ) ವ್ಯಜಾರಾಜ್ಯದ ಹೆಗ್ಗುರುತಾದ ಈ ಚುನಾವಣೆ ಪದ್ಧತಿ ನಮ್ಮ ರಾಷ್ಟ್ರದಲ್ಲಿ ಅಯಶಸ್ವಿಯಾಗಿದೆ. ನಮ್ಮಂಥಾ ಜನರನ್ನು ಇನ್ನು ಮುಂದೆ ಆರಿಸುವದಿಲ್ಲವಾದ್ದರಿಂದ, ಜನರಿಗೆ ಇಲೆಕ್ಶನ್ನಿನ ಮಹತ್ತ್ವ ತಿಳಿಯುವ ವರೆಗೆ ಚುನಾವಣೆಗಳನ್ನೇ ಮಾಡುವದಿಲ್ಲ....ಇದು ಸರಕಾರೀ ಅಧಿಕೃತ ಘೋರಣವಲ್ಲ.... ಸುದ್ದಿಗಾರರೇ.....ಇದು ನನ್ನ ವೈಯಕ್ತಿಕ ಅಭಿಪ್ರಾಯ.

ಸ್ವಾ. ಅ. :— ಇವರು ಬಟಾ ಬೈಲಪ್ಪಾ (ಮಂತ್ರಿಗಳ ನಮಸ್ಕಾರ ಚಾಲು) ಕಾಯಿದೆ ಕಾರಖಾನೆಯಿಂದ ಹೊರಬೀಳುವ ಸಾವಿರಾರು ಬಿಸಿಬಿಸಿ ಕಾಯಿದೆಗಳಿಂದ ಉಂಟಾಗುವ ಅನರ್ಥಗಳನ್ನು, ಆಯೋಸವಿಲ್ಲದೆ ಹೊಗಳುವ ಬಿನ್ ಸರಕಾರಿ ಭಟ್ಟಂಗಿ. ಇವರು. ಅಮಾನಿ ಗೌಡಕೀ ಜಾಗಕ್ಕೆ ಅರ್ಜಿ ಅಗಲೇ ಹಾಕಿದ್ದಾರೆ. ಇರಲಿ.... (ಮಾಮಲೇದಾರರಿಗೆ ಆಟ ಹೇಳಬಿಡ್ರಿ.) .....

ಮುಂ:— ಏನಿದು? ಮೊದಲಿನ ಕಾಲದ ಪರಿಚಯಪದ್ಧತಿ ಮಾಯನಾಗಿ ಬಿಟ್ಟಿದೆಯಲ್ಲ! ಪರಿಚಯಮಾಡಿ ಕೊಟ್ಟವರಲ್ಲಿ ಒಬ್ಬರಾದರೂ ಪಂಡಿತರು, ಜಮೀನದಾರರು, ಕಲಾವಿದರು.... ಯಾರೂ ಸಭೆಗೆ ಬಂದಿಲ್ಲವೇ?

ಸ್ವಾ. ಅ. :— ಆ ಮುಂದೀನೂ ಬಂದಿದ್ದಾರಿ; ಆಕಾ ಅಲ್ಲೆ ಕರೀ ನಿಶಾನಿ ಹಿಡಕೊಂಡು ಬರತೊಡಗಿದ್ದಾರೆ. ಇರಲಿ, ಮಾನಪತ್ರ ಸ್ವೀಕರಿಸುವ ವೇಳೆಯಾಯಿತು. (ಮಂತ್ರಿವರ್ಯರು ತಮ್ಮ ಸ್ಥಾನವನ್ನು ಅಲಂಕರಿಸುತ್ತಾರೆ.)

ಸ್ವಾಗತಾಧ್ಯಕ್ಷರು ಮಾನಪತ್ರವನ್ನು ಓದುತ್ತಾರೆ:—

ಮಾನ್ಯಮಂತ್ರಿವರ್ಯರೇ,

ನಮ್ಮೂರಿನವರೇ ಆದ ತಾವು, ೧೯೪೭ನೆಯ ಇಸ್ವಿಯ ವಿಘಾತಕ ಚಳವಳಿಯಲ್ಲಿ ಪ್ರಥಮತಃ ಮುಂದೆ ಬಂದು ಭಾಗ ತೆಗೆದುಕೊಂಡದ್ದಕ್ಕೆ ಪಾರಿತೋಷಕವಾಗಿ ಕೊಟ್ಟ ಮಂತ್ರಿಪದವಿಗೆ ತಾವು ತುಂಬಾ ಅರ್ಹರೇ ಅನ್ನಬೇಕಾಗುವುದು. ನಿರಕ್ಷರಿಗಳಾದರೂ ಕೂಡಾ ಇತಿಹಾಸದ ಪಾನುಗಳನ್ನು ಬೆಳಗಿದ ಶಿವಾಜಿ, ಹುಕ್ಕ-ಬುಕ್ಕ-ಪೈದರರಂತೆ ತಾವಾದರೂ ತಮ್ಮ ಮೇಂದೂದ ಬ್ಯಾಟ್ರಯಿಂದ ಸದ್ಯದ ಇತಿಹಾಸದ ಪುಟಗಳ ಮೇಲೆ ಬೆಳ್ಳಂಬೆಳಕು ಕೆಡವದೆ ಇರಲಾರಿರೆಂದು ನಮ್ಮ ಅಂತರಂಗವು ಪದೇ ಪದೇ ಹೇಳ ತೊಡಗಿದೆ. (ಪ್ರಚಂಡ ಕರತಾಡನ) ಕೇವಲ ಛತ್ತೆಯಿಂದ ಶೃಪ್ತರಾದ ತಾವು ಪಗಾರದ ಕಡೆಗೆ ಎಳ್ಳಷ್ಟು ಆಶೆಯಿಲ್ಲದೆ—ನಿಮ್ಮ ಪಗಾರದಷ್ಟು ಈಗೊಬ್ಬ ಸರ್ವೇ ಸಾಧಾರಣ ಪೋಲೀಸನು ಗಳಿಸುತ್ತಾನೆ—ನಿತ್ಯ ಸಂಚಾರವ್ರತವನ್ನು ಕೈಕೊಂಡು ಸ್ವಜನರ ಹಿತವನ್ನು ಸಾಧಿಸಿರುವಿರಿ. ನೀವು ಮಂತ್ರಿಮಂಡಲದಲ್ಲಿರುವಾಗ, ನಿಮ್ಮ ಮಂತ್ರಿಮಂಡಲವು ಬ್ರಿಟಿಷರ ಆಳಿಕೆಯನ್ನು ಮರೆಸಿ ಬಿಡುವದರಲ್ಲಿ

ಂದೇಹವೇಕೆ? ಬ್ರಿಟಿಷರೂ ಸಹಾ ಮಾಡಲಿಕ್ಕೆ ಹಿಂದು ಮುಂದೆ
ೋಡಿದ ಎಷ್ಟೋ ಕಾರ್ಯಗಳನ್ನು ತಾವು ಧೈರ್ಯದಿಂದ
ಮಾಡುವಿರಿ. ಇದ್ದ ಬಿದ್ದ ಟೀಕಾಕಾರರಿಂದ ನಿಮ್ಮ ಕಾರ್ಯ
ುಂಠಿತವಾಗಬಹುದೆಂದು ಗುಂಡಾಕಾಯಿದೆ, ವೃತ್ತಪತ್ರ
ಿಯಂತ್ರಣ ಕಾಯಿದೆಗಳನ್ನು ಹೇರಳವಾಗಿ ಬಳಕೆಗೆ ತಂದು,
ಪೋಲೀಸ ರಾಜ್ಯಶಕಟವನ್ನು ಸಪ್ಪಳಮಾಡದೆ ಸಾಗಿಸಿದ್ದಕ್ಕಾಗಿ,
ನಿಮ್ಮ ಮಂತ್ರಿಮಂಡಲವನ್ನು ಶ್ಲಾಘಿಸದೆ ಇರಲಾರೆವು. ತಾಸನ
ಸಭೆಯಲ್ಲಿ ವಿರೋಧಿಪಕ್ಷ ಇಲ್ಲದಿರುವದು ಶುಭಸಂಗತಿ. ತನ್ಮೂ-
ಲಕ ಸ್ವಲ್ಪೇ ಅವಧಿಯಲ್ಲಿ ಸಾವಿರಾರು ಕಾಯಿದೆಗಳನ್ನು ಮಾಡಿ,
ಈ ಪರಿಸ್ಥಿತಿಗೆ ತಾವು ಕಾರಣರೆಂದು ನಾವು ತಮ್ಮ ಬೆನ್ನು ತಟ್ಟ
ೇಳುತ್ತೇವೆ. ಋಣಪರಿಹಾರ ಕಾಯಿದೆಯಿಂದ ಶ್ರೀಮಂತರು
—ಉಳಿದಿದ್ದರೆ—ನಮ್ಮ ಹೆಸರು ತೆಗೆಯುವಂತಿಲ್ಲ. ಆದರೂ ನಮಗೆ
ೀಕಾದಾಗ ಬೇಕಾದಷ್ಟು ಸಾಲವನ್ನು ಅವರು ಕೊಡಬೇಕೆಂಬ
ಲ್ಮನ್ನು ಆದರಲ್ಲಿ ಸೇರಿಸಬೇಕೆಂದು ನಮ್ಮ ನಮ್ರ ಸೂಚನೆ.
ಾಗೆ ಮಾಡುವದರಿಂದ ಸರಕಾರಕ್ಕೆನೂ ಹಾನಿಯಿಲ್ಲ. ನೀವು
ೂಡುವ ತಗಾಯಿ ಸಹಿತ ಉಳಿಯುವದು. ನಾಲ್ಕಾರು ವರ್ಷ
ಳಲ್ಲಿ ಮೂರು ನಾಲ್ಕು ಜನ್ಮತಾಳಿದ ನೂತನ ಬೆನಸ್ಸಿ ಕಾಯಿದೆ
ುಂದ ರೈತಬಾಂಧವರಿಗೆ ಹಿಡಿಸಲಾರದಷ್ಟು ಸಂತೋಷವಾಗಿದೆ.
ದರೆ ಪಾರ್ಟ ಬದಲಾದರೂ ಈ ಕಾಯಿದೆ ಬದಲಾಗದೆ, ತ್ರಿಕಾಲಾ-
ಾಧಿತ ಉಳಿಯಬೇಕೆಂಬ ಕಲ್ಮನ್ನು ಆದರಲ್ಲಿ ಸೇರಿಸಬೇಕು;
ಎತ್ತು ನಮ್ಮಲ್ಲಿ ದುಡಿಯುವ ಜೀತ ಮುಂತಾದ ಆಳುಗಳು ಹೆಚ್ಚಿಗೆ
ೂಲಿ ಬೇಡಬಾರದೆಂಬ ಮತ್ತೊಂದು ಉಪಕಲ್ಮನ್ನು ಆದಕ್ಕೆ
ೂಡಿಸಬೇಕೆಂದು ಈ ಸಭೆಯು ಅಂಗಲಾಚಿ ಬೇಡಿಕೊಳ್ಳುತ್ತದೆ.
ಹರಗಳಲ್ಲಿ ಜಾರಿ ಇದ್ದ ವಸತಿಕೊರತೆ ನೀಗಿಸುವ ಕಾಯಿದೆಯನ್ನು
ಳಿಗಳಿಗೂ ಅನ್ವಯಿಸಿ, ಜವಾರಿ ಆರಮನೆಗಳಂತಿದ್ದ ದೇಸಾಯಿ-
ೀಶಪಾಂಡೇರ ವಾಡೆಗಳನ್ನು ನಮಗೆ ಬಿನ್‌ಬಾಡಿಗೆಯಿಂದ ಆ-
ಂದ್ರಾರ್ಕ ಕೊಡಿಸುವದರಲ್ಲಿ ಬರಬೇಕು. ಸೆಗಣಿಯನ್ನು (ಅದೂ
ತಕಿ ಹುಟ್ಟುವಳಿ) ಮಾರಲಿಕ್ಕೆ ಸಹಾ ಲಾಯಸೆನ್ಸ್ ಮಾಡಿ-
ಶ್ಯಪಾಸ್ಥರನ್ನು ಹಂಣುಮಾಡಿದ್ದು ನೋಡಿ ನಮಗೆ ಜರ್ಜವಾಯು
ಾಗಿದೆ. ಶೆಟ್ಟಿ-ಶೇಡಜೀಗಳು ಕಳ್ಳಪೇಟೆಯಲ್ಲಿ ಕಾಲಿಡಕೂಡದೆಂಬ
ತ್ತು ರೈತರು ೧೯೫೨ನೇ ಇಸ್ವಿಯವರೆಗೆ ಕಳ್ಳಪೇಟೆಮಾಡಿ ತಮ್ಮ
ರ್ಥಿಕವೃದ್ಧಿಯನ್ನು ಮಾಡಿಕೊಳ್ಳುವ— ಕಾಯಿದೆ ಮಾಡುವದು
ಮಸ್ಯಾಪ್ತವಾಗಿದೆ. ಆಹಾರಧಾನ್ಯ, ಹತ್ತಿ ಬೆಳೆಯುವ ನಮ್ಮ
ತರ ಮೇಲೆ ಅವಲಂಬಿಸಿದ ಶಹರನಿವಾಸಿಗಳು, ತಾವು ತಿನ್ನುವ
ಶನ್ ಅನ್ನವನ್ನು ಕಳ್ಳತನದಿಂದ ತಿನದಂತೆ ಮಾಡಿದ್ದಕ್ಕಾಗಿ
ಕಾರಕ್ಕೆ ಧನ್ಯವಾದಗಳನ್ನರ್ಪಿಸುತ್ತೇವೆ. ಹಳ್ಳಿಯವರು ಹುಂಬ.
ದು ಹಳಿಯಬಾರದು. ವ್ಯವಹಾರಜ್ಞಾನವು (ಕಾಮನ್‌ಸೆನ್ಸ್)
ೈಯವರನ್ನು ಬಿಟ್ಟು ಬೇರೆಯವರಲ್ಲಿಲ್ಲ. ಹಳ್ಳಿಯ ನಾಡಾದ
ಮ್ಮ ದೇಶದಲ್ಲೆಲ್ಲ, ಸಂಪೂರ್ಣ ಹುಂಬ ಹಳ್ಳಿಗರ ಮಂತ್ರಿಮಂಡಲ
ನ್ನು ರಚಿಸುವದು ಕಾಲೋಚಿತವಾಗಿದೆ. ಇಷ್ಟೇ ಅಲ್ಲದೆ
ನಮ್ಮೂರಿನ ಈ ನಿರಕ್ಷರಿ ಇರಬದ್ರನು ಎಂದು ಹಿಂದುಸ್ಥಾನದ
ಪ್ರಧಾನ ಅಮಾತ್ಯನಾಗುತ್ತಾನೊ ಆದೇ ಸುದಿನ. (ಪ್ರಜಂಡ
ಕರತಾಡನ) ದೇವರು ತಮಗೆ ಆಯುರಾರೋಗ್ಯವನ್ನು ದಯಪಾಲಿಸಿ
ಈಗಿನಂತೆ ರಾಜ್ಯ—ಅಲ್ಲ—ರಾಷ್ಟ್ರ ನಡಿಸಲಿಕ್ಕೆ ಸಾಮರ್ಥ್ಯವನ್ನು
ನೀಡಲಿ.

(ಊದಿನ ಕಡ್ಡಿ ಕೊಳವೆಯಲ್ಲಿ ಇರಿಸಿದ ಮಾನಪತ್ರ ಸುರುಳಿಯ
ಸಮರ್ಪಣೆಯ ಸಮಾರಂಭ ಸಮಾಪ್ತಿಯಾಯಿತು. ಮಾನ್ಯ ಮಂತ್ರಿ
ಗಳು ಉತ್ತರರೂಪವಾಗಿ, ಹರಿತವಾದ ತಮ್ಮ ನಾಲಿಗೆಯನ್ನು
ಹಳ್ಳಿ-ಗರ ಮೇಲೆ ಹರಿಬಿಡುತ್ತಾರೆ.)

ಮಂತ್ರಿಗಳು:—ಹಳ್ಳಿಯ ಬಾಂಧವರೆ, ನೀವೇ ನಮ್ಮ ದೇಶದ
ಹೊನ್ನು, ನಮ್ಮ ರಾಷ್ಟ್ರದ ಅಮೂಲ್ಯ ಭಂಡವಲು. ನೀವಿದ್ದರೆ
ನಮ್ಮ ಬಾಳು; ಇಲ್ಲವಾದರೆ ಎಲ್ಲವೂ ಹಾಳು. ನೀವು ಬೇಡಿ-
ಕೊಂಡಂತೆ ರಂಟೆ ಹಿಡಿಯವ ರೈತನ ಕೈ ರಾಷ್ಟ್ರಶಕಟವನ್ನು ನಡಿ-
ಸುವುದೇ ಸೈ. ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಗೆ ನಮ್ಮ ದೇಶವು
ಒಗ್ಗಲಾರದು. ಚುನಾವಣೆ ಪದ್ಧತಿಯಂತೂ ನಮ್ಮ ದೇಶದ
ಪರಿಸ್ಥಿತಿಗೆ ತೀರ ಅಯೋಗ್ಯ. ಚುನಾವಣೆ ಪದ್ಧತಿಯಿಂದ ನಿಮ್ಮೂರ
ಬರಮಣ್ಣನು ಎಂದೂ ಪ್ರಧಾನ ಅಮಾತ್ಯನಾಗಲಾರ. ಚುನಾವಣೆ
ಚಿನ್ನದಾಟ; ಧನಿಕರೇ ಆರಿಸಿ ಬರುವರು. ಆದ್ದರಿಂದ ಇಲೆಕ್ಶನ್
ಬೇಡ. ಬೇಡಾ ಆ ಸಾವಕಾರೀ ಸಾಶ. ತಿರುಕನ ಕೊರಳಿನಲ್ಲಿ

ಸುಖಕರವಾದ ವಸತಿ! .... ರುಚಿಕರವಾದ ಊಟ!

ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತ ಮ ಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟ್ಯಾಂಡಿಗೆ
ಸಮೀಪ, 'ಶಕ್ತಿ ಟಾಕೀಜ್' ಹತ್ತಿರ

ಒಡೆಯರು—ಎಲ್. ಪಿ. ಮಾರಕೋಡ

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ
ಔಷಧಿ!

★

ಡಾ. ವಾಮನ ಗೋಪಾಳ
ಇವರ
ಸಾಸ್ರಾ ಪರಿಲ್ಲಾ

ಆನೆಯು ಅರಸೊತ್ತಿಗೆಯ ಮಾಲೆಯನ್ನು ಹಾಕುವ ಪದ್ಧತಿಯೇ ಮಿಗಿಲಾದ ಪದ್ಧತಿ. ಚುನಾವಣೆಯ ಬದಲು ಇಂಥ ಪದ್ಧತಿಯು ಬೇಕು. (ಕರತಾಡನ) ನಮ್ಮ ಸರಕಾರದ ಕೃತಿಗಳನ್ನು ಹೃದಯ ಪೂರ್ವಕ ಹೊಗಳಿದ್ದನ್ನು, ಪ್ರಾಂತಿಕ ಸರಕಾರಗಳು ಮುನಸಿಪಾಲ್ಟೀ ನಮೂನೆಯವಾಗಿವೆ— ಎನ್ನುವ ಕರೆ ನಿಶಾನಿಧಾರಿಗಳಾದ ಟೀಕಾಕಾರರು ಕಣ್ಣು ತೆರೆದು ನೋಡಲಿ, ಕಿವಿಗಳನ್ನು ಅರಳಿಸಿ ಕೇಳಲಿ. ನಮ್ಮ ನಮ್ಮ ಸರಕಾರಕ್ಕೂ ಕರೇನಿಶಾನಿ ತೋರಿಸುವಷ್ಟು ಅರಾಷ್ಟ್ರೀಯ ಮನೋವೃತ್ತಿಯ ಜನರಿರುವದು ಶೋಚನೀಯ! (ಚಪ್ಪಾಳೆ) ಎಲ್ಲ ಜನರನ್ನೂ ಸಂತುಷ್ಟಪಡಿಸುವದು ಯಾರಿಗೂ ಎಂದೂ ಸಾಧ್ಯವಿಲ್ಲ. ಅಸಂತುಷ್ಟ ಜನರು ರಾಮರಾಜ್ಯದಲ್ಲಿ ಕೂಡಾ ಇದ್ದರು. ಅಂದ ಮೇಲೆ ಈಗಿರುವರೆಂಬಲ್ಲಿ ಸೋಜಿಗವೇನು! ಪುಸ್ತಕೀಜ್ಞಾನವಿದ್ದವರಿಗೆ ವ್ಯವಹಾರಜ್ಞಾನ ಕಡಿಮೆ ಮತ್ತು ಹಳ್ಳಿಯವರೇ ಮಂತ್ರಿಗಳಾಗಲಿಕ್ಕೆ ಅರ್ಹರೆಂಬ ಉದಾತ್ತ ತತ್ತ್ವದ ಕಡೆಗೆ ನನ್ನ ಸರಕಾರದ ಲಕ್ಷ್ಯವನ್ನು ಸೆಳೆಯುವೆನು. ಚುನಾವಣಿ ಪದ್ಧತಿಯು ತಾವನ್ನುವಂತೆ ಸದೋಷವಾಗಿದೆ. ಮಾರಾಮಾರಿ (ಟಾಸಿಂಗ) ಪದ್ಧತಿಯಿಂದ ಎಂ. ಎಲ್. ಎ.ಗಳನ್ನು ಆರಿಸುವದು ಯಾವ ಹಿಂದೀ— ಕ್ಷಮಿಸಿರಿ ನಮ್ಮದು ಜಾತ್ಯತೀತ ರಾಷ್ಟ್ರ— ಅಸಾಕಿಸ್ತಾನಿ ಫೆಟನಾತಜ್ಞರಿಗೂ ಹೊಳೆದಿಲ್ಲ. ಅದೊಂದು ಸುಂದರ ಸೂಚನೆ. ಮುಂಬರುವ ಚುನಾವಣೆಗಳು ಆ ಪದ್ಧತಿಯಂತೆ ನಡಿಯಲೆಂದು ಹಾರೈಸುವೆ. ತಮ್ಮ ಬೇಡಿಕೆಗಳನ್ನು ನಮ್ಮ ಗಾಂಭೀರ್ಯ ಗಜಗತಿಯಿಂದ ಸಾಗುವ ನೌಕರವರ್ಗದ ಮುಂದೆ ಇಡುತ್ತೇನೆ. ನಾವು ಮಾಡಿದ ಕೆಲವು ಕಾಯಿದೆಗಳನ್ನು ತ್ರಿಕಾಲಾಬಾಧಿತ ಮಾಡಿರೆಂದು ಕೇಳಿಕೊಂಡಿದ್ದೀರಿ; ನಮ್ಮ ಸರಕಾರವು ಅಸ್ಥಿರವೆಂಬ ನಿಮ್ಮ ಸಂಶಯದಲ್ಲಿ ಹುರುಳಿಲ್ಲ. ನಮ್ಮ ಕಾಯಿದೆಗಳಿರುವ ವರೆಗೆ ನಾವಿರುವೆವು; ನಾವಿರುವ ವರೆಗೆ ನಮ್ಮ ಕಾಯಿದೆಗಳಿರುವವು. (ಚಪ್ಪಾಳೆ). ನಾವು ಜನರ ಕಷ್ಟ-ನಷ್ಟಗಳನ್ನು ತಿಳಿಕೊಳ್ಳುವದರ ಸಲುವಾಗಿ ವಿಮಾನದಲ್ಲಿ ತಿರುಗಾಡಿದರೆ 'ಭತ್ತೇ ಸಲುವಾಗಿ' ಎಂದು ಕೆಲವರು ಟೀಕಿಸುವರು. ರಾಜಧಾನಿಯನ್ನು ಬಿಟ್ಟು ಕದಲದಿದ್ದರೆ 'ಒಂಟಿಯ ಮೇಲೆ ಕುಳಿತು ಕುರಿ ಕಾಯುವ ರಾಜ್ಯ ಕಾರಭಾರಿ'ಗಳೆನ್ನುವರು. ಜನತೆಯ ಬೆಂಬಲವು ನಮ್ಮ ಸರಕಾರಕ್ಕೆ ಇದೆ. ಪ್ರಾಂತದ ಯಾವ ಮೂಲೆಯಲ್ಲೇ ಅಗಲಿ ಹಾಲಿನ ಪುಡಿಯ ಚಹಾಪ್ರಚಾರ ಪ್ರಚುರಗೊಳಿಸಲಿಕ್ಕೆ ತೆರೆಯುವ ಚಹಾದ ಅಂಗಡಿಯನ್ನಾಗಲೀ ನೀರಾ ಕೇಂದ್ರಗಳನ್ನಾಗಲಿ ಉದ್ಘಾಟಿಸಲಿಕ್ಕೆ ಮಂತ್ರಿಗಳನ್ನೇ ಆಮಂತ್ರಿಸುತ್ತಾರೆ. ಇದ ಮಂತ್ರಿಗಳ ಮೇಲಿನ ವಿಶ್ವಾಸವನ್ನು ವ್ಯಕ್ತಮಾಡುವದಿಲ್ಲವೇ ನಮ್ಮ ನಮ್ಮ ಪಾತೆಯ ದೈನಂದಿನ ಕೆಲಸ ಮಾಡಲಿಕ್ಕೆ ಸಹ ನಮಗೆ ವೇಳೆ ಸಿಕ್ಕುವದಿಲ್ಲ. ಮತ್ತ್ಯಾವ ದೇಶದಲ್ಲಿ ಮಂತ್ರಿಗಳ ತಮ್ಮ ಕೆಲಸ ಬಿಟ್ಟು ಜನತಾಸೇವೆಗಾಗಿ ನಮ್ಮಂತೆ ತಿರುಗಾಡುತ್ತಾರೆ ಹೇಳಿರಿ! ಮಂತ್ರಿಗಳ ಸಂಚಾರಕಾರ್ಯಕ್ರಮದ ವಿವೃತ್ತಪತ್ರದಲ್ಲಿ ಏನೂ ಅಚ್ಚಾಗುವದಿಲ್ಲ. ಇದು ಏನನ್ನು ತೋರಿಸುತ್ತದೆ? ತಾತ್ಪೂರ್ತಿಕ ಒದಗಿದ ಅನ್ನ-ವಸ್ತ್ರ-ವಸತಿ ಕೊರತೆಯಿಂದ ನೀವು ಬದುಕಿ ಉಳಿದರೆ, ಸ್ವರಾಜ್ಯದ ಸಿಹಿಯನ್ನು ಸೇವಿಸಬಹುದು. ಅನ್ನ-ವಸ್ತ್ರ-ವಸತಿಯಂಥ ಕ್ಷುಲ್ಲಕ ಸಮಸ್ಯೆಗಳ ಊರ್ಧ್ವ ದೃಷ್ಟಿ ಅಥವಾ ಮೂರದೃಷ್ಟಿಯುಳ್ಳ ನಮಗೆ ಕಾಣುವವೆ ಇಲ್ಲ. ಬಡವರ ಶ್ರೀಮಂತೀಕರಣ, ಶ್ರೀಮಂತರ ಅಂತೀಕರಣ ರಾಜಕಾರಣದ ನಿಧರ್ಮೀಕರಣ, ಸಂಸ್ಥಾನಗಳ ವಿಲೀನೀಕರಣ ಸೇತಕಿ ಉದ್ಯೋಗ ವ್ಯಾಪಾರಗಳ ರಾಷ್ಟ್ರೀಕರಣ, ಭಾಷಾವಾರು ಪ್ರಾಂತೀಕರಣ, ವರ್ಗ-ವರ್ಣರಹಿತ ರಾಷ್ಟ್ರನಿರ್ಮಾಣ, ಸರ್ವೋದಯ ಸಮಾಜರಚನೆ, ಹಿಂದುಸ್ತಾನಿ ಪ್ರಚಾರ ಮುಂತಾದವುಗಳನ್ನು ಸಾಧಿಸುವದಕ್ಕಾಗಿ ಸಂಪೂರ್ಣ ಪಾನನಿರೋಧ, ಚುಟ್ಟಾ ಪ್ರತಿಬಂಧಕ, ಪಾನಪಟ್ಟೆ ಸೇವನ ಪ್ರತಿಬಂಧಕ, ದ್ವಿಪತ್ನೀ ವಿವಾಹ ಪ್ರತಿಬಂಧಕ — ಅದು ಪ್ರತಿಬಂಧಕ — ಇದು ಪ್ರತಿಬಂಧಕ — ಕಾಯಿದೆಗಳನ್ನು ಮಾಡಿದ್ದೇವೆ; ಮಾಡುತ್ತಾ ಇದ್ದೇವೆ; ಮಾಡುತ್ತಾ ಹೋಗುವೆವು—ಇಲ್ಲ ಹೋಗುವದಿಲ್ಲ. ಆದ್ದರಿಂದ ಸ್ವಲ್ಪ ತಾಳಿರೀ ಸ್ವಲ್ಪ ಬಾಳಿರಿ, ಅಂದರೆ ಭವ್ಯಭೂತಕಾಲದ ಹಿಂದುಸ್ಥಾನದ ದಿವ್ಯ ಭವಿಷ್ಯತ್ಕಾಲವನ್ನು ಕಾಣುವಿರಿ. ನಮ್ಮ ಸರಕಾರದಲ್ಲಿ ಸಂದೇಹ ಬೇಡ. ನಮ್ಮ ಸರಕಾರದಲ್ಲಿ ವಿಶ್ವಾಸವಿಡಿರಿ. ನಾವೇ ಪ್ರಚಂಡ ಬಹುಮತದಲ್ಲಿ ಆರಿಸಿ ಬರುತ್ತೇವೆಂದು ಅನಿಸುವ ವರೆಗೆ ಚುನಾವಣೆಗಳನ್ನು ಸಹ ಮುಂದೆ ಹಾಕಿ, ತಲೆಯಿಲ್ಲದ ಪ್ರತಿಸ್ಪರ್ಧಿಗಳನ್ನು ಬಂಧಿಸಿ ಅಥವಾ ಗಡಿಪಾರು ಮಾಡಿ, ಬಾಯಿಗೆ ಬಂದಂತೆ ಬೊಗಳುವ ಪ್ರತಿಪಕ್ಷಿ ವೃತ್ತಪತ್ರಗಳ ಬಾಯಿ ಮುಚ್ಚಿ, ನಿಮ್ಮ ಹಿತವನ್ನು ಸಾಧಿಸಿಯೇ ತೀರುವೆವು.

"ಜಯ್‌ಹಿಂದ್!"

ಕಲೆಯೋ ಕನಸೋ?

ಶ್ರೀ. ಜ್ಞಾನೋಳಕರ ಶ್ರೀಧರರಾಯರು, ಪುಣೆ

★

ಮನಸ್ಸಿನ ಪೇಟೆಯೊಳಗೆ ತನಗೆ ಬೇಕಾದುದನ್ನಷ್ಟೇ ಮೂರ್ತಿಶಕ್ತಿಯು ಸೌಂದರ್ಯದೃಷ್ಟಿಯಿಂದ ಆರಿಸಿಕೊಳ್ಳುತ್ತದೆ. ಯುಕ್ತಿಯುಕ್ತವಾಗಿ ಹೊಂದಿಸುತ್ತದೆ. ಮತ್ತೆ ಮೆರುಗುಕೊಡುತ್ತದೆ. ಈ ತ್ರಿವಿಧಕ್ರಿಯೆಯೇ ಕಲೆಯೆನಿಸಿಕೊಳ್ಳುವುದು.

★

ಕಲೆಯೊಂದು ಕನಸು. ಯಾವುದೊಂದು ಕಲಾಕೃತಿಯು ಕಲಾವಂತನ ಕನಸೆಂದು ಕರೆಯುವುದುಂಟು. ಕನಸೆಂದರೆ ಸುಳ್ಳು, ಸತ್ಯವಲ್ಲ. ಎಂದ ಮೇಲೆ ಎಲ್ಲ ಕಲಾಕೃತಿಗಳು ಮಾಯಾಮಯವಾಗಿರುವುವೆಂಬುದು ಸಿದ್ಧವೇ ಆಯಿತು. ಎಂದ ಮೇಲೆ ಈ ಕಲಾವಂತರೆ, ಶಿಲ್ಪಿಗಳ, ವಾಸ್ತುಕಾರರ, ವಾಗ್ಗೇಯಕಾರರ,— ಕೃತಿಗಳ ಕಡೆಗೆ ಗಮನಿಸಬಾರದಾಗಿ ಬಂತು! ಆದರೆ ವಸ್ತುಸ್ಥಿತಿಯನ್ನು ನೋಡಿದರೆ, ಯಾವುದಾದರೊಂದು ಶಿಲ್ಪ, ವಾಸ್ತು, ಚಿತ್ರ, ಕಾವ್ಯ, ಕೃತಿಯನ್ನು ಬಣ್ಣಿಸುತ್ತ ಒಂದೊಂದು ಜನಾಂಗವು ಆನಂದಮಯವಾಗುತ್ತದಲ್ಲ! ಕನಸಿಗೆ ಒಂದು ಹೊಸ ಅರ್ಥವಿರಬೇಕು. ಕಲೆಯು ಕೃತಿಯೋ, ಕನಸೋ?

ಇತ್ತೀಚಿನ ಅಧ್ಯಾತ್ಮಿಕಶೋಧಗಳಲ್ಲಿ ಮಾನಸಶಾಸ್ತ್ರವೊಂದು. ಹಲವು ಮಾನಸಶಾಸ್ತ್ರಜ್ಞರು, ವ್ಯವಹಾರದ ವಿಧವಿಧದ ಅಂಗಗಳು ಮಾನಸ-ಶಾಸ್ತ್ರದೃಷ್ಟಿಯಿಂದ ಹೇಗೆ ಉತ್ಪನ್ನವಾಗುವುವೆಂಬುದನ್ನು ಕೆಲವು ಟ್ಟಿಗೆ ಕಂಡುಹಿಡಿದಿದ್ದಾರೆ— ಕಂಡುಹಿಡಿಯುತ್ತಲೂ ಇದ್ದಾರೆ. ಫ್ರಾಯಿಡ್, ರಿಬಾಟ್, ಅಲ್‌ಡರ್, ಬಿಡೋಯಿಟ್ ಎಂಬ ಮಾನಸ-ಶಾಸ್ತ್ರಕೋವಿದರ ಹೆಸರುಗಳು ನೆನಪಿಡುವಂತಹವಿವೆ ಈ ಸಂದರ್ಭದಲ್ಲಿ. ಯುರೋಪದೊಳಗಿನ ತತ್ತ್ವಜ್ಞಾನಿಗಳೆಲ್ಲರೂ— ಅರಿಸ್ಟಾಟಲ್, ಪ್ಲೇಟೋನಿಂದ ಈಗಿನ ವರೆಗೂ— ಸೌಂದರ್ಯಶಾಸ್ತ್ರವನ್ನು (Aesthetics)— ಹೇಗೆ ಆಧ್ಯಾತ್ಮಿಕ ದೃಷ್ಟಿಯಿಂದ (Spiritually) ಅಭ್ಯಾಸಮಾಡಿರುವರೋ ಅದರಂತೆಯೇ ಈ ಮೇಲೆ ಕಾಣಿಸಿದ ಶಾಸ್ತ್ರಜ್ಞರು ಕಲೆಯ ಮಾನಸಶಾಸ್ತ್ರವನ್ನು ಅಭ್ಯಾಸಮಾಡಿರುವರು. ಇದೇ ಮನೋವಿವೇಚನೆ (psycho-analysis). ಕಲೆಯ ಮಾನಸಶಾಸ್ತ್ರವೆಂಬುದೊಂದು (pshychology of art) ಇದರ ಅಂಗವಾಗಿದೆ.

ಕಲೆಯು ಹುಟ್ಟುವುದು ಕಲಾವಂತನ ಅಂತಃಕರಣದಲ್ಲಿ (ಮನಸ್ಸಿನಲ್ಲಿ). ಕಲಾಕೃತಿಯು ಉತ್ತಮವಾದದ್ದೆನಿಸಿಕೊಳ್ಳಬೇಕಾದರೆ, ಸಾಕಷ್ಟು ಸಹೃದಯತೆ (ಸಂಸ್ಕೃತಿ) ಇದ್ದ ಮಾನವನ ಮನಸ್ಸಿಗೆ (ಆತ್ಮಕ್ಕೆ) ಆನಂದವನ್ನು ಕೊಡಬೇಕು. ಕಲಾವಂತನು ಕಲಾಕೃತಿಯ ನಿರ್ಮಿತಿಯನ್ನು ಮಾಡುವಾಗ ಅವನಿಗೆ ಆಗುವ ಆನಂದಕ್ಕೆ ಕಲಾನಂದವೆನ್ನೋಣ. ಅದರಿಂದ ರಸಿಕನಲ್ಲಿ ಹುಟ್ಟುವ ಆನಂದಕ್ಕೆ ರಸಾನಂದವೆನ್ನೋಣ. ಈ ಲೇಖನದಲ್ಲಿ ಕಲಾನಂದದ ವಿವೇಚನೆಯನ್ನು ಮಾಡಿ, ಮುಂದೆ ಇನ್ನೊಂದರಲ್ಲಿ ರಸಾನಂದವನ್ನು ವಿವೇಚಿಸೋಣ.

ಕಲಾಕೃತಿಗಳಲ್ಲಿ ಕಾವ್ಯವೇ ಆದರಲ್ಲಿಯೂ ನಾಟಕವೇ ಶ್ರೇಷ್ಠವಾದದ್ದೆಂಬುದು ವಿಹಿತನೇ ಆಗಿದೆ. ವಿಶ್ವವಿಖ್ಯಾತನಾಟ್ಯಕೋವಿದನಾದ ಷೆಕ್ಸಪೀಯರ್ ಕವಿಯು, ತನ್ನ ಕಲೆಯನ್ನು ಕುರಿತು 'ಕಾವ್ಯವೆಂದರೆ ಒಂದು ಹುಚ್ಚು; ಕವಿಯೂ ಹುಚ್ಚನೂ ನಲ್ಲನೂ ಒಂದೇ ಮಾದರಿಯ ಮಾನಸ-ಶಕ್ತಿಯುಳ್ಳವರು' ಎಂದು ಹೇಳಿರುವನು. ಎಂದ ಮೇಲೆ— ಕವಿಯೇ ಹೀಗೆಂದ ಮೇಲೆ— ಇತರರೀಗೇನು? ವಿಶೇಷತಃ ಕಲೆಯನ್ನು ಹೀಯಾಳಿಸುವವರ ನಾಲಿಗೆಯನ್ನು ಯಾರು ತಡೆಯಬೇಕು? ಓಹೋ, ಇವರು ಕವಿಗಳೇ! ಇವರ ಕಾವ್ಯವನ್ನು ಓದುವದರಲ್ಲಿ ಏನೂ ಅರ್ಥವಿಲ್ಲ. ಬರೇ ಕನಸು! ಬರೇ ಸುಳ್ಳು! ಬರೇ ಕಲ್ಪನೆ! ಹುಚ್ಚು!!!

ಇದೆಲ್ಲ ನಿಜವೇ; ಆದರೆ ಇದರ ಅರ್ಥ ಮಾತ್ರ ಇವರಿಗೆ ತಿಳಿಯದಷ್ಟು ಆಳವಾಗಿದೆ. ಕನಸೆಂದರೇನು? ಮಾನವನಿಗೆ ಮೂರು ಅವಸ್ಥೆಗಳಿರುವವು: ಜಾಗೃತಿ, ಸ್ವಪ್ನ, ಸುಷುಪ್ತಿ. ಮನುಷ್ಯನ ಜಾಗ್ರತಾವಸ್ಥೆಯಲ್ಲಿಯೇ ಅವನ ಎಲ್ಲ ವ್ಯವಹಾರವು ನಡೆಯುತ್ತದೆ. ಜಾಗೃದವಸ್ಥೆಯಲ್ಲಿ ದೇಹ; ಮನಸ್ಸು, ಬುದ್ಧಿ, ಅಹಂಕಾರ, ಆತ್ಮ— ಇವೆಲ್ಲವುಗಳು ಏಕತಾನತೆಯಿಂದ, ಹೊಂದಿಕೊಂಡು, ಒಗೆತನದಿಂದ ನಡೆದಿರುತ್ತವೆ. ಒಂದು ಚಿಕ್ಕಾಡು ಕಡಿದರೆ ತೀರಿತು; ದೇಹದಲ್ಲಿ ತುಂಬಿರುವ ಜ್ಞಾನತಂತುಗಳು ಅದನ್ನು ಕಂಡುಹಿಡಿದು, ಮನಸ್ಸಿಗೆ ತಂತಿಯನ್ನು ಕೊಡುತ್ತವೆ. ಬುದ್ಧಿಯು ಕೀಳಾಗಿರುವುದೆಂದು (not Serious) ಕರ್ಮೇಂದ್ರಿಯಗಳಿಗೆ ಹೇಳುವದು. ಒಂದು ಉಗುರು ಚಿಕ್ಕಾಡು ಕಡಿದ ಸ್ಥಳವನ್ನು ಕೆದರಿ, ಶ್ವೇತಜೀವಾಣುಗಳ ಕಡೆಯಿಂದ ಚಿಕ್ಕಾಡಿನ ವಿಷವನ್ನು ತೆಗೆದುಹಾಕುತ್ತದೆ. ಇದು ಜಾಗೃದವಸ್ಥೆಯಲ್ಲಿಯೇ ಶಕ್ಯವಿರುವ ಮಾತು. ಸುಷುಪ್ತಿ (ನಿದ್ದೆ) ಯಲ್ಲಿ ತಗಣಿ ಕಡಿಯುವುದು ಒತ್ತಟ್ಟಿಗೆ, ನಾವು ತುರಿಸುವುದೇ ಒತ್ತಟ್ಟಿಗೆ! ಹೀಗೆ ಏಕತಾನತೆಯಲ್ಲಿ ಭಂಗವುಂಟಾಗುತ್ತದೆ ನಿದ್ರೆಯಲ್ಲಿ. ಮುಂಜಾವಿನಿಂದ ರಾತ್ರಿ ಹತ್ತುಗಂಟೆಯ ವರೆಗೆ ನಡೆಯುವ ವ್ಯವಹಾರವೆಲ್ಲ ಜಾಗೃತಿಯಲ್ಲಿಯೇ (ನಮ್ಮಂಥವರದು. ಸುಖವಸ್ತುಗಳು ಮಧ್ಯಾಹ್ನ ಸುಖನಿದ್ರೆಯನ್ನು ತೆಗೆದುಕೊಳ್ಳುವ ರೂಢಿ. ಅವರದಷ್ಟು ಕಾಲ ವಜಾಮಾಡಿದರೆ ತೀರಿತು). ಅಮೇಲೆ ಬರುವುದು ನಿದ್ದೆ (ಸುಷುಪ್ತಿ). ಹತ್ತು ಗಂಟೆಯಿಂದ ಸುಮಾರು ೪ರಿಂದ ೬ರ ವರೆಗೆ (ನನ್ನದಾದರೆ ೯ರ ವರೆಗೆ) ಈ ಅವಸ್ಥೆ. ಒಳ್ಳೇ ಆರೋಗ್ಯವಂತನ ನಿದ್ರೆಗೂ ಮರಣಕ್ಕೂ ವ್ಯತ್ಯಾಸವಿರುವುದಿಲ್ಲ. ನಿದ್ರೆಹೋದವ ತಿರುಗಿ ಏಳುವನು, ಮರಣ-

ಬಂದವ ಏಳುವುದಿಲ್ಲ, ಇಷ್ಟೇ ಭೇದ. ನಿದ್ರೆ ಬರುವುದರಲ್ಲಿಯೂ ಭೇದಗಳಿವೆ. ಕೆಲವರಿಗೆ ಓದಿದ ಕೂಡಲೇ ನಿದ್ದೆ. ಕೆಲವರಿಗೆ ಅರ್ಧತಾಸು ಅತ್ತಿಂದಿತ್ತ ತಿರುಗಾಡಬೇಕು, ಕೆಲವರಿಗೆ ಅತ್ತಿಂದಿತ್ತ ಹೊರಳಾಡಬೇಕು. ನಿದ್ರೆಯಿಲ್ಲದವ ಪಾಪಿ. ಅವನಷ್ಟು ದುಃಖ ಇನ್ನಾರಿಗೂ ಇಲ್ಲ. ಆದುದರಿಂದ ವೈದ್ಯರು ಕೇಳುವ ಪ್ರಶ್ನೆಯು ಮಹತ್ತ್ವದ್ದಾಗಿರುವುದು. "ನಿದ್ರೆಯು ಬಂತೇ?" "ಇಲ್ಲ." ಡಾಕ್ಟರರ ಹಣೆಯು ಗಂಟಿಕ್ಕುವುದು. "ನಿದ್ರೆಯು ಬಂತೇ ನಿನ್ನೆ?" "ಓಹೋ ರಾತ್ರಿ ಊಟಮಾಡಿ ಹೀಂಗ ಬಿದ್ದೆ. ಮಲಗಿದ್ದೆನೋ ಸತ್ತಿದ್ದೆನೋ ಬೆಳತನಕಾ ಗೊತ್ತೇ ಆಗಲಿಲ್ಲ ಡಾಕ್ಟರರೇ!" ಅಂದರೆ "ಶಾಬಾಸ್, ಬೆಂಕೀಹಚ್ಚು ನನ್ನ ಔಷಧಕ್ಕೆ" ಎನ್ನುತ್ತಾರೆ ಡಾಕ್ಟರರು. ಇಷ್ಟು ಆರೋಗ್ಯಕರವಾದದ್ದು. ನಿದ್ರೆಯಲ್ಲಿ ಎಲ್ಲವೂ ಸುಸ್ಥವಾಗಿರುತ್ತದೆ. ರಕ್ತಚಲನೆ ಹಗುರಾಗಿ ನಡೆಯುತ್ತದೆ. ಹೃದಯವೂ ಹಗುರಾಗಿ ನಡೆಯುತ್ತದೆ. ಜಾಗೃತಿಯೂ ಮಂದವಾಗಿರುವುದು. ಹತ್ತೆಂಟು ಜನ ಮಲಗಿಕೊಂಡಿದ್ದಲ್ಲಿ "ರಾಮಾ" ಎಂದು ಕೂಗಿದರೆ, ಅದರಲ್ಲಿಯ ರಾಮನೇ ಎದ್ದು ಕೂಡುತ್ತಾನೆ. ಅವನ ಬದಿಯಲ್ಲಿಯೇ ಬಿದ್ದಿರುವ "ಲಕ್ಷ್ಮಣ"ನಿಗೆ ಆದರ ಅರಿವೇ ಇರುವುದಿಲ್ಲ- ಇದು ನಿದ್ರೆಯಲ್ಲಿಯ ಜಾಗೃತಿಯ ನಮೂನೆ. ಇನ್ನು ಇವೆರಡನ್ನು ಅಂದರೆ ಜಾಗೃತಿ-ಸುಷುಪ್ತಿಗಳನ್ನು ಬಿಟ್ಟರೆ, ಉಳಿದದ್ದು ಜಾಗೃತಿ-ಸುಷುಪ್ತಿಗಳ ಮಿಶ್ರಣ. ಇದಕ್ಕೇನೇ ಸ್ವಪ್ನವೆನ್ನುವರು.

ಕನಸು ಕಾಣದವರಿರುವರೇ? ಇಲ್ಲ. ಏಕೆಂದರೆ ಕನಸು ಮಾನಸ ಸರೋವರದ ಅಲೆಯಂತಿರುವುದು. ಕನಸು ಬೀಳಲಿಕ್ಕೆ ಸಾವಿರಾರು ಕಾರಣಗಳು ದಿನಾಲು ಉಂಟಾಗುತ್ತವೆ. ಒಂದು ಗಾಳಿಯ ತೆರೆಯು ಬೀಸಿದರೆ ಸಾಕು, ಸರೋವರದಲ್ಲಿ ಅನೇಕ ತರಂಗಗಳೇಳುವಂತೆ ಮನಸ್ಸಿನ ಅವಸ್ಥೆ. ಸ್ವಲ್ಪ ಅಸ್ವಸ್ಥತೆ, ಸ್ವಲ್ಪ ಕಿಂಚಿತ್ ತಲೆನೋವು, ಒಂದು ಸ್ವಲ್ಪ ಹಾನಿ—ಕನ್ನಡಕದ ಕನ್ನಡಿ ಒಡೆಯಿತು, ಹತ್ತು ರೂಪಾಯಿ ಗಂಟಿನೊಳಗಿಂದ ವಜಾ—ಬತ್ತೇ ಕನಸು. ಲಾಭಕ್ಕಿಂತಲೂ ಹಾನಿಗೆ ಒಲಿಯುವುದು ಕನಸು. ದುಃಖ ಬಂದರಂತೂ ಕನಸುಗಳೂ ಕನವರಿಕೆಗಳೂ, ಬೆಳ್ಳಬೆಳತನಕ ನಡೆದೇ ಇರುವುವು. ಯಾರಿಗಾದರೂ ಜೀರಾಗಿರುವುದೆಂದು ಕಲ್ಪಿಸುವಾ. ಆಗ ಮನಸ್ಥಿತಿಯು ತೂಗುಹಾಕಿದಂತೆಯಾಗಿರುವುದಿಲ್ಲವೇ? ಸಾಯುತ್ತಾನೋ ಉಳಿಯುತ್ತಾನೋ ಎಂಬ ದೋಲಾವಸ್ಥೆ ಕನಸಿಗೆ ಹಾಸಿಗೆ ಹಾಸಿ ಕೊಟ್ಟಂತೆ. ಮರಣದ ದುಃಖದಲ್ಲಿ ಅಷ್ಟು ಕನಸು ಬೀಳಲಾರವು. ಅಜೀರ್ಣವೊಂದು ಕನಸಿಗೆ ಕರೆ. ಭಾವನಾತ್ಮಕ ಓದು ಇದೊಂದು ಕಾರಣ. ಎಷ್ಟೆಂದು ಹೇಳಬೇಕು? ತಮ್ಮಷ್ಟಕ್ಕೆ ತಾವೇ ಅನುಭವದಿಂದ ತಿಳಿದುಕೊಳ್ಳಬೇಕಾದ ವಿಷಯ; ದುಡ್ಡು ಕೊಟ್ಟು ಹೇಳಿಸಿಕೊಳ್ಳುವ ವಿಷಯವಲ್ಲ. ಕನಸು ಅಷ್ಟು ಸಮೀಪ, ಅಷ್ಟು ಸುಲಭ. ಕನಸು ಸುಷುಪ್ತಿಯಲ್ಲಿ ಹೆಚ್ಚು. ಕಟ್ಟಿ ಕಡೆಗೂ ಬೀಳುವುದುಂಟು; ಎರಡು ನಿದ್ರಾಸಮಯಗಳ ಸಂಧ್ಯಾಕಾಲದಂತೆಯೂ ಬೀಳಬಹುದು. ಕನಸು ರಾತ್ರಿಯಲ್ಲಿಯೇ ಬೀಳುವುದು ಸಹಜವಾದರೂ, ಬಿಸಿಲಿನ ಕಾಲದಲ್ಲಿ ಹಗಲಿನಲ್ಲಿಯೂ ಬೀಳಬಹುದು. (Midsummer Night's Dream ನಂತೆ Day dream ವೂ ಆಗುವುದು, midsummer ಮಾತ್ರ ಬೇಕು.)

ಇದೆಲ್ಲ ಸರಿ! ಆದರೆ ಕನಸು ಸುಳ್ಳು ಅನ್ನುವರಲ್ಲ! ಅದೇನು? ಅದೆಂದರೆ ಕನಸಿನಲ್ಲಿ ಕಾಣುವುದು ಸುಳ್ಳು. ಕನಸಿನಲ್ಲಿ ನೋಡಿದ್ದೆಲ್ಲ ಸತ್ಯವಲ್ಲ. ಇದ್ದಹಾಗೆ ಕನಸಿನಲ್ಲಿ ಕಾಣುವುದಕ್ಕೆ ನಿಜದ ಕನಸು ಎನ್ನೋಣ. ಜಾಗೃತಿಯಲ್ಲಿ ನೋಡಿದ ವಿಷಯವೇ ಇದ್ದಕ್ಕಿದ್ದ ಹಾಗೆ ಬರುವುದೆಂಬ ನಿಯಮವಿಲ್ಲ. ಅವರಲ್ಲಿ ಭೇದವುಂಟಾಗುವುದು. ರೂಪಭೇದವೂ ಆಗಬಹುದು; ಕಾಲಭೇದವೂ ಆಗಬಹುದು. ಜಾಗೃತಾವಸ್ಥೆಯಲ್ಲಿ ಅತಿ ಚಿಕ್ಕದಿನಿಂದಲೂ ಆದ ಜ್ಞಾನವು ಸಂಸ್ಕಾರರೂಪದಿಂದ ನಮ್ಮ ಬಿಣ್ಣೆಯಂತಹ ಮಿದುಳಿನಲ್ಲಿ ಗೆರೆಯ ರೂಪದಿಂದ ಇರುವುದು. ಸುಖದ ಗೆರೆ ತೀರ ಮಸುಕು ದುಃಖದ ಗೆರೆ ಆಳವಾದದ್ದು — ದಪ್ಪ. ಅದೇ ಅದೇ ಕಾರಣದಿಂದ ಅದೇ ಅದೇ ಸುಖ-ದುಃಖವುಂಟಾಗಿ, ಅದೇ ಗೆರೆಯು ದಪ್ಪವಾದದ್ದೂ ಢಾಳವಾದದ್ದೂ ಆಗುವುದು. ಅದಕ್ಕೆ ಯಾವುದೇ ಕಾರಣದಿಂದ ಚಲನವು ಸಿಕ್ಕಿತೆಂದರೆ, ಅದೇ ಒಂದು ಕನಸಾಗುವುದು ನಿದ್ರೆಯಲ್ಲಿ. ಜಾಗೃತಾವಸ್ಥೆಯಲ್ಲಿ ಇದಕ್ಕೇ 'ನೆನಪಿಗೆ ತಂದುಕೊಳ್ಳುವುದು' ಎನ್ನುವದುಂಟು. ನಿದ್ರೆಯಲ್ಲಿಯೂ ನೆನಪಿಗೆ ತಂದುಕೊಳ್ಳುವ ಸಮಯದಲ್ಲಿಯೂ ಕಣ್ಣು ಮುಚ್ಚಿಯೇ ಕಾರಭಾರ ನಡೆಯುತ್ತದೆಂಬುದನ್ನು ಎಲ್ಲರೂ ಅರಿತಿರುವ ವಿಷಯ. ಕನಸಿನಲ್ಲಿ ಬರುವುದೆಂದರೊಂದು ರೂಪ (image). ಇದು ನಮ್ಮಲ್ಲಿರುವ ಕಲ್ಪನಾ ಶಕ್ತಿಯ ಪ್ರಪಂಚ (imagination). ಈ ಮೂರ್ತಿಶಕ್ತಿಯು ಬುದ್ಧಿಗಿಂತ ಭಾವ (emotion) ಕ್ಕೆ ಸಮೀಪ. ಆದ್ದರಿಂದ ಯಾವುದಾದರೊಂದು ಭಾವನೆಯ ವಶದಲ್ಲಿದ್ದಾಗ, ಮೂರ್ತಿಶಕ್ತಿಯು ಕೆಲವು ರೂಪಗಳನ್ನು ನಿರ್ಮಿಸುವುದು— ಅದೇ ಕನಸು.

ಇದ್ದಕ್ಕಿದ್ದ ಹಾಗಿನ ಅಸರೂಪ ಕನಸುಗಳನ್ನು ಬಿಟ್ಟರೆ, ಕನಸು ಮೂರು ತೆರದುವು: ಒಂದು ದಬ್ಬಾಳಿಕೆಯಿಂದ (repression) ಎರಡನೆಯದು ಬದಲಿನಿಂದ (displacement); ಮೂರನೆಯದು ಸಂಯೋಗದಿಂದ (condensation). ಇವೆಲ್ಲ ಭಾವನೆಗಳ ರೂಪಗಳು. ಯಾವುದಾದರೊಂದು ಭಾವದ ದಬ್ಬಾಳಿಕೆ: ಒಬ್ಬ ಚಿಕ್ಕ ಹುಡುಗನಿಗೆ ಆಡುವ ವಿಮಾನ ಬೇಕು. ಅಳುತ್ತಾನೆ. ತಾಯಿಯನ್ನು ಕಾಡಿಸುತ್ತಾನೆ, ಹೊರಳಾಡುತ್ತಾನೆ ಓಣಿಯೊಳಗೆ. ಅಪ್ಪರಲ್ಲಿ ಹೊಡೆತ ಕೊಡುವ ತಂದೆಯು ಹೊರಗಿನಿಂದ ಬರುತ್ತಾನೆ. ಅವನ ವಿಮಾನೇಚ್ಛೆಯ ದಬ್ಬಾಳಿಕೆಯಾಗುತ್ತದೆ. ವಿಮಾನ ಬೇಕೆಂಬ ಭಾವನೆಯು ಅವನ ಮನಸ್ಸಿನಲ್ಲಿ ಢಾಳವಾಗಿದ್ದರೂ ಬಹಿರಂಗದಲ್ಲಿ ಅಡಗಿ ಹೋಗಿರುತ್ತದೆ— ಅವನೂ ಎಲ್ಲಿಯೋ ಸಂದಿಗೊಂದಿಯಲ್ಲಿ ಅಡಗಿಕೊಂಡಂತೆ. ಆಕಸ್ಮಾತ್ತಾಗಿ ಆಡುವ ವಿಮಾನವನ್ನೇ ತಂದೆಯು ತಂದಿದ್ದರೆ? ಓಹೋ, ಹುಡುಗನು ಇದ್ದಲ್ಲಿಂದ ಬಂದು ಆಂಗಿಯಿಂದ ಉಳಿದ ಕಣ್ಣೀರ ಹನಿಗಳನ್ನು ಒರಸಿ ಆನಂದಿತನಾಗುತ್ತಾನೆ. ಆ ಮೇಲೆ ಕನಸಿನಲ್ಲಿ ವಿಮಾನ ಕಾಣುವುದು ಕಡಿಮೆ. ಕನಸಿನಲ್ಲಿ ಬಂದರೂ ಅದು ತನ್ನ ಕಲ್ಪನೆಯ ವಿಮಾನವಲ್ಲ; ನೋಡಿದ್ದೆ

ಮುಕ್ಕಾಲುಪಾಲು ಬರುವುದು. ಒಬ್ಬನಿಗೆ ಕಣ್ಣು ಮುಚ್ಚಿ ಹೇಳಬೇಕು: "ಬಾಳಾ, ನುಂಗನನ್ನು ಳಿದು ಬೇಕಾದ ರೂಪವನ್ನು ಮನಸ್ಸಿನ ಮುಂದೆ ನಿಲ್ಲಿಸು!"ಎಂದು. ಮಂಗನ ಹೊರತು ಯಾವುದಾದರೊಂದು ರೂಪ ಬಂದರೆ ಆಣೆ! ಹೀಗೇಕೆಂದರೆ ನುಂಗ ಎಂದಕೂಡಲೇ ಢಾಳಾಗಿ ಎದ್ದು, ಮಂಗನ ಜ್ಞಾನದ ಗೆರೆಯು ಕಣ್ಣು ಮುಚ್ಚಿದ ಕೂಡಲೇ ಬಂದು ನಿಲ್ಲುತ್ತದೆ. ಅದು ಬರಲಿಕ್ಕೆ ಸಿದ್ಧವಾಗಿಯೇ ನಿಂತಿರುತ್ತದೆ. ಆ ಗೆರೆಯು ಮರೆತಬಳಿಕಲ್ಲವೇ ಮತ್ತೊಂದು ರೂಪ!

ಎರಡನೆಯದೆಂದರೆ ಬದಲಾಗುವುದು: ನಾಳೆ ಮುಂಬಯಿಗೆ ಹೋಗಬೇಕೆಂದು ಯೋಚನೆ ಮಾಡಿದವನ ಕನಸು ಧಾರವಾಡಕ್ಕೆ ಹೋಗಿ ಬಂದಂತೆಯಾಗಿರುವುದು. ರೈಲು, ಗಾಡಿ, ಸ್ಟೇಶನ್ನು– ಅಲ್ಲಿಯೂ ಇವೆ, ಇಲ್ಲಿಯೂ ಇವೆ. ಟಿಕೀಟು ತೆಗೆದುಕೊಳ್ಳುವುದೂ ನಿಜ. ದುಡ್ಡು ಉಚ್ಚಿದ್ದೂ ನಿಜ. ಮುಂಬಯಿಗು ಬದಲು 'ಧಾರವಾಡ' ಎಂದು ಪೋರ್ಟರನು ಒದರುವನು. ಧಾರವಾಡದಲ್ಲಿ ಇಳಿದು ಮುಂಬಯಿಯ ವಿಕ್ಟೋರಿಯಾ ಪಾರ್ಕಿಗೆ ಹೋದರೂ ಹೋಗಬಹುದು. ಆದರೆ ಆಶ್ಚರ್ಯ: ಧಾರವಾಡದಲ್ಲಿ ಇದು ಹೇಗೆ ಬಂದಿತೆಂದು. ಒಂದೇ ಭಾವನೆಯಿಂದ ಬದಲಾಗುವುದುಂಟು. ಭಯಭಾವನೆಯೊಂದು ಒಬ್ಬನ ಮನಸ್ಸಿನಲ್ಲಿದೆ. ಟಾಂಗಾದಿಂದ ಬಿದ್ದ ಭಯ. ಒಳ್ಳೆಯದು. ಈ ಭಯವೆಂಬ ಭಾವನೆಗೆ ಹತ್ತಿದ ಎಷ್ಟೋ ರೂಪುಗಳಿರುತ್ತವೆ: ಕ್ರಿಕೆಟ್ಟಿನ ಆಟದಲ್ಲಿ ಚಂಡು ತಾಕಿದ್ದರಿಂದುಂಟಾದ ಭಯ. ಸಾಯಕಲ್ಲು ಜಾರಿದ್ದ ಭಯ ಭಾವಿಯಲ್ಲಿ ಬಿದ್ದಿರುವ ಭಯ. ಪರೀಕ್ಷೆಯಿಂದುಂಟಾದ ಭಯ. ಬದಿಯಲ್ಲಿಯ ಪ್ರೇಮದ ಹೆಂಡತಿಯ ಕೈತಾಕಿ 'ಹಾವು ಹಾವು' ಎಂದು ಕನಸು ಬಿದ್ದರೆ– ಅದೆಲ್ಲ ಬದಲೆಂಬ ಮನೋವಿನೋದನೆಯಾಯಿತು.

ಇನ್ನು ಮೂರನೆಯದೆಂದರೆ: ಸಂಯೋಗ–ಸರಪಣಿ: ಒಂದು ಮೂರ್ತಿಯನ್ನು ಇನ್ನೊಂದು ಮೂರ್ತಿಗೆ ಗಂಟು ಹಾಕಿದ್ದು ಕಾಣುವುದು. ನನಗೊಮ್ಮೆ ಕನಸು ಬಿತ್ತು. ನಾನು (ಜಾಗೃತಿಯಲ್ಲಿ) ಎಂಟುಗಂಟೆ ರಾತ್ರಿ ಮನೆಗೆ ಬಂದೆ; ಬಾಗಿಲಿಗೆ ಕೀಲಿ ಹಾಕಿತ್ತು. ನಾನು ನೆರಿಮನೆಯವರಲ್ಲಿ ಹೋಗಿ ಕೀಲಿಕೈ ಇಸಿದುಕೊಂಡು ಬಾಗಿಲ ತೆರೆದೆ. ಹೆಂಡತಿಯ ಮೇಲೆ ಸಿಟ್ಟಾದೆ—ಸಿಟ್ಟು ಮಾಡಲಿಲ್ಲ. ಊಟವಾಗಿ ಸಿದ್ದೆ ಹೋದ ಮೇಲೆ ಈ ಕನಸು ಬಿತ್ತು: ಮುಂಜಾನೆ ಎದ್ದೆ. ಚಹಾಕ್ಕೆ ಎಸರು ಇಟ್ಟೆ. ಡಬ್ಬೀ ತೆರೆದು ನೋಡಿದೆ ಕೀಲೀ ಹಾಕೆತ್ತು. ನೆರಿಮನೆಗೆ ಹೋಗಿ ಚಹಕ್ಕೆ ಸಕ್ಕರೆ ತೆಗೆದುಕೊಂಡು ಬಂದೆ. ಆ ಸಕ್ಕರೆಯನ್ನು ಬ್ಯಾಡಮಿನ್‌ಟನ್ ಬ್ಯಾಟಿನಿಂದ ಒಲೆಯಲ್ಲಿ ಹಾಕುತ್ತಿದ್ದೇನೆ. ಹೆಂಡತಿಯ ಮೇಲೆ ಸಿಟ್ಟು! ಸಕ್ಕರೆಯ ಡಬ್ಬಿಗೆ ಬೀಗ ಯಾಕೆ? ನಾನೇನು ಮನೆಯ ಹೊಕ್ಕ ಕಳ್ಳನೇ? ಹತ್ತು ಜನರಿದಿರಿಗೆ ಅಕ್ಕೀಕಾಳು ಹಾಕಿಸಿಕೊಂಡು ಮದುವೆಯಾದ ಗಂಡ!....ಎಚ್ಚರಾಯಿತು. ಇಲ್ಲಿ, ಮನೆಗೆ ಕೀಲಿ ಇದ್ದದ್ದು ಡಬ್ಬಿಗೆ ಬಂತು. ನೆರಿಮನೆಯಿಂದ ಕಿಲೀಕೈ ತೆಗೆದುಕೊಂಡು ಬರುವುದರ ಬದಲಾಗಿ ಸಕ್ಕರೆಯನ್ನೇ ತಂದೆ. ಒಮ್ಮೆ ಬ್ಯಾಡಮಿನ್‌ಟನ್ ಆಡಿ ನಾಲ್ಕು ನಾಲ್ಕು ತಾಸು ಮನೆಗೆ ಬರುವುದಿಲ್ಲೆಂದು ನನ್ನ ಹೆಂಡತಿ, ಒಂದು ಮುರುಕು ಬ್ಯಾಟು ಒಲೆಯೊಳಗೆ ಹಾಕಿದ್ದಳು. ಅದಕ್ಕೆ ನಾನು ಸಕ್ಕರೆಯನ್ನು ಬ್ಯಾಟಿನಿಂದ (ಸಾತ್ರೆಯೊಳಗೆ ಹಾಕುವುದರ ಬದಲು) ಒಲೆಯಲ್ಲಿಯೇ ಹಾಕುತ್ತಿದ್ದೇನೆ. ಇದೊಂದು ಮೂರ್ತಿ-ಚಿತ್ರದ ಮಿಶ್ರಣದ ಮಾದರಿ.

ಒಳ್ಳೆಯದು, ತಿಳಿಯಿತು ಕನಸೆಂದರೇನೆಂಬುದು. ನಮ್ಮೆಲ್ಲರಿಗೂ, ಗೊತ್ತದೆ. ಇಷ್ಟು ಗೊತ್ತಿದ್ದ ಮೇಲೆ ಕಲೆಯೆಂದರೇನು? ಇದನ್ನೆಲ್ಲ ಮನುಷ್ಯನು ನಿದ್ರೆಯಲ್ಲಿ ತನ್ನಿಂದ ತಾನೇ ಕಾಣುವಂತೆ, ಕಲಾವಂತನು ಜಾಗೃತಿಯಲ್ಲಿಯೇ ಬುದ್ಧಿಪೂರ್ವಕವಾಗಿಯೂ ಅಬುದ್ಧಿಪೂರ್ವಕವಾಗಿಯೂ ಮಾಡುವನು. ಅದುದರಿಂದಲೇ ಕಲೆಯೆಂದರೊಂದು ಕನಸೇ ಅಲ್ಲವೇ?

ಹೌದು, ಆದರೆ, ಕಲೆಗೂ ಕನಸಿಗೂ ಇರುವ ಭೇದವಾವುದು? ಅದನ್ನೇ ಹೇಳುತ್ತೇನೆ. ನಾನು ಮುಂಚೆ ಹೇಳಿದಂತೆ ಭಾವನೆಯ ಶಕ್ತಿಗೂ (Sensibility) ಮೂರ್ತಿಶಕ್ತಿಗೂ (imagination) ಬಹಳ ಸಮೀಪ. ವಿಚಾರದಿಂದ ನಮ್ಮ ಮನಸ್ಸಿನಲ್ಲಿ ಎಷ್ಟು ರೂಪಗಳು ಕಾಣಿಸಬಹುದು? ಅದಕ್ಕಿಂತ ಸಾವಿರಾರು ಹೆಚ್ಚು

ZANDU

PROTOCASEIN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City)

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.

ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೊಜೆನ್— ಕರ್ನಾಟಕದ ಪ್ರಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ಕ್ವಿನಾಯ್ನ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ಮೇಲೆ ಅತ್ಯಂತ ಆಶ್ಚರ್ಯಕಾರಕ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಪ್ಲೀಹವನ್ನು ಸರಿಪಡಿಸಿ ಪೂರ್ವ ಸ್ಥಿತಿಗೆ ತರುವದು.

ವರ್ಮಿನೋಲ್ (ಜಂತುನಾಶಿನಿ)—ಈ ಔಷಧ ಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇದರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ

ಮ್ಯಾನೇಜಿಂಗ್ ಏಜೆಂಟರು :

ಮೆಸರ್ಸ್ : ವಿಜ್ಞಾನಕರ ಮತ್ತು ಕಂಪನಿ

ರೂಪಗಳು ಭಾವನಾಜಾಗೃತಿಯಿಂದ ಕಾಣುತ್ತವೆಂಬುದನ್ನು ಪ್ರತ್ಯಕ್ಷವಾಗಿ ಕಾಣಬಹುದು. ಕಲೆಯೂ ಕನಸೂ ಮೂರ್ತಿಶಕ್ತಿಯಿಂದುಂಟಾದ ನಿರ್ಮಿತಿ. ಭಾವನೆಯು ಹೆಚ್ಚಾದಲ್ಲಿ ಕಲೆಯು ಜನ್ಮಹೊಂದುವುದು; ಭಾವನೆಯು ಹೆಚ್ಚಾದರೆಯೇ ಕನಸು ಬೀಳುವುದು. ವಿಶೇಷವಾಗಿ ಕನಸೆಂದರೆ ಮೂರ್ತಿಶಕ್ತಿಯ ಸ್ವೈರ ಸಂಚಾರವೆಂದು ಹೇಳಬಹುದು. ನಮ್ಮ ಮನಸ್ಸೆಂಬರೊಂದು ಪೇಟೆ. ಅಲ್ಲಿ ತರತರದ ವಸ್ತುಗಳು ಗುಂಪು ಗುಂಪಾಗಿಯೂ ವಿಂಗಡವಾಗಿಯೂ ಸಂಗಡವಾಗಿಯೂ ಬಿದ್ದಿರುತ್ತವೆ. ಅವುಗಳು ಸಂಸ್ಕಾರ ರೂಪದಿಂದ ಒಟ್ಟಲ್ಪಟ್ಟಿರುತ್ತವೆ. ಕನಸಿನಲ್ಲಿ ಯಾವ ಭೂತವು ಎದ್ದೀತು ನಿಯಮವಿಲ್ಲ. ಹರ್ಷಭಾವನೆಯಿಂದ ಕನಸಿನಲ್ಲಿ ಮನುಷ್ಯನು ನಗಬಹುದು—ಅಳಬಹುದು. ನನ್ನ ಕನಸಿನಲ್ಲಿ ಒಮ್ಮೆ ನನಗೆ ೪೦,೦೦೦ ರೂಪಾಯಿ ಸಿಕ್ಕಿತು. ಸಿಕ್ಕಕೂಡಲೇ ನಾನು ಹೋಗಿ ಭಾವಿಯಲ್ಲಿ ಬಿದ್ದೆ! ಶೋಕಭಾವನೆಯಿಂದ ಊಟಕ್ಕೆ ಕೂತು ವೇಜು ಮಾಡಬಹುದು. ನನ್ನ ಹೆಂಡತಿಯು ತೀರಿಕೊಂಡಿದ್ದಳು. ಹೊರಗೆ ಬಿದುರು, ದಂಟು, ಕುಳ್ಳು ಬಂದಿದ್ದುವು. ಇನ್ನು ಆಕೆಯನ್ನು ಒಯ್ಯಬೇಕಲ್ಲ! ನಡುವೆ ಹೆಸಿವೆ ಆಯಿತು. ಒಳಗೆ ಹೋದೆ. ಆಕೆಯೇ ಬಂದು ಬಡಿಸಿದಳು. ಊಟಕ್ಕೆ ಬಡಿಸಿ ಹೋಗಿ ಸತ್ತಳು (ಮಲಗಿಕೊಂಡಳು). ನಾನು ಎಚ್ಚರಾದೆ. ಇದೆಲ್ಲ ಬೇರೆ ಬೇರೆ ತರದ ಮೂರ್ತಿಗಳ ರೂಪಗಳ ಭಾವನೆಗಳ ಮೂರ್ತಿಶಕ್ತಿಯ ಸ್ವೈರಸಂಚಾರ. ಕಲೆಯಲ್ಲಿ ಮಾತ್ರ ಹೀಗಿರುವುದಿಲ್ಲ. ಕಲೆಯಲ್ಲಿ ಮನುಷ್ಯನು ಜಾಗೃದವಸ್ಥೆಯಲ್ಲಿ ಇರುತ್ತಾನೆ. ಜಾಗೃದವಸ್ಥೆಯಲ್ಲಿಯೇ ಮೂರ್ತಿಶಕ್ತಿಯು ಒತ್ತಟ್ಟಿಗೆ, ವ್ಯವಹಾರವು ಒತ್ತಟ್ಟಿಗೆ ಹಿಡಿದು ಎಳೆಯುತ್ತಿರುತ್ತವೆ. ಇಲ್ಲಿ ವ್ಯವಹಾರವೆಂದರೆ ಬಾಹ್ಯವ್ಯವಹಾರಗಳಲ್ಲ, ಆಂತರ ವ್ಯವಹಾರ. ಎಲ್ಲ ದೈಹಿಕಶಕ್ತಿಗಳ ವ್ಯವಹಾರ. ಮನಸ್ಸಿನ ಪೇಟೆಯೊಳಗೆ ತನಗೆ ಬೇಕಾದ್ದನ್ನಷ್ಟೇ ಮೂರ್ತಿಶಕ್ತಿಯು ಸೌಂದರ್ಯ ದೃಷ್ಟಿಯಿಂದ ಆಯ್ದು ಕೊಳ್ಳುತ್ತದೆ; ಜೋಡಿಸುತ್ತದೆ; ಮತ್ತೆ ನುಣುಪುಮಾಡುತ್ತದೆ. ಈ ಕೃತಿಗೇ ಕಲೆಯೆಂದು ಹೆಸರು (Art is Selected truth). ಗೇಟೆಯು ಎಂದಹಾಗೆ: ಕನಸೆಂದರೆ ಅಬುದ್ಧಿಪೂರ್ವಕವಾದ ಕಾವ್ಯ (A dream is involuntary poetry). ಕನಸಿನೊಳಗೆ ಬುದ್ಧಿಯು (will) ಸುಸ್ತವಾಗಿರುತ್ತದೆ. ಕಲೆಯಲ್ಲಿ ಬುದ್ಧಿಯು ಮೂರ್ತಿಶಕ್ತಿಯ ತೊತ್ತಾಗಿ ದುಡಿಯುತ್ತಿರುತ್ತದೆ. ಬುದ್ಧಿಯೇ ಮೇಲಾಯಿತೆಂದರೆ ಕಲೆಗೆ ಹಾಳು. ಉತ್ಸವದಲ್ಲಿ ಎಂಜಲ ಬಳೆಯುವ ಕೆಲಸ ಬಿಟ್ಟು ತೊತ್ತೇ ಬಡಿಸಲಿಕ್ಕೆ ಬಂದಂತೆ, ಬುದ್ಧಿಯು ನಿರ್ಮಿಸಿದ ಕಲೆ (?) ಯ ಊಟ ಸವಿಯಾಗುವುದಿಲ್ಲ. ಕಲೆಯ ಊಟವನ್ನು ಬಡಿಸಲಿಕ್ಕೆ ಸೌಂದರ್ಯವತಿಯಾದ ಅಲಂಕಾರವುಳ್ಳ ಗೃಹಿಣಿಯಾದ ಮೂರ್ತಿಶಕ್ತಿಯೇ ಬೇಕು. ಅಬುದ್ಧಿಪೂರ್ವಕವಾಗಿ, ಬುದ್ಧಿಯ ಸಹಾಯವಿಲ್ಲದೆ ಮೂರ್ತಿಶಕ್ತಿಯು ತನ್ನಿಂದ ತಾನೇ ಮಾಡಿದಂಥ ವಿಲಾಸವೂ, ಬುದ್ಧಿಯು ಆಯ್ದು ಕೊಡುವಂಥ ಕೆಲವು ರೂಪಗಳೂ ಕೂಡಿ ಕಲೆಯ ರಸದ ಊಟವು ಸಿದ್ಧವಾಗುವುದು. ನಿಲುಕದ್ದನ್ನು, ಅನಂತವಾದದ್ದನ್ನು, ಅಮರ್ಯಾದಿತವಾಗಿರುವುದನ್ನು ಮರ್ಯಾದಿತವಾದ ಶಬ್ದ, ಬಣ್ಣ, ಸ್ವರ ಮುಂತಾದ ಮಾಧ್ಯಮಗಳಿಂದ ಹೇಳುವುದೇ ಕಲೆ. ಅಮರ್ಯಾದಿತವಾದದ್ದು (infinite) ಮರ್ಯಾದಿತ ಸ್ವರೂಪದಲ್ಲಿ (finite) ಬರಬೇಕೆಂದೆ ಮೇಲೆ ಅಲ್ಲಿ ಮೂರ್ತಿಗಳೇ, ರೂಪುಗಳೇ, ರೂಪಗಳೇ (Symbols) ಕಾಣುವವು. ಈ ರೂಪುಗಳನ್ನು ಅಭ್ಯಾಸಿಸಿ, ಅವುಗಳ ಸಹಾಯದಿಂದ, ಅವುಗಳ ಮಾರ್ಗವಾಗಿ, ಕವಿಯ ಅಥವಾ ಕಲಾವಂತನ ಆತ್ಮಸ್ವರೂಪದ ಆವಿಷ್ಕರಣವೇ ವಿಮರ್ಶಕನ ಕರ್ತವ್ಯ. ಇರಲಿ, ಸ್ವಲ್ಪದರಲ್ಲಿಯೇ ಕಲೆಯೆಂದರೊಂದು ಕನಸೆಂಬದನ್ನು ಹೇಳಲಾಯಿತು. ಕಲೆಯೊಂದು ಕನಸು ನಿಜ; ಆದರೆ ಜನಜಂಗುಳಿಯು ಎಂದ ಅರ್ಥವಿಲ್ಲ ಅದಕ್ಕೆ. ಅರ್ಥಪೂರ್ಣವಾದ ಮಹತ್ತ್ವವಿದೆ—ಈ ಕನಸಿಗೆ ಈ ಕಲೆಗೆ!

—o—

ಆಹುತಿ*

(ಸಣ್ಣ ಕತೆ)

ಡಿ. ಎಸ್. ಶ್ರೀಕೃಷ್ಣ, ಪೆರಡಾಲ

★

ಗೋಪಾಲಯ್ಯನವರಂತಹ ಸ್ವಾರ್ಥಸಾಧಕ ಮುಂದಾಳುಗಳೂ ಸೋಮನಂತಹ ತಿಳಿವಳಿಕೆಯಿಲ್ಲದ ಜನರೂ ಇರುವ ಯಾವ ದೇಶ-ಕಾಲಗಳು ಸಮಾಜದಲ್ಲಿ ಸುಖ-ಶಾಂತಿಗಳನ್ನು ನೆಲೆಗೊಳಿಸಬಲ್ಲವು ?

★

ಹಗಲಿಡೀ ದುಡಿದು ಬಹಳ ದಣಿವಾಗಿತ್ತು. ತುಸು ವಿಶ್ರಾಂತಿ ಬೇಕೆಂದು ಒಂಟಿಯಾಗಿ ಶಾಲೆಯ ಪಡುವಣ ಹಾಸುಗಲ್ಲಿನ ಮೇಲೆ ಕುಳಿತಿದ್ದೆ. ಸಂಜೆ ಮನೋಹರವಾಗಿತ್ತು. ಪಡುವಣ ಬಾನು ಕೆಂಪು ಕಾರುತಿತ್ತು: ಅಲ್ಲೊಂದು ಇಲ್ಲೊಂದು ಕರಿ ಮುಗಿಲು, ಸುತ್ತಣ ಕೆಂಬಣ್ಣ—ಇವುಗಳು, ಬಾನ್ನೀರೆ ಬಂಗಾರದ ಜರಿಸೀರೆಯುಟ್ಟಂತೆ ಕಂಗೊಳಿಸುತಿದ್ದುವು. "ಪರಮಾತ್ಮನು ನರಸಿಂಹನಾಗಿ ಅಸುರರನ್ನು ನಾಶಮಾಡಿದಾಗ ಸಂಧ್ಯಾಕಾಲವಾಗಿತ್ತು; ಅವರ ಕೆನ್ನೆತ್ತರೇ ಸಿಡಿದು ಸಂಜೆಯ ಬಾನನ್ನು ಕೆಂಪಾಗಿಸಿತು"— ಇದು ಹಿಂದೆ ಎಂದೋ ಓದಿದ್ದ ಕತೆಯೊಂದರಿಂದ ನೆನಪಿಗೆ ಬಂದ ತುಣುಕು. ಅದರೆ ನನ್ನ ಭಾವನೆ ಇಂದಿದ ಆಗಸದ ಈ ಕೆಂಬಣ್ಣಕ್ಕೆ ಹೊಸದೊಂದು ಕಾರಣವನ್ನು ಕಲ್ಪಿಸಿತು. ಅದರ ಹಿನ್ನೆಲೆಯಾಗಿ ನಿನ್ನೆ ನಡೆದ ಘಟನೆಯೊಂದನ್ನು ನೀವೂ ಕೇಳಿ, ಆ ಬಳಿಕ ನಾನು ಕಲ್ಪಿಸಿದ ಕಾರಣವು ಸರಿಯಾಗಿರಬಹುದೇ ಎಂದು ನೀವೇ ಊಹಿಸಿರಿ.

* * *

ಸೋಮು ಹಿರಿಯವ; ಬಟ್ಯ ಅವನ ತಮ್ಮ. ಕೆಲವು ವರ್ಷಗಳಿಂದ ನಾನು ದಿನಂಪ್ರತಿ ಕಾಣುತ್ತಿರುವ ಸೋದರರಿವರು. ನಮ್ಮ ನೆರೆಯವರು. ಅವರ ತಂದೆ ಎಂದೋ ಕಾಲವಾಗಿದ್ದ. ಅಂದಿನಿಂದಲೂ ಅಣ್ಣ-ತಮ್ಮಂದಿರು ಒಪ್ಪವಾಗಿಯೇ ನಡೆದುಬಂದಿದ್ದಾರೆ. ತಂದೆ ಕಷ್ಟಪಟ್ಟು ದುಡಿದು, ಉಳಿದ ಅಲ್ಪ ಹಣದಿಂದ ತನ್ನದೇ ಆದ ಚಿಕ್ಕ ಹಿತ್ತಿಲೊಂದನ್ನು ರೂಪಿಸಿಕೊಂಡಿದ್ದ. ಮಕ್ಕಳು ಅದನ್ನೇ ಊರ್ಜಿತ ಗೊಳಿಸಿದರು. ಊರ ಧನವಂತರಲ್ಲಿ ಕೆಲಸ ದೊರಕದ ಮಳೆಗಾಲದಲ್ಲಿ, ತಮ್ಮ ಕುಟುಂಬಪೋಷಣೆಗೆ ಸಾಕಾಗುವಷ್ಟು ಭತ್ತ ಬೆಳೆಯಿಸಲು ಅದರಲ್ಲಿ ಎಡೆಯಿತ್ತು. ಬೇಸಗೆಯಲ್ಲಿ, ನಾಲ್ಕು ಮನೆಗಳಲ್ಲಿ ದುಡಿದರೆ ದೊರೆಯುವ ಕೂಲಿಯಿಂದ ಅವರ ಜೀವನ ಸಾಗುತ್ತಿತ್ತು. ಅವರ ಸಂಸಾರ ಕೂಡ ದೊಡ್ಡದಲ್ಲ. ಸೋಮನಿಗೆ ಮಾತ್ರ ಮದುವೆಯಾಗಿತ್ತು. ಅವರ ಕೈಗೂಸು ಈ ಚಿಕ್ಕ ಸಂಸಾರದಲ್ಲಿ ನಾಲ್ಕನೆಯ ವನಾಗಿ ಬಂದು, ಇನ್ನೂ ಆರು ತಿಂಗಳು ಕಳೆದಿಲ್ಲ. ಅವರಂತಹ ಜನಕ್ಕೆ ಉಣ್ಣಲು, ಉಡಲು ಸಾಕಾಗುವಷ್ಟು ದೊರೆತರೆ ಮತ್ತೇನೂ ಬೇಡ; ಅವುಗಳಲ್ಲೆ ತೃಪ್ತಿಗೊಂಡು ಸುಖವಾಗಿ ಬಾಳುವರು. ಹಾಗೆಯೇ ಈ ಪುಟ್ಟ ಸಂಸಾರವೂ ಸುಖದಲ್ಲಿ ಸಾಗುತ್ತಿತ್ತು.

ನಾನು ತಿಳಿದಂದಿನಿಂದ ಹೀಗಿತ್ತು ಆ ಬಡ ಕುಟುಂಬದ ಸ್ಥಿತಿ:

ಆದರೆ, ಈ ವರ್ಷಮೊದಲಿನಿಂದ ಈ ಹಾಲಿಗೆ ಎಲ್ಲೋ ಒಂದು ಬಿಂದು ಹುಳಿಸೇರಿದಂತೆ ತೋರತೊಡಗಿತು ನನಗೆ. ಹಿಂದೆ ಸಂಜೆಯಾಗುವಾಗ ನಗುನಗುತ್ತಾ ಮನೆಯ ಜಗುಲಿಯೇರುತಿದ್ದ ಅಣ್ಣ-ತಮ್ಮಂದಿರು, ಇತ್ತೀಚೆಗೆ ಆ ರೀತಿಯಿದ್ದಂತೆ ತೋರುತ್ತಿರಲಿಲ್ಲ. ಸೋಮು ಸಂಜೆಯಾದರೂ ಗೋಪಾಲಯ್ಯನ ಅಂಗಡಿಯಲ್ಲೆ ಕುಳ್ಳಿರುವನು. ಬಟ್ಯನೂ ಹಾಗೆಯೇ: ದಿನದ ಕೂಲಿ ಕೈಗೆ ಬಂತೆಂದರೆ, ಯಾವುದಾದರೂ ಹೋಟೆಲಿನಲ್ಲಿ ಅದನ್ನು ಕೊಟ್ಟು, ಸಿಕ್ಕಿದುದನ್ನು ಮುಕ್ಕಿ ಸಿಕ್ಕಲ್ಲಿ ಮಲಗಿ ಬಿಡುವನು. ರಾತ್ರಿ ಸೋಮು ಮನೆಗೆ ಬಂದಾಗ, ತಮ್ಮ ಮನೆಯಲ್ಲಿಲ್ಲದಿರುವುದು ಅವನ ಗೋಚರಕ್ಕೆ ಬಾರದಿರಲು ಅಸಾಧ್ಯ. ಆದರೂ ಒಂದು ದಿನವಾದರೂ ಅವನು, 'ಬಟ್ಯನೆಲ್ಲಿರುವನು? ಅವನ ಊಟವಾಗಿದೆಯೇ?' ಎಂದು ವಿಚಾರಿಸಿದಂತೆ ತೋರುವುದಿಲ್ಲ. ಒಲವಿನ ಆಗರವಾಗಿದ್ದ ಈ ಸಂಸಾರದಲ್ಲಿ ಏಕೆ ಇಂತಹ ಬಿಕ್ಕಟ್ಟುಂಟಾಯಿತು? ಸೋದರರೊಳಗಿನ ವಿರಸಕ್ಕೆ ಕಾರಣವೇನು—ಎಂಬುದನ್ನು ನಾನು ತಿಳಿದುದು ನಿನ್ನೆಯೇ.

ತಂದೆ ಮಾಡಿಟ್ಟ ಹಿತ್ತಿಲನ್ನು ಉತ್ತಮಗೊಳಿಸಬೇಕೆಂದು ಸೋದರರಿಬ್ಬರಿಗೂ ಬಯಕೆ. ಹಗಲಿಡೀ ಹೊಟ್ಟೆಗಾಗಿ ಪರರಲ್ಲಿ ದುಡಿಯುವವರಿಗೆ ತಮ್ಮ ಜಾಗದಲ್ಲಿ ಗೆಯ್ಯಲು ಬಿಡುವೆಲ್ಲಿ? ಆದರೂ ಬೆಳ್ದಿಂಗಳ ರಾತ್ರಿಯಲ್ಲಿ ಅಲ್ಪಸ್ವಲ್ಪ ದುಡಿದು, ಸುತ್ತಣ ಆವಾರವನ್ನು ಪೂರೈಸಿದ್ದರು. ವಾರದಲ್ಲಿ ಒಂದೆರಡು ದಿನ ಅರೆಹೊಟ್ಟೆ ಕುಳಿತಾದರೂ ತಮ್ಮ ಜೊಲದಲ್ಲಿ ನಾಲ್ಕೈದು ತಟ್ಟುಗಳನ್ನು ಕಡಿದಿದ್ದರು. ಇವುಗಳಲ್ಲಿ ಹೆಚ್ಚೆಂದರೆ ಎರಡು ಮುಡಿ ಭತ್ತ ಬಿತ್ತಬಹುದು. ಆದರೆ, ಇಡೀ ಹಿತ್ತಿಲನ್ನು ಗದ್ದೆಗಳಾಗಿ ಮಾಡಿದರೆ, ಕಡಿಮೆಯೆಂದರೆ ಹತ್ತು ಮುಡಿ ಬೀಜ ಬಿತ್ತುವ ಗದ್ದೆಗಳಾಗಬಹುದು. ಒಂದು ಬೆಳೆ-ಬೆಳೆಯನ್ನು ಬೆಳೆಸಲು ಏನೂ ತೊಂದರೆಯಿಲ್ಲ. ಹಿತ್ತಿಲ ಮೇಲುಕೊನೆಯ ಇಳುಕಲಿಗೆ ಒಡ್ಡು ಹಾಕಿದರೆ, ಅವರ ಒತ್ತಿನ ಗದ್ದೆಗಳಲ್ಲಿ ಎರಹಸಯ ಬೆಳೆಯಾಗಿ ರಾಗಿಯನ್ನೊ, ಗೆಣಸು-ತರಕಾರಿಗಳನ್ನೊ ಬೆಳೆಸಬಹುದು. ಇಷ್ಟೆಲ್ಲಾ ಪೂರೈಸಿದಾಗ, ಅವರ ಇಡೀವರ್ಷದ ಜೀವನಕ್ಕೆ ಬೇರೆ ಯಾವ ಆಧಾರವೂ ಅಗತ್ಯವಿಲ್ಲ. ಆದರೆ ಇದಕ್ಕೆಲ್ಲ ಮೊದಲಾಗಿ ಹಿತ್ತಿಲಿನ ಅಖಿಲಾವಯವವನ್ನು ಗದ್ದೆಗಳಾಗಿ ಪರಿವರ್ತಿಸಬೇಕು.

ತಾನೇ ಎಡೆಬಿಡದೆ ದುಡಿದರೆ, ಆ ಕೆಲಸವನ್ನೇನು ಮೊಡ್ಡದಲ್ಲವೆಂದು ಸೋಮನಿಗೆ ಗೊತ್ತಿತ್ತು. ಆದರೆ ತಮ್ಮ ಹಿತ್ತಿಲಲ್ಲೆ ಮಣ್ಣಿನ ಕೆಲಸ ಮಾಡುತಿದ್ದರೆ, ದಿನಗೂಲಿ ಯಾರು ಕೊಡಬೇಕು? ದಿನ-

* ಸಣ್ಣ ಕತೆಗಳ ಪೋಲಾಟಕ್ಕಾಗಿ ಬಂದ ಕತೆಯಿದು. —ಸಂ. ಜ.

ಗೊಲೆಯಲ್ಲದಿದ್ದರೆ ಸಂಸಾರಪೋಷಣೆಯೆಂತು? ಈ ಸಮಸ್ಯೆಯು ಆತನಿಂದ ಬಗೆ ಹರಿಸಲು ಅಸಾಧ್ಯವಾದುದು. ತಮ್ಮನು ಹೇಳಿದ ದಾರಿ ಅವನಿಗೆ ಅಷ್ಟೊಂದು ಹಿತವೆನಿಸಲಿಲ್ಲ. ಬಟ್ಯ ಅಣ್ಣನಿಗಿಂತ ತುಸು ಚುರುಕು. ತನ್ನಲ್ಲೆ ಆಲೋಚಿಸಿ, ಅವನೊಂದು ದಾರಿಯನ್ನು ಕಂಡಿದ್ದ. ಅದನ್ನನುಸರಿಸಿದರೆ, ನಿಧಾನವಾಗಿಯಾದರೂ, ಅಣ್ಣ-ತಮ್ಮಂದಿರು, ತಾವು, ಯಾರ ಹಂಗಿಗೂ ಒಳಗಾಗದೆ ತಮ್ಮಷ್ಟಕ್ಕೆ ಬಾಳಬಹುದೆಂದು ಆತನ ಭರವಸೆ: ಹೇಗಿದ್ದರೂ ಇರುವ ಗದ್ದೆಗಳ ಬೆಳಸು ತಮ್ಮ ಮಳೆಗಾಲದ ಜೀವನಕ್ಕೆ ಸಾಕಾಗುವಷ್ಟು ಇದೆ; ಆದುದರಿಂದ ಮಳೆಗಾಲವಿಡೀ ತಮ್ಮ ಹಿತ್ತಿಲಲ್ಲಿ ಕೆಲಸ ಮಾಡ ಬಹುದು; ಸೊಲ್ಯಾರು ಮಳೆಗಾಲಗಳು ಕಳೆದಾಗಲಾದರೂ, ಈ ರೀತಿ ದುಡಿದು ತಮ್ಮ ಕನಸನ್ನು ನನಸಾಗಿಸ ಬಹುದು— ಎಂದು ಬಟ್ಯನ ವಾದ. ಆದರೆ ಸೋಮನ ಆಲೋಚನಾ ಸರಣಿಯೇ ಬೇರೆ.

"ನಾವಿಬ್ಬರೇ ಎಷ್ಟು ಮಳೆಗಾಲ ದುಡಿಯಬೇಕೊ ಏನೊ, ಈ ಗುಡ್ಡಗಳನ್ನೆಲ್ಲ ಕಡಿದು ಸಮತಟ್ಟಾಗಿಸಲು! ಅಷ್ಟೆಲ್ಲಾ ಕೆಲಸವಾಗಿ, ನಮ್ಮ ಹಿತ್ತಿಲು ಗದ್ದೆಗಳಾಗುವಾಗ, ಆ ಸುಖವನ್ನು ಅನುಭವಿಸಲು ನಾವು ಬದುಕಿ ಇರುತ್ತೇವೋ ಇಲ್ಲವೋ ಹೇಳಲಿಕ್ಕೆ ಸಾಧ್ಯವಿಲ್ಲ. ಈ ಏರುಗಳನ್ನೆಲ್ಲಾ ಕಡಿದು ತಟ್ಟಾಗಿ ಮಾಡಲು, ಕಡಿಮೆಯೆಂದರೆ ಹತ್ತು-ಹನ್ನೆರಡು ವರ್ಷಗಳಾದರೂ ಬೇಕು ನಮಗಿಬ್ಬರಿಗೆ" ಎನ್ನುತ್ತಾ ಸೋಮನು ತಮ್ಮನೊಡನೆ ತನ್ನ ಅಸಮಾಧಾನವನ್ನೆ ಸೂಚಿಸುತ್ತಿದ್ದನು! ತಾವೇ ದುಡಿದು ಹಿತ್ತಿಲು ಗದ್ದೆಯಾಗುವ ತನಕ ಕಾಯುವಷ್ಟು ತಾಳ್ಮೆಯು ಅವನಲ್ಲಿದ್ದಿಲ್ಲ. ಸಾಲದುದಕ್ಕೆ ಈ ವಿಷಯದಲ್ಲಿ ಗೋಪಾಲಯ್ಯ ಕೊಟ್ಟ ಸಲಹೆಯೂ ಅವನ ನಾಲಗೆಯಲ್ಲಿ ನೀರಿಳಿಸಿತ್ತು.

ಗೋಪಾಲಯ್ಯನೆಂದರೆ ನಮ್ಮೂರಿನ ವ್ಯಾಪಾರಿಗಳೊಬ್ಬರು. ಎಷ್ಟೋ ಕಾಲದಿಂದ ಇವರ ಕುಟುಂಬದ ಜೀವನಕ್ಕೆ ವ್ಯಾಪಾರವೇ ಆಧಾರ. ಹಿರಿಯರಂತೆ ಇವರೂ ಹೆಸರಾದ ಸಾಹುಕಾರರೇ. ಇಲ್ಲಿಯ ಬಡ ಬ್ರಾಹ್ಮಣರಿಗೆಲ್ಲ ಇವರೆಂದರೆ ದಾನಶೂರ ಕರ್ಣನ ಅಪರಾವತಾರನೆಂಬ ಭಾವನೆ. ಅವರ ತೋಟಗಳ ಅಡಿಕೆಯಿಲ್ಲ, ಮರದಿಂದ ಇಳಿಯುವ ಮೊದಲು ಗೋಪಾಲಯ್ಯನ ಭಂಡಸಾಲೆಗೆ ಅವುಗಳ ಲೆಖ್ಖ ತಲಪಿಯಾಯಿತು. ಕ್ರಯವೆಂದು ಗೋಪಾಲಯ್ಯ ಕೊಡುವ ಹಣ, ಅಡಿಕೆಯ ಬೆಳೆ ಮುಗಿಯುವ ತನಕ ಹೇಗಾದರೂ ಅವರ ಜೀವನಕ್ಕೆ ಸಾಕಾಗುವುದು. ಅನಂತರ ಎಲ್ಲರಿಗೂ ಜೀವನಾಧಾರವೆಂದರೆ ಗೋಪಾಲಯ್ಯನ ಅಂಗಡಿಯ ಕಡದ ಖಾತೆ. ಈ ಸಾಲ ತೀರಬೇಕಾದರೆ ಮರುವರ್ಷದ ಅಡಿಕೆ ಬೆಳೆ ಬರಬೇಕು. ಪ್ರತಿ ವರ್ಷವೂ ಇದೇ ರೀತಿ. ಈ ವಿಷಮ ಚಕ್ರದ ಉರುಳಾಟಕ್ಕೆ ಕೊನೆಯಿಲ್ಲ.

ವ್ಯಾಪಾರದಲ್ಲಿ ಚುರುಕಾಗಿರುವಂತೆ ಗೋಪಾಲಯ್ಯ ವ್ಯವಹಾರದಲ್ಲೂ ಹೆಡ್ಡರಲ್ಲ. ತಾನು ತನ್ನ ಹಿರಿಯರಂತೆ ವ್ಯಾಪಾರದಲ್ಲಿ ತುಂಬ ಹಣ ಸಂಪಾದಿಸಿದ್ದೇನೆ; ಈ ಊರಲ್ಲಿ ತನ್ನಷ್ಟು ಧನವಂತರು ಯಾರೂ ಇಲ್ಲ—ಎಂದು ಅವರಿಗೆ ಗೊತ್ತಿದೆ. ಆದರೆ ಇಂದಿನ ಜಗತ್ತು ಹಣಕ್ಕೆ ಮಾತ್ರ ಬೆಲೆ ಕೊಡುವುದಿಲ್ಲ; ಆದರೊಂದಿಗೆ ಮನುಷ್ಯ ಕೀರ್ತಿಯನ್ನೂ ಸಂಪಾದಿಸಬೇಕು— ಎಂದು ಅವರ ಭಾವನೆ. ಆದರೆ ಕೀರ್ತಿಗಾಗಿ ಹಣ ವ್ಯಯಿಸುವಷ್ಟು ಹೆಡ್ಡರು ಅವರಲ್ಲ. ಆದುದರಿಂದಲೇ ಉಪಾಯದಿಂದ ಅವರು ನಮ್ಮೂರಿನ 'ಗಣ್ಯ-ನಾಗರಿಕ'ರಾಗಿರುವರು.

ಕಾಂಗ್ರೆಸು, ದೇಶಸೇವೆ— ಈ ಹೆಸರುಗಳೆಲ್ಲ ಹೆಚ್ಚಾಗಿ ಕೇಳಬರುತ್ತಿದ್ದ ಕಾಲದಲ್ಲಿ, ಗೋಪಾಲಯ್ಯನ ತಾರುಣ್ಯ. ತಾನು ದೊಡ್ಡ ದೇಶಸೇವಕ, ಸಮಾಜ ಸೇವಕ—ಎಂಬಂತೆ ಅವರು ವರ್ತಿಸುತ್ತಿದ್ದರು. ಕಾಂಗ್ರೆಸಿನ ಚಳವಳಿಗೆಲ್ಲಾ ಎಲೆಯ ಮರೆಯ ಕಾಯಿಯಂತೆ ಸಹಕಾರ ನೀಡಿದ್ದರು. ಇದರಿಂದ ಅವರಿಗೆ ಹಲವು ರೀತಿಯಲ್ಲಿ ಲಾಭ: ಕಾಂಗ್ರೆಸಿಗೆ ಬೆಂಬಲ ಕೊಡುವುದರಿಂದ ತಾನು ದೇಶಸೇವಕ; ಎಲೆಮರೆಯ ಕಾಯಿಯಂತಿರುವುದರಿಂದ ಸರಕಾರದ ಮುಂದಷ್ಟಿಗೆ ಬೀಳುವ ಹೆದರಿಕೆಯೂ ಇಲ್ಲ; ಎಲ್ಲಕ್ಕಿಂತ ಹೆಚ್ಚಾಗಿ ತಾನು ಕಾಂಗ್ರೆಸಿನವನೆಂಬುದರಿಂದ ಊರಿನ ಎಲ್ಲ ಜನರೂ ತನ್ನಲ್ಲಿಯೇ ವಹಿವಾಟು ನಡೆಸುವರು. ಆಗ ಕಾಂಗ್ರೆಸ್ ಚಳವಳಿಕ್ಕೆ ತಾನು ತೆತ್ತ ಹಣದ ಹತ್ತಿಪ್ಪತ್ತು ಪಾಲು ಲಾಭ ಸಂಪಾದಿಸುವುದಕ್ಕೆ ಏನೂ ಅಡ್ಡಿಯಿಲ್ಲ. ಗೋಪಾಲಯ್ಯನ ಈ ಭಾವನೆಗಳೆಲ್ಲಾ ಅವರು ನೆನಸಿದಂತೆಯೇ ಕಾರ್ಯರಂಗದಲ್ಲೂ ರೂಪುಗೊಂಡಿದ್ದುವು. ನಮ್ಮೂರಿನ ಜನರೆಲ್ಲರಿಗೂ ಅವರೆಂದರೆ ಬಹಳ ಆದರ. ಅವರ 'ನಿಸ್ವಾರ್ಥಸೇವೆ'ಯ ಅಡಿಗಲ್ಲಾಗಿರುವ ಸ್ವಾರ್ಥ, ಜನರ ಕುರುಡು-ಬುದ್ಧಿಗೆ ಹೊಳೆದಿರಲಿಲ್ಲ.

ಇಂದು ಅವರ 'ದೇಶಸೇವೆ'ಗೆ ಹೆಚ್ಚಿನ ಆಸ್ಪದವಿಲ್ಲ—ಕಾರಣ, ಇಂದು ಚಳವಳಿಗಳಿಲ್ಲ. ಆದರೆ ಅವರ ಇಂದಿನ ಸೋಗು ಬೇರೆ: ಸಮಾಜ ಸೇವೆ, ಹರಿಜನ ಸೇವೆ. ಸೆಟ್ಟು ಸಾಯುವಾಗಲಾದರೂ ಒಂದು ವಿಧದ ಲಾಭವಿಲ್ಲದಿದ್ದರೆ ಸಾಯಲಾರ— ಎಂಬಂತೆ, ಗೋಪಾಲಯ್ಯ ಈ ಹೊಸ ವೇಶದಲ್ಲೂ ತನ್ನ ಇಷ್ಟಸಿದ್ಧಿಗೆ ದಾರಿಯನ್ನು ಕಲ್ಪಿಸಿಕೊಂಡಿದ್ದರು. ಕಸದಲ್ಲಿ ರಸೋತ್ಪಾದನ ಮಾಡಬಲ್ಲ ರಸಿಕರಂತೆ ಅವರು, ಇಲ್ಲೂ ಲಾಭ ಸಂಪಾದನೆಯ ಮಾರ್ಗ ಕಂಡುಕೊಂಡಿದ್ದರು. ತಾನು ದೊಡ್ಡ ಹರಿಜನೋದ್ಧಾರಕನೆಂದು ಆಗಾಗ ಅವರಿಗೆ ಅನ್ನ-ವಸ್ತ್ರಗಳನ್ನು ದಾನವಿತ್ತಾಗ, ಅವರು ತನ್ನನ್ನು ಬಲು ಆತ್ಮೀಕನೆಂದು ತಿಳಿಯುವುದರಲ್ಲಿ ಸಂಶಯವಿಲ್ಲ. ಆಗ ತಾನು ಎಲ್ಲ ಕೂಲಿ ಕೆಲಸಗಳನ್ನೂ ಅವರಿಂದಲೇ ಕಡಿಮೆ ಸಂಬಳದಲ್ಲಿ ಮಾಡಿಸಿಕೊಳ್ಳಬಹುದು. ಅವರು ತಯಾರಿಸುವ ಚಾಪೆ, ಕುಕ್ಕೆ-ಗಳನ್ನಾದರೂ ತಾನೇ ಕೊಂಡುಕೊಂಡು, ಇಮ್ಮಡಿ ಲಾಭಕ್ಕೆ ಇತರರಿಗೆ ಮಾರಬಹುದು. ನಿರುದ್ಯೋಗಿಗಳಿಗೆ ಕೆಲಸಕೊಟ್ಟು ಉದಾರಿಯೆಂದು ನಾಲ್ಕು ಜನರಿಂದ ಹೇಳಿಸಿಕೊಳ್ಳಲು ಉತ್ತಮ ಮಾರ್ಗ. ಈ ರೀತಿಯೆಲ್ಲಾ ಭಾವಿಸಿ, ಅವರು ಹರಿಜನೋದ್ಧಾರಕ್ಕೆ ಸೊಂಟ ಕಟ್ಟಿದುದು. ಇಲ್ಲಿಯೂ ಅವರಿಗೆ ಬುಧನ ದೆಸೆಯೇ ಕಾದಿತ್ತು. ಜನ ಈ ವೇಷದಲ್ಲೂ ಅವರನ್ನು ಗುರುತಿಸಿದಾರದರು.

ಇಷ್ಟೆಲ್ಲ ವಿಧಗಳಿಂದ ಬಡವರ ಬಂಧುವಾಗಿರುವ ಗೋಪಾಲಯ್ಯ ಇಲ್ಲಿ ಸೋಮ ಹಿತವಾದವನ್ನು ಕೇಳಿದುದರಲ್ಲಿ ಆಶ್ಚರ್ಯವಿಲ್ಲ. ಅವನಂತಹ ಮಂದಮತಿಯು, ತನ್ನ ಏಳಿಗೆಗೆಂದು ಅವರು ಹೇಳಿದ ಸೂಚನೆಯಲ್ಲಿ,ತನ್ನ ಎಲ್ಲ ಆಶೆಗಳನ್ನೂ ಕರಟಿಸಬಲ್ಲ ವಿಷಜ್ವಾಲೆಯ ಕಿಡಿಯು ಅಡಗಿದ್ದುದನ್ನು ಕಾಣದುದರಲ್ಲಿಯೂ ಆಶ್ಚರ್ಯವಿಲ್ಲ.

" ನಿನ್ನ ತಂದೆಗೆ ಆ ಹತ್ತಿಲು ದರಖಾಸ್ತಿಗೆ ದೊರೆಯಬೇಕಾಗಿದ್ದರೆ, ಅವನು ಯಾರ್ಯಾರ ಕೈಕಾಲು ಹಿಡಿದಿದ್ದನೆಂದು ನೀನು ತಿಳಿಯಲಾರೆ; ನನಗೆ ಅದೆಲ್ಲ ಗೊತ್ತು. ಆಷ್ಟು ಕಷ್ಟದಿಂದ ಅವನು ಸಂಪಾದಿಸಿದುದಾದರೂ, ನೀವು ಸುಖವಾಗಿ ಬಾಳಬೇಕೆಂಬ ಹಿರಿಯಾಸೆಯಿಂದ. ಅವನು ಎರಡು ವರ್ಷ ಹೆಚ್ಚು ಬದುಕುತಿದ್ದರೆ ನೀನು ಮಾಡಬೇಕೆನ್ನುವ ಕೆಲಸವನ್ನು ತಾನೇ ಪೂರೈಸುತ್ತಿದ್ದ. ಹೋಳು ಹತ್ತಲನ್ನು ನಿಮಗೆ ಬಿಟ್ಟುಹೋಗುವುದಕ್ಕೆ ಬದಲಾಗಿ, ಕತ್ತು ಮುಡಿ ಗದ್ದೆ ಪಿತ್ರಾರ್ಜಿತವಾಗಿ ನಿಮಗೆ ದೊರೆಯುತ್ತಿತ್ತು—" ಹಿತಚಿಂತಕನಂತೆ ಗೋಪಾಲಯ್ಯ ಸೋಮನೊಡನೆ ಹೇಳಿದರು; ಆತನ ತಂದೆಯ ವಿಷಯ ಸೋಮನಿಗಿಂತಲೂ ತನಗೇ ಹೆಚ್ಚು ತಿಳಿದಿದೆಯೆಂಬಂತಿತ್ತು ಆವರ ಠೀವಿ.

ಈ ಮಾತನ್ನು ಕೇಳಿದಾಗ ಸೋಮನಿಗೆ ಆಶ್ಚರ್ಯವಾಯಿತು. ತಾನೂ ಬಟ್ಯನೂ ಮಳೆಗಾಲವಿಡೀ ದುಡಿದರೂ, ಹತ್ತು ವರ್ಷಗಳಲ್ಲಿ ಪೂರೈಸಲಸದಳವಾಗಬಹುದಾದ ಕೆಲಸವನ್ನು, ತಂದೆ ಎರಡು ವರ್ಷಗಳಲ್ಲಿ ಹೇಗೆ ಸಾಧಿಸುತಿದ್ದನೆಂಬುದನ್ನು ತಿಳಿಯಬೇಕೆಂದು ಅವನಿಗೆ ಬಲು ಕುತೂಹಲ; ಆದರೆ ಅವನು ಕೇಳುವ ಮೊದಲೇ ಗೋಪಾಲಯ್ಯನೇ ಅವನ ಕುತೂಹಲವನ್ನು ಇನ್ನೂ ಕೆರಳಿಸಲೆಂದು, " ನಿನ್ನ ತಂದೆ ಬಲು ಬುದ್ಧಿವಂತ; ತಾನೊಬ್ಬನೇ ಗೈದು ಇಡೀ ಹಿತ್ತಲನ್ನು ಗದ್ದೆಯಾಗಿ ಮಾಡಲು ಎಷ್ಟೋ ವರ್ಷಗಳು ಬೇಕೆಂದು ಅವನಿಗೂ ತಿಳಿದಿತ್ತು. ಹಾಗೆಂದೇ ಅವನು ನನ್ನ ಸಹಾಯ ಕೇಳಿದ್ದ. ನಾನಾದರೂ ನಮ್ಮೊಳಗಿನ ಸ್ನೇಹಾಚಾರಕ್ಕಾಗಿ ಒಪ್ಪಿದ್ದೆ. ಆದರೆ.... ಯಾವುದಕ್ಕೂ ಆತನ ಕಾಲ ಹಾಗೆ ಕಳೆದುಹೋಯಿತು!" ಎಂದರು.

ಸೋಮನಿಗೆ ಇನ್ನು ತಡೆಯಲಾಗಲಿಲ್ಲ. ತಂದೆಯ ಆಲೋಚನೆಯನ್ನು ತಾನು ಕಾರ್ಯರೂಪಕ್ಕೆ ತಂದರೆ, ತನ್ನ ಆಸೆ ಸಫಲವಾಗುವುದರೊಂದಿಗೆ ತಂದೆಯ ಅಂತಿನ ಬಯಕೆಯನ್ನು ಕೈಗೂಡಿಸಿದ ಪುಣ್ಯವೂ ತನ್ನ ಪಾಲಿನದಾಗುವುದೆಂದು ಭಾವಿಸಿ, " ಹಿರಿಯರ ಬುದ್ಧಿ ನಮಗೆಲ್ಲಿಂದ? ನಾವಿಬ್ಬರೂ ಕೆಲವು ವರ್ಷಗಳಿಂದ ಆಗಾಗ ದುಡಿದು, ಸ್ವಲ್ಪ ಭಾಗವನ್ನು ಮಾತ್ರ ಕೃಷಿಗೆ ಅನುಕೂಲವಾಗುವಂತೆ ಮಾಡಿದ್ದೇವೆ. ತಂದೆಯ ಆಲೋಚನೆಯನ್ನು ಅವನು ನನ್ನಲ್ಲಿ ಹೇಳಲಿಲ್ಲ. ಹೇಳುತಿದ್ದರೆ ಅದನ್ನು ನಾನು ಪೂರೈಸದಿರು-

ಗದುಗಿನಲ್ಲಿ

ಮೇಲ್ತರಗತಿಯ ಊಟ ಹಾಗೂ ವಸತಿಗೃಹ

ದುರ್ಗಾ ಲಾಜ್

ಗದುಗಿಗೆ ಬರುವ ಪ್ರವಾಸಿಕರಿಗೆ ಇನ್ನು ಮೇಲೆ
ಯಾವ ತೊಂದರೆಯೂ ಇಲ್ಲ

ಉತ್ತಮ ಊಟ, ಹೊಸಮಾದರಿಯ ಸ್ನಾನಗೃಹ, ಬೆಳಕು—ಹವೆಯುಳ್ಳ
ಕೋಣೆಗಳು. ಸಹಕುಟುಂಬ ಬಂದವರಿಗೆ ಪ್ರತ್ಯೇಕ ವ್ಯವಸ್ಥೆ.

ನಾವು ನೀಡುವ ಸೌಕರ್ಯಕ್ಕೆ ನೀವು ಕೊಡುವ ಬೆಲೆ ಅತ್ಯಲ್ಪ!
ಒಮ್ಮೆ ಅವಶ್ಯ ಸಂದರ್ಶಿಸಿರಿ.

ತ್ತಿದ್ದಿಲ್ಲ. ನಿಮಗೂ ಅದು ತಿಳಿದಿದೆಯೆಂದು ನನಗೆ ಹೇಗೆ ಗೊತ್ತಾಗ-ಬೇಕು? ಈಗಲಾದರೂ ನೀವು ಅದನ್ನು ತಿಳಿಸಿದರೆ, ನಾನು ತಂದೆಯ ಕೊನೆಯ ಆಶೆಯನ್ನು ತೀರಿಸಿ, ಅವನ ಋಣದಲ್ಲಿ ಸ್ವಲ್ಪ ಅಂಶವನ್ನಾದರೂ ಸಂದಾಯಮಾಡುತಿದ್ದೆ" ಎಂದನು. ಇಷ್ಟನ್ನು ಹೇಳುತ್ತಿದ್ದಾಗ, ತೃಷಾಪೂರಿತ ನಯನಗಳಿಂದ ಗೋಪಾಲಯ್ಯನ ಮುಖವನ್ನೆ ನಿರೀಕ್ಷಿಸುತಿದ್ದ ಸೋನು.

ಹಕ್ಕಿ ತಾನೊಡ್ಡಿದ ಉರುಳಿಗೆ ತಲೆಯೊಡ್ಡುತ್ತಿದೆಯೆಂದು ಗೋಪಾಲಯ್ಯನಿಗೆ ಆಗಲೇ ಹೊಳೆದಿತ್ತು. ನಿಧಾನವಾಗಿ ಗೋಪಾಲಯ್ಯ ಹೇಳತೊಡಗಿದರು: "ನೋಡು ಸೋಮ, ನಿನ್ನ ತಂದೆಯೂ ಈ ವಿಷಯದಲ್ಲಿ ನನ್ನ ಅಭಿಪ್ರಾಯ ಕೇಳಿದ್ದ. ನಾನು ಅವನಿಗೆ ಹೇಳಿದುದು—'ನೀನು ಈಗ ಯಾರಿಂದಲಾದರೂ ಸ್ವಲ್ಪ ಹಣ ಸಾಲವಾಗಿ ತೆಗೆದುಕೊಂಡು, ಒಂದೇ ವರ್ಷದಲ್ಲಿ ಕೆಲಸದಾಳುಗಳ ಸಹಾಯದಿಂದ ನಿನ್ನ ಹಿತ್ತಿಲಿನಲ್ಲಿ ಗದ್ದೆ ಕಡಿಸು! ಮತ್ತೆ ಬೆಳೆಯಾಗ ತೊಡಗಿತೆಂದರೆ, ಮೂರು ನಾಲ್ಕು ದರ್ಷಗಳಲ್ಲಿ ಸಾಲ ತೀರಿಸಿ ರಾಜನಂತೆ ಬಾಳಬಹುದು'— ಎಂದು. ಅವನು ಕೂಡಲೆ ಒಪ್ಪಿದ. ಕೊನೆಗೆ ಅವನಿಗೆ ಹಣ ಸಾಲಕೊಡಲು ಕೂಡ ನಾನೇ ಒಪ್ಪಿದ್ದೆ. ಆದರೆ, ಅಷ್ಟರಲ್ಲೇ ಪುಣ್ಯಾತ್ಮ ಸ್ವರ್ಗಕ್ಕೆ ನಡೆದ. ಮತ್ತೆ ನಿಮ್ಮ ಕಾರುಭಾರ ತೊಡಗಿತು. ನಾನಾಗಿ, ಈ ಸೂಚನೆಯನ್ನು ನಿನ್ನ ಗಮನಕ್ಕೆ ತರಲಿಲ್ಲ ಎಷ್ಟೆಂದರೂ ನಿನ್ನ ಮನೆ; ನಿನ್ನ ಹಿತ್ತಿಲು. ನಾನೇಕೆ ತಲೆಗೆ ಹಚ್ಚಿಕೊಳ್ಳಬೇಕು!—ಎಂದು ಸುಮ್ಮನಿದ್ದೆ." ಈ ಮಾತುಗಳು ಗೋಪಾಲಯ್ಯನ ಬಾಯಿಂದ ಉದುರುತಿದ್ದಂತೆ, ಸೋಮನಿಗೆ ಅವರ ದೇಹದೊಳಗಿನ ತನ್ನ ತಂದೆಯೇ ಕುಳಿತು, 'ನೀನೂ ಇದೇ ರೀತಿ ಮಾಡಬೇಕು; ಗೋಪಾಲಯ್ಯ ನಿನಗೂ ಸಾಲ ಕೊಡಲು ಸಮ್ಮತಿಸದೆ ಇರಲಾರರು' ಎಂದು ಹೇಳುತ್ತಿರುವಂತೆ ಭಾಸವಾಯಿತು.

"ಸ್ವಾಮಿ, ತಂದೆಯೊಡನೆ ಹೇಗೂ ನೀವು ಸಹಾಯಮಾಡಲು ಸಮ್ಮತಿಸಿದ್ದೀರಿ. ಸ್ವಲ್ಪ ದೊಡ್ಡ ಮನಸ್ಸು ಮಾಡಿ ನನಗೂ ನೆರವೀಯುವಿರಾದರೆ, ನನ್ನ ಕುಟುಂಬ ನಿಮ್ಮ ಹೆಸರು ಹೇಳಿ ಉದ್ಧಾರವಾಗಿಕೊಳ್ಳುತ್ತಿತ್ತು. ನನ್ನ ತಂದೆ ಬೇರೆಯಲ್ಲ; ನೀವು ಬೇರೆಯಲ್ಲ. ಇದಕ್ಕೆ ನೀವು ಒಲ್ಲೆನೆನ್ನಬಾರದು" ಎನ್ನುತ್ತಾ, ಆಶಾಪೂರಿತ ದೃಷ್ಟಿಯಿಂದ ಸೋಮನೇ ಬೇಡಿಕೊಂಡ.

ಗೋಪಾಲಯ್ಯನಿಗೆ ಹಿಂದಿನಿಂದಲೂ ಸೋಮನ ಹಿತ್ತಿಲಿನ ಮೇಲೆ ಕಣ್ಣು. ಕೂಲಿಯವನಾದರೂ ಸ್ವಂತ ಬೇಸಾಯದಿಂದ ಸ್ವಲ್ಪ ಕಾಲವಾದರೂ ಸುಖವಾಗಿ ಕಳೆಯುತ್ತಿರುವನೆಂದು ಸಂತಸ ಉಂಟಾಗುವುಕ್ಕೆ ಬದಲಾಗಿ, ಈ ಬಡವರ ಬಂಧುವಿನಲ್ಲಿ ಹೊಟ್ಟೆಯುರಿ ಎದ್ದಿತ್ತು. ಹೇಗಾದರೂ ಆ ಹಿತ್ತಿಲು ತನಗೆ ದೊರೆತರೆ.... ಹಕ್ಕು ಮುಡಿ ಗದ್ದೆಯೆಂದರೆ ಸುಮ್ಮನೆ ಆಗುತ್ತದೆಯೇ?

ಮಾತಾಡಲು ಅವರಿಗೆ ಯಾರೂ ಕಲಿಸಬೇಕಾಗಿಲ್ಲ. ಮೇಲೆಯುಬೆಳೆ ಜಿಗಿಯುತ್ತಾ 'ಮನವಿಲ್ಲದಿದ್ದರೂ ತಂದೆಗಾಗಿ ಅವರು ಒಪ್ಪಿಕೊಂಡರು' ಎಂಬ ಭಾವನೆ ಸೋಮನಲ್ಲಿ ಮೂಡುವಂತೆ, ಗೋಪಾಲಯ್ಯ ಇನ್ನೂರು ರೂಪಾಯಿಗಳನ್ನು ಹಿತ್ತಿಲಿನ ಅಡವಿಯ ಮೇಲೆ ಸೋಮನಿಗೆ ಕೊಡಲೊಪ್ಪಿದರು. ಸ್ವರ್ಗಕ್ಕೆ ಮೂರು ಬೆರಳೆಂಬಂತಾಯಿತು ಸೋಮನಿಗೆ. ಗೋಪಾಲಯ್ಯನಿಗೂ ಹಾಗೆಯೆ. ಅದರೆ ಕಾರಣ ಮಾತ್ರ ಬೇರೆ: ಇನ್ನೂರು ರೂಪಾಯಿಯ ಸಾಲ ಅದಕ್ಕೆ ವರ್ಷ ವರ್ಷ ಸೇರುವ ಚಕ್ರಬಡ್ಡಿ — ಸೋಮ ಇವುಗಳನ್ನೆಲ್ಲ ಕೊಟ್ಟು ಹಿತ್ತಿಲನ್ನು ಬಿಡಿಸಲಿಕ್ಕಿದೆಯೆ? ಅದು ಇಂದಿನಿಂದಲೆ ತನ್ನ ಹೆಸರಿಗೆ ಆದಂತೆಯೇ—ಎಂದು ಗೋಪಾಲಯ್ಯನಿಗೆ ಸಂತೋಷ.

ಮನೆಗೆ ಬಂದವನೇ ಸೋಮ, ತನ್ನ ಬುದ್ಧಿವಂತಿಕೆಗೆ ಹೆಮ್ಮೆ ಪಡುತ್ತ, ಗೋಪಾಲಯ್ಯನೊಡನೆ ತನಗಾದ ಸಂಭಾಷಣೆ—ಒಡಂಬಡಿಕೆಗಳನ್ನು ಚಾಚೂ ತಪ್ಪದೆ ತಮ್ಮನೊಡನೆ ಹೇಳಿದನು. ಬಟ್ಯನಿಗಾದ ಆಶಾಭಂಗಕ್ಕೆ ಮೇರೆಯಿಲ್ಲ. ತಮ್ಮ ಜಾತಿಯ ಅನೇಕ ಜನರ ದರಖಾಸ್ತುಗಳು ಇದೇ ರೀತಿ ಗೋಪಾಲಯ್ಯನಿಗೂ ಇತರ ಸಿರಿವಂತರಿಗೂ ಆಡವಾದುವುಗಳ ಗತಿ ಅವನಿಗೆ ತಿಳಿದಿತ್ತು. ಒಬ್ಬ ನಾದರೂ ಅಡವನ್ನು ಪುನಃ ಬಿಡಿಸಿಕೊಂಡವನಿಲ್ಲ ಅಡವು ಮಾಡಿದ ಜಾಗವನ್ನು ಸಾಲದ ಹಣಕ್ಕಾಗಿ ಸಾಲಗಾರರಿಗೇ ಬಿಟ್ಟು ಕೊನೆಗೆ ಒಮ್ಮೆ ತಮ್ಮದಾಗಿದ್ದ ಆದೇ ಜಾಗದಲ್ಲಿ ಅವರು ಈಗ ಸಾಲಿಗರ ಒಕ್ಕಲಾಗಿರುವುದು ಅವನಿಗೆ ಚೆನ್ನಾಗಿ ಅರಿತಿತ್ತು. ಇದನ್ನೆಲ್ಲ ಹೇಳುತ್ತ ಬಟ್ಯ ಅಣ್ಣನಿಗೆ ಸಾಕಷ್ಟು ತಿಳಿಯ ಹೇಳಿದ. ಆದರೆ, ಸೋಮನ ಅಕ್ಕಾಲೆ ಅವನನ್ನು ಮಂಕುಗೊಳಿಸಿತ್ತು. ಈಗ ಅವನಿಗೆ ಯಾರ ಹಿತಸೂಚನೆಯೂ ಗೋಪಾಲಯ್ಯನ ಮಾತಿಗಿಂತ ಕಡಿಮೆಯದೇ. ಅಂದಿನಿಂದ ಉಂಟಾಯಿತು ಆ ಸಂಸಾರದಲ್ಲಿ ಬಿರುಕು. ದಿನಂದಿನ ಅದು ದೊಡ್ಡದಾಗುತ್ತಲೇ ನಡೆಯಿತು.

ಇಷ್ಟರ ತನಕ ಹೇಳಿದುದೆಲ್ಲಾ ನಿನ್ನೆಯ ಘಟನೆಗೆ ಕಾರಣವಾದುವುಗಳು. ನಿನ್ನೆ ಗೋಪಾಲಯ್ಯನ ಅಂಗಡಿಯೆದುರು ಅಣ್ಣ-ತಮ್ಮಂದಿರಿಬ್ಬರೂ ಸಂಜೆ ಕುಳಿತಿದ್ದರು. ಹಿತ್ತಿಲನ್ನು ಅಡವಿಟ್ಟು ಹಣಪಡೆಯಲು ನಡೆಯಬೇಕಾದ ಕಾಗದ—ಪತ್ರಗಳು ಮತ್ತು ದಾಖಲೆಗಳಿಗಾಗಿ ಸೋಮ ತಮ್ಮನನ್ನು ಕರೆದುಕೊಂಡು ಬಂದಿದ್ದ. ಬಟ್ಯನಿಗೆ, ತನ್ನ ಹೆಬ್ಬೆಟ್ಟು ಒತ್ತಿಸುವುದಕ್ಕೆ ಅಣ್ಣ ಕರೆತಂದಿರುವನೆಂದು ತಿಳಿಯದು. ಅದು ತಿಳಿದುದು, ಗೋಪಾಲಯ್ಯ ಅಡವಿನ ದಾಖಲೆಯನ್ನು ಮುಂದಿಡುತ್ತಾ, "ಇಲ್ಲಿ, ಇಲ್ಲಿ" ಎಂದು ಹೆಬ್ಬೆಟ್ಟಿನ ಗುರುತು ಹಾಕಬೇಕಾದ ಜಾಗಗಳನ್ನು ತೋರಿಸಿದಾಗ ಮಾತ್ರ.

ಅವಕ್ಕೆ ಹೆಬ್ಬೆಟ್ಟು ಒತ್ತುವುದು, ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಧರ್ಮಾರ್ಥ ಕೊಡುವುದು—ಎರಡೂ ಒಂದೇ ಫಲನೆಂದು ಬಟ್ಯನಿಗೆ ಹೊಳೆಬಿತು. ತಾನು ಖಂಡಿತ ಅದಕ್ಕೆ ಸಮ್ಮತಿಸಲಾರೆನೆಂದೂ, ಸ್ವರ್ಗಸ್ಥನಾದ ತಂದೆಗೂ ಇದು ಹಿತವಾಗದೆಂದೂ ಅವನು ಖಂಡತುಂಡವಾಗಿ ಹೇಳಿಬಿಟ್ಟನು.

ಸೋಮನ ತೇಜೋವಧೆಯಾಯಿತು. ಗೋಪಾಲಯ್ಯನೆದುರು, ತಾನು ಸಾಕಿ ಬೆಳೆಸಿದ ತಮ್ಮ ತನ್ನ ಮಾತನ್ನು ಮೀರಿದುದನ್ನು ತನು ಸಹಿಸಲಾರದಾದ. ಎಳೆದುತಂದಾದರೂ ಅವನ ಹೆಬ್ಬೆಟ್ಟು ಒತ್ತಿಸಿಯೇ ಸಿದ್ಧ— ಎಂದು, ಸೋಮು ಬಟ್ಯನ ಕೈಹಿಡಿದೆಳೆದ. ಇಬ್ಬರೊಳಗೂ ಜಗಳವಾಯಿತು. ಬಟ್ಯ ಒಪ್ಪಲಾರ; ಸೋಮು ಬಿಡಲಾರ. ಜಗಳದ ಗಲಭೆಯಲ್ಲಿ ಬಟ್ಯ ಅಣ್ಣನನ್ನು ಜುಟ್ಟು ಹಿಡಿದು ಬಗ್ಗಿಸಿ, ಅವನಿಂದ ತಪ್ಪಿಸಿಕೊಂಡ.

ಈಗ ಸೋಮನಿಗೆ ಏನುಮಾಡುವುದೆಂದು ತಿಳಿಯಲಿಲ್ಲ. ಬಲಾತ್ಕಾರದಿಂದಲೂ ತಾನು ಕೃತಕೃತ್ಯನಾಗಲಿಲ್ಲ. ತನ್ನ ಜುಟ್ಟು ಇಲ್ಲದಿದ್ದರೆ ಬಹುಶಃ ಅವನಿಗೆ ತನ್ನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ—ಎಂದು ಅವನ ಮರುಳುಬುದ್ಧಿಗೆ ಹೊಳೆಯಿತು. ತಾನು ಗೋಪಾಲಯ್ಯನಿಂದ ಪಡೆಯಬೇಕಾದ ಹಣ, ಹಿತ್ತಿಲಲ್ಲಿ ಆಗಬೇಕಾದ ಗದ್ದೆಗಳು, ಅನಂತರ ತಾನು ಅನುಭವಿಸಲಿರುವ ಸುಖ— ಇವುಗಳೆಲ್ಲ ಕ್ಷಣಾರ್ಧದಲ್ಲಿ ಅವನ ಭಾವನೆಯೆದುರು ಮಿಂಚಿ ಮಾಯವಾದುವು. ಈ ಹಾಳು ಜುಟ್ಟಿನಿಂದಾಗಿ ತಮ್ಮ ತಪ್ಪಿಸಿಕೊಂಡುದು, ತನ್ನ ಭವಿಷ್ಯವನ್ನು ಮಣ್ಣುಗೂಡಿಸಿತೆಂದು ಅವನು ಭಾವಿಸಿದ. ತಮ್ಮನ ಮೇಲಿನ ರೋಷ ಜುಟ್ಟಿನ ಮೇಲೆ ತಿರುಗಿತು.

ಬಟ್ಯನನ್ನು ದುರದುರನೆ ನೋಡುತ್ತ, "ನಾಯಿ, ಅಣ್ಣನೆಂದು ಸಹ ನೋಡದೆ, ನಾನು ಹೇಳಿದುದನ್ನು ತಿರಸ್ಕರಿಸಿದೆ. ಸಾಲದುದಕ್ಕೆ ನನ್ನ ಜುಟ್ಟು ಹಿಡಿದು ನನ್ನನ್ನು ಅವಮಾನಿಸಿದೆ. ಇದು ಇದ್ದುದರಿಂದಲ್ಲವೆ ನೀನು ಇದನ್ನು ಹಿಡಿದು ನನ್ನ ತಲೆಬಗ್ಗಿಸಿದುದು. ನೋಡುವೆನು—ಇನ್ನು ಏನು ಮಾಡುವಿಯೋ, ನೋಡುವೆನು—" ಎನ್ನುತ್ತಾ ಸೊಂಟದಿಂದ ಚೂರಿಯನ್ನೆಳೆದು, ಎಡಗೈಯಿಂದ ತನ್ನ ಜುಟ್ಟನ್ನು ಹಿಡಿದು, ಬಲಗೈಯಿಂದ ಸರಕ್ಕನೆ ಅದನ್ನು ಕತ್ತರಿಸಿಬಿಟ್ಟನು.

ಶಿವಪೂಜೆಯಲ್ಲಿ ಕರಡಿಯಂತೆ ಬಂದ ಬಟ್ಯ, ತನ್ನ ಆಶೆಯ ಚಿಗುರನ್ನು ಚಿವುಟಿದ ಬೇಸರವಿಲ್ಲದಿರುತಿದ್ದರೆ, ಗೋಪಾಲಯ್ಯ ಸೋಮನ ಈ ಜಡ್ಡುಬುದ್ಧಿಗೆ ನಗದಿರಲು ಅಸಾಧ್ಯ. ಆದರೆ ಈಗ ಅವರಿಗೆ ಹೇಗಾದರೂ ಸೋಮನನ್ನು ಬಲೆಯಲ್ಲಿ ಕೆಡವಬೇಕಾಗಿತ್ತು. ಆದುದರಿಂದಲೇ ಬಂದ ನಗುವನ್ನೂ ತಡೆಯುತ್ತ, "ಸೋಮ, ಹೋಗಲಿ; ಹಾಳು ಹುಡುಗ; ಎಂದಾದರೂ ದಾರಿಗೆ ಬಂದಾನು. ಬಾರದಿದ್ದರೆ ನಾಯಲಿ. ನೀನು ನಿನ್ನ ತಂದೆಯ ಹಿರಿಯ ಮಗ. ಅವನ ಆಸ್ತಿಯ ಸಕ್ಕೆಲ್ಲ ನಿನ್ನದು. ನೀನು ಮಾತ್ರ ಆಡವುಮಾಡಿಕೊಟ್ಟರೂ ಸಾಕು. ನಾನು ಹಣ ಕೊಡಲು ಒಪ್ಪಿದುದು ಒಪ್ಪಿದಂತೆಯೆ!" ಎಂದರು.

ಈಗ ಸೋಮನ ಆವೇಶವೆಲ್ಲಾ ಇಳಿಯಿತು. ತಿಂಡಿಯೆಂದು ಭಾವಿಸಿ ನೊಣ ಉರಿಯುವ ದೀಪಕ್ಕೆರಗಿತು. ತಲೆಯ ಜುಟ್ಟನ್ನು ಕತ್ತರಿಸಿ, ತನ್ನ ಜೀವನದ ಜುಟ್ಟನ್ನು ಗೋಪಾಲಯ್ಯನ ಕೈಗೀಯುತ್ತಿರುವೆನೆಂಬ ಅರಿವಿಲ್ಲದೆ, ಸೋಮು ದಾಖಲೆಯಲ್ಲಿ ತನ್ನ ಎಡದ ಹೆಬ್ಬೆಟ್ಟಿನ ಗುರುತು ಮೂಡಿಸಿದ.

ಶಾಲೆಯಲ್ಲಿಯ ಕೆಲಸ ತೀರಿಸಿ ಮನೆಗೆ ಮರಳುತ್ತಿದ್ದ ನಾನು, ದೂರದಿಂದಲೇ ಈ ನಾಟಕವನ್ನು ನೋಡಿದೆ. ನಿಟ್ಟುಸಿರು ಬಿಡುತ್ತ ನಡೆದ ಬಟ್ಯನನ್ನು ಕರೆದು ಸಂಗತಿಯೇನೆಂದು ವಿಚಾರಿಸಿದಾಗ, ಈ ವರ್ಷ ನೊದಲಿನಿಂದಲೇ ದೀಕ್ಷೆನಹಿಸಿ ತೊಡಗಿದ ಗೋಪಾಲಯ್ಯನ ಯಜ್ಞದ ಕತೆಯನ್ನೂ, ಪೆಡ್ಡು ಹೋತನಾದ ಸೋಮು ಆ ಯಜ್ಞದ ಪಶುವಾದುದನ್ನೂ ದುಃಖದಿಂದ ಉದ್ಗರಿಸಿದ.

* * *

ಗೋಪಾಲಯ್ಯನಂತಹ ದೇಶಸೇವಕರು, ಸಮಾಜಸೇವಕರು ಇನ್ನೆಷ್ಟೊ ನಮ್ಮ ಭಾರತದಲ್ಲಿ; ಆದೂ ಇಂದಿನ ಸ್ವತಂತ್ರಭಾರತದಲ್ಲಿ! ಈ ಸ್ವಾತಂತ್ರ್ಯಕ್ಕಾಗಿ ಜೀವವನ್ನೆ ಮುಡಿಪಾಗಿಟ್ಟ ವೀರರು ಸ್ವರ್ಗದಲ್ಲಿದ್ದು ಇಂದು ಭಾರತವನ್ನು ನೋಡುತ್ತಿದ್ದರೆ, ಅವರ ಕಣ್ಣಿಗೆ ಇಲ್ಲಿ ಬೀಳುವವರು ಇಂತಹ ವ್ಯಕ್ತಿಗಳು, ಮತ್ತು ಅವರ ಕುಹಕಕೃತ್ಯಗಳು. ಇದನ್ನು ನೋಡಿದಾಗ ಅವರ ಹೃದಯಗಳಲ್ಲಿ ಕುದಿಯೆದ್ದು, ಅದೇ ಜ್ವಾಲೆ ಅವರ ಕಣ್ಣುಗಳಿಂದ ಹೊರಚಿಮ್ಮಿ, ಸಂಜೆಯ ಈ ಆಗಸವನ್ನೆಲ್ಲ ಕೆಂಪಾಗಿಸಿರಬೇಕು— ಈ ರೀತಿ ನನ್ನ ಭಾವನೆ ಸಂಜೆಯ ಆಕಾಶದ ಕೆಂಬಣ್ಣಕ್ಕೆ ಕಾರಣವನ್ನು ಕಲ್ಪಿಸಿತು.

ಚಿತ್ರ ನೋಡಬೇಕು ಮೆಹಬೂಬರದು ಎಂದು ಯಾರಿಗೆ ಎನಿಸಿಲ್ಲ?

ಅನೋಖಿ ಆದಾ

ಮೆಹಬೂಬರ ನಿತಾಂತ ಸುಂದರವಾದ ಚಿತ್ರ.

ನಸೀಮ - ಸುರೇಂದ್ರ–ಪ್ರೇಮ ಅದೀಬ್–ಜೆಬ್ ಕುರೇಶಿ

ಇವರು ಅಭಿನಯಿಸಿದ್ದಾರೆ.

ಧಾರವಾಡ ರೀಗಲ್ ಸಿನೆಮಾದಲ್ಲಿ ನಡೆದಿದೆ

ಬರಲಿರುವ ಚಿತ್ರ:

ರಣಜಿತ್ ಕಂಪನಿಯ 'ಮಿಟ್ಟಿಕೆ ಖಿಲೌನೆ'

ಅಂದಿನಿಂದ ಇಂದಿನವರೆಗೆ

ಡಾ. ದ. ರಾ. ಬೇಂದ್ರೆ ಎಂ. ಎ. ಸೊಲ್ಲಾಪುರ

★

ಅಂದಿನಿಂದ ಇಂದಿನ ವರೆಗೂ ಭಾರತದಲ್ಲಿ ಹೋರಾಟ-ಏರಾಟಗಳೇ ನಡೆದುದನ್ನು ಇತಿಹಾಸ ಸಾರುತ್ತಿದೆ. ಕಣ್ಣಾರೆ ಕಾಣುತ್ತಲಿದ್ದೇವೆ. ಎಲ್ಲರ ಗುರಿಯೂ ಮಾನವೀಯ ಸುಖ-ಶಾಂತಿಗಳೇ ಆಗಿದ್ದರೆ, ಈ ಹೋರಾಟ-ಹೊಡೆದಾಟವೇಕೆ ಬೇಕು?

★

ಭರತಖಂಡದ ಮಟ್ಟಿಗೆ ನಾವು ವಿಚಾರಮಾಡುವುದಾದರೆ ವೇದಗಳೇ ಇಲ್ಲಿಯ ಅತ್ಯಂತ ಪ್ರಾಚೀನ ವಾಙ್ಮಯ--ಎಂಬ ತಿಳಿವಳಿಕೆ ನಮ್ಮಲ್ಲಿ ದೃಢವಾಗಿ ಬಿಟ್ಟಿದೆ. ಬೌದ್ಧರು, ಜೈನರು ಇದನ್ನು ಒಪ್ಪದಿರುವುದು ಒತ್ತಟ್ಟಿಗಿರಲಿ; ಶೈವರೂ ವೈಷ್ಣವರೂ ಒಮ್ಮೊಮ್ಮೆ ಇದನ್ನು ಒಪ್ಪದಿರುವ ಸಂದರ್ಭ ಬರುತ್ತದೆ. ಪುರಾಣಗಳೇ ವೇದಗಳನ್ನು ವೈವಸ್ವತ ಮನ್ವಂತರದಿಂದ ಮುಂದಾದ ಕೃತಿಗಳು ಎಂದು ಹೇಳುವಂತಿದೆ. ಹೀಗಾಗಿ, ವೇದದ ಪ್ರಾಚೀನತೆಗೆ ಭಂಗ ಬಂದು ಎಲ್ಲಿ ವೇದದ ಗೌರವಕ್ಕೇ ಹಾನಿ ತಟ್ಟುವುದೊ ಎಂಬ ಭಯ, ಸನಾತನಿಗಳು ಎಂದೆನಿಸಿಕೊಳ್ಳುವ ಕೆಲವರಿಗೆ ಹುಟ್ಟುತ್ತದೆ. ವೇದದ ಅಗೌರವ ಎಂದರೆ ಭಗವಂತನಿಗೆ ವಿರುದ್ಧ ಹೋದಂತೆ ಎಂಬ ಅನುಮಾನದಿಂದ, ವೇದಗಳನ್ನು ಅತ್ಯುನ್ನತ ಪದವಿಗೆ ಏರಿಸಹೋಗಿ ಭಗವಂಶನನ್ನೇ ಮುಳುಗಿಸಿಬಿಟ್ಟ ಮೀಮಾಂಸಕರೂ ಇದ್ದಾರೆ. ಇದಲ್ಲದೆ ವೇದಗಳನ್ನೇ ಶಾಖೋಪಶಾಖೆಯಾಗಿ ಹಂಚಿಕೊಂಡು, ತಮ್ಮ ತನ್ಮ ಹೆಚ್ಚಳ ಹಿಗ್ಗಿಸಿಕೊಳ್ಳುವ ಪ್ರಯತ್ನದಲ್ಲಿ, ವೈದಿಕ ಋಷಿಕುಲಗಳು ಜಗಳಗಂಟರ ಪಂಗಡಗಳಾಗಿ ಬಿಡುತ್ತವೆ. ಇಷ್ಟೇ ಅಲ್ಲ, ವೇದದ ಸಂತತಿಯಲ್ಲಿಯೇ ಹುಟ್ಟಿದ ಔಪನಿಷದಿಕ ಋಷಿಗಳ ದರ್ಶನಗಳು ವೈದಿಕ ಋಷಿಗಳ ದರ್ಶನಗಳನ್ನೇ ತಲೆಮೆಟ್ಟಿ ನಿಂತು 'ವೇದಾಂತ' ಎಂದು ಮುಂದೆ ಬರುವುವು. ಈ ಔಪನಿಷದಿಕ ದರ್ಶನಗಳಲ್ಲಾದರೂ ಹೊಂದಿಕೆಯುಂಟೆ?—ಎಂದರೆ, ತೋದಿಕೆಗೆ ಹೊಂದಿಕೆಯಿರದಿದ್ದರೂ ಒಳಗೆ ಹೊಂದಿಕೆಯುಂಟು—ಎಂದು ಹೇಳುವ ದರ್ಶನಗಳು ಮುಂದೆ ಬಂದು, ಅವುಗಳಲ್ಲಿ ಮತ್ತೆ ತಮ್ಮತಮ್ಮಲ್ಲಿ ಹೊಂದಿಕೆ ಇಲ್ಲ ಇಷ್ಟೇ ಅಲ್ಲ; ಪ್ರತಿಯೊಂದೂ ಇನ್ನೊಂದರ ಹೊಂದಿಕೆಯನ್ನು ತಪ್ಪೆಂದು ಪ್ರತಿಭಟಿಸುತ್ತದೆ. ತಪ್ಪು ಸರಿ ಇದನ್ನು ನಿರ್ಣಯಿಸುವ ಬಗೆಯಾದರೂ ಹೇಗೆ? ಒಂದು ಪುರಾತನ ಅನುಭವವೇ ರೂಪುಗೊಂಡು ನಿಂತ ಶಾಸ್ತ್ರ; ಎರಡು, ಪ್ರತಿ ತನ್ನ ತನ್ನ ಅನುಭವದಿಂದ ರೂಪುಗೊಂಡ ಜ್ಞಾನ; ಮೂರು, ಆದನ್ನು ವ್ಯವಹಾರದೊಡನೆ ಯುಕ್ತಿಯುಕ್ತವಾಗಿ ಹೊಂದಿಸಿ ಹೇಳುವ ಶುದ್ಧ ಬುದ್ಧಿವಾದದ ಜೊಕ್ಕ ಪದ್ಧತಿ. ಈ ಮೂರರ ಬಾಯಿಗೂಡಿದ ಮೆಟ್ಟನಲ್ಲಿ ಸರಿಯಾದದ್ದು ಎಂಬುದು ಇರಬಹುದು ಎಂಬ ನಂಬಿಗೆಯಿಂದ ರೂಪುಗೊಂಡ ಷಡ್‌ದರ್ಶನಗಳು, ಪರಸ್ಪರರ ದರ್ಶನಗಳ ದೂಷಣೆಯಲ್ಲಿಯೇ ತಮ್ಮ ಶಾಸ್ತ್ರದೃಷ್ಟಿಯನ್ನು ದೂಷಿತ ಮಾಡಿಕೊಳ್ಳುತ್ತವೆ. ವಾಸ್ತವಿಕ ರಾಜವಂಶಗಳ ಪಟ್ಟಾವಳಿಗಳ ಚಾರುಚರಿತ್ರ ವರ್ಣನೆಯಿಂದ ಜನಮನಕ್ಕೆ ತತ್ತ್ವ ಮುಟ್ಟೀತು ಎಂಬ ಹಂಬಲದಲ್ಲಿ ಕಾವ್ಯ, ಇತಿಹಾಸ, ಪುರಾಣಗಳ ವಿಪುಲವಿಸ್ತಾರವು ಹುಟ್ಟಿಕೊಳ್ಳುತ್ತದೆ. ಧರ್ಮಶಾಸ್ತ್ರಗಳ ರಚನೆಯೂ ಪ್ರಬಲವಾಗುತ್ತದೆ. ಇವುಗಳಿಂದ ತಿಳಿವಳಿಕೆಯೇನೊ ಹುಟ್ಟುವುದು; ಆದರೆ ಆ ತಿಳಿವಳಿಕೆ ಭೇದಗಳನ್ನೂ ದೃಢಪಡಿಸುತ್ತದೆ. ಮತ್ತೆ ಈ ಭೇದವನ್ನು ಹೋಗಲಾಡಿಸಲು ಅನೇಕ ಮತ, ಅನೇಕ ಪಂಥ ಅನೇಕ ಸಾಧುಸಂತರು ಮುಂದೆ ಬರುತ್ತಾರೆ. ಆದರೆ ಹೀಗೆ ನಿರ್ಮಿಸಿಕೊಂಡ ಗುಂಪಿನ ಅಭೇದ ನೀತಿಯೂ ವ್ಯಕ್ತಿವಿಕಾಸಕ್ಕೆ ಅವಕಾಶಕೊಡದ್ದರಿಂದ, ಮತ-ಪಂಥ-ಸಾಧುಗಳಿಂದ ಹುಟ್ಟಿದ ಕಾರ್ಯವನ್ನು ಅವುಗಳ ಮರಿಗಳೇ ಹೊಡೆದುಹಾಕುತ್ತವೆ. ಭರತಖಂಡದೊಳಗಿನ ಈ ಅಗತಿಕತೆ ಸಾಲದೋ ಎಂಬಂತೆ, ಹೊರಗಿನಿಂದ ಇಸ್ಲಾಮ್ ಮತ್ತು ಕ್ರೈಸ್ತ ಮತಶಕ್ತಿಗಳು ಭಾರತೀಯ ಮತತ್ರಸ್ತ ಗೊಂದಲದಲ್ಲಿ ಒಳನುಗ್ಗುವುವು. ಇವುಗಳ ಹಾರಾಟದ ಏರಾಟದ ಇತಿಹಾಸದಿಂದ ಭಾರತೀಯ ಮತ ವೈಚಿತ್ರ್ಯವು ಇನ್ನಷ್ಟು ಕನಲು-ಕವಲಾಗುತ್ತದೆ. ಈ ಧಾರ್ಮಿಕ ಮತವೈಚಿತ್ರ್ಯಗಳ ಗೊಂದಲವೂ ಸಾಲದೇನೋ ಎಂಬಂತೆ ವಿಜ್ಞಾನವಾದ, ಜನಹಿತವಾದ, ಸಂಸ್ಕೃತಿವಾದಗಳು ಜನಜನರ ಗುಂಪು ಕಟ್ಟಿ, ಅವರ ಬೆನ್ನು ಕಟ್ಟಿ ಬಡಿದಾಟಕ್ಕೆ ನಿಲ್ಲುತ್ತವೆ. ಆ ಚರಿತ್ರೆ ಇಂದಿನ ಚರಿತ್ರೆಗೆ ಸೇರತಕ್ಕದ್ದು. ಎರಡು ಜಾಗತಿಕ ಮಹಾಯುದ್ಧಗಳಾಗಿವೆ. ಮೂರನೆಯದರ ಸ್ವಾಗತಕ್ಕೆ ಎಲ್ಲರೂ ಭಯಭಕ್ತಿಯಿಂದ ಸಿದ್ಧರಾಗುತ್ತಿದ್ದಾರೆ. ಜಾಗತಿಕ ಏಕರಾಷ್ಟ್ರ ನಿರ್ಮಿಸುವ ಕರ್ಮಕುಶಲರು 'ಲೀಗ ಆಫ್ ನೇಶನ್ಸ್'ದ ಶ್ರಾದ್ಧವನ್ನು ಎಂದೋ ಮುಗಿಸಿ, 'ಯೂ. ಎನ್. ಓ.'ದ ಕೂಸನ್ನು ತೊಟ್ಟಿಲಲ್ಲಿಟ್ಟು ತೂಗುತ್ತಿದ್ದಾರೆ. ಆದರೆ ಆ ತೊಟ್ಟಿಲ ಸುತ್ತು

ಸುಳಿದಿರುವ ಆ ಕೂಸಿನ ತಾಯಿ-ದಾಯಿ-ಮಾಯಿಗಳ ಚಾತುರ್ಯದ ಅರ್ಥಪಟ್ಟಿಯನ್ನು ನೋಡಿದರೆ, ಇವರ ಕೂಸನ್ನು ಇವರೇ ಕಂಡರಿಸುವರೇನೋ—ಎಂಬ ಭಯ ಬರದೆ ಬಿಡುವುದಿಲ್ಲ. ಹೀಗಿದ್ದರೂ ಜಗತ್ತಿನ ಹಿತವನ್ನು ತಾವೇ ಮಾಡಬಲ್ಲೆವು— ಎಂಬ ಜ್ಞಾನವಾದಿಗಳು, ರಾಜಕಾರಣಿಗಳು ಈ ನಿರ್ಮಿತಿಯಲ್ಲಿ ಕೈಹಾಕಿದ್ದಾರೆ. ಆ ಜಗಳದ ಮುಂದೆ ದುಡ್ಡಿನವರ ಮತ್ತು ದುಡಿತದವರ ಜಗಳ ಏನೂ ಅಲ್ಲ. ಆದರೂ ದುಡ್ಡಿನ ಮತ್ತು ದುಡಿತದ ಜಗಳವನ್ನು ಬಗೆಹರಿಸುವುದಕ್ಕಾಗಿಯೇ ಎಲ್ಲ ರಾಜಕಾರಣಿಕ ಜ್ಞಾನವಾದಿಗಳು ಸಭೆಗೂಡಿರುವರೋ ಎಂಬ ಸಂಶಯವೂ ಆದರವೂ ಗುಂಟಾಗುವಂತೆ, ತಮ್ಮ ರಾಜಕೀಯ ನಾಟಕಕ್ಕೆ ಕಳೆತರುವುದಕ್ಕಾಗಿ ಮಹಾ ಮಹಾ ದೇಶಗಳು ಟೊಂಕಕಟ್ಟಿವೆ.

ಇಂದು ಪ್ರಪಂಚವೇ ಪಗಡೆಯ ಪಟ್ಟವಾಗಿದೆ. ಮಾನವಜಾತಿಯ ಕುರುಕ್ಷೇತ್ರವು ಎಲ್ಲಿ ರಚಿಸಲಾಗುವುದೊ ತಿಳಿಯುವುದಿಲ್ಲ. 'ದುಡಿತವರ ಹಿತವೇ ತನ್ನ ಹಿತ' ಎಂದು ಹೇಳಿಕೊಳ್ಳುವ ರಸಿಯಾದೇಶ, ಸಾಸ್ತ್ರಬಲದಿಂದಲೂ ದುಡ್ಡಿನಬಲದಿಂದಲೂ ವ್ಯಾವಹಾರಿಕ ಶಾಂತಿ-ಸಮಾಧಾನಗಳನ್ನು ನಿರ್ಮಿಸುವುದು ಸಾಧ್ಯ ಎಂಬ ಪಂಥದಿಂದ ಹೊರಟ ಅಮೇರಿಕಾ, ಜಾಗತಿಕ ರಾಜಕೀಯ ಸಂಘಟನೆಯಿಂದ ಈ ಶಾಂತಿ-ಸಮಾಧಾನಗಳು ಇಂದಿಲ್ಲ ನಾಳೆ ಸಾಧ್ಯ ಎಂದು ತಮ್ಮ ಕಾಮನ್‌ವೆಲ್ತಿನ ಕುದುರೆಯನ್ನು ಮುಂದೂಡುತ್ತಿರುವ ಆಂಗ್ಲಜನಾಂಗ— ಇವು ಈಗಾಗಲೇ ಸುಪ್ರತಿಷ್ಠಿತವಾದುವುಗಳು. ಇವರ ಕೈಗೆ ಕೈ ಕೂಡಿಸಿ ಜೈನಾದೇಶವೂ ಕೆಲಕಾಲ ಕೆಲಸಮಾಡಿತು. ಇಂದು ಅವರ ಭವಿತವ್ಯ ಸ್ಪಷ್ಟ ತಿಳಿಯದಾಗಿದೆ. ಸ್ವತಂತ್ರ ಹಿಂದುಸ್ತಾನವು ಜಾಗತಿಕ ರಾಜಕಾರಣದಲ್ಲಿಯೂ ಧುರೀಣತ್ವವನ್ನು ಪಡೆದೀತು—ಎಂಬ ಆಶಾಕಿರಣಗಳು ಎಲ್ಲೋ ಮೂಡಿ ಮಸಳುತ್ತಿವೆ. ಇದರ ವಿಶಿಷ್ಟಶಕ್ತಿ ಆಧ್ಯಾತ್ಮಿಕವೆಂದು ಕೆಲವರು, ಹಾಗಲ್ಲವೆಂದು ಕೆಲವರು ವಾದಮಾಡಲು ಟೊಂಕಕಟ್ಟುತ್ತಿದ್ದಾರೆ. ಅದೇನಿದ್ದರೂ ಕಾಶ್ಮೀರ, ಪಾಕಿಸ್ತಾನ್, ಸಿಲೋನ್, ಬರ್ಮಾ ಈ ನಾಲ್ಕು ದಿಕ್ಕಿನ ಸ್ವಾತಂತ್ರ್ಯಾಗ್ನಿಗಳ ಮಧ್ಯದಲ್ಲಿ ಭಾರತವು ತಪಸ್ಸನ್ನು ಮಾಡುತ್ತಿರುವಾಗ, ಅದರ ಹೊಟ್ಟೆಯಲ್ಲಿಯೇ ರಾಜಕೀಯ ಮತವೈವಿಧ್ಯದ ಮತ್ತು ಭಾಷಿಕ ರಾಜಕೀಯತೆಯ ಹೊಟ್ಟೆಯುರಿಯೊಂದು ಹೊತ್ತುತ್ತಲೇ ಇದೆ. ಇದಲ್ಲದೆ ಪ್ರಪಂಚದ ಪಟ್ಟದಲ್ಲಿ ಇನ್ನೂ ಕೆಲವು ಅನಾಹುತಗಳೂ ಅದ್ಭುತಗಳೂ ದಾರಿಕಾಯುತ್ತಲಿವೆ. ಯಹೂದಿಗಳ, ಮಹಮ್ಮದೀಯರ ಗತಿ ಮುಂದೇನು? ಆಫ್ರಿಕಾ, ದಕ್ಷಿಣ ಅಮೇರಿಕಾ, ಯುರೋಪ ಇವುಗಳ ಮಿಶ್ರರಾಜಕಾರಣದ ಭವಿಷ್ಯವೇನು? ಜಪಾನ, ಜರ್ಮನಿ, ಇಟಲಿ ಈ ಬಿದ್ದಭೂತಗಳ ಉತ್ಥಾನದ ಸ್ವರೂಪವೇನು? ಆಸ್ಟ್ರೇಲಿಯಾ, ಕಾನಡಾ ಈ ತರುಣರಾಷ್ಟ್ರಗಳ ಮಹತ್ತ್ವ ಎಷ್ಟು ಬೆಳೆದೀತು? ಈ ಎಲ್ಲ ಪ್ರಶ್ನಮಾಲಿಕೆಗಳ ಹೊಟ್ಟೆಯಲ್ಲಿದೆ ಒಂದೇ ಒಂದು ಪ್ರಶ್ನೆ. ಮಾನವ ಜಾತಿಯ ಭವಿತವ್ಯ ಏನು?—ಎಂಬುದು. ಬಣ್ಣದ ಜಗಳವನ್ನು ತೆಗೆದು 'ಇದು ಒಂದೇ ಜಾತಿಯೇ?' ಎಂದು ಕೇಳುವವರೂ ಉಂಟು. ಮತದ್ವಂದ್ವಗಳನ್ನು ಮುಂದೆ ಚಾಚಿ 'ಇದು ಒಂದಾಗಿ ಉಳಿಯುವುದು ಸಾಧ್ಯವಿಲ್ಲ; ಇವರಲ್ಲಿ ಕೆಲವೊಬ್ಬರು ನಶಿಸಲೇ ಬೇಕು, ಕೆಲವೊಬ್ಬರು ತಾಳಿಬಾಳಿಯಾರು' ಎಂದೂ ಸಾರುವವರುಂಟು. ಆದರೆ ಈ ತಾಳಿಬಾಳುವವರು ಯಾರು? ಅವರ ಸ್ವರೂಪ ಎಂತಹದು? ಅವರ ಈಗಿನ ಸ್ಥಿತಿಯೇನು? ನಶಿಸಬೇಕಾದವರಿಗಿಂತ ಇವರ ಲಕ್ಷಣ ಬೇರೆಯಾವುದು? ಇವರು ಬಾಳಿಯಾರು ಎಂಬ ನಿಶ್ಚಿತಿ ಎಲ್ಲಿದೆ? ನಿರ್ಮಿತಿಯ ಲಕ್ಷಣಕ್ಕಿಂತ ಇಂದಿನ ಜಗತ್ತಿನಲ್ಲಿ ಪ್ರಳಯದ ಲಕ್ಷಣಗಳೇ ಎದ್ದು ತೋರುವುದಿಲ್ಲವೇ? ಜಗತ್ತಿಗೆ ಮಹಾರೋಗದ ಸೋಂಕು ತಾಗಿರಬೇಕು. ಅಂಗಾಂಗಗಳು ವಿಕಲನಾಗುತ್ತಿವೆ ಎಂಬ ಯುಗಕಾಲಿಯ ಕರಾಲದರ್ಶನವೊಂದು ಕಣ್ಣಿದುರು ಕಟ್ಟುವದಿಲ್ಲವೆ? ಇದಕ್ಕೆ ಉತ್ತರಕೊಡುವ ಧೀರನಾರಾದರೂ ಇರುವನೆ? ಜನ ಇದ್ದಾರೆಯೆ? ದೇಶ ಇದೆಯೆ? ಭಯ ಮುಚ್ಚಿಕೊಂಡು ಜಂಭಕೊಚ್ಚುವವರಿದ್ದಾರೆ. ಜಂಭ ಹೊಟ್ಟೆಯೊಳಗಿಟ್ಟುಕೊಂಡು ಭಯದ ನಟನೆಮಾಡುವವರೂ ಇದ್ದಾರೆ. ಆದರೆ ನಿರ್ಭಯಜ್ಞಾನಿಗಳೂ ಕರ್ಮಕುಶಲಯೋಗಿಗಳೂ ಎಲ್ಲಿಯಾದರೂ ಇರುವರೆ? ಇದ್ದರೆ ಅವರನ್ನು ಒಪ್ಪಿಕೊಳ್ಳುವಷ್ಟಾದರೂ ಬುದ್ಧಿಯ ಸಮತೂಕ ಮಾನವರಲ್ಲಿ ಪಾಕಗೊಳ್ಳುತ್ತಿದೆಯೇ? ಇವೇ ಮೊದಲಾದ ಪ್ರಶ್ನಗಳಿಗೆ ಪ್ರತಿ ಜಾಗೃತವ್ಯಕ್ತಿಯೂ ಜಾಗೃತರಾಷ್ಟ್ರವೂ ಉತ್ತರಕೊಡಬೇಕಾಗಿದೆ. ಇದಕ್ಕೆ ಕನ್ನಡ ಜನದ ಉತ್ತರ ಏನು? ಭೂಪಟದ ಮೇಲೆ ನಾಳಿನ ಬಾಳಿನಲ್ಲಿ ಅವರಿಗೆ ಸ್ಥಾನವಿದೆಯೆ? ಹಾಗೆ ನಿಲ್ಲುವ ಯೋಗ್ಯತೆ ಇದೆಯೆ? ಇದ್ದರೆ ಆ ಶಕ್ತಿ ಅವರಲ್ಲೆಲ್ಲಿದೆ?

೫೫ ವರ್ಷಗಳಿಂದ ಅನುಭವಪಟ್ಟ

ಕರ್ಕೀ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವದು.

ವಿಳಾಸ:—

ಗಣೇಶ ರಾಮಚಂದ್ರ ಕರ್ಕೀ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ಭಾರತದ ರಾಜ್ಯಘಟನೆಯ ಕರಡು

(ಶ್ರೀ. ದಿವಾಕರರಚ್ಚಿಮುನ್ನುಡಿ)

ಎಲ್ಲ ವಿದ್ಯಾರ್ಥಿಗಳು ಓದಲೇಬೇಕಾದ ಪುಸ್ತಕ ೧-೮-೦
ವ್ಹಿ. ಪಿ. ಮೂಲಕ ಬೇಕಾದರೆ ೧-೧೪-೦.
ಸಾನೇ ಗುರುಜಿಯವರ 'ಸೊಗಸಿನ ಕಥೆಗಳು' ಭಾಗ ೧-೨
ಬೆಲೆ ಪ್ರತಿಯೊಂದಕ್ಕೆ ೧-೦-೦.

ಕತಾಬ್‌ಮಿನಾರ್ ಪ್ರಕಾಶನ,
ಮಾಳಮರಡಿ, ಧಾರವಾಡ.

ಪಿಯೆಚ್‌ಡಿ. ಡೊಂಕ

(ವ್ಯಕ್ತಿ ಚಿತ್ರ)

ಡಾ. ಕೈಂತಜೆ ಗೋವಿಂದಭಟ್ಟರು ಬಿ.ಎ.,ಬಿ.ಎಲ್. ಮದ್ರಾಸ್

★

ಮುಗಿಲಿಗೆ ಮೆಟ್ಟಿಲನ್ನು ಕಟ್ಟಲು ಎಣಿಕೆ ಹಾಕುವ ಮೇಧಾವಿ; ಆದರೆ ಭೂಮಿಯಲ್ಲಿ ಮನುಷ್ಯರಂತೆ ಹೇಗೆ ಬದುಕಬೇಕೆಂಬುದು ಗೊತ್ತಿರುವುದಿಲ್ಲ. ಇಂತಹ ವಿಕ್ಷಿಪ್ತವ್ಯಕ್ತಿಗಳೆ 'ಸ್ಕಾಲರ್' ಎಂದು ಮನ್ನಣೆ ಪಡೆಯುತ್ತಿರುವುದುಂಟೆ?

ನಾನು ಮತ್ತು ನನ್ನ ಭಾವ ಶಂಕರ ಮಂಗಳೂರಿನ 'ಬಾವುಟಿ ಗುಡ್ಡೆ' ಗೆ ಗಾಳಿ ತಿನ್ನಲು ಹೋಗಿದ್ದೆವು. ನಾನು ಮಂಗಳೂರನ್ನು ಬಿಟ್ಟುಕೆಲವು ವರ್ಷಗಳಾಗಿದ್ದುದರಿಂದ, ನಾನು ಪ್ರತಿದಿನ/ಬಾಲ್ಯವಲ್ಲಿ ಓಡಾಡುತ್ತಿದ್ದ ಪ್ರದೇಶವನ್ನು – ಆ ಸೌಂದರ್ಯ ರಾಶಿಯನ್ನು – ತನ್ಮಯನಾಗಿ ನೋಡುತ್ತಿದ್ದೆ. ಪಡುಗಡಲು ಅಗಷ್ಟೆ ಮುಳುಗುವ ಸೂರ್ಯನಿಂದ ರಾಗರಂಜಿತವಾಗಿತ್ತು. ನನಗೆ ಆ ಭಾವಪರವಶತೆ ಹರಿದುದು, ನನ್ನ ಭಾವ 'ನಮಸ್ಕಾರ ಸಾರ್' ಎಂದಾಗಲೆ.

ತಿರುಗಿ ನೋಡುತ್ತೇನೆ – ನನ್ನ ಮುಂದೆ ನಾಲ್ಕಡಿಯ, ಕೆದರಿದ ತಲೆಯ, ನೊಣಕಾಲಿನ ತನಕ ಕಾಕಿ ಇಜಾರು ಧರಿಸಿ ಅದೇ ಬಣ್ಣದ ಹಳಸಲು ಕೋಟು ಹಾಕಿದ, ಕೈತುಂಬ ಪುಸ್ತಗಳನ್ನು ಹಿಡಿದು ಕೊಂಡ 'ಎಣ್ಣೆ ಕಪ್ಪಿ'ನ ವ್ಯಕ್ತಿಯೊಂದು—ಮುಖದಲ್ಲಿ ಯಾವ ತೆರನಾದ ಬದಲಾವಣೆಯೂ ಇಲ್ಲದೆ—ನನ್ನ ಭಾವನ ನಮಸ್ಕಾರವನ್ನು ಮರುಪಾವತಿ ಮಾಡುತ್ತಿತ್ತು. ನನ್ನ ಭಾವ ನಮಸ್ಕರಿಸಲು ಯೋಗ್ಯತೆಯಿರುವ ಈ ಮನುಷ್ಯ ಯಾರಿರಬಹುದೆಂದು, ಅವನು ಸ್ವಲ್ಪ ದೂರ ಹೋಗುವ ತನಕವೂ ಅವನನ್ನೇ ನೋಡಿದೆ.

ನನ್ನ ಭಾವ 'ಯಾರೆಂದು ನಿಮಗೆ ಗೊತ್ತೊ?' ಎಂದು ಕೇಳಿದ.

'ಯಾರು? ನಿಮ್ಮ ಕಾಲೇಜಿನ ಜವಾನನೆ? ಅವನಿಗೂ ನಮಸ್ಕಾರವೆ?' ಎಂದೆ.

'ಸರಿ ಹೋಯ್ತು! ನಮ್ಮ 'ಇಕೋನೋಮಿಕ್ಸ್' ಪ್ರೊಫೆಸರಯ್ಯ' ಎಂದ.

'ಏನು ಪ್ರೊಫೆಸರರೆ!' ಬೆಳೆದ ಗಡ್ಡವನ್ನು ಎಡಗೈಯಿಂದ ಸವರುತ್ತ ದೂರದಲ್ಲಿ ಹೋಗುತ್ತಿದ್ದ ವ್ಯಕ್ತಿಯನ್ನು ಆಶ್ಚರ್ಯದಿಂದ ನೋಡಿದೆ!

'ಅವರೆ–ಪಿಯೆಚ್‌ಡಿ ಡೊಂಕರೆಂದರೆ....' ಭಾವ ಮುಂದುವರಿಸಿದ.

ನನ್ನ ಭಾವ 'ಈ ವ್ಯಕ್ತಿ ಪಿಯೆಚ್‌ಡಿ' ಎಂದಾಗ, ನನ್ನ ಕಿವಿಗಳನ್ನೆ ನಾನು ನಂಬಲಿಲ್ಲ. ಕುತೂಹಲವಂತೂ ಬಹಳ ಕೆರಳಿತು. ನೋಡಿದರೆ ಜವಾನನಿಗಿಂತ ಕಡೆ ಇದ್ದಾನೆ. ಪ್ರೊಫೆಸರನಂತೆ, ಪಿಯೆಚ್‌ಡಿ ಅಂತೆ! ಹೊಲಸು ನಾತ ಬಡಿಯುವ ವಸ್ತ್ರ. ಗುಂಡಿ ಹಾಕಿದುದು ಕೆಳಗೆ ಮೇಲೆ....

'ಏನು ತುಸು ಸಡಿಲೆ!' ಎಂದು ಪ್ರಶ್ನಿಸಿದೆ.

'ಸಡಿಲಲ್ಲ ...ಸಿಡಿಲು'. ಕೆಣಕಿ ನೀವೇ ನೋಡಬೇಕು. ....'' ಮಧ್ಯರಾತ್ರಿಯಲ್ಲಿ ಸೂರ್ಯ ಉದಿಸಿದ್ದರೂ ನನಗೆ ಅಷ್ಟು ಆಶ್ಚರ್ಯವಾಗುತ್ತಿರಲಿಲ್ಲ.

'ಸಿಡಿಲೆಂದರೆ .... ಬಯ್ಯುತ್ತಾನೆಂದಲ್ಲ. ಅಷ್ಟು ಓದಿದ್ದಾನೆ. ವಾದಕ್ಕೆ ಹೊರಟನೆಂದರೆ ಪ್ರತಿವಾದಿ ಚಟ್ಟು. ಗಲಂಟಿನೆಯ ಇಸವಿಯಿಂದ ಈ ದಿನದ ತನಕ, ನಮ್ಮ ಊರಿನಲ್ಲಿ ಎಂದೇನು—ಈ ಇಡೀ ಭೂಲೋಕದಲ್ಲಿ — ಕಾಫಿ, ತೆಂಗು, ಗೋಧಿ, ಅಕ್ಕಿ, ಗೇರುಬೀಜ, ಅದು ಇದು ಎಂದಿಲ್ಲ–ಪ್ರತಿಯೊಂದು ಎಲ್ಲೆಲ್ಲಿ ಎಷ್ಟೆಷ್ಟು ಬೆಳೆಯಿಸು, ಎಂದು ಬೇಕಾದರೆ ಹೇಳಬಲ್ಲ. ಅದು ಹೋಗಲಿ–ನಮ್ಮ ಆಧಿಪತ್ಯದಲ್ಲಿ ಯಾವ ಯಾವ ನುನೆಯಲ್ಲಿ ಎಷ್ಟೆಷ್ಟು ಕಪ್ಪೆಗಳು ಬಾವಿಯಲ್ಲಿವೆ ಎಂದು ಲೆಕ್ಕ ಹಾಕಿದ್ದಾನೆ ಅವನು. ಅವನಿಗೆ ಹೆಸರೇ ವಾಕಿಂಗ್ 'ಎನ್‌ಸೈಕ್ಲೊಪಿಡಿಯ' ಎಂದು.

'ನಿನ್ನ ತಲೆಬುರುಡೆ. ಬಾವಿಯಲ್ಲಿ ಎಷ್ಟು ಕಪ್ಪೆಯಿದೆಯೆಂದು ಹೇಳುತ್ತಾನೆ! ಮತ್ತೇನು ಬಾಕಿ! ನಿನ್ನ ತಲೆಯಲ್ಲಿ ಕೂದಲು ಎಷ್ಟು ಉಂಟು ಎಂದೂ ಹೇಳಿಯಾನು ಎಂದು ಕಾಣುತ್ತದೆ!'

'ನಿಮಗೆ ನನ್ನ ಮಾತಿನಲ್ಲಿ ನಂಬಿಗೆಯಿಲ್ಲವಷ್ಟೆ. ನಾಳೆ ಬೇಕಾದರೆ ನಿಮ್ಮನ್ನು ಅವರ ಮನೆಗೆ ಕರೆದೊಯ್ಯುತ್ತೇನೆ. ನೀವೇ ನೋಡಬಹುದು. ನಾನೂ ಪರೀಕ್ಷೆಯ ಪ್ರಶ್ನಪತ್ರಿಕೆ ಕದಿಯಬೇಕಾಗಿದೆ!' ಎಂದ.

'ಹೂಂ ನೋಡುವ' ಎಂದು ನಾವು ಮನೆಗೆ ಹೋಗಲು ಎದ್ದೆವು.

ಮರುದಿನ ಮೂರುವರೆ ಘಂಟೆಗೆ ಕಾಫಿ ಕುಡಿದೊಡನೆ, ಭಾವ ಕೇಳಿದ: 'ಪಿಯೆಚ್‌ಡಿ ಡೊಂಕರ ಮನೆಗೆ ಬರುತ್ತೀರಾ?' ಎಂದು.

'ನೋಡುವ ನಿನ್ನ ಪಿಯೆಚ್‌ಡಿ ಎನ್‌ಸೈಕ್ಲೋಪಿಡಿಯವನ್ನು...'

ಭಾವ ನನ್ನನ್ನು ಕರೆದುಕೊಂಡು ಆ ಓಣಿ– ಈ ಓಣಿ ಸುತ್ತಿಸಿ, ಒಂದು ಸಣ್ಣ ಮನೆಯ ಮಹಡಿಗೆ ಕರೆದೊಯ್ದ.

ಬಾಗಿಲಿನಲ್ಲಿ 'ಡೊಂಕ ಪಿಯೆಚ್‌ಡಿ' ಎಂಬ ಹೆಸರಿನ ಹಲಗೆ ಇತ್ತು. ಬಾಗಿಲು ಅರ್ಧ ಮುಚ್ಚಿತ್ತು. ನನ್ನ ಭಾವ ಮೂರು ನಾಲ್ಕು ಬಾರಿ ತಟ್ಟಿದ; ಉತ್ತರ ಬರಲಿಲ್ಲ. ಮೆಲ್ಲಗೆ ಬಾಗಿಲು ಸರಿಸಿ ಒಳಗೆ ಹೋದೆವು. ನಿನ್ನೆ ನೋಡಿದ ವ್ಯಕ್ತಿಯೇ, ಕುರ್ಚಿಯಲ್ಲಿ ಒಂದು ಬಣ್ಣದ ಪೆನ್ಸಿಲನ್ನು ಕಚ್ಚುತ್ತ, ಓದುವುದರಲ್ಲಿ ನಿಮಗ್ನವಾಗಿತ್ತು. ಅದಕ್ಕೆ ನಾವು ಬಂದುದು ತಿಳಿಯಲೇ ಇಲ್ಲ. ನಿನ್ನೆ ಹಾಕಿಕೊಂಡಿದ್ದ ಅದೇ ಇಜಾರು. ಕೋಟು ಮಾತ್ರ ಇಲ್ಲ. ನಾನು ಬದಿಯಲ್ಲಿದ್ದ ಬೆಂಚಿನ ಮೇಲೆ ಕುಳಿತು, ಕೋಣೆಯ ಸುತ್ತಲೂ ಕಣ್ಣು ತಿರುಗಿಸಿದೆ. ಎಲ್ಲಿ ನೋಡಿದರೂ ಪುಸ್ತಕಗಳು, ಪುಸ್ತಕಗಳು, ಪುಸ್ತಕಗಳು....ಕಾಗದಗಳು, ಕಾಗದಗಳು, ಕಾಗದಗಳು!....ಒಂದು ಐವತ್ತು ಪತ್ರಿಕೆಗಳು, ದೇಶ–ವಿದೇಶದುವುಗಳು! ಧೂಳು - ಕಸ ....

ಗೀಚಿದ ಬೆಂಕಿಕಡ್ಡಿ .... ಬೀಡಿ ಚೂರುಗಳು. ಒಂದು ಮಲಿನವಾದ ಹಾಸಿಗೆ ಈ ಪುಸ್ತಕಗಳ ಮೇಲೆ [ಭೀಷ್ಮ ಶರಶಯ್ಯೆಯಲ್ಲಿ ಮಲಗಿದಂತೆ] ನಿದ್ದೆ ಮಾಡಲು ಒದ್ದಾಡುತ್ತಿತ್ತು !

ಹತ್ತು ನಿಮಿಷ ಈ ಆರೋಗ್ಯಧಾಮದಲ್ಲಿ ಸುಮ್ಮನೆ ಕಳೆದೆವು. ಆಸ್ಪರಲ್ಲಿ ಕೋಣೆಯಲ್ಲಿದ್ದ ಹಳೆಯ ಘಂಟೆಯ ಗಡಿಯಾರವೊಂದು ' ಡಣ್ ' ಎಂದು ಬಾರಿಸಿತು. ಡೊಂಕಯ್ಯನ ಕಣ್ಣುಗಳು ತಟ್ಟನೆ ಅತ್ತ ಹೋದುವು. ಕೈಯಲ್ಲಿದ್ದ ಪುಸ್ತಕ ದಢಲ್ಲನೆ ಮುಚ್ಚಿಕೊಂಡಿತು. ಓದಿನ ಸಮಾಧಿಯಿಂದ ಎದ್ದೊಡನೆ ಡೊಂಕನಿಗೆ ನಾವು ಬಂದುದರ ಅರಿವಾಯಿತು. ' ಏನು ಬಂದಿರಿ ? ' ಎಂದು ಪ್ರಶ್ನಿಸಿದ.

ನನ್ನ ಭಾವ ಸುರು ಮಾಡಿದ: 'ಏನಿಲ್ಲ, ಇಲ್ಲೇ ಹೋಗುತ್ತಿದ್ದೆವು. ಬಹಳ ಬಾಯಾರಿಕೆಯಾಯಿತು. ನಿಮ್ಮ ಕೋಣೆ ನೆನಪಾಗಿ ನೀರು ಕುಡಿಯುವ ಎಂದು ಬಂದೆವು ! ' ಡೊಂಕ ' ಹೋ ಹೋ ಹೋ ' ಎಂದು ಸಣ್ಣ ನಗೆ ನಕ್ಕ. ಹುಟ್ಟಿದ ಬಳಿಕ ತೊಳೆಯದ ಎರಡು ಹಲ್ಲುಗಳು ಇಣಿಕಿದುವು.

' ಬಾಯಾರಿಕೆ ಆದದ್ದು ನೀರಿಗೋ— ಪ್ರಶ್ನೆಪತ್ರಿಕೆಗೋ ! '— ಎಂದು ತಟಕ್ಕನೆ ಪ್ರಶ್ನಿಸಿದ. ನನ್ನ ಭಾವನ ಮುಖ ಸುಟ್ಟ ಬದನೆಕಾಯಿಯ ಹಾಗೆ ಎನ್ನುತ್ತಾರಲ್ಲ — ಹಾಗಾಯಿತು.

' ಬಹಳ ಜಾಣ ಕಣಯ್ಯ—ಇವನು; ಕಳೆದ ವಾರಿಯೂ ಪರೀಕ್ಷೆ ಬರಲು ಇನ್ನೆರಡು ದಿನಗಳಿರುವಾಗ, ಇವನಿಗೆ ಬಹಳ ಬಾಯಾರಿಕೆಯಾಗಿತ್ತು. ನಾನು ಒತ್ತಿನ ಕೋಣೆಗೆ ನೀರುತರುಲು ಹೋದಾಗ ಪ್ರಶ್ನೆ-ಪತ್ರಿಕೆಯನ್ನು ಹಾರಿಸಿದ್ದ. ನನಗೆ ತಿಳಿಯಲಿಲ್ಲವೆಂದು ಸಾಪದ ಹುಡುಗ ಭಾವಿಸಿದ್ದಾನೆ. ನಾನು ಸುಮ್ಮನಿದ್ದೆ..... ಚೆನ್ನಾಗಿ ' ಮಾರ್ಕು ' ಗಳನ್ನೂ ಕೊಟ್ಟಿದ್ದೆ. '

ಶಂಕರಭಟ್ಟ ತಿಪ್ಪೆಗೆ ಕುಳಿತ. ಆವನಿಗೆ ಪ್ರೊಫೆಸರರು ಇಷ್ಟೊಂದು ಮೃದು ಸ್ವಭಾವದವರು ಎಂದು ತಿಳಿದಿರಲಿಲ್ಲ. ಬೇರಾರಾದರೂ ಆಗಿದ್ದರೆ, ಅವನಿಗೆ ಕಾಲೇಜಿನಿಂದ ಗಡಿಪಾರು ಆಗುತ್ತಿತ್ತು. ನನಗೆ ' ಡೊಂಕ 'ನ ಸೂಕ್ಷ್ಮಬುದ್ಧಿಯ ಪರಿಚಯ ಚೆನ್ನಾಗಿ ಆಯಿತು.

ಪ್ರೊಫೆಸರರು ಮಾತೆತ್ತಿದರು :— ' ಅದೆಲ್ಲ ಹೋಗಲಿ. ನಿನಗೆ ನಿಜವಾಗಿಯೂ ನೀರು ಬೇಕೆ ? ' ನನ್ನ ಭಾವ ' ಬೇಡ ' ಎಂದು ಸೋತವರ ನಗೆ ನಕ್ಕ. ಅವನಿಗೆ ' ಡೊಂಕರು ' ಚೆನ್ನಾಗಿ ನೀರು-ಕುಡಿಸಿದ್ದರು.

ಬಳಿಕ ನನ್ನ ಪರಿಚಯ ಮಾಡಲು ಆರಂಭಿಸಿದರು. ಪರಿಚಯ ಮಾಡಿಕೊಳ್ಳುತ್ತ ಅವರ ಉದ್ದ ಉಗುರುಗಳು ಹಲ್ಲಿಗೆ ಹೋದುವು. ಹಲ್ಲಿನಿಂದ ತೆಗೆದುದನ್ನು ಅವರು ಒಂದಿಷ್ಟೂ ಹಾಳುಮಾಡಲಿಲ್ಲ.

REGAL Records

FOR FAR MORE PEOPLE AT FAR LOWER COST

ಇವುಗಳಲ್ಲದೆ ಕರ್ನಾಟಕದ ತುಂಬೆಲ್ಲ ಹೆಸರು ಗಳಿಸಿದ ಉಮರಜಿ ಮತ್ತು ಸೋನುಬಾಯಿ ಇವರ **ಕಲಾಪಥಕದವರು** ಹಾಡಿದ **' ಅಕ್ಕ ಮಹಾದೇವಿ '** ನಾಟಕದಲ್ಲಿಯ ಈಗಾಗಲೇ ಜನಪ್ರಿಯವಾದ ಧ್ವನಿಮುದ್ರಿಕೆಗಳು (GE 8342 ರಿಂದ 8344 ರ ವರೆಗೆ ಇಂದೇ ಕೋಲಂಬಿಯಾದ ಮೇಲೆ ಕೇಳಿರಿ.

ಕುಮಾರಿ ಸೀತಾ ಮುಳ್ಕಿ

GE 8339 — ಕ್ಷಣದಾ ಪ್ರಣಯಭಾವನಾ / ಮಧುಮಾಸದಾ ಸುಖನಾದಾ

ಶ್ರೀಮತಿ ಸುಶೀಲಾ ಟೀಂಬಿ

GE 8092 — ನೋಡೇ ಮಧುವಸಂತವಿದು ಹಾ / ನಲಿದು ಬಾರ ಮುರಲಿ

ಶ್ರೀಯುತ ಭಾಗವತ

GE 8202 — ವಸಂತಮುಖ / ಯಾರಿಗೂ ಹೇಳೋಣು ಬ್ಯಾಡಾ

GE 8093 — ಕನ್ನಡದ ಬಾವುಟ / ರಕ್ಷಿಸು ಕರ್ನಾಟಕ ದೇವೀ !

ಬೇಗನೆ **ಬಸವೇಶ್ವರ, ಮಲ್ಲಮ್ಮ, ಶರಣ ಬಸವ** ಮುಂತಾದ ನಾಟಕಗಳ ಧ್ವನಿಮುದ್ರಿಕೆಗಳು ಹೊರಬೀಳಲಿವೆ. ಇದಾದ ಮೇಲೆ ಕೆಲದಿನಗಳಲ್ಲಿಯೇ **ಕಿತ್ತೂರ ಚನ್ನಮ್ಮ, ಪುರಂದರ ದಾಸ, ಕಬೀರದಾಸ** ಈ ನಾಟಕಗಳ ಧ್ವನಿ-ಮುದ್ರಿಕೆಗಳನ್ನೂ ಒದಗಿಸುವ ಏರ್ಪಾಡು ಮಾಡಲಾಗಿದೆ.

ಇದರ ಬಗ್ಗೆ ಬೇಕಾದ ವಿವರಗಳು ನಿಮ್ಮ ಊರಿನ ಗ್ರಾಮೋಫೋನ್ ಅಂಗಡಿಯಲ್ಲಿ ದೊರೆಯುವುವು.



ಹಳ್ಳಿ ಪಟ್ಟಣಗಳಲ್ಲಿ, ಬೀದಿ ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

● ಧ್ವನಿವಾಹಕ ಯಂತ್ರದ ಮೂಲಕ
★ ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಅದು ಮೊದಲೇ ಹೋಗಬೇಕಾಗಿದ್ದ ಸ್ಥಳಕ್ಕೆ ಹೋಯಿತು. ನನಗಂತೂ ಅದನ್ನು ನೋಡಿ ವಾಂತಿ ಬರುವಂತಾಯಿತು. ಬಹುಶಃ ಅವರ ಒಂದುವರೆ ಇಂಚಿನ ಉಗುರನ್ನು ನೋಡಲು ಕೂಡಲೆ ನನ್ನ ಮನಸ್ಸು ಹರಿಯದಿರುತ್ತಿದ್ದರೆ, ಈ ಅವಾಂತರವಾಗುವುದು ಖಂಡಿತ. ವಿತ್ತೆಂದು ಕಾಣುತ್ತದೆ. ಒಂದು ಪುಸ್ತಕ ಕಣ್ಣಿಗೆ ಬಿತ್ತು. ಸುಮಾರು ಐನೂರು ಪುಟಗಳದು— ಕೈಬರಹದ್ದು. 'ಕಪ್ಪೆಗಳ ಅಂಕೆ—ಸಂಖೆಗಳು' ಎಂದು ಅದಕ್ಕೆ ಹೆಸರು ಕಾಕಲಾಗಿತ್ತು. ನನಗೆ ನಿನ್ನೆ ನನ್ನ ಭಾವ ಹೇಳಿದುದು ನೆನಪಾಯಿತು. 'ಅದೇನು ಸಾರ್, ನೋಡ ಬಹುದೇ?' ಎಂದು ಅವರ ಉತ್ತರಕ್ಕೂ ಕಾಯದೆ, ನಮ್ಮ ಮನೆಯ ಹೆಸರೂ ಇದೆಯೇ—ಎಂದು ಪರೀಕ್ಷಿಸಿದೆ. ನಮ್ಮ ಮನೆಯ ಭಾವಿಯಲ್ಲಿದ್ದ ಕಪ್ಪೆಗಳ ಅಂಕೆಗಳೂ ಅದರಲ್ಲಿದ್ದುವು. ಅದನ್ನು ಸರಿಯೋ ತಪ್ಪೋ ಎಂದು ನಾನು ಹೇಗೆ ಹೇಳಲಿ? ನಮ್ಮ ಮನೆಯಲ್ಲಿ ಎಷ್ಟು ಭಾವಿಯಲ್ಲಿರುವ ಕಪ್ಪೆಗಳವೆ ಎಂದು ನನಗೇನುಗೊತ್ತು?— ಬಳಿಕ ಅದನ್ನು ಮುಚ್ಚಿದೆ.

ನನ್ನ ಭಾವ 'ಇಗೊಳ್ಳಿ ಇದು ಚೆನ್ನಾಗಿದೆ' ಎಂದು ಅಣಕಿಸುವ ಕಣ್ಣುಗಳಿಂದ ಇನ್ನೊಂದು ಪುಸ್ತಕವನ್ನು ತೆಗೆದು ಕೊಟ್ಟ. ತೆಗೆದು ನೋಡುತ್ತೇನೆ — ಅದರಲ್ಲಿ ಪ್ರತಿಯೊಂದು ಗೆರೆಯ ಅಡಿಯಲ್ಲೂ ಒಂದೊಂದು ಗೀಟು. ಅದೂ ಒಂದೇ ಒಂದು ಬಣ್ಣದಲ್ಲಿ? ಕಾಮನ ಬಿಲ್ಲಿನಲ್ಲೂ ಅಷ್ಟು ಬಣ್ಣಗಳು ಇರಲಾರವು. ಪ್ರೊಫೆಸರರು ಬೀಡಿಯೊಂದನ್ನು ಸೇದುತ್ತ ನನ್ನ ಮುಖವನ್ನು ನೋಡುತ್ತಿದ್ದರು.

'ಇದೇನು ಸಾರ್— ಪ್ರತಿಗೆರೆಯ ಅಡಿಯಲ್ಲೂ ಒಂದೊಂದು ಗೀಟು ಹಾಕಿರುವಿರಲ್ಲ' ಎಂದು ಕೇಳಿದೆ.

'ಹಾಂ—ಅದೋ—ಒಮ್ಮೆ ಓದುವಾಗ ಒಂದು ಭಾಗ ಚೆನ್ನಾಗಿ ಕಂಡಿತು. ಇನ್ನೊಮ್ಮೆ ಓದುವಾಗ ಇನ್ನೊಂದು ಭಾಗ ಮುಖ್ಯವಾಗಿ ಕಂಡಿತು. ನೆನಪಿರಬೇಕೆಂದು ಕಂಡುದರ ಅಡಿಯಲ್ಲೆಲ್ಲ ಗೀಟು ಹಾಕಿದೆ' ಪ್ರೊಫೆಸರ್ ಡೊಂಕರು ಬೀಡಿಯ ಕಡೆಯ 'ದಮ್ಮು' ಸೇದಿ:

'ಇನ್ನು ಒಂದಿಷ್ಟು ಹೊರಗೆ ಹೋಗೋಣವೆ?' ಎಂದು ಎದ್ದರು.

ಸರಿಯೆಂದು ನಾನೂ ಎದ್ದೆ. ಅವರ ಹಳಸಲು ಕಾಕೇ ಕೋಟು ಪುನಃ ಅವರ ಹೆಗಲಿನಿಂದ ನೇತಾಡತೊಡಗಿತು. - ಒಂದು ಹರಕು 'ಶೂ'ವನ್ನು ಹಾಕಿಕೊಂಡರು. ಅಷ್ಟರಲ್ಲಿ ಅವರ ಕಣ್ಣಿಗೆ ನನ್ನ 'ಶೂ' ಬಿತ್ತು.

'ನಿಮ್ಮ 'ಶೂ' ಚೆನ್ನಾಗಿದೆ, ಎಂದು ಹೇಳಿದರು. ಬೇರೆಯವರು ಹೇಳಿದ್ದರೆ ನನ್ನನ್ನು ತಮಾಷೆಮಾಡಿದುದೆಂದು ಅದರಲ್ಲೇ ಅವರಿಗೆ ಉತ್ತರ ಹೇಳುತ್ತಿದ್ದೆ — (ನನ್ನಿಂದ ಬಲ ಅವನಿಗೆ ಕಮ್ಮಿ ಇದ್ದಿದ್ದರೆ). ಆದರೆ ಡೊಂಕರು ತಮಾಷೆ ಮಾಡುವಂತೆ ಕಾಣಲಿಲ್ಲ. 'ಇಪ್ಪತ್ತೆರಡು ರೂಪಾಯಿ ಕೊಟ್ಟ ಕರ್ಮಕ್ಕೆ, ಹತ್ತು—ಹನ್ನೆರಡು ಸಲ ರಿಪೇರೀಮಾಡಿಸಿದೆ ನೋಡಿ! ಇನ್ನು, ಯಾರಾದರೂ ರಿಕ್ವಾವಾಲನಿಗೆ ಇನಾಮು ಕೊಡಬೇಕು!' ಎಂದೆ. 'ಏನು ರಿಕ್ವಾವಾಲನಿಗೆ ಇನಾಮೆ? ಇಷ್ಟು ಒಳ್ಳೆಯ ಶೂಗಳನ್ನು ?....ನನಗೆ ಕೊಟ್ಟಿದ್ದರೆ ನಾನಾದರೂ ಹಾಕಿಕೊಳ್ಳಬಲ್ಲೆ....' ಅವರು ಆಶ್ಚರ್ಯದಿಂದ ಹೇಳಿದರು. ನನಗೆ ಅದನ್ನು ಕೇಳಿ, ಅವರಿಗಿಂತಲೂ ಹೆಚ್ಚು ಆಶ್ಚರ್ಯವಾಯಿತು.... ಅದಕ್ಕಿಂತಲೂ ಹೆಚ್ಚು ದುಃಖವಾಯಿತು.

ನಾವು ಮಹಡಿಯ ಮೆಟ್ಟಿಲಿಳಿದೆವು. ಡೊಂಕರು ಮುಂದುವರಿಸಿದರು: 'ನನಗೆ ನೋಡಿ, ಈ ಅನಾವಶ್ಯಕ ಖರ್ಚುಮಾಡುವವರನ್ನು ಕಂಡರೆ ಹಿಡಿಸಲಾರದಷ್ಟು ಸಿಟ್ಟುಬರುತ್ತದೆ. ಹಣ ಇದ್ದ ಮಾತ್ರಕ್ಕೆ ಹಾಳುಮಾಡಬೇಕೆ? ಒಂದು ಇಜಾರು, ಒಂದು ಕೋಟು ಇದ್ದರಾಯಿತಪ್ಪ. ಐಷತ್ತು ಬೇಕೆ?' ಅವರು ಕಾಸು ಕರ್ಚಿಲ್ಲದೆ ಹೇಗೆ ಪುಸ್ತಕ ಸಂಗ್ರಹಿಸಿದರು—ಎಂದು ಹೇಳುತ್ತಿದ್ದರು. ಆದರೆ ನನಗೆ ಅವರ ಕೋಟಿನ 'ಪರಿಮಳ'ದಿಂದ ತಲೆಗೆ ಒಂದೂ ಹೋಗಲಿಲ್ಲ. ಸ್ವಲ್ಪ ದೂರ ಹೋಗುವಾಗ ಒಂದು ಕವಲುದಾರಿ ಬಂತು. 'ನಾವು ಹೋಗುತ್ತೇವೆ ಸಾರ್!' ಎಂದೆ.

'ಆಗಲಿ. ನಿಮ್ಮಂಥವರಿಗೆ ನನ್ನೊಡನೆ ಬರಲು ನಾಚಿಕೆಯಾಗುತ್ತದೆ; ಗೊತ್ತು ನನಗೆ!' ಎಂದು ಅಪ್ಪಣೆಕೊಟ್ಟರು. ಅವರ ನುಡಿಯಲ್ಲಿ ಒಂದು ವಿಚಿತ್ರತೆರನಾದ ನೋವು ಹಣಿಕಿಹಾಕಿತ್ತು. ನಾನು 'ಹಾಗೇನಿಲ್ಲ' ಎಂದು ಬಾಯಿಹಾರಿಸಿ, ನಾವು ಕವಲುದಾರಿ ಹಿಡಿದೆವು. ಡೊಂಕರು ಅದೇ ದಾರಿಯಲ್ಲಿ ಮುಂದುವರಿದರು.

ಅಷ್ಟರಲ್ಲಿ 'ನೋಡಿದಿರಾ, ಸಿಯೆಚ್‌ಡಿ ಡೊಂಕರು ಕೂದಲೆಣಿಸಿದ ಪಾದ್ರಿಗಳು ಬರುತ್ತಾರೆ'— ಭಾವ ದೂರದಲ್ಲಿ ಬರುತ್ತಿರುವ ನುಣ್ಣಗೆ ಮಿಂಚುವ ಸಾಣೆತಲೆಯ ಪಾದ್ರಿಯನ್ನು ತೋರಿಸಿದ.

ಬೇರೆ ಸಂದರ್ಭವಾಗುತ್ತಿದ್ದರೆ ನನಗೆ ನಗು ಬರುತ್ತಿತ್ತೆಂದು ಕಾಣುತ್ತದೆ. ಆದರೆ 'ಸಿಯೆಚ್‌ಡಿ ಡೊಂಕ'ನನ್ನು ಕಂಡು ಮನಸ್ಸು ಏಕೋ ವ್ಯಸನದಿಂದ ಕೂಡಿತ್ತು. 'ಬಾವಿಯೊಳಗಿನ ಕಪ್ಪೆಗಳ'ನ್ನು ಬರೆಯಲು ಇವನಲ್ಲದೆ ಬೇರಾರು ಸಮರ್ಥರು? — ಎಂದು ಯೋಚಿಸುತ್ತ ಬರುತ್ತಿದ್ದೆ.

ಶಂಕರ ಕೇಳಿದ: 'ಏನು ಭಾವ, ಮಾತಾಡದೆ ಸುಮ್ಮನೆ ಹೋಗುತ್ತಿರುವಿರಲ್ಲ!' 'ಏನು ಹೇಳಲಿ ಶಂಕರ!' ಎಂದೆ ನಾನು.

ಉತ್ತರ ಕನ್ನಡ ಜಿಲ್ಲೆಯಲ್ಲಿಯ ಜನಪದ ಸಾಹಿತ್ಯ

ಸಂಗ್ರಾಹಕರು: ಶ್ರೀ. ಉಪೇಂದ್ರನಾಯಕ, ಕಾರವಾರ

ಭತ್ತಕುಟ್ಟುವ ಹಾಡು

೧

ಹಾದಿ ಒಳ್ಕುದು ಹಾನಗಲ್ಲ ಒಳ್ಕುದು
ಬೀದಿ ಒಳ್ಕುದು ಬಿದರೂರು ॥
ಬೀದಿ ಒಳ್ಕುದು ಬಿದರೂರು ಪಟ್ಟಣದ
ಬೀಗ ಒಳ್ಕುಂವ ಹಿರಿಯಣ್ಣ ॥

೨

ಸಿಸ್ರ್ಯ ಪೇಟೇಲಿ ಕಾದಿರುವ ಅಣ್ಣಯ್ಯ
ಅನಿ ಮ್ಯಾಲರಸು ಬರುವಾನೆ;
ಅನಿಮ್ಯಾಲರಸು ಬರುವಣನೆ ಅತ್ತೀಗೆ
ಆಬರಣ ಇಡಿಸು ಮಗಳಿಗೆ ॥

೩

ಹೊನ್ನಿ ಹೂವಿನ ದಂಡೆ ಬಿಚ್ಕೂಟಿನ ಬಾವ್ಲೂಲಿ
ಚೆನ್ನೂರಿನ ಮಠದ ಜೆಲುವಾನೆ—
ಚೆನ್ನೂರಿನ ಮಠದ ಜೆಲುವ ನನ ತಮ್ಮಯಗೆ
ಹೆಣ್ಣ ಕೇಳವ್ರೆ ರತಿರಂಬೆ ॥

೪

ಗುಡ್ಡೂದು ಮಿಂಚೂದು ಮೇಲೇಳು ಸೀಮಾಲಿ
ನಮ್ಮೇಳು ಸೀಮಾಲಿ ಮಳೆಸುರಿದು—
ನಮ್ಮೇಳು ಸೀಮಾಲಿ ಮಳೆ ಸುರಿದು ಅಣ್ಣಯನ
ಬಂಗಾರದ ಹಡ್ಲು ಬಳ್ದ* ಬಂದಿ ॥

* ಬಳ್ದ=ತೀಲಿ.

೫

ಮಡಿವಾಳ ಮನಿಮುಂದ ಕೆಂದುಗುಳು ಹಾರ್ವುದು
ಮಡಿವಾಳ ನಿನ್ ಮಡಿಯ ಮಡ್ಕೊಳ್ಳೊ ॥
ಮಡಿವಾಳ ನಿನ್ ಮಡಿಯ ಮಡ್ಕೊಳ್ಳೊ ನನ ತಮ್ಮ
ಹೊಸ ಕುದರಿ ಏರಿ ಬರ್ವನೊ ॥

೬

ಕುದ್ರಿ ಏರೀಕಂಡಿ ಚಮುರಂಗ ಪೇಟಿಗೆ ಬಂದ
ಉಗುರೊಳಗೆ ಬಗರಿ ಹೊಳಿವುದು—
ಉಗುರೊಳಗೆ ಬಗರ್ಕಿಹೊಳಿವುದು ನನ್ನಮ್ಮನ
ಮಗ ಬಂದ ನನ್ನ ಕರಿಯಾಕೆ ॥

೭

ಮಾಡ್ಗೇರಿ ಹೆಬ್ಬಣಕೆ ಇಂದೀಗೆ ನಾಕ್‌ದಿನ
ಮಂದಿಗೆ ನನ್ನಣ್ಣ ಸರದಾರ—
ಮಂದಿಗೆ ನನ್ನಣ್ಣ ಸರದಾರನಾದಕರೆ
ಗಂಧದ ಬೀಸಣ್ಗೆ ಕಳಿಸುವೆ ॥
ಗಂಧದ ಬೀಸಣ್ಗೆ ಏನೆಂದು ಕಳಿಸುವೆ
ಮುಂದೀಯ ನಡ್ಗೆ† ಸುಕಬಾಳೊ! ॥

೮

ಅಂಕೋಲೆ ಪೇಟೇಲಿ ಮಿಂಚಿತೆ ಭೀಮನ ಬಿಲ್ಲು
ಪಂಥುಳ್ಳವರ್ಕ ಕೋಟೆ ಸಿಸ್ರ್ಯಲಿ—
ಪಂಥುಳ್ಳವರ ಕೋಟೆ ಸಿಸ್ರ್ಯ ಪೇಟೇಲಿ
ಮಿಂಚೀತೆ ತಮ್ಮಯ್ಯನ ನಳಿದೋಳು!

† ನಡ್ಗೆ=ನಡುವೆ.

ವಿಶೇಷ ಸಂಗತಿ

ಯಾವುದಾದರೊಂದು ಪ್ರದೇಶವು ಭಾಷೆಯ ದೃಷ್ಟಿಯಿಂದ ಯಾವ ಪ್ರಾಂತದಲ್ಲಿ ಸೇರಬೇಕೆಂಬ ಬಗೆಗೆ ವಾದವಿದ್ದರೆ, ಅಲ್ಲಿ ಪ್ರಚಾರದಲ್ಲಿರುವ ಜಾನಪದ ಸಾಹಿತ್ಯವು ಸರಿಯಾಗಿ ಸಾಕ್ಷ್ಯವನ್ನು ಹೇಳಬಲ್ಲದು. ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಶಿ-ರಾಶಿಯಾಗಿ ಸಿಕ್ಕುವ ಸಾಮಾನ್ಯರ ಹಾಡು-ಸಾಂಗತ್ಯಗಳು, ಬಯಲಾಟ-ಯಕ್ಷಗಾನಗಳು, ಹಳೆಯ ಕೈಬರೆಹದ ಕಡತಗಳು ಇವೆಲ್ಲ ಕನ್ನಡವೇ ಆಗಿವೆಯೆಂಬುದನ್ನು, ಕಾರವಾರ ಜಿಲ್ಲೆ ತಮ್ಮದೆಂದು ಹೇಳುವ ಮರಾಟಿಗರು ಕಂದೆರೆದು ನೋಡಬೇಕು, ಕಿವಿದೆರೆದು ಕೇಳಬೇಕು. ಮರಾಟಿಯ ಮೋಹಕ್ಕೆ ಸಿಲುಕಿದ ಕೆಲವು ಜನ ಮುಂದಾಳುಗಳು, ಉತ್ತರಕನ್ನಡ ಜಿಲ್ಲೆಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಹವಣಿಸುತ್ತಿರುವುದು ಎಲ್ಲರೂ ಬಲ್ಲ ಸಂಗತಿ. ಆದರೆ ಹದಿನಾರಾಣೆ ಕನ್ನಡ ಸಂಸ್ಕೃತಿಯಲ್ಲಿಯೆ ಬೆಳೆದಿರುವ ಜನಸಾಮಾನ್ಯರಿಗೆ, ತಮ್ಮ ಮುಂದಾಳುಗಳು ನಡೆಯಿಸಿರುವ ಈ ಮೋಸದಾಟ ಸರಿಯಾಗಿ ಮನವರಿಕೆಯಾದಾಗ, ಮುಂದಾಳುಗಳ ಮೂರಾಟ ಅಲ್ಲಿಯೆ ಪೇಟೆಯಲ್ಲಿ ಕಾಸಿಗೆ ಪಂಥೇರಿನಂತಾಗುವುದರಲ್ಲಿ ಸಂದೇಹವಿಲ್ಲ. ಈ ಮಾತಿನ ಎಚ್ಚರು ಉತ್ತರ ಕನ್ನಡ ಜಿಲ್ಲೆಯವರನ್ನೆಲ್ಲ ಸದಾಯಾದ ದಾರಿಯಿಂದ ಸಾಗಿಸಲಿ.

—ಸಂ. ಜ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಕಥಾಸಂಚಿಕೆಯಲ್ಲಿ ನಾವು ಅಪೇಕ್ಷಿಸಿದಂತೆ 'ನಾನು ಮೆಚ್ಚಿದ ಕತೆ' ಎಂಬ ವಿಮರ್ಶಾತ್ಮಕ ಲೇಖನಗಳು ಬೇರೆ ಬೇರೆ ೧೩ ಜನರಿಂದ ಬಂದಿವೆ. ಅವುಗಳ ವಿವರಣೆ ಹೀಗೆ:

"ಸೆರೆಯಿಂದ ಹೊರಗೆ" ಎಂಬ ಕತೆಯನ್ನು ಮೆಚ್ಚಿ ಬರೆದವರು: ೧. ಶ್ರೀ. ಹಿ. ಮ. ಮರುಳಸಿದ್ದಯ್ಯ, ಹುಬ್ಬಳ್ಳಿ; ೨. ಶ್ರೀ. ಎಲ್. ವಿ. ಜೋಶಿ, ಹುಬ್ಬಳ್ಳಿ; ೩. ಶ್ರೀ. ಹ. ನ. ದೇಶಪಾಂಡೆ, ವಿಜಾಪುರ; ೪. ಶ್ರೀಯುತ ಹು. ಶ್ರೀ. ನಾಗರಾಜಶರ್ಮ, ಚಿತ್ರದುರ್ಗ; ೫. ಶ್ರೀ. ಗೋಪಾಲಕೃಷ್ಣ ಶೇ. ಮಠಕರ್ ಎಂ. ಎ., ಬಿ. ಟಿ. ಪುಣೆ.

"ಸ್ನೇಹಿತರು" ಎಂಬ ಕತೆಯನ್ನು ಮೆಚ್ಚಿ ಬರೆದವರು: ೧. ಶ್ರೀ. ಚಿದಾನಂದ ಡಿ. ಪಾಟೀಲ, ಅಂಕಲಿ ೨. ಶ್ರೀ. ಮಲ್ಲಾರ ಜೋಶಿ, ಹಾವೇರಿ; ೩. ಶ್ರೀ. ಜಿ. ಎನ್. ಗೋವಿಂದರಾಜ ಶೆಟ್ಟಿ, ಸಕಲೇಶಪುರ.

"ಧರ್ಮಬುದ್ಧಿಯಿಂದ" ಕತೆಯನ್ನು ಮೆಚ್ಚಿ ಬರೆದವರು: ೧. ಶ್ರೀ. ಎ. ಜಿ. ಪುರಾಣಿಕ, ಬಾರಸಿ; ೨. ಶ್ರೀ. ಡಿ. ಎನ್. ಜೋಶಿ, ಪುಣೆ.

"ಬಿಳ್ಳಿ-ಬಂಗಾರ" ಕತೆಯನ್ನು ಮೆಚ್ಚಿದವರು ಕುಮಾರಿ ಪದ್ಮಾವತಿ ಬುರ್ಲಿಯವರು. **'ಮೂವರು ಮುದುಕರು'** ಎಂಬುದನ್ನು ಮೆಚ್ಚಿ ಬರೆದವರು ಶ್ರೀ. ಆರ್. ಎ. ಕುಸುಗಲ್ಲ, ವಿಜಾಪುರ. **'ಡಾಕ್ಟರ್ ಅತಿಥಿ'** ಎಂಬುದನ್ನು ಮೆಚ್ಚಿದವರು ಶ್ರೀ. ಮಾ. ನ. ಮೂರ್ತಿ, ತುಮಕೂರು.

"ಸೆರೆಯಿಂದ ಹೊರಗೆ" ಎಂಬುದನ್ನು ಕುರಿತು ಮೆಚ್ಚುಗೆ ತೋರಿ ಬರೆದವರು ಹೆಚ್ಚು ಜನರಿದ್ದಾರೆ. ಇದರಿಂದ ವ್ಯಕ್ತವಾಗುವುದೇನೆಂದರೆ: ನಮ್ಮ ತರುಣರು ಸಾಂಪ್ರದಾಯಿಕ ನಿಯಮ-ನಿರ್ಬಂಧಗಳಿಗೆ ಬೇಸತ್ತು, ಅವುಗಳನ್ನು ವಿರೋಧಿಸಿ ಬರೆದ ಪ್ರಚಾರಕ ಕತೆಗಳನ್ನು ಮುಚ್ಚುವರೆಂದು. ಆದರೆ ಸ್ವಾರ್ಥಲೋಭದಿಂದ ಕೂಡಿದ ಹಳೆಯ ವಿಚಾರದ ಮಠಪತಿಗಳಿಗಿಂತ ಯಾವ ರೀತಿಯಲ್ಲಿಯೂ ಕಡಿಮೆಯಲ್ಲದಷ್ಟು ಸ್ವಾರ್ಥ-ಲೋಭಗಳು ಹೊಸ ವಿಚಾರದ (ಮುಂದಾಳು) ಮಠಪತಿಗಳಲ್ಲಿಯೂ ಸೇರಿರುವುದೆಂಬುದನ್ನು ಮರೆತು ನಡೆಯಲಾಗದು. ನಮ್ಮ ತರುಣರ ಬಂಡಾಯ ಸಮಾಜ ವಿಘಾತಕವಾದ ದುರ್ಗುಣಗಳಿಗೆ ವಿರೋಧಕವಾಗಿರಬೇಕಲ್ಲದೆ, ಹಳೆಯದು ಹೊಸದು ಎಂಬ ಕಾಲವ್ಯತ್ಯಾಸಕ್ಕಾಗಿ ವಿರೋಧಕವಾಗಿರಕೂಡದು.

ವಿಮರ್ಶಾದೃಷ್ಟಿಯಿಂದ ನೋಡಿದರೆ ಕುಮಾರಿ ಪದ್ಮಾವತಿ ಬುರ್ಲಿಯವರ ಬರೆಹ ಉತ್ತಮವಾಗಿರುವುದು. ಆದರೆ ಆ ಕತೆಯ ವಿಮರ್ಶೆ ಬರೆದವರು ಅವರೊಬ್ಬರೆ. ಆದುದರಿಂದ ಹೆಚ್ಚು ಜನರು ಮೆಚ್ಚಿ ಬರೆದ 'ಸೆರೆಯಿಂದ ಹೊರಗೆ' ಎಂಬುದನ್ನು ಕುರಿತು ಬಂದುವುಗಳಲ್ಲಿ ಒಳ್ಳೆಯದೆಂದು ನಿರ್ಣಯಿತವಾದ ಶ್ರೀ. ಎಲ್. ವಿ. ಜೋಶಿಯವರ ವಿಮರ್ಶೆಯನ್ನು ಇಲ್ಲಿ ಪ್ರಕಟಿಸಲಾಗಿದೆ.

ಶ್ರೀಯುತರುಗಳಾದ ಹಿ. ಮ. ಮರುಳಸಿದ್ಧಯ್ಯ, ಗೋಪಾಲಕೃಷ್ಣ ಮಠಕರ್, ಆರ್. ಎ. ಕುಸುಗಲ್ಲ, ಡಿ. ಎನ್. ಜೋಶಿ ಅವರ ವಿಮರ್ಶೆಗಳೂ ಚೆನ್ನಾಗಿವೆ.

ಮುಂದಿನ ತಿಂಗಳಿಗಾಗಿ, ಈ ಸಂಚಿಕೆಯಲ್ಲಿ ಪ್ರಕಟವಾಗಿರುವ 'ದಿಕ್ಕೆಟ್ಟ ಸಂಧ್ಯಾರಾಗ' ಎಂಬ ಜೀವನಚಿತ್ರವನ್ನು ವಿಮರ್ಶಿಸಿ ಬರೆಯಬೇಕು.

—ಸಂ. ಜ.

ನಾನು ಮೆಚ್ಚಿದ ಕತೆ

(ಸೆರೆಯಿಂದ ಹೊರಗೆ)

ಶ್ರೀ. ಎಲ್. ವಿ. ಜೋಶಿ, ಹುಬ್ಬಳ್ಳಿ

ಈಗಾಗಲೇ ಸಣ್ಣಕತೆಗಾರರಲ್ಲಿ ಉತ್ತಮ ಸ್ಥಾನವನ್ನು ಗಳಿಸಿಕೊಂಡಿರುವ ಶ್ರೀ. ಕಟ್ಟಿಮನಿಯವರ "ಸೆರೆಯಿಂದ ಹೊರಗೆ" ಎಂಬ ಕತೆ ಬಹಳ ಒಳ್ಳೆಯದಾಗಿದೆ. 'ದಯವೇ ಧರ್ಮದ ಮೂಲವಯ್ಯಾ, ದಯವಿಲ್ಲದ ಧರ್ಮವಾವುದಯ್ಯಾ' ಎಂಬ ಬಸವಣ್ಣನವರ ಅಮೃತವಾಣಿಯೇ ಈ ಕಥೆಯ ತಳಹದಿಯಾಗಿದೆ. ಧರ್ಮದ ಹೆಸರಿನ ಮಠಾಧಿಪತಿಗಳು ನಡೆಸುವ ಕ್ರೂರಕೃತ್ಯಗಳನ್ನು ಇದರಲ್ಲಿ ಬಯಲಿಗೆಳೆದಿದ್ದಾರೆ. ಈ ಮೊದಲು ಶ್ರೀರಂಗರು 'ಹರಿಜನ್ವಾರದಲ್ಲಿ' ಮತ್ತು ಕಾರಂತರು 'ಗರ್ಭಗುಡಿಯಲ್ಲಿ' ಮಠಾಧೀಶರು ನಡೆಸುವ ದುಷ್ಕೃತಿಗಳನ್ನು ಚಿತ್ರಿಸಿದ್ದಾರೆ. ಸಾಮ್ರಾಜ್ಯಗಳನ್ನು ಸ್ಥಾಪಿಸಿ ಸಮಾಜಸೇವೆಯನ್ನು ಮಾಡಿ, ಇಹ-ಪರಗಳೆರಡನ್ನೂ ಸಾಧಿಸಿ ಶ್ರೇಷ್ಠ ವಿದ್ಯಾರಣ್ಯ, ಬಸವೇಶ್ವರ, ಮತ್ತು ರಾಮದಾಸರಂತಹ ಮಹಾನುಭಾವರೆಲ್ಲಿ! ದುಡಿದು ಸಣ್ಣದ ಅಜ್ಜ ಜನರ ದುಡ್ಡನ್ನ

ಜಯಂ

ಿಂದು ಕೊಬ್ಬಿದ ಇಂದಿನ ಸುಲಿಗೆಗಾರ ಸ್ವಾಮಿಗಳೆಲ್ಲಿ? ಸಾವಿರಾರು ವರ್ಷಗಳಿಂದ ಬಂದ ಈ ಅಂಧಶ್ರದ್ಧೆಯ 'ಸೆರೆಯಿಂದ' ಇಂದಿನ ಸಮಾಜವು 'ಹೊರಗೆ' ಬರಲು ಯತ್ನಿಸುತ್ತಿದೆ-- ಎಂಬುದೇ ಕಥೆಯ ಮುಖ್ಯ ಜೀವಾಳ.

ರಾಜಣ್ಣ ಇಂದಿನ ನವಯುಗದ ನವಯುವಕರ ಪ್ರಗತಿಪರ ವಿಚಾರಗಳ ಪ್ರತೀಕವಾಗಿದ್ದಾನೆ. ಸಮಾಜಕ್ಕೆ ಯಾವ ರೀತಿಯಿಂದಲೂ ಸೇವೆಯನ್ನು ಸಲ್ಲಿಸದ ಈಗಿನ ಸ್ವಾಮಿಯನ್ನು ಕಂಡು ಕುದಿಯುತ್ತಾನೆ. ಸಮಾಜದಿಂದ ದೂರ ಸರಿಯುತ್ತಿರುವ ಸ್ವಾಮಿಗಳಿಗೆ ಇಂದಿನ ಸಮಾಜವೇ ಬಹಿಷ್ಕಾರಹಾಕುತ್ತಲಿದೆ. ಪ್ರಾರ್ಥನೆಯ ಕಾಲದಲ್ಲಿ ಇರಬೇಕಾದ ಶಾಂತವಾತಾವರಣ ಮತ್ತು ಮನಸ್ಸಿನ ನೈರ್ಮಲ್ಯ— ಇಂದಿನ ಯಾವ ಸ್ವಾಮಿಯಲ್ಲಿಯೂ ಕಂಡುಬರುವುದಿಲ್ಲ. ಮಹಾತ್ಮರ ಪ್ರಾರ್ಥನೆಗಳು ಭಾರತದ ರಾಜಕೀಯರಂಗದಲ್ಲಿ ಪ್ರಚಂಡ ಆಂದೋಲನವನ್ನು ಮಾಡಿವೆ. ಮಹಾತ್ಮರ ಪ್ರಾರ್ಥನೆಗಳಲ್ಲಿ ೪-೫ ಲಕ್ಷ ಜನ ಕೂಡಿದರೂ, ಸೂಜಿಯು ಬಿದ್ದರೂ ಸಪ್ಪಳ ಕೇಳಿಸಬೇಕು—ಎನ್ನುವ ಶಾಂತತೆ ನೆಲಸುತ್ತಿತ್ತೆಂದು ಕಂಡವರಿಗೆ ಗೊತ್ತು. ಅದಕ್ಕೆ ಮಹಾತ್ಮರ ಆಚಾರ-ವಿಚಾರಗಳೇ ಕಾರಣ. ನೂರಾರು ಕೈಗಳಿಂದ ಏಕಕಾಲಕ್ಕೆ ಹೊರಡುತ್ತಿದ್ದ ಆ ಭಕ್ತರ ತಾಳದ ಸಪ್ಪಳದಲ್ಲಿ ಧ್ವನಿಯೇ ಅಡಗಿಹೋಗುತ್ತಿತ್ತು. ಇಂತಹ ವಿದ್ಯಾರ್ಥಿನಿಲಯದಲ್ಲಿ ಕಾಲಿಡುತ್ತಿರುವಾಗ ರಾಜಣ್ಣನಿಗೆ ಯಾವ ಬಗೆಯ ಉತ್ಸಾಹವಾಗಬೇಕು? ಎಂತಲೇ ಮನಸ್ಸಿನಲ್ಲಿ "ಭಕ್ತಿಶೂನ್ಯವಾದ ಭಜನೆಯ ದೊಂಬಿಯನ್ನು ಕಂಡು ನಗದಿರನೆ ಆ ಶಿವ" ಎಂದುಕೊಳ್ಳುತ್ತಾನೆ. ಅದು ಶಿವನಿಗೆ ಮಠದ ಪ್ರಾರ್ಥನೆಯಾಗಿ ತೋರದೆ, ಸಾಲೆಯ ಹುಡುಗರ ಪ್ರಾರ್ಥನೆಯಂತೆ ತೋರುತ್ತದೆ.

ಮರುಳಯ್ಯನನ್ನು ಕ್ಷಣಕ್ಷಣಕ್ಕೂ ಸ್ವಾಮಿಯವರು ಹಿಂಸಿಸುವುದನ್ನು ಕಂಡು ರಾಜಣ್ಣನಿಗೆ ಮತ್ತಷ್ಟು ಜುಗುಪ್ಸೆಯುಂಟಾಗುತ್ತದೆ. ಸ್ವಾಮಿಯವರ ಬಾಯಲ್ಲಿ ಯಾವಾಗಲೂ 'ಸೂ—ಮಗನೆ, ಕಳ್ಳಬಡ್ಡಿಮಗನೆ — ಚಾಂಡಾಲ' ಇತ್ಯಾದಿ ಬೈಗಳು ಕುಣಿದಾಡುತ್ತಿದ್ದವು. 'ಆಯ್ಯಾ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ' ಎಂಬ ಬಸವಣ್ಣನವರ ವಚನದಂತೆ—ಎಷ್ಟು ಸ್ವಾಮಿಗಳು ಇಂದು ನಡೆಯುತ್ತಿದ್ದಾರೆ? ಇದರಿಂದ ಅವನಿಗೆ ಮಠವೂ ಒಂದು ಸೆರೆಮನೆಯಾಗಿ ತೋರುತ್ತದೆ. ಮಠ ಮತ್ತು ಸೆರೆಮನೆಯ ಹೋಲಿಕೆಯನ್ನು ಕತೆಗಾರರು ಬಹು ಮಾರ್ಮಿಕವಾಗಿ ಹೇಳಿದ್ದಾರೆ. ಉಪವಾಸ ಬಿದ್ದ ಮರುಳಯ್ಯ ಭಜನೆಗೆ ಬಾರದಿರಲು ಸ್ವಾಮಿಯು ಹೀರಾಡುತ್ತಾನೆ. 'ಈ ನಿಮ್ಮ ಕ್ರೂರವರ್ತನೆ ಶಿವನಿಗೂ ಮೆಚ್ಚಿಗೆಯಾದೀತೇ?' ಎಂದು ರಾಜಣ್ಣ ಮಾರುತ್ತರ ಕೊಡುತ್ತಾನೆ. ೫೦ ವರ್ಷಗಳ ಬಾಳಿನಲ್ಲಿ, ಇಂತಹ ತಿರುಗಿ ಉತ್ತರವನ್ನು ಎಂದೂ ಕೇಳಿಲ್ಲವೆಂಬ ಸ್ವಾಮಿಯ ಹೇಳಿಕೆಯಲ್ಲಿ ನಮ್ಮ ಸಮಾಜದ ಅಂಧಶ್ರದ್ಧೆ ಮತ್ತು ಸ್ವಾಮಿಗಳ ನಿರಂಕುಶಾಧಿಕಾರ ಮೊದಲಾದುವುಗಳು ವ್ಯಕ್ತವಾಗುತ್ತವೆ. ಒಟ್ಟಿಗೆ ಆ ಸ್ವಾಮಿಗಳ ಪಶುತ್ವ ಮತ್ತು ಹುಚ್ಚುಹಟ ರಾಜಣ್ಣನಿಗೆ ಸಹಿಸುವುದಾಗುವುದಿಲ್ಲ. ಅಯ್ಯಾ, ಅಯ್ಯಾ, ಎಂದು ಸನಿನುಡಿವ ಶಿವಶರಣರೆಲ್ಲಿ,—ಒದ್ದು ಹಾಕುತ್ತೇನೆ ಎಂದು ಒದೆದುಬಿಡುವ ಈ ಸ್ವಾಮಿಯೆಲ್ಲಿ—ಎಂದು ತಿರಸ್ಕರಿಸುತ್ತಾನೆ "ಮಠ ಕಟ್ಟಿಸಿಕೊಟ್ಟವರು ಜನರು. ಭೂಸ-ಧಾನ್ಯ ಕೊಡುವವರು ಜನರು-- ಕೆಲವು ಭಟ್ಟಂಗಿಗಳನ್ನು ಕಟ್ಟಿಕೊಂಡು ನಿಮ್ಮ ಕೀರ್ತಿಡಂಗುರ ಹೊಡೆಯಿಸುತ್ತೀರಿ. ನಿಮ್ಮ ಕಾಲಶುಶ್ರೂಷೆಗೆ ವಿದ್ಯಾರ್ಥಿಗಳು (ಕುರುಡು ಸಮಾಜ) ನರಳುತ್ತಿದ್ದಾರೆ ದಯಾಹೀನ ನಡತೆಯಿಂದ ಮಠಕ್ಕೆ ನೀವು ಸ್ವಾಮಿಯಾಗಲೂ ಅನರ್ಹರಾಗಿದ್ದೀರಿ. ಈ ಮಠ ಜನರ ಮಠ" ಎಂದು ಆವೇಶದಿಂದ ರಾಜಣ್ಣ ನುಡಿಯುತ್ತಾನೆ. ಹೆಚ್ಚುಕಡಿಮೆಯಾಗಿ ಈಗಿನ ನಮ್ಮ ಎಲ್ಲ ಮಠಗಳ ಪರಿಸ್ಥಿತಿಯೂ ಹೀಗೆಯೇ ಇದೆ. 'ಎಂತಲೇ ನಮ್ಮಂತಹ ತರುಣರು ಬಂಡುಹೂಡುವ ಸಮಯ ಬಂದಿದೆ' ಎನ್ನುತ್ತಾನೆ. ಉಪವಾಸ-ಸತ್ಯಾಗ್ರಹ ಸುರುವಾಗುತ್ತವೆ ಸಮಾಜವನ್ನು ಕಟ್ಟುವುದು ಸ್ವಾಮಿಗಳಿಂದ ಸಾಧ್ಯವಿಲ್ಲ. ಬಡವನಾದ ನನ್ನಂಥವನ ಮಾತುಗಳನ್ನು ಸಮಾಜವು ಕೇಳುವುದೇ ಹೊರತು-- ಧರ್ಮದ ಹೆಸರಿನಲ್ಲಿ ಲೂಟಮಾಡಿ, ತಿಂದು, ಕೊಬ್ಬಿ ಅಧರ್ಮಕೃತ್ಯಗಳಲ್ಲಿ ತೊಡಗಿದ ಇಂತಹ ಸುಲಿಗೆಗಾರ ಸ್ವಾಮಿಗಳಿಂದಲ್ಲ—ಎನ್ನುತ್ತಾನೆ. ಇಂಥವರ ವಿರುದ್ಧ ಬಾವುಟವನ್ನೆತ್ತಿ ಬಂಡುಹೂಡುವ ಕಾಲ ಬಂದಿದೆ ಎನ್ನುತ್ತ, ಸಾಯಲಿಕ್ಕಾದ ಮರುಳಯ್ಯನನ್ನು ಕರೆದುಕೊಂಡು 'ಸೆರೆಯ ಹೊರಗೆ' ಹೊರಡುತ್ತಾನೆ. ಸ್ವಾಮಿಯು 'ಶಿವಾಯ ನಮಃ' ಎನ್ನುತ್ತ ಕುಳಿತುಕೊಳ್ಳುತ್ತಾನೆ. ಆ 'ಶಿವಾಯನಮಃ'ದಲ್ಲಿ ನಿನ್ನು ಅಡಗಿತ್ತೊ ಶಿವನೇ ಬಲ್ಲ.

ಮೊದಲಿನ ಪಾವಿತ್ರ್ಯ— ಮತ್ತು ಘನತೆ ಮೊದಲಾದುವುಗಳನ್ನು ಕಳೆದುಕೊಂಡು, ಕೇವಲ ಕುರುಡುಧರ್ಮದ ಸ್ಮಾರಕಗಳಾಗಿ ನಿಂತಿರುವ ನಮ್ಮ ಮಠಗಳ ಅವನತಿಯನ್ನು ಶ್ರೀ. ಕಟ್ಟಿಮನಿಯವರು ತಮ್ಮ ಸಹಜಸುಂದರವಾದ ಶೈಲಿಯಲ್ಲಿ ರೂಪಿಸಿದ್ದಾರೆ. ಸಮಾಜವನ್ನು ಸರ್ವಾಂಗಸುಂದರವಾಗಿ ಕಟ್ಟಬೇಕಾದ ಈ ಕಾಲದಲ್ಲಿ, ಇಂತಹ ಕತೆಗಳು ಮತ್ತು ವಿಚಾರಗಳು ಬಹುಮಟ್ಟಿಗೆ ಸಹಕಾರಿಯಾಗುತ್ತವೆ. ಸ್ವಾಮಿಗಳು ಕಾಲಕ್ಕೆ ತಕ್ಕಂತೆ ಸಮಾಜಕ್ಕೆ ಅನುಗುಣವಾಗಿ ಮಾರ್ಪಾಟುಮಾಡಿಕೊಂಡು, ಸಮಾಜಸೇವೆಯನ್ನು ಮಾಡಬೇಕು— ಮೊದಲಿನ ಮಠಗಳು ಜನರ ಬಾಳನ್ನು ತಿದ್ದಿ ಉಚ್ಚಮಟ್ಟಕ್ಕೆ ತರಲು ಯತ್ನಿಸುತ್ತಿದ್ದವು. ವಿದ್ಯಾಪ್ರಸಾರದ ಕೇಂದ್ರಗಳಾಗಿದ್ದವು. ಆದರೆ ಇಂದಿನ ನಮ್ಮ ಮಠಗಳು ಧರ್ಮದ ಅವನತಿಯನ್ನು ತೋರಿಸುತ್ತಲಿವೆ. ವಿದ್ಯಾರಣ್ಯ ಮತ್ತು ಬಸವೇಶ್ವರರಂತೆ ಇಂದಿನ ಸ್ವಾಮಿಗಳು ಸಮಾಜಸೇವೆಯಲ್ಲಿ ಸರ್ವಸ್ವವನ್ನೂ ಅರ್ಪಿಸಬೇಕು; ಇಲ್ಲವಾದರೆ ರಾಜಣ್ಣನು ಹೇಳುವ ಹಾಗೆ ಇನ್ನು ೫—೧೦ ವರ್ಷಗಳಲ್ಲಿ 'ಸಮಾಜವೇ ಅವರ ಮೇಲೆ ಬಹಿಷ್ಕಾರ ಹಾಕುವದು'. ಇಂತಹ ಕಥೆಗಳು ಬಂದಷ್ಟು ಒಳಿತು.

ಶ್ರೀ. ಕಟ್ಟಿಮನಿಯವರ ಲೇಖನಿಯಿಂದ ಇಂತಹ ಅನೇಕ ಕೃತಿಗಳು ಜಗುಳಲಿ!

ಪ್ರಶ್ನೆಗೆ ಉತ್ತರ

★

ಈ ವಿಭಾಗಕ್ಕೆ ಇನ್ನು ಮೇಲೆ ಪ್ರತಿಕ್ರಿಂಗಳೂ ಎಡೆ ಕೊಡಲಾಗುವುದು. ಪ್ರಶ್ನೆ ಕೇಳಲಿರುವವರು ಅಭ್ಯಾಸಿಗಳಾಗಿದ್ದು, ತಮ್ಮನ್ನು ಸಂಶಯಕ್ಕೆ ಈಡು ಮಾಡಿದ ಮತ್ತು ತಿಳಿದುಕೊಳಬೇಕಾಗಿದ್ದರೂ ನಿಚ್ಚಳವಾಗಿ ತಿಳಿಯದಿದ್ದ ವಿಷಯಗಳ ಬಗೆಗೆ ಪ್ರಶ್ನೆ ಕೇಳಬೇಕಲ್ಲದೆ, ಏನಾದರೂ ಕೇಳಿಬಿಡೋಣವೆಂಬ ಹುಡುಗಾಟದ ಬುದ್ಧಿಯಿಂದ ಕೇಳಬಾರದಾಗಿ ಬಿನ್ನಹ. ಉದಾಹರಣೆಗಾಗಿ ಒಬ್ಬರು ಕೇಳಿದ ಪ್ರಶ್ನೆಗಳಿವು :

೧. 'ತತ್ತ್ವ' ಎಂದರೇನು? ೨. 'ಕಾವ್ಯ' ಎಂದರೇನು? ೩. 'ಕನ್ನಡ' ಎಂದರೇನು? ೪. ಸಾಹಿತ್ಯದಲ್ಲಿ ಕಲ್ಪನೆಗೆ ಬೆಲೆಯಿದೆಯೆ?' ಇತ್ಯಾದಿ.

ಈ ಬಗೆಯ ಪ್ರಶ್ನೆಗಳನ್ನು ನಮ್ಮ ಶರುಣ ಸ್ನೇಹಿತರು ಯಾವ ಬುದ್ಧಿಯಿಂದ ಕೇಳುವರೆಂಬುದು ನಮಗೆ ಗೊತ್ತಿಲ್ಲ ವೆಂದಲ್ಲ. ಆದರೆ ಇಂತಹ ನಿರುಪಯುಕ್ತ—ನಿಷ್ಪ್ರಯೋಜಕ—ವಿಷಯಕ್ಕಾಗಿ ವೇಳೆಯನ್ನೂ ಅಂಚೆಯ ವೆಚ್ಚವನ್ನೂ ಅವರು ಹಾಳುಮಾಡಬಾರದು.

ಹೊಸ ವರ್ಷದಿಂದ, ಪ್ರಶ್ನೆ ಕೇಳಿದ ಪತ್ರಗಳಿಗೆ ಹೊಸ ಕ್ರಮಾಂಕ ಕೊಡಲಾಗಿದೆ. —ಸಂ. ಜ.

೧

ಶ್ರೀ. ನೀಲಾಕಾಳಿನ, ಹಾಸನ ಅವರ ಪ್ರಶ್ನೆಗಳು.

೧. ಪ್ರಗತಿಶೀಲ ಸಾಹಿತಿಗಳ ಧ್ಯೇಯವೇನು?—ಇತ್ಯಾದಿ.

ಉತ್ತರ: ಕಳೆದ ಮಾರ್ಚ್ ಸಂಚಿಕೆಯಲ್ಲಿ ಇನೆಯ ಪ್ರಶ್ನೆಗೆ ಬರೆದ ಉತ್ತರ ನೋಡಬೇಕು.

* * *

೨. "ಹಿಂದೂ ಧರ್ಮವೆಂದರೆ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವಾದ ಧರ್ಮ; ನಮ್ಮ ಸಮಾಜ ಎಂದರೆ ಆದರ್ಶ ಸಮಾಜ—ಈ ಬಗೆಯ ಕುರುಡು ಸಿದ್ಧಾಂತಗಳು ನಮ್ಮನ್ನು ಜೀವನದ ಪರಿಪೂರ್ಣತೆ, ಕಲಾಸಾಮರ್ಥ್ಯ ಇವುಗಳಿಂದ ದೂರಮಾಡಿವೆ!" ಇದನ್ನು ತಾವು ಒಪ್ಪುತ್ತೀರಾ?

ಉತ್ತರ: ಮಾನವಜೀವನದಲ್ಲಿ ಶ್ರದ್ಧೆಗೆ ಪ್ರಮುಖ ಸ್ಥಾನವಿದೆ. ಶ್ರದ್ಧೆಯಿರುವನಂಗೆ ತನ್ನ ಧರ್ಮ, ತನ್ನ ಸಮಾಜ ಇವು ಸರ್ವಶ್ರೇಷ್ಠವಾಗಿಯೂ ಎಂತಲೆ ಆದರ್ಶವಾಗಿಯೂ ಕಾಣುವುದು ಸಹಜ. ಇಂತಹ ಶ್ರದ್ಧೆಯಿಂದ ಕಾಣುವ ಧರ್ಮ-ಸಮಾಜಗಳು ನಮ್ಮನ್ನು ಜೀವನದ ಪರಿಪೂರ್ಣತೆಯಿಂದಲೂ ಕಲಾಸಾಮರ್ಥ್ಯದಿಂದಲೂ ಎಂದೂ ದೂರಮಾಡಲಾರವು. ಸಾಮಾನ್ಯ ಬುದ್ಧಿಯವರಾಗಿರುವ ಬಹುಸಂಖ್ಯಾಕರಿಗೆ ಸ್ವಧರ್ಮ-ಸ್ವಸಮಾಜ ವಿಷಯಕವಾದ ಭಾವನಾತ್ಮಕ ನಂಬುಗೆಯೂ ಉಪಕಾರಕವಾದೀತೇ ಹೊರತು ಅಪಕಾರವನ್ನೆಂದೂ ಮಾಡಲಾರದು. ಸ್ವಧರ್ಮ ಸ್ವಸಮಾಜಗಳನ್ನು ಅಶ್ರದ್ಧೆಯಿಂದ ಕಾಣುವವನು, ಎಲ್ಲಿಯೂ ಸುಖ-ಶಾಂತಿಗಳನ್ನು ಕಾಣನು. ಬಹುಜನ ಸಂಭಾವಿತವಾದ ಸ್ವಧರ್ಮ-ಸ್ವಸಮಾಜಗಳನ್ನು ಬೈಯುತ್ತ ಹೋಗುವವನು ಸ್ವಪೂಜೆಯನ್ನು ಬಯಸುವ—ಸ್ವಾರ್ಥಿಯಾದ-ಅಹಂಕಾರಿಯಾಗಿರುವನೆಂದು ನಮ್ಮ ಅಭಿಪ್ರಾಯ.

೨

ಶ್ರೀ. ಆರ್. ಎ. ಕುಸುಗಲ್ಲ ಅವರ ಪ್ರಶ್ನೆಗಳು.

೧. ಲೇಖಕನ ನಿರ್ಭಯತೆಯು ಏತರ ಮೇಲೆ ಅವಲಂಬಿಸಿ

ಉತ್ತರ: ಸತ್ಯಪ್ರೀತಿ, ಸತ್ಯದ ಸ್ಪಷ್ಟವಾದ ತಿಳಿವಳಿ ಲೋಕಕಲ್ಯಾಣ ಬುದ್ಧಿ, ನಿಸ್ಪೃಹವೃತ್ತಿ ಇವೇ ಲೇಖಕನನ್ನು ನಿರ್ಭೀತನನ್ನಾಗಿ ಮಾಡಬಲ್ಲವು.

* * *

೨. ಸಾಹಿತ್ಯವನ್ನು ಪ್ರಚಾರಕ್ಕಾಗಿ, ಮನೋರಂಜನೆಗಾ ಉಪಯೋಗಿಸಬಹುದೆ?

ಉತ್ತರ: ಸಾಹಿತ್ಯದಿಂದ ಬಹುಜನರು ಬಯಸುವ ಫ ವೆಂದರೆ ಪ್ರಚಾರ ಇಲ್ಲವೆ ಮನೋರಂಜನೆ. ಪ್ರಚಾರ-ಮನೋರಂಜನೆಗಳು ಆಧಿಭೌತಿಕವಾಗಿಯೂ ಇರಬಹುದು; ಆಧ್ಯಾತ್ಮಿಕವಾಗಿಯೂ ಇರಬಹುದು.

* * *

೩. ಸಾಹಿತ್ಯದಲ್ಲಿ ತುಬ್ಬುಕಾದಂಬರಿಯ ಸ್ಥಾನವೇನು (ತುಬ್ಬು ಕಾದಂಬರಿ=ಡಿಟೆಕ್ಟಿವ್ ನಾವೆಲ್).

ಕಳೆಯಲಿಕ್ಕೆ ಸಾಕಷ್ಟು ವೇಳೆಯಿರುವ ಆಲಸಿಗರು ತಂಬಾಕ ನಸ್ಯ, ಬೀಡಿ, ಸಿಗರೇಟು ಮೊದಲಾದ ಚಟಗಳಂತೆ—ಮನಸ್ಸನ ಉದ್ರೇಕಿಸಿಕೊಳ್ಳುವುದಕ್ಕೆ—ಇವುಗಳನ್ನೂ ಉಪಯೋಗಿಸುವರ ಚಟದ ಪದಾರ್ಥಗಳಿಗೆ ನಮ್ಮ ಮನೆಗಳಲ್ಲಿ ಸ್ಥಾನವಿದ್ದೇ ಇ ವಂತೆ, ನಮ್ಮ ಸಾಹಿತ್ಯಪಲ್ಲಿ ತುಬ್ಬುಕಾದಂಬರಿಗಳಿಗೂ ಸ್ಥಾನ ಇದ್ದೇ ಇದೆ.

ವಿಜಯಯಾತ್ರೆ

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಬರೆದವರು: ಶ್ರೀ. ವಿ. ಎಂ. ಇನಾಮುದಾರ ಬಿ.ಎ. ಅವರು. ಪ್ರಕಾಶಕರು 'ಪರ್ಣಶಬರಿ' ಗ್ರಂಥಮಾಲೆ, ಗೋಕರ್ಣ. ಬೆಲೆ ೨-೮-೦.

೧೯೪೭ ಆಗಸ್ಟ್ ಹದಿನೈದು ನಮ್ಮ ಸ್ವಾತಂತ್ರ್ಯರವಿಯುದಯಿಸಿದ ದಿನ. ಆ ಅಮರ ದಿನದ ಅಭೂತಪೂರ್ವ ಸಂಭ್ರಮ, ವಿಜೃಂಭಣೆ, ಉತ್ಸವಗಳ ಹಿನ್ನೆಲೆಯಲ್ಲಿ, ಅಂದು ಭಾರತದ ಸಾವಿರಾರು ತರುಣ ದೇಶಪ್ರೇಮಿಗಳ, ಸ್ವಾತಂತ್ರ್ಯ ಸೈನಿಕರ ಎದೆಯಲ್ಲಿ ಕುದಿಯುತ್ತಿರುವಂಥಹುದಾದ ವಿಚಾರಗಳ ಚಿತ್ರಣದಲ್ಲಿ ಶ್ರೀ. ಇನಾಮದಾರರ ವಿಜಯಯಾತ್ರೆ' ರೂಪುಗೊಂಡಿದೆ. ಇಲ್ಲಿ ಮಿಡಿಯುತ್ತಿರುವ ನಾಡಿ ಭಾರತಯುವಕರ ನಾಡಿ. ಇಲ್ಲಿ ತೆರೆದಿರುವ ಹೃದಯ ಭಾರತೀಯ ಯುವಕ-ಯುವತಿಯರ ಹೃದಯ.

ಕಾಂಗ್ರೆಸ್ಸಿನ ರಣಕಹಳೆಯನ್ನು ಕೇಳಿ ವ್ಯಾಸಂಗಕ್ಕೆ ಶರಣು ಹೊಡೆದು, ಸ್ವಾತಂತ್ರ್ಯಸಮರಕ್ಕೆ ದುಮುಕಿ, ಸೆರೆಮನೆಯ ನರಕಯಾತನೆಗಳನ್ನನುಭವಿಸಿ, ಇದ್ದ ಆರೋಗ್ಯವನ್ನು ಕಳೆದುಕೊಂಡು ರೋಗಕ್ಕೊಳಗಾಗಿ, ಸ್ವಾತಂತ್ರ್ಯಯುದ್ಧ ಮುಗಿದು ವಿಜಯದ ದಿನ ಬಂದಾಗ ಎದ್ದು ಉತ್ಸವದಲ್ಲಿ ಭಾಗವಹಿಸಲೂ ಅಸಮರ್ಥನಾಗಿ ಹಳಮಳಿಸುತ್ತ, ಅಸಹಾಯನಾಗಿ ಆಸ್ಪತ್ರೆಯಲ್ಲಿ ಬಿದ್ದುಕೊಂಡಿದ್ದು, ಕೊನೆಗೆ ಮನಸ್ಸು ತಡೆಯಲಾರದೆ ಎದ್ದು ಬಿಟ್ಟು, ಧ್ವಜ ಹಾರಿಸಲು ಹೋಗಿ, ಬಿದ್ದು ಸಾಯುವ ವಿಜಯನ ರೂಪದಲ್ಲಿ ಲೇಖಕರು, ಭಾರತದ ಲಕ್ಷಾವಧಿ ತರುಣ ಧ್ಯೇಯವಾದಿಗಳ ಚಿತ್ರವನ್ನು ರಚಿಸಿದ್ದಾರೆ. ನಾಯಕ ವಿಜಯನಂತೆಯೆ, ನಾಯಿಕೆ ಮನೋರಮೆಯೂ ಧ್ಯೇಯವಾದಿ ಯುವತಿ. ವಿಜಯನನ್ನು ಒಮ್ಮೆ ಒಲಿದಾಕೆ. ಹದಿನೈದು ವರ್ಷಗಳ ಕಾಲ ಅವನಿಗಾಗಿ ಕಾದಿದ್ದು, ಅವಿವಾಹಿತಳಾಗಿಯೆ ಉಳಿದು, ಕೊನೆಯ ವರೆಗೂ ಅವನ ಬಾಳದಾರಿಯ ದೀವಿಗೆಯಂತಿದ್ದ ಧೀರೋದಾತ್ತ ಭಾರತ ರಮಣಿ ಆಕೆ. ಇವರಿಬ್ಬರ ಪ್ರಣಯ ಸುಂದರವಾದ ಪ್ರಣಯ.

ಹದಿನೈದು ಹದಿನಾರು ವರ್ಷಗಳಲ್ಲಿ ನಡೆದ ಈ ಕತೆಯನ್ನು ಕೇವಲ ಎರಡು ದಿನಗಳ ಚೌಕಟ್ಟಿನಲ್ಲಿ ಹಾಕಿ, ಕೇವಲ ೧೩೦ ಪುಟಗಳಲ್ಲಿ, ಕೆಲವೇ ಪಾತ್ರಗಳ ಮೂಲಕ, ಹಲವೇ ಸನ್ನಿವೇಶಗಳ ಮೂಲಕ ಚಿತ್ತಾಕರ್ಷಕವಾಗಿ ರಚಿಸಿರುವುದು ಈ ಕಾದಂಬರಿಯ ವಿಶಿಷ್ಟತೆ.

ನಾಯಕ-ನಾಯಿಕೆಯರ ಪರಿಚಯ, ಸ್ನೇಹ, ಪ್ರೇಮಾಭಿವ್ಯಕ್ತಿ, ವಿರಹ. ನಾಯಕನ ಹೋರಾಟ, ಪುನರ್ಮಿಲನ, ದುರಂತಗಳ ವಿವರಣೆ—ಬೇರೆ ಕನ್ನಡ ಕಾದಂಬರಿಗಳಂತೆ ದಿನದಿನದ ಪುರಾಣದ ಹಾಗೆ ಚಿತ್ರಿತವಾಗಿರದೆ, ವಿಚಾರಗಳ ಓಘದೊಂದಿಗೆ ಸಂಭಾಷಣೆಯ ಪ್ರವಾಹದೊಂದಿಗೆ ವಾಚಕರಿಗೆ ವಿವಿತವಾಗುವುದು ಈ ಕಾದಂಬರಿಯ ಹೊಸತನ. ಕಾದಂಬರಿಯ ನಾಯಕ-ನಾಯಿಕೆಯರಿಗೆ ಸಂಬಂಧಿಕರಾಗುವ ನೂರಾರು ಜನಗಳ ಅಡ್ಡಗತೆಗಳನ್ನೂ, ನದಿ, ಬೆಟ್ಟ, ಗುಡ್ಡ, ಕೆರೆ, ಹಳ್ಳಕೊಳ್ಳಗಳ ವರ್ಣನೆಗಳನ್ನೂ ನಿಸ್ತಾರವಾಗಿ ತುಂಬುತ್ತ ಹೋಗುವುದು ಕಾದಂಬರಿಯ ಕಲೆಯಲ್ಲ; ವಿಸ್ತೃತವಾದ ಜೀವನವನ್ನು ಕಲೆಯ ಫಲಕದ ಮೇಲೆ ಕೇಂದ್ರೀಕರಿಸಿ. ಒಂದು ಹೂ ಚಿತ್ರಿಸಿದ ಹಾಗೆ ಆಂದವಾಗಿ ಚಿತ್ರಿಸುವುದು ಕಾದಂಬರಿಯ ಕಲೆ; ಆಧುನಿಕ ಕಾದಂಬರಿಯ ಕಲೆ. 'ವಿಜಯಯಾತ್ರೆ'ಯಲ್ಲಿ, ಈ ಕಲೆಯ ದರ್ಶನವಾಗುತ್ತದೆ.

ವಾಚಕರಿಗೆ ಬೇಸರವನ್ನುಂಟುಮಾಡದ ಹಾಗೆ ಕತೆ ಸಾಗಿಸಿಕೊಂಡೊಯ್ಯುವುದು ಒಳ್ಳೆಯ ಕಾದಂಬರಿಯ ಮೊದಲ ಲಕ್ಷಣ. 'ವಿಜಯಯಾತ್ರೆ'ಯನ್ನು ಓದತೊಡಗಿದರೆ, ಬೇಸರದ ನೆನಪೇ

ಬಹುಮಾನ ೫೦೦ ರೂ.

— ಅದ್ಭುತ ಸಂಶೋಧನ —

ಮಾಯಾ ಉಂಗುರ

ಈ ಉಂಗುರವನ್ನು ಮೆಸ್ಮರಿಜಮ್ ಹಾಗು ಮಂತ್ರಶಕ್ತಿಯಿಂದ ತಯಾರಿಸಲಾಗಿದ್ದು ಇದರ ಮಂತ್ರಶಕ್ತಿ ಅಪಾರವಾಗಿದೆ. ಈ ಉಂಗುರವನ್ನು ಧರಿಸುವವರು ಇಚ್ಛಿಸಿದ ಯಾವುದೇ ಅಸಾಧ್ಯ ಕಾರ್ಯವು ಸುಲಭವಾಗಿ ಸಾಧಿಸುವದು. ಈ ಉಂಗುರವು ನಿಮ್ಮ ಬೆರಳಿನಲ್ಲಿದ್ದರೆ ನಿಮಗೆ ಯಾವ ಸಂಕಟವೂ ಕಷ್ಟವೂ ಒದಗಿ ಬರದು. ಕೆಟ್ಟ ನಕ್ಷತ್ರಗಳು ನಿಮ್ಮನ್ನು ಪೀಡಿಸಲಾರವು. ಈ ಉಂಗುರ ಧಾರಿಗಳು ಎಂಥ ಗರ್ವಿಷ್ಠ ಹಾಗು ತಲೆಬಾಗದ ವ್ಯಕ್ತಿಯ ಮೇಲೂ (ಆ ವ್ಯಕ್ತಿ ಗಂಡಿರಲಿ, ಹೆಣ್ಣಿರಲಿ) ಅಧಿಕಾರವನ್ನು ನಡಸಬಹುದು. ಇದರ ಮೂಲಕ ನೀವು ಪ್ರೇಮದಲ್ಲಿ, ಕೋರ್ಟು ವ್ಯವಹಾರಗಳಲ್ಲಿ, ನವಕರಿಯಲ್ಲಿ ಗೆಲವನ್ನು ಪಡೆಯುವದಲ್ಲದೆ ಹಣವನ್ನು ಗಳಿಸುವಿರಿ. ನಿಮಗೆ ಈ ಉಂಗುರ ಅಂಗರಕ್ಷಕನಂತೆ ಬೆಂಬಲವಾಗಿರುವದು. ಒಮ್ಮೆ ಇದನ್ನು ತರಿಸಿ ನೋಡಲನೆ ರಾತ್ರಿಯೇ ಇದರ ಚಮತ್ಕಾರ ನಿಮ್ಮ ಅನುಭವಕ್ಕೆ ಬಂದೀತು.

ಉಂಗುರ ೧ ಕ್ಕೆ .... ೨—೦—೦

೩ ಉಂಗುರಗಳಿಗೆ .... ೫—೦—೦

ಪ್ಯಾಕಿಂಗು ಪೋಷ್ಟು ಖರ್ಚು ಬೇರೆ.

MAHAKALI ASHRAM,

NO. 247. KANPUR.

ಭಸ್ಮಗ್ರಸ್ತ ಆಯುರ್ವೇದ ವಿದ್ವಾನ್ ಬಿ. ವಿ. ಹಂಪಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಕಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಆಗಲಾರದು. ಕತೆಯನ್ನು ನಿರೂಪಿಸಿರುವ ರೀತಿ, ಪಾತ್ರಗಳ ಸಂಘಾಷಣಾ ಚಾತುರ್ಯ, ಮೋಹಕವೂ ಕಾವ್ಯಮಯವೂ ಆದ ಶೈಲಿ— ಓದುಗನನ್ನು ಮುಗ್ಧಗೊಳಿಸುತ್ತವೆ.

ಹದಿನೈದು ವರ್ಷಗಳ ಈ ಕತೆಯನ್ನು ಕೇವಲ ಹದಿನೈದು ದಿನಗಳ ಅವಧಿಯಲ್ಲಿ ಬರೆದುದಾಗಿ ಲೇಖಕರೇ ಹೇಳಿದ್ದಾರೆ. ಅವರು ಇಷ್ಟು ಅವಸರ ಮಾಡಬಾರದಾಗಿದ್ದಿತೆಂದು ನನಗೆನಿಸುತ್ತದೆ. ಅವಸರದಿಂದಲೋ ಏನೋ, ಕಾದಂಬರಿಯ ಕೊನೆ ಅಷ್ಟು ಸಮರ್ಪಕವಾಗಿಲ್ಲ. ವಿಜಯ ಧ್ವಜಹಾರಿಸಿ ಬೀಳುವ ಸನ್ನಿವೇಶಕ್ಕೆ ಇನ್ನೂ ಬಹಳ ಮೆರುಗು ಕೊಡಬೇಕಾಗಿತ್ತು. ಆಗ ಕಾದಂಬರಿಯ ಮುಕ್ತಾಯ ಹೆಚ್ಚು ವಾಸ್ತವಪೂರ್ಣವೂ, ಆಕರ್ಷಕವೂ ಆಗುತ್ತಿತ್ತು. — ಬ. ರಾ. ಕೆ.

ಬಾಳಿನ ಚಿತ್ರಗಳು

ಬಿ. ಎಂ. ಇದಿನಬ್ಬರ ೧೪ ಕಥೆ-ಚಿತ್ರಗಳ ಸಂಕಲನವಿದು. ಲೇಖಕರೇ ಮೊದಲ ಮಾತಿನಲ್ಲಿ ಹೇಳುವಂತೆ, ಇದು ಅವರ ಪ್ರಥಮ ಸಂಕಲನ. ಇಲ್ಲಿಯ ಬಾಳಿನ ಚಿತ್ರಗಳು ಸ್ಥೂಲವಾಗಿ ಮೆಂಗಳೂರಿನಂತಹ ಕಡಲ ತಡಿಯ ಭಾಗಕ್ಕೆ ಅನ್ವಯಿಸುವಂತಹವು ಎಂದು, ಸಮಗ್ರ ಪುಸ್ತಕ ಓದಿದಾಗ ಮನದಟ್ಟಾಗುವುದು.

'ಹಮೀದನ ನಿರ್ಧಾರ, ವಿಶ್ವಾಸ ಭಾಷಕಿ, ಹೆಣ್ಣಿನ ಕಷ್ಟ, ಉನ್ನೀಸ, ನದಿಯ ದಡದಲ್ಲಿ' ಎಂಬ ಕತೆಗಳು ಪ್ರಣಯರಂಗಕ್ಕೆ ಸಂಬಂಧಪಟ್ಟವು. ಗಂಡು-ಹೆಣ್ಣು ಗಳೆರಡೂ ಸುಖಕ್ಕೆ ಎರವಾಗಲು ಬಡತನ ಮೋಸ ಕಾರಣಗಳೆಂದು, ಲೇಖಕರು ಹಲವೆಡೆ ಸೂಚಿಸುವರು. ಸಿರಿವಂತರು ದರಿದ್ರರು ಎಂಬ ಭೇದಭಾವನೆಯಿಂದ ಸಾಮಾಜಿಕ ಜೀವನದಲ್ಲಿ ವಿಷಮತೆ ಆಡಿಯಿಟ್ಟು ಅನರ್ಥಸಂಭವಿಸುವುದೆಂದು— ಮುಂಜಿಗಳ ಒಡೆಯ, ಪ್ರಯಾಣದ ಸಮಯದಲ್ಲಿ, ವಿಧಿಯ ಆಟ, ಮಾಳಿಗೆಮನೆಯವರು, ಉಪದೇಶ— ಮೊದಲಾದ ಚಿತ್ರಗಳಲ್ಲಿ ರೂಹಿಸಲಾಗಿದೆ. ಯುದ್ಧದ ಬೇಗೆ ದೇಶದಾದ್ಯಂತ ಹಬ್ಬಿದಾಗ, ನಮ್ಮ ಸಮಾಜದ ಸಕಲಾಂಗಗಳಲ್ಲಿ ಎಂತಹ ಸ್ಥಿತ್ಯಂತರಗಳುಂಟಾದುವೆಂಬುದರ ವಿಸ್ತೃತ ಬಣ್ಣನೆಯನ್ನು ನಾವು ಇಲ್ಲಿ ಕಾಣುವೆವು.

ಇದಿನಬ್ಬರದು ಪಳಗಿದ ಕೈ ಎಂದು ಎದೆತಟ್ಟಿಹೇಳಲಿಕ್ಕಾಗದಿದ್ದರೂ, ಅವರ ವಿಚಾರಗಳ ಸ್ಪುಟತೆಯ ಅರಿವು ಯಾರಿಗೂ ಆಗದೇ ಹೋಗದು. ಇಡೀ ಹೊತ್ತಿಗೆಯ ಶೈಲಿಗೆ ರಂಜಕತೆಯ ಬಣ್ಣ ಬಳೆಯಲು ಅವರ ಉಪಮೆಗಳು ಅತ್ಯಂತ ಸಾಹಾಯ್ಯಕಾರಿಯಾಗಿವೆ. ಕೆಲವೆಡೆಯ ವ್ಯಕ್ತಿಚಿತ್ರಣದಲ್ಲಿ ಸ್ವಭಾವಿಕತೆಯ ಮೂಲಕ ಓದುಗನು ವಿಷಯದ ಒಳಹೊದಲ್ಲಿ ತನ್ಮಯನಾಗಿ ಬಿಡುವನು. ಆದರೆ—'ತರತರದ ಗಾಬರಿಯ ಚುರುಕುತನದ ಮಾತುಗಳನ್ನು ಒಮ್ಮೊಮ್ಮೆ ಬಹಳ ವಿಧೇಯತೆಯ ರೀತಿಯಲ್ಲಿ ಖರ್ಚು ಮಾಡುತ್ತಿದ್ದನು; ಕೂತೂಹಲದ ಉತ್ಸಾಹಭರಿತ ಹೆಜ್ಜೆಗಳನ್ನಿಡುತ್ತಾ ಆ ಗುಡಿಸಲ ಕಡೆಗೆ ತಿರುಗಿದನು; ತಂದೆಯು ನುಡಿದ ವಾಕ್ಯಗಳು ಅವಳಿಗೆ ಅರ್ಥಮರ್ಥ ಕೇಳಿಸಿರಬೇಕು'— ಎಂಬಂತಹ ವಾಕ್ಯರಚನೆಯಲ್ಲಿ ಕೃತಕತೆಗೆ ಅವಕಾಶ ದೊರೆತಿದೆ. 'ವರ್ಣಿಸಲ ಶಬ್ದ ದೊರೆಯಲಾರವು, ಗಗನವೇ ತಲೆಗೆ ಬೀಳುವಂತೆ' ಎಂಬ ಪದಸಮುಚ್ಚಯದ ಪುನರುಕ್ತಿ ಕಾಣುವುದು. ಐವೇಜ, ಕಲಾಸಿ, ಹಾತೆ, ಮಂಜಿ, ಸಮಜಾಯಿಸು ಎಂಬ ಪ್ರಯೋಗಗಳನ್ನು ಲೇಖಕರು ತಮಗೆ ಸಹಜವೆನಿಸಿದ ಸರಣಿಯಲ್ಲಿ ಕಾಣಿಸಿದ್ದರೂ, ಕರ್ನಾಟಕದ ಎಲ್ಲ ಭಾಗದವರಿಗೆ ಅಷ್ಟು ಸರಳವಾಗಿ ಮೈಗೂಡುವಂತಿಲ್ಲ. ಅಷ್ಟರ ಮಟ್ಟಿಗೆ ಮಾತ್ರ ಪ್ರಾಮಾಣಿಕ ಓದುಗನಿಗೆ ತೊಂದರೆಯುಂಟಾಗುವದು.

ಎತ್ತ ನೋಡಿದಡತ್ತ ಕತೆಗಳೇ ಕಣ್ಕಟ್ಟುವ ಈಗಿನ ಕಾಲದಲ್ಲಿ, ಹೊಸಬಗೆಯ ಚಿತ್ರಗಳನ್ನು ಕೊಟ್ಟು ಕನ್ನಡಿಗರನ್ನು ರಂಜಿಸಿ, ಕಡಲತಡಿಯ ಜೀವನವನ್ನು ಸತ್ತ್ವಯುತವಾಗಿ ರೂಹಿಸಲು ಪ್ರಯತ್ನಪಟ್ಟುದರಿಂದ ಇದಿನಬ್ಬರ ಈ ಕೃತಿಗೆ ನಿಶ್ಚಿತ ಸ್ಥಾನವಿದೆ. ಆದರೆ ಹೊತ್ತಿಗೆ ನೋಡಿದಾಕ್ಷಣ ಕಣ್ಣಿಗೆ ಬೀಳುವ ಚಿತ್ರ ಮಾತ್ರ ಅಂತ ರಂಗದ ವಿಷಯದಂತೆ ಆಕರ್ಷಕವಾಗಿಲ್ಲವೆಂದು ಕೊನೆಗೆ ಹೇಳದೆ ಗತ್ಯಂತರವಿಲ್ಲ.

— ಎಸ್. ಎಸ್. ಗಣಪಗಳ.

ನಗೀಗೆ ನೇವಿದ್ಯ

(೧)

ಹೆಂಡತಿ :— ಸುರೇಶನ್ನ ತಂದೇನಿ.

ಮರಗುಳಿ ಪ್ರೊಫೆಸರ್ :— ಆ 'S ಾಯಿಲಿನಲ್ಲಿ ಇಟ್ಟು ಬಿಡು.

(೨)

ಒಂದು ದಿವಾಣಿ (civil) ವ್ಯಾಜ್ಯದಲ್ಲಿ ಾಕ್ಷೀದಾರನ ಕ್ರಾಸ್ ನಡೆದಿತ್ತು.

ವಕೀಲ :— ನಿಮಗ ಮಕ್ಕಳು ಎಷ್ಟ ?

ಸಾಕ್ಷೀದಾರ :— ಈ ಖಟ್ಲೆ ಸುರು ಾದಾಗ ಎರಡಿದ್ದವು. ಈಗ ನಾಲ್ಕು ಾವರಿ.

(೩)

ಮ್ಯಾಜಿಸ್ಟ್ರೇಟ್— ಆ ರೋ ೀ ಪಿ ಯು ಾರ್ಯಾದಿಯನ್ನು ಹೊಡೆಯುತ್ತಿರುವಾಗ ೀನು ಹಾಜರಿದ್ದು ಯಾಕೆ ಬಿಡಿಸಲಿಲ್ಲ ?

ಸಾಕ್ಷೀದಾರ— ಆಗ ಯಾರು ಫಿರ್ಯಾದಿ ರೂರು ಆರೋಪಿ ಅನ್ನೋದು ಇನ್ನೂ ರ್ಣಯ ಆಗಿದ್ದಿಲ್ಲ, ರಾವ್‌ಸಾಹೇಬ್ !

(೪)

" ನಿಮ್ಮ ಹೆಂಡತಿ ಮೋಟರ್ ಕೆಳಗೆ ಕ್ಕಿದ್ದರಂತೆ — ಏನೂ ಅಪಾಯ ಆಗಿಲ್ಲ ಲ್ಲ ?"

" ಆಯಿತು ! ಮೋಟರಿನ ಇರಿಸು ುರಿದು, ಎರಡು ಗಾಲಿಗಳಿಗೆ ಪಂಕ್ಚರ್ ಯಿತು ! "

(೫)

" ಅಲ್ಲಾ, ಗಂಟಿಗಟ್ಟಲೆ ಅವರನ್ನು ಬಾಗಿಲಲ್ಲಿಯೇ ನಿಲ್ಲಿಸಿ ಮಾತಾಡ್ತಿದ್ದೆಲ್ಲ ?"

" ಹೌದು, ಒಳಗ ಬರಲಿಕ್ಕೆ ಅವರಿಗೆ ುರಸತ್ತು ಇರಲಿಲ್ಲ. "

(೬)

ಕಿಶೋರಿ :— " ಕಿಟ್ಟಪ್ಪನವರೆ, ನಿನ್ನೆ ನಿಮ್ಮ ಕವಿತೆಗಳನ್ನು ತಂದೆಯವರಿಗೆ ತೋರಿಸಿದೆ. "

ಕಿಟ್ಟಪ್ಪ— (ಆನಂದ ಪುಲಕಿತನಾಗಿ) " ಹೀಗೊ ? ಅವನ್ನು ನೋಡಿ ಅವರ ಬಾಯಿಂದ ಯಾವ ಉದ್ಗಾರಗಳು ಹೊರ ಬಂದವು ? "

ಕಿಶೋರಿ :— ಇಷ್ಟೇ ಅಂದರು— ' ಇಂಥ ಮೂರ್ಖ ಮನುಷ್ಯನಿಗೆ ನಾನು ನಿನ್ನನ್ನು ಕೊಡಲಿಲ್ಲ, ಇದೊಂದು ಒಳ್ಳೇದೆ ಆಯಿತು!



(೮)

(ಇಬ್ಬರು ತಿರುಡರು ಹಾದಿಯಲ್ಲಿ ಒಬ್ಬರ ನ್ನೊಬ್ಬರು ಕಂಡಾಗ ನಡೆದ ಸಂವಾದ ಇದು)

ಒಬ್ಬ— ಏನು, ಪ್ಯಾಟಗೆ ಹೊರಟಿದ್ದೀರಾ ? '

ಇನ್ನೊಬ್ಬ :— ಇಲ್ಲ, ಇಲ್ಲ ! ಪ್ಯಾಟಗೆ ಹೊರಟೀನಿ !

ಒಬ್ಬ :— ಹೀಂಗಽ ? ನನಗೆ ನೀವು ಪ್ಯಾಟಗೇ ಹೊರಟಿದ್ದೀರೇನೊ ಅಂತನಿಸಿತು.

(೯)

ತಂಗಿ—(ಚಿತ್ರಕಾರ ಅಣ್ಣನಿಗೆ) ಅಣ್ಣಾ, ನೆರಮನೀ ದುರ್ಗಿಗೆ ತನ್ನದೊಂದು ಬಣ್ಣದ ಚಿತ್ರಾ ತೆಗೆದುಕೊಡಬೇಕಂತ. ನೀ ತೆಗೆದು ಕೊಡ್ತೀಯಾ ?

ಜೆ :— ಆಕೆಗೆ ಹೇಳು— ಅಚ್ಚ ಕರೀ ಬಣ್ಣ ಸಾಕಷ್ಟಿಲ್ಲ. ಅದು ಬಂದ ಮ್ಯಾಲ ತೆಗೆದುಕೊಡ್ತೇನಿ — ಅಂತ.

(೯)

ಬರೆಹಗಾರನಾಗಬೇಕೆಂದು ಹಂಬಲಿಸುವ ತರುಣನೊಬ್ಬ ಸಂಪಾದಕನನ್ನು ಕೇಳಿದ— ' ಬರೆಹಗಾರನಾಗಬೇಕೆಂದು ನನಗೆ ಆಸೆ. ಬರೆಯಲು ಹೇಗೆ ಪ್ರಾರಂಭಿಸಬೇಕು ? '

ತಟ್ಟನೆ ಉತ್ತರಿಸಿದರು ಸಂಪಾದಕರು— ' ಎಡದಿಂದ ಬಲಕ್ಕೆ. '

(೧೦)

ರೇಲ್ವೆ ಡಬ್ಬಿಯಲ್ಲಿ ಟಿಕೀಟ ಚೆಕ್ಕರ್ ತಿಕೀಟನ್ನು ಕೇಳಿದ. ರಾಯರು ಜೇಬಿನಲ್ಲಿ ಹುಡುಕಾಡಹತ್ತಿದರು. ಅದು ಸಿಗದಿದ್ದು ದನ್ನು ಕಂಡು ಚೆಕ್ಕರ್ ಹೇಳಿದ—" ಪರವಾ ಇಲ್ಲ, ಇರಲಿ ಬಿಡಿ. ತೊಂದರೆ ಪಡಬೇಡಿ."

" ಹಾಗೆಂದರೆ ಹೇಗೆ ? ನನಗಾದರೂ ಬೇಕಲ್ಲ; ಯಾವ ಊರಿಗೆ ಹೊರಟಿದ್ದೇ ನೆಂದು ತಿಳಿಯುವದಕ್ಕೆ ! "

— ಶರಚ್ಚಂದ್ರರ ಶ್ರೇಷ್ಠ ಕಾದಂಬರಿ —

ಶ್ರೀ ಕಾಂತ

(ಎಂಟು ಭಾಗಗಳೂ ಪೂರ್ಣ ಅಚ್ಚಾಗಿವೆ)

ಬೆಲೆ ಹತ್ತು ರೂಪಾಯಿ ಮಾತ್ರ

ಪಠಣಾಸಕ್ತಿಗಳಲ್ಲಿಯಷ್ಟೂ ಭಾಷಾಂತರಣಾಗಿ, ಎಲ್ಲೆಲ್ಲಿಯೂ ಹುಸ್ಸಕೆ ಪಡೆದ ಸಾರಸ್ಯಮಯ ಕಾದಂಬರಿ. ಕೆಲವೇ ಪ್ರತಿಗಳಿವೆ. ೧೦ ರೂ. M. O. ಕಳಿಸಿ, ಈಗಲೇ ತರಿಸಿಕೊಳ್ಳಿರಿ.

ಬೇರೆ ಕೆಲವು ಶರತ್ಕಾದಂಬರಿಗಳು

ದೇವಾಸ (ಅಂಚೆನೆಚ್ಚ ಸೇರಿ		೧—೧೨—೦
ವಿಜಯಾ	,,	೧—೧೨—೦
ವೈಕುಂಠನ ಮೃತ್ಯುಪತ್ರ	,,	೧—೧೨—೦
ರಾಜಲಕ್ಷ್ಮಿ	,,	೧—೧೨—೦
ಷೋಡಶಿ	,,	೨— ೬—೦
ಚಿತ್ರ	,,	೧— ೦—೦

(ಪ್ರೇಮಪಥ, ಹೇಮಾಂಗಿನಿ, ಮಹೇಶ, ಗುರುಚರಣ, ಮಂಗಲಸೂತ್ರ, ಮಹಾಸತಿ, ಅಭಾಗಿನಿ ಸ್ವರ್ಗ ಈ ಏಳು ಕತೆಗಳ ಸೂಡು ೨—೦—೦)

ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ:—

ಸಮಾಜ ಪುಸ್ತಕಾಲಯ, ಧಾರವಾಡ.

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು

ಒಡನೆ ವಾಸಿ ಹೊಂದುತ್ತವೆ.

ಶ್ರೀಮಂತರ-ಬಡಬಗ್ಗರ-ಕೂಲಿಕಾರರ ಎಲ್ಲರ ಸಲುವಾಗಿ ಜ್ವರಗಳ ಮೇಲೆ ರಾಮಬಾಣ ಔಷಧ.

ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

(೪ನೆಯ ಪುಟದಿಂದ ಮುಂದುವರಿದುದು.)

ಮಿಂಚಿನ ಬಳ್ಳಿ, ಧಾರವಾಡ. ಕ್ರಾ. ಆ. ೧೩ ಪುಟಗಳು. ಬೆಲೆ. ೦-೪-೦.

ಶ್ರೀಬಸವಣ್ಣನವರ ಬಾಲ್ಯವನ್ನು ಮೊದಲುಮಾಡಿ ಅವರ ಲಿಂಗೈಕ್ಯದ ವರೆಗಿನ ಸಮಗ್ರವಾದ ಚರಿತ್ರವನ್ನೂ ಸಂಗ್ರಹಿಸಿ, ಈ ಲಾವಣಿಯಲ್ಲಿ ಶ್ರೀ. ಕುಲಕರ್ಣಿಯವರು ಸಮಂಜಸವಾಗಿ ಪೋಣಿಸಿದ್ದಾರೆ. ನಮ್ಮಲ್ಲಿಯ ವಿಚಿತ್ರ ಪರಿಸ್ಥಿತಿಯ ಮೂಲಕ, ಹಳಿಗಳಲ್ಲಿರುವ ಹಲವುಜನ—ಶ್ರೀ ಬಸವೇಶ್ವರರ ಮತಾನುಯಾಯಿಗಳಿಗೂ ಅವರ ಚರಿತ್ರದ ಮಹತ್ತ್ವವೇನೆಂಬುದು ಗೊತ್ತಿರುವುದಿಲ್ಲ. ಈ ಲಾವಣಿ ಹಾಡು, ಹಳ್ಳಿಗರಿಗೆ ಶ್ರೀ ಬಸವಣ್ಣನವರ ಚರಿತ್ರವನ್ನು ಚೆನ್ನಾಗಿ ತಿಳುಹಿಕೊಡಬಲ್ಲದು.

೪. **ಉಷ್ಕಲಾ** (೨ನೆಯಭಾಗ— ಸಾಮಾಜಿಕ ಕಾದಂಬರಿ) 'ಹರಿಜಾತ'ರು ಬರೆದವರು. ಹುಬ್ಬಳ್ಳಿಯ ಸಂಜೀವಿನಿ ಗ್ರಂಥಮಾಲೆಯ ಪ್ರಕಾಶನ. ಕ್ರಾ. ಆ. ೧೯೨ ಪುಟಗಳು. ಬೆಲೆ. ೨-೦-೦.

ಸುಧಾರಿಸಿದ ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟಿರುವುದು!

ಹೊಸಕಾಲಕ್ಕೆ ಬೇಕಾದ ಹೊಸ ಉಪಕ್ರಮದ ಗಣಿತ

ನೂತನ ಗಣಿತ

ಸರಕಾರದಿಂದ ಮಂಜೂರ್	೬ನೆಯ ವರ್ಗಕ್ಕಾಗಿ ೦-೧೩-೦
೫ನೆಯ ವರ್ಗಕ್ಕಾಗಿ ೦-೦-೦	**೭ನೆಯ ವರ್ಗಕ್ಕಾಗಿ ೦-೨-೦**
(ಪರಿಷ್ಕೃತ ಜಪಮಾಲೆಯ ಸಹ)	ಶ್ರೀ. "ಗಲಗಲಿ" ಬರೆದುದು

ಮಾರಾಟಗಾರರು:— ಅಳಳ್ಳಿವಾಡಿ ಬುಕ್ ಡಿಪೋ, ಧಾರವಾಡ.

ರೇಶನ್ ಹೋಗಬೇಕಾದರೆ ಹೆಚ್ಚು ಆಹಾರಧಾನ್ಯ ಬೆಳೆಯಿಸಬೇಕು.

ಹೆಚ್ಚು ಆಹಾರಧಾನ್ಯ ಬೆಳೆಯಲು ಒಂದೇ ಹಾದಿ!

ನಮ್ಮಲ್ಲಿ ದೊರೆಯುವ ಹೊಸ ನಮೂನೆಯ, ಕಂಪನಿ ಗ್ಯಾರಂಟಿಯಿದ್ದ

ಕ್ರೂಡ್ ಆಯಿಲ್ ಎಂಜಿನ್‌ಗಳನ್ನು

ಉಪಯೋಗಿಸಿರಿ.

೧. ಇವು ಎತ್ತು ಮತ್ತು ರಾಟೆಯ ಕಿಮ್ಮತ್ತಿನಲ್ಲಿಯೇ ದೊರೆಯುವುವು.
೨. ಒಂದೇ ಒಂದು ಜಿಲ್ಲೆಯಲ್ಲಿ ಈಗಾಗಲೇ ನೂರಾರು ಎಂಜಿನ್‌ಗಳು ಉಪಯೋಗದಲ್ಲಿವೆ.
೩. ಈ ಎಂಜಿನ್ ನಡಸಲು ಎಂಥ ರೈತನಿಗೂ ಬರುವದು.
೪. ಇನ್ನು ಮಳೆಗಾಗಿ ಕಾಯುವದು ಬೇಡ.



೧. 'ಬರ್ಗ್' ಸ್ವೀಡನ್ ಮೇಕ್,
೩ ೬, ೧೮ ಹಾರ್ಸ್ ಪಾವರಿನವು.
೨. 'ಸ್ಕಾಂಡಿಯಾ ಸ್ವೀ ಮೇ. ೫,೧೦,೧೫.
ಹಾರ್ಸ್ ಪಾವರಿನವು.
೩. 'ಡಾಟ್' ,, ೯,೧೨,೧೯,
೪. 'ಎನ್‌ಮಾರ್' ಜಪಾನ್
ಕ್ರೂಡಾಯಿಲ್ ೫, ೧೦, ೧೬, ೨೦.
'ಹಾರಿಝಾಂಟಲ್' ,,
೫. 'ಶ್ಯಾಂಕ್ಸ್' ಇಂಗ್ಲಂಡ್,
ಡಿಝಾಯಲ್ ೮ ,,

ಮೇಲಿನ ಎಂಜಿನ್‌ಗಳ ತಯರ್
ಸ್ಟಾಕ್ ಇವೆ.

ನೀವು ಇಂದೇ ನಿಮ್ಮ ಹೊಲದಲ್ಲಿದ್ದ ಬಾಂಣಿಯಲ್ಲಿ ಉಪಯೋಗಿಸಿರಿ.

ಈ ವಿಷಯವಲ್ಲಿ ನಿಮಗೆ ಬೇಕಾದ ಸಲಹೆಯನ್ನು ಪುಕ್ಕಟೆ ಕೊಡುವೆವು. ಇದರ ಹೊರತು ನಮ್ಮಲ್ಲಿ ರಬರ್ ಬೆಲ್ಟಿಂಗ್, ಸೆಂಟ್ರಿಫ್ಯೂಗಲ್ ಪಂಪ್, ಬೀಸುವ ಚಕ್ಕಿ, ರೋಟರಿ ಗಾಣ ಇತರ ಮಶಿನರಿಯ ಬಿಡಿಭಾಗಗಳೂ ಯೋಗ್ಯ ಬೆಲೆಗೆ ದೊರೆಯುವುವು.

ಮುಂಬಯಿ ಇಲಾಖೆಯ ದಕ್ಷಿಣ ಭಾಗದ ಸೋಲ್ ಏಜಂಟರು :—

ದೊಡ್ಡಣ್ಣವರ ಬ್ರದರ್ಸ್,
ಕಿಲ್ಲೆಯ ಹತ್ತಿರ, ಬೆಳಗಾಂವಿ.

ನಿಮ್ಮ ಮನೆ, ಹೊಲ ಅಥವಾ ಕಾರಖಾನೆಯಲ್ಲಿ ನೀರಿನ
ಸಮಸ್ಯೆ ಪರಿಹಾರವಾಗಬೇಕಿದ್ದರೆ

ಕಿರ್ಲೋಸ್ಕರ
'ಸೆಂಟ್ರಿಫ್ಯೂಗಲ್ ಪಂಪ'ನ್ನೇ
ಉಪಯೋಗಿಸಿರಿ



ಹೆಚ್ಚಿನ ವಿವರಗಳಿಗಾಗಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,
ಕಿರ್ಲೋಸ್ಕರವಾಡಿ.

ಇವರಿಗೆ ಬರೆಯಿರಿ.

Printed by Mr. V. Y. Jathar at the Karnatak Printing Works, Dharwar, and Published for the Proprie
Jayanti Publications, by M. V. Melligatti at the Jayanti Office, Dharwar. 1815-49

ಪಯಣ

ಸಂ - ೧

ಸಂಚಿಕೆ

೮ ಆಣೆ

ಜಯಂತಿ

JAYANTI

ಜುಲೈ ೧೯೪೯

ವಾರ್ಷಿಕ ವರ್ಗಣಿ . . ೪—೮—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್.ಜಿ. ಚೆಂಡ್ರೆ

ಪ್ರಕಾಶಕರು— ಶ್ರೀ. ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೪೦	ಒಂದು ಸಲ
½	,,	,,	೨೫	,,
¼	,,	,,	೧೫	,,
⅛	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

—— ೦ ——

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.

For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೫ | ೧ನೆಯ ಜುಲೈ ೧೯೪೯ | ಸಂಚಿಕೆ

ಈ ಸಂಚಿಕೆಯಲ್ಲಿ:

ಹೊದಿಕೆಯ ಮೇಲಿನ ನ್ಯಾ. ಮೂ. ಚಾಗಿರದಾರರ ಪಡಿಯಚ್ಚು
'ಸಂಯುಕ್ತ ಕರ್ನಾಟಕ' ಕಾರ್ಯಾಲಯದವರ ಸೌಜನ್ಯದಿಂದ ದೊರೆತಿ

ಲಲಿತೆ! (ಕವನ)
'ಅಂಬಿಕಾತನಯ ದತ್ತ'

ಕರ್ನಾಟಕ ವಿಶ್ವವಿದ್ಯಾನಿಲಯ (ಸಂಪಾದಕೀಯ)
'ಸಂಪಾದಕರು'

ಪ್ರಶ್ನೆಗೆ ಉತ್ತರಗಳು
ಸಂಪಾದಕ ಸಮಿತಿ

ಹೀಗೆ ಮಾಡಬಹುದೆ?
ಶ್ರೀ. ಜಿ. ಟಿ. ನಾರಾಯಣರಾವ್, ಎಂ.ಎ. ಮಡಿಕೇರಿ

ಆದರ್ಶ ದಿನಪತ್ರಿಕೆ ('ಲಾ ಪ್ರೆನ್ಸಾ' ಪರಿಚಯ)
ಶ್ರೀ. ಸುರೇಂದ್ರ ದಾನಿ, ಹುಬ್ಬಳ್ಳಿ

ಹಂಪೆಯ ಪೆಂಪು (ಕವನ)
ಶ್ರೀ. ನ. ಮ. ಕೋ. ಸೋಗಿ, ಅನಂತಪುರ

ಸುದ್ದಿಗಿಂತಲೂ ನಿದ್ದೆ ಉತ್ತಮ (ವಿನೋದ ಪ್ರಬಂಧ)
ಪ್ರೊ. ದ. ರಾ. ಚೆಂಡ್ರೆ, ಎಂ.ಎ ಸೊಲ್ಲಾಪುರ

ಕರುಳು ಕರಗಿಸುವ ಕತೆಗಾರ (ವ್ಯಕ್ತಿ-ಕೃತಿ ಪರಿಚಯ)
ಶ್ರೀ. ವಿ. ಸಿ. ಹಿತ್ತಲಮನಿ, ಬಿ. ಎಸ್‌ಸಿ. (ಅಗ್ರಿ.) ಶಿರಸಿ

ಸೇವಕ (ಅನುವಾದಿತ ಕತೆ)
ಶ್ರೀ ಎಸ್ ಸುಬ್ಬರಾಮಯ್ಯ, ಗೋರಿಬಿದನೂರು

ಇಂದಿನ ನಮ್ಮ ಸಮಾಜದ ಸ್ವರೂಪ (ಪರಿಸ್ಥಿತಿ ವಿಮರ್ಶೆ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಮಹಾರಾಷ್ಟ್ರ ಸಾ. ಸಮ್ಮೇಲನದ ಒಂದು ನೋಟ
ಶ್ರೀ. ಬಾ. ಕೃ. ಗಲಗಲಿ, ಕಿಲೋಸ್ಕರವಾಡಿ

ಪುಸ್ತಕ ವಿಮರ್ಶೆ ('ಜರಾಸಂಧಿ' ನಾಟಕ)
'ಬಲ್ಲವ'

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ವಿಶ್ವೇಶ್ವರರಾವ್, ಬನಾರಸ

ಉ.ಕ. ಜಿಲ್ಲೆಯ ಜನಪದ ಸಾಹಿತ್ಯ
ಶ್ರೀ. ಉಪೇಂದ್ರ ನಾಯಕ, ಕಾರವಾರ

ನಗೀಗೆ ನೇವೀದ್ಯ
'ನಕಲೀ ನಾರಾಯಣಾಚಾರ್ರು'

ಸಾದರ ಸ್ವೀಕಾರ

ಶ್ರೀ. ಭೀಮಾಚಾರ್ಯ ಚಿಮ್ಮಲಿಗಿಯವರು ಕನ್ನಡ ವಾ
ನಾಲಯಗಳಿಗೆ ಕೊಡಲಿರುವ ೫ ರೂ. ಗಳ ಪುಸ್ತಕಗಳ ಬ
ನಮಗೆ ಪತ್ರ ಬರುತ್ತಲಿವೆ. ಅವರ ವಿಳಾಸ 'ಶ್ರೀ. ಬಿ. ಜಿ. ಚಿವ
ಲಿಗಿ, ಅಬೀದಾರೋಡು, ಹೈದರಾಬಾದ (ಡೆಕ್ಕನ್)' ಎಂದಿ
ದಯೆಯಿಟ್ಟು ಪುಸ್ತಕಾಪೇಕ್ಷಿಗಳು ಅವರ ವಿಳಾಸಕ್ಕೇ ಪತ್ರಬರೆ
ಕೇಳಬೇಕು. **ಸಂ. ಜ.**

ವರ್ಷ ೮ | ಸಂಚಿಕೆ ೨ | ಜುಲೈ | ೧೯೪೯



ಲಲಿತೆ!

★

ಶ್ರೀ. 'ಅಂಬಿಕಾತನಯ ದತ್ತ'

ಯಾವ ಬಾನುಲಿ ಕೇಂದ್ರದಲ್ಲಿ ಹಾಡುತ್ತಿರುವೆ?—
ನಿನ್ನ ರಾಗದ ಲಹರಿ ತೇಲಿಬಂದು
ನಮ್ಮನೆಚ್ಚರಿಸುತ್ತ ಕನಸು ಮರೆಯುವ ಹಾಗೆ
ಏಕೆ ಕಿವಿಗೆರೆಯುತ್ತ ಅಡಗಿ ಇರುವೆ?

ಕಣ್ತುಂಬಿ ಎದೆದುಂಬಿ ಎಂದು ಬರುವೆ?
ಸಿಕವಾಣಿ ಶುಕಪಾಣಿ ದಿವ್ಯರಾಣೀ,
ಓ ದೇವಿ ಓ ತಾಯಿ ಮಾಯೆ ಲಲಿತೇ,
ಈ ಆಟ ಈ ಮಾಟ ಏಕೆ ಕಲಿತೆ?

ಬರಿ ನಿನ್ನ ನೆರಳಾಟ ಏಸು ದಿನ ನೋಡುವುದೊ!
ತೆರೆ ತೆರೆದು ಮೈತಳೆದು ಏಕೆ ತೋರೆ?
ಕಣ್ಣಿಗನ್ನವ ನೀಡಿ ಎದೆಹಸಿವ ಕೆರಳಿಸುವೆ,
ಈ ಲೀಲೆಯಲಿ ಯಾವ ಮೋಡಿ ಇಹುದೋ!

ನೆರಳು ತಿರುಳೂ ಕೂಡಿ ನೀನೆ ಅಹುದೊ?
ಓ ಗೊಂಬೆ ಏನೆಂಬೆ ಕಾಣೆನೆಂಬೆ,
ದೇವಿ ಮಾದೇವಿ ಮಾಮಾಯಿ ಲಲಿತೇ,
ಒಳಗನುದ್ದೀಪಿಸುತ ಒಳಗೆ ಕುಳಿತೆ.

ನಿನ್ನೊಂದು ನೋಗವಾಗಿ,ನಿನ್ನೊಬ್ಬ ಮಗುವಾಗಿ
ಬಾಳೇನು ಬದುಕೇನು ಜಪಿಸುತಿರುವೆ;
ನಿನ್ನ ಬಸಿರಿನ ನೀರ ಮೀನ ನಾನಾಗುತ್ತ
ಸುಮನ ಮನುವಾಗಿನಾ ಹೊರಗೆ ಬಂದು

ನಿನ್ನ ನಾಟಕದಲ್ಲಿ ಪಾತ್ರ ತಂದು
ಆಡುವೆನು ಹಾಡುವೆನು ನನ್ನ ನಾ ನೋಡುವೆನು
ದೇವದೇವನ ದೇವಿ ನಾಟ್ಯ ಲಲಿತೇ
ದಯೆದೋರು ಶುಭಕೋರು ದೇವದಯಿತೇ

ಕಲ್ಲು ಗುಡ್ಡನ ಕೊರೆದು ದೇವಾಲಯವ ತೆರೆದು
ಬಿಂಬದಲಿ ಸೌಂದರ್ಯ ತುಂಬುವಂತೆ
ಈಗೆನ್ನ ಮೈಕಟ್ಟ ಕೈತಟ್ಟ ಮನಮುಟ್ಟ
ಕಲ್ಪಿಸುವ ಶಿಲ್ಪಿ ನೀನಾಗಬೇಕು

ನಿನ್ನಿಂದ ನನ್ನೊಳ್ಳಿತಾಗ ಸಾಕು!
ಅರಯಿಕೆ ಹಾರಯಿಕೆ ಒಂದೆ ಬಯಕೆ
ಚಿಚ್ಚಂಚಲೇ ದೇವಿ ಸಕಲಲಲಿತೇ
ಅನುಪಮೇಯೇ ತಾಯಿ ಚಿರ ಅತುಲತೆ!

ಕರ್ನಾಟಕ ವಿಶ್ವವಿದ್ಯಾನಿಲಯ

ಕನ್ನಡಿಗರ ಬಹುದಿನದ ಕನಸಾಗಿದ್ದ ಕರ್ನಾಟಕ ವಿಶ್ವವಿದ್ಯಾನಿಲಯವು, ನನಸಾಗಿ ರೂಪುಗೊಳ್ಳಲು ತೊಡಗಿದೆ. ಸದ್ಯ ಇದು ಮುಂಬೈ ಆಧಿಪತ್ಯದ ಕನ್ನಡ ಪ್ರದೇಶದಲ್ಲಿಯ ಕನ್ನಡಿಗರಿಗಾಗಿ ಎಂದಿದ್ದರೂ, ಕರ್ನಾಟಕ ಏಕೀಕೃತ ಪ್ರಾಂತ್ಯವಾದಾಗ, ಎಲ್ಲ ಕನ್ನಡಿಗರದೂ ಆಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ಮೈಸೂರು ವಿಶ್ವವಿದ್ಯಾನಿಲಯ ಮುಂದೆ ಪ್ರತ್ಯೇಕವಾಗಿ ಉಳಿದರೂ, ಈ ಕರ್ನಾಟಕ ವಿ. ವಿ. ನಿಲಯವು, ಯಾವ ಕುಂದುಕೊರತೆಗಳಿಲ್ಲದಂತೆ ಸಾಗುವಷ್ಟು ಇದಕ್ಕೆ ಪ್ರದೇಶವ್ಯಾಪ್ತಿಯಿರುವುದು; ಜನಸಂಖ್ಯಾ ಬಲವಿರುವುದು.

ಸದ್ಯ ವಿ. ವಿ. ನಿಲಯವು ಪ್ರಾರಂಭವಾದೊಡನೆಯೆ, ಅದಕ್ಕೆ ಹೊಂದಿಕೊಳ್ಳಬಹುದಾದ ಕಾಲೇಜುಗಳು ಧಾರವಾಡದಲ್ಲಿ ೪, ಹುಬ್ಬಳ್ಳಿಯಲ್ಲಿ ೨, ಬೆಳಗಾಂವಿಯಲ್ಲಿ ೪, ವಿಜಾಪುರದಲ್ಲಿ ೧, ಬಾಗಲಕೋಟೆಯಲ್ಲಿ ೧, ಕುಮಟೆಯಲ್ಲಿ ೧— ಹೀಗೆ ೧೩ ಇರುವುವು. ಬೇಗನೆ ಹುಬ್ಬಳ್ಳಿಯಲ್ಲಿ ಪ್ರಾರಂಭವಾಗಲಿರುವ ಮೆಡಿಕಲ್ ಕಾಲೇಜನ್ನೂ ಲೆಕ್ಕಕ್ಕೆ ಹಿಡಿದರೆ, ಒಟ್ಟು ೧೪ ಆಗುವುವು. ೧೩ ಕಾಲೇಜುಗಳಲ್ಲಿ ೧ ಲಾ ಕಾಲೇಜು, ೧ ಆಗ್ರಿಕಲ್ಚರಲ್ ಕಾಲೇಜು, ೧ ಕಾಮರ್ಸ್ ಕಾಲೇಜು, ೧ ಎಂಜಿನಿಯರಿಂಗ್ ಕಾಲೇಜು, ೧ ಎಸ್. ಟಿ. ಕಾಲೇಜು. ಈ ಐದನ್ನುಳಿದು ಮಿಕ್ಕ ಎಂಟು ಕಾಲೇಜುಗಳಲ್ಲಿ ಕಲೆ ಮತ್ತು ವಿಜ್ಞಾನಗಳೆರಡನ್ನೂ ಕಲಿಸಲಾಗುತ್ತಿದೆ. ವಿ. ವಿ. ನಿಲಯ ಸಂಪೂರ್ಣ ರೂಪುಗೊಂಡು ಕಾರ್ಯಸನ್ನದ್ಧವಾದ ಮೇಲೆ, ನಾಡಿಗರ ಆವಶ್ಯಕತೆಯನ್ನರಿತು, ಇನ್ನೂ ಬೇರೆ ಬೇರೆ ಜ್ಞಾನ-ವಿಜ್ಞಾನ ವಿಭಾಗದ ಕಾಲೇಜುಗಳೂ ತಲೆಯೆತ್ತಬಹುದು.

ಕರ್ನಾಟಕ ವಿ. ವಿ. ನಿಲಯದ ಉದಯದಿಂದ, ಕನ್ನಡಿಗರ ಕಾಲನ್ನು ಹಿಡಿದು ಎಳೆಯುತ್ತಲಿದ್ದ ಒಂದು ದೊಡ್ಡ ತೊಡರು ತಪ್ಪಿ ದಂತಾಯಿತು. ಮುಂಬಯಿ ವಿ. ವಿ. ನಿಲಯದ ಆಡಳಿತದ ಸಮಿತಿಯಲ್ಲಿ, ಕನ್ನಡ ಸದಸ್ಯರಿಗೆ ಸಂಖ್ಯಾಬಲವಿರಲಿಲ್ಲ. ಆದುದರಿಂದಲೆ ಕನ್ನಡಿಗರ ಯಾವ ಬೇಡಿಕೆ-ವಿನ್ನಹಗಳಿಗೂ ಅಲ್ಲಿ ಸಾಕಷ್ಟು ಪುರಸ್ಕಾರ ದೊರೆಯುತ್ತಿರಲಿಲ್ಲ. ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಕ್ಕೇನಾದರೂ ಸ್ಥಾನವಿದ್ದರೆ, ವಿದ್ಯಾರ್ಥಿಗಳ ಅಭ್ಯಾಸ-ಪರೀಕ್ಷೆಗಳ ಮಟ್ಟಿಗೆ. ಕರ್ನಾಟಕದಿಂದ ಮುಂಬೈ ವಿಶ್ವವಿದ್ಯಾನಿಲಯಕ್ಕೆ ಪ್ರತಿವರುಷ ಸಾಕಷ್ಟು ಹಣದ ಹೊನಲು ಹರಿದು ಹೋಗುತ್ತಿದ್ದರೂ, ಕರ್ನಾಟಕ ಸಾಹಿತ್ಯ-ಸಂಸ್ಕೃತಿಗಳ ಅಭಿವೃದ್ಧಿಗಾಗಿ ಯಾವರೀತಿಯ ಕೆಲಸವನ್ನೂ ಅದು ಮಾಡಲಿಲ್ಲ. ಅಲ್ಲದೆ ಬಹುಸಂಖ್ಯಾಕರಾದ ಮಹಾರಾಷ್ಟ್ರಿಯರ ಗುಜರಾತಿಗಳ ಕೈಚಳಕ ಅಲ್ಲಿ ನಡೆಯುತ್ತಿದ್ದುದರಿಂದ, ಪದವಿ-ಪ್ರಶಸ್ತಿಗಳ ವಿಚಾರದಲ್ಲಿ, ಕನ್ನಡ ವಿದ್ಯಾರ್ಥಿಗಳಿಗೆ ಎಷ್ಟು ಬೇಕಷ್ಟು ಲಾಭ ದೊರೆಯುತ್ತಿರಲಿಲ್ಲ.

ಸರಿ. ತೊಡರಿನಿಂದ ಕಡೆಗೆ ಬಂದೆವು. ಇನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಎಲ್ಲ ಆಗು-ಹೋಗುಗಳಿಗೂ ಕನ್ನಡಿಗರೆ ಹೊಣೆಗಾರರು. ವಿ. ವಿ. ನಿಲಯದ ಆಡಳಿತಸಮಿತಿ ಸಂಪೂರ್ಣ ಕನ್ನಡಿಗರದು. ಉಪಕುಲಪತಿ ಕನ್ನಡಿಗ. ಅಧಿಕಾರಿ ವರ್ಗದಲ್ಲಿ ಕನ್ನಡಿಗರು. ಪರೀಕ್ಷಕ ಸಮಿತಿಯಲ್ಲಿ ಕನ್ನಡಿಗರು. ಇವರೆಲ್ಲ ನಾಡಿನ ಅಭಿಮಾನದಿಂದ, ಕರ್ತವ್ಯದ ಕಡೆಗೆ ಲಕ್ಷ್ಯವಿಟ್ಟು, ಯಾವ ಬಗೆಯ ಪಕ್ಷಪಾತಧೋರಣ-ಸ್ವಾರ್ಥಸಾಧಕ ಬುದ್ಧಿಗಳಿಗೊಳಗಾಗದೆ ಕಾರ್ಯಮಾಡ ತೊಡಗಿದರೆ, ಕನ್ನಡ ವಿದ್ಯಾರ್ಥಿಗಳಿಗೆ ನಿಜವಾದ ಕಲ್ಯಾಣವಾದೀತು. ಆದರಿಂದ ಖಂಡಿತ ಕರ್ನಾಟಕದ ಅಭ್ಯುದಯವಾದೀತು. ನಮ್ಮ ವಿ. ವಿ. ನಿಲಯದ ಕೀರ್ತಿ ಭಾರತದಲ್ಲಿ ಮೊಳಗೀತು.

ಈಗ, ಪದ್ಧತಿಯಂತೆ ಮೊದಲನೆಯ ಉಪಕುಲಪತಿಗಳನ್ನಾಗಿ ನ್ಯಾಯಮೂರ್ತಿ ಜಾಗಿರದಾರ ರಂಗಾಚಾರ್ಯರನ್ನು ಮುಂಬಯಿ ಸರಕಾರವು ಆಯ್ದು ನಿಯಮಿಸಿದೆ. ಹಲವು ಕಾಲ ಮುಂಬಯಿ ವಿ. ವಿ. ನಿಲಯದ ಆಡಳಿತ ಸಮಿತಿಯಲ್ಲಿ ಸದಸ್ಯರಾಗಿದ್ದ ಅವರಿಗೆ, ಈ ಹೊಸ ವಿದ್ಯಾನಿಲಯವನ್ನು ಹೇಗೆ ಹೇಗೆ ಪ್ರಾರಂಭಿಸಿ ನಡೆಯಿಸಿಕೊಂಡು ಹೋಗಬೇಕೆಂಬ ಅನುಭವ ಚೆನ್ನಾಗಿದೆ. ಕರ್ನಾಟಕದ ಉಜ್ವಲ ಅಭಿಮಾನಿಗಳವರು. ಸುಸಂಸ್ಕೃತ ಮನೆತನದಲ್ಲಿ ಹುಟ್ಟಿ ಬಳೆದವರು. ಕಲಾಭ್ಯಾಸದಲ್ಲಿ ಎಂ. ಎ. ಪದವಿ ಪಡೆದೆವರಲ್ಲದೆ ಕಾಯಿದೆ ಪಂಡಿತರು. ತಮ್ಮ ಕಾಯಿದೆಯ ಪ್ರಾವೀಣ್ಯದ ಬಲದಿಂದ ನ್ಯಾಯಮೂರ್ತಿಯ ಗದ್ದುಗೆಗೆ ಏರಿದವರು. ರಾಷ್ಟ್ರೀಯ ವೃತ್ತಿಯವರು. ಉದಾರ ಹೃದಯರು. ಇಷ್ಟೊಂದು ಗುಣ-ಸಂಪನ್ನರಾದ ಉಪಕುಲಪತಿ ಮೊದಲನೆಯವರಾಗಿ ದೊರೆತುದು, ಕ. ವಿ. ವಿದ್ಯಾನಿಲಯದ ಉಜ್ವಲ ಭವಿಷ್ಯಕ್ಕೆ ಪೂರ್ವಸೂಚನೆಯಾಗಿದೆ.

ಬೇಗನೆ ಆಡಳಿತ ಸಮಿತಿಯನ್ನೂ ರಿಜಿಸ್ಟ್ರಾರರನ್ನೂ ಮುಂಬೈ ಸರಕಾರ ಆರಿಸಿ ನಿಯಮಿಸಲಿದೆ. ವಿಶ್ವವಿದ್ಯಾನಿಲಯದ ಯಶಸ್ಸಿನ ಹೊಣೆ ಇನ್ನು ಮೇಲೆ ಸರಕಾರದ ತಲೆಯ ಮೇಲಿರುವುದಕ್ಕಿಂತ ಹೆಚ್ಚಾಗಿ ಸಾರ್ವಜನಿಕರ ತಲೆಯ ಮೇಲಿದೆಯೆಂಬುದನ್ನು ಕನ್ನಡ ಜನತೆ ಮರೆಯಲಾಗದು. ಎಲ್ಲ ಬಗೆಯ ಸಹಾಯ-ಸಹಕಾರಗಳನ್ನೂ ಒದಗಿಸಿಕೊಡಲು ನಾವೆಲ್ಲ ಸಿದ್ಧರಾಗಬೇಕು.

ಪ್ರಶ್ನೆಗೆ ಉತ್ತರ

★

೩

ಶ್ರೀ. ಬಿಂ. ಶ್ರೀ. ನಾರಾಯಣಪ್ರಸಾದ, ಬೆಂಗಳೂರು

೧. ಸಾಹಿತ್ಯವು ಸಾಹಿತಿಯ ಜೀವನಕ್ಕೆ ದಾರಿಯನ್ನು ಮಾಡಿಕೊಡಬಲ್ಲುದೆ?

ಉತ್ತರ: ಈ ಮಾತನ್ನು ಮೊದಲೇ ನಿರ್ಣಯಿಸಿಕೊಂಡು ಯಾರೂ ಸಾಹಿತಿಯಾಗುವುದಿಲ್ಲ. ಹೃದಯ-ಲೋಕಾನುಭವಗಳ ಸಂಘರ್ಷಣೆಯಿಂದ ಸಾಹಿತ್ಯದ ಮಿಂಚು ಸಹಜವಾಗಿ ಪ್ರಕಟವಾಗುವುದು. ಕೆಲವರು ಅದನ್ನು ಪ್ರತಿಭೆಯ ಮೂಲಕ ಶಬ್ದಗಳಲ್ಲಿ ಬರೆಹಿಡಿಯುವರು. ಅವರೇ ಸಾಹಿತಿಗಳೆನಿಸಿಕೊಳ್ಳುವರು.

೨. ಸಾಹಿತಿಯಾಗಲು ಇಚ್ಛಿಸುವವರು, ಸಾಹಿತ್ಯದಲ್ಲಿ ಹೇಗೆ ಮುಂದುವರಿಯಬೇಕು?

ಉತ್ತರ: ನಿಸರ್ಗವು ಕೊಟ್ಟ ಕಣ್ಣು, ಕಿವಿ, ಬಾಯಿ, ಮನಸ್ಸು, ಹೃದಯ, ಬುದ್ಧಿಗಳ ಶಕ್ತಿಯನ್ನು ಸಂಪೂರ್ಣವಾಗಿ ಬೆಳೆಯಿಸಿಕೊಂಡು ಉಪಯೋಗಮಾಡುತ್ತ ಹೋಗುವುದರಿಂದ, ಸಾಹಿತ್ಯದಲ್ಲಿ ಮುಂದುವರಿಯಲಿಕ್ಕಾಗುವುದು.

೩. ಕವನಗಳನ್ನು ಬರೆದ ಮಾತ್ರಕ್ಕೆ ಕವಿಸಾಹಿತಿಗಳಾಗುವರೆ?

ಉತ್ತರ: ಕವಿಸಾಹಿತಿಗಳೇಕೆ? ಒಳ್ಳೆಯ ಕವನಗಳನ್ನು ಬರೆದರೆ ಕವಿಸಾಹಿತಿಗಳೇ ಆಗಬಹುದು. ಹಿಂದಿನ ಕಾಲದ ಜನರ ತಿಳಿವಳಿಕೆಯಂತೆ ಕವನವೆಂದರೆಯೇ ಸಾಹಿತ್ಯ— ಎಂಬುದನ್ನು ಮರೆತಿರುವಿರಾ?

೪. ಸಾಹಿತ್ಯದಲ್ಲಿ ಭಾವಸೃಷ್ಟಿಯ ಕ್ರಮವೇನು? ಅದರ ಉದ್ದೇಶವೇನು?

ಉತ್ತರ: ನೀವು ಕೇಳಿದ ಪ್ರಶ್ನೆಯ ಅರ್ಥವೇನು?

೪

ಶ್ರೀ. ಉಪೇಂದ್ರ ನಾಯಕ, ಕಾರವಾರ

೧. ಒಬ್ಬ ಸಾಹಿತಿ ಎನ್ನುವ ಕತೆ ಬರೆದಾಗ ಆತನನ್ನು ಕತೆಗಾರನೆಂದು ಕರೆಯಲಾದೀತು? ಇಡೀ ಜೀವಮಾನದಲ್ಲಿ ಒಂದೆ ಒಂದು ಅತ್ಯುತ್ತಮ ಕತೆ ಬರೆದವನು ಕತೆಗಾರನಲ್ಲವೆ?

ಉತ್ತರ: ಕತೆ ಬರೆಯುವವರೆಲ್ಲರೂ ಕತೆಗಾರರೆ— ಒಂದೇ ಬರೆಯಲಿ, ಸಾವಿರಾರು ಬರೆಯಲಿ. ಸಾಮಾನ್ಯವಾದ ಸಾವಿರಾರು ಕತೆಗಳನ್ನು ಬರೆಯುವವನು, ವರ್ತಮಾನದ ಮಟ್ಟಿಗೆ ಕತೆಗಾರ. ಶ್ರೇಷ್ಠೋತ್ತಮವಾದ ಒಂದೆ ಒಂದು ಕತೆಯನ್ನು ಬರೆದವನು ಶಾಶ್ವತ ಕಾಲದ ಕತೆಗಾರ.

೨. ಒಂದು ಕಾವ್ಯ ಮಹೋನ್ನತಿಗೆತ್ತ ಕಾವ್ಯವಾಗಲು ಅವಶ್ಯವಾಗಿ ಬೇಕಾದ ಗುಣಗಳು ಯಾವುವು?

ಉತ್ತರ: ಕೂಡಲೆ ನಿಮ್ಮ ಕಾವ್ಯ 'ಮಹೋನ್ನತಿಗೆತ್ತುದೆಂ'ದು ಹೆಸರನ್ನು ಪಡೆಯಬೇಕಾಗಿದ್ದರೆ, ನಿಮ್ಮ ಸ್ನೇಹಿತರ ಬಳಗ ಹೆಚ್ಚಿಸಿಕೊಳ್ಳಿರಿ. ಪತ್ರಿಕಾಸಂಪಾದಕರ ಮನಸ್ಸನ್ನು ಪ್ರಸನ್ನ ಮಾಡಿಕೊಳ್ಳಿರಿ. ಯಾವಾಗಲೂ ಎಲ್ಲ ಸಹೃದಯರಿಂದ 'ಮಹೋನ್ನತಿಗೆತ್ತುದು' ಎಂದು ಹೇಳಿಸಿಕೊಳ್ಳಬೇಕಾಗಿದ್ದರೆ, ಆ ಕಾವ್ಯದಲ್ಲಿ ಆದರ್ಶನಿಷ್ಠೆ, ಸತ್ಯಾನುಭವಚಿತ್ರ, ಕಲ್ಪನಾಸೌಂದರ್ಯ, ಭಾವನೆಯ ಔಚಿತ್ಯ, ಪ್ರಸಾದಗುಣದ ಭಾಷೆ— ಇವೆಲ್ಲ ಇರಬೇಕಾಗುವುದು.

೩. ಸಾಹಿತಿ ತನ್ನ ದಿನದ ವರ್ತನೆಗಳಲ್ಲಿ ಆಚರಣೆಗೆ ತರದ ತತ್ತ್ವಗಳನ್ನು ಬರೆಹಗಳಲ್ಲಿ ಬಿಂಬಿಸಿವಾಗ, ಆ ಕೃತಿ ಸತ್ತ್ವವೆತ್ತ ಸಾಹಿತ್ಯವಾದೀತೇನು? ಅಥವಾ ತನಗೆ ಅಸಾಧ್ಯವಾದ ನಿಯಮಗಳನ್ನು ಹೇಳುತ್ತ ಹೋಗುವುದೇ ಸಾಹಿತ್ಯದ ಕೆಲಸವೆ?

ಉತ್ತರ: ಗುಲಾಬಿಯ ಗಿಡಕ್ಕೆ ಮುಳ್ಳುಗಳಿರುವುವಾದರೂ ಅದು ಲೋಕಕ್ಕೆ ಸುಂದರ-ಸುರಭಿಯುಕ್ತವಾದ ಹೂಗಳನ್ನು ಬೆಡುತ್ತಿರುವುದು. ಅದರಂತೆಯೆ ಉತ್ತಮ ಸಾಹಿತ್ಯಿಕನ ಚಾರಿತ್ರ್ಯ ಅತಾತ್ತ್ವಿಕವಾಗಿ ತೋರಿದರೂ, ಅವನಿಂದ ತತ್ತ್ವ-ಸತ್ತ್ವಯುಕ್ತವಾದ ಸಾಹಿತ್ಯನಿರ್ಮಾಣವಾಗುವುದು. ಗುಲಾಬಿಯ ಸೌಂದರ್ಯವನ್ನು ಆದರ ಹೂವಿನ ಮೂಲಕ ಮಾತ್ರ ನಾವು ಸ್ವೀಕರಿಸುವಂತೆ, ಸಾಹಿತ್ಯಿಕನ ಸೌಂದರ್ಯವನ್ನು ಆತನ ಕೃತಿಯ ಮೂಲಕ ಸ್ವೀಕರಿಸಬೇಕು.

ಸಾಹಿತ್ಯಿಕ ತನಗೆ ಅಸಾಧ್ಯವಾದ ನಿಯಮಗಳನ್ನು ಹೇಳುವುದಿಲ್ಲವಾದರೂ, ಅವನು ಬದುಕಿ ಬಾಳುತ್ತಿರುವ ರಾಜಕೀಯ— ಸಾಮಾಜಿಕ ಪರಿಸ್ಥಿತಿಗಳು, ಬಹಳ ಸಲ ಅವನನ್ನು ಹೇಸುತ್ತಿರುವ ನಿಯಮಗಳಂತೆ ನಡೆಯಗೊಡುತ್ತಿರುವುದಿಲ್ಲ. ಸಾಹಿತ್ಯಿಕರಲ್ಲಿ ಬಹುಸಂಖ್ಯಾಕರು ಸಾಮಾನ್ಯಸಂಸಾರಿಕರು. ತಮ್ಮಿಂದ ಸಾಧ್ಯವಾಗದ ತಾತ್ತ್ವಿಕನಿಯಮಗಳನ್ನು ತಮ್ಮ ಸಾಹಿತ್ಯಿಕಪಾತ್ರಗಳಿಂದ ಪಾಲಿಸಹೆಚ್ಚಿ, ಅವರು ಆದರ್ಶಪುರುಷರಾದುದನ್ನು ಕಲೆಯಿಂದ ಕಾಣಿಸಿಕೊಟ್ಟು, ಸಾಹಿತ್ಯಿಕರು ಸಮಾಧಾನಪಟ್ಟುಕೊಳ್ಳುತ್ತಾರೆ.

ಅಚ್ಚಿನಲ್ಲಿದೆ ! ಅಚ್ಚಿನಲ್ಲಿದೆ !!

ಶ್ರೀಮಾನ್ ಪುರಾಣಿಕ ಕೃಷ್ಣಮೂರ್ತಿ ಅವರು

ಸರಳರಗಳೆಯ ಸುಂದರ ಶೈಲಿಯಲ್ಲಿ

ಕಲಾಪೂರ್ಣವಾಗಿ ಬರೆದ

ದೊರೆಸಾನಿ

(ನಾಟಕ)

ಬೇಗನೇ ಹೊರಬೀಳುವದು. ಪ್ರಕಟನೆಯ ದಿನವನ್ನು ನಿರೀಕ್ಷಿಸಿರಿ.



ಇವುಗಳಲ್ಲದೆ ಕರ್ನಾಟಕದ ತುಂಬೆಲ್ಲ ಹೆಸರ
ಗಳಿಸಿದ ಉಮರಜಿ ಮತ್ತು ಸೋನುಬಾಯಿ
ಇವರ **ಕಲಾಪಥಕದವರು** ಹಾಡಿದ '**ಅಕ್ಕ
ಮಹಾದೇವಿ**' ನಾಟಕದಲ್ಲಿಯ ಈಗಾಗಲೆ
ಜನಪ್ರಿಯವಾದ ಧ್ವನಿಮುದ್ರಿಕೆಗಳು (GE
8342 ರಿಂದ 8344 ರ ವರೆಗೆ ಇಂದೆ
ಕೋಲಂಬಿಯಾದ ಮೇಲೆ ಕೇಳಿರಿ.

ಕುಮಾರಿ ಸೀತಾ ಮುಲ್ಕಿ

GE 8339 { ಕ್ಷಣದಾ ಪ್ರಣಯಭಾವನಾ
ಮಧುಮಾಸದಾ ಸುಖನಾದಾ

ಶ್ರೀಮತಿ ಸುಶೀಲಾ ಟೇಂಬೆ

GE 8092 { ನೋಡೇ ಮಧುವಸಂತವಿದು ಹಾ
ನಲಿದು ಬಾರ ಮುರಲಿ

ಶ್ರೀಯುತ ಭಾಗವತ

GE 8202 { ವಸಂತಮುಖ
ಯಾರಿಗೂ ಹೇಳೋಣು ಬ್ಯಾಡಾ

GE 8093 { ಕನ್ನಡದ ಬಾವುಟ
ರಕ್ಷಿಸು ಕರ್ನಾಟಕ ದೇವೀ !

ಬೇಗನೆ **ಬಸವೇಶ್ವರ, ಮಲ್ಲಮ್ಮ, ಶರಣ ಬಸವ** ಮುಂತಾದ ನಾಟಕ
ಗಳ ಧ್ವನಿಮುದ್ರಿಕೆಗಳು ಹೊರಬೀಳಲಿವೆ. ಇದಾದ ಮೇಲೆ ಕೆಲದಿನಗಳಲ್ಲಿಯೆ
ಕಿತ್ತೂರ ಚನ್ನಮ್ಮ, ಪುರಂದರ ದಾಸ, ಕಬೀರದಾಸ ಈ ನಾಟಕಗಳ ಧ್ವನಿ
ಮುದ್ರಿಕೆಗಳನ್ನೂ ಒದಗಿಸುವ ಏರ್ಪಾಡು ಮಾಡಲಾಗಿದೆ.

ಇವರ ಬಗ್ಗೆ ಬೇಕಾದ ವಿವರಗಳು ನಿಮ್ಮ ಊರಿನ ಗ್ರಾಮೋಫೋನ್
ಅಂಗಡಿಯಲ್ಲಿ ದೊರೆಯುವುವು.

ಕೋಲಂಬಿಯಾ ಗ್ರಾಫೋಫೋನ ಕಂ.ಲಿ

ಕಲಕತ್ತಾ • ಮುಂಬಯಿ • ಮದ್ರಾಸ • ದಿಲ್ಲಿ • ಲಾಹೋರ

ISSUED BY:—
COLUMBIA GRAPHOPHONE Co. Ltd: CALCUTTA, BOMBAY, MADRAS, DELHI, LAHORE

ದೇಶದ ಸ್ವಾತಂತ್ರ್ಯವನ್ನು ಉಳಿಸಬೇಕಿದ್ದರೆ ಮೊದಲು ಆರ್ಥಿಕ ಸ್ವಾತಂತ್ರ್ಯವನ್ನು
ಗಳಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಲ್ಲವೆ ?

ಅದಕ್ಕಾಗಿ

★ ತಮ್ಮ ಆದಾಯವನ್ನು ಬೆಳೆಯಿಸಿಕೊಳ್ಳುವವರೂ

★ ತಮ್ಮ ಹಣವನ್ನು ಸರಿಯಾದ ರೀತಿಯಲ್ಲಿ ತೊಡಗಿಸಬೇಕೆನ್ನುವವರೂ

★ ತಾರುಣ್ಯದಲ್ಲಿರುವಾಗಲೇ, ತಮ್ಮ ವೃದ್ಧಾಪ್ಯಕಾಲವು ನಿಶ್ಚಿಂತೆಯಿಂದ
ಕಳೆಯಲು ಕೂಡಿಡಬೇಕೆನ್ನುವವರೂ

ಶ್ರೀ. ಶೇಟ್ ಬಿ. ಎಮ್. ಬಿರ್ಲಾ

ಇವರ ನೇತೃತ್ವದಲ್ಲಿ ನಡೆದ

ರುಬಿ ಜನರಲ್ ಏಮಾ ಕಂಪನಿ ಲಿಮಿಟೆಡ್

೧೫೯೨, ಮಾರುತಿಗಲ್ಲಿ, ಬೆಳಗಾಂವಿ

ಇವರಿಂದ ವಿವರಗಳನ್ನು ತಿಳಿದುಕೊಳ್ಳಬೇಕು.

ವಿ. ಸೂ. — ಕಮೀಶನ್ ಇಲ್ಲವೆ ಸಂಬಳದ ಮೇಲೆ ಬೇರೆ ಬೇರೆ ಊರುಗಳಲ್ಲಿ ಸ್ತ್ರೀ ಹಾಗು ಪುರುಷ ಪ್ರತಿನಿಧಿಗಳನ್ನು ನಿಯಮಿಸ
ಬೇಕಾಗಿದೆ. ಕೆಲಸ ಮಾಡಬಯಸುವವರು ಕಾಣಬೇಕು.

ಹೀಗೆ ಮಾಡಬಹುದೆ?

(ಕಣ್ಣಳತೆ)*

ಶ್ರೀ. ಜಿ. ಟಿ. ನಾರಾಯಣರಾವ್, ಎಂ.ಎ., ಮಡಿಕೇರಿ

★

"ಕಣ್ಣು, ನಾಲಗೆ, ಮನ ಇವು ತನ್ನವೆಂದೆನಬೇಡ! ಅನ್ಯರು ಕೊಂದರೆನಬೇಡ! ಇವು ಮೂರೆ ತನ್ನ ಕೊಲ್ಲುವುವು" ಎಂದು ನಮ್ಮ ನಾಡನೆಲೆಗಾರ ಸರ್ವಜ್ಞ ಸಾರಿ ಹೇಳಿದ್ದಾನೆ. ಬೆಳ್ಳನಂತಹ ಮನಸ್ಸಿನವರೇ ಹೆಚ್ಚಾಗಿರುವ ನಮ್ಮ ಹಳ್ಳಿಗರು ಸರ್ವಜ್ಞನ ಮಾತನ್ನು ಮನದೆದುರು ಇರಿಸಿಕೊಂಡರೆ!

★

ಗಿರಿಶಿಖರದ ನೆರಳಿನಲ್ಲಿ, ಮರಗಳ ಮರೆಯಲ್ಲಿ ಹೊಂಬಣ್ಣದ ಸೂರ್ಯನು ಅಡಗುತ್ತಿದ್ದಾನೆ. ಚಳಗಾಳಿಯು ಆಗಲೇ ಬೀಸಲು ಪ್ರಾರಂಭವಾಗಿದೆ. ಒಂದು ಸಲ ಪ್ರವಾಹದಂತೆ ಅದು ಬೀಸಿ ಮತ್ತೆ ಸ್ವಲ್ಪ ಹೊತ್ತು ಶಾಂತವಾಗುವುದು. ಆಗ ಚಿನ್ನದ ಹೊದಿಕೆಯನ್ನು ತೆರೆತೆರೆಯಾಗಿ ಹಾಸಿದಂತೆ ಇರುವ ಇಡೀ ಗದ್ದೆಗಳು ತಲೆದೂಗಿ, ಬತ್ತದ ಪರಿಮಳವನ್ನು ಗಾಳಿಗೆ ಬೆರಸಿ ಶಾಂತವಾಗುವುವು. ಎಲ್ಲಿ ನೋಡಿದರೂ ಗದ್ದೆಗಳು, ಅತಿ ದೂರದಲ್ಲಿ ಬೆಟ್ಟದ ಸಾಲುಗಳು. ಅವು ಸಂಜೆಯ ಸೂರ್ಯನ ರಶ್ಮಿಯಲ್ಲಿ ಧೂಳಿನ ಪರೆಯಿಂದ ಮುಚ್ಚಿದಂತೆ ತೋರುವುವು. ಈ ಗದ್ದೆಗಳು ಮೆಟ್ಟಲು-ಮೆಟ್ಟಲಾಗಿ, ಒಂದು ಕಡೆ ನೋಡಿದರೆ ಏರುತ್ತಾ, ಇನ್ನೊಂದು ಕಡೆ ನೋಡಿದರೆ ಇಳಿಯುತ್ತಾ ಸಾಗಿರುವುವು. ಪ್ರತಿ ಗದ್ದೆಯೂ ಬತ್ತದ ಕದಿರುಗಳಿಂದ ತುಂಬಿ ತುಳುಕುತ್ತಿದೆ. ಆದೂ ಹುತ್ತರಿಯು (ಪುದಿಯ ಅರಿವೆತ್ತರಿ, ಹೊಸ ಅಕ್ಕಿ ಬರುವ ಶುಭಸೂಚಕವಾದ ಒಂದು ಹಬ್ಬ) ಕಳೆದಿರುವ ಸಮಯ. ಇನ್ನೇನು ಒಂದು ವಾರ, ಎರಡು ವಾರಗಳಲ್ಲಿ ಎಲ್ಲ ಕೊಯ್ಯಲು ಸಿದ್ಧವಾಗುವುವು. 'ಈ ದಿನ ಈ ಗದ್ದೆ, ನಾಳೆದಿನ ಆ ಗದ್ದೆ' ಎಂದು ಎಲ್ಲ ಗದ್ದೆಗಳೂ ಕೊಯ್ದು ಮುಗಿಯುವುವು. ತೆನೆ ತುಂಬಿ ಬಾಗಿ ನಿಂತಿರುವ ಬತ್ತದ ಪೈರುಗಳನ್ನು ಕೊಯ್ದು, ಹತ್ತಿರ ಹತ್ತಿರ ಸಾಲಾಗಿ ಗದ್ದೆಯಲ್ಲಿ ಹರಡುತ್ತಾರೆ. ಆಗ ದೂರದಿಂದ, ಒಂದು ಮರದ ಮೇಲಿನಿಂದಲೋ ಒಂದು ಗುಡ್ಡದ ತುದಿಯಿಂದಲೋ ಈ ಗದ್ದೆಗಳನ್ನು ನೋಡಬೇಕು. ಹಸಿರು ಪಟ್ಟೆಯ ಮೇಲೆ ಅರಿಸಿನದ ಚಿತ್ರಗಳನ್ನು ಯಾರೋ ನುರಿತ ಚಿತ್ರಕಾರನು ಬಿಡಿಸಿದಂತೆ ಜೆಲುವಾಗಿ ತೋರುವುವು. ಪ್ರಕೃತಿಯು ಪ್ರತಿ ಋತುವಿನಲ್ಲಿಯೂ ನವರೂಪ ಧರಿಸಿ ನಮ್ಮನ್ನು ಆಹ್ಲಾದಪಡಿಸುತ್ತಿರುತ್ತಾಳೆ.

ಆದೂ ಈ ವರ್ಷದ ಬೆಳೆಯೆಂದರೆ ಮೈಗೆ ತಿಂದರೂ ಅಳಿಯದು— ಎಂದು ಹಳ್ಳಿಗರೆಲ್ಲರೂ ಸಂತೋಷದಿಂದ ಹೇಳಿಕೊಳ್ಳುತ್ತಿದ್ದರು. ಮಳೆಯು ಸಮೃದ್ಧಿಯಾಗಿ, ಕಾಲಕಾಲಕ್ಕೆ ಸರಿಯಾಗಿ ಸುರಿಯಿತು. ಬಿಸಿಲು ಬೇಕಾದಾಗ ಸರಿಯಾಗಿ ಕಾಯಿತು. ಭೂಮಿತಾಯಿಯು ಚಿನ್ನವನ್ನೇ ಹಡೆದಳು. ಈ ಕ್ಷಾಮಸಮಯದಲ್ಲಿ ಬತ್ತದ ಪ್ರತಿಯೊಂದು ಕಾಳೂ ಅತ್ಯಮೌಲ್ಯವಾದುದು. ಪ್ರತಿಯೊಬ್ಬ ರೈತನಿಗೂ ಹರ್ಷ—ಯಾರಿಗೆ ತಾನೇ ಆಗದು? ಇಡೀ ವರ್ಷದ ಗೈಮೆಯ ಫಲ ಆಗ ಕಾಣುವುದು. ಅರೆಹೊಟ್ಟೆ ಉಂಡು, ಕಾಯಿಲೆಗಳಿಂದ ಪೀಡಿತನಾಗಿ, ಸಾಲದಲ್ಲಿ ಮುಳುಗಿ, ಅಂತೂ ಉತ್ತು ಬಿತ್ತುವನು. ಮಳೆಗಾಲ ಮುಗಿದು, ಕಾಯಿಲೆಗಳೆಲ್ಲ ಅಳಿದು, ಹೊಟ್ಟೆತುಂಬ— ನಾಲ್ಕು ದಿವಸಗಳಾದರೂ— ತಿನ್ನಲು ಧಾನ್ಯ ದೊರೆಯುವುದು ಎನ್ನುವಾಗ, ರೈತರ ಆನಂದಕ್ಕೆ ಪಾರವೇ ಇಲ್ಲ. ಬಡತನ, ಅರೆಹೊಟ್ಟೆ ಉಣಿಸು–ಇವೇ ಅವರಿಗೆ ವ್ಯಾಧಿಗಳನ್ನು ತರುವ ಮುಖ್ಯ ಮಾರ್ಗಗಳು. ಆದರೆ ಈ ವರ್ಷ ಹಾಗಲ್ಲ—ಆನಂದ, ತೃಪ್ತಿಗಳು ಎಲ್ಲ ಕಡೆಗಳಲ್ಲಿಯೂ ತುಂಬಿದ್ದುವು.

ತಿಮ್ಮಯ್ಯನು ಸಾಯಂಕಾಲ ಗದ್ದೆಯ ಏರಿಯ ಮೇಲೆ ನಡೆದು ಬರುತ್ತಿದ್ದನು. ದನಗಳನ್ನು ಕೊಟ್ಟಿಗೆಗೆ ಕೂಡಿಸಿ ಆಯಿತು. "ಇನ್ನೇನು, ಒಂದು ವಾರ ತಡೆದರೆ ಈ ಗದ್ದೆಗಳನ್ನೆಲ್ಲಾ ಕೊಯ್ಯಬಹುದು. ಈ ವರ್ಷ ದೃಷ್ಟಿಯಾಗುವಂತೆ ಪೈರು ಬಂದಿದೆ. ದೇವರ ದಯದಿಂದ ಇನ್ನು ಒಂದು ತಿಂಗಳು ಅಥವಾ ಕಡಿಮೆ ಎರಡು ವಾರ ಮಳೆ ಬರದಿದ್ದರೆ, ಈ ವರ್ಷದ ಸುಭಿಕ್ಷಕ್ಕೆ ಅಂತವೇ ಇಲ್ಲ. ಕಳೆದ ವರ್ಷ ಗದ್ದೆಗಳಿಗೆ ನೀರಿಲ್ಲದೇ ಹೊತ್ತಿ ಹೋಗಿ ಆದ ನಾಲವನ್ನು ತೀರಿಸಬಹುದು. ಆದರೆ ಕಾಡುಹಂದಿಯ ಕಾಟ ವಿಪರೀತವಾಗಿದೆ ಈಗೀಗ. ಅವುಗಳಿಗೇನು ನಮ್ಮ ಮೇಲೆ ಇಷ್ಟು ಹೊಟ್ಟೆಕಿಚ್ಚು? ಇದುವರೆಗೆ ಆಗದಿದ್ದಷ್ಟು ಹಾನಿ ಅವುಗಳಿಂದ ಈ ವರ್ಷವಾಯಿತು. ರಾತ್ರಿ ಇಡೀ ಗದ್ದೆಯಲ್ಲಿ ಬೆಂಕೆ ಹಾಕಿಕೊಂಡು ಬೊಬ್ಬೆ ಹೊಡೆಯುತ್ತಿರಬೇಕು. ಈ ನಾಯಿಯೋ, ಹೆಣಪಾರ ಕಾಯಲಿಕ್ಕೂ ಕೂಡ ಹರಿಯದು. ಒಂದು ಕೋವಿ ತೆಗೆದುಕೊಡಿ ಎಂದು ಸ್ವಾಮಿಯನರಿಗೆ ಎಷ್ಟು ಸಲ ಹೇಳಿದೆ. 'ಆಗಲಿ, ಆಗಲಿ' ಎಂದೇ ಅವರು ಸತಾಯಿಸುತ್ತಿದ್ದಾರೆ. ಇಲ್ಲಿ ಹಂದಿ ಕೋವಿ ಬರುವವರೆಗೆ ಕಾಯುತ್ತದೋ? ಆಗಲೇ ಆ ಕರೆಯಲ್ಲಿ ಮೂರು ಬಟ್ಟೆ ಬತ್ತವನ್ನು ತಿಂದು ಹಾಳುಮಾಡಿತು. ಮೂರು ಬಟ್ಟೆ ಎಂದರೆ ಈಗ ಕಡಿಮೆ ಮೂವತ್ತು ರೂಪಾಯಿ ನಷ್ಟವಾಯಿತು. ಅವರಿಗೇನು! ಒಂದದ್ದರಲ್ಲಿ ಸಮ ಅರ್ಧ ತೆಗೆದು ಕೊಂಡು ಹೋಗುತ್ತಾರೆ. ನಮ್ಮ ಕಷ್ಟ ತಿಳಿಯುತ್ತದೋ? ಆ ಬೋನಿನ ಪುನೆಯವನು, ಮೊನ್ನೆ ಒಂದು ಹಂದಿಗೆ ಗುಂಡು ಹೊಡೆದು ಓಡಿಸಿದ. ಈ ಪಾಣೂತಿ ತಿವಣ್ಣನು ಒಂದನ್ನು ಹೊಡೆದು ತಿಂದೇ ಬಿಟ್ಟನು.

* ಜಯಂತಿಯು ಸಣ್ಣಕತೆಗಳ ಪೈಪೋಟಿಗೆ ಬಂದ ಒಳ್ಳೆಯ ಕತೆ. ಕೊಂಡಿದು. —ಸಂ.

ಸುತ್ತಲೂ ಪೆಟ್ಟು ಬೀಳುವ ಹಂದಿ ನನ್ನ ಗದ್ದಿಗೇ ಬಂದು ಬೀಳುತ್ತದೆ. ನಾನು ಮಾತ್ರ ಬಾಯಿ ಹೊಡೆದೇ ಸಾಯಬೇಕು." ಎಂದು ಯೋಚಿಸುತ್ತ ತಿಮ್ಮಯ್ಯನು ಗದ್ದೆಯ ಏರಿಗಳ ಮೇಲೆ ತಿರುಗುತ್ತಿದ್ದನು.

' ರೈತರು ಬೆಳೆಯ ಸಮಯದಲ್ಲಿ ಮಾತ್ರ ದುಡಿದು, ಬೇಸಿಗೆಯ ಸಮಯವನ್ನು ಅನಾವಶ್ಯಕವಾಗಿ ಹಾಳುಮಾಡುತ್ತಾರೆ ' ಎಂದು ಮುಂತಾಗಿ ಗ್ರಾಮೋದ್ಧಾರಕರು ಹೇಳುತ್ತಾರೆ. ಆದರೆ ಮಳೆ ಹಿಡಿಯುವಾಗಿನಿಂದ ಬೆಳೆಯನ್ನು ಪತ್ತಾಯದೊಳಗೆ ತುಂಬುವುದರ ವರೆಗೆ ಅವರು ಎಷ್ಟು ಕೆಲಸ ಮಾಡುತ್ತಾರೆ ಎಂದು ಇವರು ಲಕ್ಷಿಸುವುದಿಲ್ಲ. ನಮಗೆ ಆರು ದಿವಸ, ಅದೂ ನಿಶ್ಚಿತ ಸಮಯದಲ್ಲಿ ಮಾತ್ರ ಕೆಲಸ ಮಾಡಿದರೆ ಏಳನೆಯ ದಿವಸ ರಜೆಬೇಕು, ಮತ್ತೆ ವರ್ಷಕ್ಕೊಂದಾವರ್ತಿ ಹಕ್ಕಿನ ರಜೆ ಬೇಕೆಂದು ಗಲಭೆ ಎಬ್ಬಿಸುತ್ತೇವೆ. ರೈತರಿಗೆ ವಿಶ್ರಾಂತಿ ಬೇಡವೇ ? ಬೆಳೆಯ ಕೆಲಸದ ಸಮಯದಲ್ಲಿ ಹಗಲೂ ರಾತ್ರಿಯೂ ಗದ್ದೆಗಳನ್ನು ಕಾಯುತ್ತಿರಬೇಕು. ಕಾಡು ಹಂದಿಗಳಿಂದ, ನಾಡು ಸಾಕಿದ) ಹಂದಿಗಳಿಂದ, ದನಗಳಿಂದ, ಕಪಿಗಳಿಂದ, ಪೈರನ್ನು ರಕ್ಷಿಸಬೇಕು. ಕಾಡುಹಂದಿಗಳು ರಾತ್ರಿ ಬರುವುವು. ಕಪಿ, ನಾಡುಹಂದಿಗಳು ಹಗಲು ಬರುವುವು. ದನ, ಕರುಗಳು ಸರ್ವಸಮಯದಲ್ಲಿಯೂ. ಮತ್ತೆ ಇಲಿ, ಹೆಗ್ಗಣ, ಹಕ್ಕಿಗಳಿಂದ ಆಗುವ ನಷ್ಟವೆಷ್ಟೋ! ಇಷ್ಟೆಲ್ಲ ಆದ ಮೇಲೆ, ಕೊಯ್ಯುವಾಗ ಅಥವಾ ಕೊಯ್ದು ಗದ್ದೆಯಲ್ಲೇ ಹಾಸಿರುವಾಗ ಮಳೆ ಸುರಿದರೆ ಅರ್ಧಕ್ಕರ್ಧ ನಷ್ಟ. ಈ ಎಲ್ಲ ಕಠಿಣ ಸೋಪಾನಗಳನ್ನು ಉತ್ತರಿಸಬೇಕು— ಅದೂ ಕಡು ಬಡತನದಲ್ಲಿ, ಅನಾರೋಗ್ಯದಲ್ಲಿ. ಈ ಮಹಾ ಪರೀಕ್ಷೆಯಾದನಂತರ ಒಂದೆರಡು ತಿಂಗಳು ಸ್ವಲ್ಪ ವಿರಾಮವಾಗಿರುವುದು ತಪ್ಪೇ?

ತಿಮ್ಮಯ್ಯನು ಹಾಗೆಯೇ ಮುಂದೆ ಮುಂದೆ ನಡೆದನು. ಬಿಸಿಲು, ಗದ್ದೆಗಳಿಂದ ಮೇಲೆ ಏರುತ್ತಾ ಇತ್ತು. ಅಲ್ಲಿ ದೂರದಲ್ಲಿ ಒಂದು ಗದ್ದೆಯಲ್ಲಿ ಕಪ್ಪಾಗಿ ಏನೋ ನಿಂತಿದ್ದುದನ್ನು ತಿಮ್ಮಯ್ಯನು ನೋಡಿದನು. ದನವೋ, ಕರುವೋ ಏನೋ ಬಂದಿದೆಯೆಂದು ಯೋಚಿಸಿಕೊಂಡು, "ಇದರ ಸಾವು ಮಣ್ಣು ತಿಂದ್ಹೋಗ! " ಎಂದು ಬೊಬ್ಬೆ ಹೊಡೆಯುತ್ತ ಆ ಕಡೆಗೆ ಓಡಿದನು. ಅಲ್ಲಿ ಎರಡು ಸಾಕಿದ ಹಂದಿಗಳು ಮನಸೋ ಇಚ್ಛೆ ಬತ್ತದ ತೆನೆಗಳನ್ನು ಮೇಯುತ್ತಿದ್ದುವು. ಇವು ತಿನ್ನುವುದು ಒಂದು ಪಾಲಾದರೆ ನೆಟ್ಟ ಹಾಳುಮಾಡುವುದು ಮೂರು ಪಾಲು. ಹಂದಿಗಳು ತಿಮ್ಮಯ್ಯನನ್ನು ನೋಡಿದೊಡನೆಯೇ ಹುಚ್ಚುಹುಚ್ಚಾಗಿ ಓಡಿಹೋದುವು. ಆ ಹಂದಿಗಳು ಬೇಕನ ಮನಿ ಸಿಂಗಪ್ಪನವು ಎಂದು ತಿಮ್ಮಯ್ಯನಿಗೆ ತಿಳಿದಿತ್ತು. ಹಿಂದಿನ ದಿನವೂ ಬಂದಿದ್ದುವು. ಆಗ ಅವುಗಳನ್ನು ಓಡಿಸಿ, ಸಿಂಗಪ್ಪನಲ್ಲಿಗೆ ಹೋಗಿ ದೂರು ಹೇಳಿದ್ದನು. ಆದರೆ ಸಿಂಗಪ್ಪನು ಸ್ವಲ್ಪ ಠೇಂಕಾರಿ. " ಬಂದರೆ ಬಂತು. ಅವನ್ನೇನು ಯಾವಾಗಲೂ ಪಾರಾ ಕಾಯುವುದೇ ನಮ್ಮ ಕೆಲಸವೋ? " ಎಂದಿದ್ದನು ಗದುಸು ದನಿಯಲ್ಲಿ.

" ಹಾಗೆ ಹೇಳಿದರೆ ಆಗುವುದೇ? ಸ್ವಲ್ಪ ಗೂಡೊಳಗೆ ಕಟ್ಟಿ ಹಾಕಿ ! "

ಸಿಂಗಪ್ಪನು ಮುಖ ತಿರುಗಿಸಿಕೊಂಡು ತೋಟದ ಕಡೆಗೆ ಹೋದನು.

ಮರುದಿನವೂ ಅವೇ ಹಂದಿಗಳು ಬಂದು ಮೇಯುತ್ತಿದ್ದರೆ ಯಾರಿಗೆ ತಾನೇ ಕೋಪೋದ್ರೇಕವಾಗುವುದಿಲ್ಲ? ತಿಮ್ಮಯ್ಯನು " ಇವನ ಮನೆ ಹಾಳಾಗ. ಮರ್ಯಾದೆಲಿ ಹೇಳಿದರೆ ಇವನಿಗೆ ತಿಳಿಯೋದಿಲ್ಲ " ಎಂದು ಶಪಿಸುತ್ತ ಸಿಂಗಪ್ಪನಲ್ಲಿಗೆ ಹೋದನು.

" ನಿಮ್ಮ ಹಂದಿಗಳು ಇವತ್ತೂ ಕೂಡ ಬಂದಿದ್ದುವು; ಲೂಟಿಯೇ ಲೂಟಿ."

" ಒಳ್ಳೆಯದಾಯ್ತು, ಹಿಡಿದು ದೊಡ್ಡಿಗೆ ಹಾಕಬಹುದಲ್ಲ! " ಎಂದನು ಸಿಂಗಪ್ಪ.

"ನೀವು ಹಾಗೆಲ್ಲ ಕಾನೂನು ಮಾತಾಡಿದರೆ ನಡೀಲಿಕ್ಕಿಲ್ಲ. ಹಂದಿಗಳನ್ನು ಕಟ್ಟಿಹಾಕಿ ಕುತ್ತಿಗೆಗೆ ಬಡಿಗೆ ಕಟ್ಟಿ" (ತ್ರಿಕೋಣಾಕಾರವಾಗಿ ಕೋಲುಗಳನ್ನು ಹಂದಿಯ ಕೊರಳಿಗೆ ಕಟ್ಟುತ್ತಾರೆ. ಆಗ ಅದಕ್ಕೆ ಬೇಲಿ ಬಾಟೆ ಗದ್ದೆಯೊಳಗೆ ಹೋಗಲು ಆಗುವುದಿಲ್ಲ).

"ನನಗೆ ಹಂದಿಗಳನ್ನು ಸಾಕುವ ವಿಷಯ ನೀನೇನು ಬುದ್ಧಿ ಹೇಳಬೇಕಾಗಿಲ್ಲ. "

"ನೋಡಿ ಹಾಗಾದ್ರೆ. ಇನ್ನೊಂದ್ಸಲ ಬರಲಿ, ಕಾಲ್ಹೊಡೆದು ಮುರೀದೇ ಇದ್ರೆ."

"ಏನದು ನಮ್ಮ ಮನೆಗೆ ಬಂದು ಎಷ್ಟದು ನಿನ್ನ ಜೋರು? ನಡೀ ಹೊರಗೆ!" ಎಂದು ಅಬ್ಬರಿಸಿದನು ಸಿಂಗಪ್ಪನ ಪ್ರಾಯದ ಮಗ ಬೆಳ್ಳಪ್ಪನು.

"ನಿಮಗೆ ನಾನು ಪಾಠ ಕಲಿಸದೇ ಇದ್ರೆ ನೋಡಿ. "

"ಬಹಳ ಕಲಿಸುವವನಂತೆ. ಕೆಲಸ ನೋಡು, ಹೋಗ್ಹೋಗು" ಎಂದರು ತಂದೆ-ಮಕ್ಕಳಿಬ್ಬರೂ ತಾತ್ಸಾರದಿಂದ.

ತಿಮ್ಮಯ್ಯನು ಅಸಮಾನದಿಂದಲೂ ಸಿಟ್ಟಿನಿಂದಲೂ ಹಿಂತಿರುಗಿದನು. " ಇನ್ನೊಂದು ಸಲ ಬಂದರೆ, ಆ ಹಂದಿಗಳ ಹುಟ್ಟಿದ ಹಬ್ಬವನ್ನೇ ಮಾಡಿಬಿಡುತ್ತೇನೆ. ಇವನಿಗೆ ಯಾಲಕ್ಕಿ ಮಾರಿ ಸ್ವಲ್ಪ ಹಣ ಜಮೆಯಾಗಿದೆಯೆಂದು ಇಷ್ಟು ಕೋಡು ! ಮೂರು ವರ್ಷದ ಹಿಂದೆ ಮಳೆಹಿಡಿದಾಗ, ನನ್ನಿಂದ ದಮ್ಮಯ್ಯಹಾಕಿ ಬತ್ತ ಸಾಲ ತೆಗೆದುಕೊಂಡು ಹೋದ ಅಲ್ಪನಿಗೆ ಈಗ ಎಷ್ಟು ಸೊಕ್ಕು, ಅಬ್ಬ! " ಎಂದು ಯೋಚಿಸುತ್ತ ತಿಮ್ಮಯ್ಯನು ಅವಡುಕಚ್ಚಿದನು.

ಸೂರ್ಯನು ಮುಳುಗಿದನು. ಚಳಿಗಾಲದಲ್ಲಿ ಸಮಯ ಬಹಳ ಬೇಗ ಓಡುವುದು. ಬೇಗ ಊಟ ಮಾಡಿ ಗದ್ದೆಗೆ ಗಸ್ತು ತಿರುಗುವ ಕೆಲಸಕ್ಕೆ, ಕಾಡುಹಂದಿಗಳನ್ನು ಅಟ್ಟುವ ಕೆಲಸಕ್ಕೆ ತಿಮ್ಮಯ್ಯನು ಹೋದನು. ಕಾಡುಹಂದಿಗಳನ್ನು ಬೊಬ್ಬೆ ಹೊಡೆದು ಓಡಿಸಬಹುದು, ಪೆಟ್ಟುಹೊಡೆದು ಗಾಯಗೊಳಿಸಬಹುದು, ಕೊಂದು ತಿನ್ನಬಹುದು. ನಾಡುಹಂದಿಗಳನ್ನು ಹಾಗೆ ಮಾಡಬಹುದಾದರೂ, ಆ ಹಂದಿಗಳ ಮಾಲಿಕರ ತಲೆಯಲ್ಲಿ, ಹಂದಿಯ ಲದ್ದಿಯೇ ತುಂಬಿ-

ಷ್ಟರ ಮಾಡುವುದೇನು? ಅವರು ನಿಷ್ಕಾರವಾಗಿ ಜಗಳಕ್ಕೆ ಬರುತ್ತಾರೆ. ತಿಮ್ಮಯ್ಯನು ಗದ್ದೆಯ ಮಧ್ಯದಲ್ಲಿ ಕಟ್ಟಿದ ಆಟ್ಟಣಿಗೆಯಲ್ಲಿ (ಹುಲ್ಲುಮಾಡು, ಗೋಡೆಯಿಲ್ಲ, ಎತ್ತರದಲ್ಲಿ ನಾಲ್ಕು ಹಲಗೆಗಳನ್ನು ಜೋಡಿಸಿ ಒಂದು ಮಲಗುವ ಏರ್ಪಾಡು, ಅಡಿಯಲ್ಲಿ ಬೆಂಕಿ ಉರಿಸಲು ಒಂದು ಒಲೆ) ಬೆಂಕಿಹಾಕಿ ಟೆನ್ನು ಬಡಿಯುತ್ತಾ ಕುಳಿತುಕೊಂಡನು. ಆದರೆ ಹಗಲೂ ರಾತ್ರಿಯೂ ಒಂದೇ ಸವನೆ ದುಡಿಯುವುದು ಯಾರಿಂದ ತಾನೇ ಸಾಧ್ಯ? ಮಧ್ಯರಾತ್ರಿಯ ಅನಂತರ, ಆ ಶಾಂತಸಮುದ್ರಮಧ್ಯದ್ವೀಪದಲ್ಲಿ ಅವನು ನಿದ್ರೆ ಮಾಡಿದನು. ಹೊರಗೆಲ್ಲ ಚಳಿಯು ಮೂಳೆಯನ್ನು ನಡುಗಿಸುವಷ್ಟು ಇತ್ತು. ಬೆಂಕಿಯ ಉಷ್ಣವನ್ನೂ ಲೆಕ್ಕಿಸದು ಆ ಚಳಿ. ಅಭ್ಯಾಸ ಬಲದಿಂದಲೇ ತಿಮ್ಮಯ್ಯನು ಅಲ್ಲಿ ಮಲಗಿದನು. ಆದರೆ ಇದೇನು? ಪುನಃ ಅವೇ ಹಂದಿಗಳು ಬಂದು, ಬೇರೆ ಗದ್ದೆಗಳನ್ನು ತಿಂದು ಹಾಳುಮಾಡತೊಡಗಿದುವು. ಹೆಶಾತ್ತಾಗಿ ತಿಮ್ಮಯ್ಯನಿಗೆ— ಈ ಸ್ವಪ್ನ ಕಂಡು ಎಚ್ಚರವಾಯಿತು. ದಣಿದು ಮಲಗಿದ್ದುದರಿಂದ ನಿದ್ರೆಯು ಬಲವಾಗಿಯೇ ಹಿಡಿದಿತ್ತು. ಕಣ್ಣು ತೆರೆಯುವುದೂ ಕಷ್ಟವಾಯಿತು. ಆದರೂ ಬಲಾತ್ಕಾರದಿಂದ ಎದ್ದು ಕಣ್ಣುಜ್ಜಿಸುತ್ತಲೂ ನೋಡಿದನು. ಕೃಷ್ಣಪಕ್ಷ ಪ್ರಾರಂಭದ ಚಂದ್ರನು ಪಶ್ಚಿಮ ದಿಗಂತದ ಕಡೆಗೆ ಹೊರಳಿದ್ದನು. ಮಂದಪ್ರಕಾಶ ಆ ಗದ್ದೆಯ ಸಮುದ್ರದ ಮೇಲೆ ಹಬ್ಬಿತ್ತು. ಆಕಾಶ ಸ್ವಚ್ಛ, ಪೂರ್ವದಿಗಂತ ಪ್ರಭಾಮಯ. ಟೆನ್ನುಹೊಡೆದು ಗಲಾಟೆ ಎಬ್ಬಿಸಿದನು ತಿಮ್ಮಯ್ಯ. ಜತೆಯಲ್ಲಿದ್ದ ಬಡಕಲು ನಾಯಿ ಮಲಗಿದಲ್ಲಿಂದಲೇ "ವೌವೌ" ಎಂದು ಬಗುಳಿತು. ಅವನು ತೃಪ್ತನಾಗದೇ ನಡುಗುತ್ತ ಗದ್ದೆಗೆ ಇಳಿದನು. ಹಿಂದಿನ ಸಂಜೆಯಲ್ಲಿ ನೋಡಿದ ಗದ್ದೆಗೇ ಸೀದಾ ಹೋದನು—ಅವೇ ಹಂದಿಗಳು, ಏನನ್ನೂ ತಿಳಿಯದವುಗಳಂತೆ ಬಕಬಕನೆ ಮೇಯುತ್ತ ನಿಂತಿರುವುವು. ಎಷ್ಟು ತಿಂದುವೋ, ಇನ್ನೆಷ್ಟು ಹಾಳುಮಾಡಿದುವೋ, ಒಂದು ಭಾಗವಿಡೀ ಬೋಳಾಗಿದೆ. ನಖಶಿಖಾಂತ ತಿಮ್ಮಯ್ಯನು ನಡುಗಿದನು. ಓಡಲು ತೊಡಗಿದ ಹಂದಿಗಳ ಹಿಂದೆಯೇ ತಾನೂ ಓಡುತ್ತ, ಕೈಯ್ಯಲ್ಲಿದ್ದ ಬಡಿಗೆಯಿಂದಲೇ ಬೀಸಿಬೀಸಿ ಹೊಡೆದನು. ಒಂದು ಹಂದಿಯು ತಪ್ಪಿಸಿಕೊಂಡು ಓಡಿಹೋಯಿತು. ಪೆಟ್ಟುತಗುಲಿದ ಇನ್ನೊಂದು ಓಡಲಾರದೇ ಓಡುತ್ತಿತ್ತು. "ಹೆಣ, ಇನ್ನು ಬರುತ್ತೀಯಾ?" ಎಂದು ಇನ್ನಷ್ಟು ಅದಕ್ಕೆ ಹೊಡೆದು, ಕುಂಟುಕಾಲನ್ನು ಮುರಿದೇ ಬಿಟ್ಟನು. ಹಂದಿಯು ನೋವಿನಿಂದ ವಿಕಾರವಾಗಿ ಕೂಗುತ್ತ— ಹರಿಶ್ಚಂದ್ರನನ್ನು ಬಲೆಗೆ ಕೆಡವಿ ವಿಶ್ವಾಮಿತ್ರಾಶ್ರಮಕ್ಕೆ— ಗೂಡಿನೆಡೆಗೆ ತೆವಳುತ್ತಾ ಹೋಯಿತು. ಆದರೆ ಮುಂದೆ ಹೋಗಲಾರದೇ ಅಲ್ಲೇ ಕುಸಿದುಬಿತ್ತು. ಕರ್ಕಶವಾಗಿ, ಕರ್ಣಕಠೋರವಾಗಿ, ಇಡೀ ಶಾಂತವಾತಾವರಣದಲ್ಲಿ ಒಂದು ಸುಂಟರಗಾಳಿಯು ಎದ್ದಂತೆ ಅರಚುತ್ತ, ಆ ಗದ್ದೆಯ ಮೇಲೆ ಬಿದ್ದು ಹೊರಳುತ್ತಿತ್ತು.

ತನ್ನ ಗದ್ದೆಯಲ್ಲಿ ಗಸ್ತು ತಿರುಗುತ್ತಿದ್ದ ಸಿಂಗಪ್ಪನಿಗೆ ಈ ಹಂದಿಯ "ಆರ್ತಸ್ವರ" ಕೇಳಿಸಿತು. ಕೂಡಲೇ ಹಿಂದಿನ ಸಾಯಂಕಾಲದ ದೃಶ್ಯ ಹೊಳೆಯಿತು. ಕ್ರೋಧದಿಂದ ನಡುಗುತ್ತ, ಒಂದು ದೊಣ್ಣೆಯನ್ನು ಹಿಡಿದು, ಆ ಹಂದಿಯು ಕೂಗುವ ಕಡೆಗೂ ಹೋಗದೆ, ತಿಮ್ಮಯ್ಯನ ಆಟ್ಟಣಿಗೆಯೆಡೆಗೇ ಓಡಿದನು,— ಅ ನ ನ ನ್ನು ಕೊಂದುಬಿಡುವಂತೆ.

"ನನ್ನ ಹಂದಿಯನ್ನು ಹೊಡೆಯಲು ನೀನಾರೋ?"

"ನನ್ನ ಗದ್ದೆಯನ್ನು ಮೇಯಿತು, ಹೊಡೆದೆ." ಇಲ್ಲಿಂದ ಮಾತು ಅಶ್ಲೀಲಕ್ಕೆಳಿಯಿತು. ಹೆಂಡಿರನ್ನು, ಮಕ್ಕಳನ್ನು, ಹುಟ್ಟದವರನ್ನು, ಹುಟ್ಟದವರನ್ನು ಎಲ್ಲರನ್ನೂ ವಿಧವಿಧವಾಗಿ ಬಯ್ದುಕೊಳ್ಳುತ್ತಾ ಪ್ರಾತರ್ಗಾನ ಸಾಗಿತು. ಕೆಲವೇ ನಿಮಿಷದಲ್ಲಿ ಸಿಂಗಪ್ಪನ ಮಗ, ಹುಡುಗರಕ್ತದ ಗರ್ವದ ಬೆಳ್ಳಪ್ಪನೂ ಅಲ್ಲಿಗೆ ಕತ್ತಿ ಸಮೇತ ಬಂದನು. ಹೊಡೆದಾಟವೋ ಖೂನಿಯೋ ಆಗುವುದರಲ್ಲಿದ್ದುದನ್ನು ನೆರೆಕರೆಯವರು, ಈ ಗಲಾಟೆ ಕೇಳಿ ಸೇರಿದವರು, ತಪ್ಪಿಸಿದರು. ಸಿಂಗಪ್ಪನದೇ ತಪ್ಪು— ಅವನು ತಿಮ್ಮಯ್ಯನಿಗೆ ನಷ್ಟದ ಪಾಲೆಂದು ಒಂದು ಬಟ್ಟೆ ಬತ್ತ ತೆರಬೇಕೆಂದು ಅವರು ವಿಧಿಸಿದರು.

"ನಷ್ಟ ಕೊಡೋದಿರಲಿ; ನನ್ನ ಹಂದಿಯನ್ನು ಹೊದೆದು ಹಾಕಿ-



ದ್ದಕ್ಕೆ ನೀನು ಜುಲ್ಮಾನು ತೆರಬೇಕು. ನಾನು ಕೋರ್ಟಿಗೆ ಹೋಗುತ್ತೇನೆ" ಎಂದನು ಯಾಲಕ್ಕಿ ಮದದ ಸಿಂಗಪ್ಪ.

"ಅಷ್ಟೆಲ್ಲ ದೂರ ಹೋಗಬೇಡಿ, ಗೌಡ್ರೇ, ಇಷ್ಟು ಚಿಕ್ಕ ವಿಷಯುಗಳಿಗೆ ಕೋರ್ಟು ಕಚೇರಿ ಹತ್ತಿ, ದಾವಾ ಜುಲ್ಮಾನು ಎಂದು ಯಾಕೆ ಕೂಗತೀರಿ!" ಎಂದು ಇತರರು ಬೋಧಿಸಿದರು. ಪ್ರಾತಃಕಾಲದ ತಂಗಾಳಿಯು ಬೀಸಿ, ಈ ಜ್ವಾಲೆಯನ್ನು ಆಗ ಶಾಂತ ಮಾಡಿತು. ಕಾಲುಮುರಿದ ಹಂದಿಯು ಮಾತ್ರ 'ಕಿರೋ'ಎಂದು ದಿಗ್ಭ್ರಾಂತಿಗಳನ್ನು ಭೇದಿಸುವಂತೆ ಅರಚುತ್ತಿದ್ದಿತು.

ಬೆಳ್ಯಪ್ಪನಿಗೆ ಈ ಅಪಮಾನ ತಡೆಯಲಾಗಲಿಲ್ಲ. ಮಿಲಿಟರಿಗೆ ಹೋಗಿ ಬಂದವನು; ಮುಂದೆ ಒಂದೇ ತಿಂಗಳಿನಲ್ಲಿ ಮದುವೆಯಾಗುವ ಮೀಸೆ ಹೊತ್ತ ಗಂಡು. ಇವನ ಮುಂದೆ ಆ ತಿಮ್ಮಯ್ಯ ಎಷ್ಟರವನು! ಅವನು ಇಷ್ಟು ಸೊಕ್ಕಿನಿಂದ ಜಗಳಾಡಿದನಲ್ಲಾ. ಈ ಮೂರುಕಾಸಿನ ಮನುಷ್ಯನಿಗೆ ಈ ವರ್ಷ ನಾಲ್ಕು ಕಾಳು ಬತ್ತ ಹೆಚ್ಚು ಬಂದಿದೆಯೆಂದು ಪಿತ್ತ ತಲೆಗೆ ಏರಿದೆ. ಇವನಿಗೆ ಹೇಗಾದರೂ ಪಾಠಕಲಿಸಲೇ ಬೇಕು—ಎಂದು ಯೋಚಿಸುತ್ತ, ಕತ್ತಿ ಬೀಸಿ ಪುಟ್ಟ ಸಸಿಯೊಂದರ ಮೇಲೆ ತನ್ನ ಬಲ ಮತ್ತು ಕೋಪವನ್ನು ವ್ಯಕ್ತಪಡಿಸಿದನು. ಆ ಗಿಡವು ಬಳುಕಿ, ಸರ್ರನೆ ಜಾರಿ ಜೀವ ಉಳಿಸಿಕೊಂಡಿತು. ಮನೆಗೆ ತಂದು ಹಾಕಿದ್ದ, ಬೆಳ್ಯಪ್ಪನ ಮದುವೆಯ ದಿನದ ಭೋಜನಕ್ಕೆಂದು ಮೀಸಲು ಇಟ್ಟದ್ದ ಹಂದಿಯು, ಒಂದೇಸವನೆ ಕಿರುಚುತ್ತಿತ್ತು. ಅದು ಒಂದೊಂದುಸಲ ಅರಚುತ್ತಿದ್ದಂತೆಯೇ ಬೆಳ್ಯಪ್ಪನ ಕ್ರೋಧ ನೂರ್ಮಡಿಯಾಗಿ, ಚಂಡೆ ಬಡಿದಂತೆ ದೇವರು ಹೊತ್ತವನಿಗೆ ಆವೇಶ ಬರುವಂತೆ, ಏರುತ್ತಿತ್ತು.

ಮುಂದೆ ಒಂದೇ ವಾರದಲ್ಲಿ ತಿಮ್ಮಯ್ಯನ ಗದ್ದೆಯೆಲ್ಲವನ್ನೂ ಕೊಯ್ದಾಯಿತು. ಕೊಯ್ಯುವಾಗ ಇತರ ಗದ್ದೆಗಳವರು ಸಹಾಯಕ್ಕೆ ಬರುವರು. ಹಾಗೆಯೇ ಇವನು ಅವರ ಗದ್ದೆಗಳನ್ನು ಕೊಯ್ಯುವಾಗ ಕೂಡುಗೆಲಸಕ್ಕೆ ಹೋಗಬೇಕು. ಆ ದಿನ ಯಾರ ಗದ್ದೆಯನ್ನು ಕೊಯ್ಯುವರೋ ಅವರ ಮನೆಯಲ್ಲಿ ಬಂದವರಿಗೆಲ್ಲ ಕೋಳಿಯ ಮೇಲೋಗರದ ಭೋಜನ. ದೇವರ ಸಂಪೂರ್ಣ ದಯೆಯಿಂದ, ಮಳೆ ಬರುವುದಿರಲಿ, ಒಂದು ಹೂಮೋಡ ಕೂಡ ಆ ದಿನಗಳಲ್ಲಿ ಆಕಾಶದಲ್ಲಿ ಸುಳಿಯಲಿಲ್ಲ. ಪೈರುಗಳನ್ನು ಕೊಯ್ದಂತೆಯೇ ಒಣಗಲೆಂದು ಗದ್ದೆಗಳಲ್ಲಿ ಗುಂಪುಗುಂಪಾಗಿ ಹರಡುತ್ತಿದ್ದರು. ಒಂದೆರಡು ದಿವಸ ಈ ರೀತಿ ಒಣಗಿದ ರಾಶಿಗಳನ್ನು ಕಟ್ಟಿ ಹೊತ್ತುಕೊಂಡು ಹೋಗಿ, ನುನೆಯ ಅಂಗಳಕ್ಕೆ (ಕಳಕ್ಕೆ) ಹಾಕುತ್ತಿದ್ದರು. ಈ ಹಿಂಡುಗಳನ್ನು ಕಳದಲ್ಲಿ ಆನೆಯಷ್ಟು ಎತ್ತರದ ಮೆದೆಗಳನ್ನಾಗಿ ಒಟ್ಟುತ್ತಾರೆ. ಈ ಕೆಲಸ ಮುಗಿದ ಮೇಲೆ ಒಕ್ಕಲು ಹಾಕಲು (ಎಂದರೆ ಬತ್ತದ ಕಾಳುಗಳನ್ನು ಹುಲ್ಲಿನಿಂದ ಬೇರ್ಪಡಿಸಲು

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇಪರಿಕೆಗಳನ್ನು ಹೋಗಲಾಡಿಸುವದ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ —ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಅಜೀರ್ಣ, ತಂಪು, ಮೈನೋವು, ತಲೆನೋವು, ಮಕ್ಕಳ ಕಾಡ ವಿಕಾರ ಇತ್ಯಾದಿ ಅನೇಕ ಚಿಲ್ಲರೆ ದೈನಂದಿನ ಬೇನೆಗಳನ್ನು ಜವೇರಿಯನ್ಸ್ ಜೀವನ ಮಿಕ್ಶ್ಚರ್ ಬಿಸ್ಸಆಯುರ್ವೇದಿಕ ಔಷಧವಾಗಿ ಗುಣಪಡಿಸುತ್ತದೆ. ಕಾಲರಾ ಮತ್ತು ಅಮಾಂಶಗಳಂಥ ಭಯಾನಕವಾದ ಪೊಂಕು ರೋಗಗಳ ಸೋರೆ ಕಾಣಿಸದಂತೆ ಇದರ ಉಪಯೋಗವಾಗುತ್ತದೆ. ಹಾಳ್ಬಾಯಿದಾಗ ಯಾವಾಗಲೂ ಇದರ ಉಪಯೋಗವಾಗುವಂತೆ ಇವೆ. ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಮತ್ತು ಪ್ರವಾಸದಲ್ಲಿ ಪತ್ರಿಯೂ ಇಟ್ಟುಕೊಳ್ಳುವದು (ಉಕ್ಕಿಪ್ಪ ಮುಂಜಾಗ್ರತೆಯ ಉಪಾಯವಾಗಿದೆ) ದೊಡ್ಡಸಂಸ್ಥೆಯ ಲಕ್ಷಣವಾಗಿದೆ. ಕುಸ್ಕರ್ಬಿಯೂ (ವಿಷಭ ವ್ಯಾಧಿಗಳಲ್ಲಿಯೂ) ಹಸ್ಯಗಳಲ್ಲಿ ಆಂಗಡಿಕಾರ್ತರಲ್ಲಿಯೂ ದೊರೆಯುತ್ತದೆ.

ಜವೇರಿಯನ್ ಜೀವನ ಮಿಕ್ಶ್ಚರ್ ಮತ್ತು ಕಂ
ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ ೨

ಮಕ್ಕಳು ಶಕ್ತಿವಂತರು ತೇಜಸ್ವಿಗಳು ಆಗಬೇಕಿದ್ದಲ್ಲಿ ಬಾಯೋ ಟೊನಾ ಅವಶ್ಯ ಕೊಡಿ

ಫಾಸ್ಫೊರಾ
ಏಕಮೇವ ಟಾನಿಕ್

"ಯಾವುದೇ ಕಾರಣದಿಂದ ಉಂಟಾದ ದೋಷವನ್ನು ರೋಗದ ಸರಿಯಾದ ನಿದಾನದಿಂದಲೆ ಗುಣ ಪಡಿಸಬಹುದು.

ಫಾಸ್ಫೊರಾದಿಂದ ಈ ಅನುಭವ ಬರುವುದು.

ರಾಯ್, ಮತ್ತು ಕಂ.
ಮುಂಬಯಿ

ಪೈರನ್ನು ಕಳದಲ್ಲಿ ಸಮವಾಗಿ ಹಾಸಿ, ಅದರ ಮೇಲೆ ಎಮ್ಮೆ ದನಗಳನ್ನು ಬಹಳ ಹೊತ್ತು ನಡೆಯಿಸುವರು.) ಶುರುಮಾಡುವರು. ಮೆದೆ ಒಟ್ಟಿ ಆದಮೇಲೆ, ಮಳೆ ಬಂದರೂ ತೊಂದರೆಯಿಲ್ಲ. ತಿಮ್ಮಯ್ಯನ ಗದ್ದೆಯ ಮುಕ್ಕಾಲು ಅಂಶ ಆ ರಾತ್ರಿಗೆ ಹೊತ್ತು ಮುಗಿಯಿತು. ಇನ್ನುಳಿದ ಭಾಗ ಗದ್ದೆಯಲ್ಲಿಯೇ ಉಳಿಯಿತು, ಕೊಯ್ದಾಗಿದ್ದಿತು. ಮರುದಿವಸ ಸಾಯಂಕಾಲಕ್ಕೆ ಅವನ ಹೆಂಡತಿಯೊಬ್ಬಳಿಂದಲೇ ಎಲ್ಲವೂ ಹೊತ್ತು ಮುಗಿದೀತು. ಮಾರನೆಯ ದಿನ ಅವನು ಕೂಡುಗೆಲಸಕ್ಕೆ ಬೇರೊಬ್ಬರ ಗದ್ದೆಗೆ ಹೋಗಬೇಕಾಗಿದ್ದಿತು. ಮೂರು ದಿವಸಗಳ ಮೇಲೆ ಒಕ್ಕಲು ಹಾಕಲು ಪ್ರಾರಂಭಿಸಬೇಕು, ಆಗ ಸ್ವಾಮಿಯವರಲ್ಲಿಂದ ಯಾರನ್ನಾದರೂ ಬರಹೇಳಲು (ಸಮವಾರವಾದುದರಿಂದ). ನಾಡಿದ್ದು ಸಂತೆದಿನ ಮಡಿಕೇರಿಗೆ ಹೋಗಬೇಕು—ಎಂದು ಯೋಚನೆಮಾಡುತ್ತ, ತೃಪ್ತಿಯಿಂದ ತಿಮ್ಮಯ್ಯನು ನಿದ್ರಿಸಿದನು. ಇನ್ನು ಗದ್ದೆಯಲ್ಲಿ ಮರಗಟ್ಟುವ ಆವಶ್ಯಕತೆಯಿರದಿದ್ದುದರಿಂದ, ಅವನು ಮನೆಯಲ್ಲಿಯೇ ಮಲಗಿದನು.

ಕಾಲು ಮುರಿದ ಹಂದಿಯು ಕೊಳೆತು, ಅರಚಿ, ಬೆಳ್ಯಪ್ಪನ ಕೋವಾಗ್ಗಿಗೆ ಕೊಬ್ಬನ್ನು ಎರಚಿ ಸತ್ತುಹೋಯಿತು. ಬೆಳ್ಯಪ್ಪನಿಗೆ ಕೋಪ ತಡೆಯಲಾಗಲಿಲ್ಲ. ಮಲಗಿದರೆ ನಿದ್ರೆ ಬರಲೊಲ್ಲದು. "ಈ ಭಿಕಾರಿಗೆ ಇಷ್ಟು ಸೊಕ್ಕೇ? ಇವನಿಗೆ ಪಾಠ ಕಲಿಸಲೇ ಬೇಕು, ಕಲಿಸಲೇ ಬೇಕು. ಹೇಗೆ, ಹೇಗೆ?" ಎಂದು ಯೋಚಿಸುತ್ತ ಹೊರಳುತ್ತಿದ್ದನು. ಪ್ರತಿನಿಮಿಷವೂ ಅವನಿಗೆ "ಹೇಗೆ, ಹೇಗೆ?" ಎಂದು ಮೈಗೆ ಮುಳ್ಳು ಚುಚ್ಚಿದಂತೆ ಎನಿಸುತ್ತಿತ್ತು. ಜತೆಗೆ ಆ ಹಂದಿಯು ಒರಲುವುದು ಆಗಾಗ ಕಿವಿಯಲ್ಲಿ ಕೇಳಿಸಿದಂತೆ ಆಗಿ, ಅವನಿಗೆ ಶಾಂತಿಯೆ ಇಲ್ಲದಾಯಿತು. ಮದುವೆಗಿಟ್ಟ ಹಂದಿಯು ಕೊಳೆತು ಸತ್ತಿತಲ್ಲ, ಇನ್ನು ಮಲಗಿದರೆ ಮನೆಯೇ ತಲೆಯ ಮೇಲೆ ಬಿದ್ದೀತು, ಹುಚ್ಚು ಹಿಡಿದೀತು—ಎಂದು ಅಂಗಳಕ್ಕೆ ಓಡಿದನು ಬೆಳ್ಯಪ್ಪ. ಚಂಪ್ರ ತಲೆಯ ಮೇಲೆ ತೇಲುತ್ತಿದ್ದನು. ಅಂಗಳದಲ್ಲಿದ್ದ ನಾಯಿಯು ಬಾಲ ಅಲ್ಲಾಡಿಸುತ್ತ ಹತ್ತಿರ ಬಂದಿತು. ಚಳಿಯು ರಕ್ತವನ್ನು ಹೆಪ್ಪುಗಟ್ಟಿಸುವಷ್ಟಿತ್ತು. ಆದರೆ ದೇಹದೊಳಗೆ ಕೋಪಾನಲವಿದೆಯಷ್ಟೆ. ಬೆಂಕಿಕಡ್ಡಿ ಗೀರಿ ಬೀಡಿ ಹೊತ್ತಿಸಿದರೆ ಅದು ಶಾಖ ಸಾಕಾಗದೇ ತಣ್ಣಗಾಯಿತು. ಬೆಳ್ಯಪ್ಪನು ಅಂಗಳ ಬಿಟ್ಟು ಓಡಿದನು, ನಾಯಿಯು ಹಿಂಬಾಲಿಸಿತು. "ಸೂ" ಎಂದು ಅದಕ್ಕೆರಡು ಒದ್ದು, ಉಗುಳು ಮನೆಗೆ ಅಟ್ಟಿದನು. ಅದು "ಕುಂಯ್ ಕುಂಯ್" ಎಂದು ಅರಚುತ್ತ ಹಿಂದೆ ಓಡಿತು. ಒಂದು 'ಗುಹೆಯೊಳಗೆ ಹೊಗುವವನಂತೆ, ಹುಚ್ಚನಂತೆ ಉದ್ವಿಗ್ನ ಬೆಳ್ಯಪ್ಪನು ತಿಮ್ಮಯ್ಯನ ಕಳದ ಕಡೆಗೆ ಓಡಿದನು. ಬೆಂಕಿ ಕಡ್ಡಿ ಗೀರಿ ಆ ಹುಲ್ಲಿಗೆ ಹಿಡಿದನು. ಅವನ ಬೀಡಿಯನ್ನು ಹೊತ್ತಿಸಲು ನಾಚಿದ ಆ ಬೆಂಕಿಯು, ಈಗ ಇಬ್ಬನಿಯಿಂದ ತಣ್ಣಗಾದ ಒಣ ಹುಲ್ಲಿಗೆ ಕೂಡಲೇ ಹಿಡಿಯಿತು. ಬೆಳ್ಯಪ್ಪನು ಹಿಂದೆ ಹಾರಿದನು, ಓಡಿ ಹೋಗಿ ಪುನಃ ಮಲಗಿದನು. ಆದರೂ ತೃಪ್ತಿಯಿಲ್ಲ; ಅಂತೂ ಬೆಳಗಿನ ಝಾಮಕ್ಕೆ ಸ್ವಲ್ಪ ಜೊಂಪು ಹಿಡಿಯಿತು.

"ಆ ಬೆಂಕಿಯು ಹಬ್ಬಿ ಆಲ್ಲಿಂದ ಹಾರಿದ ಒಂದು ಕಿಡಿಯ ತಮ್ಮ ಮನೆಯ ಮಾಡಿನ ಹುಲ್ಲಿಗೆ ಹಿಡಿಯಿತು. ಇಡೀ ಮನೆಯೇ ಉರಿಯುತ್ತಿದೆ. "ಅಯ್ಯೋ ಎಲ್ಲಿಗೆ ಹೋಗಲಿ, ಹೀಗೆ ಆಗಬೇಕೇ?" ಏಳಬೇಕೆಂದು ಪ್ರಯತ್ನಿಸುತ್ತಾನೆ, ಆಗುವುದಿಲ್ಲ, ಕೈಕಾಲುಗಳನ್ನು ಯಾರೋ ಮಂಚಕ್ಕೆ ಕಟ್ಟಿ ಹಾಕಿದ್ದಾರೆ. 'ನಾನು ಸುಟ್ಟು ಹೋಗುತ್ತಿದ್ದೇನೆ, ಸುಟ್ಟು ಹೋಗುತ್ತಿದ್ದೇನೆ, ಬಚಾವ್ ಮಾಡಿ' ಎಂದು ಕೂಗುತ್ತಾನೆ. ತಿಮ್ಮಯ್ಯನು ಅಲ್ಲಿ ಈ ಸ್ಥಿತಿಯನ್ನು ನೋಡಿ ನಗುತ್ತಾನೆ. 'ಅಯ್ಯೋ ಹೀಗೆ ಮಾಡಿದೆನಲ್ಲ, ಹೀಗೆ ಮಾಡಬಹುದೇ?'...." ಗಾಬರಿಯಿಂದಲೂ ಉದ್ವೇಗದಿಂದಲೂ ಹೊದಿಕೆಯನ್ನು ಒದ್ದು ಬೆಳ್ಯಪ್ಪನು ಏಳುತ್ತಾನೆ. ಬೆಳಕು ಹರಿಯುವುದರಲ್ಲಿತ್ತು, ದೂರದಿಂದ ಏನೋ ಒಂದು ಗಲಭೆ ಕೇಳಿಸುತ್ತಿತ್ತು. ಬೆಳ್ಯಪ್ಪನು ಮುಂಕನಂತೆ ಕುಳ್ಳಿರಿಸಿದನು. ಮನೆಯಲ್ಲಿ ಅವನ ಸಣ್ಣ ತಮ್ಮನ ಹೊರತಾಗಿ ಯಾರೂ ಇರಲಿಲ್ಲ.

ಒಣ ಹುಲ್ಲಿಗೆ ಹಿಡಿದ ಬೆಂಕಿಯು, ಒಂದು ಕ್ಷಣದಲ್ಲಿ ಅಗಲಗಲವಾಗಿ ವ್ಯಾಪಿಸಿತು. ಇನ್ನೆರಡು ನಿಮಿಷಗಳಲ್ಲಿಯೇ ಜೋರಾಗಿ

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ
ವಿ ಎಸ್ ಕಾಪಸೇಯವರ
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ಮರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚೆಕಂದ, ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ಲಘ ತೊಲೆಯ ಒಂದು ಡಬ್ಬಿಗೆ ೫–೮–೦; ಅಂಚೆಯ ವೆಚ್ಚ ೧–೬–೦. ಶೀಘ್ರಗುಣಕಾರಿಯಾದ ಸ್ಪೇಶಲ್‌ಡಬ್ಬಿಗೆ ೧೦–೮–೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧–೬–೦. ೩ ಡಬ್ಬಿಗೆ ೧೫–೦–೦ ಅಂಚೆಯವೆಚ್ಚ ೨–೧೩–೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ ಮು. ಪೋ. ಮಿರಜ

ಹಬ್ಬಿತು. ಚಳಿಯೆಂದು ಆ ಹುಲ್ಲಿನ ಮಧ್ಯ ಮುದುರಿ ಮಲಗಿದ್ದ ಹೆಣ್ಣುನಾಯಿಯು ಹೆದರಿ ನೆಗೆಯಿತು, ಅತ್ತಿತ್ತ ಓಡಿತು, ಒಂದೇ ಉಸುರಿಗೆ ಬಗುಳಲು ಹೊರಟಿತು; ಮನೆಯ ಬಾಗಿಲ ಹತ್ತಿರ ನಿಂತೇ ಬಗುಳಿತು. ಮನೆಯ ಅಂಗಳವೇ ಕಳ. ಪತ್ತಾಯ (ಕಣಜ) ದೊಳಗೆ ಬತ್ತ ತುಂಬುವುದರ ವರೆಗೂ ರೈತರಿಗೆ ಸರಿಯಾಗಿ ನಿದ್ರೆಯಿಲ್ಲ; ತಿಮ್ಮಯ್ಯನು ನಾಯಿ ಬಗುಳುವ ಶಬ್ದ ಕೇಳಿ, ಕೂಡಲೇ ಎದ್ದು ಹೊರಗೆ ಬಂದನು—ದನವೋ, ಏನಾದರೂ ಬಂದು ಕಳದಿಂದ ತೆನೆಗಳನ್ನು ತಿನ್ನುತ್ತಿದೆಯೋ ಎಂದು ನೋಡಲು. ಆದರೆ ಭಯಂಕರ ದೃಶ್ಯ, ಈ ಅಗ್ನಿರಾಕ್ಷಸನ ರುದ್ರತಾಂಡವ ನೋಡಿ ಅಲ್ಲೇ ಎದೆಯೊಡೆದು ಕುಸಿದು ಬಿದ್ದನು. ಆದರೆ ಒಂದೊಂದು ಕ್ಷಣವೂ ಬೆಂಕಿಯು ಜೋರುಜೋರಾಗಿ ಹಬ್ಬುತ್ತಿತ್ತು. ಹೆಂಡತಿಯನ್ನು ಬಡಿದು ಎಬ್ಬಿಸಿದನು. ಮಗಳನ್ನು ಕರೆದು ನೆರೆಮನೆಯವರನ್ನು ಕರೆದುಕೊಂಡು ಬರಲು ಅಟ್ಟಿದನು. ಒಂದು ಉದ್ದದ ಬಡಿಗೆಯನ್ನು ಹಿಡಿದು, ಇಡೀ ಮೆದೆಯನ್ನೇ ಮಗುಚಲು ಪ್ರಯತ್ನಿಸಿದನು. ಆದರೆ ಆನೆಯೆತ್ತರದ ಹುಲ್ಲುರಾಶಿ ಭಾರವಾಗಿಯೇ ಕುಳಿತಿತ್ತು. ಬತ್ತದ ಕಣಗಳು ಬೆಂಕಿ ತಾಗಿದಂತೆ ಅರಳಾಗಿ ನಾಲ್ಕೂಕಡೆಗೆ ಚಟ್ ಚಟ್ ಎಂದು ಸಿಡಿಯುತ್ತಿದ್ದುವು. ಬೆಂಕಿಯು ಇಬ್ಬರಿಂದ ಹಿಡಿತದಲ್ಲಿ ಬರುವ ಹಾಗಿರಲಿಲ್ಲ; ಪೇಟೆ-ಪಟ್ಟಣಗಳಲ್ಲಿರುವಂತೆ ಬೆಂಕಿ ನಂದಿಸುವ ಯಂತ್ರ ಅಲ್ಲಿ ಇಲ್ಲ; ಅಂತೆಯೇ ಬೆಂಕಿ ಬಿದ್ದಾಗ ಲಕ್ಷ-ಗಟ್ಟಲೆ ರೂಪಾಯಿ ನಷ್ಟವೂ ಇಲ್ಲ. "ಇನ್ನು ಮನೆಗೆ ಬೆಂಕಿ ಹಿಡಿಯದಿದ್ದರೆ ಸಾಕು ದೇವರೇ" ಎಂದು ಮನೆಯ ಕಡೆಗಿದ್ದ ಹುಲ್ಲನ್ನು ತೆಗೆದು ದೂರ ಎಸೆಯುತ್ತಿದ್ದನು. ಅಷ್ಟರಲ್ಲಿ ನೆರೆಕರೆಯವರು ಅಲ್ಲಿ ಸೇರಿದರು. ಬೊಬ್ಬೆಯೇ ಬೊಬ್ಬೆ. ನೀರು ತಂದು, ತಂದು, ಏಣಿ ಹಿಡಿದು ಹತ್ತಿ ಬೆಂಕಿಯ ಮೇಲೆ ಸುರುವಿದರು. ನೀರಿನಲ್ಲಿ ಅದ್ದಿ ಹಳೇ ಹುಲ್ಲು-ಕಂಟಿಗಳನ್ನು ಬೆಂಕಿಯ ಮೇಲೆ ಎಸೆದರು. ಹರಕು ಬಟ್ಟೆಗಳನ್ನು ಒದ್ದೆ ಮಾಡಿ ಎಸೆದರು. ಬಾಳೇ ಮರಗಳನ್ನು ಕಡಿದು ಅವುಗಳ ಸೊಪ್ಪು, ರೆಂಬೆ (ಪಟ್ಟೆ) ಗಳನ್ನು ಎಸೆದರು. ಮಣ್ಣನ್ನು ಅಗೆದು ಬೆಂಕಿಯ ಮೇಲೆ ಎರಚಿದರು. ಈ ಹವಿಸ್ಸುಗಳನ್ನೆಲ್ಲ ನುಂಗಿ ಶಿಖಿರಾಕ್ಷಸನು ತನ್ನ ಉದರಂಭರಣೆ ಮಾಡಿಯೇ ಬಿಟ್ಟನು—ಸೂರ್ಯ ಸರಿಯಾಗಿ ಕಾಣುವನರೆಗೂ ಈ ಯುದ್ಧ ನಡೆದೇ ಇತ್ತು. ಆ ಹುಲ್ಲುಮೆದೆ ಮುಕ್ಕಾಲು ಪಾಲಿಗಿಂತಲೂ ಹೆಚ್ಚು ಬೆಂದು ಹೋಗಿತ್ತು. ಮನೆಗೆ ಮಾತ್ರ ಬೆಂಕಿ ಹಿಡಿದು ಸರ್ವನಾಶವಾಗಲಿಲ್ಲವೆಂಬ ಒಂದೇ ತೃಪ್ತಿ. ಮಣ್ಣು, ಕಸ, ಮಸಿ, ಅರಳು ಇವುಗಳಿಂದ ತುಂಬಿ ಆ ಸ್ಥಳವು ಯುದ್ಧರಂಗದಂತೆ ಭೀಕರವೇ ಆಗಿತ್ತು. ಇನ್ನೂ ನಂದುತ್ತಲಿದ್ದ ಬೆಂಕಿಯು ವಿಷ (ಹೊಗೆ) ಕಾರುತ್ತಿತ್ತು. ತಿಮ್ಮಯ್ಯನು ಹುಚ್ಚು ಹಿಡಿದವರಂತೆ, ದೆವ್ವ ಬಡಿದವರಂತೆ ಮಂಕು ಕವಿದು, ಒಂದು ಮೂಲೆಯಲ್ಲಿ ಕುಕ್ಕರಿಸಿದನು.

"ಏನಾಯಿತು, ಹೇಗಾಗಿರಬಹುದು?" ಎಂದು ಪ್ರತಿಯೊಬ್ಬರೂ ಮಾತಾಡಲು ಪ್ರಾರಂಭಿಸಿದರು. ಸಿಂಗಪ್ಪನೂ ಅವನ ಹೆಂಡತಿಯೂ ಅಲ್ಲಿಗೆ ಬಂದಿದ್ದರು. "ಹೀಗಾಗಬಾರದಿತ್ತು. "ಅಯ್ಯೋ ಪಾಪ, ಒಳ್ಳೇ ಬೆಳೆ." "ಮುಖ್ಯ ದೇವರಿಗೆ ದಯೆ ವಿಲ್ಲ" ಎಂದು ಮಾತಾಡುತ್ತ, ಕೊನೆಗೂ ಕಾಣದ ದೇವರ ಮೇ ಆ ಬೆಂಕಿಯ ತಪ್ಪನ್ನು ಹೊರಿಸಿದರು. ಹಳ್ಳಿಯಲ್ಲಿ ಒಂದು ಬ (ಕಡಿದಾದ ಸ್ಥಳ) ಜರಿ (ಕುಸಿ) ದರೆ, ಒಂದು ಮನೆಗೆ ಬೆಂ ಬಿದ್ದರೆ, ಒಂದು ಮಗು ಶೀತಜ್ವರದಿಂದ ಸತ್ತರೆ, ಅದಕ್ಕೆ ಕಾರಣ ದೆವ್ವ ಅಥವಾ ದೈವದಲ್ಲಿ ನೋಡುವರೇ ಹೊರತು, ಬೇರೆ ಏನಾಗಿ ಬಹುದೆಂದು ವಿಚಾರಿಸುವುದೇ ಇಲ್ಲ. "ಯಾವುದೋ ಕೋಳಿ ದೆವ್ವದ ಕಾಟ ಇದಾಗಿರಬೇಕು" ಎಂದು ಆ ಮಹಾಸಭೆಯು ಮಹಾನಿರ್ಧಾರಕ್ಕೆ ಆ ಅಶುಭ ಪ್ರಾತಃಕಾಲ ಬಂದಿತು! ಈ ಪೀಡೆಯ ಉಪದ್ರವ ಇನ್ನೂ ಆಗದಂತೆ, ಹಳ್ಳಿಯ ದೈವಕ್ಕೆ ಎರಡು ರೂಪಾಯಿ ಕಾಣಿಕೆ, ಮತ್ತು ಒಂದು ಹುಂಜವ (ಗಂಡು ಕೋಳಿ ಹರಕೆಯನ್ನು ತಿಮ್ಮಯ್ಯನಿಂದ ಹೇಳಿಸಿದರು.

"ನೋಡಿದೆಯಾ ಬೆಳ್ಳೀ, ತಿಮ್ಮಯ್ಯನಿಗೆ ಹೀಗಾಗಬಾರದಿತ್ತು ಎಂದಳು ತಾಯಿ ನೀಲವ್ವ. ಬೆಳ್ಯಪ್ಪನಿಗೆ ಚೇಳು ಕಡಿದಂತೆ ಆಯಿತು.

"ಅಯ್ಯೋ ಪಾಪ. ಎಂತಹ ಮುತ್ತಿನಂತಹ ಬೆಳೆ." ಬೆಳ್ಯಪ್ಪನಿಗೆ ವೈಯ ಎಲುಬನ್ನೇ ಕುಲುಕಿದಂತೆ ಆಯಿತು.

"ಒಂದಿಷ್ಟು ಉಳಿಯಬೇಡವಾ?" ಎಂದು ಮುಂದುವರಿದಳು, ಗಂಜಿ ಬೇಯಲು ಮಡಿಕೆಯನ್ನು ಒಲೆಯ ಮೇ ಇಡುತ್ತ.

ಬೆಳ್ಯಪ್ಪನು ಮಂಚದ ಮೇಲೆ ಕುಳಿತಿದ್ದವನು ಎದ್ದು ಅಂಗಳಕ್ಕೆ ನಡೆದನು. ಸಿಂಗಪ್ಪನು ಗುದ್ದಲಿಯ ಕಾವನ್ನು ಸರಿಮಾಡುತ್ತ ಅಲ್ಲೆ ಬಿಸಿಲುಕಾಯುತ್ತಿದ್ದನು.

"ತಿಮ್ಮಯ್ಯನಿಗೆ ಹೀಗಾಗಬೇಕಾ? ಎಂಥ ಹೊಡೆತ ಭೂತದ್ದು!" ಎಂದು ಅವನಿಂದಲೂ ಹೊರಟಿತು ಇನ್ನೊಂದು ಜೂಪಾ ಬಾಣ.

ಬೆಳ್ಯಪ್ಪನು ಅಲ್ಲಿ ನಿಲ್ಲಲೂ ಆರದೆ, ಕೂರಲೂ ಆರದೆ, ಮಂತ್ರ ಮುಗ್ಧನಂತೆ ಗದ್ದೆಗೆ ಇಳಿದನು. ಆ ಗದ್ದೆಗಳನ್ನು ಕೊಯ್ಯು ಪೈರನ್ನು ಸಾಲಾಗಿ ಗದ್ದೆಯಲ್ಲೇ ಹಾಸಿದ್ದರು. ಬೆಳ್ಯಪ್ಪನನ್ನು ನೋಡಿ "ಅಯ್ಯೋ" ಎಂದು ಅವು ಹೆದರಿದುವು. ಅಲ್ಲಿಂದಲೆ ತಿಮ್ಮಯ್ಯನ ಗದ್ದೆಯು ತೋರುತ್ತಿತ್ತು. ಕೊಯ್ದ ಗದ್ದೆಯ ಸತ್ತ್ವಹೀನವಾಗಿನಿಂತಿದೆ, ಬೋಳಾಗಿ ನಿಂತಿದೆ: "ನನ್ನ ಹೊಟ್ಟೆಗೆ ಬೆಂಕಿಹಾಕಿದೆಯಾ?" ಎಂದು ಅಲ್ಲಿಂದ ಕೇಳಿಸುವುದು. ಈ ಕಡೆಯಿಂದ ಸೂರ್ಯನು ಅಣಕಿಸುತ್ತಾ ಕಣ್ಣುಕುಕ್ಕುತ್ತಿದ್ದಾನೆ. ಗದ್ದೆಯಲ್ಲಿ ನಿಲ್ಲಲು ಸಾಧ್ಯವಿಲ್ಲ. ಭೂಮಿಯೇ ಬಿರಿಯುವಂತೆ ಆಗುತ್ತದೆ, ಬಿರಿದು ಈ ಪಾಪಿಯನ್ನು ನುಂಗಿದ್ದರೆ ಆಗುತ್ತಿತ್ತು ತರಕಾರೀ ತೋಟಕ್ಕೆ ನುಗ್ಗಿದನು. ಮದುವೆಯ ಊಟಕ್ಕೆಂದು ಬೆಳ್ಯಪ್ಪನೇ ನೆಟ್ಟು ಬೆಳೆಸಿದ ಮೊಟ್ಟೆಗೂಸು, ಅವರೆ, ಚೀನಿ ಕುಂಬಳ ಮುಂತಾದುವುಗಳು ಸೊಕ್ಕಿ ಬೆಳೆದಿದ್ದುವು. "ಅಯ್ಯೋ

ನಮ್ಮ ಹತ್ತಿರ ಬರಬೇಡ" ಎಂದು ಅವು ಮೈ ಮುದುರಿದುವು. ಸೊಕ್ಕಿ ಬೆಳೆದಿದ್ದ, ಜೆಪ್ಪರದಿಂದ ನೇಲುತ್ತಿದ್ದ ಚೀನಿಕಾಯಿಯ ತೊಟ್ಟನ್ನೇ ಕಾಗೆಯೊಂದು ಕೊಡವಿ ಕತ್ತರಿಸಿತು. ಅದು ಧಡಾರನೆ ಬಿದ್ದು ರಟ್ಟಿತು. "ಕಾ, ಕಾ" ಎಂದು ಕಪ್ಪಾಗಿ, ಕರ್ಕಶವಾಗಿ ಅದು ಕೂಗುತ್ತ ಹಾರಿಹೋಯಿತು. "ಹೀಗೆ ಮಾಡುವುದೇ?" ಎಂದು ತರಕಾರಿ ತೋಟದ ಬೇಲಿ ಕೇಳುತ್ತದೆ. ಅಲ್ಲಿಯೂ ನಿಲ್ಲಲಾರದೆ ಮುಂದೆ ಓಡಿದನು, ಗದ್ದೆದಾಟಿ ಗುಡ್ಡಹತ್ತಿ ಓಡಿದನು.

"ಬೆಳ್ಳೀ, ಬೆಳ್ಳೀ, ತರಕಾರೀ ತೋಟಕ್ಕೆ ಮತ್ತೆ ನೀರು ಹೊಯ್ಯಬಹುದು. ಗಂಜಿ ಉಣ್ಣಕ್ಕೆ ಬಾರೋ" ಎಂದು ಕೂಗುತ್ತಿದ್ದನು ಸಿಂಗಪ್ಪ.

"ಎಂಥ ಬೆಂಕಿ, ವುಯ್ಯೋ, ಇಬರ ಸಾವು!" ಎಂದು ಅಲ್ಲೀ ಬೇರೆ ಎರಡು ಗೌಡರು ಮಾತಾಡುತ್ತಾ ಸಾಗಿದರು.

"ಹೀಗೆ ಮಾಡುವುದೇ, ಹೀಗೆ ಮಾಡುವುದೇ?" ಮರಗಳು ಪ್ರಶ್ನಿಸುತ್ತವೆ. ನೆಲದ ಮೇಲೆ ಬಿದ್ದಿದ್ದ ತರಗೆಲೆಗಳು ಗಾಳಿಯಿಂದ ದಿಕ್ಕಾಪಾಲಾಗಿ ಚೆದರಿ "ನಮ್ಮನ್ನು ಸುಡಬೇಡ, ಹೀಗೆ ಮಾಡುವುದೇ?" ಎನ್ನುತ್ತವೆ. "ಹೀಗೆ ಮಾಡುವುದೇ, ಹೀಗೆ ಮಾಡುವುದೇ?" ಕಲ್ಲಾರಿಗಳು ಅವನನ್ನು ಸುತ್ತಲಿಂದಲೂ ಇರಿಯುತ್ತಿದ್ದುವು. "ಈ ಕಡೆ ಬರಬೇಡ, ಈ ಕಡೆ ಬರಬೇಡ" ಎಂದು ಪ್ರತಿಯೊಂದು ವಸ್ತುವೂ ಮೈ ಮುದುರುತ್ತಿದ್ದಿತು. ಬೀಳುತ್ತ, ದಿಕ್ಕುಗುರಿಯಿಲ್ಲದೇ "ಹೀಗೆ ಮಾಡುವುದೇ?" ಎಂಬ ಪ್ರಶ್ನೆಯು ಕೇಳದ ಶಾಂತನಿಲಯದ ಕಡೆಗೆ ಧಾವಿಸಿದನು. ಆದರೆ "ಹೀಗೆ ಮಾಡುವುದೇ?" ಮಾತ್ರ ಅವನ ಬೆನ್ನ ಹಿಡಿದೇ ಇತ್ತು. ರಾತ್ರಿಯಾಯಿತು, ದಣಿವಿನಿಂದ, ಹಸಿವಿನಿಂದ, ತಾನು ನಡೆಯುತ್ತಿದ್ದ ಹಸುರು ಬಯಲಿನಲ್ಲಿಯೇ ಕುಸಿದುಬಿದ್ದನು. ಅಲ್ಲೇ ಅವನಿಗೆ ಗಾಢನಿದ್ರೆಯು ಹತ್ತಿತು. ಆಗ ಸ್ವಲ್ಪ ಶಾಂತಿ ದೊರೆತಂತಿತ್ತು— ಶಾಂತಿ ಏನು, ಮನಸ್ಸಿನ ಮೇಲೆ ಶ್ರಮದಿಂದಾಗಿ ಒಂದು ಪರೆ ಕವಿದಿತ್ತು.

ಬೆಳಗಿನ ತಂಗಾಳಿಗೆ ಅವನಿಗೆ ಎಚ್ಚರವಾಯಿತು. ಹಸಿವು ವಿಪರೀತವಾಗಿತ್ತು. ಮನಸ್ಸು ಸ್ಥಿಮಿತಕ್ಕೆ ಬಂದಿತ್ತು. "ಹೀಗೆ ಮಾಡುವುದೇ?" ಆಗ ಇರಿಯುತ್ತಿದ್ದಿಲ್ಲ. ಹಿಂದೆ ನಡಿದುದನ್ನೆಲ್ಲ ಅವನು ಕುಳಿತಲ್ಲಿಯೇ ಚಿಂತಿಸಿದನು: "....ತಿಮ್ಮಯ್ಯನಿಗೆ ನನ್ನಿಂದಾಗಿ ಐನೂರು ರೂಪಾಯಿಯಾದರೂ ಲುಕ್ಸಾನಾಗಿದೆ. ನನಗೆ ದೇವರು ಆ ಕೆಟ್ಟ ಯೋಚನೆ ಯಾಕೆ ಕೊಟ್ಟನೋ? ಈಗ ನಾನು ಹೇಗಾದರೂ ಮಾಡಿ ಇದನ್ನು ತೀರಿಸಲೇ ಬೇಕು. ನಾನು ಆ ಹಣ ಸಂಪಾದಿಸಿಯೇ ಮನೆಗೆ ಹೋಗೋದು....ಆದರೆ ನನ್ನ ಮದುವೆ.... ಮದುವೆಗೆ ಮಣ್ಣು ಹಾಕ! ನಾನು ಐನೂರು ರೂಪಾಯಿ ಸಂಪಾದಿಸಿಯೇ ಮನೆಗೆ ಹೋಗೋದು." ಎಂದು ನಿಶ್ಚೈಸಿ ಎದ್ದನು.

ಸೂರ್ಯನನ್ನು ಮುಚ್ಚಿದ್ದ ಒಂದು ತೆಳುಮೋಡವು ದೂರ ಸರಿಯಿತು, ಸೂರ್ಯನು ನವಪ್ರಭೆಯಿಂದ ಪ್ರಜ್ವಲಿಸಿದನು. ಹಸುರು ಹುಲ್ಲಿನ ಸಮುದ್ರದ ಮೇಲೆ "ಬಾಲದಿನೇಶನ ಕೋಮಲ ಲೀಲೆ" ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿತ್ತು. ನಾನಾವಿಧದ ಮಣಿಗಳ ಬಣ್ಣದಲ್ಲಿ ರಂಜಿಸುತ್ತಿದ್ದ ಇಬ್ಬನಿಗಳು ಆಗ ಆರುತ್ತಿದ್ದುವು. ಒಂದು ತಂಪು, ಒಂದು ಮೃದುವಾದ ಘರಿಮಳ, ಒಂದು ಸಂತೋಷ ಅಲ್ಲೆಲ್ಲ ತುಂಬಿ ಹರಿಯುತ್ತಿದ್ದಿತು. ಬೆಳಕಿನ ಕಡಲಿನಲ್ಲಿ ಮಿಂದು, ಚೈತನ್ಯದ ಮಡಿಬಟ್ಟೆಯನ್ನು ಉಟ್ಟು, ಪ್ರಕೃತಿಯು ದಿನಕರನನ್ನು ಆರಾಧಿಸುತ್ತಿದ್ದಳು. ದನಕಾಯುವ ಹುಡುಗರ "ಓಪ್ಪೋಪ್ಪೋ ಹೊಯ್ ಹೇ...." ಕೂಗು ಕೇಳುತ್ತಿದ್ದಿತು. ದನಗಳ ಕುತ್ತಿಗೆಗೆ ಕಟ್ಟಿದ ತಟ್ಟಿಗಳು (ಮರದಿಂದ ಮಾಡಿದ ಒಂದು ವಿಧವಾದ ಗಂಟೆ) "ತಟಪಟ" ಎಂದು, ಅವು ಅತ್ತಿತ್ತ ಓಡುವಾಗ ಶಬ್ದ ಮಾಡುತ್ತಿದ್ದುವು. ಕರುಗಳ ಕೊರಳಿನ ಕಿರುಗಂಟೆಗಳ ಕಿಂಕಿಣಿ ನಾದವು ಈ ಸಂಗೀತಕ್ಕೆ ಶ್ರುತಿಯೀಯುತ್ತಿದ್ದಿತು.

ಬೆಳ್ಯಪ್ಪನು ತನ್ನ ದೃಢ ನಿಶ್ಚಯವನ್ನು ನೆರವೇರಿಸಲು ಮುಂದೆ ನಡೆದೇ ಇದ್ದನು!

ಖಿಷಗ್ರಸ್ತ ಆಯುರ್ವೇದ ವಿದ್ವಾನ್ ಜಿ. ವಿ. ಪಂಡಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾಗುವುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಆದರ್ಶ ದಿನಪತ್ರಿಕೆ

ಅರ್ಜೆಂಟೈನಾದ 'ಲಾ ಪ್ರೆನ್ಸಾ'

(ಪತ್ರಿಕಾ ವ್ಯವಸಾಯಿಗಳಿಗೊಂದು ಪಾಠ)

ಡಿ. ಸುರೇಂದ್ರ ದಾನಿ, ಹುಬ್ಬಳ್ಳಿ

★

ಲೋಕಕಲ್ಯಾಣಬುದ್ಧಿಯಿಂದ ಕಾರ್ಯಮಾಡುವ ಪತ್ರಿಕೆ ತನ್ನ ಲೋಕಪ್ರೀತಿಯ ಬೆಂಬಲದಿಂದ, ಬಲಿಷ್ಠವಾದ ಸರಕಾರವನ್ನೂ ಎದುರಿಸಿ ಹೇಗೆ ಹೋರಾಡುವುದೆಂಬುದನ್ನು ಜಗತ್ತಿಗೆ ತೋರಿಸಿಬಿಟ್ಟಿದೆ 'ಲಾ ಪ್ರೆನ್ಸಾ'

ಬ್ಯೂನೋಸ್ ಏಅರ್ಸ್‌ನಲ್ಲಿಯ 'ಲಾ ಪ್ರೆನ್ಸಾ' ಎಂಬ ದಿನಪತ್ರಿಕೆಯ ಮೇಲೆ, ಅರ್ಜೆಂಟೈನಾದ ಅಧ್ಯಕ್ಷರಾದ **ಪೆರಾನ**ರು, ಈ ಎರಡು ವರುಷಗಳ ಹಿಂದೆ ತುಂಬ ಸುಸಂಘಟಿತವಾಗಿ ವಿರೋಧ ಪ್ರಚಾರವನ್ನು ಕೈಕೊಂಡರು. ಒಂದು ವರುಷದ ವರೆಗೆ ಬೇರೆ ಬೇರೆ ವಿಧದ ವಾಮಮಾರ್ಗಗಳನ್ನು ಪ್ರಯೋಗಿಸಿ, ೧೯೪೯ರ ಕೊನೆಯ ಸುಮಾರಿಗೆ ಆ ಪತ್ರಿಕೆಗೆ ಪೂರಯಿಸಲಾಗುತ್ತಿದ್ದ ಕಾಗದದ ಪ್ರಮಾಣವನ್ನು ಕಡಿಮೆಮಾಡಿದರು. ತತ್ಪರಿಣಾಮವಾಗಿ ಆ ಪತ್ರಿಕೆಯ ಆಕಾರವು ಅರ್ಧಕ್ಕಿಳಿಯಬೇಕಾಯಿತು. ಮತ್ತು ಜಾಹೀರಾತುಗಳಿಂದ ಸಂಪಾದಿಸುತ್ತಿದ್ದ ವಾರ್ಷಿಕ ಆದಾಯದಲ್ಲಿ ೧೫ ಲಕ್ಷ ಡಾಲರುಗಳಷ್ಟು ಕಡಿಮೆಯಾಯಿತು. ಆದರೆ 'ಲಾ ಪ್ರೆನ್ಸಾ' ಮಾತ್ರ ಅಧ್ಯಕ್ಷರ ಸರ್ವಾಧಿಕಾರೀ ಧೋರಣೆಗೆ ಸೊಪ್ಪು ಹಾಕದೆ, ಪತ್ರಿಕಾ ಸ್ವಾತಂತ್ರ್ಯದ ಪಕ್ಷವನ್ನು ಮಂಡಿಸುತ್ತ, ತನ್ನ ಪೂರ್ವದ ನೀತಿಯಂತೆ ಮುಂದುವರಿಯಲು ನಿರ್ಧರಿಸಿದೆ.

ಸಿನಾರ್ ಪೆರಾನ್‌ರಲ್ಲಿ ಶಕ್ತಿ-ಸಾಮರ್ಥ್ಯ ಮತ್ತು ಚಾತುರ್ಯಗಳ ಅಧಾವವಿದೆಯೆಂಬುದು ಬಹುದಿನಗಳಿಂದಲೂ ವಿದಿತ ಮಾತು. ಅವರು 'ಲಾ ಪ್ರೆನ್ಸಾ'ದ ಮೇಲೆ ಬಲು ಉಗ್ರವಾದ ಮತ್ತು ಹಾಸ್ಯಾಸ್ಪದವಾದ ಪ್ರಚಾರವನ್ನು ಕೈಕೊಂಡರು. "ಅರ್ಜೆಂಟೈನಾದ ಕಾರ್ಮಿಕರ ಶತ್ರುವಾದ 'ಲಾ ಪ್ರೆನ್ಸಾ'ವನ್ನು ಕೊಳ್ಳಬೇಡಿರಿ." "ಲಾ ಪ್ರೆನ್ಸಾವನ್ನು ಓದಬೇಡಿರಿ" ಎಂಬ ದೊಡ್ಡ ಅಕ್ಷರಗಳ ಭಿತ್ತಿಪತ್ರಿಕೆಗಳು ಊರ ಪ್ರಮುಖಸ್ಥಳಗಳಲ್ಲೆಲ್ಲ ಅಂಟಿಸಲ್ಪಟ್ಟವು. 'ಲಾ ಪ್ರೆನ್ಸಾ'ವನ್ನು ಮಾರುತ್ತಿದ್ದ ಹುಡುಗರನ್ನು ಕರೆದು, ಅವರು ಆ ಪತ್ರಿಕೆಯನ್ನು ಮಾರದಂತೆ ಅನೇಕ ವಿಧದಿಂದ ಅವರಿಗೆ ಒತ್ತಾಯಮಾಡಲಾಯಿತು. 'ಲಾ ಪ್ರೆನ್ಸಾ' ಪತ್ರಿಕೆಯವರು ೫೦ ವರುಷ ಪರಿಶ್ರಮದಿಂದ ಪ್ರಸ್ಥಾಪಿಸಿದ್ದ—ಪತ್ರಿಕೆಗಳನ್ನು ಮನೆಮನೆಗೆ ಹಂಚುವ—ಪದ್ಧತಿಯನ್ನು ವಿಸ್ಮೃತಿಗೊಳಿಸಲು ಸಹ ಪ್ರಯತ್ನಿಸಲಾಯಿತು. ರಾಷ್ಟ್ರದ ಬಾನುಲಿಯಲ್ಲಿ "ಸುಳ್ಳು ಪ್ರಚಾರಮಾಡುವವರಿಗೆ (ಲಾ ಪ್ರೆನ್ಸಾಕ್ಕೆ) ತಕ್ಕ ಶಿಕ್ಷೆ ದೊರೆಯಲೇಬೇಕು. ನಾವವರಿಗೆ ವಿಧಿಸುವ ಶಿಕ್ಷೆ ಎಂದರೆ ಆ ಪತ್ರಿಕೆಯನ್ನು ಕೊಳ್ಳದಿರುವುದು." ಎಂದು ಮುಂತಾಗಿ ಸಾರುವುದು ಪ್ರಾರಂಭವಾಯಿತು.

ಈ ರೀತಿ ತಮ್ಮ ಅಧಿಕಾರಸ್ಥಾನದ ಬಲದಿಂದ ಕೈಕೊಂಡ ಪ್ರಚಾರದ ಪರಿಣಾಮವಾಗಿ, ಆ ಪತ್ರಿಕೆಯು ಬಂದಾಗುವುದು ನಿಶ್ಚಿತವೆಂಬ ಆತ್ಮವಿಶ್ವಾಸವು ಅಧ್ಯಕ್ಷರಲ್ಲಿ ಉಂಟಾಯಿತು. ಆದರೆ ವಸ್ತುಸ್ಥಿತಿಯು ವಿಪರೀತವಾಗಿ ಪರಿಣಮಿಸಿದ್ದನ್ನು ಕಂಡು, ಸಿನಾರ್ ಪೆರಾನರು ತಮ್ಮ ಜೀವನದಲ್ಲಿಯೇ ಅತ್ಯಂತ ದೊಡ್ಡ ಆಘಾತಕ್ಕೆ ಬಲಿಯಾದರು. 'ಲಾ ಪ್ರೆನ್ಸಾ'ದ ಪ್ರಸಾರವು ಕಡಿಮೆಯಾಗುವುದರ ಬದಲು, ದಿನಪತ್ರಿಕೆಯ ಪ್ರಸಾರವು ೩ ಲಕ್ಷ ೮೦ ಸಾವಿರಕ್ಕೂ ರವಿವಾರ ಸಂಚಿಕೆಯ ಪ್ರಸಾರವು ೫ ಲಕ್ಷ ೭ ಸಾವಿರಕ್ಕೂ ಏರಿತು. ೧೫೫ ಕಾಲಮ್ಮುಗಳಷ್ಟಿದ್ದ ಜಾಹೀರಾತು ೧೮೦ ಕಾಲಮ್ಮುಗಳಿಗೆ ಏರಿತಲ್ಲದೆ, ಅನೇಕ ಜಾಹೀರಾತುದಾರರು ತಮ್ಮ ಜಾಹೀರಾತುಗಳಿಗಾಗಿ ಸ್ಥಳಗಳನ್ನು ಮುಂಗಡ ಕಾದಿರಿಸಹತ್ತಿದರು.

'ಲಾ ಪ್ರೆನ್ಸಾ'ದ ವೈಶಿಷ್ಟ್ಯ

ಸರಕಾರದ ಬಹಿರಂಗ ವಿರೋಧ ಪ್ರಚಾರವನ್ನು ಲೆಕ್ಕಿಸದೆ 'ಲಾ ಪ್ರೆನ್ಸಾ'ಪತ್ರಿಕೆಯು ಇಷ್ಟೊಂದು ಜನಪ್ರಿಯವಾಗಲಿಕ್ಕೆ, ಅದೊಂದು ಅಸಾಮಾನ್ಯ ತರಗತಿಯ ವೃತ್ತಪತ್ರಿಕೆಯೆಂಬುದೇ ಕಾರಣ. ಸಾಮಾನ್ಯ ವೃತ್ತಪತ್ರಿಕೆಗಳಿಗಿಂತ ಹೆಚ್ಚಿನ ವೈಶಿಷ್ಟ್ಯಗಳು ಅದರಲ್ಲಿವೆ. ಅದು ಅರ್ಜೆಂಟೈನಾದ ಸಾಮಾನ್ಯ ಮನುಷ್ಯನಿಗೆ ತನ್ನ ಸಂಕಟ-ಸಂಕಷ್ಟಗಳನ್ನು ದೂರು ಮಾಡಿಕೊಳ್ಳಲು ನೆರವು ನೀಡುವ ಮಾತೃಸಂಸ್ಥೆಯಾಗಿದೆ. ಉದಾಹರಣೆಗೆಂದು ಅದರ ಕೆಲವು ಚಟುವಟಿಕೆಗಳನ್ನು ಇಲ್ಲಿ ಕೊಡಬಹುದು.

'ಲಾ ಪ್ರೆನ್ಸಾ'ವನ್ನು ನಡೆಯಿಸುತ್ತಿರುವ ಸಂಸ್ಥೆಯವರು, ಎಲ್ಲ ತರದ ಔಷಧ ಮತ್ತು ಶಸ್ತ್ರಚಿಕಿತ್ಸಕರನ್ನು ಇಟ್ಟಿದ್ದಾರೆ. ನಿಮಗೆ ಕರುಳು ಬೇನೆಯಾಗಲಿ, ಹೊಟ್ಟೆನೋವಾಗಲಿ, ಹಲ್ಲುಬೇನೆಯುಂಟಾಗಲಿ, ಇತರ ಯಾವ ಬೇನೆ-ಬೇಸರಿಕೆಯುಂಟಾಗಲಿ, ನೀವು ಈ ಪತ್ರಿಕೆಯವರಿಗೆ ಬರೆದರೆ ಸಾಕು; ನಿಮಗೆ ಕೂಡಲೆ ಶುಶ್ರೂಷೆಯ ವ್ಯವಸ್ಥೆಯಾಗುವುದು. 'ಲಾ ಪ್ರೆನ್ಸಾ' ಸಂಸ್ಥೆಯ ಮುಖಾಂತರ ಶುಶ್ರೂಷೆ ಸಲ್ಲಿಸುವುದೆಂದರೆ—ಆ ನಾಡಿನಲ್ಲಿಯ ಪ್ರಸಿದ್ಧ ಡಾಕ್ಟರರು ಸಹ—ಹೆಮ್ಮೆಯ ವಿಷಯವೆಂದು ತಿಳಿಯುತ್ತಾರೆ. "ನಾವು ಪ್ರತಿ ತಿಂಗಳೂ ೩ ಸಾವಿರ ರೋಗಿಗಳ ಶುಶ್ರೂಷೆ ಮಾಡುತ್ತೇವೆ. ಇದಕ್ಕಾವ ವೆಚ್ಚವನ್ನೂ ಕೊಡಬೇಕಾಗಿಲ್ಲ. ಬಡವರು-ಬಲ್ಲಿದರು, ನಮ್ಮ ಪತ್ರಿಕೆಯ ವಾಜಕರು-ವಾಜಕರಲ್ಲದವರು, ಅರ್ಜೆಂಟೈನಾದವರು-

ಹೊರನಾಡಿನವರು ಮುಂತಾದ ಯಾವ ಭೇದಭಾವಗಳೂ ಇಲ್ಲ." ಎಂದು ಆ ಸಂಸ್ಥೆಯ ಒರ್ವ ಅಧಿಕಾರಿಯು ಹೇಳಿದನು. 'ಲಾ ಪ್ರೆನ್ಸಾ' ನವರು ವೈದ್ಯಕ ಸಹಾಯವನ್ನಷ್ಟೇ ಅಲ್ಲದೆ, ಕೇಳಿದವರಿಗೆ ಕಾಯದೆ ಸಲಹೆಯನ್ನು ಸಹ ಕೊಡುತ್ತಾರೆ. ಈ ಸಂಸ್ಥೆಯಿಂದ ನೇಮಿಸಲ್ಪಟ್ಟ ವಕೀಲರು ಪ್ರತಿದಿನವೂ ಸುಮಾರು ೨೦ ಜನರಿಗೆ ಕಾಯದೆ ನೆರವನ್ನು ನೀಡುತ್ತಾರೆ. ಶಿಕ್ಷಣದ ಸಹಾಯವನ್ನು ಪೇಕ್ಷಿಸುವವರಿಗಾಗಿ ಜಗದ್ವಿಖ್ಯಾತ ಪಂಡಿತರ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. 'ಲಾ ಪ್ರೆನ್ಸಾ'ದ ಪುಕ್ಕಟೆ ವಾಚನಾಲಯದಿಂದ ನೀವು ಬೇಕಾದಷ್ಟು ಪುಸ್ತಕಗಳನ್ನು ಒಯ್ಯಬಹುದು. ನೀವು ಯಾವುದಾದರೂ ಸಭೆ-ಸಮ್ಮೇಲನಗಳನ್ನು ಸೇರಿಸಬೇಕಾದರೆ 'ಲಾ ಪ್ರೆನ್ಸಾ'ದ ಅತ್ಯಾಧುನಿಕ ರೀತಿಯಲ್ಲಿ ರಚಿಸಲ್ಪಟ್ಟ ಸಭಾಭವನವು ನಿಮಗೆ ದೊರೆಯುವುದು.

ಗೃಹಿಣಿಯರಿಗೆ ಫೇಸ್ ಪೌಡರ್ ಅಥವಾ ಡಬ್ಬಿಗಳಲ್ಲಿ ತುಂಬಿದ ಸೂಪ್ ಮೊದಲಾದ ಯಾವ ಪದಾರ್ಥಗಳ ಬಗ್ಗೆ ಸಂಶಯ ಬಂದರೂ, ಅವುಗಳನ್ನು 'ಲಾ ಪ್ರೆನ್ಸಾ'ದ ಲೆಬೊರೆಟರಿಗೆ ಒಯ್ದು ಅವುಗಳ ಗುಣಾವಗುಣಗಳನ್ನು ಪುಕ್ಕಟೆಯಾಗಿ ಪರೀಕ್ಷಿಸಿಕೊಳ್ಳಬಹುದು. ತಮ್ಮ ಮಕ್ಕಳಿಗೆ ಸಂಗೀತದಲ್ಲಿ ಅಭಿರುಚಿಯಿದೆಯೆಂದು ಹೇಳಿದರೆ, ಆ ಮಕ್ಕಳಿಗೆ ಪುಕ್ಕಟೆ ಸಂಗೀತ ಶಿಕ್ಷಣದ ಏರ್ಪಾಡು ಮಾಡಲಾಗುವುದು. 'ಲಾ ಪ್ರೆನ್ಸಾ'ದವರು ನಡೆಸುತ್ತಿರುವ ಇ ವರುಷಗಳ ಸಂಗೀತ ಶಿಕ್ಷಣಕ್ರಮದಲ್ಲಿ ಪ್ರತಿವರುಷ ಸುಮಾರು ೬೦ ವಿದ್ಯಾರ್ಥಿಗಳು ಪದವೀಧರರಾಗಿ ಹೊರಬೀಳುತ್ತಾರೆ. ಹೆಚ್ಚಿನ ಶಿಕ್ಷಣಕ್ಕೆ ಯೋಗ್ಯರೆಂದು ಕಂಡುಬಂದವರನ್ನು ಯುರೋಪ ಅಥವಾ ಉತ್ತರ ಅಮೇರಿಕೆಗಳಿಗೆ ಉಚ್ಚಶಿಕ್ಷಣಕ್ಕಾಗಿ ಕಳಿಸಿಕೊಡಲಾಗುವುದು.

ರೈತರಿಗೆ ನೆರವು ನೀಡುವ ಏರ್ಪಾಡು

ಬ್ಯೂನೋಸ್ ಏರ್ಸ್‌ನಿಂದ ನೂರಾರು ಮೈಲು ದೂರದಲ್ಲಿರುವ ರೈತರು ಸಹ ತಮ್ಮ ಭೂಮಿಯ ಮಣ್ಣನ್ನು ವಿಭಜನೆಗಾಗಿ, 'ಲಾಪ್ರೆನ್ಸಾ'ದ ಸಂಶೋಧನಶಾಲೆಗೆ ಕಳಿಸಿ ಸಲಹೆಪಡೆಯುತ್ತಾರೆ. ಕುದುರೆಗೆ ಬೇನೆ ಬರಲಿ, ದನಗಳಿಗೆ ರೋಗ ಬರಲಿ, ರೈತರು 'ಲಾ ಪ್ರೆನ್ಸಾ'ದ ಕಡೆಗೇ ಧಾವಿಸುತ್ತಾರೆ. ಆರ್ಜೆಂಟೈನಾದ ಗೋದಿಯ ಹೊಲಗಳಲ್ಲಿ ಕೆಲಸಮಾಡಲು ಹಡಗುಗಟ್ಟಲೆ ಜನರು ವಲಸೆ ಬಂದಾಗಿನಿಂದಲೂ ರೈತ-ಲಾಪ್ರೆನ್ಸಾರ ನಡುವಿನ ಸಂಬಂಧ ಇದೇ ರೀತಿ ಬೆಳೆದುಬಂದಿದೆ. ರೈತರು ನಿರುದ್ಯೋಗಿಗಳಾದಾಗ ಅವರಿಗೆ ಕೆಲಸಕೊಡಿಸುವುದಕ್ಕಾಗಿ 'ಲಾ ಪ್ರೆನ್ಸಾ' ಪತ್ರಿಕೆಯಲ್ಲಿಯ ಕೆಲವು ಕಾಲಮ್ಮುಗಳನ್ನು ಮೀಸಲಾಗಿಡಲಾಗಿತ್ತು. ಹೊಸಬರು ತಮ್ಮ ವಿಳಾಸಕ್ಕಾಗಿ 'ಲಾ ಪ್ರೆನ್ಸಾ' ಕಚೇರಿಯ ವಿಳಾಸವನ್ನು ಪಯೋಗಿಸಬಹುದೆಂದು ಪ್ರಸಿದ್ಧಿಪಡಿಸಲಾಗಿತ್ತು. ವಲಸೆಬಂದವರು ರೈತರಾಗಿ, ಜಮೀನುದಾರರಾಗಿ ದಿನದಿನಕ್ಕೂ ಧನಾಢ್ಯರಾದಂತೆ, ಮೊದಲು ಸ್ವಯಂಕ್ರದಿಂದ ಅಚ್ಚಾಗುತ್ತಿದ್ದ ಎರಡು ಪುಟಗಳ 'ಲಾ ಪ್ರೆನ್ಸಾ' ಪತ್ರಿಕೆಯು, ಉತ್ತಮಶ್ರೇಣಿಯ ವೃತ್ತಪತ್ರಿಕೆಯಾಯಿತು. ರೈತರು ತಮ್ಮ ಹಳೆಯ ಮಿತ್ರನನ್ನು ಮರೆಯಲಿಲ್ಲ. ತಮ್ಮ ಜಾಹೀರಾತುಗಳಿಗಾಗಿ ಯಾವಾಗಲೂ ಈ ಪತ್ರಿಕೆಯನ್ನೇ ಉಪಯೋಗಿಸತೊಡಗಿದರು.

ನೆಚ್ಚದ ಕಡೆಗೆ ಗಮನ ಕೊಡದೆ ಸಾರ್ವಜನಿಕ ಸೇವೆಯನ್ನು ಸಲ್ಲಿಸುವುದು ವೃತ್ತಪತ್ರಿಕೆಯ ಪವಿತ್ರಕರ್ತವ್ಯವೆಂದು 'ಲಾ ಪ್ರೆನ್ಸಾ'ದ ಒಡೆಯರು ದೃಢವಾಗಿ ನಂಬಿದ್ದಾರೆ. ಈ ಉದ್ದೇಶಸಾಧನೆಗೆ ಅನುಕೂಲವಾಗಲೆಂದೇ ಫ್ರೆಂಚ್ ಬೂಡುಗಲ್ಲಿನ ಅತ್ಯುತ್ಕೃಷ್ಟವಾದ ಕಟ್ಟಡವನ್ನೂ ಕಟ್ಟಿಸಿದ್ದಾರೆ.

ಒಡೆಯ-ಕೆಲಸಗಾರರಲ್ಲಿಯ ಸಂಬಂಧ

ಅಮೇರಿಕೆಯ ಪತ್ರಿಕೆಗಳಲ್ಲಿಯ ಸಂಪಾದಕರಲ್ಲಿ ಮತ್ತು ವರದಿಗಾರರಲ್ಲಿ ತಿಕ್ಕಾಟ-ಸಂಘರ್ಷಣೆಗಳುಂಟಾಗುವುದು ನಿತ್ಯದ ಸಂಗತಿ. ಆದರೆ 'ಲಾ ಪ್ರೆನ್ಸಾ'ದ ಸಂಪಾದಕರು ಮತ್ತು ವರದಿಗಾರರು ಇದಕ್ಕೆ ಅಪವಾದವಾಗಿದ್ದಾರೆ. ಧ್ವನಿನಿಸ್ತಂಭಕ (Sound proof) ಕಚೇರಿಗಳು; ಹವಮಾಡಿದ ನಯವಾದ ತೊಗಲಿನ ಸುಖಾಸನಗಳು; ಚೀಟಿಗಳನ್ನು ಗಂಭೀರವಾದ ಶೀವಿಯಿಂದ ತರುಬರುವ ಪೇಬೆಗಳು; ಈ ರೀತಿ ಎಲ್ಲ ವ್ಯವಸ್ಥೆಯೂ ಬಲು ಅಚ್ಚುಕಟ್ಟಾಗಿದೆ.

ಕೆಲಸಗಾರರಿಗೆ ತೊಂದರೆಯುಂಟಾಗಬಾರದೆಂದು, ಹೆಚ್ಚು ಶಕ್ತಿಯ ಛಾಪಖಾನೆಗಳನ್ನು, ಸಂಪಾದಕ ಮಂಡಳದ ಕೋಣೆಯಿಂದ ಒಂದು ಮೈಲು ದೂರದ ಮೇಲೆ ಸ್ಥಾಪಿಸಲಾಗಿದೆ. ಈ ಬಗ್ಗೆ 'ಲಾ ಪ್ರೆನ್ಸಾ'ದ ಎಂಜಿನಿಯರರು "ಇದರಿಂದ ನಮಗೆ ಕಾಲವ್ಯಯವೇನೂ ಆಗುವುದಿಲ್ಲ. ಪ್ರತಿಗಳನ್ನು ತರುಬರುವುದಕ್ಕಾಗಿ ಭೂಗರ್ಭ ವಾಹನಗಳಿಗೆಗಳ ಏರ್ಪಾಡಿದೆ." ಎಂದು ಹೇಳಿದರು.

'ಲಾ ಪ್ರೆನ್ಸಾ'ವು ಆದ್ಯಂತ ಒಂದು ಕುಟುಂಬದ ಸೊತ್ತಿದ್ದಂತಿದೆ. ಈಗ ೬೯ ವರುಷಗಳ ಹಿಂದೆ ಜೋಸೆ ಪಾಜ್ ಎಂಬವನು ಇದನ್ನು ಸ್ಥಾಪಿಸಿದನು. ಅನಂತರ ಅವನ ಮಗನಾದ ಇಜೆಕ್ವಿಯೆಲನಿಗೆ ಬಂದಿತು. ಈಗ ೭೧ ವರುಷದ ಮುಪ್ಪಿನವನಾದ ಇಜೆಕ್ವಿಯೆಲನು ತನ್ನ ತಮ್ಮನ ಮಗನಾದ ಆಲ್ಬರ್ಟೋ ಗೈಂಜಾಪಾಜನಿಗೆ ಒಪ್ಪಿಸಿದ್ದಾನೆ. ಒಳ್ಳೇ ಗಂಭೀರಸ್ವಭಾವದ ಈ ನವತರುಣ ಸಂಪಾದಕನು, ಸಾಮಾಜಿಕ ಪ್ರಶ್ನೆಗಳ ಬಗ್ಗೆ ನಿಕಟಸಂಪರ್ಕವುಳ್ಳವನೂ ಸಂಗೀತ ಮತ್ತು ಗೋಲ್ಫ್‌ಗಳಲ್ಲಿ ಅತ್ಯಂತ ಆಸ್ಥೆಯುಳ್ಳವನೂ ಇರುವನೆಂದು ನ್ಯೂಜ್ ರೆವ್ಯೂ ಪತ್ರಿಕೆಯು ಬರೆದಿದೆ.

'ಲಾ ಪ್ರೆನ್ಸಾ'ಜನ್ಮವೆತ್ತಿದಂದಿನಿಂದಲೂ ಪಾಜ್ ಮನೆತನದವರು ತಮ್ಮ ನೌಕರರನ್ನು ಸ್ವಕುಟುಂಬದವರೆಂದೇ ಬಗೆದು, ಅದೇ ಅಂತಃಕರಣ, ಪ್ರೇಮಗಳಿಂದ ಕಾಣುತ್ತಿದ್ದಾರೆ. ಒಬ್ಬ ವರದಿಗಾರನಾಗಲೀ, ಲೀನೋಟೈಪರ್‌ನಾಗಲೀ ಅಕಸ್ಮಾತ್ತಾಗಿ ಮರಣಹೊಂದಿದರೆ, ಅವನ ವಿಧವೆಗೆ ಮೃತಪತಿಯ ಮಾಸಿಕವೇತನದ ಚೆಕ್ಕು ನಿಯಮಿತವಾಗಿ ಅವಳ ಜೀವಮಾನವಿರುವವರೆಗೆ ಬಂದೇ ತೀರುವುದು. ಎಲ್ಲ ಕೆಲಸಗಾರರೂ ತಮ್ಮ ೬೫ನೇ ವಯಸ್ಸಿನಲ್ಲಿ ನಿವೃತ್ತಿಹೊಂದುತ್ತಾರೆ. ಆದರೆ ಅವರ ಸಂಬಳ ಮಾತ್ರ ಅವರ ಜೀವಮಾನವಿರುವವರೆಗೂ ದೊರೆತೇ ದೊರೆಯುತ್ತದೆ.

ಬ್ಯೂನೋಸ್ ಏಐರ್ಸ್‌ದ ಒರ್ವ ಪ್ರಸಿದ್ಧ ಪತ್ರಿಕೋದ್ಯಮಿಯು ಈ ರೀತಿ ಬರೆದಿರುತ್ತಾನೆ: "ಲಾ ಪ್ರೆನ್ಸಾದಲ್ಲಿ ಒಮ್ಮೆ ಕೆಲಸ ಪ್ರಾರಂಭಿಸಿದವನನ್ನು ಎಂದಿಗೂ ಹೊರಗೆಹಾಕುವುದಿಲ್ಲ. ಕಚೇರಿಯಲ್ಲಿಯ ಒಬ್ಬ ಕಾರಕೂನನು ಒಮ್ಮೆ ಹಣ ಕದಿಯುತ್ತಿರುವುದು ಮೇಲಧಿಕಾರಿಗಳ ದೃಷ್ಟಿಪಥಕ್ಕೆ ಬಿದ್ದಿತು. ಆಗ ಅವರು ಅವನನ್ನು ಪೋಲೀಸರ ವಶಕ್ಕೆ ಒಪ್ಪಿಸುವುದರ ಬದಲು, ಹಣದ ವ್ಯವಹಾರದ ಸಂಪರ್ಕ ಬರದ ಬೇರೊಂದು ಶಾಖೆಗೆ ವರ್ಗವಾಡಿದರು. ಇದು ಈಗ ೧೦ ವರುಷಗಳ ಹಿಂದೆ ನಡೆದ ಮಾತು. ಇನ್ನೂ ಅವನು ಅಲ್ಲಿಯೇ ಇದ್ದಾನೆ."

ಆಕರ್ಷಣರಹಿತ ಪತ್ರಿಕೆ

ಒರ್ವ ಸಾಮಾನ್ಯ ಅಮೇರಿಕನ್ನನು 'ಲಾ ಪ್ರೆನ್ಸಾ' ಪತ್ರಿಕೆಯನ್ನು ನೋಡಲು ಸಲ ನೋಡಿದಾಗ, ಅದು ಇಷ್ಟೊಂದು ಲೋಕಪ್ರಿಯವೆಂತಾಯಿತೆಂದು ಆಶ್ಚರ್ಯಪಡುತ್ತಾನೆ. ಅದರ ಒಡೆಯರು ಪ್ರತಿ ವರುಷವೂ ನಿರಾಯಾಸವಾಗಿ ೨೦ ಲಕ್ಷ ಡಾಲರು ಲಾಭವನ್ನು ಹೇಗೆ ಸಂಪಾದಿಸುವರೆಂಬುದು ಅದಕ್ಕೂ ಹೆಚ್ಚು ಆಶ್ಚರ್ಯಕ್ಕೆ ಕಾರಣವಾಗಿದೆ. ಅಮೇರಿಕನ್ ಪತ್ರಿಕೆಗಳ ಮಟ್ಟದಿಂದ ಅಳೆದು ನೋಡಿದರೆ 'ಲಾ ಪ್ರೆನ್ಸಾ' ಪತ್ರಿಕೆಯು ಅಷ್ಟೊಂದು ಆಕರ್ಷಕವಾಗಿರುವುದಿಲ್ಲ. ೩೫ ಪುಟಗಳಷ್ಟು ಬರೀ ಜಾಹೀರಾತುಗಳಿಂದಲೇ ತುಂಬಿರುತ್ತದೆ. ಗುರುವಾರ ಮತ್ತು ರವಿವಾರ ದಿವಸ ಈ ಜಾಹೀರಾತಿನ ಪುಟಗಳ ಸಂಖ್ಯೆ ೫೦ಕ್ಕೇರುತ್ತದೆ. ಮೊದಲಿನ ನಾಲ್ಕು ಪುಟಗಳಲ್ಲಂತೂ ಅತಿ ಚಿಕ್ಕ ಅಕ್ಷರಗಳಲ್ಲಿ ಚಿಕ್ಕ ಪುಟ್ಟ ಜಾಹೀರಾತುಗಳನ್ನೇ ತುಂಬಲಾಗಿರುತ್ತದೆ. 'ಲಾ ಪ್ರೆನ್ಸಾ'ದ ಮುಖ್ಯ ಆದಾಯವೆಲ್ಲ ಈ ಜಾಹೀರಾತುಗಳಿಂದಲೇ ಬರುವುದೆಂಬದು ನಿಜ.

ಹಣದಾಶೆಗೆ ಬಲಿಬೀಳದ ಸಂಪಾದಕರು

ಹಣದಾಶೆಗೆ ಬಲಿಬೀಳದೆ ಕೆಲಸಮಾಡುವವರಲ್ಲಿ ಸಾಜ್ ಮನೆತನದವರನ್ನು ಸರಿಗಟ್ಟುವವರು ವಿರಳ. ಯಾವುದೇ ಆರ್ಥಿಕ ವೃತ್ತವು ವೈಯಕ್ತಿಕ ಹಿತಸಂಬಂಧಗಳನ್ನೊಳಗೊಂಡಿರುವುದೆಂದು ಸಂಶಯ ಬಂದ ಕೂಡಲೆ, ಪ್ರಕಾಶಕರು ತಾವು ಯಾವುದೇ ಆರ್ಥಿಕ ಸಂಸ್ಥೆ-ವ್ಯವಹಾರಗಳಲ್ಲಿ ಹಣ ತೊಡಗಿಸಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಾರೆ. ಯಾವುದೇ ರಾಜಕೀಯ ಪಕ್ಷ-ಪಂಗಡಗಳ ಕಚೇರಿಗೆ ಪತ್ರಿಕೆಯನ್ನು ಪುಕ್ಕಟೆಯಾಗಿ ಕೊಡಕೂಡದೆಂದು ಅವರು ಬಹಳ ದಿನಗಳ ಹಿಂದೆಯೇ ನಿರ್ಧರಿಸಿದ್ದಾರೆ. ತಾವು ಜಾಹೀರಾತು ಕೊಡುವ ನೆವದಿಂದ, ಸರಕಾರದವರು ಒಂದಿಲ್ಲೊಂದು ರೀತಿಯಲ್ಲಿ ಪತ್ರಿಕೆಯ ಮೇಲೆ ತಮ್ಮ ಖರ್ಚಸ್ಸನ್ನು ಹೇರಬಹುದೆಂಬ ಮುಂಜಾಗ್ರತೆಯಿಂದ **'ಲಾ ಪ್ರೆನ್ಸಾ'ದವರು ಸರಕಾರೀ ಜಾಹೀರಾತುಗಳನ್ನೆಂದೂ ಸ್ವೀಕರಿಸುವುದಿಲ್ಲ.**

'ಲಾ ಪ್ರೆನ್ಸಾ'ವು ತನ್ನ ಈ ಪಾವಿತ್ರ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ಹೆಣಗಾಡಿದ ಅನೇಕ ಘಟನೆಗಳುಂಟು. ಇವರ ಹಿಂದಿನ ಸಂಪಾದಕ ಮತ್ತು ಪ್ರಕಾಶಕರಾಗಿದ್ದ ಡಾನ್ ಇಜಿಕ್ವೀಯೆಲರು ಯಾವುದೇ ರಾಜಕೀಯ ಅಥವಾ ತತ್ಸಂಬಂಧದ ಸಭೆಗಳಿಗೆ ಹೋಗುತ್ತಿರಲಿಲ್ಲ. ಅಮೇರಿಕೆಯಲ್ಲಿಯ ಒಂದು ದೊಡ್ಡ ಕಂಪನಿಯವರು 'ಲಾ ಪ್ರೆನ್ಸಾ'ಕ್ಕೆ ತಮ್ಮ ಜಾಹೀರಾತನ್ನು ಕಳಿಸಿದರು. ಆದರೆ ಆ ಕಂಪನಿಯವರು ಉತ್ಪಾದಿಸುತ್ತಿದ್ದ ಪದಾರ್ಥವು (chewing gum) ಆರ್ಜೆಂಟೈನಾದವರಿಗೆ ಹಿತಕರವೋ ಅಲ್ಲವೋ ಎಂಬುದನ್ನು ಒಳ್ಳೇ ದೀರ್ಘವಾಗಿ ಚರ್ಚಿಸಿದನಂತರ, ಅವನ್ನು ಸ್ವೀಕರಿಸಲಾಯಿತು. ಕೋಟ್ಯಧೀಶರ ಒಂದು ಕಂಪನಿಯ ವಿರುದ್ಧ 'ಲಾ ಪ್ರೆನ್ಸಾ'ವು ಅನೇಕ ಉಗ್ರಸ್ವರೂಪದ ಅಗ್ರಲೇಖಗಳನ್ನು ಬರೆದ ಸಂಗತಿಯನ್ನು ಪತ್ರಿಕೆಯ ಮೂಲಾಟಗಾರರು ಇನ್ನೂ ಹೇಳುತ್ತಾರೆ. ಈ ಆರೋಪಗಳನ್ನು ನಿರಾಕರಿಸುವುದಕ್ಕಾಗಿ ಆ ಕಂಪನಿಯ ಅಧ್ಯಕ್ಷನು, ಪತ್ರಿಕೆಯಲ್ಲಿ ಎರಡು ಪುಟಗಳಷ್ಟು ಜಾಹೀರಾತು ಕೊಡಬಯಸಿದನು. 'ಲಾ ಪ್ರೆನ್ಸಾ'ದವರು ಆ ಜಾಹೀರಾತನ್ನು ನಿರಾಕರಿಸಿ "ನಿಮಗೆ ಹೇಳಬೇಕಾದದ್ದನ್ನೆಲ್ಲ ಬರೆದು ಕಳಿಸಿರಿ. ಅದನ್ನು ಸುದ್ದಿಯ ಪುಟದಲ್ಲಿ ಪ್ರಮುಖವಾಗಿ ಪ್ರಸಿದ್ಧಿಸಲಾಗುವುದು" ಎಂದು ಬರೆದು ಕಳಿಸಿದರು.

ಘೋರಣ ಸನಾತನವಾದರೂ ಸುದ್ದಿಯಲ್ಲಿ ಪ್ರಥಮ

'ಲಾ ಪ್ರೆನ್ಸಾ'ದ ಹಳೆಯ ಫೈಲುಗಳನ್ನೆಲ್ಲ ತಿರುವಿಹಾಕಿದಲ್ಲಿ, ಅದೊಳ್ಳೇ ಸನಾತನೀಘೋರಣಿಯ ಪತ್ರಿಕೆಯೆಂದು ಕಂಡುಬರುವುದು. ಅದರಲ್ಲಿ ನಗೆಯ ಚುಟುಕಿಗಳ ಸಂಖ್ಯೆ ಕಡಿಮೆ. ಚಿಕ್ಕ ಚಿಕ್ಕ ಶಿರೋನಾಮಗಳು. ರಸಭರಿತವಾದ ವಿವಾಹವಿಚ್ಛೇದನ, ಕೊಲೆ, ಆತ್ಮಹತ್ಯೆ ಮೊದಲಾದುವುಗಳನ್ನೆಂದೂ ಉಪ್ಪು-ಕಾರ ಹಚ್ಚಿ ಬಣ್ಣಿಸುವುದಿಲ್ಲ. ಒಮ್ಮೆ, ಪ್ರೇಮಪ್ರಕರಣದಲ್ಲಿ ಖ್ಯಾತಿಹೊಂದಿದ ಒರ್ವ ವೈಯಾರಿಯ ಕೊಲೆಯನ್ನು, ಈ ಪತ್ರಿಕೆಯು "ಇಂಥಿಂಥವರು ನಿನ್ನೆ ರಾತ್ರಿ ದುರ್ಮರಣಕ್ಕೆ ತುತ್ತಾದರು" ಎಂದು ಮಾತ್ರ ಬರೆದಿತ್ತು.

ಬ್ಯೂನೋಸ್ ಏಐರ್ಸ್ ಪತ್ರಿಕೆಗಳ ಒಂದು ವೈಶಿಷ್ಟ್ಯವೆಂದರೆ: ಅವು ವಿದೇಶೀ ಸುದ್ದಿಗಳನ್ನು ಒಳ್ಳೇ ಪರಿಶ್ರಮ ವಹಿಸಿ ಒಂದೂ ಬಿಡದಂತೆ ಪ್ರಸಿದ್ಧಿಸುತ್ತವೆ. ಸಾಕಷ್ಟು ಕಾಗದ ದೊರೆಯುತ್ತಿದ್ದಾಗ ಈ ಪತ್ರಿಕೆಯು— 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯನ್ನೊಳಗೊಂಡು ಜಗತ್ತಿನಲ್ಲಿಯ ಯಾವುದೇ ಪತ್ರಿಕೆಗಿಂತಲೂ—ಹೆಚ್ಚಿಗೆ ವಿದೇಶೀಯ ಸುದ್ದಿಯನ್ನು ಪ್ರಕಟಿಸುತ್ತಿತ್ತು. ಈ ಪತ್ರಿಕೆಯು ಅನೇಕ ಸುದ್ದಿಗಾರರನ್ನೂ, ಸುದ್ದಿಸಂಸ್ಥೆಗಳನ್ನೂ ವಿಶೇಷ ಲೇಖಕರನ್ನೂ ಇಟ್ಟಿದ್ದರಿಂದಲೇ ಇದು ಸಾಧ್ಯವಾಯಿತು. ಮತ್ತು ಈ ಸ್ವರೂಪದ ಸುಸಂಘಟಿತ ಸಂಸ್ಥೆಯ ಮೂಲಕವೇ 'ಲಾ ಪ್ರೆನ್ಸಾ'ವು, ಇತರ ಪತ್ರಿಕೆಗಳನ್ನು ಸ್ಪರ್ಧಿಸಿ ಸೋಲಿಸುತ್ತದೆ. ಕಳೆದ ಯುದ್ಧದಲ್ಲಿ 'ಗ್ರಾಫ್ ಸ್ಪೀ' ಪತ್ರಿಕೆಯು ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಹೆಣಗುತ್ತಿದ್ದಾಗ 'ಲಾ ಪ್ರೆನ್ಸಾ'ದ ವಿಮಾನವು ಯುದ್ಧರಂಗವನ್ನು ಸುತ್ತಾಡಿ ಭಾವಚಿತ್ರಗಳನ್ನು ಸ್ವೀಕರಿಸುತ್ತಿತ್ತು. ಅಂಟಾರ್ಟಕವನ್ನು ಶೋಧಿಸಲು ಹೋಗಿ ಕಳೆದುಹೋಗಿದ್ದ ಸರ್

ಅರ್ನೆಸ್ಟ್ ಶಾಕಲ್‌ಟನ್‌ನನ್ನು ಹುಡುಕುವ ತಂಡವನ್ನು ಕಳಿಸಿದ್ದು ಈ ಅತ್ಯಾಧುನಿಕ ಪತ್ರಿಕೆಯೇ.

ಆಲ್ಬರ್ಟ್ ಐನ್‌ಸ್ಟೀನರು ಉತ್ತರ ಮತ್ತು ದಕ್ಷಿಣ ಅಮೇರಿಕೆಗಳಲ್ಲಿ ಮೊದಲು ಪ್ರಸಿದ್ಧಿ ಪಡೆದದ್ದು 'ಲಾ ಪ್ರೆನ್ಸಾ'ದ ಮೂಲಕವೆ. 'ಒರ್ವ ಅಜ್ಞಾತ ವಿಜ್ಞಾನಿಯು ಗಣಿತ ಮತ್ತು ಪದಾರ್ಥ ವಿಜ್ಞಾನಗಳ ಬಗ್ಗೆ ಹೊಸ ಹೊಸ ಶೋಧಗಳನ್ನು ನಡೆಯಿಸಿದ್ದಾನೆ' ಎಂದು 'ಲಾ ಪ್ರೆನ್ಸಾ'ದ ಸಂಪಾದಕರು ಬರೆದಿದ್ದರು.

ಇದರಲ್ಲಿಯ ಅಗ್ರಲೇಖಗಳು ಒಳ್ಳೇ ಪರಿಣಾಮಕಾರಿಯಾಗಿದ್ದು 'ಲಾ ಪ್ರೆನ್ಸಾ'ದ ಹೊಡೆತಕ್ಕೆ ಸರಕಾರವೇ ಉರುಳುವುದೆಂದು ನಾಣ್ಣುಡಿಯಾಗಿ ಬಿಟ್ಟಿದೆ.

ಸ್ಪಷ್ಟವಾದಿತ್ವದ ಪ್ರಾಯಶ್ಚಿತ್ತ

'ಲಾ ಪ್ರೆನ್ಸಾ'ದ ಈ ಸ್ಪಷ್ಟವಾದಿತ್ವದ ಮೂಲಕ ಅದಕ್ಕೆ ಅನೇಕ ಮಿತ್ರರೂ ಅದರಂತೆಯೇ ಶತ್ರುಗಳೂ ಉದ್ಭವಿಸಿದ್ದಾರೆ. ೧೯೩೦ರಲ್ಲಿ ಸರ್ವಾಧಿಕಾರಿ ಉರಿಬುರು ಎಂಬವನು, ತನ್ನ ವಿರುದ್ಧ ನಡೆಸಿದ ಪ್ರಚಾರವನ್ನು ನಿಲ್ಲಿಸದಿದ್ದರೆ ಪತ್ರಿಕೆಯನ್ನೇ ನಿಲ್ಲಿಸಿ ಬಿಡುವುದಾಗಿ ಈ ಪತ್ರಿಕೆಗೆ ಬೆದರಿಕೆ ಹಾಕಿದನು. ಆಗ ಪ್ರಕಾಶಕರಾಗಿದ್ದ ಪಾಜರು "ಈ ಬೆದರಿಕೆಗೆ ಹಿಂಜರಿಯಬೇಡಿರಿ. ಅನಪೇಕ್ಷಿತ ಘಟನೆ ಸಂಭವಿಸಿದ್ದೇ ಆದರೆ, ನಮ್ಮ ಪತ್ರಿಕೆಯನ್ನು ಪ್ಯಾರಿಸಿಗೆ ಸ್ಥಳಾಂತರಿಸಿ ಅಲ್ಲಿಂದ ನಮ್ಮ ಪ್ರಚಾರವನ್ನು ಮುಂದುವರಿಸೋಣ." ಎಂದು ಹೇಳಿದರು. ೧೯೪೦ನೆಯ ಇಸ್ವಿಯ ಸುಮಾರಿಗೆ ನಾಜಿಗಳು 'ಲಾ ಪ್ರೆನ್ಸಾ'ದ ಮೇಲೆ ಬಾಂಬನ್ನೆಸೆಯಲು ಪ್ರಯತ್ನಿಸಿದರು. ಮತ್ತೊಮ್ಮೆ, ಕ್ರಮಗೆಟ್ಟ ಜನಜಂಗುಳಿಯು ಇದರ ಕಟ್ಟಡದ ಮೇಲೆ ದಾಳಿಯಿಟ್ಟಿತ್ತು. ಆಗ ಸಂಪಾದಕರು ಸಂಗ್ರಹಿಸಿಟ್ಟ ನೀರನ್ನೆಲ್ಲ ಹರಿಬಿಟ್ಟು, ಅದರಲ್ಲಿ ಕೆಲವು ಸಾವಿರ ವ್ಹೋಲ್ಟುಗಳಷ್ಟು ವಿದ್ಯುಚ್ಛಕ್ತಿಯನ್ನು ಹಾಯಿಸಿದರು. ಕಳೆದ ವರುಷ ಜನೆವರಿಯಲ್ಲೊಮ್ಮೆ ಇದೇ ರೀತಿ ಜನಜಂಗುಳಿಯು ದಾಳಿ ಮಾಡಿತ್ತು; ಮತ್ತೆ ಇಂತಹ ದಾಳಿಗಳಾಗಬಹುದೆಂಬುದನ್ನು ನಿರೀಕ್ಷಿಸಿ, ಕಟ್ಟಡಗೆಯ ಬಾಗಿಲುಗಳನ್ನು ತೆಗೆಯಿಸಿ, ೨ ಇಂಚು ದಪ್ಪವಾದ ಕಬ್ಬಿಣದ ಬಾಗಿಲುಗಳನ್ನು ಹಚ್ಚಿಸಿದರು. ಅವರ ನಿರೀಕ್ಷಣೆ ಸುಳ್ಳಾಗಲಿಲ್ಲ. ಮತ್ತೊಮ್ಮೆ ಜನಜಂಗುಳಿಯು ಆ ಕಟ್ಟಡದ್ಮೇಲೆ ದಾಳಿಮಾಡಿ ಬೆಂಕೆಯಿಡಲು ಪ್ರಯತ್ನಿಸಿತು.

ಸದ್ಯದ ಸಂಪಾದಕರೂ ಪ್ರಕಾಶಕರೂ ಆದ ಆಲ್ಬರ್ಟೋ ಗೈಂಜಾ ಪಾಜರು ಹಿಂದಿನ ಪರಂಪರೆಯನ್ನುಲ್ಲಂಘಿಸಿ 'ಯುನೈಟೆಡ್ ನೇಶನ್ಸ್ ವರ್ಲ್ಡ್' ಪತ್ರಿಕೆಯ ಲೌರಾಡಿ ಪಾಸ್ಕಲನಿಗೆ ಸಂದರ್ಶನವಿತ್ತಿದ್ದಾರೆ. ಈ ಬಗ್ಗೆ ಪಾಜರು "ಲಾ ಪ್ರೆನ್ಸಾದ ಪ್ರಕಾಶಕರೆಂದೂ ಪತ್ರಿಕಾ ವ್ಯವಸಾಯಿಗಳಿಗೆ ಸಂದರ್ಶನವೀಯುತ್ತಿರಲಿಲ್ಲ. ತಮಗೆ ಹೇಳಬೇಕಾದದ್ದನ್ನೆಲ್ಲ ತಮ್ಮ ಪತ್ರಿಕೆಯಲ್ಲಿಯೇ ಹೇಳಿಬಿಡಲಾಗುವುದೆಂಬ ಗೃಹಿಕೆಯೇ ಇದಕ್ಕೆ ಕಾರಣ. ಆದರೆ ಸದ್ಯದ ವಿಷಮ ಪರಿಸ್ಥಿತಿಯ ಮೂಲಕ, ನಮ್ಮ ಪರಂಪರೆಯನ್ನು ಬದಿಗೊತ್ತಬೇಕಾಯಿತು" ಎಂದು ಹೇಳಿದರು. ಮುಂದೆಂದಾದರೂ ಮತ್ತೆ ದಾಳಿಗಳು ಸಂಭವಿಸುವ ಭೀತಿಯಿದ್ದೇ ಇದೆಯೆಂದೂ ಆದರೂ ತಮ್ಮ ಪತ್ರಿಕೆಯ ಸ್ವತಂತ್ರ ವ್ಯಕ್ತಿತ್ವವನ್ನು ಕಾಯ್ದುಕೊಳ್ಳಲು ತಾವು ದೃಢನಿರ್ಧಾರ ಮಾಡಿರುವುದಾಗಿಯೂ ಅವರು ಹೇಳಿದರು.

'ಲಾ ಪ್ರೆನ್ಸಾ'ವು ಹೋರಾಟದ ತನ್ನ ಪರಂಪರೆಯನ್ನು ಎಂದಿಗೂ ತ್ಯಜಿಸಲಾರದೆಂದು ಸುಪ್ರಸಿದ್ಧ ನಿರೀಕ್ಷಕರು ಜೂಜು ಕಟ್ಟುತ್ತಾರೆ. ಈ ಬಗ್ಗೆ ಅವರೊಂದು ಕತೆಯನ್ನು ಸಹ ಹೇಳುತ್ತಾರೆ :

ಭೂಕಂಪಾಯಮಾನವಾದ ಯಾವುದಾದರೊಂದು ಘಟನೆ ಸಂಭವಿಸಿದರೆ 'ಲಾ ಪ್ರೆನ್ಸಾ'ದ ಮೇಲಿರುವ ಭೋಂಗಾ ಒದರುತ್ತದೆ. ಬ್ಯೂನೋಸ್ ಏರಿಸ್‌ದ ನಾಗರಿಕರು ಅದನ್ನು ಕೇಳಿದೊಡನೆಯೇ 'ಲಾ ಪ್ರೆನ್ಸಾ'ದ ಸುದ್ದಿಯ ಹಲಗೆಯ ಹತ್ತಿರ ಮುಗಿಬೀಳುತ್ತಾರೆ.

ಈ ಪತ್ರಿಕೆಯ ಬಗ್ಗೆ ಆಗದ ಕೆಲವು ರಾಜಕಾರಣಿಗಳು ಹೊಟ್ಟೆಕಿಚ್ಚಿನಿಂದ ಕೆಲವು ದಿನಸಗಳ ಹಿಂದೆ, ಈ ಭೋಂಗಾ ಬಾರಿಸಕೂಡದೆಂದೂ ಬಾರಿಸಿದರೆ ೧೦೦ ಪೇಸೊ (ಅರ್ಜೆಂಟೈನಾದ ನಾಣ್ಯ) ದಂಡ ತುಂಬಬೇಕೆಂದೂ ಕಾಯದೆ ಮಾಡಿದರು. ಆದರೆ 'ಲಾ ಪ್ರೆನ್ಸಾ' ಮಾತ್ರ ಭೋಂಗಾ ಬಾರಿಸುವುದನ್ನು ನಿಲ್ಲಿಸಲಿಲ್ಲ. ಆದನ್ನು ಒದರಿಸುವ ಪ್ರಸಂಗ ಒದಗಿದಾಗಲೆಲ್ಲ ಕೂಡಲೇ ಒರ್ವ ಸಿಪಾಯಿಯನ್ನು ದಂಡದ ಹಣ ಸಹಿತವಾಗಿ ಪೋಲೀಸ ಕಚೇರಿಗೆ ಕಳಿಸಿಬಿಡುತ್ತಾರೆ.

(ಮೆಗೆಜಿನ್ ಡೈಜೆಸ್ಟ್‌ನಿಂದ)

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಕಾಮಶಾಸ್ತ್ರ (ವಾತ್ಸಾಯನ ಸೂತ್ರಸಾರ) .	೧—೮—೦
ಸೌಂದರ್ಯ ವಿಚಾರ	೦—೪—೦
ಲೈಂಗಿಕ ಸಮಸ್ಯೆಗಳು (ಸಚಿತ್ರ ಭಾಗ ೧) .	೨—೦—೦
ಸುಲಭ ಚಿಕಿತ್ಸೆ	೨—೦—೦
ಬಾಳಿನ ಗುಟ್ಟು	೧—೧೨—೦

ಹಣ ಮುಂಗಡ ಕಳಿಸಬೇಕು.

ಶ್ರೀಕಾಂತ ಮತ್ತು ಕಂಪನಿ, ಧಾರವಾಡ

ಹಂಪೆಯ ಪೆಂಪು

ಶ್ರೀ. ನ. ಮು. ಕೊ. ಸೋಗಿ, ಅನಂತಪುರ

ತುಂಗಭದ್ರೆಯಾ ಮಂಜುಳಗಾನ
ಮಂಗಳ ತುಂಬಿದ ಮಧುಗಾನ,
ಸುತ್ತಲು ಎತ್ತರಕೆತ್ತರಕೇರಿಹ
ಬೆಟ್ಟಗಳೋಳಿಯ ನಡುದಾಣ;
ಎನಿತು ರಮ್ಯವಿದು ಹಂಪೆಯ ಪೆಂಪು?
ಕಾಣುವ ಕಂಗಳ ಸಿರಿಸೊಂಪು! ॥ ೧ ॥

ಕಲ್ಲಿನ ರೂಪದಿ ಕಲೆ ನೈವೆತ್ತಿಹ
ಭವ್ಯತೆ ಬೀರುವ ಈ ಬೀಡು,
ಸುಂದರತೆಗೆ ಮೇಲ್ ಕುಂದಣನೆನೆ ವಿ-
ದ್ಯತ್ತೆಯ ಬಿತ್ತಿದ ಹೆಗ್ಗಾಡು.
ಬಣ್ಣನೆಯಾಳಕೆ ನಿಲುಕದ ಕಂಪು
ಸಗ್ಗಕೆ ಸಮ ಹಂಪೆಯ ಪೆಂಪು! ॥ ೨ ॥

ಕನ್ನಡ ಬೆಳೆಸಿದ ನಾಡಿದುವಲ್ಲೆ?
ಕನ್ನಡ ರಾಜ್ಯದ ಒಡಲಲ್ಲೆ?
ಚೆನ್ನಘನತೆಯಾ ಮಾಧವ ವಿದ್ಯಾ-
ರಣ್ಯರು ಕಟ್ಟಿದ ನಾಡಲ್ಲೆ?
ಕನ್ನಡ ರಾಜ್ಯದ ಕಟ್ಟಡವಿಲ್ಲಿ
ವಿಜಯದ ಬೀಜಾಂಕುರವಿಲ್ಲಿ! ॥ ೩ ॥

ಸಾಯಣ, ಹರಿಹರ, ರಾಘವರಿಲ್ಲಿ
ಕಾವ್ಯದ ಕಳೆ ತುಂಬಿದರಿಲ್ಲಿ.
ತಿರುಮಲ, ತಿಮ್ಮಣ್ಣಯ್ಯರು ಕನ್ನಡ-
ತುತ್ತೂರಿಯ ಮೊಳಗಿದರಿಲ್ಲಿ.
ಕನ್ನಡ ವೀಣೆಯ ನುಡಿತವೆ ಇಲ್ಲಿ
ಕಾವ್ಯದ ಹೊನಲಿನ ನೆಲೆಯಿಲ್ಲಿ. ॥ ೪ ॥

ಬುಕ್ಕರಾಯನತಿ ಅಕ್ಕರೆಯಿಂದಲಿ
ಪಾಲಿಸಿ ಪೊರೆದಿಹ ನಾಡಲ್ಲೆ?
ಬುಕ್ಕನ ಸೊಸೆ ಶ್ರೀ ಗಂಗಾದೇವಿಯು
ತಿರುಮಲಾಂಬೆ ಮಹಿಳೆಯರಿಲ್ಲೆ?
ಕನ್ನಡ ಕವಯಿತ್ರಿಗಳನುರಾಗವು
ಕನ್ನಡತನವನು ಉಳಲಿಲ್ಲೆ? ॥ ೫ ॥

ಪ್ರೌಢದೇವನೊಡ್ಡೋಲಗ ಮಧ್ಯದಿ
ಲಕ್ಕಣ್ಣೀಶನ ಲಾಲಿತ್ಯ,
ಬಣ್ಣನೆ ಮೀರಿದ ಉನ್ನತಿ ಪಡೆಯಿತು
ಸತ್ತ್ವದ ಕನ್ನಡ ಸಾಹಿತ್ಯ.
'ಪ್ರಭುಲೀಲೆ'ಯು ಅನತರಿಸಿದ ಕಾಲ
ಕನ್ನಡನುಡಿ ಮಾಗಿಯ ಕಾಲ! ॥ ೬ ॥

ಕೃಷ್ಣದೇವ ಕನ್ನಡದ ಭೇರಿಯನು
ದಿಗ್ದಿಗಂತ ಧಿಮ್ಮಿಡಲಿಲ್ಲೆ?
ತಿಮ್ಮಣ್ಣಯ್ಯನ ಕನ್ನಡ ಭಾರತ-
ದಪ್ಪಪರ್ವಗಳು ಬೆಳಗಿಲ್ಲೆ?
ದಾಸರು ವ್ಯಾಸರು ಹಾಡಿದರಿಲ್ಲಿ
ಕನ್ನಡ ನುಡಿ ಬೆಳುವಲದಲ್ಲಿ. ॥ ೭ ॥

ಕನ್ನಡಸೊಗ ಸುಪ್ಪಾಣಿ ಕುಸುಮಗಳು
ಅರಳಿ ಮಧುರವನು ಸುರಿಸಿಲ್ಲೆ?
ಪರನಾಡಿನ ಪಾತರಗಿತ್ತಿಗಳು
ಮಧುವನು ಕುಡಿಯಲು ಹಾರಿಲ್ಲೆ?
ಕನ್ನಡ ಮುತ್ತುಗಳುದುರಿಲ್ಲೇ?
ಕನ್ನಡ ಹೊಳಪನು ಬೆಳಗಿಲ್ಲೇ? ॥ ೮ ॥

ಅರಿತಿರ ನೆರೆನಾಡಿನ ಅಣ್ಣಗಳೆ,
ಹಂಪೆಯ ನೆಂಪಿನ ನಿಲುವನ್ನು?
ಎಂದಿನಿಂದಲೂ ಬೆಳೆದು ಬಂದಿರುವ
ಜೆಲುಗನ್ನಡ ನಾಡೆಂಬುದನು.
ಕನ್ನಡದುನ್ನತಿ ಸಾರಲು ಬಲ್ಲ
ಶಿಲೆಯ ಶಾಸನಗಳಿನಿತಿಲ್ಲ? ॥ ೯ ॥

ಕಲೆಯನು ಬೆಳಸಿದ ಕೃಷ್ಣನು ಹೆರರಿಗೆ
ನೆಲೆಗೊಟ್ಟರೆ ಅದು ಆಶ್ಚರ್ಯವೆ?
ಕಂಡುದನೆಲ್ಲವ ನಮ್ಮದಿದೆಂಬುವ
ಹುಸಿಹುರುಪಿನ ಆತುರವೇಕೆ?
ಬಾರದ ಬದುಕಿಗೆ ಬಾಯ್ನೀರ್ ಸುರಿಸುವ
ಹುಂಬರ ಒಣಹಂಬಲವೇಕೆ? ॥ ೧೦ ॥

ಕಲ್ಲಿನ ತೇರಿನ ಚಿಲ್ಪನು ನೋಡಿ
ಕರುಬಿಸಿ ನಮ್ಮದಿದೆನ್ನುವಿರಾ?
ವಿಟ್ಠಲಸ್ವಾಮಿಯ ಪಟ್ಟಣ ನೋಡಿ
ಒಡೆಯರು ನಾನಿವಕೆನ್ನುವಿರಾ?
ಹೇಮಕೂಟನನು ಬಯಸುವಿರಾ?
ಕಲೆಯ ನೆಲೆಗೆ ಕೈಹಾಕುವಿರಾ? ॥ ೧೧ ॥

ಬೇಡಬಡಿರಿ ನೆರೆನಾಡಣ್ಣಗಳೇ,
ಹೆರರೊಡವೆಯು ಅದು ನಮಗಲ್ತು!
ಕೆಳೆತನವ ಕಳೆದು ಹಗೆ ಸಾಧಿಸುವುದು
ನೆರೆನಾಡುಗಳಿಗೆ ಹಿತವಲ್ತು!
ಕೆಳೆಯಿಂದಲೆ ಸುಖಸಾಧನೆಯುಂಟು,
ಹಂಪೆಯು ನಮ್ಮಜ್ಜನ ಗಂಟು! ॥ ೧೨ ॥

ಸುದ್ದಿಗಿಂತಲೂ ನಿದ್ದೆ ಉತ್ತಮ

(ಒಂದು ವಿನೋದ ಸಂಭಾಷಣೆ)

ಸ್ವಾ. ದ. ರಾ. ಬೇಂದ್ರೆ ಎಂ. ಎ. ಸೊಲ್ಲಾಪುರ

★

[ಇದು ವಿನೋದ ಪ್ರಬಂಧ. ಇಬ್ಬರಲ್ಲಿ ನಡೆದ ಸಂಭಾಷಣೆಯ ರೂಪದಲ್ಲಿದೆ. ಇದರಲ್ಲಿ ಸೂಚ್ಯಾರ್ಥ ಮುಖ್ಯ; ವಾಚ್ಯಾರ್ಥ ಗೌಣ. ಗಾಂಭೀರ್ಯದಿಂದ ಬರೆದಿದ್ದರೆ ವಾಚ್ಯಾರ್ಥವೇ ಮುಖ್ಯವಾಗುತ್ತಿತ್ತು; ಆದರೆ ಅದು ಸಾಹಿತ್ಯವಾಗುತ್ತಿರಲಿಲ್ಲ. ಇದನ್ನು ಸುಜ್ಞರು ತಿಳಿದುಕೊಳ್ಳಲಿ. —ಲೇ.]

"ಪತ್ರಿಕೆ ಓದುವದಕ್ಕಿಂತ ನಿದ್ದೆಮಾಡುವುದೇ ನನ್ನ ಸ್ವಭಾವ. ಪತ್ರಿಕೆಯ ಓದನ್ನೂ ನಿದ್ದೆಗೇ ಉಪಯೋಗಿಸುತ್ತೇನೆ. ಪತ್ರಿಕೆ ಓದಿದ್ದನ್ನೂ ಅಷ್ಟೇ ಎಚ್ಚರದಿಂದ ಕೇಳುತ್ತೇನೆ."

"ಪತ್ರಿಕೆಗಳ ಬಗ್ಗೆ ಈ ಅಭಿವ್ರಾಯವೇ ತಪ್ಪು. ಪತ್ರಿಕೆಗಳನ್ನು ಓದಬೇಕು. ಸಾಧನೆಗಳಲ್ಲಂತೂ ನಿದ್ದೆಗಿಂತ ಓದು ಲೇಸು."

"ಮೌನಸಾಧನೆಯಲ್ಲಿ ವೃತ್ತಪತ್ರಿಕೆ ಸಾಧಕಗಳಲ್ಲ— ಎಂದು ತಾನೆನ್ನುವುದು."

"ಎಚ್ಚರ ತಪ್ಪಿ ತೂಕಡಿಸುವುದಕ್ಕಿಂತ, ಓದಿಯಾದರೂ ಎಚ್ಚರ ಕಾಯ್ದುಕೊಳ್ಳುವದು ಮೇಲು!"

"ಯಾರಿಲ್ಲೆನ್ನುವರು? ಪತ್ರಿಕೆ ಓದುವುದರಿಂದ ಎಚ್ಚರತಪ್ಪುವ ಅಭ್ಯಾಸವಾಗಿ, ಭೂಮಿಯ ಗುಂಗಿನೊಳಗಿರುವ ಚಟ ಹತ್ತುವುದಿಲ್ಲವೇ? ಇದನ್ನು ವಿಚಾರಮಾಡಿರಿ!"

"ಅದೇಕೆ? ಜಗತ್ತನ್ನು ಎಚ್ಚರಿಸುವುದೇ ಪತ್ರಿಕೆಗಳ ಕಾರ್ಯಭಾಗವಿದೆಯಲ್ಲವೆ?"

"ಗದ್ದಲಮಾಡುವುದೂ ಎಚ್ಚರಿಸುವುದೂ ಒಂದೇ ಅಲ್ಲ... ಅಲ್ಲಿರಾ?"

"ಏನೇ ಇರಲಿ, ಗದ್ದಲಮಾಡಿಯಾದರೂ ಎಚ್ಚರುಗೊಳಿಸುವರೋ! ನೀವು ನಿದ್ದೆ ಬಡಕರು; ನಿಮಗೆ ಎಲ್ಲ ಗದ್ದಲವೂ ಅನ್ಯಾಯವೇ!"

"ಗದ್ದಲಮಾಡುವುದೇ ಪತ್ರಿಕೆಗಳ ಜನ್ಮಸಿದ್ಧಹಕ್ಕು ಇರಬಹುದು; ಆದರೆ ಅದರಿಂದ ಗದ್ದಲವೆದ್ದೀತಲ್ಲದೆ ಎಚ್ಚರು ಹೇಗೆ ಉಂಟಾಗುವುದೋ ನಾನರಿಯೆ. ಎಚ್ಚರವಿದ್ದವರು ಸದ್ದಿಲ್ಲದೇ ಇರುತ್ತಾರೆ."

"ಗದ್ದಲ ಕೂಡ ಮಾಡಬಾರದು ಏನೆಚ್ಚರವೊ! ಅಂಥವರ ಎಚ್ಚರಕ್ಕೂ ನಿದ್ದೆಗೂ ಬಹಳ ಅಂತರವಿಲ್ಲ."

"ಸರಿ, ನಿಮ್ಮ ಅರ್ಥ ಹೊಳೆಯಿತು. ಕೆಲಸವೆಂದರೆ ಗದ್ದಲ; ಜಗದ ಸುದ್ದಿಯ ಸಂತೆಯೇ ಪತ್ರಿಕೆಗಳು—ಇಷ್ಟೇ ತಾನೆ?"

"ಹಾಗೇನೂ ಅಲ್ಲ. ಸಪ್ಪಳಿಲ್ಲದೆ ಕೆಲಸ ಮಾಡುವವರೂ ಇದ್ದಾರೆ."

"ಆದರೆ, ಪತ್ರಿಕೆಗಳ ಕಿವಿಗೆ ಸಪ್ಪಳಿಲ್ಲದ್ದು ಕೆಲಸವೇ ಅಲ್ಲ ತಾನೆ?"

"ಛೆ, ಮಹಾ ಮಹಾ ವ್ಯಕ್ತಿಗಳೂ ಸದ್ದು-ಸುಳಿವಿಲ್ಲದೆ ಕೆಲಸ ಮಾಡುತ್ತವೆ. ಪೃಥ್ವಿಯ ಗತಿ, ಗ್ರಹಗೋಲಗಳ ಗಮನ, ಶಾಸ್ತ್ರಜ್ಞರ ಶೋಧನ, ತತ್ತ್ವಜ್ಞರ ಚಿಂತನ...."

"ಸ್ವಲ್ಪ ತಡೆಯಿರಿ. ಈ ಮಾತು ಪತ್ರಿಕೆಗಳ ಕಿವಿಗೆ ಬಿದ್ದರೆ, ನಿಮ್ಮ ವಿರುದ್ಧ ಗುಲ್ಲೆಬ್ಬಿಸಬಹುದು. ನಿಮಗೆ ಅದನ್ನೇ ಓದಬೇಕಾದೀತು. ಓದಿ ತಲೆ ಕೆಟ್ಟೀತು. ಬರುವ ನಿದ್ದೆ ಒರಲಿಕ್ಕಿಲ್ಲ."

"ಬಿಡಿರೀ! ನಾನೇನು ಚಿಲ್ಲರೆ ಮನಸ್ಸಿನವನೆ? ಪತ್ರಿಕೆಗಳಲ್ಲಿ ಬರುವ ಮಾತನ್ನು ಮನಸ್ಸಿಗೆ ತಂದುಕೊಳ್ಳುವವನು ಸುಸಂಸ್ಕೃತನೇ ಅಲ್ಲ!"

"ಗುರುವೇ, ಏನು ಮುತ್ತಿನಂಥ ಮಾತನಾಡಿದಿ! ಸುಸಂಸ್ಕೃತರು ಪತ್ರಿಕೆಗಳಿಂದ ತಲೆಯನ್ನು ಕೆಡಿಸಿಕೊಳ್ಳುವುದಿಲ್ಲ. ಅವನ್ನು ನೋಡಿ ಕಣ್ಣುಗಳನ್ನಾದರೂ ಏಕೆ ತೊಂದರೆಗೀಡುಮಾಡಬೇಕು? ಕೆಲಸದಿಂದ ದಣಿವು ಉಂಟಾಗಿದ್ದರೆ, ಹಾಸಿಗೆ ಕಣ್ಣು ಮುಚ್ಚಿ ಬಿದ್ದುಕೊಳ್ಳಬಹುದು. ಹತ್ತಿದರೆ ನಿದ್ದೆ ತೀರಿಸಿಕೊಳ್ಳಬಹುದು; ಇಲ್ಲದಿದ್ದರೆ ಬೇಸರು ಸರಿದೊಡನೆ ಏಳಬಹುದು."

"ನೀವು ಹೇಳುವುದು ಒಂದು ರೀತಿಯಲ್ಲಿ ನಿಜವಾದರೂ, ಪತ್ರಿಕೆಗಳನ್ನು ಓದಲೆ ಬಾರದು—ಎಂಬುದನ್ನು ನಾನು ಒಪ್ಪಲಾರೆ. ಅದರಿಂದ ದಿನದಿನದ ಸುದ್ದಿ ತಿಳಿಯುತ್ತದೆ. ಜಗತ್ತಿನ ಯೋಗಕ್ಷೇಮ ಗೊತ್ತಾಗುತ್ತದೆ. ನಿದ್ದೆ ಮಾಡಿದರೆ ಏನು ಬಂತು?"

"ನೀವು ಮತ್ತೆ ಹಳೆಯ ಜಾಡಿಗೆ ಹೊರಟಿರಿ. ಅದು ನಿಮ್ಮ ತಪ್ಪಲ್ಲ, ಅಭ್ಯಾಸ—ಅಂದರೆ ದೊಡ್ಡ ತಪ್ಪು. ಪತ್ರಿಕೆಗಳಲ್ಲಿ ಸರಿಯಲ್ಲದ ಸುದ್ದಿಗಳನ್ನೂ ಸೇರಿಸಿಬಿಡುವ ಈಗಿನ ಅಪದ್ಧ ರೀತಿಯೇ ನಿಮ್ಮಂಥವರ ತಿಳಿವಳಿಕೆಗೆ ಕಾರಣ. ಕಂಟ್ರೋಲಿನಲ್ಲಿ

ಧಾನ್ಯಕ್ಕಿಂತ ಒಮ್ಮೊಮ್ಮೆ ಕಸರೇ ಹೆಚ್ಚು ಬರುತ್ತದೆ. ಆದರಲ್ಲಿ ಕಂಟ್ರೋಲ್ ಮಾಡಿದ್ದು ಧಾನ್ಯವೆಂಬುದು ಸ್ಪಷ್ಟವೇ; ಆದರೆ ಅದು ಸರಿಯಲ್ಲ. ನಾವು ಕಸರನ್ನೇ ಕಂಟ್ರೋಲ್ ಮಾಡಬೇಕು. ಬರುಬರುತ್ತ ಕಸರಿಲ್ಲದ ಧಾನ್ಯಕೊಡಬೇಕು. ಆದರೆ ಕಂಟ್ರೋಲಿಗೇನೇ ಕಂಟ್ರೋಲಿಲ್ಲ ಎಂದು ಕಾಣುತ್ತದೆ. ನಮ್ಮ ಪತ್ರಿಕೆಗಳಲ್ಲಿ ಕಾಳಿಗಿಂತ ಕಸರು ಹೆಚ್ಚು ಹಾಕಿ ಹಾಕಿ, ನಮಗೆ ಕಸರಿನ ಕೂಡ ಅನ್ನ ನುರಿಸುವ ಅಭ್ಯಾಸವಾಗಿದೆ—ಇದರ ವಿರುದ್ಧ ನಿದ್ದೆ ಕೂಡ ಬೊಡ್ಡ ಚಳವಳಿಯೇ ಇದ್ದಂತೆ; ಆದರೆ ನಾವು ಅನ್ನದ ಆಸೆಗೆ ಪತ್ರಿಕೆಗಳಲ್ಲಿಯ ಕಸರೂ ತಿನ್ನುತ್ತೇವೆ.... ಕೊಂಡ ತಪ್ಪಿಗೆ."

"ನಾನು ಹಾಗೆ ಮಾಡುವುದಿಲ್ಲ. ಊರೂರ ಸುದ್ದಿಗಳನ್ನು ನಾನು ಓದುವುದೇ ಇಲ್ಲ. ಅವು ಊರೂರಿನ ಮೂಗಿಗೆ ತುಪ್ಪ ಸವರಿದ ಸಂಭ್ರಮ. ಸುದ್ದಿ ಕೊಟ್ಟು ಕೊಂಡವರ ಡುಂಡುಮಿಕೆ ಅದು. ಸ್ವಂತ ಸುದ್ದಿಗಾರರದನ್ನೂ ಓದುವುದಿಲ್ಲ. ಪುಕ್ಕಟೆಯಾಗಿ ತಪ್ಪದೆ ಬರೆಯುವ ಸುದ್ದಿಗಾರರಿಗೆ ಅದು ಬಿರುದು ಮಾತ್ರ. ನಮ್ಮ ಪತ್ರಿಕೆಗಳಿಗೆ ಹೊಣೆಗಾರಿಕೆಯುಳ್ಳ ಸ್ವಂತ ಸುದ್ದಿಗಾರರೇ ಕಡಮೆ. ಇದಕ್ಕಿಂತ 'ಈ ಬರೆಹಕ್ಕೆ ನಾವು ಜವಾಬುದಾರರಲ್ಲ' ಎಂದು ಸ್ಪಷ್ಟವಾಗಿ ಬರೆದದ್ದು ಮೇಲು— ಎನ್ನುತ್ತೇನೆ."

"ಹಾಂ! ಪತ್ರಿಕೆಗಳ ಗುಣ ನೀವು ಚೆನ್ನಾಗಿ ಕಂಡಿದ್ದೀ ನನ್ನ ಸೂಚನೆ ಏನೆಂದರೆ: ಆ ವಾಕ್ಯವನ್ನು ಎಲ್ಲ ಪತ್ರಿಕೆಗಳ ಬಿರುದನ್ನಾಗಿ ಮಾಡಿಕೊಂಡು, ತಮ್ಮ ಹಣೆಯ ಮೇಲೆ ಬರೆಕೊಳ್ಳಬಹುದು!"

"ಅಷ್ಟು ದೂರ ನಾನು ಒಪ್ಪಲಾರೆ—ಅಸೋಸಿಯೇಟೆಡ್ ನೇ ಸುದ್ದಿಗಾರ ಸಂಸ್ಥೆಗಳಿವೆ. ಪ್ರತಿ ಪತ್ರಿಕೆಗಳಲ್ಲಿಯೂ ಜವಾಬ್ದಾರಿಯ ಅಗ್ರಲೇಖಗಳಿವೆ. ಇವನ್ನೆಲ್ಲಾ ತಳ್ಳಿಬಿಡಬಹುದೆ?"

"ಸುದ್ದಿಗಾರ ಸಂಸ್ಥೆಗಳ ಭಂಡಾಟಕೆ ಇರಲಿ. ಈ ಅಗ್ರಲೇಖಗಳ ಜವಾಬ್ದಾರಿ ಲೇಖನಗಳಿನ್ನುತ್ತೀರಾ? ಇಂಥ ಕೆಲವು ಲೇಖನಗಳ ಬಗ್ಗೆ ದಾವೆ ಹಾಕಿದರೆ, ನೂರಕ್ಕೆ ಹೊಂಬತ್ತೊಂಭತ್ತು ಜನ 'ಇದು ತಮ್ಮ ಅಭಿಪ್ರಾಯವೇ ಅಲ್ಲ' ಎಂದು ವಾದಿಸಿ ವಾದಿಸಿ ಈ ವಾದವು ನಿಲ್ಲದಲ್ಲಿ. 'ನಮ್ಮ ಅಭಿಪ್ರಾಯ ಎಷ್ಟೇ ತಪ್ಪಿರಲಿ ಸ್ವರಾಜ್ಯದಲ್ಲಿ ಬರೆವಣಿಗೆಯ ಸ್ವಾತಂತ್ರವಿಲ್ಲವೆ?' ಎಂಬ ಮಹಾ ವಾಕ್ಯಕ್ಕೆ ಜೋತುಬೀಳುತ್ತಾರೆ. ಅಂತೂ ಪತ್ರಿಕೆಗಳು ಅಸ್ಪಷ್ಟ, ಅನಿಶ್ಚಿತ, ಪರಸ್ಪರ ವಿರುದ್ಧ—ಸ್ವಾಭಾವಿಕ ಅಜ್ಞಾನಾಹಂಕಾರದ ಅಧಿಕಾರ ಮದದಿಂದ ಬರೆದ—ಲೇಖನಗಳ ಮೊಟ್ಟೆಯಾಗಿರುವಾಗ, ಅವುಗಳನ್ನು ಓದಿ ನಮ್ಮ ಅಜ್ಞಾನವನ್ನು ಉದ್ದೀಪಿಸಬೇಕೆ?"

"ನೀವು ತುಂಬ ಹಟವಾದಿಗಳು. ನಿದ್ದೆ ಮಾಡುವುದು ಪತ್ರಿಕೆ

ಗದುಗಿನಲ್ಲಿ

ಮೇಲ್ತರಗತಿಯ ಊಟ ಹಾಗೂ ವಸತಿಗೃಹ

ದುರ್ಗಾ ಲಾಜ್

ಗದುಗಿಗೆ ಬರುವ ಪ್ರವಾಸಿಕರಿಗೆ ಇನ್ನು ಮೇಲೆ
ಯಾವ ತೊಂದರೆಯೂ ಇಲ್ಲ

ಉತ್ತಮ ಊಟ, ಹೊಸಮಾದರಿಯ ಸ್ನಾನಗೃಹ, ಬೆಳಕು—ಹವೆಯುಳ್ಳ
ಕೋಣೆಗಳು. ಸಹಕುಟುಂಬ ಬಂದವರಿಗೆ ಪ್ರತ್ಯೇಕ ವ್ಯವಸ್ಥೆ.

ನಾವು ನೀಡುವ ಸೌಕರ್ಯಕ್ಕೆ ನೀವು ಕೊಡುವ ಬೆಲೆ ಅತ್ಯಲ್ಪ!
ಒಮ್ಮೆ ಅವಶ್ಯ ಸಂದರ್ಶಿಸಿರಿ.

ಓದುವುದಕ್ಕಿಂತ ಒಳ್ಳೆಯದು—ಎಂದು ಸಾಧಿಸುತ್ತಿದ್ದೀರಿ. ದೇಶ-ಕಾರ್ಯ ಮಾಡಿ ಅದರ ಸುದ್ದಿ ಕೊಡುವುದೂ ಬರೀ ಗದ್ದಲ-ವೆನಿಸುವುದಲ್ಲ ನಿಮಗೆ?"

"ಬರೀ ಗದ್ದಲವೇಕೆ? ತುಂಬ ಗದ್ದಲವಲ್ಲದೆ ಅದು ಬೇರೆ ಇರುವುದು ಸಾಧ್ಯವಿಲ್ಲ. ತಮ್ಮೊಳಗೊಳಗೇ ಬರೀ ಗದ್ದಲ ತುಂಬಿ-ಕೊಂಡವರು, ಏನು ಹೊರಗೆಡವಿಯಾರು?"

"ಹಾಗಾದರೆ ಪತ್ರಿಕೆಗಳೇ ಬೇಡವೆ?"

"ನಾನು ಹಾಗೆನ್ನುವುದಿಲ್ಲ. ಪತ್ರಿಕೆಗಳು ಬೇಕು. ಅವು ನಿಜವಾದ ಕಾರ್ಯಗಳ ನಿಜವಾದ ವರದಿಗಳಾಗಿ, ತಮ್ಮ ಕಾರ್ಯಕ್ಕೆ ಜವಾಬ್-ದಾರಿಯುಳ್ಳವುಗಳಾಗಿರಬೇಕು. ಆಗ ಪತ್ರಿಕೆಗಳದು ಎಚ್ಚರದ ಕಾರ್ಯವಾಗಿ, ಎಚ್ಚರುಗೊಳಿಸುವ ಕಾರ್ಯವನ್ನೂ ಅವು ಮಾಡು-ಯಾವು."

"ಹಾಗಾದರೆ, ನಮ್ಮಲ್ಲಿ ಅಂಥ ಪತ್ರಿಕೆಗಳೇಕಿಲ್ಲ?"

"ನಾವು ಸಿಕ್ಕ ಪತ್ರಿಕೆಗಳನ್ನು ಓದುವ ರೂಢಿಮಾಡಿಕೊಂಡಿ-ದ್ದೇವೆ. ಸಿಕ್ಕಾಪಟ್ಟೆ ಬರೆಯುವ ಪತ್ರಿಕೆ ಬಹಳ ಮೇಲು—ಎಂದೂ ತಿಳಿದುಕೊಂಡಿದ್ದೇವೆ. ಇಂಥ ಪತ್ರಿಕೆಗಳೊಡನೆ ನಡೆದ ಮೇಲಾಟ ದಲ್ಲಿ, ಇದ್ದ ಒಳ್ಳೆಯ ಪತ್ರಿಕೆಗಳೂ ಕೊಳಚೆಗೆ ಎಡೆಕೊಡುತ್ತವೆ. 'ಮಂದೀ ಮಕ್ಕಳು ಎಷ್ಟೋ ಕೆಟ್ಟ ಬರೆಯುತ್ತಿರುವಾಗ, ನಮ್ಮ ಮಕ್ಕಳು ಇಷ್ಟೂ ಕೆಟ್ಟ ಬರೆಯಬೇಡವೆ'—ಎಂಬಂತೆ."

"ಅಂತೂ ನಿಮ್ಮ ಮತ ಪತ್ರಿಕೆಗಳ ಬಗ್ಗೆ ಗೌರವದ್ದಾಗಿಲ್ಲ."

"ಹಾಗಲ್ಲ. ಪತ್ರಿಕೆಗಳ ಬಗ್ಗೆ ನನಗೆ ಬಹಳ ಗೌರವವಿರುವುದ-ರಿಂದಲೇ, ಅವುಗಳ ಈಗಿನ ಪದ್ಧತಿಯ ಬಗ್ಗೆಯೂ ಅವುಗಳ ಆಶ್ರಯ ದಾತರಾದ ನಿಮ್ಮುಗಳ ಬಗ್ಗೆಯೂ ತಿಳಿಯಲಾರದ ತಿರಸ್ಕಾರ ಇದೆ—"

"ಅದು ಹೋಗಲಿ. ಸರಕಾರದವರಾದರೂ ಇದನ್ನೇಕೆ ನಿಯಂ-ತ್ರಿಸುವುದಿಲ್ಲ?"

"ಸ್ವಾಮೀ ನಿಮಗೆ ಗೊತ್ತೇ ಇದೆ. ಸರಕಾರ ಎಂದರೇನು? ಬರೀ ಜವಾಹರ — ವಲ್ಲಭಭಾಯಿಯವರಲ್ಲ. ಕೆಳಗಿನ ಕೆಳಗಿನ ಪಾವಟಣಿಗೆಯ ವರೆಗಿನವರೂ ಇರುತ್ತಾರೆ. ಅವರವರು ಎಂಬುವ ಕೆಲವರು ಪತ್ರಿಕಾ ಗೊಂದಲಿಗರಿರುತ್ತಾರೆ."

"ಅವರನ್ನು ಮೇಲಿನವರು ಏಕೆ ನಿಗ್ರಹಿಸುವುದಿಲ್ಲ?"

"ಈ ಜನ, ಅವರ ಮನೆಯ ಕುಲದೇವರ ಗೊಂದಲವನ್ನೇ ಹಾಕುತ್ತೇವೆ—ಎಂದು ಹೇಳಲು ಹಿಂದೆ ಮುಂದೆ ನೋಡುವುದಿಲ್ಲ. ಇಷ್ಟೇ—ಧಾರ್ಮಿಕ ಗೊಂದಲಗಳು ಆಗೀಗ ನಡೆದರೆ, ಪತ್ರಿಕಾ ಗೊಂದಲಗಳು ದಿನಬೆಳಗೂ ದಿನರಾತ್ರಿಯೂ ನಡೆದೇ ಇರುತ್ತವೆ."

"ಜನಮತಕ್ಕೆ ಶಿಕ್ಷಣಕೊಡಲು ಪತ್ರಿಕೆಗಳಿಗಿಂತ ಬೇರೆ ಸಾಧನ ಏನು?"

"ಈಗಿನ ಈ ಪದ್ಧತಿಗಿಂತ ಜನಮತ ಕೆಡಿಸಲು ಬೇರೆ ಸಾಧನೆ ಯಾವುದಿದೆ—ನೀವೇ ಹೇಳಿ! ಪ್ರತ್ಯೇಕ ಮತವೆಂಬುದು ಪ್ರತ್ಯೇಕ ಗೊಂದಲವಲ್ಲ."

"ರಾಜಕೀಯವೆಂದರೆ ಹಾಗೆಯೇ!"

"ಸರಿ ಆಯ್ತು. ಪತ್ರಿಕೆಯ ಕೆಟ್ಟ ಚಾಳಿಯಿಂದ ರಾಜಕೀಯ ವನ್ನೇ ಹೊಲೆಗೊಳಿಸುವುದು. ಬೇಡ."

"ಪತ್ರಿಕೆಗಳೇ ರಾಜಕೀಯದ ದೇಹವಲ್ಲವೆ?"

"ದೇಹವಾಗಿವೆ ಸರಿ; ಆದರೆ ಧ್ಯೇಯವಾಗದಿರಲಿ!"

"ಹೌದು. ಪತ್ರಿಕೆಗಳ ಪ್ರಕೃತಿ ಬದಲಾಗದೆ ರಾಜಕೀಯ ಪೌರುಷವು ಬದಲಾಗಲಾರದು."

"ಭಪ್ಪರೆ ನನ್ನ ಗುರುವೆ! ಮತ್ತೆ ಮುತ್ತಿನಂಥ ಮಾತು ಆಡಿದೆ. ಈಗ ಅಧೀನಪೌರುಷ ಪ್ರಕೃತಿಯನ್ನು ಕೆಡಿಸುತ್ತಿದೆ. ಸ್ವೈರ ಪ್ರಕೃತಿ ಪೌರುಷವನ್ನು ನೆಲೆಗೆಡಿಸುತ್ತಿದೆ. ಇದರ ಹುಚ್ಚಾಟದ ವರದಿಯನ್ನು ನಾವು ತಾಂಬೂಲ ಸೇವಿಸಿದಂತೆ ಸೇವಿಸಿಬಿಡುತ್ತೇವೆ."

"ಹೌದು, ಸೇವಿಸಿ ಉಗುಳಿ ಬಿಡುತ್ತೇವೆ."

"ಒಳ್ಳೇ ಅಲಂಕಾರ. ತಾಂಬೂಲ ಬಾಯಿಯ ದುರ್ವಾಸನೆ

೫೦-೫೨ ವರ್ಷಗಳಿಂದಲೂ ಸಾವಿರಾರು ಜನರನ್ನು ರೋಗಮುಕ್ತರನ್ನಾಗಿಸಿ ಅನುಭವಪಡೆದುಕೊಂಡ

ಶಕ್ತಿವರ್ಧಕ ಧಾತುಪೌಷ್ಟಿಕ ಪಾಕ

ಶಾರೀರಿಕ ಮಾನಸಿಕ ದೌರ್ಬಲ್ಯ—ಸ್ವಪ್ನಸ್ಖಲನ—ವೀರ್ಯಸ್ಖಲನ ವಾಗುವುದು, ಸ್ವರತಿಯ ದುರ್ಬಳಕೆಯಿಂದ ಉಂಟಾದ ಅಶಕ್ತತೆ, ನಪುಂಸಕತ್ವ, ಇಂದ್ರಿಯಶೈಥಿಲ್ಯ ಇವುಗಳನ್ನೆಲ್ಲ ಹೊಡೆದೋಡಿಸಿ, ವೀರ್ಯವನ್ನು ಸಶಕ್ತವೂ ಸ್ತಂಭನವಾಗಿಸುವುದು. ಮಲಶುದ್ಧಿಯಾಗಿ ತುಂಬ ಹಸಿವೆಯಾಗುವುದು. ತರುಣರು ಇದರ ಪ್ರಯೋಜನ ಪಡೆ-ಯುವುದಷ್ಟೆ ಅಲ್ಲ; ೭೦-೮೦ ವಯಸ್ಸಿನ ವಯೋವೃದ್ಧರೂ ಇದರ ಸೇವನೆಯಿಂದ ನವತಾರುಣ್ಯದ ಉತ್ಸಾಹ ಹೊಂದುವುದರಲ್ಲಿ ಸಂದೇಹವಿಲ್ಲ. ಹೆಣ್ಣು ಮಕ್ಕಳ ರಕ್ತಪ್ರದರ, ಶ್ವೇತಪ್ರದರ, ಬಂಜೆ ತನ ಅಥವಾ ಅದ ಮಕ್ಕಳು ಕೂಡಲೆ ಸಾಯುವುದು, ಮೊದಲಾ-ದುವುಗಳ ಮೇಲೆ ಇದು ರಾಮಬಾಣವೆನಿಸಿದೆ. ಇದರಲ್ಲಿ ಹಸಿವು ಗಿಡಮೂಲಿಕೆ, ಭಸ್ಮ, ಸುವರ್ಣಮಾಲಿನೀವಸಂತ ಮೊದಲಾದ ಬೆಲೆಯುಳ್ಳ ಔಷಧಿಗಳನ್ನು ಕೂಡಿಸಲಾಗಿದೆ.

೧ ಡಬ್ಬಿಯ ಬೆಲೆ ೧೫ ರೂ. ೭ ದಿನಗಳಲ್ಲಿ ಗುಣ. ನಂ ೨ರ ಬೆಲೆ ೭ ರೂ. ೧೫ ದಿನಗಳಲ್ಲಿ ಗುಣ. ಶ್ರೀಮಂತ ಕಟ್ಟು-ನಿಟ್ಟಾಗಿ ಸೇವಿಸಲು ಸ್ಪೆಷಲ್ ಡಬ್ಬಿಗೆ ೩೭ ರೂ. ಕೂಡಲೇ ಗುಣ. ಇದರಲ್ಲಿ ಅನೇಕ ಬೆಲೆಯುಳ್ಳ ಶಕ್ತಿವರ್ಧಕ ಔಷಧಗಳು ಕೂಡಿವೆ.

ಆರ್ಡರ್ ಜೊತೆಗೆ ಪ್ರತಿಯೊಂದು ಡಬ್ಬಿಗೆ ೧ ರೂ. ಯಂತೆ ಅಡ್ವಾನ್ಸು ಕಳುಹಬೇಕು. ಅದನ್ನು ವಜಾಮಾಡಿ ಉಳಿದ ಹಣಕ್ಕೆ ವಿ. ಪಿ. ಮಾಡುತ್ತೇವೆ. ಪಥ್ಯವೇನೂ ಇಲ್ಲ. ೧ಡಬ್ಬಿ ೨೦ ದಿನಕ್ಕೆ ಸಾಲುವುದು. ೨ ಡಬ್ಬಿ ತೆಗೆದುಕೊಳ್ಳುವವರಿಗೆ ಅಂಚೆಯ ವೆಚ್ಚ ವಿಲ್ಲ. ೪ ಡಬ್ಬಿ ಕೊಳ್ಳುವವರಿಗೆ ೧ ಡಬ್ಬಿ ಬಕ್ಷೀಸು. ಗುಣದ ಬಗ್ಗೆ ಅನೇಕ ಸರ್ಟಿಫಿಕೇಟುಗಳು ಬಂದಿವೆ.

ವಿಳಾಸ:— **ಮ್ಯಾ. ಡಿ. ಎಸ್. ಆ್ಯಂಡ್ ಕೊ.**
ಔಷಧಾಲಯ
ಮು. ಪೋ. ಮಿರಜ (ಎಸ್. ಎಂ. ಸಿ.)

ಕೆಡಿಸುತ್ತದೆ–ಮಿತವಾಗಿ ಹಿತವಾಗಿ ಸೇವಿಸಿದಾಗ; ಆದರೆ ಪತ್ರಿಕೆಯ ಓದು ಗಾಂಜಿಬಡಕರಂತೆ ಬಾಯ್ಗೆಡಿಸಿ ಸಿಡುಕುತನದ ಗುಂಗಿನಲ್ಲಿರಿಸುತ್ತದೆ.''

"ಏನ್ರೀ, ಪತ್ರಿಕೆಯ ಓದು—ನಿಮ್ಮ ಮತದಂತೆಯೇ ಆಗಲಿ, ನಿದ್ದೆಯು ಒಂದು ಪ್ರಕಾರವೇ ಆಗಿ, ಮೌನಕ್ಕೆ ಸಾಧಕವೇ ಆಯಿತಲ್ಲ?"

"ಒಂದಿಷ್ಟೂ ಅಲ್ಲ. ಪತ್ರಿಕೆಯ ಗುಂಗು ಗಾಂಜಿಯ ಗುಂಗು; ನಿದ್ರೆ ಪ್ರಕೃತಿದತ್ತ ವಿಶ್ರಾಂತಿ!"

"ಒಳ್ಳೇ ಮೋಚಿನವರು ನೀವು. ಪತ್ರಿಕೆ ಓದುವುದಕ್ಕಿಂತ ನಿದ್ದೆ ಏನು ಹೆಚ್ಚು?"

"ಪತ್ರಿಕೆಯನ್ನು ಓದುವುದರಿಂದ ಜಗತ್ತಿನ ಕದಡು ಒಳಗೆ ಸೇರುತ್ತದೆ. ನಿದ್ರೆಯಿಂದ ನಮ್ಮಲ್ಲಿದ್ದದ್ದು ಕೆಳಗಿಳಿಯುತ್ತದೆ."

"ಆದರೆ ನಿದ್ರೆ ತಾಮಸಿಕ. ಪತ್ರಿಕೆಯ ಓದು ಏನೆಂದರೂ ರಾಜಸಿಕ."

"ಅಹುದು, ಆದರೂ ಸರಿಯಾದ ನಿದ್ರೆಯಿಂದ ಸಾತ್ತ್ವಿಕಕ್ಕೆ ಹಾದಿಯಾಗುವುದು; ಆದರೆ ಈಗಿದ್ದ ಪತ್ರಿಕೆಗಳ ಓದಿನಿಂದ ರಾಜಕೀಯ ಇನ್ನಷ್ಟು ಕೆರಳುತ್ತದೆ."

"ರಾಜಕೀಯ ಬೇಡವೆ?"

"ನಿದ್ರೆಯ ಶಾಂತಿ, ಮೌನದ ಸಾತ್ತ್ವಿಕತೆ ಕೂಡಿ ರಾಜಕೀಯದ ರಜಸ್ಸನ್ನು ಶುದ್ಧಗೊಳಿಸಿ ತಪಸ್ಸು ಮೂಡಲಿ."

"ಅದೇಕೆ? ಶುದ್ಧವಾದ ರಜಸ್ಸು ಸಾತ್ತ್ವಿಕವನ್ನೇ ಸೇರಿ, ಆಗೀಗ ನಿದ್ದೆ ಹೋಗದೆ ಶಾಂತಿಯನ್ನು ಸಾಧಿಸಲಾರದೆ?"

"ನೀವು ಸ್ವಭಾವವಾಗಿ ಶುದ್ಧ ರಾಜಸಿಕರಿದ್ದರೆ ಅದು ಸಾಧ್ಯ. ಈ ಸಾಧ್ಯಕ್ಕಾಗಿ ಮೌನವನ್ನು ಸಾಧಿಸುವುದು ಅವಶ್ಯ. ಮೌನವು ಪತ್ರಿಕೆಯ ಓದಿನಂತೆ ಅನಿವೇಕಕ್ಕೆ ತಳಹದಿಯೆನಿಸದು. ನಿದ್ದೆಯಂತೆ ಅದೊಂದು ಶಾಂತಿಯ ಪ್ರಕಾರವಾಗಿದೆ— ಎಂದೇ ನನ್ನ ವಾದ."

"ಮೌನದ ವಿವೇಕವು ತಿಳಿವಳಿಕೆಯ ಓದಿನಂತಿಲ್ಲವೆ?"

"ಇದೆ. ಆದರೆ—ಅದಕ್ಕಾಗಿ ತಿಳಿವಳಿಕೆಯನ್ನೇ ಬಲಗೊಳಿಸುವ, ನಿಯತಕಾಲಿಕವಲ್ಲದ ಶಾಶ್ವತ.ಸಾಹಿತ್ಯದ ಓದು ಮೌನಕ್ಕೆ ಸಹಾಯಕವಾಗಿದೆ. ಮೌನದಲ್ಲಿ ಪತ್ರಿಕೆ ಓದುವುದು ವಿಧಿಕಟ್ಟಿಕೊಂಡು ಸಮಾಧಿ ಹೊಕ್ಕ ಹಾಗೆ."

"ಆದರೆ ನಿದ್ದೆ— ಅದರಲ್ಲೂ ಹಗಲಿನ ನಿದ್ದೆ— ಪತ್ರಿಕೆಯ ಓದಿಗಿಂತಲೂ ಹೆಚ್ಚು ಸಾಧಕವೆ?"

"ಮೌನಕ್ಕೆ, ಆಗೀಗ ಧ್ಯಾನಮಾಡಿದರೆ ಅದರ ತೂಕದ ಸಹಜ ನಿದ್ರೆ ಸ್ವಾಭಾವಿಕ. ಇಂಥ ನಿದ್ರೆಯಿಲ್ಲದೆ, ತಲೆಕೆಟ್ಟ ರಾಜಸಿಕರೇ ಇಂದಿನ ಪತ್ರಿಕಾ ಗೊಂದಲಿಗರು. ಕೆಲವರು ಕುಡಿದು, ಕೆಲವರು ಸೇದಿ, ಕೆಲವರು ನೋಡಿ ಕುಣಿದು ಅಂತೂ ನಿದ್ರೆಗೆಟ್ಟು ಪತುಂಬುತ್ತಾರೆ."

"ಆದರೆ ಪತ್ರಿಕೆಗಳಿಂದ ಲೋಕದ ರಂಜನೆ ನಡೆದಿಲ್ಲವೆ?"

"ಈ ಹುಚ್ಚುರಂಜನೆಯಿಂದ ಲೋಕ ಎಂದು ಮುಕ್ತವಾದೀ ಎಂಬುದೇ ಮೌನದ ಮುಖ್ಯ ಚಿಂತನೆ. ನಿಜವಾದ ನಿದ್ದೆಯೊಳ ಶಾಂತಿಯು ನಮ್ಮ ಎಚ್ಚರದ ತಳಹದಿಯಾಗದಿದ್ದರೆ, ಸಾತ್ತ್ವಿಶಕ್ತಿ ಬಲಿಯಲಾರದು. ಅತಂತ್ರ ರಾಜಕೀಯದ ನಂಜು ಇಳಿಲಾರದು."

"ಹಾಗೆಂದರೆ ಮೌನಕ್ಕಿಂತ ನಿದ್ರಾ-ಸಪ್ತಾಹವನ್ನೇಕೆ ಆಚರಿಬಾರದು?"

"ಆ ಶಕ್ತಿಯಿದ್ದರೆ ಅದೀಶು. 'ನಿದ್ರಾ ಸಮಾಧಿಸ್ಥಿತಿ ನಮ್ಮ ನಿದ್ದೆಯನ್ನೂ ನಾವು ರಾಜಕೀಯ ಸಂಪರ್ಕದಿಂದ ಕೆಡಿಕೊಂಡಿದ್ದೇನೆ. 'We have murdered sleep Heavy l the head that wears a crown"

"ರಾಜಕೀಯದ ಗತಿಯೇನು?"

"ಪ್ರಾಜ್ಞ:ನಿದ್ರೆಯ ಪ್ರತಿಷ್ಠೆಯಲ್ಲಿ ವಿಶ್ವಜಾಗೃತಿಯಾತೇಜಸ್ಸಿನ ಕನಸಿನ ಕದಡಿಳಿದು ಕಣಸಿನ ಜಗವು ರೂಪುಗೊಳವುದು."

"ತಮಗೂ ರಾಜಕೀಯ ಪತ್ರಿಕಾಕರ್ತರಿಗೂ ಸರಿಯಿಲ್ಲ-ಎಂದು ತೋರುತ್ತದೆ."

"ನನಗೂ ಅವರ ಸದ್ಯದ ಪದ್ಧತಿಗೂ ಸರಿಹೋಗುವುದಿಲ್ಲ."

"ನಿದ್ರೆ ನಿಮಗೆ ಪ್ರಿಯ."

"ಗೊಂದಲ ನನಗೆ ಸರಿಕಾಣದು."

"ರಾಜಕೀಯವನ್ನು ಹಾದಿಗೆ ತರಲು ನೀವಾದರೂ ಏನು ಮಾಡುತ್ತೀರಿ? ಮಲಗಿದಾಗ ನಿದ್ದೆ. ಎಚ್ಚರಿದ್ದಾಗ ಮೌನ, ನಡದದ್ದನ್ನು ನೋಡಲಾರ ಎಂದು ಕಣ್ಣುಮುಚ್ಚಣಿಕೆ— ಇಷ್ಟೆ ಅಲ್ಲವೆ?"

"ನೀವೂ ಗಮ್ಮತ್ತು ಕಾಣೆರಿ. ಏಟು ಕೊಟ್ಟರಿ. ಹೌದು ನಾನೂ ಸ್ವಲ್ಪ ನಿದ್ದೆಮಾಡಿ, ಸ್ವಲ್ಪ ಮೌನ ತಾಳಿ, ನಡೆದದ್ದನ್ನು ನೋಡಲಾರೆ. ಉಳಿದವರಾದರೂ ಅಕರ್ತೃಕ ಪ್ರೇಕ್ಷಕರಂತೆ ಯಾಕೆ ನೋಡಿ ಸುಮ್ಮನಿದ್ದುಬಿಡಿ ಎಂದು ಎಚ್ಚರಿಸುವ ಇಂಥ ಪ್ರಬಂಧ ಬರೆಯುತ್ತೇನೆ."

"ಒಡಕೇ ಒಳ್ಳೆಯ ಕೆಲಸ. ಯಾವುದಾದರೂ ಪತ್ರಿಕೆಯಲ್ಲೆ ಕೊಡಿರಿ."

"ಬಂತು ಮೇತಾಳ ತನ್ನ ಸ್ಥಳಕ್ಕೆ."

"ಏನು?"

"ಏನೂ ಇಲ್ಲ. ಇನ್ನು ಸ್ವಲ್ಪ ಮೌನನಿದ್ರೆ ತಾಳುತ್ತೇನೆ."

ಕರುಳು ಕರಗಿಸುವ ಕತೆಗಾರ

ಶ್ರೀ. ಕೃಷ್ಣಚಂದ್ರರು

(ವ್ಯಕ್ತಿ-ಕೃತಿ ಪರಿಚಯ)

ಶ್ರೀ. ವಿ. ಸಿ. ಹಿತ್ತಲಮನಿ ಬಿ.ಎಸ್‌ಸಿ (ಅಗ್ರಿ). ಶಿರಸಿ

★

ಕೃಷ್ಣಚಂದ್ರರು ಉರ್ದು ಸಾಹಿತ್ಯದಲ್ಲಿ ಖ್ಯಾತಿಪಡೆದ ಕತೆಗಾರರು. ಅವರು 'ಅನ್ನದಾತಾ' ಕತೆಯನ್ನು ಬರೆದು, ಉರ್ದು ಸಾಹಿತ್ಯದ ಘನತೆಯನ್ನು ಹೆಚ್ಚಿಸಿದ್ದಲ್ಲದೆ, ಜಾಗತಿಕ ಕಥಾಪ್ರಪಂಚಕ್ಕೆ ಅಮೂಲ್ಯಸೇವೆ ಸಲ್ಲಿಸಿದ್ದಾರೆ. ಇಂದು ಕೃಷ್ಣಚಂದ್ರರ ಹೆಸರು ಎಲ್ಲೆಡೆಯಲ್ಲಿ ಕೇಳಬರುತ್ತಿರುವುದು 'ಅನ್ನದಾತಾ' ಕಥೆಯಿಂದಲೇ. ಕೃಷ್ಣಚಂದ್ರರೊಬ್ಬ ಪ್ರತಿಭಾನ್ವಿತ ಶಕ್ತಿಯುತ, ಪ್ರಗತಿಶೀಲ ಕತೆಗಾರರೆಂದು ಖ್ಯಾತಿಪಡೆದಿದ್ದಾದರೂ 'ಅನ್ನದಾತಾ' ಕತೆಯಿಂದಲೇ. ಭಾರತದ ಯಾವತ್ತೂ ಮುಖ್ಯ ಭಾಷೆಗಳಲ್ಲಿಯೂ 'ಅನ್ನದಾತಾ' ಭಾಷಾಂತರಗೊಂಡಿದೆ. ಇಂಗ್ಲೀಷಿನಲ್ಲೂ ಭಾಷಾಂತರವಾಗಿದೆ. ಅದರ ಭಾಷಾಂತರಕಾರರಾದ ಶ್ರೀ. ಕೆ. ಎ. ಅಬ್ಬಾಸರು, ಇಂಗ್ಲೀಷ್‌ಕೃತಿಗೆ 'ಸಾಯಲಾರೆ!' (I cant die) ಎಂದು ನಾಮಕರಣಮಾಡಿದ್ದಾರೆ. ತತ್ಪರಿಣಾಮವಾಗಿ ಲೇಖಕರಿಗೆ ಅಂತರರಾಷ್ಟ್ರೀಯ ಖ್ಯಾತಿಯೂ ದೊರೆಯಬಹುದಾಗಿದೆ.

ಮೂರೂವರೆ ದಶಕಗಳನ್ನು ದಾಟಿದ ಕೃಷ್ಣಚಂದ್ರರ ಪ್ರತಿಭೆ, ಅನುಭವ, ಶೈಲಿಗಳು ಯಾರೂ ಮಾರುಹೋಗುವಂತಹವುಗಳಾಗಿವೆ. ಅವರು ತಮ್ಮ ಬಾಲ್ಯ ಮತ್ತು ಯೌವನಗಳನ್ನು ಕಾಶ್ಮೀರದಲ್ಲಿ ಕಳೆದುದರ ಪರಿಣಾಮವಾಗಿ, ಮೊದಮೊದಲು ಕಾವ್ಯಮಯವಾದ ಕಾಶ್ಮೀರದ ದೃಶ್ಯಗಳನ್ನೇ ಹಿನ್ನೆಲೆಯಾಗಿರಿಸಿಕೊಂಡು,ಹಲವಾರು ಅನನುಭವಿಕ, ಅಪಕ್ವ, ಕಾಲ್ಪನಿಕ ಪ್ರೇಮಕತೆಗಳನ್ನು ಬರೆದರು. ಆದರೆ ಇಂದು ಅವರೊಬ್ಬ ನುರಿತ ಅನುಭವಿಕ ಲೇಖಕರಾಗಿದ್ದಾರೆ. ಮಾನವರ ಆಂತರಾಳವನ್ನು ಹೊಕ್ಕು, ಎಷ್ಟೋ ಸಾಮಾಜಿಕ ವಿಷಯಗಳ ಬಗೆಗೆ ಪರಿಶೀಲನೆಗಳನ್ನು ನಡೆಯಿಸಿ, ತಮ್ಮದೇ ಆದ ಅಪೂರ್ವಶೈಲಿಯಲ್ಲಿ ಬರೆಯಬಲ್ಲರು. ದಲಿತರ ಬಗ್ಗೆ ಸಹಾನುಭೂತಿ, ಉಪಕಾರಬುದ್ಧಿ ಮತ್ತು ಅಸ್ಫುಟ ಆಂತಃಕರಣಗಳೇ ಅವರ ಮೊದಲಿನ ಕೃತಿಗಳಲ್ಲಿ ಕಂಡುಬರುತ್ತಿದ್ದವು. ಆದರೆ ಇಂದು ಅವರ ಕೃತಿಗಳಲ್ಲಿ, ಮಾನವರ ಪ್ರಾರಬ್ಧಗಳನ್ನು ರೂಪಿಸುವ ಆರ್ಥಿಕ ಮತ್ತು ರಾಜಕೀಯ ವಿಷಯಗಳ ಸ್ಪಷ್ಟ ನಿಭಜನೆಯು ಕಂಡುಬರುತ್ತಲಿದೆ.

'ಅನ್ನದಾತಾ' ಸುದೀರ್ಘವಾದ, ಬಂಗಾಲದ ಬರಗಾಲವನ್ನು ಹಿನ್ನೆಲೆಯಾಗಿಟ್ಟುಕೊಂಡು ಬರೆದ ಒಂದು ಸಣ್ಣ ಕತೆಯು. ಅದ್ಭುತಕಲಾಕೃತಿಯು! 'ಬಂಗಾಲದ ಬರಗಾಲದ ಬಗೆಗೆ ಭಾರತದ ಯಾವುದೇ ಭಾಷೆಯಲ್ಲಿಯೂ ಇಷ್ಟೊಂದು ಸುಂದರವಾದ ಹೃದಯದ್ರಾವಕ ಕತೆಯನ್ನು ಯಾರೂ ಬರೆಯಲಿಲ್ಲ. ಈ ಕತೆಯಲ್ಲಿ ಸಾಮಾಜಿಕ ಕುಂದು-ಕೊರತೆಗಳನ್ನು ಎತ್ತಿತೋರಿಸುವ ದೂರದೃಷ್ಟಿಯನ್ನು ಲೇಖಕರು ಇಟ್ಟುಕೊಂಡಿದ್ದಾರೆ.... ಸಾಸಿರ ಸಾಮಾನ್ಯ ಓದುಗರ ಹೃದಯವನ್ನು ಈ ಕತೆಯು ಆವರಿಸಿಬಿಟ್ಟಿದೆ. ಓದುಗರು ಈ ಕತೆಯೊಂದಿಗೇನೇ ತೇಲಿಹೋಗುತ್ತಾರೆ. ಇದೊಂದು ಸ್ಪಷ್ಟ ಕರುಣಾಜನಕ ಕಲಾಕೃತಿಯು. ಇದರಲ್ಲಿ ಕೃತ್ರಿಮತೆಯ ಸುಳಿವು ಎಂಬುದೇ ಇಲ್ಲ. ಇದೊಂದು ಬಿತ್ತರವಾದ ಘೋರವಾದ ಸಾಮಾಜಿಕ ಸಮಸ್ಯೆಯನ್ನು ಎತ್ತಿತೋರಿಸುವ ಅಭೂತಪೂರ್ವ ಕಲಾಕೃತಿಯು. ಯಾವತ್ತೂ ಜನತೆಯ ನಿರ್ಗತಿಕತನವನ್ನು ಜನಸಾಮಾನ್ಯರ ದುಃಖವನ್ನು ಒಬ್ಬ ಮಾನವನ ಅನುಭವಗಳಲ್ಲಿ ಅಳವಡಿಸಿ ಈ ಕತೆಯನ್ನು ಕಟ್ಟಿದ್ದಾರೆ. ಜನತೆಯ ದುಃಖ-ದುರಂತಗಳ ಭೀಕರಚಿತ್ರಗಳು ಮರೆಮಾಜದೆ ಈ ಕತೆಯಲ್ಲಿ ಸ್ಪಷ್ಟವಾಗಿ ಎದ್ದುನಿಂತಿವೆ!'

'ಅನ್ನದಾತಾ' ಕತೆಯ ವಸ್ತುವು ತೀರ ಸಾಮಾನ್ಯವಾದ ಬರಗಾಲದ ಒಂದು ಚಿತ್ರವಾದರೂ, ಅದರಲ್ಲಿ ಬಳಸಿಕೊಂಡ ತಂತ್ರವು ನವೀನವಾದುದು. ಕತೆ ಹೇಳಿದ ರೀತಿ ಬೆರಗುಕಚ್ಚಿಸುವಂತಹದು. ಈ ಮೊದಲು ಯಾರೂ ಬಳಸದ ತಂತ್ರವನ್ನು ಇದರಲ್ಲಿ ಲೇಖಕರು ಬಳಸಿದ್ದಾರೆ. ಒಂದೇ ವಿಷಯವನ್ನು ಮೂರು ಬೇರೆ ಬೇರೆ ದೃಷ್ಟಿಕೋನಗಳಿಂದ ಕಂಡಿದ್ದಾರೆ. ಪ್ರತಿಯೊಂದೂ ಒಂದರಿಂದೊಂದು ತೀರ ಭಿನ್ನವಾಗಿದೆ. ಪ್ರತಿಭಾಗದಲ್ಲಿಯ ತಂತ್ರ ಬೇರೆ ಬೇರೆಯಾಗಿದೆ. ಇದೇನು ಸಾಮಾನ್ಯವಾದ ಮಾತೇ! 'ಈ ಕತೆಗೆ ಬಳಸಿಕೊಂಡ ಕ್ರಾಂತಿಯೆಬ್ಬಿಸುವ ತಂತ್ರವನ್ನು ಕಂಡು ವಿಮರ್ಶಕರು ದಂಗುಬಡಿದಿದ್ದಾರೆ.'

ಮೊದಲನೆಯ ಭಾಗದಲ್ಲಿ: ವಿದೇಶೀಯ ರಾಯಭಾರಿಯೊಬ್ಬನು ಬರಗಾಲದ ಬಗೆಗೆ ತನ್ನ ಸರಕಾರಕ್ಕೆ ವರದಿಮಾಡುತ್ತಾನೆ. ಇದು ಪತ್ರರೂಪದಲ್ಲಿದೆ. ಇದರಲ್ಲಿ ಹಜ್ಜೆಹಜ್ಜೆಗೆ ಭಾರತದ ಬಗೆಗೆ ಅವನ ಅಜ್ಞಾನ, ತಿರಸ್ಕಾರ, ಅಗ ಬಂಗಾಲದಲ್ಲಿ ತಾಂಡವವಾಡುತ್ತಿದ್ದ ಬರಗಾಲದ ಬಗೆಗಿನ ಅಭಾಸಾತ್ಮಕ ಕಲ್ಪನೆ, ನಿಜಸ್ಥಿತಿ ಪರಿಚಯ.

ZANDU

PROTOCASEIN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

Ms. Pranlal and Sons
Chemists, Druggists
Station Road. HUBLI

(H. O. Bangalore City)

ಮಾಡಿಕೊಳ್ಳಲಾಗದ ನಿರಾಸಕ್ತಿ— ಅಸಮರ್ಥತೆಗಳು ಕಂಡುಬರುತ್ತವೆ. ಆ ರಾಯಭಾರಿಗೆ ಭಾರತವನ್ನು ತನ್ನ ಪ್ರೇಮಸಂವರ್ಧನೆಗಾಗಿ ಸುಲಿಯುವುದೊಂದೇ ಗೊತ್ತು. ಬಹುಭಾಗವು ವಿಡಂಬನೆಯಾದರೂ ಮಾರ್ಮಿಕವಾಗಿದೆ. ಹೃದಯವನ್ನು ಚುಚ್ಚುತ್ತದೆ.

ಎರಡನೆಯ ಭಾಗದಲ್ಲಿ: ಬರಗಾಲದ ಬಗೆಗೆ ತೋರಿಕೆಯಲ್ಲಿ ಕನಿಕರ ತೋರಿಸಿ, ಪರರಿಗೊದಗಿದ ಆಪತ್ತನ್ನು ತನ್ನ ದೊಡ್ಡತನಕ್ಕೆ, ಹೆಚ್ಚಳಕ್ಕೆ ಹೇಗೆ ಹೊಂದಿಸಿಕೊಳ್ಳಬೇಕೆಂದು ಹಂಚಿಕೆಹಾಕುತ್ತಿರುವ ವಿಷಯಲೋಲುಪನೂ ಆಗರ್ಭ ಶ್ರೀಮಂತನೂ ಆದ ನರ್ತಕನ ಅಣಕಾಟವಿದೆ.

ಮೂರನೆಯ ಭಾಗದಲ್ಲಿ; ಬರಗಾಲದ ಭೀಕರ ದುರಂತಕ್ಕೆ ಲಕ್ಷಾಂತರ ಜನತೆಯೊಂದಿಗೆ ನೇರವಾಗಿ ತುತ್ತಾದ, ಸಾಮಾನ್ಯ ಸಂಗೀತಗಾರನೊಬ್ಬನ, ಹೃದಯವನ್ನೇ ನಡುಗಿಸಿಬಿಡುವ, ಕಲ್ಲೆದೆಯವರಲ್ಲಿಯೂ ಕಣ್ಣೀರಿಳಿಸುವ ಚಿತ್ರವಿದೆ. ಸತ್ತ ಮನುಷ್ಯನೇ ಕತೆ ಹೇಳುತ್ತಾನೆ. ಸತ್ತಿದ್ದರೂ ಕೂಡ ಕೊನೆಯಲ್ಲಿ ಬದುಕಿಯೇ ತೀರುತ್ತೇನೆಂಬ ಆಹ್ವಾನವನ್ನು ಈ ಲೋಕದ ನಿರ್ಮಾಪಕರಿಗೆ ಕೊಡುತ್ತಾನೆ.

ಮೂರೂ ಬೇರೆಬೇರೆಯಾದ ಭಾಗಗಳಲ್ಲಿಯ ಕತೆಯ ವಸ್ತುಗಳು, ಮೂರು ಬೇರೆಬೇರೆ ಸ್ವತಂತ್ರ ಕತೆಗಳಲ್ಲಿಯವುಗಳಂತೆ ತೋರಿಬರುತ್ತವೆ. ಆದರೂ ಅವು ಒಂದೇ ಕತೆಯ ಮೂರು ತುಣುಕುಗಳು. ಅವುಗಳನ್ನು ಹೊಂದಿಸಿಕೊಂಡು ಆಗಲೂ ಸಹಿತ ಏಕರೂಪ, ಏಕಭಾವ, ಏಕರಸಾಸ್ವಾದನೆ, ಏಕಾದರ್ಶಗಳನ್ನು ಪ್ರಕಟಿಸಲು ಹೆಣಗಿದುದು ತುಂಬ ಜಾಣ್ಮೆಯೇ ಸರಿ. ಅದರಲ್ಲಿಯೇ ಲೇಖಕರ ಕಲಾಬುದ್ಧಿ-ಚಾತುರ್ಯಗಳು ಅಡಗಿವೆ. ಕುಶಲನಾದ, ಅನುಭವಶಾಲಿಯಾದ, ಪ್ರತಿಭಾವಂತ ಕಲಾವಿದನಿಗೆ ಮಾತ್ರ ಇದು ಸಾಧ್ಯ! ಇದರಲ್ಲಿಯೇ 'ಅನ್ನದಾತಾ' ಕತೆಯಲ್ಲಿಯ ನಾವೀನ್ಯ, ವೈಶಿಷ್ಟ್ಯಗಳು ಅಡಕವಾಗಿವೆಯೆಂದು ಹೇಳಬಹುದು.

ಬಂಗಾಲದಲ್ಲಿ ಸಾವಿರದ ಒಂಬತ್ತುನೂರಾ ನಾಲ್ವತ್ತುಮೂರರಲ್ಲಿ, ತನ್ನ ಕರಾಳ ಕಪ್ಪು ಕೇಶಗಳನ್ನು ಪಸರಿಸಿ, ಅಸುರಹಸ್ತಗಳನ್ನು ಚಾಚಿ, ಭೀಕರ ಕೆನ್ನಾಲಗೆಯನ್ನು ಹೊರಗೆಹಾಕಿ ಕೋಲಾಹಲವೆಬ್ಬಿಸಿದ ಬರಗಾಲವೇ ಈ ಕತೆಗೆ ಕಚ್ಚಾಮಾಲು. 'ಪ್ರಜ್ವಲಿಸುವ ಕಥಾವಸ್ತುವನ್ನು ಆಯ್ದುಕೊಂಡ ಕೃಷ್ಣಚಂದ್ರರ ಪ್ರತಿಭೆಯನ್ನು ಕಂಡು ಸಹಲೇಖಕರು ಕರುಬಿದ್ದಾರೆ. ನಾಡಿನಲ್ಲಿಯ ಮೂರು ಮುಖ್ಯವಾದ—ಅಧಿಕಾರಿ, ಶ್ರೀಮಂತರು, ಜನಸಾಮಾನ್ಯರು ಈ ಮೂರು—ವರ್ಗಗಳ ಜನತೆಯ ಚಿತ್ರವನ್ನು—ಅವರಲ್ಲಿ ಕೆಲವರನ್ನು ಆಯ್ದು— ಬಗೆಮುಟ್ಟುವಂತೆ ಕೃಷ್ಣಚಂದ್ರರು ಬಣ್ಣಿಸಿದ್ದಾರೆ. ಅವರುಗಳೆಲ್ಲ ಬರಗಾಲವನ್ನು ಎದುರಿಸಿದ ಚಿತ್ರವನ್ನು ಪರಿಣಾಮಕಾರಿಯಾಗಿ ಮೂಡಿಸಿದ್ದಾರೆ. ರಾಯಭಾರಿ, ಆಗರ್ಭಶ್ರೀಮಂತ ತರುಣ ಮತ್ತು ಸಾಮಾನ್ಯ ಸಂಗೀತಗಾರ ಇವರ ಸುತ್ತಲೂ ಕತೆ ಬೆಳೆದುಕೊಂಡಿದೆ.

ಏಕಸೂತ್ರತೆ, ಘಟನಾಮಿತವ್ಯಯ, ಪರಿಣಾಮೈಕ್ಯತೆಗಳು ಸಣ್ಣ ಕತೆಗಳಲ್ಲಿ ಗಮನಾರ್ಹವಾದ ವಿಷಯಗಳು. ಈ ಗುರಿಗಳನ್ನು ಸಾಧಿಸುವುದರಲ್ಲಿ ಹಲವಾರು ಸಲ ಘಟನೆ ಮತ್ತು ಪಾತ್ರಗಳ ಕಡೆಗೆ ವಿಶೇಷ ಲಕ್ಷ್ಯವೀಯಬೇಕಾಗುತ್ತದೆ. ಪಾತ್ರಗಳ ವಿಷಯದಲ್ಲಿಯಂತೂ ತುಂಬಾ ಜಾಗರೂಕತೆ ವಹಿಸದೆ ನಿರ್ವಾಹವೇ ಇಲ್ಲ. ಬಹಳ ಸಲ ಒಂದಕ್ಕಿಂತ ಹೆಚ್ಚು ಪಾತ್ರಗಳ ಆವಶ್ಯಕತೆಯು ಬೀಳುವುದಿಲ್ಲ. ಮೇಲಾಗಿ ಹೆಚ್ಚಾದ ಪಾತ್ರಗಳು ಕತೆಯ ಅಪಯಶಸ್ಸಿಗೂ ಕಾರಣವಾಗಬಹುದು. ಇಚ್ಛಿಸಿದ ಫಲ, ಪರಿಣಾಮಗಳು ದೊರೆಯದೆಯೂ ಹೋಗಬಹುದು. ಅನೇಕ ಪಾತ್ರಗಳು ಅನಿವಾರ್ಯವಾಗಿ ಹಣಿಕೆಹಾಕುತ್ತಿದ್ದಾಗಲೂ, ಒಂದಕ್ಕಿಂತ ಹೆಚ್ಚು ಪಾತ್ರಗಳಿಗೆ ಪ್ರಾಧಾನ್ಯ ಕಂಡುಬರುತ್ತಿರುವುದು ತೀರ ವಿರಳ. ಆದರೆ 'ಅನ್ನದಾತಾ' ಕತೆಯು ಇದಕ್ಕೆ ಅಪವಾದವೆಂದು ಹೇಳಬೇಕು. ಮೂರು ಮುಖ್ಯ ಪಾತ್ರಗಳು; ಆದರೂ ಕಥೆಯ ಗುರಿಗೆ ಭಂಗಬಂದಿಲ್ಲ. ಎಲ್ಲ ಪಾತ್ರಗಳೂ ಓದುಗರನ್ನು ಒಂದೇಗುರಿಯತ್ತ ಒಯ್ಯಲು ಹೆಣಗುತ್ತಿವೆ. ಅದರಲ್ಲಿ ಸಿದ್ಧಿಯನ್ನೂ ಪಡೆದಿವೆ.

ಪರದೇಶೀಯ ರಾಯಭಾರಿಗಳು ಬರಗಾಲದ ವಿಷಯಕ್ಕೆ ಮತ್ತು ಭಾರತದ ಬಗೆಗೆ ತಳೆದ ಧೋರಣೆ, ಪಡುವ ಕನಿಕರ (?) ಮೊದಲಾದುವುಗಳು ಸೂಕ್ಷ್ಮನಿರೀಕ್ಷಣೆಯ ದ್ಯೋತಕಗಳು. ಇದು ಕಲಾವಿದರಲ್ಲಿರಬೇಕಾದ ಆವಶ್ಯಕಗುಣಗಳಲ್ಲೊಂದು. ಭಾರತ-

ದಲ್ಲಿಯ ಮನಸೆಳೆಯುವುದಿಲ್ಲವನ್ನೂ ಅಧಿಕಾರದಲ್ಲಿರುವ ದರ್ಪ-ದಬ್ಬಾಳಿಕೆಗಳ ಹೆಸ್ಮೆ, ಹಿರಿತನ, ಹೆದರಿಕೆಗಳಿಂದ–ನಾಡಿನ ಉಜ್ವಲ-ಪರಂಪರೆ, ಸಂಸ್ಕೃತಿಗಳು ಅಳಿಸಿಹೋದಾವೆಂಬುದರ ಅರಿವೂ ಕೂಡ ಇಲ್ಲದೆ—ಪರದೇಶದಲ್ಲಿಯ ಒಂದು ಹೆಣ್ಣಿನ ಮನಸ್ಸನ್ನು ತನ್ನತ್ತ ಸೆಳೆಯುವುದಕ್ಕಾಗಿ, ಇಲ್ಲಿ ಚಿತ್ರಿತನಾದ ರಾಯಭಾರಿಯು, ತನ್ನ ದೇಶಕ್ಕೆ ತಪ್ಪದೆಯೆ ಕಳುಹುತ್ತಾನೆ. ಕೊನೆಯಲ್ಲಿ ತನ್ನ ಕಾರ್ಯದಲ್ಲಿ ಅಸಮರ್ಥತೆ, ಅಯೋಗ್ಯತೆಗಳು ಸ್ಪಷ್ಟವಾಗಿ ವ್ಯಕ್ತ-ವಾಗುತ್ತಿದ್ದರೂ ಬರಿಯೆ ತನ್ನ ದೇಶದಲ್ಲಿ ಮೇಲಧಿಕಾರಿಯೊಬ್ಬನ ಮಗಳ ಪ್ರೇಮಪಾತ್ರನೆಂಬ ಒಂದೇ ಪಾತ್ರತೆಯಿಂದ ಬೇರೊಂದು ರಾಯಭಾರಿತಂಡದ ಮುಖ್ಯಸ್ಥನನ್ನಾಗಿ ಕಳುಹಬೇಕೆಂದು ಕೋರುವ ಲಾಂಛನಾಸ್ಪದ್ಯಸಂಗತಿ ಆ ರಾಯಭಾರಿಗೇ ಶೋಭಿ-ಸುತ್ತದೆ. ಅವನು ಹದಿನಾರಾಣೆ ಅಪರಾಧಿಹೃದಯದ ಮನುಷ್ಯನೇ ಸರಿ. ಅವನ ವಿವೇಕದಲ್ಲಿ ಮುಳ್ಳುಮುರಿದಿದೆಯೆಂದು ಹೇಳಿದುದು ಮಾರ್ಮಿಕವಾದ ದಿಟ ನುಡಿಯು !

ಅಗರ್ಭ ಶ್ರೀಮಂತನಾದ ತರುಣ ಕಲಾವಿದನು ಚಿತ್ರಿತವಾದ ರೀತಿ ತುಂಬಾ ವಿಪ್ಲವ್‌ಪೂರ್ಣವಾಗಿದೆ. ಕೃತ್ರಿಮ ಕನಿಕರ, ತೋರಿಕೆಯ ಡಂಭದ ಅಂತಃಕರಣ, ಮೊಸಳೆಯ ಕಣ್ಣೀರು ಇತ್ಯಾದಿಗಳು ತೋರಿಬರುತ್ತಿರುವ ಆ ಪಾತ್ರದಲ್ಲಿಯ ವಿಡಂಬನೆಯ ರೀತಿ ಮಾರ್ಮಿಕವಾಗಿದೆ. ತುಂಬಿದ ನೆಮ್ಮದಿಯ ಬಂಗಾಲವು ಕಂಗಾ-ಲಾಗಿ ಬರಿಯದಾಗುತ್ತ ನಡೆದಿರುತ್ತದೆ. ಒಮ್ಮೆ ಆ ದುರ್ದೈವಿಗಳ ದುರಂತ ಚಿತ್ರಗಳು ವರ್ತಮಾನ ಪತ್ರಗಳಲ್ಲಿ ಪ್ರಕಟವಾಗಿರುತ್ತವೆ. ಅವು ಕಣ್ಣಿಗೆ ಬಿದ್ದಾಗ ಕಲಾವಿದನು ಕನಿಕರದಿಂದ ಕಳವಳಪಡು ತ್ತಾನೆ. ಹೊಟ್ಟೆಯಲ್ಲಿ ತಳಮಳವೂ ಎದ್ದಿತೆಂದು ಹೇಳುತ್ತಾನೆ. ಅವರಿಗೆ ತನ್ನ ಕೈಯಿಂದಾದ ನೆರವನ್ನು ನೀಡಬೇಕೆಂದು ಇಚ್ಛಿಸು ತ್ತಾನೆ. ಅವೇ ವರ್ತಮಾನಪತ್ರಗಳನ್ನು ಹರಡಿ, ಹುರಿದ 'ಬ್ರೆಡ್'ಗಳಿಗೆ ಜಾಮ್' ಸವರುತ್ತಾನೆ. ಹೆಚ್ಚೆಚ್ಚು ಚಿಂತಿಸಿ ದಂತೆಲ್ಲ ಹೆಚ್ಚೆಚ್ಚಾಗಿ ಹೋಟಲವಾಣಗೆ 'ಆಮಲೆಟ್ಟು' ತರಲಿಕ್ಕೆ ಆಣತಿ ವಿಧಿಸುತ್ತಾನೆ. ಸಹಾಯಮಾಡಲೇಬೇಕೆಂಬ ನಿರ್ಧಾರಕ್ಕೆ ಅಂಟಿಕೊಂಡು, ಕೊನೆಗಾದರೂ ಬರೀ ಗೊತ್ತುವಳಿ ಪಾಸುಮಾಡಿ ಕಳುಹಿದರೆ ಪರಿಹಾರ ಒದಗಿಸಿದಂತಾಗಿ ದುರಂತ ಸುಖಾಂತವಾಗ ಲಾರದೇ ?—ಎಂದು ಬಲವಾಗಿ ನಂಬಿದ್ದ, ತುಂಬು ಲಾವಣ್ಯ-ಮಯಿಯಾದ— ಬರಿದಾದ ತಲೆಯ—ತನ್ನ ಸಂಗಾತಿಯೊಂದಿಗೆ ನೃತ್ಯ ಏರ್ಪಡಿಸಿ, ಅದರಿಂದ ಬಂದ ದುಡ್ಡನ್ನು ಪರಿಹಾರಕ್ಕೆ ಕೊಡ ಬೇಕೆಂದು ನಿರ್ಣಯಿಸುತ್ತಾನೆ. ಮರುಕ್ಷಣದಲ್ಲಿ ತೆರತೆರನಾದ ಚಿಂತನೆಗಳು ಅವನ ತಲೆಯಲ್ಲಿ ಸುಳಿಯುತ್ತವೆ : 'ಇಷ್ಟೊಂದು ಖ್ಯಾತಿಪಡೆಯುವ ಸಾಧನವಾಗಲಾರದೇ ? ಮಾರನೆಯ ದಿನ ಪತ್ರಿಕೆಗಳಲ್ಲಿ ತನ್ನ ನೆಹರು ಶರ್ಟು ಧರಿಸಿದ್ದ ಪಡಿಯಚ್ಚು ಪ್ರಕಟ ವಾಗಲಾರದೇ ? ಆಗ ತಾನೇನು ಜವಾಹರಲಾಲರಿಗಿಂತ ಕಡಿಮೆ ಯೆನಿಸುವೇ? ತಾನೂ ಒಬ್ಬ ಬಂಗಾಲದ ಮುಂದಾಳಾಗಬಹುದು!' ಇದೇ ರೀತಿಯಾಗಿ ಚಿಂತಿಸಿ ಹೊಂಚುತ್ತಿದ್ದ ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿರುವಾಗಲೇ, ಆತ್ಮವಂಚನೆಯು ನಡೆದುಹೋಗುತ್ತದೆ. ಕೊನೆಗೆ ನಿಜಕ್ಕೂ ಅವನೊಬ್ಬ ಸತ್ತ ಮನುಷ್ಯ (Dead man) ಎಂಬುದು ಮನದಟ್ಟಾಗದೆ ಇರದು.

ಸಾಮಾನ್ಯನಾದ ಸಿತಾರ ನುಡಿಸುವ ಸಂಗೀತಗಾರನೊಬ್ಬನು ಅವನು. ತನ್ನ ಚರಿತಾರ್ಥ ಸಾಗಿಸುವುದಕ್ಕಾಗಿ ಜಮೀನದಾರನ ಮಗಳಿಗೆ ಸಿತಾರ ಪಾಠಗಳನ್ನು ಕಲಿಸುತ್ತಿರುತ್ತಾನೆ. ಆಗಲೇ ಆಕ್ಕೆಯ ಧಾರಣೆ ಏರುತ್ತದೆ. ಹೊಟ್ಟೆಗೆ ಹಿಟ್ಟೇ ಇಲ್ಲದಾಗ ಸಂಗೀತ ಯಾರಿಗೆ ಬೇಕಾಗುತ್ತದೆ? ಪಾಠ ನಿಲ್ಲಿಸಬೇಕಾಗುತ್ತದೆ. ಹತ್ತೊಂಬತ್ತು ವಸಂತಗಳನ್ನು ದಾಟಿದ ತನ್ನ ಸತಿ—ಕಡಲಕನ್ನೆ ಮತ್ತು ಮೋಹದ ಮಗಳೊಂದಿಗೆ, ತುಂಬಿದ ಕಲಕತ್ತೆಯಲ್ಲಿ ಉಪ-ಜೀವನಮಾರ್ಗ ಗೋಚರವಾಗದೆ ಇರಲಿಕ್ಕಿಲ್ಲವೆಂದು, ಎಲ್ಲರಂತೆ ಈತನೂ 'ಕರ್ಮಮಾರ್ಗದಲ್ಲಿ ನಡೆದು' 'ಮಾನವತ್ತ್ವದ ಹೊನ-ಲಿಗೆ ಕೊಂಡೊಯ್ಯುವ' ಒಂದೇ ಒಂದು ಸಾಧನವಾದ ಕಲಕತ್ತೆಗೆ ಹೊರಡುತ್ತಾನೆ. ಮಾರ್ಗದಲ್ಲಿಯೆ ಉಪವಾಸಕ್ಕೆ ತುತ್ತಾಗಿ ಕಡಲ ಕನ್ಯೆ ಕಮರಿಹೋಗುತ್ತಾಳೆ. ಇಹಲೋಕದ ಸುಖ-ದುಃಖಗಳ ಹಂಗು ಅಕೆಗೆ ಇಲ್ಲವಾಗುತ್ತವೆ. ಅವಳನ್ನು ಹುಗಿಯಲೂ ಇಲ್ಲ. ಸುಡಲೂ ಇಲ್ಲ. ರಸ್ತೆಯ ಒಂದು ಪಕ್ಕಕ್ಕೆ ಎಳೆದು ಕಲಕತ್ತೆಗೆ— ಕ್ರೂರ, ನಿರ್ದಯ, ಆತ್ಮರಹಿತವಾದ, ಸಾಸಿರ ಜನರು ಉಪವಾಸ

ಸುಖಕರವಾದ ವಸತಿ ! .... ರುಚಿಕರವಾದ ಊಟ !

ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟ್ಯಾಂಡಿಗೆ ಸಮೀಪ, 'ಶಕ್ತಿ ಟಾಕೀಜ್' ಹತ್ತಿರ

ಒಡೆಯರು—ಎಲ್. ಪಿ. ಮಾರಕೋಡ


ದಮ್ಮು
ನೆಟ್ಟಗಾದೀತು
ಆದರೆ
ಪುರೋಹಿತ ಶ್ವಾಸಹಾರಿಯಿಂದಲೇ
ಏನೇ ನಿಮಿಷದಲ್ಲಿ, ಒಂದೇ ರಾತ್ರಿಯಲ್ಲಿ ದಮ್ಮು ನೆಟ್ಟಗೆ ಮಾಡೀವು ಎಂಬ ಉಪಾಯಗಳಿಂದ ದಮ್ಮು ಗುಣಪಡಿಸಿದೆ ಹೆಚ್ಚುವುದು. ಪುರೋಹಿತ ಶ್ವಾಸಹಾರಿಯು ಮಾತ್ರ ಇಂಥ ಔಷಧವಿದೆ; ಅದನ್ನು ತೆಗೆದುಕೊಳ್ಳಲು ಹತ್ತಿದ ಕೂಡಲೇ ದಮ್ಮು ಕಡಿಮೆ ಹೋಗುವುದು. ಪಚನಕ್ರಿಯೆ ಹೆಚ್ಚುವುದು. ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಖಂಡಿತವಾಗಿ ಪೂರ್ಣ ಬಿಟ್ಟು ಹೋಗುವುದು.
೩-೪, ೬ ಮತ್ತು ೧೦ ರೂ. ಪ್ಯಾಕಿಂಗದಲ್ಲಿ ಎಲ್ಲ ಕಡೆಗೂ ಸಿಗುವದು. ಇಲ್ಲವೆ ಡಾ. ಪುರೋಹಿತ ಫಾರ್ಮಸಿ ಕೊಲ್ಹಾಪುರ, ಇವರಿಂದ ತರಿಸಿಕೊಳ್ಳಬೇಕು.
ಗುರಲನ್ನು ಮತ್ತು ಶ್ವಾಸಕೋಶ ಕಾಯಿಲೆಗಳನ್ನು ಗುಣಪಡಿಸಲು ಇದೊಂದೇ ನೈದುಲ್ ಔಷಧ
DR. PUROHIT PHARMACY, KOLHAPUR

ದಿಂದ ಸಾಯುತ್ತಿದ್ದ, ಅಭಯಸ್ಥಾನವಿರದ ಕಲಕತ್ತೆಗೆ—ಬಂದು, ರಾಯಭಾಯಿಯು ಬಂಗಲೆಯ ಪಾವಟಣಿಗೆಗಳ ಮೇಲೆಯೇ, ಒಂದು ಕೈಯಲ್ಲಿ ಸಿತಾರ, ಇನ್ನೊಂದು ಕೈಯಲ್ಲಿ ಅವನ ಮಗಳು ಸಾಯುವಾಗ ಇವನ ಕೈಯಲ್ಲಿ ಕೊಟ್ಟ ತನ್ನ ಹತ್ತಿರವಿದ್ದ ಒಂದೇ ಒಂದು ಗಿಲಗಂಚಿಯನ್ನು ಹಿಡಿದುಕೊಂಡು, ಗತಪ್ರಾಣನಾಗಿ ಬಿದ್ದಿರುತ್ತಾನೆ. ಸತ್ತ ಮನುಷ್ಯನು ಕತೆ ಹೇಳುತ್ತಾನೆ. ಹೆಂಡತಿ ಮತ್ತು ಮಗಳನ್ನು ಚಿತ್ರಿಸಿರುವ ರೀತಿಯಲ್ಲಿ ಹೊಸತನ ಜಾಣ್ಮೆಗಳು ಕಂಡು ಬಾರದೆ ಇಲ್ಲ. ಅವರನ್ನು ಓದುಗರ ಎದುರಿನಲ್ಲಿ ತಂದು ನಿಲ್ಲಿಸುವಾಗ ತೋರಿದ ಕುಶಲತೆಯು ಅಸಾಧಾರಣವಾದುದು. ದೇಹ ಮತ್ತು ಆತ್ಮಗಳ ಬಗೆಗೆ ಅಂತರ ಅರುಹುತ್ತಾನೆ. ದೇಹನಾಶವಾದರೆ ದುರ್ಗಂಧವಾಸನೆ ಬರುತ್ತದೆ. ಆತ್ಮನಾಶವಾದರೆ ಹೊಗೆಯು ಹೊರಡುವುದು. ಆ ಹೊಗೆಯಲ್ಲಿಯೇ ಮಾನವರ ಹಿಂದಿನ ದಿನಗಳ ಚಿತ್ರಗಳು ಇರುತ್ತವಂತೆ. ಆದರಲ್ಲಿ ಒಂದು ಮಿಂಚಿನ ಸೆಳಕು ಗೋಚರವಾಗುತ್ತದೆ....ಅದೇ ಅವನ ಹೆಂಡತಿಯ ಮುಗುಳುನಗೆಯು! "....ಅಹುದು; ಆಕೆಯೇ ನನ್ನ ಹೆಂಡತಿ.... ಬಾ! ನಾಚಬೇಡ, ಹೊರಗೆ ಬಾ!....ಈಗ ಆಕೆ ಸರಿಯಾಗಿ

ಕಾಣಿಸುವಳಲ್ಲವೇ? ಮುಗ್ಧ ಸೌಂದರ್ಯವತಿಯಾಕೆ! ಆಕೆ ನಿಡಿದಾದ ಉಂಗುರಗೂದಲುಗಳು ಗಾಳಿಯೊಂದಿಗೆ ತೇಲುತ್ತ ನ ದಿವೆ....ಲಜ್ಜೆ ಬೆರೆತ ಮುಗುಳುನಗೆಯು ಆಕೆಗೊಂದು ಅಭರ ವಿದ್ದಂತೆ. ಆಕೆ ಚಂಚಲಳಾದ ವಿನಯಾಂಗನೆ...." ಇದೇ ರೀ ಯಾಗಿ, ನೇಪಥ್ಯದ ಮರೆಯಿಂದ ಹೊರಗೆ ಪಾತ್ರ ತಂದು ಪ್ರೇ ಕರ ಎದುರಿನಲ್ಲಿ ನಿಲ್ಲಿಸುವಂತೆ ಆಕೆಯ ದರುಶನ ಮಾಡಿಸುತ್ತಾ ಮಗಳ ಪರಿಚಯಮಾಡಿಕೊಟ್ಟಿರುವುದೂ ಹಾಗೆಯೆ. "....ಮಗೂ ಬಾ! ಇಲ್ಲಿ ಬಾ....ನಗು....ಇವರನ್ನೂ ನಗಿಸು; ಹೇ ಇವರಿಗೆ."

"ನಾನು ನಿರಪರಾಧಿಯಾಗಿದ್ದೇನೆ. ಮುಗುದೆಯಾಗಿದ್ದೇನೆ ಇನ್ನೂ ಸರಿಯಾಗಿ ಎರಡು ವರುಷಗಳು ತುಂಬಲಿಲ್ಲ. ಗಿಲಗಂಚಿ ಗೊಂಬೆಗಳೊಂದಿಗೆ ಆಡುವದು, ತಾಯಿಯ ಮೊಲೆಯನ್ನು ಚೀಪ ವದು....ತಾಯಿಯ ತೊಡೆಯ ಮೇಲೆ ಮಲಗುವದು ನನಗೆ ಸೇರ ತ್ತದೆ. ನಿಜವಾಗಿಯೂ ನಾನು ಮುಗುದೆ. ಇನ್ನೂ ನನಗೆ ಸ ಯಾಗಿ ಮಾತು ಬಾರವು. ನನ್ನ ಮುದ್ದುಬಾಲಲೀಲೆಗಳಿಂದ ನಕ್ಕು ನಲಿದು, ಕತ್ತಲೆ ತುಂಬಿದ ನನ್ನ ತಂದೆ-ತಾಯಿಗಳ ಗುಡಿಸ ಲನ್ನು ಶೋಭಿಸುವದಕ್ಕಾಗಿ ದೇವರು ಕಳುಹಿಸಿದ್ದಾನೆ ನನ್ನನ್ನು... ಆಗಸದ ಕಡೆಗೆ ಆಗಾಗ ನೋಡುತ್ತೀನೆ....

"ಹೂಂ! ಬಾ ಮಗು! ಹೆದರಬೇಡ; ಬಾ! ನಗು; ಇವ ರನ್ನೂ ನಗಿಸು...."

ಭಯಾನಕ, ಭೀಕರ, ಕರುಳುಕೊರೆಯುವ ಕಥೆಯೇನೋ ನಿಜ. ಆದರೆ ಕೃಷ್ಣಚಂದ್ರರು ಅದಕ್ಕೊಪ್ಪುವ ಭಾಷೆಯಲ್ಲಿಯೇ ಬರೆ ದಿದ್ದಾರೆ. 'ಅನ್ನದಾತಾ' ಕತೆಯು 'ಕಾವ್ಯಾಂಜಲಿಗಿಂತಲೂ ರಮ್ಯಮಧುರವಾಗಿದೆ.' ಎಷ್ಟೋ ಕತೆಯಲ್ಲಿ ರಮ್ಯಮಧುರ ಸುಂದರ ಭಾವಗೀತೆಗಳನ್ನು ಓದುತ್ತಿರುವಂತೆ ಭಾಸವಾಗುತ್ತದೆ. ಬೆಡಗಿನ ನುಡಿ ತುಂಬಾ ರಸಭರಿತವಾಗಿದೆ. ಕೃಷ್ಣಚಂದ್ರರ ಭಾಷೆ ಗಂಭೀರವಾವ ಗಂಗಾಪ್ರವಾಹದಂತೆ. ವಿಶೇಷವಾವ ದುಡುಕಿಲ್ಲ. ಆದರೂ ತುಂಬಾ ಪರಿಣಾಮಕಾರಿಯಾಗಿದೆ. ಪ್ರತಿ ವಾಕ್ಯದಲ್ಲಿಯೂ ಪ್ರತಿ ಶಬ್ದವನ್ನು ತೂಗಿ ತೂಗಿ ಉಪಯೋಗಿಸಿದಂತಿದ್ದ ಕುಶಲತೆಯು ಕಂಡುಬರುತ್ತದೆ.—ನೃತ್ಯಾಂಗನೆಯ ನೃತ್ಯ, ಹಳ್ಳಿಯ ಚಿತ್ರ, ಕಡಲಿನ ಸೌಂದರ್ಯ, ಕಡಲಕನ್ನೆಯ ಲಾವಣ್ಯ ನೊದಲಾದುವುಗಳ ಬಣ್ಣನೆಗಳು ಸುಂದರ ಮಧುರಕಾವ್ಯದ ಅಂಗಗಳಂತಿವೆ:

"....ಆಕೆ ಧರಿಸಿದ ಭಂಗಾರದ ಬೆಂಡೋಲೆಗಳು ಕಿವಿಗಳನ್ನು ಮುಚ್ಚಿದ್ದವು. ತುಟಿಗಳಲ್ಲಿ ಸದಾ ಮುಗುಳುನಗೆಯು ನಲಿಯುತ್ತಲೇ ಇತ್ತು. ಆಕೆಯ ಕೊರಳಲ್ಲಿ ಧರಿಸಿದ ಮುತ್ತಿನ ಸರವು ಥಳಥಳಿಸಿ ಮಿನುಗುತ್ತ, ಮುರಿಹೊಡೆದು ಗರಗರನೆ ತಿರುಗುತ್ತ, ಅಂಕಡೊಂಕಾಗಿ ಸುತ್ತಿಕೊಂಡು, ಎದೆಯಮೇಲೆ ಉದ್ರೇಕಗೊಂಡ ಹಾವಿನಂತೆ ಬಿದ್ದಿತ್ತು. ಕುಣಿದ ರಂಭಾನೃತ್ಯವು ಎಷ್ಟು ಘನವಾದುದು! ತಾಳಬದ್ಧವಾಗಿ ಮಣಿದ ದೇಹ, ಅದರೊಂದಿಗೆ ಸರಿದು

ಹೋಗುವ ಉಟ್ಟ ಜಾರ್ಜೆಟ್ಟಿನ ಸೀರೆಯ ಗುಡಿಸುವಂತಿರುವ ನೀರಿಗೆಯ ತೆರೆಗಳು, ಬೆಳ್ಳಿಯಂತೆ ಥಳಥಳಿಸುವ ಉಸುಕನ್ನು ಮುತ್ತಿಡಲು ತವಕಿಸಿ ಹೆಣಗಾಡುತ್ತಿರುವ ತಿಂಗಳಿನ ಪಡಿರೂಪಗಳನ್ನೆಳೆ ಪಡಿಸಿಕೊಂಡ ಕಡಲತೆರೆಗಳಂತೆ ತೋರುತ್ತಿದ್ದವು. ತೆರೆಗಳು ಸಾವಕಾಶವಾಗಿ ಮುನ್ನಡೆದು ಸಾಗರವ ದಂಡೆಯನ್ನು ಮುಟ್ಟಿ ಮತ್ತೆ ಹಿಂದೆ ಸರಿದುಬಿಡುತ್ತವೆ. ಆಗ ಒಂದು ತೆರನಾದ ಸರಬರ ಸದ್ದು ಕೇಳಬರುತ್ತದೆ. ಮರುಕ್ಷಣದಲ್ಲಿ ಎಲ್ಲವೂ ಶಾಂತವಾಗಿ ಬಿಡುತ್ತದೆ. ಮಂಜುಳರಾಗ ಏರಿ ಇಳಿಯುತ್ತದೆ. ಒಯ್ಯೊಯ್ಯನೆ ಮೃದುವಾಗಿ ಚಿಕ್ಕ ಚಿಕ್ಕ ಅಲೆಗಳು ಜೋತ್ಸ್ನೆ ತುಂಬಿದ ಕಡಲ ಅಂಚನ್ನು ಮುತ್ತಿಟ್ಟು ಹಿಂದೆ ಸರಿಯುತ್ತವೆ....."

ಇಲ್ಲಿಯ ಕೃತಿಸೌಂದರ್ಯ ಮತ್ತು ಭಾಷೆಯ ರಮಣೀಯತೆಯು ಅಪೂರ್ವವಾದುದು. ಓದುತ್ತ ನಡೆದಂತೆ ಒಂದು ತೆರನಾದ ಸುಂಜುಳನಾದ ಹುಟ್ಟಿದಂತೆನಿಸುತ್ತದೆ. "....ಒಬದು ದಿನ ಆಕೆಯ ಕೂದಲುಗಳು ಕಮಲದಂತಿದ್ದರೆ ಮರುದಿನ ನಾಗರಹಾವಿನ ಪೆಡೆಯಂತೆ ಎರಡೂ ಕಿನಿಗಳನ್ನು ಬಳಸುತ್ತಿದ್ದುವು. ಕೆಲವು ಸಲ ಕಣಕಟ್ಟಿದ ತಿಂಗಳಿನ ನೆನಹು ತಂದೊಡ್ಡುತ್ತಿದ್ದರೆ, ಮತ್ತೆ ಹಲವು ಸಲ ಹಿಮಾಲಯ ಪರ್ವತ ಧಾತಿಗಳಂತೆ ತಗ್ಗು ಉಬ್ಬುಗಳು ಎದುರಿನಲ್ಲಿ ಎದ್ದು ನಿಲ್ಲುತ್ತಿದ್ದುವು...."

" ....ತಾಜಮಹಾಲಿನ ಗಾಂಭೀರ್ಯ, ಎಲ್ಲೂರಿನ ಮೋಹಕತೆ, ಅಶೋಕನ ಶಿಲಾಶಾಸನಗಳ ಅನಂತತೆಗಳು ಆಕೆಯಲ್ಲಿ ಒಟ್ಟುಳಿಗೂಡಿದ್ದವು....." " ನನ್ನ ಕೂಸು ಸತ್ತಿತು. ಆಯ್ಯೊ ! ಆ ಕೊಸೆಯ ಗಳಿಗೆ ಎಷ್ಟು ಭೀಕರವಾಗಿತ್ತು ! ಕಲ್ಲಿನಂತಿರುವ ನನ್ನ ನಿರ್ಜೀವ ಕಣ್ಣುಗಳನ್ನು ಕೇಳಿರಿ. ಕಂಡುದನ್ನು ಹೇಳುತ್ತವೆ. ಒಂದುಹನಿ ಹಾಲಿಗಾಗಿ ಹಂಬಲಿಸಿ ಆಕೆ ಸತ್ತಳು— ಒಂದು ಹನಿ ಹಾಲು ಬಾನಿನಿಂದಾದರೂ ಹನುಕಲಿಲ್ಲ; ಭೂಮಿಯಿಂದಾದರೂ ನೆಗೆಯಲಿಲ್ಲ. ನಿರ್ದಯ ಬಾನು ! ನಿರ್ದಯ ಭೂಮಿ !!

" ....ಆಕೆ ಕ್ಲಿಯೊಪಾತ್ರೆಳಾಗಿದ್ದರೆ ತನ್ನ ವಾತ್ಸಲ್ಯವನ್ನರ್ಪಿಸುತ್ತಿದ್ದಳು. ಮಮತಾಜಳಾಗಿದ್ದರೆ ತನ್ನ ತೇಜವನ್ನು ದಯಪಾಲಿಸುತ್ತಿದ್ದಳು. ವಿಕ್ಟೋರಿಯಾ ಮಹಾರಾಣಿಯಾಗಿದ್ದರೆ ತನ್ನ ಸಾಮ್ರಾಜ್ಯವನ್ನೇ ಕೊಡುತ್ತಿದ್ದಳು ! ಆದರೆ ಆಕೆ ದರಿದ್ರಳಾದ ಪುಟ್ಟ ಹುಡುಗಿ; ಆಕೆಯಲ್ಲಿ ಇದ್ದುದೆಂದರೆ ಕಟ್ಟಿಗೆಯ ಗಿಲಗಂಚಿಯೊಂದೇ; ಅದನ್ನೇ ತನ್ನ ನಿರ್ಗತಿಕ ತಂದೆಗೆ ಕೊಟ್ಟಳು....."

ಇವೇ ನೊದಲಾದ ಅನೇಕ ದೃಶ್ಯಗಳು 'ಅನ್ನದಾತಾ' ಕಾವ್ಯಾಂಜಲಿಗಿಂತಲೂ ರಮ್ಯಮಧುರವೆಂಬ ಮಾತನ್ನು ಸಿದ್ಧಗೊಳಿಸುತ್ತವೆ.

'ಅನ್ನದಾತಾ'ಕತೆಯು ದುರಂತವನ್ನು ಚಿತ್ರಿಸುವ, ಅತ್ಯುತ್ತಮವಾದ, ಹೃದಯವನ್ನು ಸೂರೆಗೊಳ್ಳುವ ಸ್ಪಷ್ಟವಾದ ವಿಮರ್ಶಾಕೃತಿಯು. ಮೊದಲಿನವೆರಡು ಭಾಗಗಳಲ್ಲಿಯ ವ್ಯಂಗ್ಯವು ಉಜ್ವಲವಾಗಿದೆ! ಮೊದಲಿನಿಂದ ತುದಿಯವರೆಗೂ ವಸ್ತುಸ್ಥಿತಿಯನ್ನು ಸ್ಪಷ್ಟಪಡಿಸಲು ಪರಿಣಾಮಕಾರಿಯಾದ ವಿಡಂಬನೆಯು ಒಂದು ಹೊಸ ರೀತಿಯಲ್ಲಿ ಮೂಡಿನಿಂತಿದೆ. ಅದರಿಂದಾಗಿಯೇ 'ಅನ್ನದಾತಾ' ಒಂದು 'ಪ್ರಜ್ವಲಿಸುವ ಶಕ್ತಿಯುತ ಕೃತಿಯೆನಿಸಿದೆ.'

'ಅನ್ನದಾತಾ'ದ ತುಂಬೆಲ್ಲ ಪ್ರಾಮಾಣಿಕತೆ ಎದ್ದುನಿಂತಿದೆ ಶಕ್ತಿಯುತ ಲಕ್ಷೇಪಣೆಯಿದೆ; ಪ್ರತಿ ಲಕ್ಷೇಪಣೆಗೂ ಸಕಾರಣವಾದ ನೆಲಗಟ್ಟಿದೆ....ಅನುರಾಗ ಮತ್ತು ಪ್ರಾಮಾಣಿಕತೆಯಿಂದ ಬರೆದ ಕೃತಿಯಿದು. ಕರುಣೆಯ ಹೊನಲೇ ಕತೆಯಲ್ಲಿ ಹರಿದಿದೆ....ನಮ್ಮ ಸಾಮಾಜಿಕ ವಿವೇಕಕ್ಕೊಂದು ಆವ್ವಾನವಿದು....ಬಾಳಿನ ಸಂದೇಶವನ್ನು ಬೀರುವ ಸಾವಿನ ಕತೆಯಿದು....ವಜ್ರಕ್ಕಿಂತಲೂ ಕಠೋರ ಮನಸ್ಸಿನವರೂ ಇಲ್ಲಿಯ ದೃಶ್ಯಗಳನ್ನು ಕಣ್ಣಾರೆ ಕಂಡು 'ಹಾಯ್ ಹಾಯ್' ಎನ್ನದೆ ಮಾರ್ಗವಿಲ್ಲ. ಕಣ್ಣೀರಿನ ಕೋಡಿ ಹರಿಸದೆ ವಿಧಿಯಿಲ್ಲ .... ಹೃದಯದಿಂದ ಹೊರಟು ಹೃದಯವನ್ನೇ ನೇರವಾಗಿ ತಟ್ಟುವ ಸತ್ಯಕತೆಯಿದು.....ಒಂದು ನಿರ್ಜೀವವಾದ ಬರೆಹವು ಎಷ್ಟರಮಟ್ಟಿಗೆ ಸಜೀವವಾಗಿ ಓದುಗರ ಅಂತಃಕರಣವನ್ನು ಕಲಕಿಬಿಡುವುದೆಂಬುದಕ್ಕೆ 'ಅನ್ನದಾತ'ಕ್ಕಿಂತ ಮಿಗಿಲಾದ ನಿದರ್ಶನವಿಲ್ಲ.

'ಅನ್ನದಾತಾ' ಬರೆದ ಕೃಷ್ಣಚಂದ್ರರ ವ್ಯಕ್ತಿತ್ವವು ಅಸಾಧಾರಣವಾಗಿದೆ. ಸಾಹಿತ್ಯರಂಗದಲ್ಲಿ ಭವಿತವ್ಯತೆ ಉಜ್ವಲವಾಗಿದೆ.

— ಶರಚ್ಚಂದ್ರರ ಶ್ರೇಷ್ಠ ಕಾದಂಬರಿ —

ಶ್ರೀ ಕಾಂತ

(ಎಂಟು ಭಾಗಗಳೂ ಪೂರ್ಣ ಆಯ್ತಾಗಿವೆ)

ಬೆಲೆ ಹತ್ತು ರೂಪಾಯಿ ಮಾತ್ರ

ಪರಭಾಷೆಗಳಲ್ಲಿಯೂ ಭಾಷಾಂತರವಾಗಿ, ಎಲ್ಲೆಲ್ಲಿಯೂ ಮನ್ನಣೆ ಪಡೆದ ಸಾರಸ್ಯವುಳ್ಳ ಕಾದಂಬರಿ. ಕೆಲವೇ ಪ್ರತಿಗಳಿವೆ ೧೦ ರೂ. M. O. ಕಳಿಸಿ, ಈಗಲೇ ತರಿಸಿಕೊಳ್ಳಿರಿ.

ಬೇರೆ ಕೆಲವು ಶರತ್ಕಾದಂಬರಿಗಗಳು

ದೇವಾಸ (ಅಂಚೆವೆಚ್ಚ ಸೇರಿ		೧—೧೨—೦
ವಿಜಯಾ	,,	೧—೧೨—೦
ವೈಕುಂಠನ ಮೃತ್ಯುಪತ್ರ	,,	೧—೧೨—೦
ರಾಜಲಕ್ಷ್ಮಿ	,	೧—೧೨—೦
ಷೋಡಶಿ	,,	೨— ೬—೦
ಚಿತ್ರ	,,	೧— ೦—೮

(ಪ್ರೇಮಪಥ, ಹೇಮಾಂಗಿನಿ, ಮಹೇಶ, ಗುರುಚರಣ, ಮಂಗಲಸೂತ್ರ, ಮಹಾಸತಿ, ಅಭಾಗಿನಿ ಸ್ವರ್ಗ ಈ ಏಳು ಕತೆಗಳ ಸೂಪು ೨—೦—೦)

ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ :—

ಸಮಾಜ ಪುಸ್ತಕಾಲಯ, ಧಾರವಾಡ.

ಸೇವಕ*

ಶ್ರೀ ಎಸ್. ಸುಬ್ಬರಾಮಯ್ಯ, ಬಿ. ಎ. (ಆನರ್ಸ್), ಗೋರಿಬಿದನೂರು

★

ಗೆರಾಸಿಮನೂ ಸ್ವಾರ್ಥಸಾಧನೆಗೆ ಮನಸ್ಸು ಮಾಡಿದ್ದರೆ, ಪಾಪ!—ಆ ಮುದಿವಯಸ್ಸಿನ ಗಂಡ-ಹೆಂಡಿರ ಪಾಡು ಎಂತಹದಾಗುತ್ತಿತ್ತು! ಆದರೆ ಗೆರಾಸಿಮನು, ಹೃದಯವು ಅರಳಿದ ಮನುಷ್ಯನಾಗಿದ್ದ.

★

೧

ಗೆರಾಸಿಮನು ಮಾಸ್ಕೋನಿಗೆ ಹಿಂದಿರುಗಿದಾಗ ಕ್ರಿಸ್‌ಮಸ್ ಹಬ್ಬಕ್ಕೆ ಇನ್ನು ಸ್ವಲ್ಪ ದಿನ ಮಾತ್ರ ಇತ್ತು. ಆದ್ದರಿಂದ ಆಗ ಕೆಲಸ ಸಿಕ್ಕುವುದು ಅತ್ಯಂತ ಕಷ್ಟವಾಗಿತ್ತು. ಏನಾದರೂ ಅಲ್ಪ ಬಹುಮಾನ ಸಿಗಬಹುದೆಂಬ ನಿರೀಕ್ಷೆಯಿಂದ, ಎಷ್ಟೇ ಸಣ್ಣ ಕೆಲಸವಾದರೂ, ಯಾರೂ ಅದನ್ನು ಬಿಡದೆ ಹಾಗೆಯೇ ಇರುತ್ತಿದ್ದ ಕಾಲ ಅದು. ಪೂರ್ತಿ ಮೂರು ವಾರಗಳಿಂದ ಕೆಲಸಕ್ಕಾಗಿ ಹುಡುಕಿ ಹುಡುಕಿ ಈ ರೈತರ ಹುಡುಗ ಬಳಲಿ ಬೆಂಡಾಗಿದ್ದ.

ಅವನು ತನ್ನ ಹಳ್ಳಿಯ ಸ್ನೇಹಿತರು ಮತ್ತು ದೂರದ ನೆಂಟರೊಡನೆ ತಂಗಿದ್ದುದರಿಂದ, ಅವನಿಗೆ ಇನ್ನೂ ಅನ್ನಾಹಾರಗಳಿಗೆ ತೊಂದರೆ ಬಾರದಿದ್ದರೂ, ತನ್ನಂತಹ ದೃಢಕಾಯನಾದ ತರುಣನಿಗೂ ಯಾವ ಕೆಲಸವೂ ಸಿಕ್ಕದೆ ಇದ್ದದ್ದು ಅವನಿಗೆ ನಿರಾಶೆಯನ್ನುಂಟುಮಾಡಿತ್ತು.

ಗೆರಾಸಿಮನು ಚಿಕ್ಕ ಮಗುವಾಗಿದ್ದಾಗಿನಿಂದಲೂ ಮಾಸ್ಕೋದಲ್ಲೇ ವಾಸಮಾಡಿದ್ದನು. ಇನ್ನೂ ಹಸುಳೆಯಾಗಿದ್ದಾಗಲೇ ಒಂದು ಮದ್ಯದ ಕಾರ್ಖಾನೆಯಲ್ಲಿ ಸೀಸೆಗಳನ್ನು ತೊಳೆಯುವ ಕೆಲಸ ಮಾಡಿಕೊಂಡಿದ್ದು, ಸ್ವಲ್ಪ ಕಾಲದ ಮೇಲೆ ಒಂದು ಬಂಗಲೆಯಲ್ಲಿ ಆಳಾಗಿ ಸೇರಿಕೊಂಡಿದ್ದನು. ಎರಡು ವರ್ಷಗಳಿಂದ ಅವನು ಒಬ್ಬ ವರ್ತಕನ ಬಳಿ ಕೆಲಸದಲ್ಲಿದ್ದನು. ಸೈನ್ಯದ ಕೆಲಸಕ್ಕಾಗಿ ಅವನಿಗೆ ತನ್ನ ಹಳ್ಳಿಯಿಂದ ಕರೆ ಬಾರದಿದ್ದರೆ, ಅವನು ಇನ್ನೂ ಅದೇ ಕೆಲಸದಲ್ಲಿ ಇದ್ದಿರಬಹುದಾಗಿತ್ತು; ಆದರೆ ಅವನನ್ನು ಸೈನ್ಯಕ್ಕೂ ಸೇರಿಸಿಕೊಳ್ಳಲಿಲ್ಲ. ತನಗೆ ಪೂರ್ತಿ ಹೊಸದಾದ ಹಳ್ಳಿಯ ಜೀವನ ಅವನಿಗೆ ಬಹಳ ಸಪ್ಪೆಯಾಗಿ ತೋರಿ, ಬೇಗ ಅವನಿಗೆ ಹಳ್ಳಿ ಬೇಜಾರಾಯಿತು. ಮಾಸ್ಕೋವಿನಲ್ಲಿ ಬರೀ ಕಲ್ಲುಗಳನ್ನು ಲೆಕ್ಕ ಮಾಡುತ್ತಾ ಇರಬೇಕಾಗಿ ಬಂದರೂ ಸರಿ, ಅಲ್ಲಿಗೇ ಹೊರಟು ಬಿಡಬೇಕೆಂದು ಅವನು ತೀರ್ಮಾನಿಸಿದ್ದನು.

ಏನೂ ಕೆಲಸವಿಲ್ಲದೆ ಬೀದಿಯಿಂದ ಬೀದಿಗೆ ಅಲೆದಾಡುವುದು ಅವನಿಗೆ ನಿಮಿಷ-ನಿಮಿಷಕ್ಕೂ ಹೆಚ್ಚು ಕಷ್ಟಕರವಾಗುತ್ತಾ ಬಂತು. ಎಂತಹ ಕೆಲಸವಾದರೂ ಸರಿ, ಸೇರಿ ಬಿಡೋಣವೆಂದು ಅವನು ಪಟ್ಟ ಪ್ರಯತ್ನ ಅಷ್ಟಿಷ್ಟಲ್ಲ. ತನ್ನ ಪರಿಚಯಸ್ಥರನ್ನೆಲ್ಲಾ ಹೀಡಿಸಿದ್ದಾಯಿತು ರಸ್ತೆಯಲ್ಲಿ ಜನರನ್ನು ಅಡ್ಡಹಾಕಿ ನಿಲ್ಲಿಸಿ, 'ಎಲ್ಲಾದರೂ ಕೆಲಸ ಖಾಲಿ ಇದೆಯೇ?' ಎಂದು ಅವರನ್ನು ಕೇಳಿದ್ದಾಯಿತು; ಆದರೆ ಯಾವುದೂ ಏನೂ ಉಪಯೋಗವಾಗಲಿಲ್ಲ.

ಕೊನೆಗೆ ತಾನು ಇತರರಿಗೆ ಭಾರವಾಗಿರುವುದು ಸರಿಯಲ್ಲವೆಂದು ಅವನಿಗೆನ್ನಿಸಿತು. ಕೆಲವರು ಅವನ ಮುಖ ಕಂಡರೇ ಬೇಜಾರು ಪಟ್ಟುಕೊಳ್ಳುತ್ತಿದ್ದರು; ಇನ್ನು ಕೆಲವರಂತೂ ಅವನ ದೆಸೆಯಿಂದ ತಮ್ಮ ಧಣಿಗಳ ಅಸಮಾಧಾನಕ್ಕೂ ಸಿಕ್ಕಿದ್ದರು. ಅವನಿಗೆ ಮುಂದೆ ಏನು ಮಾಡಬೇಕೆಂಬುದೇ ಗೊತ್ತಾಗಲಿಲ್ಲ. ಎಷ್ಟೋ ಸಲ, ಒಂದು ಇಡೀ ದಿನ ಏನೂ ತಿನ್ನದೆ ಉಪವಾಸ ಕೂಡ ಇರುತ್ತಿದ್ದನು.

೨

ಒಂದು ದಿನ ಗೆರಾಸಿಮನು ತನ್ನ ಹಳ್ಳಿಯ ಗೆಳೆಯನೊಬ್ಬನ ಮನೆಗೆ ಹೋದನು. ಅವನ ಮನೆ ಇದ್ದುದು ಮಾಸ್ಕೋದ ಒಂದು ಕೊಟ್ಟ ಕೊನೆಯಾದ ಸೋಕೋಲ್‌ನಿಕ್ ಭಾಗದಲ್ಲಿ. ಅವನು ಅನೇಕ ವರ್ಷಗಳಿಂದ ಷಾರೋವ್ ಎಂಬ ವರ್ತಕನ ಬಳಿ ಗಾಡಿ ಹೊಡೆಯುವ ಕೆಲಸದಲ್ಲಿದ್ದನು. ಅವನು ತನ್ನ ಧಣಿಯ ಪೂರ್ಣ ದಯೆಗೂ ನಂಬಿಕೆಗೂ ಪಾತ್ರನಾಗಿದ್ದು, ಅವನ ಅನುಗ್ರಹ ಇವನ ಮೇಲೆ ಪೂರ್ತಿ ಇತ್ತು. ಮುಖ್ಯವಾಗಿ ಅವನ ಚುರುಕುನಾಲಿಗೆ ಇದಕ್ಕೆ ಕಾರಣ. ಇತರ ಎಲ್ಲಾ ಸೇವಕರ ವಿಷಯವನ್ನೂ ಇವನು ತನಗೆ ಕೂಲಂಕಷವಾಗಿ ತಿಳಿಸುತ್ತಿದ್ದುದರಿಂದ, ಷಾರೋವ್ ಇವನನ್ನು ಮೆಚ್ಚಿದ್ದನು.

ಗೆರಾಸಿಮನು ಅವನ ಬಳಿಗೆ ಬಂದು ನಮಸ್ಕರಿಸಿದನು. ಷಾರೋಟಿನ ಸಾರಥಿ ಅವನನ್ನು ಆದರದಿಂದ ಸ್ವಾಗತಿಸಿ, ಟೀ ಮತ್ತು

* ಸುಪ್ರಸಿದ್ಧ ರಷಿಯನ್ ಕತೆಗಾರನ ಕತೆಯೊಂದರ ಭಾಷಾಂತರ-ವಿದು. —ಲೇ.

ಉಲಾಹಾರ ಕೊಟ್ಟು, 'ನಿನ್ನ ಬಾಳಿನ ಅಭಿವೃದ್ಧಿ ಹೇಗೆ ಹೇಗೆ ನಡೆದಿದೆ?' ಎಂದು ಅವನನ್ನು ಕೇಳಿದನು.

'ಏನು ಹೇಳಲಿ, ಯೆಗೊರ್ ಡೇನಿಲಿಚ್? ತುಂಬಾ ಫಜೀತಿಯಾಗಿಬಿಟ್ಟಿದೆ. ಎಷ್ಟೋ ವಾರಗಳಿಂದ ನನಗೆ ಕೆಲಸವೇ ಇಲ್ಲ.' ಎಂದು ಗೆರಾಸಿಮನು ಹೇಳಿಕೊಂಡನು.

'ಏಕೆ? ನಿನ್ನ ಹಳೆಯ ಧಣಿಯ ಹತ್ತಿರಕ್ಕೆ ನೀನು ಪುನಃ ಹೋಗಲಿಲ್ಲವೇ?'

'ಹೋಗಿದ್ದೆ.'

'ಅವನು ನಿನಗೆ ತಿರುಗಿ ಕೆಲಸ ಕೊಡಲಿಲ್ಲವೇ?'

'ಆ ಕೆಲಸ ಆಗಲೇ ಭರ್ತಿಯಾಗಿ ಹೋಗಿತ್ತು.'

'ಇನ್ನೇನು? ಈಗಿನ ಹುಡುಗರ ಆಡಳಿತವೇ ಇಷ್ಟು! ಕೆಲಸವಿಲ್ಲಿರುವಾಗ ಹಾಗೋ ಹೀಗೋ ಎಂದು ಕೆಲಸಮಾಡಿಕೊಂಡಿದ್ದು ಬಿಡುವುದು; ಕೆಲಸಬಿಡುವಾಗ ಪುನಃ ಮೊದಲಿನ ಯಜಮಾನನಿಗೆ ತೋರೆ ಕೂಡ ತೋರಿಸುವುದು ಅಸಾಧ್ಯವಾಗುವಂತೆ ಮಾಡಿಕೊಳ್ಳುವುದು. ನಮ್ಮ ವಿಷಯದಲ್ಲಿ ಹೆಚ್ಚಿನ ಮೆಚ್ಚಿಗೆ ತೋರಿಸುವ ಹಾಗೆ ಧಣಿಯ ಸೇವೆಮಾಡಿದರೆ, ನಾವು ತಿರುಗಿ ಬಂದಾಗ ಹೊಸಬನನ್ನು ವಜಾಮಾಡಿಯಾದರೂ ನಮ್ಮನ್ನು ಕೆಲಸಕ್ಕೆ ಸೇರಿಸಿಕೊಂಡೇ ಸೇರಿಸಿಕೊಳ್ಳುತ್ತಾನೆ ಆತ.'

'ಮನುಷ್ಯಮಾತ್ರನಿಂದ ಅದು ಹೇಗೆ ಸಾಧ್ಯ? ಈ ಕಾಲದಲ್ಲಿ ಅಂತಹ ಧಣಿಗಳು ತಾನೆ ಯಾರು ಸಿಕ್ಕುತ್ತಾರೆ? ಅದೂ ಅಲ್ಲದೆ ನಾವು ತಾನೆ ಏನು? ದೇವತೆಗಳೇ?'

'ಸುಮ್ಮನೆ ಏಕೆ ಬಾಯಿ ನೋಯಿಸಿಕೊಳ್ಳುತ್ತೀಯೆ? ನನ್ನ ವಿಷಯ ಸ್ವಲ್ಪ ಕೇಳು. ನಾನೇನಾದರೂ ಅಕಸ್ಮಾತ್ತಾಗಿ ಕೆಲಸ ಬಿಟ್ಟು ಹಳ್ಳಿಗೆ ಹೋಗಿ ಪುನಃ ವಾಪಸು ಬಂದರೆ, ಮರುಮಾತಾಡದೆ ನನ್ನನ್ನು ಷಾರೋವ್ ಕೆಲಸಕ್ಕೆ ಸೇರಿಸಿಕೊಳ್ಳುವುದು ಮಾತ್ರವೇ ಅಲ್ಲ; ನಾನು ಹಿಂದಿರುಗಿದ್ದಕ್ಕಾಗಿ ಸಂತೋಷ ಕೂಡ ವ್ಯಕ್ತಪಡಿಸುತ್ತಾನೆ.'

ಗೆರಾಸಿಮನು ಖಿನ್ನನಾಗಿ ಕುಳಿತಿದ್ದನು. ತನ್ನ ಗೆಳೆಯ ಡಿಜಂಭ ಕೊಚ್ಚಿಕೊಳ್ಳುತ್ತಿದ್ದುದು ಅವನಿಗೆ ಅರ್ಥವಾಯಿತು. ಆದರೂ ಅವನನ್ನು ಸಂತೋಷಪಡಿಸೋಣವೆಂದು ಇವನಿಗೆ ತೋರಿ, 'ಆದು ನನಗೆ ಗೊತ್ತು, ಯೆಗಾರ್ ಡೇನಿಲಿಚ್. ಆದರೆ ನಿನ್ನಂತಹವರು ಸಿಕ್ಕುವುದು ಕಷ್ಟ. ನೀನೂ ನನ್ನಂತೆ ಒಬ್ಬ ಬಡ ಜವಾನನಾಗಿದ್ದರೆ, ನಿನ್ನ ಯಜಮಾನ ನಿನ್ನನ್ನು ಕೂಡ ಹನ್ನೆರಡುವರ್ಷಗಳ ಕಾಲ ಇಟ್ಟುಕೊಳ್ಳುತ್ತಿರಲಿಲ್ಲ.' ಎಂದು ಅವನನ್ನು ಹೊಗಳಿದನು.

ಯೆಗಾರನು ಸಂತೋಷದಿಂದ ಮುಗುಳುನಗೆ ಬೀರಿ, 'ಅದೇ ನಾನು ಹೇಳುವುದು. ನೀನೂ ನನ್ನಂತೆಯೇ ಇದ್ದುಕೊಂಡು ಸೇವೆ ಮಾಡಿದ್ದರೆ, ನಿನಗೆ ಇಷ್ಟುಕಾಲ ಕೆಲಸಕ್ಕೆ ತೊಂದರೆಯೇ ಆಗುತ್ತಿರಲಿಲ್ಲ.' ಎಂದು ತೀರ್ಪು ಕೊಟ್ಟನು.

ಗೆರಾಸಿಮನು ಏನೂ ಜವಾಬು ಕೊಡಲಿಲ್ಲ. ಯಜಮಾನ ಯೆಗಾರನಿಗೆ ಹೇಳಿಕಳುಹಿಸಿದನು. 'ಸ್ವಲ್ಪ ಇರು, ಬೇಗ ಬಂದುಬಿಡುತ್ತೇನೆ.' ಎಂದು ಯೆಗಾರನು ಗೆರಾಸಿಮನಿಗೆ ಹೇಳಿದನು.

'ಹಾಗೆಯೇ ಆಗಲಿ.'

೩

ಯೆಗಾರನು ವಾಪಸುಬಂದವನೇ, ಇನ್ನು ಅರ್ಧಗಂಟೆಯೊಳಗಾಗಿ ತಾನು ಕುದುರೆಗೆ ಜೀನು ಹೊದಿಸಿ, ಗಾಡಿಸಿದ್ಧಮಾಡಿಕೊಂಡು ತನ್ನ ಧಣಿಯನ್ನು ಪಟ್ಟಣದೊಳಕ್ಕೆ ಕರೆದುಕೊಂಡು ಹೋಗಬೇಕೆಂದು ತಿಳಿಸಿದನು. ತನ್ನ ಪೈಪನ್ನು ಹಚ್ಚಿಕೊಂಡು ರೂಮಿನಲ್ಲಿ ಸ್ವಲ್ಪಹೊತ್ತು ಶತಪಥ ತಿರುಗುತ್ತಿದ್ದು, ಕಡೆಗೆ ಗೆರಾಸಿಮನ ಮುಂದೆ ನಿಂತುಬಿಟ್ಟನು.

'ಹೋಗಲಿ, ಇಲ್ಲಿ ಕೇಳು. ನಿನಗೆ ಒಪ್ಪಿಗೆಯಿದ್ದರೆ, ಇಲ್ಲಿ ಒಬ್ಬ ಸೇವಕನ ಕೆಲಸ ನಿನಗೆ ಕೊಡಬೇಕೆಂದು ನಾನು ಧಣಿಯನ್ನು ಕೇಳಿಕೊಳ್ಳುತ್ತೇನೆ.'

'ಇಲ್ಲಿ ಈಗ ಆ ಜಾಗ ಖಾಲಿ ಇದೆಯೇನು?'

'ಇಲ್ಲ. ಈಗ ಒಬ್ಬ ಇದ್ದಾನೆ; ಆದರೆ ಅವನೇನೂ ಉಪಯೋಗವಿಲ್ಲ. ಅವನಿಗೂ ವಯಸ್ಸಾಗುತ್ತಾ ಬಂದು ಕೆಲಸ ಸಾಗುವುದು ಬಹಳ ಕಷ್ಟವಾಗಿದೆ. ಈ ನೆರೆ ಅಂತಹ ಸುಂದರ ಸ್ಥಳವಲ್ಲದಿರುವುದು ನಮ್ಮ ಆದೃಷ್ಟ. ಇಲ್ಲದೆ ಇದ್ದರೆ, ಹೆಚ್ಚು ನಿರ್ಮಲವಾಗಿ ಇಡದೆ

ಸುಧಾರಿಸಿದ ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟಿರುವುವು!

ಹೊಸಕಾಲಕ್ಕೆ ಬೇಕಾದ ಹೊಸ ಉಪಕ್ರಮದ ಗಣಿತ

ನೂತನ ಗಣಿತ

ಸರಕಾರದಿಂದ ನುಂಜೂರ್	೬ನೆಯ ವರ್ಗಕ್ಕಾಗಿ ೦-೧೫-೦
೫ನೆಯ ವರ್ಗಕ್ಕಾಗಿ ೧-೦-೦	**೭ನೆಯ ವರ್ಗಕ್ಕಾಗಿ ೧-೨-೦**
(ಪೂರ್ವಾವಿತಿ ಜವಾಬುಸಹ)	ಶೀ. "ಗಲಗಲಿ" ಬರೆದುವು

ಮಾರಾಟಗಾರರು:— ಆಕಳವಾಡಿ ಬುಕ್ ಡಿಪೋ, ಧಾರವಾಡ.

ಮಲೇರಿಯಾ
ಇನ್ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು

ಒಡನೆ ವಾಸಿ ಹೊಂದುತ್ತವೆ.

ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.

ಮಾದನ್ ಸನ್ಸ್ ಮತ್ತು ಕಂ. **ಕೆಮಿಸ್ಟ್ಸ್,**
ಮುಂಬಯಿ—೨.

ಹೀಗೆ ಕೆಲಸಮಾಡಿದರೆ, ಪೋಲಿಸಿನವರು ಗಲಾಟೆ ಹಚ್ಚದೆ ಸುಮ್ಮನೆ ಬಿಡುತ್ತಿದ್ದರೇನು?'

'ಯೆಗಾರ್ ಡೇನಿಲಿಚ್, ಸದ್ಯ, ನಿನ್ನಿಂದ ಸಾಧ್ಯವಾಗುವುದಾದರೆ, ದಯವಿಟ್ಟು ನನ್ನ ಪರವಾಗಿ ಅವರಿಗೆ ಒಂದು ಮಾತು ಹೇಳು. ಇದಕ್ಕೆ ನಾನು ಆಜೀವ ನಿನ್ನ ಹಿತವನ್ನೇ ಕೋರುತ್ತೇನೆ. ಕೆಲಸವಿಲ್ಲದೆ ಇದ್ದು ನನಗಂತೂ ಸಾಕಾಗಿಹೋಗಿದೆ.'

'ಸರಿ, ಆಗಲಿ. ನಿನಗೋಸ್ಕರ ಹೇಳುತ್ತೇನೆ. ನಾಳೆ ತಿರುಗೀ ಇಲ್ಲಿಗೆ ಬಾ. ಈಗ ಸದ್ಯಕ್ಕೆ ಈ ಹತ್ತು ಕೋಪೆಕಿನ ನಾಣ್ಯ ತೆಗೆದುಕೋ. ಇದು ನಿನಗೆ ಉಪಯೋಗವಾಗಬಹುದು.'

'ಯೆಗಾರ್ ಡೇನಿಲಿಚ್, ನಿನಗೆ ತುಂಬಾ ಪಂದನೆಗಳು. ಹಾಗಾದರೆ ನೀನು ನನಗಾಗಿ ಪ್ರಯತ್ನಪಡುತ್ತೀಯಾ? ದಯವಿಟ್ಟು ನನ್ನನ್ನು ಕಾಪಾಡು.'

'ಆಗಲಿ, ನಾನು ಪ್ರಯತ್ನಮಾಡಿನೋಡುತ್ತೇನೆ.'

ಗೆರಾಸಿಮನು ಅಲ್ಲಿಂದ ಹೊರಟು ಹೋದನು; ಯೆಗಾರನು ಕುದುರೆಗಳಿಗೆ ಜೀನು ಹೊದಿಸಿ ಸಿದ್ಧಮಾಡಿ, ಸಾರಥಿಯ ಪೋಷಾಕನ್ನು ಧರಿಸಿ, ಮನೆಯ ಮುಂಬಾಗಿಲಿನ ಬಳಿ ಗಾಡಿ ತಂದು ನಿಲ್ಲಿಸಿದನು. ಶ್ರೀಮಾನ್ ಷಾರೋವ್ ಮನೆಯಿಂದ ಹೊರಬಂದು ಗಾಡಿಯೇರಿ ಕುಳಿತೊಡನೆಯೇ ಕುದುರೆಗಳು ನಾಗಾಲೋಟ ಓಡಿದುವು. ಷಾರೋವನು ಊರಿನ ಒಳಗೆ ತನ್ನ ಕೆಲಸ ಮುಗಿಸಿಕೊಂಡು ಮನೆಗೆ ಹಿಂದಿರುಗಿದನು. ತನ್ನ ಧಣಿ ಹರ್ಷಚಿತ್ತನಾಗಿರುವುದನ್ನು ಕಂಡು ಯೆಗಾರನು, 'ಸ್ವಾಮಿ, ತಮ್ಮಿಂದ ನನಗೊಂದು ಉಪಕಾರ ಆಗಬೇಕು.' ಎಂದು ಕೇಳಿದನು.

'ಏನದು?'

'ನನ್ನ ಹಳ್ಳಿಯಿಂದ ಒಬ್ಬ ಯುವಕ ಬಂದಿದ್ದಾನೆ. ಅವನು ಬಹಳ ಯೋಗ್ಯ. ಆದರೆ ಅವನಿಗೆ ಎನೂ ಕೆಲಸ ಸಿಕ್ಕಿಲ್ಲ.'

'ಹೂಂ!'

'ನೀವು ದಯವಿಟ್ಟು ಅವನಿಗೊಂದು ಕೆಲಸ ಕೊಡಬೇಕು.'

'ಯಾವ ಕೆಲಸ ಖಾಲಿ ಇದೆ ಇಲ್ಲಿ?'

'ಮನೆಯ ಸೇವಕನ ಕೆಲಸ ಕೊಡಬಹುದಲ್ಲಾ.'

'ಪಾಲಿಕಾರ್ ವಿಚನೋ?'

'ಅವನಿಂದ ಏನು ಪ್ರಯೋಜನ? ಅವನನ್ನು ತಾವು ಕೆಲಸದಿಂದ ವಜಾ ಮಾಡಿಬಿಡಬೇಕು.'

'ಅದು ನ್ಯಾಯವಲ್ಲ. ಎಷ್ಟೋ ವರ್ಷಗಳಿಂದ ಅವನು ನಮ್ಮ ಮನೆಯಲ್ಲಿದ್ದಾನೆ. ನಿಷ್ಕಾರಣವಾಗಿ ಅವನನ್ನು ತೆಗೆದು ಹಾಕುವುದು ಸಾಧ್ಯವಿಲ್ಲ.'

'ಅವನು ಅನೇಕ ವರ್ಷಗಳಿಂದ ನಿಮ್ಮ ಕೆಲಸ ಮಾಡಿದ್ದಾನೆಂದೇ ಇಟ್ಟುಕೊಂಡರೂ, ಅವನೇನು ಬಿಟ್ಟಿ ಮಾಡಿದನೇ? ಸಂಬಳ ತೆಗೆದುಕೊಂಡೇ ಇದ್ದಾನೆ. ವೃದ್ಧಾಪ್ಯಕ್ಕೋಸ್ಕರ ಅದರಲ್ಲಿ ಕೆಲವು ಡಾಲರುಗಳನ್ನಾದರೂ ತೆಗೆದಿಟ್ಟೇ ಇರುತ್ತಾನೆ.'

'ತೆಗೆದಿಡುವುದು! ಅದು ಹೇಗೆ ಸಾಧ್ಯ ಅವನ ಸಂಬಳದಲ್ಲಿ? ಅವನೇನು ಒಂಟಿಯಾಗಿದ್ದಾನೆಯೇ? ಅವನು ಹೆಂಡತಿಯ ಹೊಟ್ಟೆಪಾಡು ನೋಡಬೇಡವೇ?'

'ಅವನ ಹೆಂಡತಿಯೂ ಮುಸುರೆಯ ಕೆಲಸ—ಮನೆಗೆಲಸಗಳಲ್ಲಿ ಸಂಪಾದಿಸುತ್ತಾಳೆ.'

'ತುಂಬಾ ಸಂಪಾದಿಸಿರಬೇಕು! ಅದರಲ್ಲಿ ಒಂದು ಬಂಗಲೆ ಕೊಳ್ಳಬಹುದು ಅಲ್ಲವೇ?'

'ಪಾಲಿಕಾರ್ ವಿಚನ ವಿಷಯ ನೀವು ಇಷ್ಟೇಕೆ ಹಚ್ಚಿಕೊಳ್ಳಬೇಕು? ನಿಜವಾಗಿಯೂ ಅವನು ಕೆಲಸಕ್ಕೆ ಲಾಯಕ್ಕಿಲ್ಲ. ಅವನಿಗೇಕೆ ವೃಥಾ ಸಂಬಳ ದಂಡಮಾಡಬೇಕು? ಹಿಮವನ್ನು ಕೂಡ ಹೊತ್ತಿಗೆ ಸರಿಯಾಗಿ ಗುಡಿಸಿ ಹಾಕುವುದಿಲ್ಲ; ಯಾವ ಕೆಲಸವನ್ನೂ ಜೆನ್ನಾಗಿ ಮಾಡುವುದಿಲ್ಲ. ರಾತ್ರಿಯ ಕಾವಲಿನ ಕೆಲಸ ಅವನ ಪಾಲಿಗೆ ಬಂದಾಗ, ಒಂದು ರಾತ್ರಿಗೆ ಹತ್ತು ಸಲವಾದರೂ ಕಳ್ಳ ತಪ್ಪಿಸಿಕೊಳ್ಳುತ್ತಾನೆ. ಅಷ್ಟು ಜಳ ಕೂಡ ಅವನಿಗೆ ಸಹಿಸಲಾಗುವುದಿಲ್ಲ. ಇವನ ದೆಸೆಯಿಂದ ಎಂದಾದರೂ ನಿಮಗೆ ಪೋಲೀಸಿನವರು ತೊಂದರೆ ಕೊಟ್ಟೇ ಕೊಡುತ್ತಾರೆ, ನೋಡುತ್ತಿರಿ. ಪೋಲಿಸ್ ಇನ್‌ಸ್ಪೆಕ್ಟರು ಬಂದು ನಿಮ್ಮನ್ನು ಪ್ರಶ್ನಿಸಲಾರಂಭಿಸುತ್ತಾನೆ. ಆಗ ಪಾಲಿಕಾರ್ ವಿಚನ ಪರವಾಗಿ ವಾದಿಸುವುದು ನಮಗೆ ಅಷ್ಟೇನೂ ಹಿತಕರವಾಗುವುದಿಲ್ಲ.'

'ಏನೇ ಆದರೂ ಇದು ಬಹಳ ಪೇಚಿನ ಕೆಲಸ. ಅವನು

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.
ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೊಜೆನ್— ಕರ್ನಾಟಕದ ಪ್ರಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ಕ್ವಿನಾಯ್ನ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ಮೇಲೆ ಅತ್ಯಂತ ಆಶ್ಚರ್ಯಕಾರಕ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಪ್ಲೀಹವನ್ನು ಸರಿಪಡಿಸಿ ಪೂರ್ವ ಸ್ಥಿತಿಗೆ ತರುವದು.

ವರ್ಮಿನೋಲ್ (ಜಂತುನಾಶಿನಿ)— ಈ ಔಷಧಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇದರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ

ಮ್ಯಾನೇಜಿಂಗ್ ಏಜೆಂಟರು :
ಮೆಸರ್ಸ್ : ಮಿರ್ಜಾನಕರ ಮತ್ತು ಕಂಪನಿ

ನನ್ನೊಡನೆ ಹದಿನೈದು ವರ್ಷಗಳಿಂದ ಇದ್ದಾನೆ. ಈಗ ಮುದಿವಯಸ್ಸಿನಲ್ಲಿ ಅವನಿಗೆ ಈ ರೀತಿ ಮಾಡಿದರೆ—ಅದು ಪಾಪ!

'ಪಾಪ! ಏಕೆ, ಅವನಿಗೆ ನೀವೇನು ತೊಂದರೆ ಮಾಡಿದ ಹಾಗಾಯಿತು? ಅವನೇನೂ ಉಪವಾಸ ಇರುವುದಿಲ್ಲ; ಧರ್ಮಶಾಲೆಗೆ ಸೇರಿಕೊಳ್ಳುತ್ತಾನೆ. ವೃದ್ಧಾಪ್ಯದಲ್ಲಿ ವಿರಾಮವಾಗಿ ಕಾಲ ಕಳೆಯುವುದು ಅವನಿಗೂ ಒಳ್ಳೆಯದೇ.'

ಷಾರೋವ್ ಸ್ವಲ್ಪ ಹೊತ್ತು ಹಾಗೆಯೇ ಯೋಚನೆ ಮಾಡಿ, ಕೊನೆಗೆ 'ಆಗಲಿ. ನಿನ್ನ ಗೆಳಯನನ್ನು ಇಲ್ಲಿಗೆ ಕರೆದುಕೊಂಡು ಬಾ, ನೋಡೋಣ.' ಎಂದು ಹೇಳಿದನು.

'ದಯವಿಟ್ಟು ಅವನನ್ನು ತೆಗೆದುಕೊಳ್ಳಬೇಕು, ಸ್ವಾಮಿ. ಅವನು ಬಹಳ ಯೋಗ್ಯ. ತುಂಬಾ ದಿನಗಳಿಂದ ಅವನಿಗೆ ಕೆಲಸವೇ ಸಿಕ್ಕಿಲ್ಲ, ಪಾಪ. ಅವನು ನಂಬಿಗಸ್ಥನಾಗಿ ತೃಪ್ತಿಕರವಾಗಿ ಕೆಲಸ ಮಾಡುವುದಕ್ಕೆ ನಾನು ಹೊಣೆ. ಸೈನ್ಯದ ಕೆಲಸಕ್ಕೆ ಕರೆ ಬಂದದ್ದರಿಂದ, ಮೊದಲಿದ್ದ ಕೆಲಸವನ್ನು ಅವನು ಬಿಡಬೇಕಾಗಿ ಬಂತು. ಇಲ್ಲದಿದ್ದರೆ ಮೊದಲಿನ ಯಜಮಾನರು ಅವನನ್ನು ಎಂದೆಂದಿಗೂ ಬಿಟ್ಟುಕೊಡುತ್ತಲೇ ಇರಲಿಲ್ಲ.'

೪

ಮಾರನೆಯ ಸಂಜೆ ಗೆರಾಸಿಮನು ಪುನಃ ಬಂದು, 'ಏನು? ಏನಾದರೂ ಫಲಕಾರಿಯಾಯಿತೇ ನಿನ್ನ ಪ್ರಯತ್ನ?' ಎಂದು ಕೇಳಿದನು.

'ಸ್ವಲ್ಪ ಆಗಿದೆ. ಸಿಕ್ಕಬಹುದು ಎಂದು ತೋರುತ್ತೆ. ಮೊದಲು ಸ್ವಲ್ಪ ಟೀ ಕುಡಿದು ಧಣಿಗಳ ಬಳಿಗೆ ಹೋಗೋಣ.'

ಗೆರಾಸಿಮನಿಗೆ ಟೀಯಲ್ಲಿ ಆಸಕ್ತಿ ಇರಲಿಲ್ಲ. ಯಾವುದನ್ನೂ ಬೇಗ ತೀರ್ಮಾನ ಮಾಡಿಕೊಂಡು ಬಿಡಬೇಕೆಂದು ಅವನಿಗೆ ಆತುರ. ಆದರೂ ತನ್ನ ಸ್ನೇಹಿತನ ಒತ್ತಾಯಕ್ಕೋಸ್ಕರ ಎರಡು ಲೋಟ ಟೀಯನ್ನು ಸುಮ್ಮನೆ ನುಂಗಿದನು. ಆ ಮೇಲೆ ಇಬ್ಬರೂ ಷಾರೋವ್‌ನ ಬಳಿಗೆ ಹೋದರು.

ಗೆರಾಸಿಮನು ಮೊದಲು ಎಲ್ಲಿದ್ದನೆಂದೂ, ಅವನಿಗೆ ಯಾವ್ಯಾವ ಕೆಲಸ ಬರುತ್ತಿತ್ತೆಂದೂ ಷಾರೋವ್ ಅವನನ್ನು ಕೇಳಿದನು. ಕೊನೆಗೆ ಮಾರನೆಯ ದಿನದಿಂದಲೇ ಅವನು ಕೆಲಸಕ್ಕೆ ಬರಬೇಕೆಂದು ಅವನಿಗೆ ಅಪ್ಪಣೆ ಮಾಡಿದನು.

ತನ್ನ ಅದೃಷ್ಟದ ಹೊಡೆತಕ್ಕೆ ಗೆರಾಸಿಮನಿಗೆ ಮೈಮೇಲಿನ ಪ್ರಜ್ಞೆಯೇ ತಪ್ಪಿದಂತಾಯಿತು. ಮಿತಿಮೀರಿದ ಸಂತೋಷದ ಪ್ರಭಾವದಿಂದ ಅವನಿಗೆ ನಡೆಯುವುದು ಕೂಡ ಕಷ್ಟವಾಯಿತು. ಅವನು ಅಲ್ಲಿಂದ ಯೆಗಾರನ ರೂಮಿಗೆ ಹೋದನು. ಯೆಗಾರನು ಅವನಿಗೆ ಹೇಳಿದನು :

'ಕೆಲಸವೇನೋ ಸಿಕ್ಕಿತು. ನನಗೆ ಕೆಟ್ಟ ಹೆಸರು ಬರದಂತೆ ಚೆನ್ನಾಗಿ ಕೆಲಸ ಮಾಡು. ಯಜಮಾನರುಗಳ ಸ್ವಭಾವ ನಿನಗೆ ಗೊತ್ತೇ ಇದೆ. ನೀನೇನಾದರೂ ಹೊಸದರಲ್ಲಿ ಒಂದು ಸಲ ತಪ್ಪು ಮಾಡಿದರೆ, ಆ ಮೇಲೆ ಅವರಿಗೆ ಯಾವಾಗಲೂ ನಿನ್ನಲ್ಲಿ ತಪ್ಪು ಕಂಡು ಹಿಡಿಯುವುದೇ ಕೆಲಸವಾಗಿಬಿಟ್ಟು, ನಿನ್ನನ್ನು ಸುಮ್ಮನೆ ಇರಗೊಡಿಸುವುದಿಲ್ಲ.'

'ಆ ವಿಷಯದಲ್ಲಿ ಕಳವಳ ಇಟ್ಟುಕೊಳ್ಳಬೇಡ, ಯೆಗಾರ್.'

'ಸರಿ— ಹಾಗಾದರೆ ಸರಿ.'

ಗೆರಾಸಿಮನು ಅವನನ್ನು ಬೀಳ್ಕೊಟ್ಟು ಹೆಬ್ಬಾಗಿಲಿನ ಕಡೆಗೆ ನಡೆದನು. ಪಾಲಿಕಾರ್ ವಿಚನ ವಾಸದ ಮನೆ ಪಕ್ಕದಲ್ಲೇ ಇತ್ತು. ಒಳಗಿನ ದೀಪದ ಪ್ರಕಾಶ ಹೊರಗೆ ಪಾದಿಯ ಮೇಲೆ ಬಿದ್ದಿತ್ತು. ಮುಂದೆ ತಾನು ವಾಸಿಸುವ ಮನೆ ಹೇಗಿದೆಯೋ ನೋಡಬೇಕೆಂದು ಗೆರಾಸಿಮನಿಗೆ ಆಸೆಯಾಯಿತು. ಆದರೆ ಕಿಟಕಿಯ ಬಾಗಿಲುಗಳನ್ನು ಹಿಮ ಮುಚ್ಚಿದ್ದುದರಿಂದ ಒಳಭಾಗ ಕಾಣಿಸುತ್ತಿರಲಿಲ್ಲ. ಆದರೂ ಅಲ್ಲಿ ಆಡುತ್ತಿದ್ದ ಮಾತು ಮಾತ್ರ ಇವನಿಗೆ ಚೆನ್ನಾಗಿ ಕೇಳಿಸುತ್ತಿತ್ತು.

'ಇನ್ನೇನು ಗತಿ ಈಗ ನಮಗೆ?'— ಹೆಂಗಸಿನ ಧ್ವನಿ ಕೇಳಿಸಿತು.

'ಏನು ಹೇಳಲಿ ನಾನು? ನನಗೇನು ಗೊತ್ತು?'—ಗಂಡಸಿನ ಧ್ವನಿ—ನಿಸ್ಸಂಶಯವಾಗಿ ಪಾಲಿಕಾರ್ ವಿಚನದೇ ಇರಬೇಕು—

ಜವಾಬು ಕೊಟ್ಟಳು; 'ಇನ್ನೇನು, ಕರಟ ಹಿಡಿಯುವುದೇ ಗತಿ ಎಂದು ತೋರುತ್ತೆ.'

'ಇನ್ನೇನು ಸಾಧ್ಯ ನಮ್ಮ ಕೈಯಲ್ಲಿ? ಬೇರೆ ವಿಧಿಯೇ ಇಲ್ಲ. ಅಯ್ಯೋ, ಬಡವರ ಪಾಡೇ ಇಷ್ಟು. ಆದರೂ ಎಂತಹ ನಾಯಿ-ಬಾಳು ನಮ್ಮದು! ಬೆಳಕು ಹರಿದಾರಭ್ಯ ಸಂಜೆಯಾದ ಮೇಲೂ ನಾವು ದಣಿದು ದಣಿದು ಕೆಲಸ ಮಾಡುತ್ತೇವೆ; ಆದರೆ ವಯಸ್ಸಾದ ಮೇಲೆ ಇದಕ್ಕೆ ಪ್ರತಿಫಲ ಏನು? "ಹೊರಡಿ, ನಿಮ್ಮಿಂದ ಇನ್ನು ಕೆಲಸ ಆಗುವುದಿಲ್ಲ." ಇದೇ ತಾನೇ?'

'ನಾವು ಏನು ತಾನೇ ಮಾಡೋಣ? ನಮ್ಮ ಧಣಿಯೇನು ನಮ್ಮ ಹಾಗೆ ಬಡವರೇ? ಅವರಲ್ಲಿ ಎಷ್ಟು ಹೇಳಿಕೊಂಡರೂ ಏನೂ ಉಪಯೋಗವಿಲ್ಲ. ಅವರ ಸ್ವಲಾಭವೇ ಅವರಿಗೆ ಮುಖ್ಯ.'

'ಧಣಿಗಳೆಲ್ಲಾ ಅಷ್ಟೇ. ತುಂಬಾ ಅಲ್ಪ ಬುದ್ಧಿಯವರು. ತಮ್ಮನ್ನು ಬಿಟ್ಟು ಇನ್ನೊಬ್ಬರ ಯೋಚನೆಯೇ ಇರುವುದಿಲ್ಲ ಅವರಿಗೆ. ನಾವು ಮೊದಲಿನಿಂದಲೂ ನಿರ್ವಂಚನೆಯಿಂದ ನಮ್ಮ ಶಕ್ತಿಯನ್ನೆಲ್ಲಾ ಅವರ ಕೆಲಸಕ್ಕಾಗಿಯೇ ದಂಡಮಾಡಿಕೊಳ್ಳುತ್ತೇವೆಂದು ಅವರಿಗೆ ಜೊಳೆಯುವುದೇ ಇಲ್ಲ. ಕೆಲಸ ಮಾಡುವ ತ್ರಾಣ ನಮ್ಮಲ್ಲಿಲ್ಲದ್ದರೂ ಇನ್ನೊಂದು ವರ್ಷ ಕೂಡ ನಮ್ಮನ್ನು ಇಟ್ಟುಕೊಳ್ಳುವುದಕ್ಕೆ ಅವರಿಗೆ ಹೆದರಿಕೆ. ಹಾಗೆ ನಮಗೆ ಕೆಲಸ ಮಾಡುವ ಉಸಿರಿಲ್ಲದಿದ್ದರೆ ನಾವೇ ಬಿಟ್ಟು ಹೋಗುತ್ತಿದ್ದೆವು.'

'ಇದರಲ್ಲಿ ಧಣಿಯ ತಪ್ಪೇನೂ ಇಲ್ಲ; ಎಲ್ಲಾ ಆ ಗಾಡಿ ಹೊಡೆಯುವವನದೇ....ಯೆಗಾರನು ತನ್ನ ಗೆಳೆಯನಿಗೆ ಕೆಲಸ ಕೊಡಿಸಲು ಆಪುರನಾಗಿದ್ದಾನೆ.'

'ಹೌದು. ಅವನು ವಿಷಸರ್ಪ. ಅವನಿಗೆ ನಾಲಗೆ ಒಳ್ಳೆಯದಲ್ಲ. ವಿಷದ ನಾಲಗೆಯ ಮುಂಡೇದೇ, ಇರು, ನಿನಗೆ ಬುದ್ಧಿ ಕಲಿಸುತ್ತೇನೆ. ಸೀದಾ ಧಣಿಯ ಬಳಿಗೇ ಹೋಗಿ, ಅವನು ಅವರಿಗೆ ಮಾಡುತ್ತಿರುವ ಮೋಸವನ್ನೆಲ್ಲಾ ತಿಳಿಸಿಬಿಡುತ್ತೇನೆ. ಹುಲ್ಲು, ಕಾಳು-ಕಡ್ಡಿಯನ್ನೆಲ್ಲಾ ಅವನು ಕದಿಯುವುದನ್ನು ಹೇಳಿಯೇ ಬಿಡುತ್ತೇನೆ. ಆ ಮೇಲೆ ಅವರೇ ಕಣ್ಣಾರೆ ಪರೀಕ್ಷಿಸಿ ನೋಡಲಿ.'

'ಬೇಡ, ಇಷ್ಟು ನಯಸ್ಸಾಗಿ, ಇಂಥಾ ಪಾಪದ ಕೆಲಸ ಬೇಡ!'

'ಪಾಪದ ಕೆಲಸ? ನಾನು ಹೇಳಿದ್ದೇನು ಸುಳ್ಳೇ? ನಾನು ಹೇಳುತ್ತಿರುವುದೆಲ್ಲ ಅಕ್ಷರಶಃ ನಿಜವೆಂದು ನಿನಗೂ ಗೊತ್ತು. ಯಜಮಾನರಿಗೆ ಎಲ್ಲಾ ಹೇಳಿಯೇ ಬಿಡುತ್ತೇನೆ. ಅವರೇ ಕಣ್ಣಾರೆ ನೋಡಲಿ. ಏಕಾಗಕೂಡದು? . . . ಈಗಂತೂ ನಾನೇನು ತಾನೇ ಮಾಡಬಲ್ಲೆವು? ನಾವು ಹೋಗುವುದಾದರೂ ಎಲ್ಲಿಗೆ? ನಾವು ಉಸಿರಿತ್ತದಂತೆ ಮಾಡಿಬಿಟ್ಟಿದ್ದಾನೆ ಅವನು. ನಮ್ಮನ್ನು ಕೊಂದು ಹಾಕಿಬಿಟ್ಟನಲ್ಲಾ....'

ಮುದುಕಿ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

ಇದೆಲ್ಲಾ ಕೇಳುತ್ತ ನಿಂತಿದ್ದ ಗೆರಾಸಿಮನ ಎದೆಗೆ ಭರ್ಜಿ ಇದಂತಾಯಿತು. ತನ್ನಿಂದ ಆ ಮುದುಕರಿಗೆ ಎಂತಹ ವಿಪತ್ತು ಕಾದಿದೆಯೆಂದು ತುಂಬಾ ಕಳವಳಗೊಂಡನು. ಬಹಳ ಹೊತ್ತಿನವರೆಗೂ ಬಿನ್ನನಾಗಿ ಯೋಚನೆ ಮಾಡುತ್ತಾ ಅಲ್ಲೇ ನಿಂತಿದ್ದು ಕಡೆಗೆ ಹಿಂದಿರುಗಿ ಯೆಗಾರನ ರೂಮಿಗೆ ಹೋದನು.

'ಓ, ಏನಾದರೂ ಮರೆತಿದ್ದೆಯೇನು?'

'ಇಲ್ಲ, ಯೆಗಾರ್ ಡೇನಿಲಿಚ್' ಎಂದು ಗೆರಾಸಿಮನು ಬಹಳ ಕಷ್ಟದಿಂದ ತೊದಲುತ್ತಾ ಹೇಳಿದನು, 'ನಾನು ಬಂದದ್ದು—ಕೇಳು—ನಿನಗೆ ತುಂಬಾ ವಂದನೆಗಳು—ನನ್ನ ಮೇಲಿನ ಆದರಕ್ಕೆ ಮತ್ತು—ಮತ್ತು? ನನಗೋಸ್ಕರ ನೀನು ಪಟ್ಟ ಕಷ್ಟಕ್ಕೆ—ಆದರೆ—ನನಗೆ ಆ ಕೆಲಸ ಬೇಡ.'

'ಏನು! ಕೆಲಸ ಬೇಡವೇ?'

'ಬೇಡ, ನಿಜವಾಗಿಯೂ ಬೇಡ. ನಾನೇ ಬೇರೆ ಕೆಲಸ ಹುಡುಕಿಕೊಳ್ಳುತ್ತೇನೆ.'

ಯೆಗಾರನಿಗೆ ಕೋಪದಿಂದ ಮೈನಡುಗಲಾರಂಭಿಸಿತು.

'ನೀನೇನು ಹೆಸರು ಕೆಡಿಸಲು ಬಂದೆಯಾ? ಮೂರ್ಖ, ನನ್ನ ಮಾನಕಳೆಯುತ್ತೀಯಾ? ಆಗ ಬೆಕ್ಕಿನ ಹಾಗೆ ಬಂದು— "ನನಗೆ ಸಹಾಯಮಾಡು, ದಯವಿಟ್ಟು ಪ್ರಯತ್ನಿಸು."— ಈಗ ಕೆಲಸ ಬೇಡವಂತೆ. ನೀಚ, ನಿನ್ನಿಂದ ನನಗೆ ಉಳಿಗಾಲವಿಲ್ಲ!'

ಗೆರಾಸಿಮನಿಗೆ ಏನೂ ಜವಾಬುಕೊಡಲು ತಿಳಿಯಲಿಲ್ಲ. ಮುಖ ಕೆಂಪೇರಿ ಸುಮ್ಮನೆ ತಲೆತಗ್ಗಿಸಿದನು. ಯೆಗಾರನು ತಿರಸ್ಕಾರದ ನೋಟದಿಂದ ಆ ಕಡೆ ತಿರುಗಿದನೇ ಹೊರತು ಇನ್ನೇನೂ ಹೇಳಲಿಲ್ಲ.

ಆಮೇಲೆ ಗೆರಾಸಿಮನು, ಸದ್ದಿಲ್ಲದೆ ತನ್ನ ಟೋಪಿಯನ್ನು ತೆಗೆದುಕೊಂಡು ಆ ರೂಮಿನಿಂದ ಹೊರಕ್ಕೆ ಹೋದನು. ಸರಸರನೆ ಅಲ್ಲಿಂದ ನಡೆದು ಹೆಬ್ಬಾಗಿಲನ್ನು ದಾಟಿ ಬೀದಿ ಸೇರಿದನು. ಅವನ ಮನಸ್ಸು ಈಗ ಹಗುರವಾಗಿ, ಹೃದಯ ಸಂತೋಷದಿಂದ ಉಬ್ಬಿತ್ತು.

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ ಔಷಧಿ!

★

ಡಾ. ವಾಮನ ಗೋಪಾಳ
ಇವರ
ಸಾಸ್ಪಾ ಪರಿಲ್ಲಾ

ನಮ್ಮ ಸಮಾಜದ ಇಂದಿನ ಸ್ವರೂಪ

(ಪರಿಸ್ಥಿತಿ ವಿಮರ್ಶೆ)

ಶ್ರೀ. ಬಿಟಗೇರಿ ಕೃಷ್ಣಶರ್ಮ, ಧಾರವಾಡ

★

ನಮ್ಮ ಸಮಾಜದಲ್ಲಿ, ಇಂದಿನ ಶಿಕ್ಷಣದಿಂದ ರೂಪುಗೊಳ್ಳುತ್ತಿರುವ ವಿಚಾರವೊಂದು ಬಗೆಯದಾದರೆ, ಪರಂಪರೆಯ ವ್ಯಾವಹಾರಿಕ ಆಚಾರಗಳು ಇನ್ನೊಂದು ಬಗೆಯವಾಗಿರುವುವು. ಈ ನವವಿಚಾರ-ಪುರಾಣಾಚಾರಗಳೆಲ್ಲಿ ನಡೆದಿರುವ ಜಗಳಾಟ, ನಮ್ಮ ಶಾಂತಿ-ಸುಖಗಳನ್ನೇ ಕಳೆದುಬಿಟ್ಟಿದೆ.

★

'ನಮ್ಮ ಸಮಾಜ' 'ನಮ್ಮ ಸಂಸ್ಕೃತಿ' ಎಂದು ನಾವೆಲ್ಲ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಭಾರತರಾಷ್ಟ್ರ ಆಧ್ಯಾತ್ಮಪ್ರಧಾನವಾದುದೆಂದು ಜಂಬಕೊಚ್ಚಿಕೊಳ್ಳುತ್ತೇವೆ. ಎಂದೋ ಒಂದು ಕಾಲದಲ್ಲಿ ಸುವ್ಯವಸ್ಥಿತವಾಗಿದ್ದ ನಮ್ಮ ಸಮಾಜ, ಹೆಮ್ಮೆಪಟ್ಟುಕೊಳ್ಳುವಂತೆ ಇದ್ದಿರಬಹುದು. ಆದರಂತೆಯೇ ನಮ್ಮ ಭಾರತರಾಷ್ಟ್ರ, ಯಾವುದೋ ಒಂದು ಕಾಲದಲ್ಲಿ ಆಧ್ಯಾತ್ಮಪ್ರಧಾನವೆಂದು ಹೇಳಿಕೊಳ್ಳುವಂತೆಯೂ ಇದ್ದಿರಬಹುದು. ಆದರೆ ಇಂದು ನಮ್ಮ ಸಮಾಜ 'ಜನಜಂಗುಳಿ'ಯೆನಿಸಿಕೊಳ್ಳುವಂತಹ ಅಸಂಸ್ಕೃತ ಜನತೆಯಿಂದ ತುಂಬಿದೆ. ಆಧ್ಯಾತ್ಮಿಕ-ಆಧಿಭೌತಿಕ ಎರಡೂ ಶಕ್ತಿಗಳ ಹಿಲೆಯನ್ನರಿಯದ ಇಂದಿನ ಭಾರತರಾಷ್ಟ್ರ, ಕೇವಲ ವ್ಯಾಣಿಜ್ಯಗೃಹಾಲಯದಂತೆ ಕೋರುತ್ತಿದೆ.

'ಸಮಾಜ' ಎಂಬುದು, ಸುಖ-ಸಮಾಧಾನ-ಶಾಂತಿಗಳಿಂದ ಬದುಕಲು ತಕ್ಕ ಆಚಾರ-ನಿಯಮನಗಳಿಂದ ಸುಸಂಬದ್ಧವಾಗಿರುತ್ತದೆ. ಸಮಾಜದಲ್ಲಿ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅವಕಾಶವಿರುವುದಾದರೂ ಸ್ವೈರಕ್ಕೆ ಅವಕಾಶವಿರದು. ಸ್ವಾತಂತ್ರ್ಯ ತಾನೂ ಸುಖವಾಗಿ ಬದುಕಿ ಇನ್ನಿತರರನ್ನೂ ಸುಖವಾಗಿ ಬದುಕಿಸಲು ಹಚ್ಚುವಂತಹದು; ಸ್ವೈರವೃತ್ತಿ ಇನ್ನಿತರರನ್ನು ಮೊದಲು ಕೆಡಿಸಿ, ಆ ಮೇಲೆ ತಾನೂ ಕೆಟ್ಟುಹೋಗುವುದು. ನಮ್ಮ ಸಮಾಜದಲ್ಲಿಂದು ನಿಜವಾದ ಸ್ವಾತಂತ್ರ್ಯವನ್ನು ಅರಿತುಕೊಂಡವರು ಲಕ್ಷಕ್ಕೊಬ್ಬರೋ ಕೋಟಿಗೊಬ್ಬರೊ! ಎಲ್ಲೆಲ್ಲಿಯೂ ಪುರಾಣಪ್ರೀತಿಯ ಪರಾಧೀನತೆಯೊಂದು ಕಡೆ, ಸ್ವಾರ್ಥಸಾಧಕ ಸ್ವೈರವೃತ್ತಿಯೊಂದು ಕಡೆ ತಾಂಡವವಾಡುತ್ತಿರುವುವು. ಇದರಿಂದ ಯಾರಿಗೂ ಸುಖ-ಸಮಾಧಾನಗಳು ದೊರೆಯದಂತಾಗಿವೆ.

ಇಂದಿನ ಪ್ರಜಾಧಿಪತ್ಯಗಳೆಂದರೆ ಸಮಾಜದಿಂದ ನಿರ್ಮಿತವಾಗಬೇಕಾದುವು. ಸಮಾಜ ಒಳ್ಳೆಯದಾಗಿದ್ದರೆ ಪ್ರಜಾಧಿಪತ್ಯ ಒಳ್ಳೆಯದಾಗುವುದು. ಸಮಾಜ ಕೀಳಾಗಿದ್ದರೆ ಪ್ರಜಾಧಿಪತ್ಯವೂ ಕೀಳಾಗಿರುವುದು. ತಾಯಿ-ತಂದೆಗಳ ಗುಣವೇ ಸಂತಾನದಲ್ಲಿ ಇಳಿಯಬೇಕಲ್ಲವೆ?

ಇಂದು ನಮ್ಮ ರಾಷ್ಟ್ರದ ಪರಾಧೀನತೆ ತಪ್ಪಿದೆ. ನಮ್ಮನ್ನು ನಾವೇ ಆಳಿಕೊಳ್ಳುವಂತಹ ಸುಯೋಗಬಂದಿದೆ. ನಮ್ಮ ಆಧಿಪತ್ಯವನ್ನು ನಾವೇ ಕಟ್ಟಿ ನಿಲ್ಲಿಸುವವರಿದ್ದೇವೆ. ಆದರೆ ಇದೆಲ್ಲಕ್ಕೂ ನಮ್ಮ ಸಮಾಜ ತಕ್ಕುದಾಗಿರಬೇಕಲ್ಲವೆ? ಅದಕ್ಕಾಗಿ ಸಮಾಜಕ್ಕೊಂದು ಸುವ್ಯವಸ್ಥಿತ ಸ್ವರೂಪ ಬೇಕಾಗಿಲ್ಲವೆ? ಹೀಗೆ ಸುವ್ಯವಸ್ಥಿತ ಸ್ವರೂಪ ಸಮಾಜಕ್ಕೆ ದೊರೆಯಬೇಕಾದರೆ, ಅದು ಯಾವುದಾದರೊಂದು ತತ್ತ್ವವನ್ನು ಮನವಾರೆ ಒಪ್ಪಿಕೊಳ್ಳಬೇಕಾಗುವುದು; ಆ ತತ್ತ್ವದ ತಳಹದಿಯ ಮೇಲೆ ಭದ್ರವಾಗಿ ತನ್ನ ಕಟ್ಟಡವನ್ನು ಕಟ್ಟಬೇಕಾಗುವುದು. ಆಧ್ಯಾತ್ಮಿಕ ಎಂದರೆ ಧಾರ್ಮಿಕ ತತ್ತ್ವದ ತಳಪದಿಯ ಮೇಲೆ ಕಟ್ಟಿದ ಸಮಾಜವೂ ಗಟ್ಟಿಗೊಂಡು ನಿಲ್ಲಬಲ್ಲದು; ಆಧಿಭೌತಿಕ ಎಂದರೆ ಆರ್ಥಿಕತತ್ತ್ವದ ತಳಹದಿಯ ಮೇಲೆ ಕಟ್ಟಿದ ಸಮಾಜವೂ ಗಟ್ಟಿಗೊಂಡುಷ್ಟೆ ನಿಲ್ಲಬಲ್ಲದು. ಆದರೆ ಇಂದಿನ ನಮ್ಮ ಸಮಾಜವು ಯಾವ ಒಂದು ತತ್ತ್ವವನ್ನೂ ತಳಹದಿಯಾಗಿ ಇರಿಸಿಕೊಂಡಿಲ್ಲ. ಸಮಾಜ ಧಾರಣೆಗೆ ಸಮತೆ ಅವಶ್ಯ.

ಧಾರ್ಮಿಕ ಸಮತೆಯನ್ನು ನಾವು ಒಪ್ಪಿದ್ದೇವೆ— ಎಂದರೆ, ನಮ್ಮಲ್ಲಿ ಅಧಾರ್ಮಿಕತೆ ಅಚಾರಹೀನತೆ ತಲೆಯೆತ್ತುತ್ತಿರಲಿಲ್ಲ. ಆರ್ಥಿಕಸಮತೆಯನ್ನು ನಾವು ಪುರಸ್ಕರಿಸಿದ್ದೇವೆ—ಎನ್ನ ಬೇಕಾದರೆ, ನಮ್ಮಲ್ಲಿ ಬರಿಹೊಟ್ಟೆಯ ಬತ್ತಲೆ ಮೈಯ ಬಡವರ ಸಂಖ್ಯೆ ಹೆಚ್ಚುತ್ತಿರಲಿಲ್ಲ. ಯಾವ ತತ್ತ್ವದ ಮೇಲೂ ನಮ್ಮ ಸಮಾಜದ ಕಟ್ಟಡ ನಿಂತಿಲ್ಲವಾದುದರಿಂದ ಅದು ನಿರಾಧಾರವಾಗಿದೆ; ಪಾತಾಳಪಾತಕ್ಕೆ ಬೀಳುವುದರಲ್ಲಿದೆ. ಆದುದರಿಂದಲೇ ನಮ್ಮ ಜನರು, ರಾಜಕೀಯ ಭದ್ರತೆಗಿಂತ ಸಾಮಾಜಿಕ ಭದ್ರತೆಯ ವಿಚಾರವನ್ನು ಮೊದಲು ಮಾಡಬೇಕಾಗಿದೆ; ಕೂಡಲೆ ಮಾಡಬೇಕಾಗಿದೆ. ಸಮಾಜ ನಿಂತರೆಯೇ ಸರಕಾರದ ಅಸ್ತಿತ್ವಕ್ಕೆ ಅವಕಾಶವಲ್ಲವೆ?

ಸುಖ-ಶಾಂತಿ-ಸಮಾಧಾನಗಳಿಂದ ಬಾಳುವ ಬಹುಜನದ ಗುಂಪು 'ಸಮಾಜ' ಎನಿಸಿಕೊಳ್ಳುವುದು. ಹಾಗಿದ್ದಲ್ಲಿ ನಮ್ಮ ಸಮಾಜದಲ್ಲಿಂದು ಸುಖವಿದೆಯೆ? ಶಾಂತಿ-ಸಮಾಧಾನಗಳಿವೆಯೆ? ಎಲ್ಲಿ ನೋಡಿದಲ್ಲಿ ಅತೃಪ್ತಿ-ಅಸಂತುಷ್ಟಿ; ಎತ್ತ ನೋಡಿದತ್ತ ಸ್ಪರ್ಧೆ, ಈರ್ಷೆ, ಮತ್ಸರ, ದ್ವೇಷ. ಎಲ್ಲೆಲ್ಲಿಯೂ ಸ್ವಾರ್ಥಸಾಧಕ ಪಾಶವವೃತ್ತಿ. ಇಂತಹ ದುರ್ಮನ-ದುರ್ಹೃದಯದ ಜನರ ಗುಂಪು ಸಮಾಜವೆನಿಸೀತೆ?

ನಮ್ಮ ಅ-ಸಾಮಾಜಿಕ ವೃತ್ತಿಗೆ ಗುರುತಾಗಿ, ಮೊನ್ನೆ-ಮೊನ್ನೆಯೆ ಒಂದು ದುರ್ಘಟನೆ ಸಂಭವಿಸಿತು. ಇದೊಂದೇ ಅಲ್ಲ, ಇಂತಹ ದುರ್ಘಟನೆಗಳು ದಿನದಿನವೂ ಎಣಿಕೆಯಿಲ್ಲದಷ್ಟು ಸಂಭವಿಸುತ್ತಿರಬಹುದು. ಆದರೂ ಅವೆಲ್ಲವುಗಳಿಗೂ ಪ್ರಾತಿನಿಧಿಕವಾಗಿ, ಮೊನ್ನೆ ಮೊನ್ನೆ ಸಂಭವಿಸಿದ ಆ ಘಟನೆಯನ್ನೇ ಉದಾಹರಣೆಗಾಗಿ ತೆಗೆದುಕೊಳ್ಳೋಣ:

"ಅಹಮ್ಮದ ನಗರದಲ್ಲಿ ಒಬ್ಬ ತರುಣಿಯಾದ—ಪ್ರತಿಷ್ಠಿತ ಮನೆತನಕ್ಕೆ ಸೇರಿದ—ಬ್ರಾಹ್ಮಣ ವಿಧವೆ. ಕಳೆದ ತಿಂಗಳ ಪೂರ್ವಾರ್ಧದಲ್ಲಿ ಒಂದು ದಿನ, ಒಬ್ಬ ಮುಸಲ್ಮಾನ್ ಡ್ರೈವರನೊಂದಿಗೆ ಆ ವಿಧವೆ ಮದುವೆ ಮಾಡಿಕೊಂಡಳು. ಮೊದಲ ದಿನ ಸಾಂಪ್ರದಾಯಿಕ ವಿಧಿ ಜರುಗಿತು. ಮರುದಿನ ಕಾನೂನಿನ ಪ್ರಕಾರ ರಜಿಸ್ಟರ್ ಮಾಡಿಸಲಿಕ್ಕೆಂದು, ಇಬ್ಬರೂ ಸೇರಿ ಸರಕಾರೀ ಅಧಿಕಾರಿಗಳ ಕಡೆಗೆ ಹೋದರು. ಈ ವರ್ತಮಾನ ತಿಳಿದು ಉದ್ರೇಕಗೊಂಡ 'ಧರ್ಮಮೂಢ' ಹಿಂದುಗಳು ಕೆಲವರು ಗುಂಪು ಗೂಡಿ, ಆ ವಧೂವರರ ಮೇಲೆ ದಾಳಿಯಿಟ್ಟರು. ಆಗ ಸರಕಾರದ ಪೋಲೀಸರು ಆ ವಧೂ-ವರರಿಗೆ ತಕ್ಕ ಸಂರಕ್ಷಣೆ ಕೊಟ್ಟರು. ಈ ವರ್ತಮಾನ, ಹೆತ್ತಿರವೆ ವಿಸಾಪುರ ವಸತಿಯಲ್ಲಿದ್ದ ಹಿಂದು ನಿರಾಶ್ರಿತರಿಗೆ ಗೊತ್ತಾಯಿತು. ಅವರು ಸಾವಿರ ಸಂಖ್ಯೆಯಲ್ಲಿ ಗುಂಪು ಗೂಡಿ ಬಂದು, ಅಹಮ್ಮದನಗರದಲ್ಲಿ ಪ್ರವೇಶಿಸಿ, ದೊಂಬಿಗೆ ಆರಂಭಿಸಿದರು. ಎಷ್ಟೋ ಅಂಗಡಿಗಳನ್ನು ಸುಟ್ಟರು. ಹಲವು ಜನರನ್ನು ಗಾಯಗೊಳಿಸಿದರು. ಕೆಲವು ಜನರನ್ನು ಕೊಲೆಮಾಡಿರಲೂಬಹುದು. ಸರಕಾರದವರು ಈ ದೊಂಬಿಯನ್ನು ಶಾಂತಗೊಳಿಸಿ, ದೊಂಬಿಗಾರರಲ್ಲಿಯ ನೂರಾರು ಜನರನ್ನು ಹಿಡಿದು ಜೇಲಿಗೆ ಹಾಕಿದ್ದಾರೆ. ಗೊಂದಲವೇ ಗೊಂದಲ. ಅಶಾಂತತೆಯೇ ಅಶಾಂತತೆ!"

ಈ ದುರ್ಘಟನೆಯಲ್ಲಿ ತಪ್ಪುಗಾರರು ಯಾರೆಂಬುದನ್ನು ನಿರ್ಣಯಿಸುವ ಬಗೆ ಹೇಗೆ? ಆ ಬ್ರಾಹ್ಮಣ ವಿಧವೆಯೆ ತಪ್ಪುಗಾತಿಯೆನ್ನೋಣವೆ? ವಿಧವಾಸಂಸ್ಥೆಯನ್ನು ಉಳುಹಲೇಬೇಕೆಂದು ಹೇಳುವ ಸನಾತನ ಧರ್ಮಾಭಿಮಾನಿಗಳು, ವಿಧವೆಯರ ಮನಸ್ಸು-ಹೃದಯಗಳು ಪವಿತ್ರವಾಗಿ ಉಳಿದು ಅವರು ಜಿತೇಂದ್ರಿಯರಾಗಿ ಬಾಳುವಂತಹ ವಾತಾವರಣವನ್ನೇನಾದರೂ ನಿರ್ಮಿಸಿಕೊಟ್ಟಿರುವರೇನು? ಭೋಗಶೀಲ ವಾತಾವರಣದಲ್ಲಿಯೇ ತೇಲಿ ಮುಳು. ಗುತ್ತಲಿರುವ ತರುಣ ವಿಧವೆ, ತಾನೂ ಭೋಗವನ್ನು ಬಯಸದಿರುವುದು ಸಾಧ್ಯವಿದೆಯೆ? 'ಅಲ್ಲದೆ 'ವಿಧವೆ' 'ವಿಧವೆ' ಎಂದು ತಿರಸ್ಕಾರದಿಂದ ಕಾಣುತ್ತಿರುವಾಗ, ಹೆಣ್ಣೆಂಬ ನೋಹದಿಂದ ಯಾವನಾದರೂ ಗಂಡುಸು ಪ್ರೀತಿಸತೊಡಗಿದರೆ, ಅವನತ್ತ ಒಲೆಯುವುದು ಹೆಣ್ಣು ಜೀವನದ ಸಾಮಾನ್ಯ ಮನೋಧರ್ಮ. ಸಹಜ ಸ್ವಭಾವ. ಇದನ್ನು ವಿಾರಿ ನಡೆಯುವಂತಹ ಸಂಸ್ಕೃತಿ, ಲೋಕಾನುಭವಗಳು ಆ ವಿಧವೆಗೆ ಎಲ್ಲಿಂದ ಬರಬೇಕು?

ಬ್ರಾಹ್ಮಣ ವಿಧವೆಯನ್ನು ಮದುವೆಯಾಗಲು ಸಿದ್ಧನಾದ ಮುಸಲ್ಮಾನನು ತಪ್ಪುಗಾರನೆನ್ನಬೇಕೆ? ಬ್ರಾಹ್ಮಣ ಇಲ್ಲವೆ ಹಿಂದು ಧರ್ಮದ ತರುಣನೊಬ್ಬ ಈ ವಿಧವೆಯನ್ನು ಮದುವೆಯಾಗಲು ಸಿದ್ಧನಾಗಿದ್ದರೆ, ಆ ವಿಧವೆ ಮುಸಲ್ಮಾನನನ್ನೇಕೆ ಆರಿಸುತ್ತಿದ್ದಳು! ಆದರೆ ವಿಧವೆಯರನ್ನು ಉಳಿಸಬೇಕೆಂಬ ಸಮಾಜದಲ್ಲಿ, ವಿಧವೆಯನ್ನು ಮದುವೆಯಾಗುವ ಎದೆಗಾರರು ಸಿಕ್ಕುವ ಬಗೆ ಹೇಗೆ? ಕಳ್ಳತನದಿಂದ ವಿಧವೆಯರೊಂದಿಗೆ ವ್ಯವಹರಿಸಿ ಮನ್ನಣೆ ಕಳೆದುಕೊಳ್ಳದೆ ಬಾಳಬಹುದು; ಆದರೆ ವಿಧವೆಯನ್ನು ವಿಧ್ಯುಕ್ತ ಮದುವೆಯಾಗುವುದೆಂದರೆ ಸಮಾಜದಲ್ಲಿ ಮಹಾಪರಾಧ. ಇನ್ನು ತಾನಾ ಒಪ್ಪಿ ಮದುವೆಮಾಡಿಕೊಳ್ಳಲು ಸಿದ್ಧಳಾಗಿ ಬಂದ ಸುಂದ

ಸಿಸಿ ವರ್ಷಗಳಿಂದ ಅನುಭವಪಟ್ಟ
ಕರೀರ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೪-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವದು.
ವಿಳಾಸ:—
ಗಣೇಶ ರಾಮಚಂದ್ರ ಕರೀ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ಹಳ್ಳಿ ಪಟ್ಟಣಗಳಲ್ಲಿ, ಬೀದಿ ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!
● ಧ್ವನಿವಾಹಕ ಯಂತ್ರದ ಮೂಲಕ
★ ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ
ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು
ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಮನೋಹರ ಗ್ರಂಥಮಾಲೆ, ಧಾರವಾಡ.

೧೫ ವರ್ಷಗಳಿಂದಲೂ ಹೊರಡುತ್ತಲಿದ್ದು, ಈಗಾಗಲೇ ೯೦ ಕ್ಕಿಂತ ಹೆಚ್ಚಿಗೆ ಕಥೆ-ಕಾದಂಬರಿ-ನಾಟಕಗಳನ್ನು ಬೆಳಕಿಗೆ ತಂದಿದೆ.

ಶ್ರೀ. ರಂ. ಶ್ರೀ. ಮುಗುಳಿಯವರ 'ಅನ್ನ' (ಸಾ. ಕಾದಂಬರಿ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರ 'ಪರಿವರ್ತನ' (ಸಾ. ನಾಟಕ)
ಇದೀಗ ಪ್ರಕಟವಾಗಿವೆ. ವಾ. ಚಂ. ಸ್ಥಳಿಕರಿಗೆ ೫-೮-೦
ಪರಸ್ಥಳದವರಿಗೆ ೬-೮-೦.

ತರುಣಿಯನ್ನು ನಿರಾಕರಿಸಿ ಬಿಡಲಿಕ್ಕೆ, ಆ ಮುಸಲ್ಮಾನ್ ಡ್ರೈವರನೇನು ಶುಕಾಚಾರ್ಯನ ಅವತಾರವೇ? ಅವನೂ ಒಬ್ಬ ಸಾಮಾನ್ಯ ಮನುಷ್ಯ.

ಇವರಿಬ್ಬರ ಮದುವೆಯನ್ನು ರಜಿಸ್ಟರ್ ಮಾಡಲು ಸಿದ್ಧವಾದ ಸರಕಾರದ ಮೇಲೆ ತಪ್ಪು ಹೊರಿಸಬೇಕೆ? ಗಂಡ-ಹೆಂಡತಿಯೆಂದು ಒಪ್ಪಿಕೊಂಡು ಬಂದ ಯಾವ ಜೋತೆಯನ್ನೂ ರಜಿಸ್ಟರ್ ಮಾಡ ಬಹುದೆಂಬ ಕಾಯಿದೆಯನ್ನು ನಮ್ಮ ಜನತೆಯೆ ಮಾಡಿ, ಅದರಂತೆ ವರ್ತಿಸಲು ಸರಕಾರಕ್ಕೆ ಅಧಿಕಾರ ಕೊಟ್ಟಿದೆ.

ದೊಂಬಿಹಾಕಿದ ಧರ್ಮಾಭಿಮಾನಿ ಹಿಂದುಗಳದು ತಪ್ಪಿಲ್ಲವೇ? ಧರ್ಮ-ಮತಗಳ ಬಹಿರಾಚಾರಗಳೇ ಧರ್ಮವೆಂಬ ತಿಳಿವಳಿಕೆಯಲ್ಲಿ ಬಳಿದು ಬಾಳಿದ ಅವರು, ಇಂತಹ ಘಟನೆಗಳನ್ನು ಸಹನೆಮಾಡಿಕೊಂಡಿರುವುದು ಸಾಧ್ಯನೇ ಇಲ್ಲ. ಅವರಿಗೆ ಧರ್ಮಾಚಾರ್ಯರಿಂದ ಸ್ವಧರ್ಮ ಸಂರಕ್ಷಣೆಯ ಶಿಕ್ಷಣನೇ ಈ ರೀತಿಯದು ಸಿಕ್ಕಿರುವುದು.

ಹಾಗಾದರೆ ಈ ಗೊಂದಲದ ತಪ್ಪನ್ನು ಯಾರ ಮೇಲೆ ಹೊರಿಸ ಬೇಕು? ಒಳಗಣ್ಣಿಂದ ನೋಡಿ ವಿಚಾರ ಮಾಡಿದರೆ, ಒಂದೆ ಅಥವಾ ಕೆಲವೊಂದೆ ವ್ಯಕ್ತಿಗಳ ಮೇಲೆ ಹೊರಿಸಲು ಬರುವಂತಿಲ್ಲ. ಇದೆಲ್ಲಕ್ಕೂ ಮೂಲಕಾರಣವೆಂದರೆ ವಿಸ್ಖಲಿತವಾಗಿರುವ ನಮ್ಮ ಸಮಾಜ. ಒಂದೆ ಒಂದಾಗಿ ಹಿಂದುಸಮಾಜವೆಂಬುದು ಬಿಗಿ ಗೊಂಡು ನಿಂತಿದ್ದರೆ, ಯಾವ ಹಿಂದೂ ವಿಧವೆ ಮುಸಲ್ಮಾನನನ್ನು ಲಗ್ನವಾಗಲು ಮನಸ್ಸು ಮಾಡುತ್ತಿದ್ದಳು? ಯಾವ ಮುಸಲ್ಮಾನ, ಹಿಂದೂ ಹೆಣ್ಣನ್ನು ಬಲಾತ್ಕಾರದಿಂದ ಮದುವೆಯಾಗಲು ಧೈರ್ಯ ಮಾಡುತ್ತಿದ್ದ?

ಇಂದು ನಮಗೆ ಪಾಠಶಾಲೆಗಳಲ್ಲಿ ದೊರೆತಿದ್ದ ದೊರೆಯುತ್ತಿರುವ ಶಿಕ್ಷಣವು, ಅರ್ಥಿಕಪದ್ಧತಿಯಿಂದ ರಚಿತವಾದ ಸಮಾಜಕ್ಕೆ ತಕ್ಕುದಾದುದು. ಆದರೆ ನಾವು ವ್ಯವಹರಿಸುತ್ತಿರುವುದು ಧಾರ್ಮಿಕ ಪದ್ಧತಿಯಿಂದ ರಚಿತವಾದ ಸಮಾಜಕ್ಕೆ ಸರಿಯಾದುದು. ನಮ್ಮ ವಿಚಾರ ಒಂದು ರೀತಿಯಿಂದ ರೂಪುಗೊಳ್ಳುತ್ತಿದ್ದರೆ, ಬೇರೆ ರೀತಿಯ ಆಚಾರಗಳು ಅದಕ್ಕೆ ಅಡ್ಡವಿಸಿ ಬರುತ್ತಲಿವೆ. ಆದುದರಿಂದಲೆ ನಮ್ಮ ಸಮಾಜದಲ್ಲಿ ವಿಚಾರಗಳಿಗೂ ಆಚಾರಗಳಿಗೂ ಎಡೆಬಡದೆ ಕಾದಾಟ ನಡೆದಿದೆ. ಅಂತಹ ಕಾದಾಟದ ಪ್ರತೀಕಗಳೇ ಆಗಿವೆ: ಅಹಮ್ಮದನಗರದ ಗೊಂದಲದಂತಹ ಗೊಂದಲಗಳು. ನಮ್ಮ ಸಮಾಜದಲ್ಲಿ ವಿಚಾರ-ಆಚಾರಗಳಲ್ಲಿ ಏಕವಾಕ್ಯತೆಯುಂಟಾದ ಹೊರತು ಇಂತಹ ಗೊಂದಲಗಳು ಕಡಿಮೆಯಾಗುವುದು ಸಾಧ್ಯವಿಲ್ಲ. ನಡೆದಿರುವ ತಪ್ಪುಗಳಿಗೆ ಇವರೇ ಹೊಣೆಗಾರರೆಂದು ಕೆಲವೊಂದು ವ್ಯಕ್ತಿಗಳನ್ನು ಸರಕಾರ ಶಿಕ್ಷಿಸಬಹುದು; ಆದರೆ ಅದು ಹಾವನ್ನು ಹೋರಿನಲ್ಲಿಯೆ ಬಿಟ್ಟು ಹೋರಿನ ಬಾಯಿ ಮುಚ್ಚಿದಂತೆ ಆಗುವುದರಲ್ಲಿ ಸಂದೇಹವಿಲ್ಲ. ನಮ್ಮೆಲ್ಲರ ವಿಚಾರ-ಆಚಾರಗಳು ಒಂದೆ ದಾರಿಯಿಂದ ನಡೆಯುವಂತೆ ಮಾಡುವುದೇ ಸದ್ಯದ ವಿಚಾರಿಗಳ ಕರ್ತವ್ಯವಾಗಿದೆ. ಈ ಕರ್ತವ್ಯಮಾಡಿದಲ್ಲದೆ ನಮ್ಮ ಸಮಾಜ ಸುಖ-ಶಾಂತಿಗಳನ್ನೆಂದೂ ಕಾಣಲಾರದು.

ಬಹುಮಾನ ೫೦೦ ರೂ.
— ಅದ್ಭುತ ಸಂಶೋಧನ —
ಮಾಯಾ ಉಂಗುರ

ಈ ಉಂಗುರವನ್ನು ಮೆಸ್ಮೆರಿಜಮ್ ಹಾಗು ಮಂತ್ರಶಕ್ತಿಯಿಂದ ತಯಾರಿಸಲಾಗಿದ್ದು ಇದರ ಮಂತ್ರಶಕ್ತಿ ಅಪಾರವಾಗಿದೆ. ಈ ಉಂಗುರವನ್ನು ಧರಿಸುವವರು ಇಚ್ಛಿಸಿದ ಯಾವುದೇ ಅಸಾಧ್ಯ ಕಾರ್ಯವು ಸುಲಭವಾಗಿ ಸಾಧಿಸುವದು. ಈ ಉಂಗುರವು ನಿಮ್ಮ ಬೆರಳಿನಲ್ಲಿದ್ದರೆ ನಿಮಗೆ ಯಾವ ಸಂಕಟವೂ ಕಷ್ಟವೂ ಒದಗಿ ಬರದು. ಕೆಟ್ಟ ನಕ್ಷತ್ರಗಳು ನಿಮ್ಮನ್ನು ಪೀಡಿಸಲಾರವು. ಈ ಉಂಗುರ ಧಾರಿಗಳು ಎಂಥ ಗರ್ವಿಷ್ಠ ಹಾಗು ತಲೆಬಾಗದ ವ್ಯಕ್ತಿಯ ಮೇಲೂ (ಆ ವ್ಯಕ್ತಿ ಗಂಡಿರಲಿ, ಹೆಣ್ಣಿರಲಿ) ಅಧಿಕಾರವನ್ನು ನಡಸಬಹುದು. ಇದರ ಮೂಲಕ ನೀವು ಪ್ರೇಮದಲ್ಲಿ, ಕೋರ್ಟು ವ್ಯವಹಾರಗಳಲ್ಲಿ, ನವಕರಿಯಲ್ಲಿ ಗೆಲವನ್ನು ಪಡೆಯುವದಲ್ಲದೆ ಹಣವನ್ನು ಗಳಿಸುವಿರಿ. ನಿಮಗೆ ಈ ಉಂಗುರ ಅಂಗರಕ್ಷಕನಂತೆ ಬೆಂಬಲವಾಗಿರುವದು. ಒಮ್ಮೆ ಇದನ್ನು ತರಿಸಿ. ಮೊದಲನೆ ರಾತ್ರಿಯೇ ಇದರ ಚಮತ್ಕಾರ ನಿಮ್ಮ ಅನುಭವಕ್ಕೆ ಬಂದೀತು.

ಉಂಗುರ ೧ ಕ್ಕೆ .... ೨—೦—೦
೩ ಉಂಗುರಗಳಿಗೆ .... ೫—೦—೦
ಪ್ಯಾಕಿಂಗು ಪೋಷ್ಟು ಖರ್ಚು ಬೇರೆ.

MAHAKALI ASHRAM,
NO. 247, KANPUR.

ಮಹಾರಾಷ್ಟ್ರ ಸಾಹಿತ್ಯಸಮ್ಮೇಲನದ ಒಂದು ನೋಟ

(ಕನ್ನಡಿಗರಿಗಾಗಿ)

ಶ್ರೀ. ಬಾ. ಕೃ. ಗಲಗಲಿ, ಕಿರ್ಲೋಸ್ಕರವಾಡಿ

★

ಮಹಾರಾಷ್ಟ್ರ ಸಾಹಿತ್ಯಸಮ್ಮೇಲನದ ೩೭ನೆಯ ಅಧಿವೇಶನವು, **ಆಚಾರ್ಯ ಜಾವಡೆಕರ್** ಅವರ ಅಧ್ಯಕ್ಷತೆಯಲ್ಲಿ ಕಳೆದ ತಿಂಗಳು ಪುಣೆಯಲ್ಲಿ ಜರುಗಿತು. ಮಹಾರಾಷ್ಟ್ರವು ನಮ್ಮ ನೆರೆಯ ಪ್ರಾಂತವಾದುದರಿಂದ, ಅಲ್ಲಿಯ ಸಾಹಿತ್ಯಿಕ ಚಟುವಟಿಕೆಗಳು ಕೂಡ ನಮ್ಮ ಜೀವನಕ್ಕೆ ನಿಕಟವಾಗಿ ಸಂಬಂಧಿಸಿದುವುಗಳಾಗಿವೆ. ಎಂತಲೇ ಈ ಸಮ್ಮೇಲನಕ್ಕೆ ನಾವು ಮಹತ್ತ್ವವನ್ನು ಕೊಡಲೇ ಬೇಕು. ಈ ಸಮ್ಮೇಲನದ ಅಂಗವಾಗಿ ಸೇರಿದ ಕವಿಸಮ್ಮೇಲನದ ಚಾಲಕರು, ಪರಪ್ರಾಂತದ ಕವಿಗಳಿಗೆ ಆಮಂತ್ರಣವನ್ನಿತ್ತಿದ್ದರಾಗಿ ತಿಳಿಯುವುದು. ಗುರ್ಜರ ಕವಿಗಳಾದ **ಶ್ರೀ. ಸ್ನೇಹರಶ್ಮಿ** ಮತ್ತು **ಉಮಾಶಂಕರ ಜೋಶಿ** ಇವರು ಸಮ್ಮೇಲನಕ್ಕೆ ದಯೆಮಾಡಿಸಿ, 'ಕಾವ್ಯವು ಹೃದಯದ ಸೊಲ್ಲಾಗಿದ್ದು, ಕವಿತಾ ಪ್ರಪಂಚದಲ್ಲಿ ಭಾಷಾಭೇದ, ಭಾಷಾದ್ವೇಷಗಳಿಗೆ ಅವಕಾಶವಿಲ್ಲ—ಇರಕೂಡದು' ಎಂದು ಹೇಳಿದರು. ಆಮಂತ್ರಣವಿದ್ದರೂ ನಮ್ಮ ಕನ್ನಡ ಕವಿಗಳು ಮಾತ್ರ ಅಲ್ಲಿ ಯಾರೂ ಬಂದಿರಲಿಲ್ಲ. ಬಂದಿದ್ದರೆ ಒಳಿತಾಗುತ್ತಿದ್ದಿಲ್ಲವೆ ? *

ಹಾಗೆ ನೋಡಿದರೆ, ಕವಿಸಮ್ಮೇಲನವು ಸಾಹಿತ್ಯಸಮ್ಮೇಲನದ ಒಂದು ಉಪಾಂಗ. ಮುಖ್ಯವಾಗಿ ಸಾಹಿತ್ಯಸಮ್ಮೇಲನದ ಚಾಲಕರಿಂದಲೇ ಅನ್ಯಪ್ರಾಂತೀಯ ಸಾಹಿತ್ಯಿಕರಿಗೆ ಗೌರವದ ಔತಣಗಳು ಹೋಗಬೇಕು. ಈ ಉಪಕ್ರಮವು ಬೆಳೆದರೆ, ನಿಷ್ಕಾರಣವಾಗಿ ತಪ್ಪುದಾರಿಯನ್ನು ಹಿಡಿದ ಭಾಷಾವಾದ, ಪ್ರಾಂತವಾದಗಳು ಹಿಮ್ಮೆಟ್ಟುವುದರಲ್ಲಿ ಸಂದೇಹವಿಲ್ಲ.

ಈ ಸಮ್ಮೇಲನದಲ್ಲಿ 'ಸಂಯುಕ್ತ ಮಹಾರಾಷ್ಟ್ರ'ದ ಬೇಡಿಕೆಯನ್ನು ಜೋರಿನಿಂದ ಪುರಸ್ಕರಿಸಲಾಯಿತು. ಅದನ್ನು ಮಾಡುವಾಗ, ಕರ್ನಾಟಕ ಹಾಗು ಗುಜರಾತ ಪ್ರದೇಶಗಳ ಮೇಲೆ ಯಾವ ರೀತಿಯಿಂದಲೂ ಆಕ್ರಮಣವಾಗದ ಹಾಗೆ ಎಚ್ಚರಿಕೆಯನ್ನು ವಹಿಸುವುದು ಅವಶ್ಯ—ಎಂಬುದರ ಸಂಪೂರ್ಣ ತಿಳಿವಳಿಕೆ, ಅದರಲ್ಲಿ ಭಾಗವಹಿಸಿದವರಿಗೆ ಇದ್ದುದು ಅಭಿನಂದನೀಯ. ಸದ್ಯಕ್ಕೆ ಭಾಷಾನುಗುಣ ಪ್ರಾಂತರಚನೆಯನ್ನು ಸಾಧಿಸುವ ವಿಷಯದಲ್ಲಿ ಕೇಂದ್ರ ಸರಕಾರ ಹಾಗು ನಮ್ಮ ಮುಖ್ಯ ನಾಯಕರು ಉಪೇಕ್ಷಾ ಭಾವವನ್ನು ತಳೆದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಇಂಥ ಸಂದರ್ಭದಲ್ಲಿ ಸಮ್ಮೇಲನದಲ್ಲಿ ಈ ಗೊತ್ತುವಳಿಯು ಸ್ವೀಕೃತವಾದುದೂ, ಅಧ್ಯಕ್ಷರಾದ ಜಾವಡೇಕರರು ತಮ್ಮ ಭಾಷಣದಲ್ಲಿ ಇದನ್ನು ಎತ್ತಿ ಹಿಡಿದುದೂ ಒಳ್ಳೆಯದೇ ಆಯಿತು.

ಸಂಯುಕ್ತ ಮಹಾರಾಷ್ಟ್ರದ ಮಾತನ್ನೊಂದು ಬಿಟ್ಟರೆ, ಜಾವಡೇಕರರ ಅಧ್ಯಕ್ಷೀಯ ಭಾಷಣವು ತುಂಬ ನಿದ್ವಜ್ಜಡವೆನಿಸುವಂತಿತ್ತು. 'ನೀವು ಕ್ರಾಂತಿರಸವನ್ನು ನಿಮ್ಮ ಸಾಹಿತ್ಯದಲ್ಲಿ ನಿರ್ಮಿಸಿರಿ!' ಎಂಬುವೇ ಬರೆಹಗಾರರಿಗೆ ಅವರು ಕೊಟ್ಟ ಆದೇಶ. ಸ್ವತಂತ್ರ ರಾಷ್ಟ್ರದ ನಾಗರಿಕರೆಂದು ಬಾಳಲು ಇರಬೇಕಾದ ಸಾಕ್ಷ್ಯತೆ ಜನಸಾಮಾನ್ಯರಲ್ಲಿ ಉಂಟಾಗುವ ಹಾಗೆ, ನಿಧಾಯಕವಾಗಿ ಸಾಹಿತ್ಯಿಕರು ತಮ್ಮ ತಮ್ಮ ವಿಶಿಷ್ಟ ಕ್ಷೇತ್ರದಲ್ಲಿ ಕಾರ್ಯವನ್ನು ಮಾಡಲೆಸಗಬೇಕು—ಎಂಬುದೇ ಅವರ ಈ ಆದೇಶದ ಅರ್ಥವಾಗಿದ್ದಿತು. ಇಲ್ಲದಿದ್ದರೆ, 'ಕ್ರಾಂತಿರಸ' ಎಂಬ ಅವರ ಶಬ್ದಕ್ಕೆ ಬೇರೆ ಅರ್ಥವೇನು? ನವರಸಗಳಲ್ಲಿ ಈ 'ಕ್ರಾಂತಿರಸ' ವಂತೂ ಸೇರಿಲ್ಲ—ಎಂಬುದು ಸ್ಪಷ್ಟವೇ ಇದೆ. ಅಂತೂ ಇಂತೂ ಸಮಾಜವಾದ ಹಾಗು ಪ್ರಜಾರಾಜ್ಯ ಇವುಗಳನ್ನು ಸಮನ್ವಯಿಸಿ, ಸಮ್ಪ್ರದಯದ ತತ್ತ್ವಜ್ಞಾನವನ್ನು ಅದರಲ್ಲಿ ಬೆರೆಕೆಮಾಡುವುದೇ ಅವರ ಮಾತಿನ ಒಟ್ಟು ಧೋರಣೆ! ಜಾವಡೇಕರರು ಏಕಾಂತಿಕ ಸಮನ್ವಯವಾದಿಗಳು. ಇದುವರೆಗೂ ಗಾಂಧೀವಾದ ಮತ್ತು ಸಮಾಜವಾದ ಇವುಗಳನ್ನು ಹೊಂದಿಸಿ ತೋರಿಸಲು ಬೌದ್ಧಿಕ ಕೈಚಳಕವನ್ನು ಅವರು ಅನೇಕ ಸಲ ಮಾಡಿದ್ದಾರೆ. ಆದರೆ ಪ್ರಾಮಾಣಿಕರಾದ ಗಾಂಧೀವಾದಿಗಳು, ಸಮಾಜವಾದಿಗಳು ಮಾತ್ರ ಅದನ್ನೊಂದೂ ಒಪ್ಪಲಿಲ್ಲ. ಅದರಂತೆಯೆ ಈ ಆದೇಶವು ಕೂಡ ಮರಾಠಿ ಸಾಹಿತ್ಯಿಕರಿಗೆ ಜೀವಾಳಕ್ಕೆ ಅಂಟಿಕೊಂಡ ಮಾತಾಗಿರದ ಮೂಲಕ, ಅವರ ಈ ಭಾಷಣವು ಒಂದೇ ಜಾಡು ಹಿಡಿದು ನಡೆದುದು—ಎನಿಸಿದ್ದರೆ ಆಶ್ಚರ್ಯವಲ್ಲ.

ನಡೆದ ಉಪಸಮ್ಮೇಲನಗಳು ಮೂರು:— ಒಂದನೆಯದು ಮಹಿಳೆಯರದು, ಎರಡನೆಯದು ಕವಿಗಳದು, ಮೂರನೆಯದು ಲೇಖಕ ಪ್ರಕಾಶಕರದು. ಇವುಗಳಲ್ಲಿ ಮಹಿಳೆಯರ ಸಮ್ಮೇಲನವು ತುಂಬ ಕಳೆಗೊಂಡಿತು. ಡಾ. ಶ್ರೀಮತಿ ಚಂದ್ರಕಲಾ ಬಾಯಿಯವರೇ ಇದಕ್ಕೆ ಅಧ್ಯಕ್ಷರು. 'ನಾನು ಮತ್ತು ನನ್ನ ಲೇಖನ' ಎಂಬ ವಿಷಯವನ್ನು ಕುರಿತು ಶ್ರೀಮತಿಯರಾದ ಶಾಂತಾ ಶೇಳಕೆ, ಮಾಲತೀಬಾಯಿ ದಾಂಡೇಕರ, ಡಾ.ಕಮಲಾಬಾಯಿ ದೇಶಪಾಂಡೆ,

---

* ಕವಿಗಳಾದ ಶ್ರೀ. ದ. ರಾ. ಬೇಂದ್ರೆ ಹಾಗು ಶ್ರೀ. ವಿ. ಕೃ. ಗೋಕಾಕ ಇವರನ್ನು ಆಮಂತ್ರಿಸಲಾಗಿತ್ತು. ಆದರೆ ಆಮಂತ್ರಣವು ಸಕಾಲದಲ್ಲಿ ಅವರಿಗೆ ಮುಟ್ಟಲಿಲ್ಲ ಎಂಬ ತಿಳಿಯುತ್ತದೆ. —ಸಂ. ಜ.

ಇಂದಿರಾಬಾಯಿ ಮಾಯದೇವ ಮತ್ತು ಸಂಜೀವನಿ ಮರಾಠೆ ಇವರು ತಮ್ಮ ಅನುಭವಗಳನ್ನೊಳಗೊಂಡ ಭಾಷಣಗಳನ್ನಿತ್ತರು. ಆನಂತರ, 'ಇಂದಿನ ಮರಾಠಿ ವಾಙ್ಮಯದಲ್ಲಿ 'ಸ್ತ್ರೀ'ಯನ್ನು ವಾಸ್ತವವಾಗಿ ಚಿತ್ರಿಸಲಾಗಿದೆಯೆ?' ಎಂಬ ಪ್ರಶ್ನೆಯ ಮೇಲೆ ಉದ್ಬೋಧಕವಾದ ಚರ್ಚೆ ನಡೆಯಿತು. ಅನೇಕ ಮಹಿಳೆಯರು ಚರ್ಚೆಯಲ್ಲಿ ಭಾಗವಹಿಸಿದ್ದರು. 'ಇಂದಿನ ಮರಾಠಿ ವಾಙ್ಮಯದಲ್ಲಿಯ 'ಸ್ತ್ರೀ'ಯ ಚಿತ್ರಣ ಅವಾಸ್ತವ ಸ್ವರೂಪದ್ದಾಗಿದೆ!' ಎಂದು ನಿರ್ಣಯವಾಯಿತು.

'ಇಂದಿನ ಕಾವ್ಯವು ಪ್ರಗತಿಯ ಹಾದಿಯಲ್ಲಿದೆಯೆ?' ಎಂಬ ಚರ್ಚೆಗೆ ಕವಿಸಮ್ಮೇಲನದಲ್ಲಿ ತುಂಬ ಪ್ರಾಮುಖ್ಯತೆಯನ್ನು ಕೊಡಲಾಗಿತ್ತು. ಆಚಾರ್ಯ ಅತ್ರೆಯವರಂಥ ನಗೆಗಾರರೂ ವಿದ್ವಾಂಸರೂ ಅದರಲ್ಲಿ ಭಾಗವಹಿಸಿದ್ದರಿಂದ, ಈ ಚರ್ಚಾಪ್ರಸಂಗ ತುಂಬ ರಂಜನೆಮಾಡಿತು. ಇತ್ತೀಚಿನ ಕಾವ್ಯವನ್ನು ಓದದೆ ಇದ್ದರೂ, ಅತಿ ವಾಸ್ತವವಾದವನ್ನು ಅವರು ಸಂಪೂರ್ಣವಾಗಿ ಖಂಡಿಸಿದರು. ಪ್ರಾಧ್ಯಾಪಕರಾದ ಶ್ರೀ. ಜೋಗರು ಅತ್ಯಂತ ವಿಚಾರಪ್ರಚೋದಕವಾದ ಭಾಷಣವನ್ನು ಮಾಡಿ, ಇಂದಿನ ಕಾವ್ಯವು ವ್ಯಕ್ತಿಯ ಮಟ್ಟಿಗೇ ನಿಲ್ಲದೆ, ಸಮಾಜಾಭಿಮುಖವಾಗಿ ಪ್ರಗತಿ ಹೊಂದುತ್ತಿದೆ— ಎಂಬುದನ್ನು ಎತ್ತಿಹಿಡಿದರು. ಕವಿಸಮ್ಮೇಲನದ ಅಧ್ಯಕ್ಷರಾದ ಪ್ರೊ. ರಾನಡೆಯವರ ಭಾಷಣವು ಆಚಾರ್ಯ ಜಾವಡೇಕರರ ಭಾಷಣದಂತೆಯೇ ತುಸು ಜಡವಾಗಿಯೇ ತೋರಿತು. ಜೀವಶಾಸ್ತ್ರದ ಪ್ರಮೇಯಗಳನ್ನು ಕಾವ್ಯಕ್ಕೂ ಸರಿಹಚ್ಚಿ, 'ಜೀವನದಂತೆ ಕಾವ್ಯವು ಕೂಡ ಬೆಳೆಯುತ್ತದೆ' ಎಂಬ ಸಿದ್ಧಾಂತವನ್ನು ಮಂಡಿಸಿದರು. ಆವರು ಜೀವಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾರೆಂಬ ಮಾತನ್ನು ಇಲ್ಲಿ ಮರೆಯಲಾಗದು. ಈಗ ೨೫ ವರ್ಷಗಳ ಕೆಳಗೆ ಸ್ಥಾಪಿತವಾದ 'ರವಿಕಿರಣ ಮಂಡಳ್ಳ'ದ ಸದಸ್ಯರಲ್ಲೊಬ್ಬರು ಅವರು. ಈ ಮಂಡಳವನ್ನು ಗೌರವಿಸುವ ಕಾರ್ಯವೂ ಈ ಸಮ್ಮೇಲನದಲ್ಲಿ ನಡೆಯಿತು.

ಶ್ರೀಯುತರುಗಳಾದ ಮನಮೋಹನ, ಮಂಗೇಶ ಪಾಡಗಾಂವಕರ, ಯಶವಂತ, ವಸಂತ ಬಾಪಟ, ಶ್ರೀಮತಿ ಸಂಜೀವನಿ ಮರಾಠೆ ಮುಂತಾದ ಕವಿಗಳ ಕಾವ್ಯಗಾಯನವೂ— ಒಂದು ಆಕರ್ಷಕ ಕಾರ್ಯಕ್ರಮವೆನಿಸಿ—ಎಲ್ಲರಿಗೂ ಪ್ರಿಯವಾಯಿತು.

ಲೇಖಕ-ಪ್ರಕಾಶಕರ ಸಮ್ಮೇಲನವೆಂದರೆ, ತೋಳ-ಕುರಿಯ ಸಮ್ಮೇಲನವಿದ್ದಂತೆ! 'ಪ್ರಕಾಶಕರು ಲೇಖಕರಿಗೆ ತಕ್ಕ ಪ್ರತಿಫಲವನ್ನು ಕೊಡದೆ ಮೋಸಗೊಳಿಸುತ್ತಾರೆ' ಎಂದು ಪ್ರಕಾಶಕರ ಬಗ್ಗೆ ಬಡೋದೆಯ ರಾಜರತ್ನ ಜೋಶಿಯವರು ದೂರನ್ನು ತೋಡಿಕೊಂಡರು. ಬರೆಹಗಾರನ ಚಾರಿತ್ರ್ಯ ಏನೇ ಇದ್ದರೂ, ಅವನ ಬರೆಹದಲ್ಲಿ ಸಾಹಿತ್ಯಗುಣವಿದ್ದರೆ ಅದನ್ನು ಪ್ರಕಟಿಸಲು ಪ್ರಕಾಶಕರು ಹಿಂತೆಗೆಯಬಾರದೆಂದು ಇನ್ನೊಬ್ಬರ ಮಾತಿನ ಧೋರಣೆಯಾಗಿದ್ದಿತು. ಇವಕ್ಕೆಲ್ಲ ಆಹ್ವಾನವೆನ್ನುವಂತೆ ಒಬ್ಬ ಪ್ರಕಾಶಕ ಮಹಾಶಯರು ಎದ್ದು ನಿಂತು— 'ಪ್ರಕಾಶನದ ವ್ಯವಹಾರ ಲಾಭದ ವ್ಯವಹಾರವಲ್ಲ. ಲೇಖಕರಿಗೆ ಉತ್ತೇಜನ ದೊರೆಯಲೆಂದೇ ನಾವು ಕೈ ಸುಟ್ಟುಕೊಂಡು ಈ ವ್ಯವಹಾರ ನಡೆಯಿಸುತ್ತೇವೆ. ಬೇಕಾದ ಲೇಖಕನು ಮುಂದೆ ಬರಲಿ; ಅವನಿಗೆ ನಾನು ಬಂಡವಾಳ ಕೊಡುತ್ತೇನೆ. ಅವನು ಪುಸ್ತಕ ಪ್ರಕಟಿಸಿ, ಅದರ ಮೇಲೆ ನೂರಕ್ಕೆ ೬ರಂತೆ ಯಾದರೂ ಲಾಭವನ್ನು ಉಳಿಸಿ ತೋರಿಸಲಿ!' ಎಂದು ಸಾರಿದರು. ಅದೇನು ಕಾರಣವೊ, ಪ್ರಕಾಶಕ ಮಹಾಶಯರ ಈ ಸವಾಲನ್ನು ಪ್ರತಿಭಟಿಸಲು ಯಾವ ಲೇಖಕನೂ ಧೈರ್ಯಮಾಡಲಿಲ್ಲ. ಹೀಗಾಗಿ ಈ ಪ್ರಕಾಶಕನ ಮಾತನ್ನು ಸುಳ್ಳಾಗಿಸುವ ಒಂದು ಒಳ್ಳೆ ಸಂಧಿಯು ವ್ಯರ್ಥ ಹೋಯಿತು.

ಹೀಗೆ ಸ್ವಲ್ಪದರಲ್ಲಿ ಮರಾಠೀ ಸಾಹಿತ್ಯ ಸಮ್ಮೇಲನದ ನೋಟವನ್ನು ಜಯಂತಿಯ ಓದುಗರಿಗೆ ಒದಗಿಸಿದ್ದೇನೆ.

ಸಣ್ಣ ಕತೆಯಲ್ಲಿ ಸ್ವಾರಸ್ಯ!

ಇದನ್ನು ಬಯಸುವವರಿಗೆ ಹದಿನಾರು ವರ್ಷಗಳಿಂದ ಪ್ರಿಯವಾಗಿರುವ ಮಾಸಪತ್ರಿಕೆ

ಕತೆಗಾರ

ಪ್ರತಿ ಸಂಚಿಕೆಯಲ್ಲೂ
ಉತ್ತಮ ಸಣ್ಣ ಕತೆಗಳು,
ಕನ್ನಡ ಪತ್ರಿಕೆಗಳಲ್ಲಿ ಆಯಾ ತಿಂಗಳು ಪ್ರಕಟವಾದ ಕತೆಗಳ ಪರಿಚಯ,
ಚಿತ್ರರಂಗನಿರೀಕ್ಷಣ, ಇನ್ನೂ ಇತರ.....?
ಇವೆಲ್ಲ ಅಂದವಾದ ಅಚ್ಚು ಕಟ್ಟಿನೊಳಗೆ.
ಬಿಡಿಪ್ರತಿ ನಾಲ್ಕಾಣೆಗೆ ದೊರೆಯುವುದು.
ವಾರ್ಷಿಕ ಚಂದಾ ಮೂರು ರೂಪಾಯಿ
(ಅಂಚೆ ಉಚಿತ.)

ಪ್ರಕಾಶಕರು

ಆರ್. ಎನ್. ನ್ಯೂಸ್ ಏಜನ್ಸಿ,
೬೬೫, ಚಿಕ್ಕಪೇಟೆ. ಬೆಂಗಳೂರು, ೨.

" ಜರಾಸಂಧಿ "

ಲೇ. ಶ್ರೀರಂಗ. ಪ್ರಕಾಶಕರು: ಕರ್ನಾಟಕ ಸಂಘ ಮುಂಬೈ. ಪುಟ ೬೯+೨. ಬೆಲೆ ೧ ರೂ. ೮ ಆಣೆ.

ಶ್ರೀರಂಗರು ನಮ್ಮನಾಡಿನ ಸುಪ್ರಸಿದ್ಧನಾಟಕಕಾರರಲ್ಲಿ ಒಬ್ಬರು. ಇದು ತೀರ ಹೊಸ ನಾಟಕ. ಎಂದರೆ—ಹೊಸಕಾಲದ ಘಟನೆಗಳನ್ನು ಆಗೀಗ ನೆನಪಿಗೆ ತರುವಂತೆ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಡೆವ ಒಂದು ಕೌಟುಂಬಿಕ ಮನಃಸಂಘರ್ಷದ ಚಿತ್ರವನ್ನು ಚಮತ್ಕಾರದ ಮಾತುಗಾರಿಕೆಯಿಂದ ಚಿತ್ರಿಸುವ ಒಂದು "ಚಿತ್ರ-ನಾಟಕ. ನಾಟಕ ಮೂರಂಕಿನದಾದರೂ ಒಟ್ಟಿನಲ್ಲಿ ಚಿಕ್ಕದೆ. ಕೃತಿ ಪ್ರಧಾನವಾಗಿದ್ದರೆ ಇಲ್ಲಿಯ ಘಟನೆಯಲ್ಲಿ ಹೆಚ್ಚಾದರೆ ಒಂದಂಕಿನ ನಾಟಕಕ್ಕೆ ಸಾಲುವಷ್ಟು ಸತ್ತ್ವ ಇದೆ. ನಾಟಕದ ಕಥೆ ಸುಮಾರಾಗಿ ಹೀಗಿದೆ:

ಮುಂದಾಕಿನಿಯ ಅಜ್ಜ ಪಾಂಡಪ್ಪ, ಏನು ಮಾಡಬೇಕು ಎಂಬುದು ತಿಳಿಯದ್ದಕ್ಕೊ, ಏನಾದರೂ ಮಾಡಬೇಕೆಂಬ ನಾಹಸದಿಂದಲೋ, ಯಾತ್ರೆಯ ನೆವಮಾಡಿ ಮನೆಬಿಟ್ಟು, ಒಂದು ವರ್ಷ ಹೊರಗೆ ಹೋಗುತ್ತಾನೆ. ಮುಂದಾಕಿನಿಯ ತಂದೆ ಕಾದಂಬರಿಕಾರ **ಬಿಂದೂರಾಯ,** ತನ್ನ ಮೂಲಸ್ವಭಾವದಂತೆಯೇ ಮಗಳ ಮದುವೆಯ ವಿಚಾರಮಾಡದೆ, ತನ್ನ ಕಲ್ಪನಾಸಾಮ್ರಾಜ್ಯದಲ್ಲಿ ಈ ವರ್ಷವನ್ನು ಕಳೆಯುತ್ತಾನೆ. ಈ ಒಂದು ವರ್ಷದ ಅವಧಿಯಲ್ಲಿ ಮುಂದಾಕಿನಿ ದೇಶದ ರಾಜಕೀಯ ಚಳವಳಿಯಲ್ಲಿ ಸೇರಿಕೊಂಡುದರಿಂದ, ಸಾಹುಕಾರ ಸುಬ್ಬಣ್ಣನೊಡನೆ ಸಖ್ಯ ಬೆಳೆಯುತ್ತದೆ. ಬೆಳೆಸುತ್ತಾಳೆ—ಎಂದರೂ ಅಡ್ಡಿ ಇಲ್ಲ. ಇದೇ ಕಾಲದಲ್ಲಿ ಅವಳು ಪಾಂಡಪ್ಪನವರ ಮನೆಯ ರೂಪವನ್ನೆ ಬದಲುಮಾಡಿ, ಅದಕ್ಕೆ ಆಧುನಿಕ ಕಳೆಯನ್ನು ತರುತ್ತಾಳೆ; ತಾನೂ ಆಧುನಿಕಳಾಗುತ್ತಾಳೆ. ಮನೆಯ ಆಳು-ಹೋಳುಗಳಿಗೆ ಆ ರೂಪ ತಂದುಕೊಡಲು ನಾಟಕೀಯ ಚಟುವಟಿಕೆ ಮಾಡುತ್ತಾಳೆ. ಇದೆಲ್ಲ ನಾಟಕದ ಹೊರಗಿನ ಮಾತು. ನಾಟಕದ ಮೂರಂಕಿನ ಕಥೆ ಮೂರುದಿನಗಳ ಕಥೆ. ಪಾಂಡಪ್ಪ ಯಾತ್ರೆಯಿಂದ ಬಂದ ದಿನ ಮಧ್ಯಾಹ್ನದ ನಾಲ್ಕೂವರೆ ಗಂಟೆಯ ಮುಂದಿನ ಕತೆ ಮೊದಲಂಕಿನಲ್ಲಿ. ಎರಡನೆಯ ಅಂಕಿನದು ಎಂಟು ದಿನಗಳ ಮೇಲೆ, ಬೆಳಗಿನ ಎಂಟೂವರೆ ಗಂಟೆಯನಂತರದ ಕತೆ. ಮೂರನೆಯ ಅಂಕು ಅದರ ಮರುದಿನ ಮುಂಜಾವಿನ ಎಂಟು—ಎಂಟೂವರೆಯ ಮುಂದಿನ ಕತೆ. ಮೂರಂಕುಗಳಲ್ಲಿ ಬರಿ ಮಾತು, ಮಾತು, ಮಾತು. ನಾಟಕ ಮುಗಿಯುವುದರ ಕಾರಣ ನಾಟಕಕಾರರು ಮುಗಿಸಿದ್ದರಿಂದ—ಎನ್ನಬಹುದು, ಅಥವಾ ಇಂಥ ನಾಟಕಗಳಿಗೆ ಇದೇ ಮುಗಿತಾಯ ಎಂದರೂ ಸಲ್ಲುವುದು. ಮಾತೇ ಹೊಸೆಯುತ್ತ ನಡೆಯುವ ಈ ನಾಟಕ ಇನ್ನೂ ಎರಡು, ಮೂರು ಅಂಕು ನಡೆಯಬಹುದಾಗಿತ್ತು. ಮೂರು ಅಂಕುಗಳಿಗೆ ಮೂರು ಘಟನೆಗಳಿವೆ. ತೀರ ಎಲುಬಿಲ್ಲದ ಮಾಂಸದ ಮುದ್ದೆಯಲ್ಲ ಇಲ್ಲಿಯ ಕತೆ. ಮೊದಲನೆಯ ಅಂಕಿನಲ್ಲಿ ಪಾಂಡಪ್ಪ ಯಾತ್ರೆ ಮುಗಿಸಿ ಬಂದ ಮೊದಲನೆಯ ದಿನದ ಸಂಭ್ರಮ, ಹೊಸಮನೆಯ ಹೊಸ ಸೀನರಿ, ಹೊಸ ಪಾತ್ರಗಳು, ಹೊಸ ಕಥೆಯ ನಾಂದಿ. ಎರಡನೆಯ ಅಂಕಿನಲ್ಲಿ ಸುಬ್ಬಣ್ಣ ಮಂದಾಕಿನಿಗೆ ಒಂದು ಪತ್ರ ಬರೆದು ಪಾಂಡಪ್ಪನವರ ಕೌಟುಂಬಿಕ ಗಂಗಾಳದಲ್ಲಿ ಗಲಿಬಿಲಿ ಎಬ್ಬಿಸಿದ್ದಾನೆ. ಸುಬ್ಬಣ್ಣ ಮತ್ತು ಮುಂದಾಕಿನಿಯ ಸ್ವಾತಂತ್ರ್ಯೋತ್ತರದ ಮೊದಲನೆಯ ವಾಗ್ಯುದ್ಧ ಇಲ್ಲಿ ಕಂಡುಬರುವುದು. ಮೂರನೆಯ ಅಂಕಿನಲ್ಲಿ ಮುಂದಾಕಿನಿಯ ನಾಟಕೀಯತೆ ಜೋರಾಗುತ್ತದೆ. ಸುಬ್ಬಣ್ಣ ಊರು ಬಿಡುವ ಹುಸಿಬೆದರಿಕೆ ಹಾಕುತ್ತಾನೆ. ಮುಂದಾಕಿನಿಗೆ ಪ್ರಣಯಜ್ವರವೊ, ಪಿತ್ತಜ್ವರವೊ ಬಂದ ಸುದ್ದಿ ಇದೆ. ಮುಂದಾಕಿನಿ, ಸುಬ್ಬಣ್ಣ ಇವರ ಮಾರ್ಜಾರಪ್ರಣಯದ ಎರಡನೆಯ ವಾಗ್ಯುದ್ಧ ನಡೆಯುತ್ತದೆ. ಒಬ್ಬರಿಂದೊಬ್ಬರು ಅಗಲಿ, ಪರಸ್ಪರರಿಂದ ಪರಾಙ್ಮುಖರಾಗಿ, ನಾಟಕೀಯ ಆಚಾರೌದ್ಧತ್ಯವನ್ನು ನಡೆಯಿಸಿದ ಈ ಗಂಡು-ಹೆಣ್ಣಿನ ಮುಖ ಪರಸ್ಪರರ ಕಡೆಗೆ ಹೊರಳುವಂತೆ ಮಾಡುವುದರಲ್ಲಿ, ಪಾಂಡಪ್ಪನವರ ಪಿತ್ತದ ಬುದ್ಧಿ ಕೃತಾರ್ಥವಾಗುತ್ತದೆ. ನಾಟಕ ಮುಗಿಯುತ್ತದೆ.

ನಾಟಕ ಸ್ವಾತಂತ್ರ್ಯಾಂದೋಲನದ ಚರಿತ್ರೆಯೇನೂ ಅಲ್ಲ. ಮನೆ-ಮನೆಯಲ್ಲಿ ಸ್ವಾಭಾವಿಕವಾಗಿ ನಡೆದಿರುವ ಲಗ್ನದ ಅರೆದಾಟ. ವಧೂ-ವರರಿಬ್ಬರೂ ಸ್ವಾತಂತ್ರ್ಯಾಂದೋಲನದಲ್ಲಿ ಒಮ್ಮೆ ಭಾಗವಹಿಸಿದ್ದರು. ಈಗಲೂ ಸುಬ್ಬಣ್ಣ ಒಂದುಬಗೆಯ ಮುಂದಾಳಾಗಿದ್ದರು ಎಂಬುದು ಅವರ ಅಕಟೋವಿಕಟ ಹರಟೆಗಳಿಂದ ತಿಳಿಯುವುದು. ಆದರೂ ಮುಂದಾಕಿನಿಯ ಗಂಡನಾಗಲು ಅಪೇಕ್ಷಿಸುವ ಈ ಶ್ರೀಯುತ ಸುಬ್ಬಣ್ಣ, ಅಂತಹ ಅಸಾಮಾನ್ಯ ವ್ಯಕ್ತಿಯೇನೂ ಅಲ್ಲ. ನಾಟಕಕಾರರಾದ ಶ್ರೀರಂಗರ ಅಭಿಪ್ರಾಯದಲ್ಲಂತೂ ಅಡಿಗೆಯ ಅನಂತ, ಚಾಕರಿಯ ಚಿನ್ನ ಇವರ ಜೊತೆ ಸೇರಿಸಬಹುದಾದ ಒಬ್ಬ ಸಾಮಾನ್ಯ ಮಾನವ. (ಮುನ್ನುಡಿ ಪು. ೨). ಪಾಂಡಪ್ಪ-ಮುಂದಾಕಿನಿಯರ ಸಾಲಿನಲ್ಲಿ ಬಿಂದೂರಾಯ ಬರುತ್ತಾನೆ—ಎಂದು ನಾಟಕಕಾರರ ಅಭಿಪ್ರಾಯವಿದ್ದಂತೆ ತೋರುತ್ತದೆ. (ಅದೇ ಮುನ್ನುಡಿ) ನಾಟಕದ ಕಥೆಯಲ್ಲಿಯೋ ಅನಂತ-ಚಿನ್ನರ ಲಂಜೋಭಂಡೊ ನಗಯಾಟದಂತೆ ಕಥೆಗೂ ಅನಾವಶ್ಯಕ, ಮನೆಯಲ್ಲಿಯೂ ಅನಾವಶ್ಯಕ, ಜಗತ್ತಿಗೂ ಅನಾವಶ್ಯಕ—ಎಂಬಂತೆ ಚಿತ್ರಿಸಲ್ಪಟ್ಟ ಶೂನ್ಯಪ್ರಾಯ ಪುರುಷಾರ್ಥದ ಈ

ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ

ಸುಮಾರು ೬೦೦ ಪುಟಗಳಲ್ಲಿ ನಾಲ್ಕು ಗ್ರಂಥಗಳು.

ವಾರ್ಷಿಕ ಚಂದಾ ೫-೦-೦ (ರಜಿಸ್ಟರ್) ಪೋ. ವೆಚ್ಚ ಸೇರಿ.

ಸಂಪಾದಕರು— ಕಲಮದಾನಿ ಗುರುರಾಯರು

೩ನೆಯ ವರ್ಷದ ಮೊದಲನೆಯ ಗ್ರಂಥ

ಉತ್ಕಲಾ ಭಾಗ ೨

ಇದೀಗ ಹೊರಟಿದೆ. ಬೇಗ ಚಂದಾದಾರರಾಗಿರಿ.

ಬಿಂದುರಾಯ, ಒಂದು ತಲೆಮಾರಿನ ಪ್ರತಿನಿಧಿಯಂತೆ! ಈ ನಾಟಕದ ಒಂದು ಮುಖ್ಯ ಲಕ್ಷಣವೆಂದರೆ, ಇದರಲ್ಲಿ ಮೂರು ತಲೆಮಾರಿನ ಬದಲಾವಣೆಯ ಚಿತ್ರ ಇಣಿಯಂತೆ. ಒಂದನೆಯ ತಲೆಮಾರು— ಬ್ರಿಟಿಶರ ಆಳಿಕೆಯನ್ನು ಸಂತೋಷದಿಂದ ಒಪ್ಪಿ ನಡಿಸಿಕೊಂಡು ಹೋಗುವ ಆರುವತ್ತು ವರುಷಗಳ ಹಿಂದಿನ ಕಾಲ. ಈ ಕಾಲದ ವಾತಾವರಣದ ಪ್ರತಿನಿಧಿ ಪಾಂಡಪ್ಪನಂತೆ. ಈ ನಾಟಕದ ಕಟ್ಟಿಗೆ ಇವನು ತನ್ನ ಮೊಮ್ಮಗಳ ಮದುವೆಗೆ ಸಿದ್ಧವಾಗಲು ಎಷ್ಟು ಪೇಚಾಡುವನೆಂಬುದು ಮುಖ್ಯ ವಿಷಯ. ಎರಡನೆಯ ತಲೆಮಾರು— ಬ್ರಿಟಿಶರ ಶಿಕ್ಷಣದಿಂದ ತರಬೇತಾದ ಬುದ್ಧಿಜೀವಿಗಳ ಮೂವತ್ತು ವರ್ಷಗಳ ಹಿಂದಿನ ಕಾಲ. ಈ ವಾತಾವರಣದ ಪ್ರತಿನಿಧಿ ಬಿಂದೂರಾಯ–ಬರೆಹಗಾರ. ಈ ಕಾಲದಲ್ಲಿಯೇ ಶ್ರೀರಂಗರ ಜನನವಾಗಿರಬೇಕು ಎಂದು ಹೇಳಬಹುದು. ಮೂರನೆಯ ತಲೆಮಾರು— ಬ್ರಿಟಿಶರನ್ನು ದೇಶಾಭಿಮಾನದಿಂದ ಇದಿರಿಸುವ ಕಳೆದ ಇಪ್ಪತ್ತು ವರ್ಷಗಳ ಈಚಿನ ಕಾಲ. ಇದರ ಪ್ರತಿನಿಧಿ ಮಂದಾಕಿನಿ— ಶ್ರೀಯುತ ಸುಬ್ಬಣ್ಣನಲ್ಲ; ಅವನೊಬ್ಬ ಸಾಮಾನ್ಯ ಮನುಷ್ಯ. ನಾಟಕಕಾರರ ಅಪೇಕ್ಷೆಯಿಂದಲೇ ನಾಟಕವನ್ನು ಅಳೆದದ್ದಾದರೆ, ಈ ಅಪೇಕ್ಷೆ ತಿಲಮಾತ್ರವೂ ಈಡೇರಿಲ್ಲ—ಎಂಬುದು ಈ ನಾಟಕ ಓದುವವನಿಗೂ ತಿಳಿಯುವಂತಿದೆ. ಔಷಧಗಳ ಪೊಟ್ಟ ಜಾಹೀರಾತಿನಂತೆ, ಮುನ್ನುಡಿಯೊಳಗಿನ ಈ ತಾತ್ತ್ವಿಕ ಮುಖವಿಲಾಸವು ನಾಟಕಕ್ಕೆ ಅಸಂಬದ್ಧವಾಗಿದೆ. ನಾಟಕದ ೭ನೆಯ ಪುಟದ ಮೇಲೆ ಇನ್ನೊಂದು ತಲೆಮಾರಿನ ಚಿತ್ರ ಬರುತ್ತದೆ:

"ನಮ್ಮ ವ್ಯಾಳ್ಯಾಕ್ಕ ನಾವು ಹಿರೇರ ಜೋಡಿ ಹೋಗ್ತಿದ್ದಿವಿ ಊರೂರು ಕನ್ಯಾ ನೋಡ್ಲಿಕ್ಕೆ ಅಂತ.... ಆದೇ ನಂ ಬಿಂದೂನ ವ್ಯಾಳ್ಯೇಕ್ಕ **ಅವರು** ಊರೂರ ತಿರುಗತಿದ್ದರು, ವರ ನೋಡ್ಲಿಕ್ಕೆ ಅಂತ....ಈಗ?....ಈಗ ನಾನು ಊರೂರು ಅಲೆದಾಡ್ಬೇಕಂತೀಯೇನು, ಓಡಿಹೋಗೋ ವರನ್ನ ತಂದು ಕನ್ಯಾಗ ಕೂಡಿಸಲಿಕ್ಕೆ?" (ಈ "**ಅವರು**" ವರನ ಹಿರೇರಲ್ಲ.) ಈ ಮಾತು ಪಾಂಡಪ್ಪನವರು ಬಾಯ್ಬಿಚ್ಚಿ ಹೇಳದ್ದು ಅಷ್ಟೇ! ಯಾವ ವಾತಾವರಣ–ಪ್ರತಿವಾತಾವರಣಕ್ಕೆ ಸೇರಿದ್ದಲ್ಲ. ನಾಟಕದಿಂದಲೇ ಕಂಡರೆ, ಮೂರು ಮಾತು ಕಾಣುತ್ತವೆ: ತನ್ನ ದೊಡ್ಡಿಸ್ತಿಕೆಯಲ್ಲಿಯೇ ತಲ್ಲೀನನಾದ ಬಾಯ್ಬಡಕ ಪಾಂಡಪ್ಪ; ಇನ್ನೂ ಗೃಹಾಧಿಕಾರತ್ಯಾಗಕ್ಕೆ ಹಿಂದು ಮುಂದು ನೋಡುವ ಅವನ ವೃತ್ತಿ. ತನ್ನ ಸೃಷ್ಟಿಯ ಕಲ್ಪನೆಯಲ್ಲಿಯೇ ತಡಬಡಗೊಳ್ಳುತ್ತಿರುವ ಬಿಂದೂರಾಯ; ಜಗತ್ತಿಗೆ ಕಲಿಸುವ ಜಂಭದಲ್ಲಿದ್ದಾನೆ, ತನ್ನ ಜವಾಬ್ದಾರಿಯನ್ನೇ ಅರಿತುಕೊಂಡಿಲ್ಲ. ಮೂರನೆಯವಳು ಮಂದಾಕಿನಿ: ತನ್ನ ಮದುವೆ ತನ್ನ ಅಜ್ಜನಿಗೇ ಬಹಳ ಆಗತ್ಯ ಎಂಬುವಂಥ ನಾಟಕೀಯ ಸಂಭ್ರಮದಲ್ಲಿ ಇವಳು ತಿಳಿಯದೆ ತೊಡಗಿದ್ದಾಳೆ. ಇಂಥ ಈ ಮೂರು ಪಾತ್ರಗಳೊಡನೆ ಜೋತಾಡುತ್ತಿದ್ದಾನೆ ಶ್ರೀಯುತ ಸುಬ್ಬಣ್ಣ. ಇವನ ಯಾವ ಗುಣಕ್ಕೆ ಮಂದಾಕಿನಿ ಮರುಳಾಗಿದ್ದಳೊ? ಅದು ಇವಳಿಗೇ ಗೊತ್ತು. ಇಂಥ ವರನನ್ನು ಮಂದಾಕಿನಿಗೆ ನಾಟಕಕಾರರು ಏಕೆ ಗಂಟುಹಾಕಿದರೊ?

ಇಂಥ ಈ ಅಲ್ಪಸತ್ತ್ವವುಳ್ಳ ಕತೆಯನ್ನು, ಅದರ ಯಾವ ಚಾರಿತ್ರ್ಯಾಂಶ ಮತ್ತು ಯಾವ ಐತಿಹಾಸಿಕ ವಾತಾವರಣಕ್ಕೆ ಮರುಳುಗೊಂಡು ನಾಟಕಕಾರರು ಇದನ್ನು ರೂಪಿಸಲುದ್ಯುಕ್ತರಾದರೋ ತಿಳಿಯದು. ಈ ನಾಟಕದಲ್ಲಿ ಯಾವ ಒಂದು ವ್ಯಕ್ತಿಯ ಚಿತ್ರವೂ ಇಲ್ಲ—ಎಂದು ನಾಟಕಕಾರರೇ ಹೇಳಿದ್ದಾರೆ. ಆದರೆ ಪ್ರತಿ ಪಾತ್ರಕ್ಕೂ ನಾಟಕೀಯವಾದ ವ್ಯಕ್ತಿತ್ವೈಕ್ಯವಾದರೂ ಬೇಕು. ಕೃತಿಶೂನ್ಯವಾದ ಈ ಮಾತಿನ ನಾಟಕದಲ್ಲಿ, ಮುರಕಳಿ-ವ್ಯಕ್ತಿತ್ವವುಳ್ಳ ಕೆಲವು ವಿಕ್ಷಿಪ್ತ ಪಾತ್ರಗಳು ತಮ್ಮ ವಿಚಾರಾಭಾಸಗಳಿಂದಲೂ ಹಾಸ್ಯಾಸ್ಪದತೆಯಿಂದಲೂ, ತಮ್ಮ ಚಹ ಕುಡಿಯುವ ಹೊತ್ತಿನ ಹರಟೆಯಿಂದ ಹಾಗೂ ಹೀಗೂ ರಂಜನೆಮಾಡುತ್ತವೆ. ಇದು ಸಾಕಾಗಲಿಲ್ಲ ಎಂಬಂತೆ ಚೆನ್ನ, ಅನಂತರ ಅಪದ್ಧ-ಸುಪದ್ಧವಾಗ್ವಾದವು— ಅವರ ಬೇಸರ ಕಳೆಯಲು ಇವರದು ಎಂಬಂತೆ— ರಂಗಭೂಮಿಯ ಮೇಲೆ ಗೊದ್ದಾಟದೊಡನೆ ಸಾಗುತ್ತದೆ. ನಾಟಕಕಾರರು ಅಪೇಕ್ಷೆಪಟ್ಟಂತೆ ಅವರನ್ನೇ ಈ ನಾಟಕಪ್ರಯೋಗವು ಕನಿಕರಕ್ಕೀಡುಮಾಡುವಂತಿದೆ. ಮುನ್ನುಡಿಯಲ್ಲಿ ಶ್ರೀರಂಗರು, ತಮ್ಮ ಜೀವನದಲ್ಲಿ ಕಲಾಸಂಧೀಯಾದೀತು— ಎಂಬ ಆಶೆಯನ್ನು ಒಡನುಡಿದಿದ್ದಾರೆ. ಪಾಂಡಪ್ಪನವರ ಕೈಯಿಂದ ಮಂದಾಕಿನಿ

ಓದಲೇ ಬೇಕಾದ ಉಪಯುಕ್ತ ಪುಸ್ತಕ

ದಕ್ಷಿಣ ಭಾರತದ ಖನಿಜ ಸಂಪತ್ತು ಮತ್ತು ಕೈಗಾರಿಕೆಗಳು

ಲೇ— ಯಂ. ವಾಸುದೇವರಾವ್. ಎಂ.ಎ., ಬಿ.ಟಿ.

ಸುರತ್ಕಲ್ ದ. ಕ.

೫ ವಿಶಿಷ್ಟ ಭೂಪಟಗಳು — ೧೫ ಚಿತ್ರಗಳು

ಮದ್ರಾಸು ವಿಶ್ವವಿದ್ಯಾನಿಲಯದ ಬಹುಮಾನ ಪಡೆದ ಪುಸ್ತಕ.

ಬೆಲೆ ೨-೮-೦

(೧) ಪ್ರತಿಗಳನ್ನು ಗ್ರಂಥಕರ್ತರಿಂದಾಗಲಿ (೨) ಮಂಗಳೂರ ಗ್ರಂಥ ಭಂಡಾರ, ಧಾರವಾಡ. (೩) ಸಾಹಿತ್ಯ ಪುಸ್ತಕ ಭಂಡಾರ ಮಂಗಳೂರು. (೪) ಇಂಡಿಯನ್ ಇಂಡಸ್ಟ್ರಿಯಲ್ಸ್ ಮತ್ತು ಪೀಪಲ್ಸ್ ಮಂಗಳೂರು ಇವರಿಂದಾಗಲಿ ಪಡೆಯಬಹುದು.

....ನಮ್ಮ ಪ್ರಕಟನೆಗಳು....

ದಾಸರ ಹುಡಿಗೆ [೨ನೇ ಆವೃತ್ತಿ] ೧-೮-೦, ಪ್ರತಿಫಲ ಮತ್ತು ಇತರ ಕತೆಗಳು ೧-೪-೦: ಸಂಗೊಳ್ಳಿ ರಾಯಣ್ಣ [ತಿದ್ದಿದ ೨ನೇ ಆವೃತ್ತಿ]೧-೮-೦, ವಿಜಯ ಸಾಮ್ರಾಜ್ಯ [ಐತಿಹಾಸಿಕ ನಾಟಕ]. ೧-೮-೦, ಕನ್ನಡ ಸಾಹಿತ್ಯವಾಹಿನಿ [ತಿದ್ದಿ ಬೆಳಿಸಿದ ೨ನೇ ಆವೃತ್ತಿ] ೨-೮-೦. ಆರು ಕತೆಗಳು ೧-೪-೦, ಶೋಕ ವ್ಯಾಪಾರಿಗಳಿಗೆ ಹೆಚ್ಚಿನ ಸವಲತ್ತು.

'ಕಥಾಕುಂಜ' ಗ್ರಂಥಭಾಂಡಾರ,
ಗಣಪತಿ ಬೀದಿ, ಬೆಳಗಾಂವಿ.

ಯನ್ನು ಬಿಡಿಸುವಂತೆ, ಯಾರಾದರೂ ಶ್ರೀಯುತರು ಇವರ ರೂಪಕ ಕಲೆಯನ್ನು ನಾಟ್ಯವಿಲಾಸಿಗಳ ರಂಗಭೂಮಿಯಿಂದ ಬಿಡಿಸಿ ಚಿತ್ರಪಟಕ್ಕೆಳೆದರೆ, ಏನಾಗುವುದೋ ನೋಡಲಡ್ಡಿಯಿಲ್ಲ.

ಈ ನಾಟಕದೊಳಗಿನ ಪಾತ್ರಗಳಿಗೆ ಹೆಸರಿಡುವ ಪದ್ಧತಿ (ಪ ಪಾ ಪಾಂಡಪ್ಪಾ, ಚ-ಚಾ-ಚೆನ್ನ, ಅ-ಆ-ಅನಂತ....) ಸ್ವತಃ ನಾಟಕಕ್ಕೆ ಇಟ್ಟ 'ಜರಾಸಂಧಿ' ಎಂಬ ಕ್ಲೇಷ್ಟವಾದ ವಿಚಿತ್ರ ಹೆಸರು, (ಇದರ ಅರ್ಥ ಹೇಳಲು ಮೂರು ಅಂಕುಗಳಲ್ಲಿಯೂ ಮಾತುಗಾರಿಕೆಯನ್ನೂ, ನಾಟಕೀಯತೆಯನ್ನೂ ವೆಚ್ಚಮಾಡಿದ್ದಾಗಿದೆ.) ಅಪದ್ಧ ಅಸದ್ಧವಾದ ರಂಗಸೂಚನೆಗಳು, ಅಡಿಟಿಪ್ಪಣಿಗಳು, ಏಕದೃಶ್ಯ ಏಕಾಂಕಮಾಡಲು ಹೋಗಿ ಎರಡನೆಯ ಅಂಕಿನಲ್ಲಿ ಸುಬ್ಬಣ್ಣನು ಮಾಡಿದ ಅಂತವಿಲ್ಲದ ಆಕಾಶಭಾಷಣ, "ಎತ್ತಿಹಾಕು" ಎಂಬ ಮಾತಿಗೆ ಜೋತುಬೀಳುವ ಚೆನ್ನನ ಪಾತ್ರಪೋಷಣೆ, ಅವನಿಂದ ಮೊದಲನೆಯ ಅಂಕಿನ ಕೊನೆಗೆ ಮಾಡಿಸಿದ ಜೋರಬಾತುರ್ಯ ಪ್ರದರ್ಶನ, ಶುದ್ಧಲೇಖನದ ಯಾವೊಂದು ಪದ್ಧತಿಯನ್ನೂ ಅನುಸರಿಸದೆ ಹಾಗೆಂದರೆ ಹಾಗೆ ಹೀಗೆಂದರೆ ಹೀಗೆ—ಮಾಡಿದ ಪದಪ್ರಯೋಗ.... ಇವೆಲ್ಲ ಒಟ್ಟುಗೂಡಿಸಿ ನೋಡಲಾಗಿ, ಇದರಲ್ಲಿ ಮಂತ್ರಕ್ಕಿಂತ ಉಗುಳೇ ಹೆಚ್ಚು ಎಂದು ತೋರುತ್ತದೆ.

'ಜರಾಸಂಧಿ' ನಾಟಕವು ಗುಣವಿಹೀನವೇನೂ ಅಲ್ಲ. ಶ್ರೀ. ಶಿವರಾಮ ಕಾರಂತರ ನವೀನ ನಾಟಕಗಳ ಸಹಜಶೈಲಿ ಇಲ್ಲಿಲ್ಲದಿದ್ದರೂ, ಶ್ರೀರಂಗರ ಸ್ವಾಭಾವಿಕ ವಕ್ರೋಕ್ತಿಯು ಇಲ್ಲಿಯೂ ಇದೆ. ನಾಟಕದಲ್ಲಿ ಪಾತ್ರ ಬಹಳಿಲ್ಲ. ರಂಗರಚನೆಗೆ ಅನುಕೂಲತೆ ಇದೆ. ಹೆಣ್ಣುಪಾತ್ರ ಒಂದೇ ಇದೆ. (ಒಂದಾದರೂ ಇದೆ!) ಪುಸ್ತಕದ ಮುದ್ರಣ ಅಂದವಾಗಿದೆ. ಅಡಿ ತೋರಿಸಬೇಕೆನ್ನುವ ನಾಟ್ಯವಿಲಾಸಿಗಳಿಗೆ ಇವೆಲ್ಲ ಅನುಕೂಲಗಳೇ. ಇನ್ನೊಂದು ಹೆಚ್ಚಿನ ಅನುಕೂಲವೆಂದರೆ, ಇಲ್ಲಿಯ ಮಾತು. ನಾಟಕವು ಘಟನಾನಿಷ್ಠವಿಲ್ಲದ್ದರಿಂದ, ಮಾತುಗಳನ್ನು ಅಲ್ಲೂ ಇಲ್ಲೂ ಬಿಟ್ಟು ಆಟ ಮುಂದೋಡಿಸಬಹುದು. ಕಂಠಪಾಠಕ್ಕಿಂತ ಹಿನ್ನುಡಿಯುವವರ ಬೆಂಬಲದಿಂದಲೇ ನಟನೆಗೆ ಮುಂದೆ ಬಂದ ವಿಲಾಸಿಗಳಿಗೆ, ಇಂಥ ಅನುಕೂಲವು ಬೇಕಾಗುತ್ತದೆ. ಇನ್ನೊಂದು ದೃಷ್ಟಿಯಿಂದ ಶ್ರೀರಂಗರ ನಾಟ್ಯಪ್ರಯೋಗದಲ್ಲಿ ಪ್ರಗತಿ ಇದೆ—ಎಂದು ಹೇಳಬಹುದು. ಇದು ಅವರ 'ಸಂಸಾರಿಗ ಕಂಸ' 'ಸಂಧ್ಯಾಕಾಲ' ಗಳಿಗಿಂತ ಹೆಚ್ಚು ಅಚ್ಚುಕಟ್ಟಾಗಿದೆ.

ಶ್ರೀರಂಗರ ನಾಟಕಗಳ ವಿಮರ್ಶೆಯನ್ನು ಈ ರೀತಿ ಮಾಡಬಾರದು—ಎಂದು ಕನಿಕರಪಡುವ ಸಹೃದಯರಿರಲಾರರೆಂದೇನಲ್ಲ. ಆದರೆ ಕಾಸರಗೋಡಿನಲ್ಲಿ ವಿಮರ್ಶಾಶಾಸ್ತ್ರವನ್ನು ಕುರಿತು ಶ್ರೀರಂಗರು ಅಬದ್ಧ ಭಾಷಣ ಮಾಡಿದ ಅನಂತರದಲ್ಲಿ, ಅದಕ್ಕೆ ತಕ್ಕಂತೆ ಅಬದ್ಧವಾಗಿಯೇ ನಾಟಕವಿಮರ್ಶೆಗಳನ್ನು ಮಾಡುತ್ತಿದ್ದಾರೆ. ಅದಲ್ಲದೆ ತಮ್ಮ ಮಲ್ಲಿನಾಥಿಕೆಯ ಮರಿಗಳನ್ನು ತಯಾರಿಸಿ, ಅವುಗಳ ಘರ್ಕಟಚೇಷ್ಟೆಗೂ ಪ್ರೋತ್ಸಾಹವೀಯುತ್ತಿದ್ದಾರೆ. 'ಜರಾಸಂಧಿ'ಯನ್ನು – ಕುರಿತು ಇದಕ್ಕೂ ವಿವರವಾದ ವಿಮರ್ಶೆಯನ್ನು ಮಾಡಿದ್ದೇ ಆದರೆ, ಅದರ ಟೊಳ್ಳುತನವು ಇನ್ನೂ ಹೆಚ್ಚು ಸ್ಪಷ್ಟವಾಗುವುದು. ಯಾರೂ ಆ ನಾಟಕವನ್ನೋದಿ ಹೆಚ್ಚು ಹುರುಳೇನಾದರೂ ಕಂಡರೆ ಬಯಲಿಗಿಡಲಿ. ಅದರಿಂದ ನಾವಾದರೂ ಪಾಠ ಕಲಿಯುತ್ತೇವೆ. 'ಜರಾಸಂಧಿ'ಯಲ್ಲಿ ಒಂದು ಬಗೆಯ ನಾಟಕೀಯತೆ ಹೆಚ್ಚಾಗಿ, ನಾಟಕವೇ ಹಾಳಾಗಿದೆ. ಒಂದು ಏಕಾಂಕದ ವಸ್ತುವನ್ನು ಪಾತ್ರವಿಕ್ಷಿಪ್ತತೆಗಾಗಿ ಬೆಳೆಯಿಸಿದ್ದಾಗಿದೆ. ಇಲ್ಲಿ ಕಥೆಯಿಲ್ಲ, ಪಾತ್ರಪೋಷಣೆ ಇಲ್ಲ, ಯಾವ ಐತಿಹಾಸಿಕತೆಯೂ ಇಲ್ಲ. ಇದು ಶ್ರೀರಂಗರ ಹೆಸರಿನಿಂದ ಬಂದಿರದಿದ್ದರೆ, ಶ್ರೀರಂಗರನ್ನು ಅನುಸರಿಸುವ ಯಾವುದೋ ಶರುಣ ಲೇಖಕ ಪ್ರತಿಭೆಯ ಪ್ರಯೋಗ—ಎಂದು ಹೆಚ್ಚಾದರೆ ಗಣಿಸಲ್ಪಡುತ್ತಿತ್ತು. ಶ್ರೀರಂಗರ ಹೆಸರಿನಿಂದಲೇ ಅದು ಬರುವುದರಿಂದ, ಜರಾಸಂಧಿಯ ದೋಷಗಳು ಎದ್ದು ಕಾಣುತ್ತವೆ. ಅಷ್ಟೇ.

—ಬ್ಲ

ಭಾರತದ ರಾಜ್ಯಘಟನೆಯ ಕರಡು
(ಶ್ರೀ. ದಿವಾಕರರ ಮುನ್ನುಡಿ)
ಎಲ್ಲ ವಿದ್ಯಾರ್ಥಿಗಳು ಓದಲೇಬೇಕಾದ ಪುಸ್ತಕ ೧-೮-೦
ವ್ಹಿ. ಪಿ. ಮೂಲಕ ಬೇಕಾದರೆ ೧-೧೪-೦.
ಸಾನೇ ಗುರುಜಿಯವರ 'ಸೊಗಸಿನ ಕಥೆಗಳು' ಭಾಗ ೧-೨
ಬೆಲೆ ಪ್ರತಿಯೊಂದಕ್ಕೆ ೧-೦-೦.
ಕ್ಯಾಬ್‌ಮಿನಾರ್ ಪ್ರಕಾಶನ,
ಮಾಳಮರಡಿ, ಧಾರವಾಡ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ನಾವು ಅಪೇಕ್ಷಿಸಿದಂತೆ 'ದಿಕ್ಕೆಟ್ಟ ಸಂಧ್ಯಾರಾಗ' ಎಂಬ ಜೀವನಚಿತ್ರವನ್ನು ಕುರಿತ ವಿಮರ್ಶೆಗಳು, ಬೇರೆ ಬೇರೆ ಎಂಟು ಜನರಿಂದ ಬಂದಿವೆ. ಅವುಗಳನ್ನು ಕಳುಹಿದವರು ಕ್ರಮವಾಗಿ :

೧. ಶ್ರೀ. ಯು. ಎಸ್. ಶ್ರೀನಿವಾಸನ್, ಸವಣೂರ. ೨. ಕುನೂರಿ ಪದ್ಮಾವತಿ ಬುರ್ಲಿ, ಬಾಗಲಕೋಟೆ. ೩. ಶ್ರೀ. ಡಿ. ಎನ್. ಜೋಶಿ, ಪುಣೆ. ೪. ಶ್ರೀ. ವಿಶ್ವೇಶ್ವರರಾವ್, ಬನಾರಸ. ೫. ಶ್ರೀ. ಶಿವಾನಂದ ಜೋಶಿ, ಜಬ್ಬಲಪುರ. ೬. ಶ್ರೀ. ಸೀತಾರಾಘವ, ಹಾಸನ. ೭. ಶ್ರೀ. ಆರ್. ಎ. ಕುಸುಗಲ್ಲ, ವಿಜಾಪುರ. ೮. ಶ್ರೀ. ಜಿ. ಎಸ್. ಮತಕರ್, ಪುಣೆ.

ಈ ಸಲದ ವಿಮರ್ಶೆಗಳನ್ನು ನಮ್ಮ ಸಂಪಾದಕ ಮಂಡಲಿಯೇ ಪರೀಕ್ಷಿಸಿ, **ಶ್ರೀಮಾನ್ ವಿಶ್ವೇಶ್ವರರಾವ್ ಬನಾರಸ** ಅವರ ವಿಮರ್ಶೆ ಅತ್ಯುತ್ತಮವಾಗಿದೆಯೆಂದೂ, ಶ್ರೀ. ಜಿ. ಎಸ್. ಮತಕರ್, ಶ್ರೀ. ಡಿ. ಎನ್. ಜೋಶಿ, ಮತ್ತು ಶ್ರೀ. ಆರ್. ಎ. ಕುಸುಗಲ್ಲ ಅವರ ವಿಮರ್ಶೆಗಳು ಒಳ್ಳೆಯವಾಗಿವೆಯೆಂದೂ, ಮಿಕ್ಕುನೆಲ್ಲ ತೀರ ಸಾಮಾನ್ಯವಾಗಿವೆಯೆಂದೂ ನಿರ್ಣಯಿಸಿರುವುದು.

ವಿ. ಸೂ:— ಜಯಂತಿಯ ಒಂದುವರೆ ಪುಟಗಳಿಗೆ ಮಿಕ್ಕದಷ್ಟು ಮಾತ್ರ ವಿಮರ್ಶೆಗಳನ್ನು ಬರೆಯುತ್ತಿರಬೇಕು. ದೀರ್ಘವಾದರೆ, ಸ್ಥಳಸಂಕೋಚದ ಮೂಲಕ ಪ್ರಕಟಿಸಲಿಕ್ಕೆ ತೊಂದರೆಯಾಗುವುದು.

ಮುಂದಿನ ತಿಂಗಳಲ್ಲಿ 'ನನ್ನ ಪ್ರೀತಿಯ ಕಾದಂಬರಿ' ಎಂಬ ಶೀರ್ಷಿಕೆಯನ್ನಿರಿಸಿಕೊಂಡು, ತಮಗೆ ಅತ್ಯುತ್ತಮವೆನಿಸಿದ ಕನ್ನಡ ಕಾದಂಬರಿಯೊಂದನ್ನು ವಿಮರ್ಶಿಸಿ ಬರೆದ ಲೇಖನ ಕಳುಹಬೇಕು. ಈ ಲೇಖನ ಫ್ಲಾಲ್‌ಸ್ಕ್ಯಾಪಿನ ೪ ಪುಟಗಳಿಗೆ ಮಿಕ್ಕದಂತಿರಲಿ !

ದಿಕ್ಕೆಟ್ಟ ಸಂಧ್ಯಾರಾಗ

(ವಿಮರ್ಶೆ)

ಶ್ರೀ. ವಿಶ್ವೇಶ್ವರರಾವ, ಬನಾರಸ

ಸಣ್ಣಕತೆಗೆ ಬೇಕಾದ ವಸ್ತು ಇದರಲ್ಲಿ ಇಲ್ಲದೆ ಇಲ್ಲವಾದರೂ ಬರೆದ ರೀತಿ ಚಿತ್ರರೂಪವಾಗಿದೆ. ವಿಷಯ ವರ್ತಮಾನ ಪರಿಸ್ಥಿತಿಯ ವಾಸ್ತವ ವರದಿಯಂತಿದ್ದರೂ ಲೇಖಕರು ಅದಕ್ಕೊಂದು ಸಾಹಿತ್ಯಿಕ ಸ್ವರೂಪ ತರಬೇಕೆಂದು ತುಂಬ ಪ್ರಯತ್ನಪಟ್ಟಿದ್ದಾರೆ. ತಕ್ಕಮಟ್ಟಿಗೆ ಯಶಸ್ಸನ್ನೂ ಪಡೆದಿದ್ದಾರೆಂದು ಹೇಳಬಹುದು.

ಇದರಲ್ಲಿ ಐದು ವಿಭಾಗಗಳಿವೆ. ಮೊದಲನೆಯ ವಿಭಾಗದಲ್ಲಿ ಕೆಳ್ಳಯ ಒಬ್ಬ ಜಮಿನ್‌ದಾರನ ಕುಟುಂಬದ ಸುಂದರ ಚಿತ್ರವಿದೆ. ಜಮಿನ್‌ದಾರ ವಸಂತರಾಯ ಸುಖ-ಸಂಸಾರಿ. ಇದುವರೆಗೂ ಜೀವನದಲ್ಲಿ ಯಾವ ಕುಂದು-ಕೊರತೆಗಳನ್ನೂ ಕಾಣದೆ ಬೆಳೆದು ಬಂದ ಸಂಸಾರ ಅವನದು. ಸನಾತನ ಸಂಸ್ಕೃತಿಯ ಮೂರ್ತಿಯಂತಹ ತಾಯಿ. ರಸವತಿಯಾದ ಹೆಂಡತಿ. ಮುದ್ದಿನ ಮುದ್ದೆಯಂತಹ ಮಗು. ತುಂಬಿದ ಮನೆ. ಆದರೂ ದೇಶದ ಇಂದಿನ ರಾಜಕೀಯ-ಸಾಮಾಜಿಕ ಪರಿಸ್ಥಿತಿಯು, ಇಂತಹ ಆಶಾಮಯ ಸಂಸಾರದಲ್ಲಿಯೂ ನಿರಾಶೆಯನ್ನು ಹೇಗೆ ಹುಟ್ಟಿಸಿ ಬಿಟ್ಟಿದೆಯೆಂಬುದನ್ನು, ಅತಿಥಿಯಾಗಿ ಬಂದ ಶೇಷಣ್ಣ ಮತ್ತು ಶಾರದಮ್ಮ ಇವರ ಸಂಭಾಷಣದ ಮೂಲಕ ರೇಖಿಸಿ ತೋರಿಸಲಾಗಿದೆ. 'ಸ್ವರ್ಗಕ್ಕೆ ಕಿಚ್ಚು ಹಚ್ಚು'ಎಂದು ಹೇಳುವಂತಹ ಸಂಸಾರದಲ್ಲಿದ್ದರೂ, ಪರಿಸ್ಥಿತಿಗೆ ಬೆದರಿದ ಶಾರದಮ್ಮ 'ಲಗೂನ, ನಮ್ಮಣ್ಣುಚ್ಚಬೇಕವ್ವಾ ಇನ್ನ' ಎಂದು ಹೇಳುವಂತಹ ಮನಸ್ಥಿತಿಗೆ ಬಂದುದನ್ನು ವಿವರಿಸಲಾಗಿದೆ.

ಎರಡನೆಯ ವಿಭಾಗದಲ್ಲಿ ರೈತನ ಹೆಂಡತಿ ಮುದುಕಿ ಈರಮ್ಮ, ಶಾರದಮ್ಮ ಅವರ ಸಂಭಾಷಣೆಯ ಮೂಲಕ, ಇಂದಿನ ತರುಣರ ದುಡುಕಿನ ಚಟುವಟಿಕೆಗಳನ್ನೂ ಸರಕಾರದವರು ಹೊಸತಾಗಿ ಮಾಡಿದ ಟೆನೆನ್ಸಿ ಕಾಯ್ದೆ, ಒಕ್ಕಲಿಗನ ಸಾಲದ ಕಾಯ್ದೆಗಳ ವಿಪರೀತ ಪರಿಣಾಮವನ್ನೂ ಚಿತ್ರಿಸುತ್ತ, ಹಳ್ಳಿಗಳಲ್ಲಿ ಸ್ಥೈತ-ಜಮಿನ್‌ದಾರರಲ್ಲಿ ಮೊದಲಿನಿಂದಲೂ ಎಂತಹ ಮಧುರ ಬಾಂಧವ್ಯ ಬೆಳೆದು ಬಂದಿದ್ದಿತೆಂಬುದನ್ನು, ಲೇಖಕರು ಮಾರ್ಮಿಕವಾಗಿ ರೂಪಿಸಿದ್ದಾರೆ. ಮುದುಕಿ ಈರಮ್ಮನಿಗೆ ಯಜಮಾನರಾದ ಶಾರದಮ್ಮ, ನನ್ನೂ ವಸಂತರಾಯನನ್ನೂ ನೋಡದೆ ಬಹಳ ದಿನವಾದರೆ, ಜೀವ ಚುರುಚುರುಗುಟ್ಟುವುದು. ವಸಂತರಾಯ ಯಜಮಾನತೆಯ ಬಿಂಕವನ್ನು ನಸುವೂ ಕೋರದೆ, ಒಕ್ಕಲಿಗರ ಮುದುಕಿ ಈರಮ್ಮ



ಮೇಲ್ತರಗತಿಯ ಸುಂದರ ಕೈಗಡಿಯಾರಗಳು

ಎಲ್ಲ ಗಡಿಯಾರಗಳೂ ಸ್ವಿಸ್ ತಯಾರಿಕೆಯವು, ಸರಿಯಾದ ಹೊತ್ತನ್ನು ತೋರಿಸುವವು ಅಳವರ್ಜವಾದವೂ ಆಗಿವೆ. ಪ್ಲಾಸ್ಟಿಕ್ ಪಟ್ಟಿಸಹಿತ. (೩ ವರ್ಷ ಗ್ಯಾರಂಟಿ.)

ವರ್ಜಿನಿಯಾರಿನ ಕ್ರೋಮಿಯಮ್ ಗಡಿಯಾರ	ರೂ,	೧೮
,, ಸೆಳಂಡ	,,	,, ೨೨
ಬ್ಯಾಕಲೈಟ್ ಕ್ರೋಮಿಯಮ್	,,	,, ೨೪
ಹೆಚ್ಚಿನ ತರಗತಿಯದು	,,	,, ೨೮
೩ ಹರಳುಗಳುಳ್ಳದ್ದು—ಚಪ್ಪಟೆ ಆಕಾರ	,,	,, ೩೨
೧೫ ,, ,,	,,	,, ೪೭
ಉದ್ದಾಕಾರದ—		,, ೪೨
,, ಹೆಚ್ಚಿನ ತರಗತಿಯದು	,,	,, ೫೦
೧೫ ಹರಳು ಉದ್ದಾಕಾರದ—ಶ್ರೇಷ್ಠವಾದದ್ದು	,,	೬೦
ಬಂಗಾರದ ಹೊದಿಕೆ ರೂ. ೫೦/- ೧೫ ಹರಳುಗಳುಳ್ಳದ್ದು		
ರೋಲ್ಡ್‌ಗೋಲ್ಡ್ ರೂ, ೨೦/- ಹೆಚ್ಚಿನ ತರಗತಿಯದು		೯೦

ಪೋಸ್ಟೇಜು ೧೪ ಆಣೆ. (ಇಂಗ್ಲಿಷಿನಲ್ಲಿ ಬರೆಯಿರಿ.)

KAMALA WATCH CO. (J)

P. O. Box No. 803, CALCUTTA 1.

ನನ್ನು ಆತ್ಮೀಯತೆಯಿಂದ ಕಂಡು, ನಗೆಮಾತುಗಳನ್ನಾಡುತ್ತಾನೆ. ಈರಮ್ಮನಲ್ಲಿ ಯಜಮಾನರ ವಿಷಯದಲ್ಲಿ ಈರ್ಷೆ-ದ್ವೇಷಗಳಿಲ್ಲ. ಪ್ರೀತಿ-ವಿಶ್ವಾಸಗಳಿವೆ. ಇದಾವುದೂ ಕನಸಿನ ರಾಜ್ಯದ ಮಾತಲ್ಲ. ಹಳ್ಳಿಗಳಲ್ಲೆಲ್ಲ ಕಣ್ಣಿಗೆ ಬೀಳುತ್ತಿದ್ದ ಸತ್ಯಚಿತ್ರ.

ಮೂರನೆಯ ವಿಭಾಗದಲ್ಲಿ ಹಳ್ಳಿಯ ಮುಂದಾಳುಗಳ ಚಟುವಟಿಕೆಯ ಚಿತ್ರಗಳಿವೆ. ಹಳ್ಳಿಯ ಕಾಂಗ್ರೆಸ್ ಕಮೀಟಿ ಜೇರ್‌ಮನ್ನರು, ಕಾಳಸಂತೆಯಲ್ಲಿ ವ್ಯಾಪಾರಮಾಡಿ ನೋಟಿನ ಪೆಂಡೆಗಳನ್ನೇ ಕಟ್ಟಿಕಟ್ಟಿ ಇರಿಸಿದ ಸೆಟ್ಟರು, ನಿರ್ದಯದಿಂದ ಏರುಬಡ್ಡಿ ಹಾಕಿ ತಿಜೋರಿ ತುಂಬಿಕೊಂಡ ಸಾವುಕಾರರು, ಕೆಲಸವಿಲ್ಲದ ತರುಣ ಗಡ್ಡೀ ಭೀಮಾಚಾರ್ರು ಇವರೆಲ್ಲ ಹಳ್ಳಿಯ ಮುಂದಾಳುಗಳು. ಕಾಂಗ್ರೆಸಿನ ಮತ್ತು ಕಾಂಗ್ರೆಸ್ ಸರಕಾರದ ಕಾಗದದ ಕುದುರೆಗಳನ್ನು ಇವರೆಲ್ಲ ಹಳ್ಳಿಗಳಲ್ಲಿ ಕುಣಿಸುವವರು. ಮೇಲಿನವರ ಒತ್ತಾಯಕ್ಕಾಗಿ, ಹಳ್ಳಿಯಲ್ಲಿ ರೈತಸಭೆಯೊಂದನ್ನು ಕೂಡಿಸಿದ ನಾಟಕ ಮಾಡಬೇಕೆಂಬ ಇವರ ಅಂತಃಸ್ವರೂಪ, ಈ ಚಿತ್ರದಲ್ಲಿ ನಿಚ್ಚಳವಾಗಿ ಮೂಡಿನಿಂತಿದೆ.

ನಾಲ್ಕನೆಯ ವಿಭಾಗದಲ್ಲಿ 'ರೈತಸಭೆ'ಯ ವಾಸ್ತವಸ್ವರೂಪ ಎಂತಹದೆಂಬುದನ್ನು ನೋಡಬಹುದು. ಸಭೆಯಲ್ಲಿ ಪಾಸಾಗುವ ಠರಾವುಗಳೆಲ್ಲ ಸರಕಾರದ ಸ್ತುತಿ-ಪುರಸ್ಕಾರಗಳಿಂದಲೆ ತುಂಬಿದುವು. ಉದ್ಘಾಟಕ-ಅಧ್ಯಕ್ಷ-ಕಾರ್ಯದರ್ಶಿಗಳ ವಿಚಾರದಲ್ಲಿ ಏಕವಾಕ್ಯತೆಯಿಲ್ಲ. ಆವರವರಲ್ಲಿಯೇ ಸ್ಪರ್ಧೆ, ಮೇಲಾಟ. ರೈತರ ನಿಜವಾದ ಹಿತವೆಂದರೆ ಏನೆಂಬುದನ್ನು ಒಬ್ಬರೂ ಅರಿಯರು. ಹಿರಿಯನಾದ ರೈತನೊಬ್ಬ ಪ್ರಾಮಾಣಿಕತನದಿಂದ ಎದ್ದುನಿಂತು, ರೈತರಿಗಾಗುವ ಕಷ್ಟ-ನಷ್ಟಗಳನ್ನು ಹೇಳಲು ಹವಣಿಸಿದರೆ, ಸಭೆಯ ಸಂಚಾಲಕರ ದಬ್ಬಾಳಿಕೆ, ಸ್ವಯಂಸೇವಕರ ಏಟನಾಳಿಕೆಗಳಿಗೆ ಅವನು ಗುರಿಯಾಗಬೇಕಾಗುವುದು. ಆಗಲೇ ಊರಲ್ಲಿಯ ವೈಯಕ್ತಿಕ ದ್ವೇಷದ ಕಿಡಿ ಸಭೆಯಲ್ಲಿ ಹೊತ್ತಿ ಉರಿಯೇಳುವುದು.

ರೈತ ಸಭೆಯಲ್ಲೆದ್ದ ವ್ಯಕ್ತಿದ್ವೇಷದ ಉರಿ, ರಾತ್ರಿಯಲ್ಲಿ ಒಬ್ಬ ಹಿರಿಯ ರೈತನ ಬಣವೆಯನ್ನು ಉರಿಸಿ 'ದಿಕ್ಕೆಟ್ಟ ಸಂಧ್ಯಾರಾಗ'ವಾಗಿರುವ ಸೂಚನೆಯು ಕೊನೆಯ ವಿಭಾಗದಲ್ಲಿದೆ. ಸಂಧ್ಯಾರಾಗ ಬೆಳಗು-ಸಂಜೆಗಳಲ್ಲಿ ಮೂಡಲು-ಪಡುವಲುಗಳಲ್ಲಿ ಕಾಣುವುದು. ಮಧ್ಯರಾತ್ರಿಯಲ್ಲಿ, ಮೂಡಲು ಪಡುವಲು ಅಲ್ಲದ ದಿಕ್ಕಿನಲ್ಲಿ ಸಂಧ್ಯಾರಾಗದಂತಹ ಬೆಳಕು ಕಾಣುವುದೆಂದರೆ, ಅದು 'ದಿಕ್ಕೆಟ್ಟ ಸಂಧ್ಯಾರಾಗ'ವೇ ಅಲ್ಲದೆ ಇನ್ನೇನು? ಇಂತಹ ಸಂಧ್ಯಾರಾಗನೆಂದರೆ ಸಂಕಟ ಸೂಚಕ.

ಈ ಚಿತ್ರಪಟ್ಟಿಕೆಯಲ್ಲಿ ಮೂಡಿಸಿ ತೋರಿಸಿರುವ ವಸಂತರಾಯ, ಶಾರದಮ್ಮ, ಈರಮ್ಮ ಜೇರ್‌ಮನ್ ಜೆನಬಸಯ್ಯನವರು, ಸಭೆಯಲ್ಲಿ ಮಾತನಾಡಿದ ದಿನಗಳೆದ ರೈತ ಇವರೆಲ್ಲರ ಸ್ವರೂಪಗಳು ಸ್ಪುಟವಾಗಿ ಕಾಣುವುವು. ಯಾವ ಪಾತ್ರಕ್ಕೂ ಸ್ಥಾಯಿತ್ವವಿಲ್ಲದಿರುವುದರಿಂದ ಇವು ಪರಿಪುಷ್ಟಿಗೊಂಡಿಲ್ಲವೆಂಬುದು ಸ್ಪಷ್ಟ.

ಬರೆದ ಭಾಷೆ ಪಾತ್ರೋಚಿತವಾದುದಾಗಿದೆ. ಪಾತ್ರಗಳೆಲ್ಲ ಹಳ್ಳಿಯವೇ ಆಗಿರುವುದರಿಂದ, ಹಳ್ಳಿಗರ ವಾಕ್ಚಾತುರ್ಯದಿಂದ ಕೂಡಿದ ವಾಸ್ತವ ಕನ್ನಡನುಡಿಯನ್ನೇ ಲೇಖಕರು ಬಳಸಿದ್ದಾರೆ. ಉತ್ತರ ಕರ್ನಾಟಕದವರಿಗೆ ಈ ಕನ್ನಡ ಕನ್ನಡಿಯಂತಾಗಬಹುದಾದರೂ, ಮೈಸೂರು-ಮಂಗಳೂರು ಕನ್ನಡಿಗರಿಗೆ ಈ ಕನ್ನಡದ ಸ್ವಾರಸ್ಯ ತಿಳಿಯದೆ ಹೋಗಿ, ಈ ಜೀವನಚಿತ್ರದಲ್ಲಿಯ ಸಾಹಿತ್ಯಸೌಂದರ್ಯವೂ ಅರ್ಥವಾಗದಿರಬಹುದು. ಪ್ರಾದೇಶಿಕ ಜಾನಪದವನ್ನು ಬಳಸಿ ಸಾಹಿತ್ಯನಿರ್ಮಾಣ ಮಾಡಬೇಕೆಂದರೆ, ಈ ತೊಡಕು ಬಂದೇ ಬರುವುದು. ದಿ. ಕೈಲಾಸಂ ಅವರ ಕೃತಿಗಳಲ್ಲಿಯ ಭಾಷೆಯನ್ನು ತಿಳಿದುಕೊಳ್ಳಬಲ್ಲವರು, ಉತ್ತರ ಕರ್ನಾಟಕದಲ್ಲಿ ಎಷ್ಟು ಜನರು ದೊರೆತಾರು?

ಈ ಚಿತ್ರದ ಶಿರೋಭಾಗದಲ್ಲಿ ಪ್ರಕಟವಾಗಿರುವಂತೆ ಇದು: ಮಾನವತೆಯನ್ನು ಮರೆತು ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವ ನಮ್ಮ ವರ್ತಮಾನಜೀವನದ ವಾಸ್ತವ ಚಿತ್ರ— ಎಂಬುದನ್ನು ಯಾರೂ ಒಪ್ಪಿಕೊಳ್ಳಬಹುದು.

ಉತ್ತರಕನ್ನಡ ಜಿಲ್ಲೆಯಲ್ಲಿಯ ಜನಪದ ಸಾಹಿತ್ಯ

(ಒಗಟುಗಳು-ಹಾಡುಗಳು)

ಸಂಗ್ರಾಹಕರು :—ಉಪೇಂದ್ರ ನಾಯಕ, ಕಾರವಾರ

[ಮೊದಲ ಆರು ಸಾಲುಗಳಲ್ಲಿ ಪ್ರಶ್ನೆ ಮತ್ತು ಕಡೆಯ ಎರಡು ಸಾಲುಗಳಲ್ಲಿ ಉತ್ತರವಿದೆ.]

೧

ಊರೂರ ಮುಂದೊಂದು
ದೇವಂಗನ ಗಿಡ ಹುಟ್ಟಿ
ನಾನಾ ಜಾತಕರೆಲ್ಲ ನೋಡುಕೆ ಬರ್ವಂತಪು—
ನಾರೀ ನೀ ಬಲ್ಲಾರ್ಥೀಳೇ
ಬೆಡಗಿನ ಸುಗುಣೇ ! ಸುಗುಣೇ
ನೀ ಬಲ್ಲರ್ಥೀಳ್ ॥
ಅಗ್ರಾರ[೧] ತೇರಲ್ಲವೋ—ಸುಗುಣಾ
ಅದು ಅಲ್ಲವೋ ಮತ್ತಲ್ಲವೋ ?

೨

ಅಂಗಳದಲ್ಲಾಡೂದು
ಮಂಗಳ್ಸಿ[೨] ಮೇವುದು
ತಾಯಿ ಮಕ್ಕಳಿಲ್ಲ ಅಂಗಳ್ಕೆ ಕರ್ವಂತಾದು—
ನಾರೀ ನೀ ಬಲ್ಲಾರ್ಥೀಳೇ
ಬೆಡಗಿನ ಸುಗುಣೇ—ಸುಗುಣೇ
ನೀ ಬಲ್ಲರ್ಥೀಳ್
ಕೋಳಿಯಹೇಂಟ್ಯಲ್ಲವೋ—ಸುಗುಣಾ
ಅದು ಅಲ್ಲವೋ ಮತ್ತಲ್ಲವೋ ?

೩

ಮುಳ್ಳೊಳಗೆ ಹುಟ್ಟುವದು
ಮುಳ್ಳೊಳಗೆ ಬೆಳೆವುದು
ಮುಳ್ಳೊಳಗೆ ಮುಗುಳ ಬಿಡುವಂತಾದು—
ನಾರೀ ನೀ ಬಲ್ಲಾರ್ಥೀಳೇ
ಬೆಡಗಿನ ಸುಗುಣೇ—ಸುಗುಣೇ
ನೀ ಬಲ್ಲರ್ಥೀಳ್
ಕೇದಗಿ ಕೊನಿಯಲ್ಲವೋ—ಸುಗುಣಾ
ಅದು ಅಲ್ಲವೋ ಮತ್ತಲ್ಲವೋ ?

೪

ಬೆಟ್ಟದಲ್ ಹುಟ್ಟುದು
ಬೆಟ್ಟದಲ್ ಬೆಳ್ವುದು
ಬೆಟ್ಟ ಹತ್ತಿ ಹೋಗ್ವಂತರ ಮುಂಗಸ್ರಿ[೩] ಕರ್ವಂತಾದು
ನಾರೀ ನೀ ಬಲ್ಲಾರ್ಥೀಳೇ
ಬೆಡಗಿನ ಸುಗುಣೇ—ಸುಗುಣೇ
ನಿ ಬಲ್ಲರ್ಥೀಳ್
ಕರಿ ಚೂಚಿ ಮುಳ್ಳಲ್ಲವೋ—ಸುಗುಣಾ
ಅದು ಅಲ್ಲವೋ ಮತ್ತಲ್ಲವೋ

೫

ಗೆಣ್ಣು ಗೆಣ್ಣುಗಳುಂಟು ಕಬ್ಬಿನಾ ಕೋಲಲ್ಲಾ
ಬೆನ್ನ ಮೇಲ್ ಮುಳ್ಳುಂಟು ಸಾಡಿ[೪]ನಾ ಮಿಾನಲ್ಲಾ
ನೆತ್ತಿ ಮೇಲ್ ಜುಟ್ಟುಂಟು ಕೋಳಿಯ ಹುಂಜಲ್ಲಾ
ನಾರೀ ನೀ ಬಲ್ಲಾರ್ಥೀಳೇ
ಬೆಡಗಿನ ಸುಗುಣೇ—ಸುಗುಣೇ
ನೀ ಬಲ್ಲಾರ್ಥೀಳ್—
' ಬೆಟ್ಟದ ಬೆತ್ತ 'ಲ್ಲವೋ—ಸುಗುಣಾ
ಅದು ಅಲ್ಲವೋ ಮತ್ತಲ್ಲವೋ ?

ಬಿನ್ನಹ

ಕೇವಲ ಉತ್ತರ ಕನ್ನಡ ಜಿಲ್ಲೆಯ ಜನಪದ ಸಾಹಿತ್ಯವನ್ನಷ್ಟೇ ಅಲ್ಲ, ಕನ್ನಡ ನಾಡಿನ ಎಲ್ಲ ಭಾಗದ ಜ. ಪ. ಸಾ. ವನ್ನೂ ಪ್ರಕಟಿಸಬೇಕೆಂದಿದ್ದೇವೆ. ಅದು ಹೇಗೆಂದರೆ ಕನ್ನಡನಾಡಿನ ಹಳ್ಳಿಗಳಲ್ಲಿ ವಾಸಿಸುವ ಅಕ್ಷರ ಬಲ್ಲ ಮಹನೀಯರೆಲ್ಲ, ತಮ್ಮ ತಮ್ಮ ಊರಲ್ಲಿ ದೊರೆಯುವ ಒಗಟಿನ, ಸಾಂಗತ್ಯ, ಹಾಡು, ಕ್ರಿಸದಿ, ಗಾದೆಯ ಪದಾತುಗಳನ್ನು ಸಂಗ್ರಹಿಸಿ ಕಳುಹುತ್ತಿರಬೇಕು. ನಾವು ಅಯಮ್ದು ಅವಶ್ಯಕ ಟಿಪ್ಪಣಿಗಳೊಂದಿಗೆ ಪ್ರಕಟಿಸುತ್ತೇವೆ. —ಸಂ. ಜ.

೧. ಅಗ್ರಾರ = ಊರ ಹೆಸರು, ೨. ಮಂಗಳ್ಸಿ = ಜುಂಟು ಕಣ್ಣಿನ. ೩. ಮುಂಗಸ್ರಿ ಕರ್ವಂತಾದು = ಉಟ್ಟ ಪಟ್ಟೆಯ ಜುಂಗು ಹಿಡಿದು ತಿರುಗಿ ಕರೆಯುವಂತಹದು. ೪. ಸಾಡಿ = ಬೆನ್ನಿನ ಮೇಲೆ ಮುಳ್ಳಿರುವ ಒಂದು ಜಾತಿಯ ಮಿೀನು.

ನಗೀಗೆ ನೇವಿದ್ಯ

(೧)

ಹಿಟ್ಲರನ ಕಾಲದಲ್ಲಿ, ಒಬ್ಬ ಜರ್ಮನ್ ಅರ್ಥಶಾಸ್ತ್ರಜ್ಞ, ಬ್ಯಾಂಕ್ ಆಫ್ ಇಂಗ್ಲಂಡಿನ ಮ್ಯಾನೇಜರರಾದ ಮಿ. ಮಾಂಟಿಗ್ಯೂ ನಾರ್ಮನ್‌ರನ್ನು ಕಂಡು, ದೊಡ್ಡ ಸಾಲವನ್ನು ಕೇಳಿದ.

ನಾರ್ಮನ್ ಕೇಳಿದರು:— ಇದಕ್ಕೆ ಭದ್ರತೆ ಏನು?

ಶಾಸ್ತ್ರಜ್ಞ:— ಭೂಮಿಯಲ್ಲಿ ಕಬ್ಬಿಣ ಹಾಗು ಕಲ್ಲಿದ್ದಲಿ, ಭೂಮಿಯ ಮೇಲೆ ನಮ್ಮ ಹಿಟ್ಲರ್! ಹೆಚ್ಚಿಗೆಯೇನು ಬೇಕು?

ನಾರ್ಮನ್ :— ಏನೂ ಅಡ್ಡಿಯಿಲ್ಲ. ಆದರೆ ಇದು ತಿರುವುಮುರುವಾದರೆ ಒಳಿತಾದೀತು!

(೨)

ಒಂದು ಚಿಕ್ಕ ಹುಡುಗಿ ಅಳುತ್ತಿತ್ತು. ತಾಯಿ ಅವಳಿಗೆ ಕೊಟ್ಟ ರೂಪಾಯಿ ಕಳೆದು ಹೋಗಿತ್ತು. ಮಮತೆಯ ಹೆಣ್ಣುಮಗಳೊಬ್ಬಳು:— 'ಮಗು, ಅಳಬೇಡ, ಇದು ಹಿಡಿ ರೂಪಾಯಿ' ಎಂದು ಒಂದು ರೂಪಾಯಿಯನ್ನು ಕೊಟ್ಟಳು. ಆದರೂ ಆ ಹುಡುಗಿ ಅಳುವುದನ್ನು ನಿಲ್ಲಿಸಲಿಲ್ಲ. ಆ ಹೆಣ್ಣುಮಗಳು ಕೇಳಿದಳು :— ಮತ್ತೇಕೆ ಅಳುತ್ತೀ?

"ತಾಯಿ ಕೊಟ್ಟ ರೂಪಾಯಿ ಇದ್ದರೆ ಈಗ ಎರಡಾಗುತ್ತಿದ್ದುವು!" ಹುಡುಗಿ ನುಡಿದಳು.

(೩)

"ಸತ್ಯವೆಂದರೆ ಏನು?"

"ಇಬ್ಬರು ಹೆಂಗುಸರು ಜಗಳಾಡುವಾಗ ಯಾವುದು ಕಿವಿಗೆ ಬೀಳುವುದೊ ಅದು!"

(೪)

ಶಿಕ್ಷಕ:— ಗುಂಡ್ಯಾ, ನೀನು ದಿನಾಲು ತಡವಾಗಿ ಬರುವ ಕಾರಣವೇನು?

ಗುಂಡ್ಯಾ:—ಶಾಲೆಯ ಹತ್ತಿರ ಬೋರ್ಡು ಹಚ್ಚಿದೆಯಲ್ಲ, ಸರ್, 'ಶಾಲೆ— ಸಾವಕಾಶ ಹೋಗಿರಿ!' ಎಂದು!

(೫)

"ಮಹಾರಾಣಿಯವರಿಗೆ, 'ಮಗು ಹುಟ್ಟುವದಿದೆ' ಎಂದು ಮೊದಲೇ ಹೇಗೆ ಗೊತ್ತಿತ್ತು?" ಎಂದು ವರ್ಷದ ಸರೋಜಾ ತಾಯಿಯನ್ನು ಕೇಳಿದಳು. ಹತ್ತಿರ ನಿಂತಿದ್ದ ಹತ್ತು ವರ್ಷದ ಲೀಲಾ ತಟ್ಟನೆ ಉತ್ತರಿಸಿದಳು:—"ಅದೇಕೆ? ಅವರಿಗೆ ಪೇಪರ್ ಓದಲು ಬರುವದಿಲ್ಲವೇನು? ಆದರಲ್ಲಿ ಮೊದಲೇ ಈ ಸುದ್ದಿಯನ್ನು ಕೊಟ್ಟಿದ್ದರು!"

(೬)

ಜಗತ್ತಿನಲ್ಲಿ ಯಾವಾಗಲೂ ಎರಡು ಬಗೆಯ ಜನರಿರುತ್ತಾರೆ— ನ್ಯಾಯದಿಂದ ನಡೆಯುವವರು; ಅನ್ಯಾಯದಿಂದ ನಡೆಯುವವರು. ಆದರೆ ಇದನ್ನು ನಿರ್ಧರಿಸುವ ಗುತ್ತಿಗೆ ನ್ಯಾಯವಾದಿಗಳೆಂದು ಹೇಳಿಕೊಳ್ಳುವವರಿಗೇ ಕೊಟ್ಟಿದೆ!

(೭)

'ಕಂಟ್ರೋಲ್ ಅಂದರೆ ಏನು?'

'ಯಾವುದನ್ನು ಕಾನೂನಿನಿಂದ ನಿರ್ಬಂಧಿಸಲಾಗಿದೆಯೊ ಅದನ್ನು ಕಾಣಾಕಾಣಾ ನೂಡಹಚ್ಚುವದೇ ಕಂಟ್ರೋಲು!

(೮)

ಬರಿ ಗೊಳ್ಳುಕೊಚ್ಚುವ ಒಬ್ಬ ಉಪನ್ಯಾಸಕಾರ, ಒಂದೂವರೆ ಗಂಟೆಯಿಂದ ಒಂದೇ ಸವನೆ, ಮಾತನ್ನು ಸುರಿಸುತ್ತಿದ್ದ. ಬಾಯಾರುತ್ತಲೆ ನಡುನಡುವೆ, ನೀರು ಕುಡಿಯಲು ಮಾತ್ರ ಅರ್ಧ ನಿಮಿಷ ನಿಲ್ಲುತ್ತಿದ್ದ. ಇಂಥ ಒಂದು ಸಂದರ್ಭ ಬಂದಾಗ, ತಲೆಚಿಟ್ಟು ಹಿಡಿದ ಒಬ್ಬ ಕೇಳುಗ ಬದಿಯಲ್ಲಿ ಕುಳಿತವನಿಗೆ ಅಂದ :— "ಗ್ಯಾಸು ನೀರಿನಿಂದಲೇ ತಯಾರಾಗುವುದನ್ನು ನಾನು ಇಂದೇ ನೋಡಿದೆ!"

(೯)

ಹೆಂಡತಿ ಸಿನೇಮಾಕ್ಕೆ ಹೊರಡಲು ತಡ ಮಾಡಿದ್ದರಿಂದ ಬೇಸತ್ತ ಗಂಡ:— ಕಡೇ ಸಾರೆ ನಿನ್ನ ಕರೆಯೋದು. ಬರ್ತೀಯೊ, ನಾನು ಹೋಗಲ್ಯೊ?

ಗದ್ದರಿಸಿ ನುಡಿದಳು ಹೆಂಡತಿ :

'ಒಂದು ತಾಸಾತ್ಯ—ಹೇಳೇ ಹೇಳ್ತೀನಿ, ಒಂದು ನಿಮಿಷದಾಗ ಬರ್ತೀನಿ ಅಂತ. ತಿರುತಿರುಗೇನು ಕೇಳ್ತಿರಿ?'

ಸಾದರ ಸ್ವೀಕಾರ

★

೫. **ಅಂಡಯ್ಯ** (ಕವಿ-ಕಾವ್ಯವಿಮರ್ಶೆ). ಬೇರೆ ಬೇರೆ ಲೇಖಕರು ಬರೆದ ಲೇಖನಗಳನ್ನು ಶ್ರೀಮಾನ್ ರಂ. ಶ್ರೀ. ಮುಗಳಿಯವರು ಸಂಪಾದನೆ ಮಾಡಿದ್ದಾರೆ. ಸೇಡಬಾಳದ ಶಾಂತಿಸೇವಾ ಸದನದವರು ಪ್ರಕಟ ಮಾಡಿದ್ದಾರೆ. ಕ್ರಾ. ಆ. ೯೬ ಪುಟಗಳು. ಬೆಲೆ ೧-೮-೦.

೬ **ಮೇವಾಡಪತನ**. (ಅನುವಾದಿತ ನಾಟಕ). ಮೂಲ ಬಂಗಾಲಿ ಲೇಖಕರು ಸ್ವರ್ಗೀಯ ದ್ವಿಜೇಂದ್ರಲಾಲರಾಯರು. ಅನುವಾದಕರು ಸ್ವರ್ಗೀಯ ಹಳ್ಳಿಪ್ಪನವರ ಗೋವಿಂದರಾಯರು. ಪ್ರಕಾಶಕರು ಶ್ರೀ. ವಿ. ಜಿ. ಹುದ್ದಾರ, ಮಾಳಮಡ್ಡಿ— ಧಾರವಾಡ. ಕ್ರಾ. ಅ. ೧೬೮ ಪುಟಗಳು. ಬೆಲೆ ೨-೦-೦.

೭. **ಕಾವ್ಯಾಕ್ಷಿ** (ಕವನ ಸಂಗ್ರಹ). ಲೇಖಕರು ಶ್ರೀ. ಜಿನ್ನ ವೀರ ಕಣವಿಯವರು. ಹುಬ್ಬಳ್ಳಿಯ ಕಲ್ಪನಾ ಗಂಥಪ್ರಕಾಶನ ಸಮಿತಿಯ ೮ನೆಯ ಗ್ರಂಥ. ಕ್ರಾ. ಅ. ೬೪ ಪುಟಗಳು. ಬೆಲೆ ೧-೦-೦.

೮. **ಶ್ರೀಪ್ರಸನ್ನ ರೇಣುಕರ ಜೀವನ ಚರಿತ್ರೆ**. ಬರೆದವರು. ಶ್ರೀ. ಬಸವರಾಜ ಅಂಗಡಿ, ಬಂಕಾಪುರ. ಪ್ರಕಾಶಕರು ಶ್ರೀ. ಎಸ್. ಬಿ. ಪಾವಟೇ, ಹುಬ್ಬಳ್ಳಿ. ಪ್ರಚಾರಕರು ನೇ. ವಿ. ಎಂ. ಕಲ್ಯಾಣ ಮಠ, ಬಂಕಾಪುರ. ಕ್ರಾ. ಅ. ೬೪ ಪುಟಗಳು. ಬೆಲೆ ೧-೦-೦.

೯. **ಜೀವನ ಮತ್ತು ಕಥೆಗಳು** (ಕಥಾ ಸಂಕಲನ) ಬರೆದವರು ದಿವಂಗತ ಕಾರ್ಯಹಳ್ಳಿ ರಾಮಕೃಷ್ಣ ಶೆಟ್ಟಿ, ಕಾಸರಗೋಡು. ಪ್ರಕಾಶಕರು: ಕಾರ್ಯಹಳ್ಳಿ ಸ್ಮಾರಕ ಸಮಿತಿ, ಕಾಸರಗೋಡು. ಕ್ರಾ. ಅ. ೧೧೨ ಪುಟಗಳು. ಬೆಲೆ ೨-೦-೦.

೧೦. **ಪರಿವರ್ತನೆ ಅಥವಾ ಪ್ರವಾಹ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ನಿಶಾಕಾಂತರು. ಧಾರವಾಡದ ಲಲಿತಾಸಾಹಿತ್ಯ ಮಾಲೆಯ ೫ನೆಯ ವರ್ಷದ ೧ನೆಯ ಕುಡಿ. ಕ್ರಾ. ಅ. ೧೯೪ ಪುಟ. ಬೆಲೆ ೨-೮-೦.

೧೧. **ಉಷಾ** (ಮಾಸಪತ್ರಿಕೆಯ ವಾರ್ಷಿಕ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಎಸ್. ನಂಜಪ್ಪ, ಉಷಾ ಕಾರ್ಯಾಲಯ, ಚಿಕ್ಕಪೇಟೆ, ಬೆಂಗಳೂರು ೨. ಕ್ರಾ. ಫಿದ ೧೬೪ ಪುಟಗಳು. ಬೆಲೆ ೧-೦-೦.

ಎಂದಿನಂತೆ ಈ ವಿಶೇಷಸಂಚಿಕೆಯ ಮೇಲೋಲೆಯು ಮೂವರ್ಣದ ಸಿನೇಮಾ ಸುಂದರಿಯ ಚಿತ್ರದಿಂದ ಆಕರ್ಷಕವಾಗಿದೆ. ಕತೆಗಳು, ಪ್ರಬಂಧಗಳು, ಕವನಗಳು, ನಾಟಕಗಳು, ವ್ಯಕ್ತಿಪರಿಚಯ-ಸ್ಥಳಪರಿಚಯಾತ್ಮಕ ಲೇಖನಗಳು, ತಾರಾಲೋಕ, ವರ್ಷಭವಿಷ್ಯ ಇವೆಲ್ಲ ಅಂದವಾಗಿ ಅಚ್ಚಾಗಿವೆ. ಲೇಖಕರಲ್ಲಿ ಹೆಚ್ಚಿನ ಜನರು ಹೊಸಕಾಲದ ತರುಣರೇ ಇರುವುದು ಈ ಸಂಚಿಕೆಯ ವೈಶಿಷ್ಟ್ಯ. 'ಸುಪ್ರಸಿದ್ಧ—ಹಳಬ—ಸಾಹಿತಿಗಳೆನ್ನಿಸಿಕೊಂಡಿದ್ದ ಎಷ್ಟೋ ಜನ, ವಿಶೇಷಸಂಚಿಕೆಗೆ ಲೇಖನಗಳನ್ನು ಕೊಡಲಿಲ್ಲ'ವೆಂದು ಸಂಪಾದಕರು ತಮ್ಮ ಮಾತಿನಲ್ಲಿ ಒಂದೆರಡು ಬಿರುಮಾತುಗಳನ್ನು ಆಡಿದ್ದಾರೆ. ಅಂತಹ ಲೇಖಕರಿಗೆ ಉಪದೇಶವನ್ನೂ ಮಾಡಿದ್ದಾರೆ.

ಹೊಸ ಲೇಖಕರ ಪ್ರಥಮ-ದ್ವಿತೀಯ ಲೇಖನಗಳಿಗೂ ಪ್ರೋತ್ಸಾಹ ಬುದ್ಧಿಯಿಂದ ಎಡೆ ಕೊಟ್ಟಿರುವ ಸಂಪಾದಕರಂತೆಯೆ, ವಾಚಕರೂ ಸಹಾನುಭೂತಿಯಿಂದ ಈ ಸಂಚಿಕೆಯನ್ನು ಪ್ರೋತ್ಸಾಹಿಸಬೇಕಾದುದು ಅತ್ಯಗತ್ಯ.

೧೨ **ಮುಂಬಯಿ ನೊಗವೀರ ವ್ಯವಸ್ಥಾಪಕ ಮಂಡಲಿಯ** ೪೬ನೆಯ ವಾರ್ಷಿಕ ವರದಿ. ಡೆ. ಅ. ೭೨ ಪುಟಗಳು. ಮುಖ್ಯ ಆಫೀಸು: ನೊಗವೀರ ವ್ಯವಸ್ಥಾಪಕ ಮಂಡಲಿ, ೮. ನಾನಾ ಭಾಯಿ ಲೇನ್, ಕೋಟೆ—ಮುಂಬಯಿ.

ರಾಷ್ಟ್ರ ಭಾವನೆಯ ದಿವ್ಯ ಆದರ್ಶವನ್ನು ಮರೆಯದೆ, ಅದಕ್ಕೆ ಪೋಷಕವಾಗುವಂತೆಯೆ ಸ್ವಸಮಾಜವನ್ನು ಸಂಘಟಿಸಿ ಸಿದ್ಧೆಗೊಳಿಸುವ ಕಾರ್ಯಮಾಡುತ್ತಿರುವ ಈ ಸಂಸ್ಥೆ, ಹಲವು ಜಾತೀಯ ಸಂಸ್ಥೆಗಳಿಗೆ ಆದರ್ಶವಾಗಿ ಇದೆ. ಈ ಸಂಸ್ಥೆ ಕೈಕೊಂಡು ನಡೆಯಿಸುತ್ತಿರುವ ವಿವಿಧ ಚಟುವಟಿಕೆಗಳನ್ನು ನೋಡಿದರೆ, ಇದೊಂದು

ಈ ತಿಂಗಳಲ್ಲಿ ತೋರಿಸಲ್ಪಡುವ

ಆಫಘಾ ಕಾಶ್ಮೀರಿಯವರ

ತೋಹಫಾ

ಭೂ:—ನವಾಬ, ವೀರಾ, ಅನುರಾಧಾ, ರಹಮಾನ್

ಮತ್ತು

ಜೀತ್ ಪ್ರೊಡಕ್ಷನ್‌ದವರ

ವಿದ್ಯಾ

ಭೂ:— ಸೂರಯ್ಯಾ, ದೇವಾನಂದ.

ಧಾರವಾಡದ

ರೀಗಲ್ ಚಿತ್ರಮಂದಿರದಲ್ಲಿ

ನೋಡಲು ಮರೆಯಬೇಡಿ.

ಮುಂಬೈ ಸರಕಾರದಿಂದ ಮನ್ನಣೆ ಪಡೆದ

ಒಂದೇ ಒಂದಾದ

ಕರ್ನಾಟಕ ಹೊಲಿಗೆಯ ವಿದ್ಯಾಲಯ

ಸರಕಾರೀ ಸರ್ಟಿಫಿಕೇಟಿಗಾಗಿ ಅಭ್ಯಾಸಮಾಡುವವರು ಜೂನ್ ತಿಂಗಳೊಳಗಾಗಿ ಪ್ರವೇಶಪಡೆಯಿರಿ. ಶಿಕ್ಷಕ-ಶಿಕ್ಷಿಕೆಯರು ಇದರ ಲಾಭ ಪಡೆಯಬೇಕು.

ವಿಶೇಷ ಮಾಹಿತಿಗಾಗಿ ಒಂದಾಣೆ ಟಿಕೀಟು ಕಳಿಸಬೇಕು.

ಕರ್ನಾಟಕ ಹೊಲಿಗೆಯ ವಿದ್ಯಾಲಯ

ಗಾಂಧೀಚೌಕ, ಧಾರವಾಡ

ಜಾತೀಯ ಸಂಸ್ಥೆ ಎಂಬ ಸಂಕುಚಿತ ಭಾವನೆ ಯಾರಲ್ಲಿಯೂ ಉಂಟಾಗುವಂತಿಲ್ಲ. ಕರ್ನಾಟಕಕ್ಕೇ ಒಂದು ಕೀರ್ತಿಯನ್ನು ತರಬಲ್ಲ ಸಂಸ್ಥೆಯಿದು. ಬಹುಕಾಲ ಬಾಳಬಲ್ಲ ಸಾಮರ್ಥ್ಯವನ್ನು ತನ್ನ ಕಾರ್ಯಪದ್ಧತಿಯಿಂದಲೆ ಇದು ಪಡೆದುಬಿಟ್ಟಿದೆ. ಆದರೂ ಸಾಂಪ್ರದಾಯಿಕವಾಗಿ ನಾವು ಈ ಸಂಸ್ಥೆಗೆ ಚಿರಜೀವಿತ್ವವನ್ನು ಹಾರಯಿಸುತ್ತೇವೆ.

೧೩. **ಹೈದರಾಬಾದಿನ ಕರ್ನಾಟಕ ಸಾಹಿತ್ಯಮಂದಿರದ ಸರ್ವಧಾರಿ ಸಂವತ್ಸರದ ವಾರ್ಷಿಕವರದಿ.** ಗೌರವಕಾರ್ಯದರ್ಶಿ ಶ್ರೀ. ವಿಜಯಾಚಾರ್ಯ ಹೊಸೂರ. ಕ್ರೌ.ಅ. ೧೦ ಪುಟಗಳು.

ಹೈದರಾಬಾದಿನ ಹೊಸ ಪರಿಸ್ಥಿತಿಯಲ್ಲಿ, ಈ ಸಂಸ್ಥೆಯ ಕಾರ್ಯ ಮಹತ್ತ್ವದ್ದಿದೆ. ಅದಕ್ಕಾಗಿ ಈ ಸಂಸ್ಥೆ ಅಭ್ಯುದಯ ಪಡೆಯಲಿ. ಹೈದರಾಬಾದಿನ ಕನ್ನಡಿಗರ ಹೃದಯವನ್ನು ಒಂದುಗೂಡಿಸಲಿ.

೧೪. **ಈರಾನಕೀ ಏಕ್ ರಾತ್** (ಹೊಸ ವಾರ್ತ್ರಿತ್ರವೊಂದರ ಕಥಾಪದ್ಯಾವಲಿ ಪುಸ್ತಕ) ಚಿತ್ರದ ಡೈರಕ್ಟರು ಸುಪ್ರಸಿದ್ಧರಾದ ಶ್ರೀ. ಪಿ. ಸಿ. ಬರುವಾ. ಅಸಿಸ್ಟೆಂಟ್ ಡೈರೆಕ್ಟರು ಕನ್ನಡ ಕಲಾವಿದರಾದ ಶ್ರೀ. ವಾಸುದೇವ ಗಿರಮಾಜಿಯವರು. ನಿರ್ಮಾತೃಗಳು ಸೋಲಾರ್ ಫಿಲ್ಮ್ಸ್, ೯. ಮದನ ಸ್ಟ್ರೀಟ್, ಕಲಕತ್ತಾ ೧೩.

ನ್ಯೂಥಿಯೇಟರ್ಸ್ ಪ್ರಸಿದ್ಧ ನಟಿಯಾದ ಜಮುನಾ ಇದರಲ್ಲಿ ಮುಖ್ಯನಾಯಿಕೆಯಾಗಿಯೂ ಶ್ರೀ. ನಾರಂಗರು ನಾಯಕನಾಗಿಯೂ ಪಾತ್ರಮಾಡಿದ್ದಾರೆ. ಪ್ರಾಚೀನ ಪಾರ್ಶಿಸ್ಥಾನದ ರಮ್ಯ ಜೀವನದ ಹಿನ್ನೆಲೆಯಲ್ಲಿ ಬೆಳೆದ ಮನೋಹಾರಿಯಾದ ಕಥಾನಕ. ಕಲಕತ್ತೆಗೆ ಹೋಗಿನಿಂತು, ತಮ್ಮ ಕಲಾನೈಪುಣ್ಯದಿಂದ ಹೆಸರನ್ನು ಸಂಪಾದಿಸಿದ ಕನ್ನಡಿಗರೊಬ್ಬರು ಇದರ ದಿಗ್ದರ್ಶಕರಾಗಿದ್ದುದು ನಮ್ಮ ನಾಡಿಗರಿಗೊಂದು ಅಭಿಮಾನದ ವಿಷಯ.

೧೫. **ನುಡಿ** (ವಾರಪತ್ರಿಕೆಯ ಹುಟ್ಟುಹಬ್ಬದ ವಿಶೇಷ ಸಂಚಿಕೆ.) ಮುಂಬಯಿಯಲ್ಲಿ ವಾಸಿಸುವ ತರುಣ ಕನ್ನಡಿಗರ ವಿಚಾರಗಳ ಪ್ರತಿನಿಧ್ಯಮಾಡುವ ಪತ್ರಿಕೆಯಿದು. ಸಂಪಾದಕರು ಶ್ರೀ. ಸಿ. ವಿ. ರಾಮಚಂದ್ರರಾವ್ ಎಂ. ಎ., ಬಿ. ಎಲ್. ನುಡಿಕೂಟದ ಕಚೇರಿ, 'ಆನಂದಭವನ' ಮಾತುಂಗ— ಮುಂಬಯಿ ೧೬. ಕ್ರೌ. ಫೋ. ೧೬ ಪುಟಗಳು. ಬೆಲೆ ೦–೨–೦.

ನುಡಿಯಲ್ಲಿ ಯಾವ ಬರೆಹಗಳೇ ಬರಲಿ; ಅವೆಲ್ಲ ನಾಡಿನ ನಾಡಿಗರ ಅಭ್ಯುದಯದ ವಿಷಯಕವಾದ ಉತ್ಕಟಭಾವನೆಯಿಂದ ಬರೆದ ಪ್ರಾಮಾಣಿಕ ಲೇಖನಗಳಿರುತ್ತವೆ. ಈ ವಿಶೇಷ ಸಂಚಿಕೆಯಲ್ಲಿ ಬಂದ ಬರೆಹಗಳೂ ಹಾಗೆಯೆ ಇವೆ. ನುಡಿ ಹುಟ್ಟಿ ಕಷ್ಟದಲ್ಲಿಯೆ ಬೆಳೆಯುತ್ತ ಕಾರ್ಯಸಾಗಿಸಿರುವುದರ ಬಗೆಗೆ ಬರೆದ ವರದಿಯನ್ನು ನೋಡಿದರೆ, ಆವಶ್ಯಕ ಕಾರ್ಯದ ಕಡೆಗೂ ನಮ್ಮ ಜನತೆ ತೋರುವ ಉಪೇಕ್ಷೆ-ಔದಾಸೀನ್ಯಗಳ ಅರಿವಾಗದೆ ಇರದು. ನುಡಿ ಬಹುಕಾಲ ಬಾಳಿ, ಕನ್ನಡದ ಮಂಗಲಭವಿಷ್ಯಕ್ಕೆ ಕಾರಣವಾಗಲಿ!

೧೬. **ನಂದಾದೀಪದ ನಂದಿನಿ** (ಜೀವನ ಚರಿತ್ರ): ಬರೆದವರು ಶ್ರೀ. ಕೆ. ಶ್ರೀಧರ. ಹುಬ್ಬಳ್ಳಿಯ ಸರ್ವೋದಯ ಸಾಹಿತ್ಯಮಾಲೆಯ ೪ನೆಯ ಗ್ರಂಥ. ಕ್ರೌ. ಅ. ೮೪ ಪುಟ. ಬೆಲೆ ೧–೪–೦.

೧೭. **ತಳಿರು-ತೋರಣ** (ಸಣ್ಣಕತೆಗಳ ಸಂಕಲನ). ಬೇರೆ ಬೇರೆ ೧೦ ಜನ ಕತೆಗಾರರ ಒಂದೊಂದು ಕತೆಗಳನ್ನು, ಶ್ರೀ. ಮು.ವಿ. ನಾಯಕ ಅವರು ಸಂಪಾದಿಸಿರುವರು. ಪ್ರಕಾಶಕರು ಶ್ರೀ. ವಿ. ಆರ್. ಪ್ರಭು, ಕ್ಯಾನರಾ ಬುಕ್ ಎಂಡ್ ನ್ಯೂಜ್ ಏಜನ್ಸಿ, ೩೮೯ ಲಾಲಬಾಗ— ಮುಂಬಯಿ ೧೩. ಕ್ರೌ. ಅ. ೧೩೪ ಪುಟಗಳು. ಬೆಲೆ ೧–೮–೦.

೧೮. **ಶ್ರೀಗುರುಗೀತಾ** (ಪದ್ಯಮಯ ಗ್ರಂಥ) ಲೇಖಕರು ಶ್ರೀ. 'ಆತ್ಮಾರಾಮ' ಅಮ್ಮನಳ್ಳಿ, ಪರಮಾನಂದಮಠ, ಸೀಗೆಹಳ್ಳಿ (ಉ. ಕ.). ಲೇಖಕರೇ ಪ್ರಕಾಶಕರು. ಕ್ರೌ. ಅ. ಸುಮಾರು ೧೦೦ ಪುಟಗಳು. ಬೆಲೆ ೧–೪–೦.

೧೯. **ಸಮಾಜದರ್ಶನ** (ವಿ. ಪ್ರಜೋದಕ ಗ್ರಂಥ). ಶ್ರೀ. ಶಂ. ಬಾ. ಜೋಶಿಯವರು ಲೇಖಕರು. ಧಾರವಾಡದ ಮಿಂಚಿನ ಬಳ್ಳಿಯ ೧೧ನೆಯ ವರ್ಷದ ೩ನೆಯ ಕುಡಿ. ಕ್ರೌ. ಅ. ೧೩೨ ಪುಟ. ಬೆಲೆ ೧–೪–೦.

ಕ್ರಾಂತಿಕಾರಿ ಬಸವಣ್ಣನವರು

(ಎರಡನೆಯ ಆವೃತ್ತಿ ಬೇಗನೆ ಪ್ರಸಿದ್ಧವಾಗಲಿರುವುದು.)

ಲೇಖಕರು ಶ್ರೀ. ಕೆ. ಕೆ. ಗಲಗಲಿ. ಕ್ರೌ.ಅ. ೧೦೦ ಪುಟಗಳು.

ಎರಡು ಬಣ್ಣಗಳಲ್ಲಿ ಆಕರ್ಷಕವಾಗಿ ಅಚ್ಚಾಗುವುದು.

ಬೆಲೆ ೧–೪–೦. ಮುಂಗಡ ಹಣ ಕಳುಹಿ ಹೆಸರು ನೋಂದಾಯಿಸುವವರಿಗೆ ಬರೀ ೧–೦–೦.

ಶ್ರೀ. ಕೆ. ಕೆ. ಗಲಗಲಿ, ಸವದತ್ತಿ.

ಕು. ಇಂದುಮತಿ ಮುಂಡೇವಾಡಿ, ಬಿ.ಎ.

ಇದೀಗ ಹೊರಬಿದ್ದಿದೆ!

★

ಸಕ್ಕರೆಯ ಕಾವ್ಯ, ಹಾಲಿನ ಸಂಗೀತ.

★

ಎರಡೂ ಬೇಕಾದರೆ

ಇಕೊಳ್ಳಿ

ಕೇಳಿ

N. 25922 } ಬೆಳಗಾಯಿತು ನೋಡಃ ನಡಿ ಜಾಣಾ ಜಾತ್ರಿಕಡಿ (ಎನ್. ಕೆ. ಕುಲಕರ್ಣಿ ಕೃತ)

ಬಾಗಲಕೋಟ, ಧಾರವಾಡ, ಪುಣೆ, ಮುಂಬಯಿ ಮೊದಲಾದಲ್ಲೆಲ್ಲ ತಮ್ಮ ಸರಸ ಕಂಠದಿಂದ ಕಾಲೇಜಿನ ಹಾಗು ಸಾರ್ವಜನಿಕ ಕಾವ್ಯಗಾಯನ ಕಾರ್ಯಕ್ರಮಗಳಲ್ಲೆಲ್ಲ ಮೆಚ್ಚುಗೆ ಪಡೆದ:
ಕು. ಇಂದುಮತಿ ಮುಂಡೇವಾಡಿಯವರ ಮುದ್ರಿತ ಸಂಗೀತ.

ಬೇಗನೆ ಬರಲಿವೆ!

ಭಕ್ತ ಪುರಂದರದಾಸ (ನಾಟಕ) ಭಾಗ ೧-೪ (ಎನ್. ಕೆ. ಕುಲಕರ್ಣಿ ಕೃತ)

ಎಚ್. ಎಂ. ವ್ಹಿ. ಕನ್ನಡ ನಾಟ್ಯಸಂಘದವರಿಂದ

ಕಿವಿದಣಿಯೆ ಸಂಗೀತ, ಮನದಣಿಯೆ ಸಾಹಿತ್ಯ, ಎದೆದಣಿಯೆ ಭಕ್ತಿರಸ!

ಇತರ ಮುದ್ರಿಕೆಗಳು

ಕು. ವಿಜಯಾ ದೇಸಾಯಿ

N. 25901 } ಸ್ವಾಗತವು ಸ್ವಾಗತವು ಕಾಡಿನ ಎಡೆಯಲಿ
N. 25902 } ಮುಖವನು ಹೊರಳಿಸಿ ನಾಡಗುಡಿಯನೇರಿಸುವಾ

ಸೌ. ಸುಂದರಮ್ಮ ರಾಘವಯ್ಯಾ

N 25920 } ಚಿಂತೆಯಾತಕೊ ವೃಂದಾವನದೊಳು
N. 25927 } ಓಡಿಬಾರೊ -೧ ,, -೨

ಸೌ ಲಕ್ಷ್ಮೀಬಾಯಿ ದಾತಾರ

N. 25915 } ಮಹಾ ಯೋಗಿ ಭಾರತಜ್ಯೋತಿ
N. 25921 } ಬಾಲ ಬಂದ ನೋಡೆ ಕೇಳಿ ಕೊಳಲ

"His Master's Voice"

CALCUTTA — BOMBAY — MADRAS — DELHI.

ನಿಮ್ಮ ಮನೆ, ಹೊಲ ಅಥವಾ ಕಾರಖಾನೆಯಲ್ಲಿ ನೀರಿನ
ಸಮಸ್ಯೆ ಪರಿಹಾರವಾಗಬೇಕಿದ್ದರೆ

ಕಿರ್ಲೋಸ್ಕರ
'ಸೆಂಟ್ರಿಫ್ಯೂಗಲ್ ಪಂಪ'ನ್ನೇ
ಉಪಯೋಗಿಸಿರಿ



ಹೆಚ್ಚಿನ ವಿವರಗಳಿಗಾಗಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,
ಕಿರ್ಲೋಸ್ಕರವಾಡಿ.

ಇವರಿಗೆ ಬರೆಯಿರಿ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar. 1885-49

ಆಗಸ್ಟ್
೧೯೪೯
ಸಂಚಿಕೆ
೩
AYANTI
AUGUST
1949



ನನ್ನ ಜನಕ್ಕ ಅನ್ನ ಬೇಕಾಗೇತಿ; ಅದಕಾಗೇ ನಾ ಹಗಲ-ರಾತಿ ದುಡೀತೀನಿ!

ಜಯಂತಿ

JAYANTI

ಜುಲೈ ೧೯೪೪

ವಾರ್ಷಿಕ ವರ್ಗಣಿ . . ೪—೮—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್. ಜಿ. ಬೇಂದ್ರೆ

ಪ್ರಕಾಶಕರು— ಶ್ರೀ. ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೪೦	ಒಂದು ಸಲ
೧/೨	,,	,,	೨೫	,,
೧/೪	,,	,,	೧೫	,,
೧/೮	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

—೦—

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.
For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೨ | ೧೯೪೪ ಆಗಸ್ಟ್ ೧೯೪೪ | ಸಂಚಿಕೆ ೩

ಈ ಸಂಚಿಕೆಯಲ್ಲಿ:

ಸ್ವತಂತ್ರ ಭಾರತದ ೨೯ನೆಯ ವರ್ಷ (ಸಂಪಾದಕೀಯ)
' ಸಂಪಾದಕರು ' ೮೯

ನಾಗರ ಪಂಚಮಿಯ ಹಾಡು (ಜನಪದ ಸಾಹಿತ್ಯ)
ಶ್ರೀ. ಭಾಪೂರಾವ್ ಮೊಘಾಶಿ, ಹುಬ್ಬಳ್ಳಿ ೯೧

ಮಾನವ ಪ್ರಕೃತಿ (ಎರಡು ಸ್ವಭಾವದರ್ಶನ)
ಶ್ರೀ. ರಾಮಕೃಷ್ಣ ಹೆಗಡೆ ದೊಡ್ಡಮನೆ, ಕಾಶಿ ೯೩

ಕಲೆಯೂ ಕೌಶಲ್ಯವೂ (ಸಾಹಿತ್ಯಪ್ರಬಂಧ)
ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ ೯೭

ಧನ್ಯನಹೆ ಮುದ್ದಣನೆ ! (ಕವನ)
ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ.ಎ. ಹೈದರಾಬಾದ್ ೧೦೨

ಸ್ವಾತಂತ್ರ್ಯ ವೀರನಿಗೆ (ಕವನ)
ಶ್ರೀ. ಕೃಷ್ಣಮೂರ್ತಿ ಪುರಾಣಿಕ, ಬಿ.ಎ., ಬಿ.ಟಿ. ಗೋಕಾಕ ೧೦೨

ಚಿಂತೆ ಎಂಬ ಚಿತೆ (ಕವನ)
ಶ್ರೀ. ರಾಮಚಂದ್ರ ಶೇಡಬಾಳ, ಮುಂಬಯಿ ೧೦೨

ಕುಂಭಕರ್ಣ (ರೇಡಿಯೋ ನಗೆಯಾಟ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೧೦೩

ನನ್ನ ಹಿಮಾಲಯದ ಯಾತ್ರೆ
ಶ್ರೀಶಿವಯೋಗಿಗಳು, ಸುಕ್ಷೇತ್ರ ಬಂಥನಾಳ ೧೦೬

ಪುಣೆಯ ತಾಯಿ (ಸಣ್ಣಕತೆ)
ಶ್ರೀ. ವರಗಿರಿ ಮಾರ್ತಾಂಡರಾಯರು, ಎಂ. ಎ., ಬಿ. ಟಿ. ಧಾರವಾಡ ೧೧೧

ಶ್ರೀಧರ್ಮಸ್ಥಳದ ಹೆಗ್ಗಡೆಯವರು (ವ್ಯಕ್ತಿಪರಿಚಯ)
ಶ್ರೀ. ರಾಮಣ್ಣ ಶೆಟ್ಟಿ, ಮಂಜೇಶ್ವರ ೧೧೪

ರಾಜ (ಕಥನಪ್ರಬಂಧ)
ಕೀರ್ತಿಶೇಷ ಖಲೀಲ್‌ಗಿಬ್ರಾನ್ ೧೧೫

ಕನ್ನಡ ಒಗಟುಗಳು (ಹೆಣ್ಣುಮಕ್ಕಳಿಗಾಗಿ)
ಶ್ರೀಮತಿ ಶಾಮಲಾ, ಬೆಟಗೇರಿ ೧೧೫

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ (ಮೇಲಾಟದ ವಿವರ)
ಶ್ರೀ. ಕೆ. ವಿ. ಸುಬ್ಬಣ್ಣ, ಮುಂಡಿಗೇಸರ ೧೧೬

ಪುಸ್ತಕ ವಿಮರ್ಶೆ (ಪೂಜಾಫಲ)
ಶ್ರೀ. ಎನ್. ಪಿ. ಕುಲಕರ್ಣಿ, ಬಿ.ಎ. (ಆನರ್ಸ್) ಧಾರವಾಡ ೧೧೬

ನಗೀಗೆ ನೇವೀದ್ಯ
' ನಕಲೀ ನಾರಾಯಣಾಚಾರ್ರು ' ೧೧೧

ಸಾದರ ಸ್ವೀಕಾರ ೧೧೨

ವರ್ಷ ೧೨ | ಸಂಚಿಕೆ ೩ | ಆಗಸ್ಟ್ | ೧೯೪೯



ಸಂಪಾದಕೀಯ

☆

ಸ್ವತಂತ್ರಭಾರತದ ಎರಡನೆಯ ವರ್ಷ

ಇದೇ ತಿಂಗಳ ೧೫ನೆಯ ದಿನಾಂಕ, ಭಾರತವು ತನ್ನ ಸ್ವಾತಂತ್ರ್ಯದ ಮೂರನೆಯ ವರ್ಷವನ್ನು ಪ್ರಾರಂಭಿಸುವುದು. ಎರಡನೆಯ ವರ್ಷ ಸ್ವತಂತ್ರಭಾರತದ ಸರಕಾರ, ಜನತೆ—ಇಬ್ಬರೂ ಸ್ವಾತಂತ್ರ್ಯದ ಪ್ರಯೋಜನವನ್ನು ಎಷ್ಟರಮಟ್ಟಿಗೆ ಪಡೆದಿದ್ದಾರೆಂಬುದನ್ನು, ಸಿಂಹಾವಲೋಕನ ಕ್ರಮದಿಂದ ನಾವೀಗ ವಿವರಿಸಬೇಕಾಗಿದೆ: ಭಾರತದ ಸ್ವಾತಂತ್ರ್ಯ ಅಖಿಲ ಭಾರತೀಯರಿಗೂ ಸುಖ-ಸಮಾಧಾನ ಪ್ರದವಾಗಿ ನಡೆಯಬೇಕಾದರೆ, ನಮ್ಮ ಸರಕಾರದಿಂದಲೂ ಜನತೆಯಿಂದಲೂ ಆಗುತ್ತಿರುವ ತಪ್ಪುಗಳನ್ನೇ ಕಂಡುಹಿಡಿದು ಅರಿಸಿ ಹೇಳಬೇಕಾಗುವುದು. ಏಕೆಂದರೆ ತಪ್ಪುಗಳು ಎಂತಹ ಕ್ಷುದ್ರವಾದುವುಗಳೆಂದು ಭಾವಿಸಿದರೂ ಅವು ತಪ್ಪುಗಳೇ! ತಪ್ಪು ಇರುವಲ್ಲಿ ತೃಪ್ತಿಯಿರುವುದಿಲ್ಲ. ತೃಪ್ತಿಯಿರದಲ್ಲಿ ಶಾಂತಿ-ಸಮಾಧಾನಗಳು ಇರುವುದಿಲ್ಲ.

ಮೊದಲನೆಯ ಮಾತಾಗಿ ನಮ್ಮಲ್ಲಿ ಅಖಂಡಭಾರತದ ಕಲ್ಪನೆ ರೂಢವಾಗುವಂತಹ ಪರಿಸ್ಥಿತಿ ಇದುವರೆಗೂ ಉಂಟಾಗಿಲ್ಲ. ಪ್ರಾಂತೀಯ ಸ್ವಾಯತ್ತತೆಯನ್ನು ಈಗ ಇದ್ದಂತೆಯೇ ಮುಂದು. ವರಿಸಿದರೆ, ಅಂತಹ ಪರಿಸ್ಥಿತಿ ನಿರ್ಮಾಣವಾಗುವುದು ಸಾಧ್ಯವೂ ಇಲ್ಲ. ಕೇಂದ್ರದವರು ಅಖಂಡಭಾರತದ ಆದರ್ಶಸಾಧನೆಗಾಗಿ ಎಷ್ಟೆಷ್ಟು ಶಾಸನಗಳನ್ನು ನಿರ್ಮಿಸಿದರೂ, ಪ್ರಾಂತೀಯ ಸರಕಾರಗಳ ಸ್ವಾರ್ಥಕ್ಕೆ ಅಡ್ಡಬರುತ್ತಿದ್ದರೆ, ಕೇಂದ್ರದ ಆ ಶಾಸನಗಳು ಪ್ರಾಂತ ಪ್ರಾಂತಗಳಲ್ಲಿ ನಿಸ್ಸತ್ವಗೊಂಡು ಬಿಡುತ್ತಿರುವುದು ನಮ್ಮ ಅನುಭವದ ಮಾತಾಗಿದೆ.

ಇಂದಿನ ನಮ್ಮ ರಾಷ್ಟ್ರದಲ್ಲಿರುವ ಅಜ್ಞಾನ-ದಾರಿದ್ರ್ಯಗಳ ಮೂಲಕ, ಪ್ರಜಾಪ್ರಭುತ್ವದ ಮುಖ್ಯ ತಳಹದಿಯಾದ ಚುನಾವಣೆಯು ಯೋಗ್ಯರೀತಿಯಿಂದ ನಡೆಯುವುದು ಸಾಧ್ಯವೆ ಇಲ್ಲ. ಅದುಪರಿಂದಲೆ ಹಣ, ಸಾಮಾಜಿಕ ಪ್ರತಿಷ್ಠೆ, ಜನಜಂಗುಳಿಯ ಬಲ ಇರುವ ಎಂತಹ ಜನರೂ ಪ್ರಾಂತೀಯ ಸರಕಾರಗಳಲ್ಲಿ ಸದಸ್ಯರಾಗಿ ಆಯ್ಕೆ ಹೊಂದಬಹುದಾಗಿದೆ. ಇಂದಿನ ಪ್ರಾಂತೀಯ ಸರಕಾರಗಳಲ್ಲಿ ಅಂತಹ ಜನರೇ ಹೆಚ್ಚಾಗಿ ಇರುವುದರಿಂದ, ಜನತೆಯ ಕಲ್ಯಾಣ ಸಾಧಿಸುವುದಕ್ಕಿಂತ ವ್ಯಕ್ತಿಗಳ ಸ್ವಕಲ್ಯಾಣ ಸಾಧಿಸುವ ಕೆಲಸಗಳೇ ಈ ಸ್ವಾತಂತ್ರ್ಯದ ಎರಡನೆಯ ವರುಷದಲ್ಲಿ ಹೆಚ್ಚಾಗಿ ನಡೆದುದನ್ನು ಕಾಣುತ್ತೇವೆ.

ಪ್ರಾಂತೀಯ ಶಾಸನಸಭೆಯಲ್ಲಿ ದಿನಕ್ಕೊಂದು ಹೊಸ ಹೊಸ ಕಾಯಿದೆ ಪಾಸಾಗುತ್ತಿರುವುದು. ಒಂದೊಂದು ಕಾಯಿದೆಯೆಂದರೆ, ಒಂದೊಂದು ವಿಕೃತ ಮೆದುಳಿನಿಂದ ಹೊರಟ ವಿಕಾರವಾದ ಸಂತಾನ. ನನ್ನ ಕಾಯದೆಗೆ ನಿನ್ನ ಬೆಂಬಲ ಬೇಕು, ನಿನ್ನ ಕಾಯಿದೆಗೆ ನನ್ನ ಬೆಂಬಲ ಬೇಕು—ಹೀಗಾಗಿ, ಎಲ್ಲ ಅವ್ಯವಹಾರ್ಯ ಕಾಯಿದೆಗಳೂ ಶಾಸನಸಭೆಯಲ್ಲಿ ಪಾಸಾಗುವುವು. ಆದರೆ ಪಾಸು ಮಾಡಿದ

ಕಾಯಿದೆಗಳನ್ನು ವ್ಯವಹಾರದಲ್ಲಿ ತರಲಿಕ್ಕೆ ವೈಯಕ್ತಿಕವಾಗಿ ಯಾರಿಗೂ ಮನಸ್ಸಿರುವುದಿಲ್ಲ. ನಾವೆಷ್ಟು ಕೆಲಸ ಮಾಡುತ್ತಿದ್ದೇವೆ ನೋಡಿ—ಎಂಬುದನ್ನು ಪ್ರದರ್ಶಿಸಲೋ ಎಂಬಂತೆ, ಕಾಯಿದೆಗಳು ಮಾತ್ರ ಒಂದರ ಹಿಂದೊಂದು ಪಾಸಾಗಿ ಬಂದೇ ಬರುತ್ತಲಿವೆ. ಗವರ್ನರ್ ಜನರಲರಿಂದ ಮೊದಲುಮಾಡಿ ಹಳ್ಳಿಯ ಹರಿಜನನವರೆಗೂ —— ಯಾರಿಂದಲೂ ಆಚರಣೆಯಲ್ಲಿ ತರಲಿಕ್ಕಾಗದ ಇಂತಹ ಅವ್ಯವಹಾರ್ಯ ಕಾಯಿದೆ-ಕಾನೂನುಗಳನ್ನು ಮಾಡುವುದರಿಂದ ಸ್ವಾತಂತ್ರ್ಯವನ್ನು ಸದುಪಯೋಗ ಮಾಡಿದಂತೆ ಆದೀತೇನು ಏನಾದರೂ? ಈ ಒಗಟೆಯೇ ಬಗೆಹರಿಯದಂತಾಗಿದೆ.

ಆಡಳಿತದಿಂದ ಜನತೆ ಅಪೇಕ್ಷಿಸುವುದೆಂದರೆ ಅನ್ನ, ವಸ್ತ್ರ, ವಿದ್ಯೆ, ವೈದ್ಯಕ, ಸಂರಕ್ಷಣೆ ಇಷ್ಟನ್ನೆ. ಇವುಗಳ ವಿತರಣೆ ಸಮತಾಭಾವದಿಂದ ನಡೆಯ ಬೇಕೆ ಹೊರತು, ನಮ್ಮ ಜನರ ಮೂಗು ಇಷ್ಟಿ ಉದ್ದವಿರಬೇಕು; ನಮ್ಮ ಜನರು ಹೀಗೆ ಮಾಡಿಕೊಂಡೇ ಉಣ್ಣಬೇಕು, ಕೊಟ್ಟ ಬಟ್ಟೆಯನ್ನು ಹೀಗೆಹೀಗೆಯೆ ಹೊಲಿಸಿ ಉಪಯೋಗಿಸಬೇಕು, ಒಂದೇ ಮದುವೆ ಮಾಡಿಕೊಳ್ಳಬೇಕು, ಇಂತಹ ವಿಚಾರವನ್ನೇ ಮಾಡಬೇಕು— ಎಂದು ಮೊದಲಾದ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಆಘಾತವನ್ನುಂಟುಮಾಡುವಂತಹವು ಎಂತಹ ಕಾಯಿದೆಗಳು? ಕಾಯಿದೆಗಳ ಹೆಸರಿಟ್ಟುಕೊಂಡ ಅನೈಸರ್ಗಿಕ ನಿಯಮಗಳು! ಅಳುವ ಅನುಭವನಿಲ್ಲದೆ, ಹೊಣೆಗಾರಿಕೆಯ ಗಮ್ಮುಗೆಯನ್ನೇರಿ ಕುಳಿತಿರುವ ನಮ್ಮ ಪ್ರಾಂತೀಯ ಸರಕಾರದ ಸೂತ್ರಧಾರಿಗಳು, ಜನತೆಗೆ ಸ್ವಾತಂತ್ರ್ಯದ ವಾತಾವರಣವನ್ನು ಉಂಟುಮಾಡಿಕೊಡದೆ, ಸ್ವಾತಂತ್ರ್ಯದ ಮೇಲೆ ಹೊಸ ಹೊಸ ಏಟುಗಳನ್ನೇ ಹಾಕಲು ತೊಡಗಿದ್ದಾರೆಂಬುದು ನನ್ನ ಅನುಭವದ ಸಂಗತಿಯಾಗಿದೆ.

ಇಂತಹ ಈ ಪ್ರಾಂತೀಯ ಸರಕಾರಗಳು, ಅಲ್ಲಲ್ಲಿಯ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಗಳ ಸಲಹೆಯಂತೆ ನಡೆಯುತ್ತಿರುವುದು ಇನ್ನೂ ಅನಿಷ್ಟಕ್ಕೆ ಕಾರಣವಾಗಿದೆ. ಸಾಮಾನ್ಯವಾಗಿ ಇಂದಿನ ಕಾಂಗ್ರೆಸ್ ಕಮಿಟಿಗಳೆಂದರೆ ಹೆಚ್ಚಾಗಿ ಗೊಳ್ಳಿರ ಚಳವಳಿಗಾರರ ಕೈಯಲ್ಲಿರುವುವು. ವಿಧ್ವಂಸಕ ಕಾರ್ಯದ ಬಗೆಗೆ ಪ್ರಶಸ್ತಿಪತ್ರವನ್ನವರು ಪಡೆದಿರಬಹುದು. ಆದರೆ ವಿಧಾಯಕ ಕಾರ್ಯದ ತಜ್ಞತೆ ಅವರಲ್ಲಿಲ್ಲ. ಆದುದರಿಂದಲೆ ಅವರು ಕೊಡುವ ಸಲಹೆಗಳು, ನಿಷ್ಪಕ್ಷಪಾತವಾಗಿ ನಿರ್ದಾಕ್ಷಿಣ್ಯವಾಗಿ ಇರುವುದಿಲ್ಲ. ಇದಕ್ಕೆ ಉದಾಹರಣೆ ತುಂಬ ಇವೆ. ಇಂದಿನ ಕಾಂಗ್ರೆಸಿಗರಲ್ಲಿ ಅಧಿಕಾರ ನಹಿಸಿದವರು ಕೆಲವರು ಸರಕಾರದಲ್ಲಿದ್ದರೆ, ಅಧಿಕಾರ ದೊರೆಯದ ಅತೃಪ್ತ ಮನಸ್ಕರು, ಸರಕಾರದ ವಿರೋಧಿಗಳಾಗಿ ಗೊಂದಲವನ್ನೆಬ್ಬಿಸುತ್ತಿದ್ದು, ತಮ್ಮೊಡನೆ ಕೆಲಸ ಮಾಡಿದವರಿಂದಲೇ ಕಠಿಣ ಶಿಕ್ಷೆಗಳಿಗೆ ಪಾತ್ರರಾಗುತ್ತಿರುವುದು ಪ್ರತ್ಯಕ್ಷ ಸಂಗತಿಯಾಗಿದೆ. ಕರ್ಮಧರ್ಮ ಸಂಯೋಗದಿಂದ, ಇಂದು ಅಪರಾಧಿಗಳೆಂದು ಶಿಕ್ಷೆಗೆ ಗುರಿಯಾಗುವವರೇ ಅಧಿಕಾರಿಗಳಾಗಿದ್ದರೆ, ಇಂದು ಸರಕಾರದಲ್ಲಿದ್ದು ಶಿಕ್ಷೆ ಕೊಡುತ್ತಿರುವವರೇ ಅಪರಾಧಿಗಳೆಂದು ಶಿಕ್ಷೆ ಪಡೆಯಬಹುದಾಗಿದ್ದಿತು. ಈ ಸ್ಥಿತಿಯು ಪ್ರದರ್ಶಿಸುತ್ತಿರುವುದೇನು? ತತ್ತ್ವದ ತಳಹದಿಯ ಮೇಲೆ ಕಟ್ಟಿರುವ ಕಾಂಗ್ರೆಸ್ ಕಮಿಟಿಗಳಲ್ಲಿ ಅತಾತ್ತ್ವಿಕರು ಬಂದು ತುಂಬಿದ್ದಾರೆ—ಎಂಬುದನ್ನೇ ಅಲ್ಲವೆ? ಹೂ ಮಾರುತ್ತಿದ್ದವಲ್ಲಿ ಇಂದು ಹೂವಿನ ಹೆಸರಿನಿಂದ ಮುಳ್ಳಿನ ವ್ಯಾಪಾರವಾಗುತ್ತಲಿದೆ.

ಸರಕಾರವು ಅಷ್ಟ ದಾರಿಯಲ್ಲಿ ನಡೆಯುತ್ತಿದ್ದರೆ, ಸುಸಂಘಟಿತವಾದ ಜನತೆ ತನ್ನ ಶಕ್ತಿಯಿಂದ ಇದನ್ನು ದಾರಿಗೆ ತರಬಲ್ಲದು; ಇಲ್ಲವಾದರೆ ಅಸಮರ್ಥ ಸರಕಾರವನ್ನು ತೆಗೆದುಹಾಕಿ ಸಮರ್ಥವಾದ ಸರಕಾರವನ್ನು ಸ್ಥಾಪಿಸಬಲ್ಲದು. ಆದರೆ ನಮ್ಮಲ್ಲಿಯ ಕುಲವೈಷಮ್ಯ, ಜಾತಿವೈಷಮ್ಯ, ಭಾಷಾವೈಷಮ್ಯ, ಸಂಸ್ಕೃತಿವೈಷಮ್ಯ, ಸಂಪತ್ತೈಷಮ್ಯ, ಸ್ವಾರ್ಥಸಾಧಕ ವೃತ್ತಿ ಇವೆಲ್ಲ ಸೇರಿ, ಜನತೆಯ ಸಂಘಟನೆಯನ್ನೇ ಸಡಲಿಸಿಬಿಟ್ಟಿವೆ. ಸಭ್ಯದ ಲಾಭಗುಳಿತನ, ಲಂಚಗುಳಿತನಗಳಂತೂ ಜನತೆಯ ಸಂಘಟನೆಗೆ ದೊಡ್ಡ ವಿಘ್ನಗಳಾಗಿ ಕುಳಿತಿವೆ. ನಮ್ಮ ಜನತೆಯಲ್ಲಿ ತಿಳಿದವರೆಂಬವರೂ ಮುಂದಾಳುಗಳೆನಿಸಿಕೊಳ್ಳುವವರೂ ಲಂತಿಲಾಭ-ಲಂಚಗಳ ರೋಗಕ್ಕೆ ಗುರಿಯಾಗಿ, ಸಹಕಾರ-ಬಂಧುಭಾವಗಳನ್ನೇ ಮರೆತುಬಿಟ್ಟಿದ್ದಾರೆ. ಸ್ವಾತಂತ್ರ್ಯದ ಈ ಎರಡನೆಯ ವರ್ಷದಲ್ಲಂತೂ ಈ ರೋಗದ ಪ್ರಾಬಲ್ಯ ಹೆಚ್ಚಾಗಿ ಬಿಟ್ಟಿದೆ.

ಇದೆಲ್ಲವನ್ನೂ ನಮ್ಮ ಸರಕಾರ, ಜನತೆ ಇಬ್ಬರೂ ತಿಳಿದು ಕೊಂಡು, ತಪ್ಪು ತಿಳಿದು ಸುಧಾರಿಸಿಕೊಂಡು, ಸಮರಸಭಾವದಿಂದ ಆಡಳಿತ ನಡೆಯಿಸಿದರೆಯೇ ಭಾರತೀಯರಿಗೆ ನಿಜವಾದ ಸ್ವಾತಂತ್ರ್ಯದ ಅರ್ಥವಾದೀತು; ಅವರಲ್ಲಿ ಶಾಂತಿ-ಸಮಾಧಾನ ಭಾವ ತಲೆದೋರೀತು. ಸ್ವಾತಂತ್ರ್ಯದ ಮೂರನೆಯ ವರ್ಷದ ಮೊದಲ ದಿನ, ಈ ತಪ್ಪುಗಳನ್ನು ಜರಿಗಿಸುವ ಪ್ರತಿಜ್ಞೆಯನ್ನು ಪ್ರತಿಯೊಬ್ಬನೂ ಕೈಕೊಳ್ಳಬೇಕು.

ಕರ್ನಾಟಕ ವಿ. ವಿ. ನಿಲಯದ ರಜಿಸ್ಟ್ರಾರರು

ಉಪಕುಲಪತಿಯಂತೆಯೆ ಕ. ವಿ. ವಿ. ನಿಲಯದ ಮುಖ್ಯ ಆಡಳಿತಗಾರರ ಆಯ್ಕೆಯೂ ಔಚಿತ್ಯಪೂರ್ಣವಾಗಿದ್ದುದು ಕನ್ನಡಿಗರಿಗೆಲ್ಲ ಸಂತೋಷದ ಸಂಗತಿಯಾಗಿದೆ. ಈಗ ಮುಖ್ಯ ಆಡಳಿತಗಾರರಾಗಿ ಗೊತ್ತು ಪಡೆದಿರುವ ಪ್ರೊ. ಡಿ.ಪಿ. ಪತ್ರಾವಳಿಯವರು, ಆ ಸ್ಥಾನಕ್ಕೆ ಆವಶ್ಯಕವಾಗಿರುವ ಸಾಮರ್ಥ್ಯವಂತರೂ ಸಂಸ್ಕೃತಿಸಂಪನ್ನರೂ ಅನುಭವಶಾಲಿಗಳೂ ಆಗಿರುವರು. ಕನ್ನಡದ ಕೆಚ್ಚಿನಿಂದ ತುಂಬಿದ ಈ ಕರ್ಣಧಾರರಿಂದ, ಕ. ವಿ. ವಿ. ನಿಲಯದ ನೌಕೆ, ಸುಯಂತ್ರಿತವಾಗಿ ಮುಂದುವರಿವುದರಲ್ಲಿ ಸಂದೇಹವಿಲ್ಲ. ಪ್ರೊ. ಡಿ. ಪಿ. ಪತ್ರಾವಳಿಯವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು. ಪ್ರೀತಿಯ ಸುಸ್ವಾಗತ.

—ಸಂಪಾದಕರು

ನಾಗರ ಪಂಚಮಿಯ ಹಾಡು

(ಜನಪದ ಸಾಹಿತ್ಯ *)

ಸಂಗ್ರಾಹಕರು: **ಶ್ರೀ. ಭಾವುರಾವ್ ದೇಶಮುಖ, ಹುಬ್ಬಳ್ಳಿ**

ಪಾಡವಾದಽ ಪಂಚಿಮಿಗೆ ನಾಡಮ್ಯಾಗಿನ ನಾರೇರೆಲ್ಲಾ
ಬರುವೋ ವಿಸ್ತಾರ ಏನ್ಹೇಳಲಿ ? ॥

ರೊಟ್ಟೀ ಬುತ್ತೀ ಕಟ್ಟಕೊಂಡು ಎತ್ತಿನ ಮ್ಯಾಗ ಕುಂತುಗೊಂಡು
ಉಟ್ಟು ಬರುವೋರಲ್ಲಾ ಕರಿ ಸೀರಿ ! ॥

ಅಶಾಡ ಮಾಸಾ ಬಂದಿತವ್ವಾ ಖಾಸಾ ಅಣ್ಣಾ ಬರಲಿಲ್ಲ,
ಏಸ ದಿನಾ ನೋಡಲಣ್ಣನ ದಾರಿ ? ॥

ಗುಳ್ಳಕ್ಕನ ಮಣ್ಣಾ ತರಲಿಲ್ಲ, ಗುಲಗಂಜ್ಜಿ ಆಡಲಿಲ್ಲ,
ಸುಳ್ಳಽ ಹೋಯಿತವ್ವಾ ಈ ಬಾರಿ ! ॥

ನಾಕು ವಾರಾ ಗುಳ್ಳವ್ವ ಹೋತ್ಯು, ಅಧಿಕ ಬಿದ್ದು ಪಂಚಿಮಿ
ಮುಂದಕ ಬಿದ್ದೀತವ್ವಾ ತಿಂಗಳ್ ಝೋಲಿ ! ॥

ಸಾವುಕಾರ್ರು ನಮ್ಮವರು ಸಂತೀ-ಜ್ಯಾಟೀ ಮಾಡವರಲ್ಲ,
ಯಾರ ಮುಂದಽ ಹೇಳಿ ಕಳಿಸಲಿ ? ॥

ಕೆರಿಯಽ ನೀರಿಗೆ ಹೋಗಿ ಕರಿಯಪ್ಪಗ ಕೇಳಿದರ
ಉರಿಗಣ್ ತೋರ್ಯಾಳು ನಸಲಲಿ ;

ಮಲ್ಲಯ್ಯನ ಗುಡಿಗ್ಹೋಗಿ ಮೊನ್ನೆ ನಾನೇ ಕೇಳಿದರ
ಪರಸಾದ ಕೊಟ್ಟಾಳು ತಲೀ ಮ್ಯಾಲಿ ॥

ಇಳುವು] ಕೆರಿಯಾಗಿನ ಕರಿಯವ್ವಾ ಬಿರಸ್ಯಾಕಽ ಮನದಾಗ ?
ದೊರೆ ನನ್ನ ಅಣ್ಣೆಪ್ಪನಽ ಕಣ್ಣೀಲೇ ಕಂಡಾಗಽ
ಕರಿಕಣ್ಣಿನ ಕಾಯಿ ? ಒಡದೀಽನ ॥
ಮನ್ನೇ ಮಲ್ಲಯ್ಯ ನಿನಗ ಬಿನ್ನಽಯ ನೂಡಿದರ
ಬೆನ್ನೀಲೆ ಬಿದ್ದಂಥ ಅಣ್ಣಾನ ಕಂಡರ
ಬನ್ನಽಯ ಮಾಡಿ ಭಜಿಸೇಽನ ॥

ಚಿಂತಿಗೆಟ್ಟು ಭ್ರಾಂತಳಾಗಿ ನಿಂತಿರುವಾ ಸಮಯದಲ್ಲೇ
ಅಣ್ಣಽ ಬಂದಾನ ಸಂಜೀಲಿ—

ರೊಟ್ಟೀ ಬುತ್ತೀ ಕಟ್ಟಕೊಂಡು ಎತ್ತಿನ ಮ್ಯಾಲ ಕುಂತಗೊಂಡು
ಉಟ್ಟು ಬರುವೋರಲ್ಲಾ ಕರಿಸೀರಿ ! ॥ ೧ ॥

ಅಣ್ಣನ ಕಂಡು ತಂಗಿ ಬ್ಯಾಗ ಕಣ್ಣ ತುಂಬಾ ನೀರು ತಂದು
ಮಾಡಿ ನಿಂತಾಳ ಸಣ್ಣ ಮೂರೀ—

'ಯಾಕ ಸುಮ್ಮನಽ ದುಕ್ಕಸ್ತೀದಿ ? ಸಾಕ ತಂಗೀ ಸುಮ್ಮಗಿರು
ನಾಕದಿನಾ ಆಗಿಲ್ಲವ್ವಾ ಮೂರಿ ' ॥

'ಒಟ್ಟಾ ಬೀಸಿ ಬತ್ತಾ ಕುಟ್ಟಿ, ರೊಟ್ಟೀ ಸುಟ್ಟು ಸಾಕಾತು
ಎಷ್ಟು ದಿನಾ ನೋಜೋದು ನಿಮ್ಮ ದಾರಿ ?

ಕಷ್ಟ ಬಾಳಾ-ಪಂಚಿಮಿ ತುಟ್ಟಿಸುದಿಗೆ ಬಂದಿರಣ್ಣಾ,
ಇಷ್ಟು ದಿನ ಯಾಕ ತಡದಿರಿ ? ॥

' ಕಲ್ಲಿನ್ಹಾಂಗs ಕಳಿಸಿ ನನ್ನ ಅಲ್ಲೇ ಮರತು ಕುಂತಾಳವ್ವಾ
ಆಗೈತೇನು ತಾಯಿಗಾ ಮನಸು ಬ್ಯಾರಿ ?

ಆರು ತಿಂಗಳಾದರೂ ನನ್ನ ತರುಗಿ ಒಬ್ಬೂ ನೋಡಲಿಲ್ಲ,
ಬೈತಾರ ನಿಮ್ಮನ್ನ ನೆರಿ ಹೊರೀ ' ॥

' ನೆರೀ ಹೊರೀ ಅವ್ವಗೋಳ್ಯಾಕ್ಕ ನಮ್ಮ ಕಡೇ ಅನ್ನೇಯಿಲ್ಲಾ
ತಾಯಿಗಾ ಮಾಯಾ ಮಗಳ ಮ್ಯಾಗs ಭಾರಿ ! '

ಭಾಳದಿನಾ-ಆದೀತವ್ವಾ ಕೇಳತಾನಣ್ಣಾ ಅತ್ತೀ ಮಾವಗ
' ನಾಕೆ ನಮ್ಮ ತಂಗಿನ್ನ ಕಳಸರಿ ! ' ॥

ಇಳುವು] ಸಾವುಕಾರ್ರು ನಮ್ಮವರು ಸಣಗೀನಂಗಡಿಗ್ಹೋಗಿ
ಪ್ಯಾಲಽ ರುಮ್ಮಾಪ ಸೀಗಿ ಕೊಲೆಂಬಣ್ಣದ ಕುಬಸಾ
ಸಾಲಾಗಿಣಿಗೋಳಽ ಸೆರಗೀಽಕಲಿ ॥

ಕಳಸುತ ಬಂದರು ನಾರ್ಯಾರೆಲ್ಲಾ ಸೆಳವೂತೀರೆ ಎತ್ತು ಮುಂದ
' ಎಂದ ಕಂಡೇನವ್ವಾ ತಾಯಿಗಾ ಮಾರಿ ! ' ।

ರೊಟ್ಟೀ ಬುತ್ತೀ ಕಟ್ಟಿಕೊಂಡು ಎತ್ತಿನ ಮ್ಯಾಲ ಕುಂತಗೊಂಡು
ಉಟ್ಟು ಬರುವೋರಲ್ಲಽ ಕರಿಸೀರಿ ॥ ೨ ॥

ಹೋದ ಮರದಿನಾನೇ ತಾನು ಮಂದಗಮನೇರ ಕೂಡಿಕೊಂಡು
ಚಂದದಿಂದ ಹೊಂಟಾಳ ಹೊಳೀನೀರಾ ॥

' ಎಂದ ಬಂದೆ? ' ' ಇಂದ ಬಂದೆ ' ' ನಿನ್ನೆ ಬಂದೆ ' ' ಮೊನ್ನೆ ಬಂದೆ '
ಇಂದಿಗಾದೂವವ್ವಾ ದಿನಾ ಮೂರಾ. ॥

' ನಿಂದ್ಹ್ಯಾಂಗs ' ' ನಂದ್ಹೀಂಗ ' ' ಆಕಿದ್ಹ್ಯಾಂಗ ' ' ಹೀಂಗ್ಹಿಂಗ '
ಕೇಳತಿದ್ದಾರತ್ತೀ ಮನೀ ಸುದ್ದಿ ॥

ಒಬ್ಬೊಬ್ಬರು ತಂತಮ್ಮಽ ಸುಕಾ-ಮಕ್ಕಾ ಹೇಳತಾರ,
ಅತ್ತೀಮನಿಯವರ ದುಷ್ಟ ಬುದ್ದಿ ॥

" ಅತ್ತೀ ಗುಣಾ ನಿನ್ ಹೇಳ್ಲಿ ಹೊತ್ತಿ ಜೋಲಿಯೊಳಗಿನ ಬೆಂಕಿ—
ಮಾವ ಏನ ಮಾದರ ಜೋದ್ ಹಾನ—

---

*ಇದನ್ನು ಸಂಗ್ರಾಹಕರು, ಬೆಳಗಾಂವಿ ಜಿಲ್ಲೆಯ ಅಥಣೀ ತಾಲೂಕಿನ ಐಗಳಿ ಗ್ರಾಮದಲ್ಲಿ ಕೇಳಿ ಸಂಪಾದಿಸಿದ್ದಾರೆ. ಅರ್ಥಕ್ಕೆ ಸಂಶಯ ಬಂದಲ್ಲಿ ತಿದ್ದಿ ಸರಿಗೊಳಿಸಲಾಗಿದೆ. ಇದರ ಸರಿಯಾದ ಪಾಠಾಂತರವು ಯಾರಿಗಾದರೂ ಗೊತ್ತಿದ್ದರೆ ದಯವಿಟ್ಟು ತಿಳಿಸಬೇಕು. —ಸಂ. ಜ.

ಅತ್ತಿಗೀ ಮಾತನ್ನೇ ಕೇಳಿ ಹುಚ್ಚು ಎದ್ದು ಬೈಯ್ತಾರವರು,
ಬಿಚ್ಚಿ ಆಡವಳಲ್ಲ ಬಾಯಿ ನಾನಾ ॥

ಚಟ್ಟಿಗೆ ಮೂರು ಪಣಿಯ ಬೀಸಿ ಒಟ್ಟು ತುಂಬಿ ಮುಂದಿಟ್ಟುಕರ
ಕುಟ್ಟಂತ ಕುಡುವಾರು ಭತ್ತಾನಕ—

ಕೊಟ್ಟರ ಯಾಕಕ ತಾಯಿ ತಂದಿ! ಇಟ್ಟಾರಲ್ಲಾ ಗುರೀ ಮಾಡಿ
ಸುಟ್ಟು ಒಳಗಕ ಸಾಯತೀನಕ ನಾನಾ ॥

ಇಳವು] ಕಂಡಕರ ಕಾಣಕರ, ಉಂಡಕರ ನೇಗಕರ
ಗಂಡ ನನ್ನ ಮ್ಯಾಲಕ ಕೆಂಣಾ ಕಾರುವ ತಾಯಿಾ,
ಗುಂಡು ಬಡಿದ್ಹಾಂಗ ಎದೀಯಾಗಕ ॥

ಹಗಲೆಲ್ಲಾ ಕರಕರಿಯಕ ಪಸಿವೀ ಹಂಬಲ ಮರಿಯಕ,
ತಗಣಿದ್ದಕ ಮನಿಸುವ್ಹಾ ತಾಳಕಲಾರೆನು ಕಾಟಾ !
ಏನು ಹೇಳಲೆ ತಾಯಿಾ ಸಹೀವಾಟಾ ॥

ವಾರಿಗಿ ಗೆಣತ್ಯಾರ ಕೂಡಿಕೊಂಡು ಸಾರಿ ದುಕ್ಕಾ ಮಾಡುವಾಗ
ಸೀರೀ ಸೆರಗಿಲಿ ಒರಸ್ಯಾಳ ಕಣ್ಣೀರಾ ॥

ಕೊಟ್ಟೀ ಬುತ್ತೀ ಕಟ್ಟಿಕೊಂಡು ಎತ್ತಿನ ಮ್ಯಾಲ ಕುಂತುಕೊಂಡು
ಉಟ್ಟು ಬರುವೋರಲ್ಲಾ ಕರಿಸೀರಿ. ॥ ೩ ॥

ಕಲ್ಲಬುರ್ಗಿ ಕಾಡಿಗ್ಹಣ್ಣಾ ಕದರ ಸೋಸಿದ ರಾಗಾವಳಿ,
ಮೇಲ್ ಧೋರಿ ಸಾಲ ಪವ್ಳಿ—

ಕಬ್ಬಿನ ಗಣಿಕೀ ಗುಬ್ಬೀ ಕಣ್ಣು. ಕುಶಲಕದ ಕುಂಕುಮ ಗೆರೀ
ಹಂಡೇನಾಮಕ ಕೊಂಡೀ ಪವ್ಳಿ ॥

ಚಾಪಗಂಟಿನ ಚದರಂಗ್ ಸೀರಿ, ರೂಪವಾದ ರುದ್ದರ ಗಂಟು,
ಬಾಲ್ಯಾರುಡೂ ಬಾಳೀಪಟ್ಟಿ ಸೀರಿ;

ಸೀರೀ ಕುಬಸಾ ತೊಟ್ಟಕೊಂಡು, ವಾರಿಗಿ ಗೆಣತ್ಯಾರ ಕೂಡಿಕೊಂಡು
ಹಾಲ ಹೊಯ್ಯಲಾಕಕ ನಡೆದರ್ರೀ ॥

ಇಳವು] ಹಂಗನೂಲಾ ನಾಗಪ್ಪಗೆರಿಯ, ರಂಗಕಗರಿಸಿಣ ಎರಿಯಕ,
ಅಕ್ಕಾ ಎಲ್ಲಾರ್ನಕ ಕರಿಯಕ ಅಳ್ಳು ತಂಬಿಟ್ಟ ಸುರಿಯ,
ದುರಳ ನಾಗಪ್ಪಗ ಎಡೀ ಮಾಡಕ ॥

ಅಕ್ಕ-ತಂಗೇರಕ ಪಾಲಾ ಅಣ್ಣಕ ತಮ್ಮೆರಕ ಪಾಲಾ
ವರಸಕ್ಕ ನನಗೊಂದು ಕರಿಸೀರಿ ಉಡಿನೆಂದು
ನಾಗಪ್ಪಗ್ಹಾಲಾ ಎರಡೇನಕ ॥

ಹಾಲನೆರದು ನಾರ್ಯಾರೆಲ್ಲಾ ಸಾಲಗೊಟ್ಟು ಬರುವಾಗ,
ಬಾಲ್ಯಾರ ವಿಸ್ತಾರ ಏನ್ಹೇಳ್ಲಿ ? ॥

ಕೊಟ್ಟೀ ಬುತ್ತೀ ಕಟ್ಟಿಕೊಂಡು ಎತ್ತಿನ ಮ್ಯಾಲ ಕುಂತುಕೊಂಡು
ಉಟ್ಟು ಬರುವೋರಲ್ಲಕ ಕರಿಸೀರಿ. ॥ ೪ ॥

ಮುಗಿನಾಗ ಮುಖರೇನೀಟ್ಟು ಜಗ್ಗಿ ಜಗ್ಗಿ ಬರುವಾಗ,
" ನಾಳೆ ಆಡೂಣವ್ಹಾ ಜೋಕಾಲೀ ॥

" ಜೋಕಾಲಿಗೇನ ಹೋಕಾಲ ಬಂತು ? ಯಾಕ ನಮ್ಮನ ಕೂಡಸ
ವಲ್ಲರು ?

ಹಾಕಸ್ತಾರೇನವ್ಹಾ ಜೋಕಸ್ತಾಲಿ ? ॥
" ಸರಕಾರೇನ್ ಸಂಬಂದವ್ಹಾ ತಳಕು ಬಿದ್ದು ಆಡುವಾಗ
ಹರಕೊಂಡು ಬಿದ್ರ ನಂ ಪ್ರಾಣಾ ಖಾಲಿ !

ರಾಯರ ಓಣ್ಯಾಗ ನಾವು ರಾಜರಾಂಗಕ ತಿರುಗೊವರಲ್ಲ ?
ಯಾರು ನಮ್ಮನ್ನ ಕೇಳ್ತಾರ್ ಕೇಳ್ಳಿ ! ॥

ಇಳವು] ಆತವ್ಹಾ ಪಂಚಿಮಿ, ಹೋತ್ಯವ್ಹಾ ಇಂದಿಗೆ
ರಾತ್ರೀಗಳಿದ ಮ್ಯಾಗಕ ಆತ ಬರುವನ ತಾಯಿ
ಹೆತ್ತಪ್ಪನ ಬಿಟ್ಟು ಹೋಗಲ್ಹಾಂಗ ? ॥

' ಸಣ್ಣ ಸೋಮಾರ ತನಕಕ ಅಣ್ಣ ಹೇಳಿದಂಗ ಕೇಳು '
' ದೀವಳಿಗೀ ಹಬ್ಬ ತನಕಾ ಫೈರ್ಯ ಮಾಡವ್ಹ ತಂಗಿ '
' ಏಸು ದಿನಾ ಇದ್ದರೂ ತಾಸೊತ್ತು ಇದ್ಹಾಂಗ
ಬ್ಯಾಸರೀದವ್ಹಾ ತವರೂರಾ ! ' ॥

ಪಾಡವಾದ ಪಂಚಿಮಿಗೆ ನಾಡಮ್ಯಾಗಿನ ನಾರೇರೆಲ್ಲಾ
ಬರುವೋ ವಿಸ್ತಾರ ಏನ್ಕ ಹೇಳಲಿ ?

ರೊಟ್ಟೀ ಬುತ್ತೀ ಕಟ್ಟಿಕೊಂಡು ಎತ್ತಿನ ಮ್ಯಾಲ ಕುಂತುಗೊಂಡು
ಉಟ್ಟು ಬರುವೋರಲ್ಲ ಕರಿಸೀರಿ ! ॥ ೫ ॥

ರೀಗಲ್ ಚಿತ್ರಮಂದಿರದಲ್ಲಿ

ರಸಿಕರ ಕಣ್ಣು-ಮನಗಳಿಗೆ ಹಬ್ಬವನ್ನುಂಟು ಮಾಡುವ
ರಣಜಿತದವರ ಉತ್ತಮೋತ್ತಮವಾದ ಹೃದಯದ್ರಾವಕ ಚಿತ್ರ

— ಮಿಟ್ಟಿಕೇ ಖಿಲಾನೆ —

ಬೇಗನೆ ಬರಲಿದೆ!

ಬರುವ ದಿನವನ್ನು ಕಾಯುತ್ತಲಿರ್ರಿ!

ಪಾತ್ರ ವರ್ಗ:

ನಿಗಾರ, ಕರನದಿವಾನ್, ನಿರೂಪಾ ರಾಯ್

ಮನಸ್ಸನ್ನು ಸೆಳೆದುಕೊಂಡು ಬಿಡುವ ಸುಂದರ ಸಚಿತ್ರ!

ಸದ್ಯ ನಡೆದಿರುವುದು ಸಂಗೀತಮಯ ಚಿತ್ರ

— ವಿದ್ಯಾ —

ಜೀತ ನಿರ್ಮಿತಿಯವರ ಸಾಮಾಜಿಕ ಚಿತ್ರ.

ಸೂರಯ್ಯಾ, ದೇವ ಆನಂದರ ಆಕರ್ಷಕ ಅಭಿನಯ!

ಎಲ್ಲರೂ ನೋಡಲೇಬೇಕಾದ ರಸಪ್ರದರ್ಶನ!

ಈ ಸಂದರ್ಭವನ್ನು ಯಾರೂ ಕಳೆದುಕೊಳ್ಳಬೇಡಿ!

⊙ ಮಾನವ ಪ್ರಕೃತಿ ⊙

(ಎರಡು ಸ್ವಭಾವದರ್ಶನ)

ಶ್ರೀ. ರಾಮಕೃಷ್ಣ ಹೆಗಡೆ ದೊಡ್ಡಮನೆ, ಬನಾರಸ

★

೧

ಕೆಂಟೋನ್‌ಮೆಂಟಿನ ಸ್ಟೇಶನ್ ರೋಡಿನಲ್ಲಿ ಒಂದು ನವನಿರ್ಮಿತವಾದ ಮನೆಯ ಎದುರಿಗೆ, ಬಾವಿ ತೋಡುವ ಕೆಲಸ ಕೆಲವು ದಿನಗಳಿಂದ ನಡೆಯುತ್ತಿತ್ತು.

ದಿನದಂತೆ ಅಂದು ನಾನು ಅಲ್ಲಿಂದಲೇ ಹಾಯ್ದು ತಿರುಗಾಡಲು ಹೊರಟಿದ್ದೆ. ಬಾವಿಯನ್ನು ದಾಟಿ—ಅಷ್ಟೇ—ಒಂದೆರಡು ಹೆಜ್ಜೆಯನ್ನು ಇಟ್ಟಿರಬಹುದು, ಅಚ್ಚ ಕನ್ನಡ ನುಡಿಯೊಂದು ನನ್ನ ಕಿವಿಗೆ ಬಡಿಯಿತು, "ನಿನ್ನ ಮನೆ ತಿಂದು ಹೋಗ, ಕಸುವು ಹಾಕಿ ಎಳೆಯಬಾರದೇ?"

ನನ್ನ ಕಿವಿ ನಟ್ಟಗಾಯಿತು. ಹೊರನಾಡಿನಲ್ಲಿ ತನ್ನ ನುಡಿಯನ್ನು ಕೇಳಿಯೂ ಕಿವಿಗೊಡದಿರುವಷ್ಟು ಮದಡನಾಗಲಿ, ಸ್ಥಿತಪ್ರಜ್ಞನಾಗಲಿ ನಾನಲ್ಲ. 'ಮರುಭೂಮಿಯಲ್ಲಿ ನೀರಿನ ಸೆಲೆ ಒಡೆದಂತೆ ಎಲ್ಲಿಂದ ಬಂತಪ್ಪಾ ಈ ಅಮೃತವಾಣಿ!' ಎಂದುಕೊಂಡೆ.

ಯಂತ್ರವತ್ ನನ್ನ ಕಣ್ಣುಗಳೂ, ಅವುಗಳ ಬೆನ್ನಿಗೆ ಕಾಲುಗಳೂ ಧನಿಯು ಬಂದತ್ತ ಹೊರಳಿದುವು. ಬಾವಿಯಿಂದ ಮಣ್ಣನ್ನು ಜಗ್ಗುತ್ತಿದ್ದ ನಾಲ್ಕಾರು ಜನರಲ್ಲಿಯೆ ಒಬ್ಬನು ಮತ್ತೊಬ್ಬ ಆಲಸಿಗ ನನ್ನುದ್ದೇಶಿಸಿ ಹೇಳಿದ ಮಾತಾಗಿತ್ತದು.

ಅವರಲ್ಲಿ ಕನ್ನಡಿಗನಾರೆಂಬುದನ್ನು ಹುಡುಕಲು ಕಷ್ಟವಾಗಲಿಲ್ಲ. ರಂಗು-ರೂಪು, ವೇಷ-ಭೂಷಾದಿಗಳು ಒಂದೇ ಆಗಿದ್ದರೂ, ಕೇವಲ ಮುಖಚರ್ಯೆಯಿಂದಲೇ ನಾವು ನಮ್ಮ ನಾಡಿಗರನ್ನು ಗುರುತಿಸಬಹುದು.

ಹದವಾದ ಆಳು. ಐವತ್ತರ ಮೇಲಿನ ವಯಸ್ಸು. ಮೊಳಕಾಲುದ್ದ ಪಂಚೆಯನ್ನುಳಿದು ತೆರೆದಿದ್ದ ಶರೀರ. ಅರ್ಧಮರ್ಧ ನೆರೆತ ಕೂದಲು. ಮೋರೆಯ ಮೇಲೆ ಅರ್ಧ ಇಂಚಿನ ಗಡ್ಡಮೀಸೆ. ನಾನು ಆತನನ್ನು ಕೇಳಿದೆ:

"ನಿಮಗೆ ಕನ್ನಡ ಬರುತ್ತದೆ? ನೀವೆಲ್ಲಿಯವರು?" ನನ್ನಿಂದ ಕನ್ನಡವನ್ನು ಕೇಳಿ ಅವನಿಗೆ ನನಗಿಂತ ಹೆಚ್ಚು ಸೋಜಿಗವಾಗಿರಬೇಕು. ಅರ್ಧ ಸನ್ನೆಯಿಂದಲೂ ಅರ್ಧ ಶಬ್ದದಿಂದಲೂ ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟು ಅವನು ಕೇಳಿದ: "ನೀವು?"

ಸ್ವಲ್ಪದರಲ್ಲಿ ನನ್ನ ಪರಿಚಯಮಾಡಿಕೊಟ್ಟೆ. ಅವನ ಮುಖವು ತನ್ನ ಮನೆಯವರೇ ಸಿಕ್ಕಿದರೆನ್ನುವಷ್ಟು ಉಬ್ಬಿತ್ತು.

ಇಬ್ಬರೂ ವೆಂಕಟೇಶ ನಾಯ್ಕರೇ. ಆದರೆ ಮೊದಲನೆಯವನು ಅಸಂಸ್ಕೃತ; ಆದರೂ ಮಾನವತೆ ಅವನಲ್ಲಿ ಅರಳಿ ನಿಂತಿದೆ. ಎರಡನೆಯವನು ಸುಸಂಸ್ಕೃತ ಪದವೀಧರ; ಆದರೆ ಮಾನವತೆಯ ಮುಖದರ್ಶನವೇ ಆಗಿಲ್ಲ.

★

ಅಷ್ಟರಲ್ಲಿ ಅವನಿಗೆ ಉಳಿದವರಿಂದ ಕರೆಯು ಬಂತು. ನಾನೆಂದೆ: "ಒಳ್ಳೆಯದು, ನಾನು ಇಲ್ಲೇ ಸಮೀಪದಲ್ಲಿದ್ದೇನೆ. ಪುನಃ ಸಿಗುತ್ತೇನೆ."

ಮಾರನೆಯ ದಿನವೂ ಆತನು ಕೆಲಸದಲ್ಲಿ ತೊಡಗಿದ್ದ.

ಮೂರನೆಯ ದಿನ ಅವನಿಗೆ ತುಸು ಬಿಡುವು ಸಿಕ್ಕಿರಬೇಕು. ಕೆಲವೊಂದು ದೂರ ನನ್ನ ಜೊತೆಗೆ ಬಂದ. ನಾನು ಅವನ ವೃತ್ತಾಂತವನ್ನು ಕೇಳಿದೆ.

ಅವನು ಕನ್ನಡದ ಜೊರತು ಮುತ್ತಾವ ಭಾಷೆಯನ್ನೂ ಬಲ್ಲ. ಮನೆಯಿಂದ ಸೋಟು ಮೂರು ತಿಂಗಳಾಯಿತಂತೆ. ಈ ಅವಧಿಯಲ್ಲಿ ನನ್ನ ಹೊರತು ಮುತ್ತಾರೂ ಕನ್ನಡ ಮಾತನಾಡುವವರು ಅವನಿಗೆ ಸಿಕ್ಕಿರಲಿಲ್ಲ. ಈಗ ಅವನು ಕನ್ನಡವನ್ನೂ ಸ್ಪಷ್ಟವಾಗಿ ಆಡಲಾರದವನಾಗಿದ್ದ.

ಅವನ ಹೆಸರು ವೆಂಕಟೇಶ ನಾಯ್ಕ. ಊರು ಮಂಗಳೂರಿನ ಕಾಸರಕೋಡು. ಅಲ್ಲಿ ಚಿಕ್ಕ ಭೂಮಿಯನ್ನು ಸಾಗುವಳಿಮಾಡಿಕೊಂಡು ಜೀವನ ಸಾಗಿಸುತ್ತಿದ್ದನಂತೆ.

ಅವನಿಗೆ ಪ್ರಾಯಕ್ಕೆ ಬಂದ ಇಬ್ಬರು ಮಕ್ಕಳು. ಇಬ್ಬರಿಗೂ ಮದುವೆಯಾಗಿದೆ. ಅವಿಭಕ್ತ ಕುಟುಂಬದಲ್ಲಿ ಸಾಮಾನ್ಯವಾಗಿರುವಂತೆ, ಅವರಲ್ಲಿ ದಿನ ಬೆಳಗಾದರೆ ಜಗಳ ಕಲಹಕ್ಕೆ ಆರಂಭವಾಯಿತು. ಇವನು ಬುದ್ಧಿ ಹೇಳಿದರೆ, ಇವನಿಗೇ ಮರುನುಡಿ. ಅನಾದರ. ಅಪಮಾನ. ಇವುಗಳಿಂದ ಬೇಸತ್ತು, ಮೊದಲೇ ಹೆಂಡತಿಯನ್ನು ಕಳೆದುಕೊಂಡ ವೆಂಕಟೇಶ, ಮಮತೆಯ ಮನೆಗೆ ಶರಣು ಹೊಡೆದ. ಯಾವುದೊಂದು ಉದ್ದೇಶವಿಲ್ಲದೆ ಉತ್ತರದ ದಾರಿ ಹಿಡಿದ. ಎತ್ತೆತ್ತೋ ತಿರುಗಿ, ಕೊನೆಗೆ ಕಾಶಿಗೆ ಬಂದು ಸೇರಿದ. ಈ ಮಾತಿಗೆ ೧೫ ದಿನಗಳಾದುವು. ಅತ್ತಿತ್ತ ಅಂಡಲೆದು, ಹುಡುಕಿ ಹುಡುಕಿದ ಮೇಲೆ, ೨-೩ ದಿನಗಳಿಂದ ಅವನಿಗೊಂದು ಕೆಲಸ ಸಿಕ್ಕಿದೆ—ಇದೇ ಅವನ ಕಷ್ಟ.

ನಾನು ಅವನ ಮೋರೆಯತ್ತ ನೋಡಿದೆ. ಅಲ್ಲಿ ಹರಿದಾಡುತ್ತಿದ್ದ ಒಂದು ಆಳವಾದ ಕರುಣೆಯ ರೇಖೆಯು ನನ್ನ ಹೃದಯವನ್ನು ಕೊರೆಯುತ್ತ ಹೊಕ್ಕಿತು.

ಇಳಿಯುವ ವಯಸ್ಸು. ಉಪವಾಸ-ವನವಾಸಗಳಲ್ಲಿ ಜೀವನ!

"ಊಟಕ್ಕೆ ಏನು ಮಾಡುತ್ತಿರುವಿರಿ?" ನಾನು ಕೇಳಿದೆ.

"ನಿನ್ನೆಯ ವರೆಗೆ ಆ ಬೀದಿಯ ಒಂದು ಹೊಟೆಲಿನಲ್ಲಿ ನಾಲ್ಕು ತುತ್ತು ರೊಟ್ಟಿ-ಸಲ್ಲೆಯನ್ನು ಹಾಕಿಸಿಕೊಳ್ಳುತ್ತಿದ್ದೆ." ಅವನು ನನ್ನ ದೃಷ್ಟಿಯನ್ನು ತಪ್ಪಿಸಿಕೊಳ್ಳುತ್ತಾ ಹೇಳಿದ.

"ನಿನ್ನೆಯವರೆಗೆ? ಇಂದು? ಇನ್ನು ಮುಂದೆ?"

"ಇವರು ಹೇಳುತ್ತಾರೆ: ಸಂಬಳ ವಾರದ ಕೊನೆಗೆ ಸಿಗುತ್ತದಂತೆ. ನನ್ನ ಹತ್ತಿರ ಈಗ ಕಾಸೂ ಇಲ್ಲ. ಅಪರಿಚಿತ ಸ್ಥಳದಲ್ಲಿ ಸಾಲ, ಕೈಗಡ ಯಾರು ತಿನ್ನಿಸಿಯಾರು ಸ್ವಾಮೀ!" ಅವನ ಸ್ವರವು ಬತ್ತಿ ಹೋಗಿತ್ತು.

"ಹಾಗಾದರೆ ಇಂದು ಊಣ್ಣಲೇ ಇಲ್ಲವೇ? ಎಂಥಾ ಮನುಷ್ಯ!" ಜೇಬಿನಿಂದ ಐದು ರೂಪಾಯಿಯ ನೋಟೊಂದನ್ನು ತೆಗೆದು, ಅವನ ಕೈಯಲ್ಲಿಡುತ್ತ ಹೇಳಿದೆ. "ಹೋಗು, ಈಗಲೇ ಊಟ ಮಾಡಿ ಬಾ."

ಸಂಕೋಚದಿಂದ ಅದನ್ನು ಸ್ವೀಕರಿಸುತ್ತ ಅವನೆಂದ: "ನೀವೆಂಥ ದಯಾವಂತರು! ನಾನು ತುಂಬಾ ಋಣಿ. ಬರುವ ರವಿವಾರ ಸಂಬಳ ಸಿಗುತ್ತಲೇ ತಪ್ಪದೆ ನಿನುಗೆ ಮುಟ್ಟಿಸುತ್ತೇನೆ." ಕೃತಜ್ಞತೆಯಿಂದ ಅವನ ಕಂಠವು ತುಂಬಿ ಬಂದದ್ದರಿಂದ ಕೊನೆಯ ಶಬ್ದಗಳು ಅಸ್ಪಷ್ಟವಾಗಿದ್ದುವು.

ನಾನು ವಿಚಾರ ಮಾಡುತ್ತ ನಡೆದೆ: ಮನುಷ್ಯನಿಗೆ ಎಂತೆಂಥ ಪರಿಸ್ಥಿತಿಗಳು ಬಂದೊದಗುತ್ತವೆ!

* * * *

ಅಂದು ರವಿವಾರವೆಂದು ಸಿನೆಮಾಕ್ಕೆ ಹೋಗಲು ಮಾತ್ರವೆ ನನಗೆ ನೆನಪಾದುದು. 'ದಿಲ್-ಲಗಿ'ಯನ್ನು ನೋಡಿ, ಅದರಲ್ಲಿಯ ರಸಭರಿತ ಸನ್ನಿವೇಶಗಳನ್ನು ನೆನಪುಮಾಡಿಕೊಂಡು, ನೆನಪಿನ ಜೊತೆಗೆ ಬಂದ ಪದವನ್ನು ಸಿಳ್ಳು ಹೊಡೆಯುತ್ತ ಹಾಸ್ಟೆಲಿನ ಅಟ್ಟವನ್ನು ಹತ್ತುವಾಗ, ಹತ್ತುವರೆಯಾಗಿತ್ತು. ನನ್ನ ರೂಮಿನ ಹತ್ತಿರ ಕತ್ತಲೆಯಾಗಿತ್ತು. ಜೇಬಿನಿಂದ ಬೀಗದ ಕೈಯನ್ನು ತೆಗೆಯುವಷ್ಟರಲ್ಲಿ, ನನ್ನನ್ನು ಹೆಸರಿನಿಂದ ಯಾರೋ ಕರೆದರು. ವೆಂಕಟೇಶನ ದನಿಯನ್ನು ನಾನು ಗುರುತಿಸಿದೆ. ಅವನು ಮುಂದೆ ಬಂದು, ನನ್ನ ಕೈಯಲ್ಲಿ ಐದು ರೂಪಾಯಿಯ ನೋಟನ್ನಿಡುತ್ತಾ ಹೇಳಿದ: "ಇಕೊಳ್ಳಿ. ರವಿವಾರ ಕೊಡುತ್ತೇನೆಂದು ಹೇಳಿದ್ದೆ."

"ನೀವು ಎಷ್ಟು ಹೊತ್ತು ಕಾದಿರಿ?"

"ಏನಿಲ್ಲ. ಎಂಟರ ಹೊತ್ತಿಗೆ ಮೊದಲು ಬಂದಿದ್ದೆ; ಅನಂತರ ಒಂಭತ್ತರ ಸುಮಾರಿಗೆ ಪುನಃ ಬಂದವನು ಹೋಗಲೇ ಇಲ್ಲ. ಇನ್ನು ನಾನು ಬರಲೇ?"

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇಸಿಗೆಗಳನ್ನು ಹೋಗಲಾಡಿಸುವಲ್ಲಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರಿ ಹೋಗುವದು ಶಕ್ಯವಿರುವದಿಲ್ಲ — ಮತ್ತು ಅವ್ಹೊಂದು ಅವಶ್ಯಕತೆಯೂ ಇರುವದಿಲ್ಲ. ಹೊಟ್ಟೆನೋವು, ವಾಂತಿ, ಅಪಚನ, ತಲೆಸುತ್ತು, ಮೈನೋವು, ಹಲ್ಲುನೋವು, ಮಕ್ಕಳ ಶೀತ ಏಕಾರ ಇತ್ಯಾದಿ ಅನೇಕ ಚಿಲ್ಲರೆ ಬೇನೆಸಂಕಟಗಳನ್ನು ಜಪೇರಿಯನ್ ಜೀವನ ಮಿಕ್ಶ್ಚರ್ ನಿಸ್ಸಂಶಯವಾಗಿ ಗುಣಪಡಿಸುತ್ತದೆ. ಕಾಲರಾ ಮತ್ತು ಅನುಮಾನಗಳಂಥ ಭಾತುಕವಾತ ಹೊಂಕು ರೋಗಗಳ ಮೇಲೆ ಆಮೂದಂತೆ ಇದರ ಉಪಯೋಗವಾಗುತ್ತದೆ. ಡಾಕ್ಟರರಿಲ್ಲದಾಗ ದುಬಾರಿಯಾಗಿ ಇದರ ಉಪಯೋಗವಾಗುವದರಿಂದ ಇದರ ಒಂದು ಬಾಟ್ಲಿಯನ್ನು ನಿಮ್ಮಲ್ಲಿಯೂ ಮತ್ತು ಪ್ರವಾಸದಲ್ಲಿ ಹತ್ತಿರವೂ ಇಟ್ಟುಕೊಳ್ಳುವದು (ಉತ್ಕೃಷ್ಟ ಮುಂಜಾಗ್ರತೆಯ ಉಪಾಯವಾಗಿದೆ) ದೂರದರ್ಶಿತ್ವವ ಲಕ್ಷಣವಾಗಿದೆ. ಕನಿಷ್ಕರಲ್ಲಿಯೂ (ಔಷಧ ವ್ಯಾಪಾರಿಗಳಲ್ಲಿಯೂ) ಹಳ್ಳಿಗಳಲ್ಲಿ ವಂಗಡಿಕಾರರಲ್ಲಿಯೂ ದೊರೆಯುತ್ತದೆ.



ಮಕ್ಕಳು ಶಕ್ತಿವಂತರು ತೇಜಸ್ವಿಗಳು ಆಗಬೇಕಿದ್ದರೆ ಬಾಯೋ ಟೋನಾ ಅವಶ್ಯ ಕೊಡಿ.

ಘಾಸ್ಫೊರಾ
ಏಕಮೇವ ಟಾನಿಕ್

"ಯಾವುದೇ ಕಾರಣದಿಂದ ಬಂದಾದ ದೋಷವನ್ನು ತೋಗದ ಸರಿಯಾದ ನಿದಾನದಿಂದಲೆ ಗುಣ ಪಡಿಸಬಹುದು.

ಘಾಸ್ಫೊರಾದಿಂದ ಈ ಅನುಭವ ಬರುವುದು.



ರಾಯ್, ಮತ್ತು ಕಂ.
ಮುಂಬಯಿ

ನಾನು ಒಂದು ಶಬ್ದವನ್ನೂ ಉಚ್ಚರಿಸಲಿಲ್ಲ. ಕೈಯಲ್ಲಿಯ ನೋಟನ್ನು ಜೇಬಿಗೆ ಸೇರಿಸುವುದನ್ನು ಮರೆತು, ಸಾವಕಾಶವಾಗಿ ಇಳಿದು ಹೋಗುತ್ತಿರುವ ಅವನನ್ನೇ ನೋಡುತ್ತಿದ್ದೆ.

೨

ಕಾಲೇಜಿನ ಪರೀಕ್ಷಾ ಭವನದಲ್ಲಿ, ಒಬ್ಬ ಪ್ರೊಫೆಸರರು ನನ್ನ ಬಳಿಗೆ ಬಂದು ಹೇಳಿದರು: "ನಿಮ್ಮನ್ನು ಯಾರೋ ಹೊರಗೆ ಕಾದಿದ್ದಾರೆ. ಮಂಗಳೂರಿನವರಂತೆ." ಆಗ ವಿಚಾರ ಮಾಡಲು ಅವಕಾಶವಿದ್ದಿಲ್ಲವಾದರೂ, ಕೆರಳಿದ ಕುತೂಹಲವು ಕೆಲ ನಿಮಿಷಗಳನ್ನು ನುಂಗಿಯೇ ಬಿಟ್ಟಿತು. 'ಯಾರಿರಬಹುದಪ್ಪಾ ಇವರು?'

ಪೇಪರನ್ನು ಮುಗಿಸಿ ಹೊರಗೆ ಬಂದೆ. ಅಲ್ಲೇ ಒಬ್ಬರು ನಿಂತಿದ್ದರು. "ನಮಸ್ಕಾರ, ನೀವೇ ಏನು ಮಂಗಳೂರಿನವರು?"

"ಅಹುದು, ಅಹುದು. ನಮಸ್ಕಾರ, ತಾವೇ ಅಲ್ಲವೇ...."

"ಹೌದು. ನಡೆಯಿರಿ, ರೂಮಿಗೆ ಹೋಗೋಣ. ನಿಮ್ಮ ಹೆಸರು?"

"ನನ್ನನ್ನು ವೆಂಕಟೇಶ ನಾಯ್ಕರೆಂದು ಕರೆಯುತ್ತಾರೆ."

"ವೆಂಕಟೇಶ ನಾಯ್ಕ" ನಾನು ಮನಸಲ್ಲೇ ಮಾರ್ನುಡಿದೆ.

ವಯಸ್ಸು ೩೦ರ ಒಳಹೊರಗಿನದು. ನೀಟಾದ ಶರೀರ. ನೀಲಿ ಗೆರೆಯ ಶರ್ಟು. ಖಾಕಿಯ ಫುಲ್‌ಪೇಂಟು. ತಲೆಯ ಮೇಲೆ ಹರಡಿದ ಗುಂಗರುಗೂದಲು, ಮೂರುದಿನ ಮಾಡದೆ ಇದ್ದ ಗಡ್ಡ ಮೀಸೆ. ಕಾಲಲ್ಲಿ ಚಪ್ಪಲಿ.

ರೂಮಿನಲ್ಲಿ, ಅವರಿಗೆ ಕುಳಿತಿರಲು ಹೇಳಿ, ನಾನು ಬಟ್ಟೆ ಬದಲಾಯಿಸತೊಡಗಿದೆ. "ನನ್ನ ಹೆಸರು ನಿಮಗೆ ಹೇಗೆ ಗೊತ್ತು?" ನಾನು ಕೇಳಿದೆ....ಮಾತನ್ನು ಪ್ರಾರಂಭ ಮಾಡುತ್ತ.

"ನಾನು ಇಲ್ಲಿ ಹಾದು ಹೋಗುತ್ತಿರುವಾಗ ಒಬ್ಬರು ಸಿಕ್ಕರು. ಅವರು ನಿಮ್ಮ ಅರ್ಥಶಾಸ್ತ್ರದ ಪ್ರೊಫೆಸರರಂತೆ. ನನಗೆ ನಮ್ಮವರಾದವರಾರಾದರೂ ಬೇಕಿತ್ತು. ನಾನು ಕೇಳಿದ್ದಕ್ಕೆ ಅವರು ಇಲ್ಲಿ ಕರ್ನಾಟಕದವರೊಬ್ಬರು ಇರುವರೆಂದರು. ಅಂತೇ ನಾನು ಇಲ್ಲಿಗೆ ಬಂದೆ."

"ಒಳ್ಳೆಯದಾಯಿತು." ರೂಮಿನಲ್ಲಿದ್ದುದು ಒಂದೇ ಖುರ್ಚಿಯಾಗಿದ್ದರಿಂದ, ನಾನು ಮಂಚದ ಮೇಲೆ ಕುಳಿತುಕೊಳ್ಳುತ್ತ ಹೇಳಿದೆ: "ಮತ್ತೇನು? ನೀವು ಒಂಟಿಯಾಗಿ ಯಾತ್ರೆಗೆ ಬಂದಿರುವಿರೋ, ಇಲ್ಲವೆ ಮತ್ತಾವ..."

ಮೆಸ್ಸಿನ ಮಾಣಿಯು ಅಷ್ಟರಲ್ಲಿ ನನ್ನ ಊಟವನ್ನು ತೆಗೆದುಕೊಂಡು ರೂಮನ್ನು ಪ್ರವೇಶಿಸಿದ. ಅದನ್ನು ಮೇಜಿನ ಮೇಲಿರಿಸಿ ನಾನವನಿಗೆ ಅಪ್ಪಣೆ ಮಾಡಿದೆ: "ಮತ್ತೊಂದು, ಕೂಡಲೇ."

ಇದನ್ನೆಲ್ಲಾ ಅವರು ಗಮನಿಸಿದರೋ ಇಲ್ಲವೋ ಗೊತ್ತಿಲ್ಲ. ಅವರ ದೃಷ್ಟಿಯು ಅಂತರ್ಮುಖವಾಗಿದ್ದಂತೆ ತೋರಿತು. ಮುಖವು ಚಿಂತಾಗ್ರಸ್ತ.

ನಾಲ್ಕಾರು ನಿಮಿಷಗಳು ಹೀಗೇ ಮೌನದಿಂದ ಕಳೆದ ಮೇಲೆ, ಅವರೇ, ತಮ್ಮ ಅಗಲವಾದ ಹಣೆಯ ಮೇಲೆ ಬೆರಳಿಟ್ಟು ಹೇಳಿದರು: "ಎಲ್ಲಾ ನಸೀಬ ಸ್ವಾಮೀ."

ವೇದಾಂತದ ಈ ಮುತ್ತು, ನಾನು ಅನೇಕ ಬಾರಿ ಅನೇಕರ ಬಾಯಿಂದ ಉದುರಿದ್ದನ್ನು ನೋಡಿದ್ದರೂ, ಇಲ್ಲಿ ಅದರ ಅರ್ಥವನ್ನು ಕೂಡಲೇ ಗ್ರಹಿಸಲು ಶಕ್ತನಾಗಲಿಲ್ಲ. ಅಷ್ಟರಲ್ಲಿ ಮಾಣಿ ಮತ್ತೊಂದು ಊಟವನ್ನು ತಂದ.

ಊಟಕ್ಕೆ ಪ್ರಾರಂಭವಾದೊಡನೆಯೇ ಅವರು ತಾವಾಗಿಯೇ ತಮ್ಮ ಪರಿಚಯವನ್ನು ಶುದ್ಧ ಇಂಗ್ಲಿಷು ಮತ್ತು ಕನ್ನಡದ ಭಾಷೆಯಲ್ಲಿ ಮಾಡಿ ಕೊಡಹತ್ತಿದರು.

"ನಾನು ಮಂಗಳೂರಿನವ. ನಮ್ಮದು ದೊಡ್ಡ ಕುಟುಂಬ. ತಂದೆ-ತಾಯಿಗಳಿಗೆ ನಾನು ಹತ್ತು ಮಂದಿ ಮಕ್ಕಳು. ನನ್ನ ಮೂವರು ಅಣ್ಣಂದಿರಲ್ಲಿ ಇಬ್ಬರು ವಕೀಲರು, ಮತ್ತೊಬ್ಬರು ಹೆಚ್ಚಿನ ಶಿಕ್ಷಣಕ್ಕಾಗಿ ಅಮೇರಿಕೆಗೆ ತೆರಳಿದ್ದಾರೆ. ನಾನು ಎಂ. ಎಸ್‌ಸಿ. ಪಾಸಾಗಿ ಈಗ ಮೂರು ವರ್ಷಗಳಿಂದ ಮುಂಬಯಿಯ ಒಂದು ಕಬ್ಬಿಣದ ಕಾರ್ಖಾನೆಯಲ್ಲಿ, ದೊಡ್ಡ ಸಂಬಳದ ಮೇಲೆ ನೌಕರಿ ಮಾಡುತ್ತಿದ್ದೇನೆ. ನನ್ನ ಅಕ್ಕ ನಾಗಪುರದ ಒಬ್ಬ ಜಜ್ಜರ ಹೆಂಡತಿ. ತಂಗಿಯು ಇದೇ ಸಲ ಎಲ್‌ಎಲ್.ಬಿ. ಗೆ ಕಟ್ಟಿದಾಳೆ. ನಾಲ್ಕು ತಮ್ಮಂದಿರು ಇನ್ನೂ ಓದುತ್ತಿದ್ದಾರೆ ....

....ನನ್ನ ಪತ್ನಿಗಿದ್ದರೂ ನನಗೇನೂ ಈ ಯಾತ್ರೆ-ಗೀತ್ರೆಯಲ್ಲಿ ನಿಶ್ವಾಸನಿಲ್ಲರಿ." ಅವರು ತಮ್ಮಷ್ಟಕ್ಕೆ ಮುಂದುವರೆದರು. "ಅವಳು ಬಿ. ಎ. ಪಾಸು ಮಾಡಿದ್ದರೂ ಭಾವಿಕತೆಯನ್ನು ಬಿಡಲಿಲ್ಲ. ಹತ್ತು ದಿವಸಗಳ ಹಿಂದೆ ನಮ್ಮ ತಂದೆ ತೀರಿಕೊಂಡು ಬಿಟ್ಟರು. ತನ್ನ ಅಸ್ಥಿಯನ್ನು ಗಂಗಾನದಿ ಕಾಣಿಸಬೇಕೆಂಬುದು ಅವರ ಕೊನೆಯ ಕನವರಿಕೆಯಾಗಿತ್ತು. ನಾನು ಅವರ ಮುದ್ದು ಮಗನಾಗಿದ್ದರಿಂದ, ಈ ಕೆಲಸವು ನನ್ನ ಪಾಲಿಗೇ ಬಂದಿತು. ನಾನು ಹೋಗುತ್ತೇನೆಂದು ಸೊತ್ತಾದ ಕೂಡಲೆ, ಸರಿ, ನನ್ನ ತಾಯಿಯೂ, ಅಪಳ ಜೊತೆಗೆ ತಂಗಿಯೂ ಬಂದೇ ಬರುವೆನೆಂದು ಹಟಹಿಡಿದರು. ಇನ್ನು

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ ಔಷಧಿ!

★

ಡಾ. ವಾಮನ ಗೋಪಾಳ
ಇವರ
ಸಾರ್ಸಾ ಪರಿಲ್ಲಾ

ನನ್ನ್ನಕೆಯು ಬಿಟ್ಟಾಳೆಯೇ, ಅವಳೂ ಆನು ತಿಂಗಳ ಶಿಶುವನ್ನು ಕಟ್ಟಕೊಂತು ತಯಾರು.....

.... ಆಂತೂ ೮ ದಿನದ ಈ ಹಾಳು ಪ್ರಯಾಣವನ್ನು ಮುಗಿಸಿ ಕಾಶಿಗೆ ಬಂದು ಮುಟ್ಟಿದ್ದೇವೆ. ಆವರನ್ನೆಲ್ಲಾ ದೊಡ್ಡ ಸ್ಟೇಶನ್ನಿನಲ್ಲಿ ಬಿಟ್ಟು ನಾನು ಇಲ್ಲಿ ಬಂದಿರುವೆ."

ನನ್ನ ಊಟವು ಮುಗಿದಿತ್ತು. ಮಾತಿನಲ್ಲಿ ತೊಡಗಿದ್ದರಿಂದ ಅವರದಿನ್ನೂ ಮುಗಿದಿರಲಿಲ್ಲ. "ಅವರನ್ನು ಅಲ್ಲೇ ಏಕೆ ಬಿಟ್ಟರಿ? ನಿಮಗೆ ಇಲ್ಲಿಯ ಕ್ಷೇತ್ರ ಬ್ರಾಹ್ಮಣರಾರದೂ ಪರಿಚಯವಿಲ್ಲವೇ?" ನಾನು ಪ್ರಶ್ನಿಸಿದೆ.

"ಹೇಳುತ್ತೇನೆ ಕೇಳಿ ಸ್ವಾಮಿ" ಅವರು ಕೈಯನ್ನು ತೊಳೆಯುತ್ತ ಹೇಳಿದರು: "ನಮಗೆ ನಾಳೆ ಸಂಜೆಯೊಳಗಾಗಿ ಗಯಾಕ್ಕೆ ತಲುಪಬೇಕಾಗಿದೆ. ಆಗರೆ ಪರಿಸ್ಥಿತಿ ಕಷ್ಟಕ್ಕೆ ಬಂದಿದೆ. ಅಲಹಾಬಾದಿನಿಂದ ಬನಾರಸದ ಹಾದಿಯಲ್ಲಿ, ನನ್ನ ಸೂಟ್‌ಕೇಸ್ ಕಳುವಾಗಿ ಹೋಯಿತು. ಹಣನೆಲ್ಲಾ ಅದರಲ್ಲಿತ್ತು."

"ಕಳವಾಗಿ ಹೋಯಿತು? ಎಷ್ಟು ರೂಪಾಯಿಗಳಿದ್ದವು?" ನಾನು ಉತ್ಕಂಠೆಯಿಂದ ಕೇಳಿದೆ.

"ನೋಡಿ, ನಾನು ಮನೆಯಿಂದ ಹೊರಟಾಗ ಒಂದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು, ಅದರಲ್ಲಿನ ಮೂರುಸೂರನ್ನು ಜೇಬಿನ ಪರ್ಸಿನಲ್ಲಿಯೂ ಉಳಿದುದನ್ನು ಸೂಟ್‌ಕೇಸಿನಲ್ಲಿಯೂ ಇಟ್ಟಿದ್ದೆ. ಸೆಕೆಂಡ್ ಕ್ಲಾಸ ಪ್ರಯಾಣ. ಪರ್ಸಿನ ಹಣವೆಲ್ಲಾ ಖರ್ಚಾಗಿ ಹೋಯಿತು. ಇಂದು ಬೆಳಿಗ್ಗೆ ಹಣತೆಗೆಯಬೇಕೆಂದು ನೋಡುತ್ತೇನೆ; ಸೂಟಕೇಸೇ ಮಾಯ! ನಿನ್ನೆ ಅದು ಅಲಹಾಬಾದಿನಲ್ಲಿ ಇದ್ದದ್ದು ನನಗೆ ಚೆನ್ನಾಗಿ ನೆನಪಿದೆ. ಪೋಲೀಸರಿಗೆ ವರದಿ ಮಾಡಿದ್ದೇನೆ. ಸ್ಟೇಶನ್‌ಮಾಸ್ತರನಿಂದ ಫೋನು ಮಾಡಿಸಿದ್ದೇನೆ. ನೋಡಬೇಕು ಏನಾಗುತ್ತದೆಂದು. ಆದರೆ ಇದ್ದುದರಲ್ಲೇ ಆನಂದವೆ ಸಂಗತಿಯೆಂದರೆ, ಹೆಂಗುಸರ ಸಾವಿರಾರು ರೂಪಾಯಿಗಳ ಆಭರಣಗಳೂ, ಅಮೇರಿಕಾದಿಂದ ತರಿಸಿದ ನನ್ನ ಎರಡು ಅಮೂಲ್ಯವಾದ ಪುಸ್ತಕಗಳೂ ಮತ್ತು ಬಟ್ಟೆಗಳೂ ಇದ್ದ ದೊಡ್ಡ ಪೆಟ್ಟಿಗೆ ಸುರಕ್ಷಿತವಾಗಿದೆ."

"ನನಗೆ ನಿಮ್ಮಿಂದ ಒಂದು ಕೆಲಸವಾಗಬೇಕಾಗಿದೆ." ಅವರು ಹೇಳುತ್ತ ನಡೆದರು, "ಕಳೆದ ಮಾಲು ಸಿಗುತ್ತದೆಂಬ ಭರವಸೆಯಂತೂ ಇಲ್ಲ. ನಾನು ಮುಂಬಯಿಗೊಂದು, ಮನೆಗೊಂದು ಹೀಗೆ ಎರಡು ತಾರುಗಳನ್ನು ಹಣ ತರಿಸಲಿಕ್ಕಾಗಿ ಮಾಡಬೇಕೆಂದಿರುವೆ: ತಾರುಮನಿಯಾರ್ಡರಿನಿಂದ ಕೂಡಲೇ ಹಣ ಬರುವುದು. ಈಗ ತಾರಿನ ಖರ್ಚಿಗಾಗಿ ನನ್ನ ಹತ್ತಿರ ದುಡ್ಡಿಲ್ಲ. ದಯವಿಟ್ಟು ಐದು ರೂಪಾಯಿ ಕೊಡುತ್ತೀರಾ? ನಾಳೆಯೇ ನಿಮಗೆ ತಿರುಗಿ ಮುಟ್ಟಿಸುವೆ."

"ಇಷ್ಟೇ ಅಲ್ಲವೇ? ನಿಮ್ಮ ಇಷ್ಟು ದೊಡ್ಡ ದುಃಖದಲ್ಲಿ ನನ್ನಿಂದ ಇಷ್ಟು ಸಣ್ಣ ಕೆಲಸವಾಗುವುದೇನು ಮಹಾ! ತೆಗೆದುಕೊಳ್ಳಿ" ಪರ್ಸಿನಲ್ಲಿ ಕೈಹಾಕುತ್ತ ನಾನು ಪುನಃ ಹೇಳಿದೆ: "ನೀವು ತಾರು ಕೊಟ್ಟು, ಎಲ್ಲರನ್ನೂ ಕರೆದುಕೊಂಡು ಇಲ್ಲಿ ಬನ್ನಿ. ಒಂದು ದಿನದ ಮಟ್ಟಿಗೆ ಇಲ್ಲಿಯ ಗೆಸ್ಟ್‌ಹಾವುಸಿನಲ್ಲಿ ನಿಮಗೆ ಉಳಿಯಲು ವ್ಯವಸ್ಥೆ ಆದೀತು. ಹೆಂಗುಸರು ಮಕ್ಕಳು ಪಾಪ, ಸ್ಟೇಶನ್ನಿನಲ್ಲಿ ಹೇಗೆ ಸಮಯ ಹೋದೀತು."

ಅವರು ಅವಸರದಿಂದ ನೋಟನ್ನು ತೆಗೆದುಕೊಳ್ಳುತ್ತ ಹೇಳಿದರು: "ಅವರು ಕೇಳಬೇಕಲ್ಲ, ನನ್ನ ತಾಯಿಯಂತೂ ಬಹಳ ಸಂಕೋಚಿ ಜೀವ. ಅವಳು ಆಗ ತನ್ನ ಆಭರಣವನ್ನೇ ಮಾರಹೇಳಿದಳು. ಇರಲಿ. ತಮ್ಮಿಂದ ಅನಂತ ಉಪಕಾರವಾಯಿತು. ನಾಳೆ ನಾನು ತಪ್ಪದೆ ಸಿಗುತ್ತೇನೆ. ನಮಸ್ಕಾರ."

"ನಮಸ್ಕಾರ!" ನನ್ನ ತಲೆಯಲ್ಲಿ ಅದೇ ವಿಚಾರ. 'ಮಾನವನಿಗೆ ಎಂತೆಂಥ ಪರಿಸ್ಥಿತಿಗಳು ಎದುರಾಗುತ್ತವೆ!'

ಅದೇ ದಿನ ಸಂಜೆಯ ಸಮಯ. ಪುಸ್ತಕಗಳನ್ನು ಬದಿಗೆ ತಳ್ಳಿ ಇನ್ನು ಆಡಲು ಹೋಗಬೇಕೆಂದು ನಾನು ಖುರ್ಚಿಯಿಂದ ಎದ್ದೆ.

"ಹಲೋ ಮಿಸ್ಟರ್," ಎದುರಿಗೆ ವೆಂಕಟೇಶನಾಯ್ಕ. ಅವರು ಆವೇಗದಿಂದ ಕೂಡಿದ ಸ್ವರದಲ್ಲಿ ಒಂದೇ ಉಸುರಿಗೆ ಹೇಳಿದರು: "ದೇವರು ದಯಾವಂತ ಸ್ವಾಮಿ, ಮಾಲು ಸಿಕ್ಕಿತು!"

"ಏನು? ಸಿಕ್ಕಿತು! ಎಲ್ಲಿ? ಹೇಗೆ?" ನಾನು ಉತ್ಕಂಠೆಯಿಂದ ಕೇಳಿದೆ.

"ಅಲಹಾಬಾದ್ ಸ್ಟೇಶನಿನಲ್ಲಿಯೇ ಪೋಲೀಸರು ಹಿಡಿದಿರುವರಂತೆ. ಇನ್ನು ಒಂದೇ ಕೆಲಸವೆಂದರೆ, ಗುರುತು ಕೊಟ್ಟು ಅದನ್ನು ಬಿಡಿಸಿಕೊಳ್ಳುವುದು. ನನ್ನನ್ನು ಅಲಹಾಬಾದಿಗೆ ಕರೆದಿದ್ದಾರೆ."

"ಹಾಗಾದರೆ ನೀವು ಅಲ್ಲಿಗೆ ಹೋಗಬೇಕು."

"ಅಹುದು ಸ್ವಾಮಿ. ನೀವು ಇಷ್ಟೇ ಉಪಕಾರ ಮಾಡಿದ್ದೀರಿ. ಇನ್ನೊಂದು ಕೆಲಸವನ್ನು ನಡೆಯಿಸಿಕೊಡಿ. ನನ್ನ ಹತ್ತಿರ ಕಾಸಿಲ್ಲ. ಮತ್ತೈದು ರೂಪಾಯಿ ಕೊಡಿ. ನಾನು ನಾಳೆ ಅಲಹಾಬಾದಿನಿಂದ ಬಂದವನೇ ಮುಟ್ಟಿಸುವೆ. ಇತ್ತ ತಾರಿನ ಹಣವೂ ಬರಬಹುದು."

ಒಂದುರೂಪಾಯಿಯ ನೋಟೈದನ್ನು ಅವರ ಕೈಯ್ಯಲ್ಲಿಟ್ಟು ಕೇಳಿದೆ: "ನಿಮ್ಮ ಮನೆಯವರು?"

"ಅವರ ಚಿಂತೆ ಬೇಡ." ತುಸು ಅವಸರದಿಂದಲೇ ನಮಸ್ಕರಿಸಿ ಅವರು ನಡೆದರು. ನಾನು ತಿಳಿದೆ: ಗಾಡಿಯು ವೇಳೆಯಾಗಿರಬೇಕೆಂದು.

* * * *

ರಾತ್ರಿಯು ಕಳೆದು ನಾಳೆಯು ಇಂದಾಯಿತು. ಅದೇ 'ನಾಳೆ'ಯು 'ನಿನ್ನೆ'ಯೂ ಆಯಿತು. ಎರಡು ತಿಂಗಳ ಹಿಂದಿನದಿನವೂ ಆಯಿತು, ಅವರ ಪತ್ತೆ ಇಲ್ಲ.

ಅವರ ಕತೆಯು ಸುಳ್ಳಿನ ಕಂತೆ ಎಂದೂ, ಅವರ ನಾಳೆಯ ಗೋಡೆಯ ಮೇಲೆ ಬರೆದ ನಾಳೆಯೆಂದೋ ನನಗೆಲ್ಲಿ ಗೊತ್ತಿತ್ತು?

ವೆಂಕಟೇಶ ನಾಯ್ಕರಿಬ್ಬರೂ ಮಾನವರು. ಆದರೆ, ಅಂತರ ವೆಷ್ಟು?

ಕಲೆಯೂ ಕೌಶಲ್ಯವೂ

(ಸಾಹಿತ್ಯ ಪ್ರಬಂಧ)

ಶ್ರೀ. ಖಾನೋಳಿಕರ ಶ್ರೀಧರರಾಯರು, ಪುಣೆ

★

ಕಲೆಯನ್ನು ಸಹೃದಯ ಸಮಗ್ರವಾಗಿ ಕಂಡು, ಅದರ ಪರಿಣಾಮಸೌಂದರ್ಯದಿಂದ ಆನಂದ ಹೊಂದುವನು. ವಿಮರ್ಶಕ ಆ ಸಮಗ್ರಸೌಂದರ್ಯಕ್ಕೆ ಕಾರಣವಾದ ಸಾಧನ-ಸಲಕರಣೆಗಳ ಹದವರಿತ ಉಪಯೋಗವನ್ನು ಕಂಡು, ಇನ್ನೂ ಹೆಚ್ಚಿನ ಆನಂದವನ್ನು ಅನುಭವಿಸುವನು. ಕಲಾವಿದನ ಹದಗಾರಿಕೆಯೆ ಕೌಶಲ್ಯವೆನಿಸುವುದು.

★

ಯಾವುದೊಂದು ಕಲಾಕೃತಿಯು ಹೇಗೆ ಹುಟ್ಟುತ್ತದೆಂಬುದು ತಿಳಿದ ಮೇಲೆ, ಆ ಕಲಾಕೃತಿಯಲ್ಲಿರುವ ಕೌಶಲ್ಯವನ್ನು ಕಂಡು ಹಿಡಿದು, ಅದು ಸುಂದರವಾಗಿದೆಯೋ ಇಲ್ಲವೋ ಎಂಬುದನ್ನು ನಿರ್ಣಯಿಸಬೇಕಾಗುವುದು. ಕಲಾಕೃತಿಯ ಗುರಿಯು ಆನಂದವೇ. ನೋಡಿದ ಕೂಡಲೇ ಸುಂದರವಾಗಿದೆಯೋ ಇಲ್ಲವೋ ಎಂಬುದು ಪ್ರತಿಯೊಬ್ಬ ರಸಿಕನಿಗೆ ತಿಳಿಯುವ ಮಾತು ನಲುವತ್ತು ಸಾವಿರ ರೂಪಾಯಿ ಕೊಟ್ಟು ಮೋಟಾರ್ ಗಾಡಿಯನ್ನು ಕೊಂಡು, ಅದರಲ್ಲಿ ಅಕ್ಕರದಿಂದ ಕುಳಿತು ಊರೆಲ್ಲ ಮೆರೆದಾಡಿದರೆ, ಆನಂದವಾಗುವುದಲ್ಲ! ಹೌದು. ಅದಕ್ಕೇ ಮೋಟಾರು ತೆಗೆದುಕೊಂಡದ್ದು! ಅದಂತೂ ಸರಿಯೇ! ಇನ್ನೊಂದು ದೃಷ್ಟಿಯಿಂದಲೂ ಆ ಮೋಟಾರ್ ಗಾಡಿಯ ಆನಂದವನ್ನು ಪಡೆಯಬಹುದು: ಅದಕ್ಕೆ ಎಷ್ಟು ಚಕ್ರಗಳು, ಅವುಗಳನ್ನು ಹೇಗೆ ಜೋಡಿಸಿರುತ್ತವೆ, ಎಲ್ಲೆಲ್ಲಿ ಜಕ್ರಗಳನ್ನೂ ಸ್ಪ್ರಿಂಗುಗಳನ್ನೂ ಹಾಕಿದುದರಿಂದ ಅದು ನಡೆಯುವುದಕ್ಕೆ ಇಷ್ಟು ಹಗುರಾಗಿದೆ—ಎಂಬವೇ ಮೊದಲಾದ ಯಾಂತ್ರಿಕ ಕೌಶಲ್ಯಗಳನ್ನು ಕಂಡುಹಿಡಿದರೆ, ಬೇರೊಂದು ತರದ ಆನಂದವಾಗಿ, ನಮ್ಮ ಮೋಟಾರಿನ ಮೇಲಿನ ಪ್ರೀತಿಯು ಇನ್ನಿಷ್ಟು ಹೆಚ್ಚಾಗುತ್ತದೆ. ಅದರಂತೆಯೇ, ಯಾವುದೊಂದು ಕಲಾಕೃತಿಯನ್ನು ನೋಡಿ ಒಮ್ಮೆಲೇ ಆನಂದಪಡುವುದೊಂದು ಭಾಗ. ಇದು ಎಲ್ಲರಿಗೂ ಸಾಧ್ಯವೇ ಆಗಿರುವುದು. ಆದರೆ ಈ ಕಲಾಕೃತಿಯಲ್ಲಿ ಆನಂದವಾಗುವಂತಹ ಭಾಗಗಳು ಎಷ್ಟು, ಅವು ಎಲ್ಲೆಲ್ಲಿ ಹೇಗೆ ಹೇಗೆ ಬಂದಿರುವುವೆಂಬುದನ್ನು ಅರಿತುಕೊಂಡರೆ, ಮೊದಲಿಗೇ ಆದ ಆನಂದವು ಇಮ್ಮಡಿಯಾಗುವುದು—ಇಮ್ಮಡಿಯೇ ಏಕೆ? ಒಳ್ಳೇ ಸುಂದರವಾದ ಕಲಾಕೃತಿಯಿದ್ದರೆ, ನೂರುಮುಡಿಯಾಗುವುದು, ಅಥವಾ ಆ ಆನಂದಕ್ಕೆ ಪಾರವೇ ಇಲ್ಲದಂತಾಗುವುದು. ಆದುದರಿಂದ ಕಲಾಕೃತಿಯಲ್ಲಿ ಹರಿದಾಡುವ ಕೌಶಲ್ಯವನ್ನು ಕಂಡು ಹಿಡಿಯುವುದವಶ್ಯವಾದದ್ದು.

ವೇದಾಂತದಲ್ಲಿ ಪರಮಾತ್ಮಸ್ವರೂಪವನ್ನು ವರ್ಣಿಸುವಾಗ, ಉಪನಿಷತ್ತಿನ ಋಷಿಗಳು ಒಮ್ಮೆ: ಇದೆಲ್ಲ—ಈ ಜಗತ್ತೆಲ್ಲ—ನಾನಾತ್ವದಿಂದ, ವಿವಿಧತೆಯಿಂದ ತುಂಬಿರುವುದೆಂದು ಹೇಳಿರುವರು; ಇನ್ನೊಮ್ಮೆ 'ಈ ಜಗತ್ತೆಲ್ಲ ಒಂದೇ ವಿಧವಾಗಿರುವುದು. "ನೇಹ ನಾನಾಸ್ತಿ ಕಿಂಚನ" ಈ ವಿಶ್ವದಲ್ಲಿ ತೋರುವುದೆಲ್ಲ ಮಾಯೆ. ನಿಜವಾದ ಪರಮಾತ್ಮನೆಂದರೆ ತ್ರಿಗುಣರಹಿತನು, ತ್ರಿಗುಣಾತೀತನು. ಅವನಲ್ಲಿ ಯಾವ ವಿವಿಧತೆಯೂ ಇಲ್ಲ' ಎಂದಿರುವರು ಕಲಾಕೃತಿಯೆಂದರೂ ಒಂದು ಪರಮಾತ್ಮನ ಅವತಾರವೆಂದೇ ತಿಳಿದುಕೊಂಡರೂ ಅಡ್ಡಿಯಿಲ್ಲ. ಇಲ್ಲಿಯೂ ನಿವಿಧತೆಯಲ್ಲಿ ಏಕತ್ವವೂ, ಏಕತ್ವದಲ್ಲಿ ವಿವಿಧತೆಯೂ ಕಂಡುಬರುವುದು. ಒಂದು ಚಿತ್ರವನ್ನು ತೆಗೆದುಕೊಳ್ಳುವಾ. 'ಚಿತ್ರವೆಂದ ಮೇಲೆ ಒಂದು; ಅದರಲ್ಲಿ ವಿವಿಧತೆ ಎಲ್ಲಿಯದು?' ಎಂದರೆ, ಆಹುದು, ಚಿತ್ರವೆಂದರೆ ಒಂದೇ ನಿಜ, ಆದರೆ ಈ ಏಕತ್ವವನ್ನು ಕಲೋಪಾಸಕನು ಒಮ್ಮೆಲೇ ನಿರ್ಮಿಸಿರುವುದಿಲ್ಲ; ನೂರಾರು ಎಳೆಗಳಿಂದ ಕೂಡಿದ ಈ ಚಿತ್ರಸೃಷ್ಟಿಯು ಒಂದಾಗಿ ತೋರಿದರೂ, ಇದರಲ್ಲಿ ವಿವಿಧತೆ ಇದೆ. ಈ ಚಿತ್ರದಲ್ಲಿ ವಿವಿಧತೆ ತೋರಿದರೂ ಆ ಎಲ್ಲ ವಿವಿಧತೆಯ ರಚನೆಯು ಏಕತ್ವವನ್ನೇ ಉಂಟುಮಾಡುವುದು. ನಾನು ನನ್ನ ಚಿಕ್ಕ ಮಗಳಿಗೆ 'ಪಾಟಿಯ ಮೇಲೆ ಚಿತ್ರವನ್ನು ತೆಗೆ' ಎಂದು ಹೇಳಿದೆ ಆಕೆ 'ಯಾವ ಚಿತ್ರ?' ಎಂದು ಕೇಳಿದಳು. 'ಕೊಡೆಯನ್ನು ತೆಗೆ' ಎಂದು ಹೇಳಿದೆ. ಆಕೆ ಒಂದು ವರ್ತುಲವನ್ನು ತೆಗೆದಳು. ಅದಕ್ಕೇ ಆಕೆ ಕೊಡೆಯೆನ್ನುವಳು. 'ಬೊಗರಿಯನ್ನು ತೆಗೆ' ಎಂದರೆ, ಆದೇ ಚಿತ್ರ. ಆಕೆಯ ಮನಸ್ಸಿನಲ್ಲಿ ಬಂದ ರೂಪವನ್ನು ರೇಖೆಯಲ್ಲಿ ತೆಗೆಯಲಾರಳು. ಕಲಾಕೃತಿಯಲ್ಲಿ ಮಾತ್ರ ಕಲೋಪಾಸಕನ ಮನಸ್ಸಿನಲ್ಲಿರುವುದು ಚಿತ್ರದಲ್ಲಿ ಮೂಡುವುದು; ಅವನು ಮೂಡಿಸುವನು. ಅದು ದೇವದತ್ತ ಶಕ್ತಿ. ಇಲ್ಲದಿದ್ದರೆ ಎಲ್ಲರೂ ರೇಖಾಶಿಲ್ಪಿಗಳೂ, ಚಿತ್ರಶಿಲ್ಪಿಗಳೂ, ಮೂರ್ತಿಶಿಲ್ಪಿಗಳೂ, ಕವಿಗಳೂ,

ಕಾಟಕಕಾರರೂ ಆಗುತ್ತಿದ್ದರು. ತನ್ನ ಮನಸ್ಸಿನಲ್ಲಿ ಹೊಳೆದ ರೂಪವನ್ನು ಯಾವುದಾದರೊಂದು ಮಾಧ್ಯಮ (medium)ದಿಂದ ಯಾವುದಾದರೊಂದು ಸಾಧನದಿಂದ—ಶಬ್ದದಿಂದಾಗಲಿ, ಸ್ವರದಿಂದಾಗಲಿ, ಬಣ್ಣದಿಂದಾಗಲಿ, ರೇಖೆಯಿಂದಾಗಲಿ, ಕಲ್ಲಿನಿಂದಾಗಲಿ, ಮಣ್ಣಿನಿಂದಾಗಲೀ—ಕಲೋಪಾಸಕನು, ಸಕಲರಿಗೂ 'ಇದು ಅದೇ ರೂಪು ಆಗಿದೆ' ಎಂಬಂತೆ ಕೌಶಲ್ಯದಿಂದ ತೋರಿಸುವನು. ಅದೇ ಕಲೆ. ಕಲಾಕೃತಿಯಲ್ಲಿ ಮೂರು ಪಾವಟಣಿಗೆಗಳು: ಮೊದಲನೆಯದು ಕಲೋಪಾಸಕನಲ್ಲಿ ಹುಟ್ಟಿದ ವಿಚಾರ (content); ಎರಡನೆಯದು ಯಾವ ಮಾಧ್ಯಮ (medium); ಮೂರನೆಯದು ಸಂಪೂರ್ಣವಾದ ಕಲಾಕೃತಿ (work of art, ಕಲಾಕೃತಿ). ತನ್ನ ಮನದಲ್ಲಿ ಮೂಡಿದ ವಿಚಾರಕ್ಕೆ ಮನದಲ್ಲಿಯೇ ಒಂದು ರೂಪು ಕೊಟ್ಟು ಅದನ್ನು ಬಹಿರಂಗವಾಗಿ ತೋರಿಸುವುದು— ಆ ಕಲಾಕೃತಿಯನ್ನು ನೋಡಿದರೆ. ಕಲೋಪಾಸಕ ಮನಸ್ಸಿನಲ್ಲಿಯ ಭಾವವೇ ರಸಿಕರ ಮನಸ್ಸಿನಲ್ಲಿ ಮೂಡುವಂತೆ ತೋರಿಸುವ ಶಕ್ತಿಗೆ ಕೌಶಲ್ಯವೆಂದು ಕರೆಯುವುದುಂಟು.

ಸರ್ವೋತ್ತಮವಾದ ಕಲಾಕೃತಿಯು ಸರ್ವಜನರಿಗೆ ಆನಂದವನ್ನುಂಟುಮಾಡುವುದರ ಮೊದಲು ಎಷ್ಟೋ ರೂಪಗಳನ್ನು ಹೊಂದಿರುವುದೆಂದು ಕಂಡುಬರುವುದು. ಒಂದು ಸುಂದರವಾದ ಚಿತ್ರವನ್ನು ನೋಡಿರುವಿರಾ? ಅದು ಕಲಾವಿದನ ಕೌಶಲ್ಯದಿಂದ ಸುಂದರವಾಗಿರುವುದು ನಿಜ. ಆದರೆ ಅದು ಒಮ್ಮೆಲೇ ಒಂದೇ ನಿಮಿಷದಲ್ಲಿ ನಿರ್ಮಿಸಿಲ್ಲವೆಂಬುದೂ ಅಷ್ಟೇ ನಿಜವಾಗಿರುವುದು. ಪ್ರತಿಯೊಂದು ಚಿತ್ರದಲ್ಲಿ ಪ್ರಮಾಣದ ಗೆರೆಗಳಿರುತ್ತವೆ. ಚಿತ್ರವು ಪೂರ್ಣವಾದ ಮೇಲೆ, ಚಿತ್ರಕಾರನು ಅವುಗಳನ್ನು ಅಳಿಸುವುದುಂಟು. ಶಿಲ್ಪಿಯು ತನ್ನ ಕಲ್ಲು ಎಂಥ ಪ್ರಕಾರದ್ದಿರುವುದೆಂಬುದನ್ನು ಪರೀಕ್ಷಿಸಿ ಅದನ್ನು ಪ್ರಮಾಣಿಸಿ, ತನ್ನ ಮನಸ್ಸಿನೊಳಗಿನ ರೂಪವನ್ನು ಕಡೆಯುವನು. ಕಡೆಯುವ ಮುಂದೆ ತಪ್ಪಿ ಕಣ್ಣೀ ಹೋದರೆ, ಯಾವನೊಬ್ಬ ವೀರನ ಬದಲು ರಣಜಿತ್‌ಸಿಂಗನ ಪುತ್ಥಳಿಯನ್ನೇ ಕಟೆದು ಸಿದ್ಧಮಾಡುವನು. ಚಿತ್ರಕಾರನಂತೆ ಶಿಲ್ಪಿಯು ಸ್ವತಂತ್ರನಲ್ಲ. ಚಿತ್ರಕಾರನು ಹೆಚ್ಚು ಬಣ್ಣವು ಬಿದ್ದರೆ ಅಳಿಸಲು ಸಮರ್ಥನಾಗಿರುವಂತೆ ಶಿಲ್ಪಿಯು ಆಗಿರುವುದಿಲ್ಲ.. ಕವಿಯು ಬೇಕಾದಷ್ಟು ಬೇಕಾದ ಹಾಗೆ ಅಳಿಸಬಲ್ಲನು. ನೂರಾರು ಪದ್ಯಗಳನ್ನು ಬರೆದು, ಅದರೊಳಗಿನ ಎಂಟೇ ಪದ್ಯಗಳಿಂದ ಒಂದು ಚಿಕ್ಕ ವೀಣಾಕಾವ್ಯವನ್ನು ಮುಂದಿಡುವನು. ವಾಸ್ತುವಿನಲ್ಲಿ ತೆಕ್ಕೆ ಹೆಚ್ಚು ತೆಕ್ಕೆ ಕಡಿಮೆ. ಆದರೂ ಅವರೆಲ್ಲರ ಕೌಶಲ್ಯಕ್ಕೂ ಕೆಲವು ಮುಖ್ಯತತ್ತ್ವಗಳು—ಸಾಮಾನ್ಯತತ್ತ್ವಗಳು—ಇದ್ದೇ ಇರುವುವು. ಅವುಗಳಾವುವೆಂದರೆ: ಒಬ್ಬ ತತ್ತ್ವಜ್ಞಾನಿಯು ಒಂದು ಕಮಲವನ್ನು ನೋಡಿ ಮನಗಂಡ

ಗದುಗಿನಲ್ಲಿ

ಮೇಲ್ತರಗತಿಯ ಊಟ ಹಾಗೂ ವಸತಿಗೃಹ

ದುರ್ಗಾ ಲಾಜ್

ಗದುಗಿಗೆ ಬರುವ ಪ್ರವಾಸಿಕರಿಗೆ ಇನ್ನು ಮೇಲೆ
ಯಾವ ತೊಂದರೆಯೂ ಇಲ್ಲ

ಉತ್ತಮ ಊಟ, ಹೊಸಮಾದರಿಯ ಸ್ನಾನಗೃಹ, ಬೆಳಕು—ಹವೆಯುಳ್ಳ
ಕೋಣೆಗಳು. ಸಹಕುಟುಂಬ ಬಂದವರಿಗೆ ಪ್ರತ್ಯೇಕ ವ್ಯವಸ್ಥೆ.

ನಾವು ನೀಡುವ ಸೌಕರ್ಯಕ್ಕೆ ನೀವು ಕೊಡುವ ಬೆಲೆ ಅತ್ಯಲ್ಪ!
ಅವಶ್ಯ ಸಂದರ್ಶಿಸಿರಿ.

ತತ್ತ್ವಗಳಿವು: ೧. ಯೋಗ್ಯವಾದ ರೂಪದ ಗಾತ್ರ ೨. ಐಕ್ಯ ೩. ವಿವಿಧತೆ ೪. ಸಮರಸತೆ ೫. ಪ್ರಮಾಣ ೬. ಚಲನ ೭. ಸೌಂದರ್ಯ (ಸೂಕ್ಷ್ಮ) ೮. ಸಮಾನತೆ. ಈ ಅಷ್ಟವಿಧದ ಆರ್ಚನೆಯೇ ಕೌಶಲ್ಯವೆಂದೆನ್ನಬಹುದು. ಆಯಾ ಕಲೆಗಳ ಸೂಕ್ಷ್ಮವಾದ ಸವಿಸ್ತಾರವಾದ ಸಾವಿರಾರು ಅಂಶಗಳನ್ನು, ಆಯಾ ಕಲೆಗಳ ಗುರುಗಳು ಬರೆದ ಗ್ರಂಥಗಳಲ್ಲಿಯೂ ಆಯಾ ಕಲೋಪಾಸಕನಲ್ಲಿಯೂ ಕಾಣಬಹುದು.

ಮೊದಲು (೧) ಯೋಗ್ಯವಾದ ರೂಪದ ಗಾತ್ರ. ಯಾವ ಕಲಾವಿದನಾದರೂ ಮೊದಲು ರೂಪ (Form) ಮತ್ತು ಗಾತ್ರ (Size) ಗಳನ್ನು ತನ್ನ ಮನೋಭೂಮಿಕೆಯಲ್ಲಿಯೇ ಬರೆಯುವನು. ತನ್ನ ಕಲ್ಪನೆಯ ಸಾಮ್ರಾಜ್ಯದಲ್ಲಿ ಬರೆದ ಚಿತ್ರವನ್ನೇ ಚಿತ್ರಕಾರನು ಬಣ್ಣದಿಂದಲೂ, ರೇಖೆಗಳಿಂದಲೂ ಬರೆಯುವನು. ವಾಸ್ತುಕಲಾವಿದನು ಕಲ್ಲಿನಿಂದ ಕಟ್ಟುವನು. ಸಂಗೀತಜ್ಞನು ಹಾಡುವನು. ಕವಿಯು ಬರೆಯುವನು. ಕಲ್ಪನೆ ಇಲ್ಲದೆ ಕಲೆಯಿಲ್ಲ. ಇಷ್ಟು ಮಾಡಿ ಮುಗಿಯಿತೆಂದು ತಿಳಿಯಬಾರದು. ತನ್ನ ಚಿತ್ರವು, ತನ್ನ ಮೂರ್ತಿಯು ಎತರ ಬಗ್ಗೆ ಎಂಬುದನ್ನು ತಿಳಿಯದ ಹೊರತು ಅದು ಸತ್ಯಸೃಷ್ಟಿಯೊಳಗಿಳಿಯಲಾರದು. ವಾಸ್ತುವಿನ ಮಾತನ್ನೇ ತೆಗೆದುಕೊಂಡರೆ, ಒಂದು ಗುಡಿಯನ್ನು ಕಟ್ಟುವುದೆಂದರೆ—ಎಲ್ಲಿ, ಪಟ್ಟಣದೊಳಗೋ, ಅರಣ್ಯದೊಳಗೋ? ಎಂಬುದರ ವಿಚಾರ ಮಾಡಿ, ಗುಡಿಯ ಗಾತ್ರವನ್ನು ನಿಶ್ಚಿತವನ್ನಾಗಿ ಮಾಡಬೇಕಾಗುವುದು. ವಿಜಯನಗರದ ಸಾಮ್ರಾಜ್ಯದೇವತೆಯಾದ ಪಂಪಾಪತಿಯ ಮುಂದಿನ ಗೋಪುರವೆಂಥದಿರಬೇಕಾಗುವುದು? ನೋಡಿದರೆ ರುಮಾಲು ಭೂಮಿಗೆ ಬೀಳುವಂತಹದು. ಸಾಮ್ರಾಜ್ಯದಂತೆಯೇ ಭವ್ಯವಾದದ್ದು. ಕರ್ನಾಟಕ ಸಂಸ್ಕೃತಿಯಂತೆಯೇ ವಿಶಾಲವಾದದ್ದು. ಸಾಮ್ರಾಜ್ಯವಳಿದರೂ ಅಳಿಯದಂತಹದು. ವಿಜಯನಗರದ ನರಸಿಂಹನಾದರೋ ಮಳೆ-ಮಿಂಚುಗಳನ್ನು ನುಂಗಿದಂಥವ! ವಿಜಯನಗರದ ಗಣಪತಿಯೋ ಸಾಸಿವೆ ಕಾಳು!! ವಿಜಯನಗರದ ವೈಭವದ ಕುರುಹುಗಳನ್ನು ನೋಡಿದರೂ ವಿಶಾಲತೆ, ಭವ್ಯತೆ, ಅಜರಾಮರತೆಯೇ ಕಂಡುಬರುವುವು. ಹಜಾರರಾಮನ ಗುಡಿಯ ಕಂಭಗಳಾದರೂ ಇದೇ ವಿಶಾಲತೆಯ ಸೂಕ್ಷ್ಮತೆಯನ್ನು ವ್ಯಕ್ತಪಡಿಸುವುವು. ಅದರಂತೆಯೇ ಗುಡಿಯೊಳಗಿನ ಮೂರ್ತಿಯನ್ನಾದರೂ ಕೆತ್ತಬೇಕಾಗುವುದು. ಈ ವಿಷಯದಲ್ಲಿಯೂ ರೂಪ-ಗಾತ್ರಗಳ ವಿಚಾರವಾಗಲೇ ಬೇಕಾಗುವುದು. ಗುಡಿಯೊಳಗಿನ ಮೂರ್ತಿಯು ಸಹಜ ಮನೋಹರವಾಗಿ ಕಾಣಬೇಕಾದಂಥ ಮೂರ್ತಿಯನ್ನು ಕಲಾಶಿಲ್ಪಿಯು ಮಾಡಬೇಕಾಗುವುದು. ಅದರಲ್ಲಿಯೂ ಸಮಾಜದ ವಿಚಾರವೂ ಇದ್ದೇಯೇ ಇದೆ. ಮೇಜಿನ ಮೇಲೆ ಇಡುವಂಥ ಮೂರ್ತಿಯು ಬೇಕಾದರೆ, ಅಲ್ಲಿಯೂ ಸಹಜ ಮನೋಹರವಾಗಿಯೇ ಕಾಣುವ ರೂಪ-ಗಾತ್ರಗಳ ಮೂರ್ತಿಯು ಇರಬೇಕಾಗುವುದು. ಅಲ್ಲಿ ಸಾಸಿವೆಕಾಳು ಗಣಪತಿಯ ಪ್ರತಿಮೆಯು ಯಾತಕ್ಕಾಗಿ ಬಾರದು. ಅದರೊಳಗೂ ಪಂಚಾಯತನ ವಿದ್ದರೆ, 'ವಾಮಾಂಕಾರೂಢ' ಸೀತೆಯಿದ್ದರೆ, ರಾಮನನ್ನು ಸ್ವಲ್ಪ ಎತ್ತರ ಮಾಡಬೇಕು. ಸೀತೆಯು ತೊಡೆಯ ಮೇಲೆ ಕುಳಿತಿದ್ದರೂ ರಾಮನಿಗಿಂತ ಎತ್ತರವಿರಬಾರದು. ರಾಮನಿಗೆ ಸ್ವಲ್ಪ ಸಣ್ಣ ಕಿರೀಟ, ಸೀತೆಗೆ ಸ್ವಲ್ಪ ಗಿಡ್ಡ ತನ ಕೊಟ್ಟು, ಅವರವರ ರೂಪ-ಗಾತ್ರಗಳನ್ನು ಕಟ್ಟಬೇಕು. ಮುಂದೆ ನಿಂತ ಹನುಮಂತನಾದರೂ ರಾಮನಿಗೆ ಒಪ್ಪುವಂತೆ! ಇಲ್ಲದಿದ್ದರೆ ಎಂಟುಮೊಳದ ಬಂಟನನ್ನು ತೆಗೆದುಕೊಂಡು ಏನು ಮಾಡುವುದು....ಆರುಮೊಳದ ಯಜಮಾನನಿಗೆ! ಸಂಗೀತಜ್ಞನಿಗಾದರೂ ತನ್ನ ಸ್ವರದ ರೂಪ (Pitch) ಗಾತ್ರ (Tone) ಗಳನ್ನು ಜನರಿಗೆ—ಎಂದರೆ ಆಯಾ ಸ್ಥಾನದ ಜನರಿಗೆ, ಥೇಟರಿನಲ್ಲಿ, ಮನೆಯಲ್ಲಿ ಒಡ್ಡೋಲಗದಲ್ಲಿ, ಬೈಲಲ್ಲಿ, ನಿಂತ, ಸುಖಾಸನರಾದ, ಕುಳಿತ ಜನರಿಗೆ—ಸುಲಭವಾಗಿ ಕೇಳಿಸುವಂತೆ ತಂತಿಗಳನ್ನು ಮಾಟ ತನ್ನ ಸ್ವರವನ್ನು ತೆಗೆಯಬೇಕಾಗುವುದು. ಇಷ್ಟು ರೂಪ-ಗಾತ್ರಗಳ ಸಿದ್ಧತೆಯಾದ ಮೇಲೆ ಮುಂದಿನ ಸರ್ಕಸು. ಇದರಲ್ಲಿಯೇ ತಪ್ಪಿದರೆ, ಸಮಾಜದಲ್ಲಿ ಹಾಸ್ಯರಸವುಂಟಾಗದೆ ಇರದು.

ಕಲೋಪಾಸಕನ ಕೌಶಲ್ಯದ ಎರಡನೆಯ ಎಳೆಯೆಂದರೆ (೨) ಐಕ್ಯ ಮತ್ತು (೩) ವಿವಿಧತೆ. ಕಲಾವಂತನು ತಾನು ಅನುಭವಿಸಿದ

೧೦೦೦ ರೂಪಾಯಿ ಬಹುಮಾನ

೪೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿನ ವೈದ್ಯ

ವಿ ಎಸ್ ಕಾಪಸೇ ಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ನೂತ್ರವಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ತ್ರೀತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಜೀನ್ಸಾಗಿ ಸುಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಚಾಬ ಮಿಶ್ರಿ-ವಜ್ರಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ಅಳತೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ತೀಕ್ಷ್ಣಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: ವಿ. ಎಸ್. ಕಾಪಸೇ ಮು. ಪೋ. ಮಿರಜ

ಸರ್ವೋತ್ತಮವು ವಿಚಾರವನ್ನಾಗಲಿ (Content), ತಾನು ನೋಡಿದ ಸೌಂದರ್ಯಾತಿರೇಕ (Form)ದ ರೂಪವನ್ನಾಗಲಿ ಪ್ರದರ್ಶಿಸುವನು. ಅದೇ ಅವನ ಕಲಾಕೃತಿ. ಅದು ಸಕಲರಿಗೆ ಆನಂದವನ್ನೀಯುವಂತೆಯಾಗಿರಬೇಕು, ಮತ್ತು ಇಂದ್ರಿಯಗಳಿಗೆ ಗೋಚರವಾಗಿರಬೇಕು. ಎಂದಮೇಲೆ ಅದರಲ್ಲಿ ತನ್ನ ಭಾವದ ವಿವಿಧತೆಯೂ ತುಂಬಿರಬೇಕು, ತನ್ನ ವಿಚಾರದ ಐಕ್ಯವೂ ತುಂಬಿರಬೇಕು. ಅಂದರೇನೇ ಈ ಕಾರ್ಯವು ಸಾಧ್ಯವಾಗುವುದು. ಸರ್ವೋತ್ತಮವಾದ ಕಲಾಕೃತಿಯನ್ನು ಈ ಎರಡೂ ಅಂಗಗಳಿಂದ ಅನುಭವಿಸಿದರೆ, ಅದರ ರಸವು ನಮಾತ್ಮದಲ್ಲಿ ಮೂಡುವುದು. ವಿವಿಧತೆಯೂ ಐಕ್ಯವೂ ಸೌಂದರ್ಯನಾಣ್ಯದ ಎರಡು ಮೋರೆಗಳು. ಎರಡೂ ಕೂಡಿ ಒಂದು. ವಿವಿಧತೆ ಇಲ್ಲದಿದ್ದರೆ ನಮ್ಮ ಆತ್ಮಕ್ಕೆ ಸಿಗುವ ಚಲನವು ಸಿಕ್ಕಲಾರದು. ಸಂಗೀತಜ್ಞನು ಒಂದೇ ಒಂದು ಸ್ವರ ಹಾಡಿದರೆ, ಅದು ಬೇಸರಿಕೆ ಆಗುವುದು. ಬೇಸರಿಕೆಯೆಂಬುದು ಕಲೆಗೆ ಬರ್ಹಣ. ಒಂದೇ ಹಾಡು ಒಂದೇ ಸ್ವರದಲ್ಲಿ ಒಂದೇ ಸಮನೆ ಹಾಡಿದರೆ, ಅದರಲ್ಲಿ ವಿವಿಧತೆ— ತಾನು, ಖಟಕಾ, ಗಿರಡಿ, ಆಲಾಪ— ಮುಂತಾದ ಅಂಗಗಳು—ಇರದಿದ್ದರೆ, ಅದು ಶ್ರಾವಣದ ಮಳೆಯಂತೆ ಮನಸ್ಸನ್ನು ರೊಜ್ಜಿನಲ್ಲಿ ಮುಳುಗಿಸದೆ ಬಿಡದು. ಕಲೆಯು ಮುಂಗಾರಿ ಮಳೆಯಂತೆ—ಮೋಡ, ಸಿಡಿಲು, ಮಿಂಚು ಆಣೇಕಲ್ಲು, ಮಳೆಯ ಜಡಿತ, ಕಾಮನ ಬಿಲ್ಲು, ಮತ್ತೆ ಬಿಸಿಲಿನ ನಗೆ!—ಹೀಗಿರಬೇಕು ನಾಟಕದಲ್ಲಿ ಒಬ್ಬನೇ ವಿದೂಷಕ ಬಂದು ನಗಿಸಿದರೆ ಆಗದು ಅರಸ ಬೇಕು, ಅರಸಿ ಬೇಕು, ಮದುವೆ ಬೇಕು, ಪ್ರೇಮ ಬೇಕು, ಕೊಲೆ ಬೇಕು. ಶೃಂಗಾರದ ಜೊತೆಗೆ ಹಾಸ್ಯ ಬೇಕು, ವೀರರ ಜೊತೆಗೆ ಭಯಾನಕ ಬೇಕು, ರೌದ್ರದ ಜೊತೆಗೆ ಕರುಣ ಬೇಕು ಇವಿಲ್ಲದಿದ್ದರೆ ನಾಟಕವು ನೀರಸವಾಗುವಂತೆ ಯಾವ ಕಲಾಕೃತಿಯ ಗತಿಯೂ ಆಗುವುದು. ಈ ವಿವಿಧ ರೂಪಗಳಲ್ಲಿ ರಸಗಳಲ್ಲಿ ಕಲೋಪಾಸಕನ ತತ್ತ್ವವು ಮುತ್ತಿನ ನೀರಿನಂತೆ ಹೊಳೆಯುತ್ತಲಿರಬೇಕು. ಇಲ್ಲದಿದ್ದರೆ— ವಿವಿಧತೆಯಲ್ಲಿ ಐಕ್ಯವಿಲ್ಲದಿದ್ದರೆ— ದೀಪವಿಲ್ಲದ ನಿಬ್ಬಣದಂತೆ ಅರ್ಥವಿಹೀನವಾಗುವುದು ಒಂದೇ ಒಂದು ವಿಚಾರದ ಬಾರು ಬಂದೂಕಿನೊಳಗಿಂದ ಹೋದರೆ, ಬರೇ ದೊಡ್ಡದೊಂದು ಅರ್ಥವಿಲ್ಲದ ಧ್ವನಿಯಾಗುವುದು. ಕಲಾಕೃತಿಯ ಮಾತು ಬಂದೂಕಿನ ಗುಂಡಿನಂತಿರುವುದಿಲ್ಲ. ದೀವಳಿಗೆಯೊಳಗೆ ಹಾರುವ ಹೂವಿನ ಕುಡಿಕೆಯಂತಿರುವುದು. ಒಂದು ಹಸುರು, ಒಂದು ಕೆಂಪು, ಒಂದು ಹಳದಿ, ಒಂದು ನೀಲಿ. ಎಲ್ಲದರಲ್ಲಿಯೂ ಬೆಳಕು ತುಂಬಿರಬೇಕು. ನೋಡುವವರಿಗೆ ತರತರದ ಹೂವಿನ ಗಿಡದಂತೆ ಕಂಡಿರಬೇಕು. ಇಲ್ಲದಿದ್ದರೆ ಥೋತರದೊಳಗೆ ಹೊಕ್ಕು ಓಡಾಡಿಸುವ ಚುಚುಂದ್ರಿಯಂತೆ, ಮನಸ್ಸಿಗೆ ಸ್ವಲ್ಪ ಮೋಜು ಎನಿಸಿದರೂ ಆತ್ಮನಿಗೆ ಅದೊಂದು ಉಪವಾಸವೇ ಸೈ.

ಇನ್ನು ಮೇಳದಲ್ಲಿ ಬರುವ ಕೌಶಲ್ಯದ ಗುಣಗಳೆಂದರೆ: (೪), (೫), (೮), ಸಮರಸತೆ, ಪ್ರಮಾಣ, ಮತ್ತು ಸಮಾನತೆ. ಹೀನ ತರದ ಕಲಾಕೃತಿಯಾದ ಸುಳುವಿನ ಚಿತ್ರ (Design)ದಲ್ಲಿಯೂ ಕೂಡ ಪ್ರಮಾಣವಿರಬೇಕಾಗುವುದು. ಹೂಚಿತ್ರದ ಅಂಚು ಸೀರೆಗೆ ಹಾಕುವುದಿದೆ ಒಳ್ಳೆಯದು, ಅದರಲ್ಲಿ ಯಾವ ಪ್ರಮಾಣ (Proportion) ಇರಬೇಕೆಂಬುದನ್ನು ನಿಶ್ಚಯಿಸದೆ, ಅರ್ಧಸಿರೆಯೇ ಅಂಚಾಗುವಂತೆ ಪ್ರಮಾಣವಿಟ್ಟರೆ ಸೀರೆ ಕೆಟ್ಟು ಹೋಗುವುದು. ಹೂಚಿತ್ರದಲ್ಲಿಯೇ ಈಗತಿಯಾಗುವುದೆಂದ ಮೇಲೆ, ಒಡ್ಡೋಲಗದಂಥ ಸುಂದರವಾದ ಕಟ್ಟಡದಲ್ಲಿ ಎಷ್ಟು ಪ್ರಮಾಣ ಬುದ್ಧಿ ಇರಬೇಕಾಗುವುದೆಂಬುದನ್ನು ಊಹಿಸಬೇಕು. ರಾಜನ ಸಭಾಸ್ಥಾನದಲ್ಲಿ ಸಭೆಯ ಜನರಿಗೆ ಎಷ್ಟು ಜಾಗ (Space) ವಿರಬೇಕು, ರಾಜನಿಗೆ ಎಷ್ಟು, ರಾಜನ ಪರಿವಾರಕ್ಕೆ ಎಷ್ಟು, ಚಿತ್ರಗಳಿಗೆ ಎಷ್ಟು, ಗೊಂಬೆಗಳಿಗೆ ಎಷ್ಟು, ಹಾದಿಗಳಿಗೆಷ್ಟು?—ಇವೇ ಮುಂತಾದ ಪ್ರಮಾಣಗಳನ್ನಿಟ್ಟ ಒಡ್ಡೋಲಗವು ನೋಡಲಿಕ್ಕೆ ಮನೋಹಾರಿಯಾಗುವುದು. ಅದರ ಸುತ್ತುಮುತ್ತಲಿರುವ ಉಪವನವಾದರೂ ಪ್ರಮಾಣಬದ್ಧವಾಗಿರಬೇ ಬೇಕು. ಇಲ್ಲದಿದ್ದರೆ ಉಪವನವೇ ಒಂದು ಹರದಾರಿಯಾಗಿ ಒಡ್ಡೋಲಗವೇ ಒಂದು ಸಣ್ಣಗುಡಿಸಲಿನಂತಿದ್ದರೆ, ಮನಸ್ಸಿಗೆ ನಿರಾಶೆಯಾಗುವುದು. ಚಿತ್ರಕಲೆಯಲ್ಲಿಯೂ ಜಾಗೆಯ ಪ್ರಮಾಣವಿರುವುದು. ಒಂದು ಚಿತ್ರವನ್ನು ಸೂಕ್ಷ್ಮವಾಗಿ ನೀರಿಕ್ಷಿಸಿದರೆ, ಕಣ್ಣಿಗೆ ನೋಡಲಿಕ್ಕೆ ಎಷ್ಟು ಸ್ಥಾನವು ಬೇಕೋ ಅಷ್ಟೇ ಸ್ಥಾನವನ್ನು ಕಣ್ಣಿಗೆ ವಿಶ್ರಾಂತಿಯನ್ನು ಪಡೆಯಲಿಕ್ಕೆ ಬರಿಯದಾಗಿ ಇಡಬೇಕಾಗುವುದು. ಬರೇ ಚಿತ್ರವೇ ನೋಡಿದಲ್ಲೆಲ್ಲ ಇದ್ದರೆ ಮಳಲಿನಲ್ಲಿ ಹೋಗಲಿಕ್ಕೆ ಕುದುರೆಯು, ಹಿಂದೆಗೆಯುವಂತೆ, ಕಣ್ಣಿನ ಬೊಂಬೆಯೂ ಆಡಲಿಕ್ಕೆ ಹಿಂದೆಗೆಯುವುದು. ಸಂಗೀತದಲ್ಲಿಯೂ ಎಷ್ಟು ತಾಳಗಳೋ ಅಷ್ಟಕ್ಕೆ ಪ್ರಮಾಣಬದ್ಧ ಕಾಲಗಳೂ ಇರಬೇಕಾಗುವುದೆಂಬುದನ್ನು ನೋಡಬೇಕಾಗುವುದು. ಪ್ರಮಾಣಬದ್ಧವಾದ ಕಲಾಕೃತಿಯಲ್ಲಿಯೇ ಸಮಾನತೆ ಕಂಡುಕೊಳ್ಳುವುದು. ಒಂದು ಚಿತ್ರದಲ್ಲಿ ಎಷ್ಟು ಬರಿಪ, ಎಷ್ಟು ಬರಿಯದು ಎಂಬುದಕ್ಕೆ ಪ್ರಮಾಣವೆನ್ನಬೇಕು. ಚಿತ್ರದಲ್ಲಿಯ ರೂಪಗಳಲ್ಲಿಯ ಪ್ರಮಾಣಕ್ಕೆ ಸಮಾನತೆ (Symetry) ಎಂದು ಅನ್ನಬೇಕು. ಇವು ಒಂದೇ ನಾಣ್ಯದ ಎರಡು ಮಗ್ಗಲುಗಳು. ಒಂದು ಇದ್ದರೆ ಇನ್ನೊಂದು ಇರಲೇ ಬೇಕು. ಇವೆರಡರಲ್ಲಿ ಅಡಕವಾಗಿರುವುದೆಂದರೆ ಸಮರಸತೆ. ಪ್ರಮಾಣಬದ್ಧವಾದ ರಸಗಳಿದ್ದರೇ ನಾಟಕವು ರಮ್ಯವಾಗುವುದು ನಾಟಕದಲ್ಲಿ ಬರೇ ಶೃಂಗಾರವಿದ್ದರೂ ಬೇಸರಿಕೆ; ಬರೇ ಹಾಸ್ಯಗಳಿದ್ದರೂ ಬೇಸರಿಕೆ. ಚಿತ್ರದಲ್ಲಿ ಒಂಥೇ ಬಣ್ಣವಿದ್ದರೆ ನಡೆಯುವುದಿಲ್ಲ. ತರತರದ ಬಣ್ಣಗಳ ಒಂದಕ್ಕೊಂದು ಆಗುವ ಹೊಂದಿಕೆಗೇ ಸಮರಸತೆ (harmony) ಎಂದು ಹೆಸರು.

ಇನ್ನು ಮುಂದಿನದೆಂದರೆ (೬) ನೆಯದು. ಚಲನ (vivacity) ಯಾವುದೊಂದು ಕಲಾಕೃತಿಯ ಮುಖದ ಮೇಲೆ ಹೊಸ ಹೂವಿನ ಮುಖದಲ್ಲಿರುವ ನಾವೀನ್ಯ, ನೊಬಗು, ಹಾಸ್ಯ ಇರಬೇಕಾಗುವುದು. ಇದಕ್ಕೇ ಬ ೆ ಪ ಗ ಳ ಲ್ಲಿ (ಹೊಸತನವೆಂದೆನ್ನುವರು. ಯಾವುದೇ ವಿಷಯವಾಗಿರಲಿ, ಅದರಲ್ಲಿ ನಾವೀನ್ಯವು ಇದ್ದು, ಅದನ್ನು ಬರೆಯುವ ರೀತಿಯಲ್ಲಿ ಚಲನ, ಜೀವಿತವಿಲ್ಲದಿದ್ದರೆ ಅದು

ಮನೋಹರವಾಗಲಾರದು. ಅದರಂತೆಯೇ ಯಾವ ಕಲಾಕೃತಿಯಲ್ಲಿಯೂ ಒಂದು ನವೀನವಾದ, ಒಂದು ಹೊಸತಾದ ಬಗೆಯಿರಬೇಕು. ಇದು ಹೊರಗಿನಿಂದ ತಂದು ಹಚ್ಚುವ ಬೇಗಡೆಯಲ್ಲ; ಇದು ಕಲಾವಂತನ ಜೀವನದ ಕುರುಹು. ಜೀವವಿಲ್ಲದೆ ಬರೆಯುವವರೆಷ್ಟು ಜನರು ಈಗ? ಜೀವನವಿಲ್ಲದ ಬರೆಹಗಳ ಕೋಲಾಹಲವೇ ಉಂಟಾಗಿರುವುದು. ಜೀವನವಿದ್ದರೆ ಸಾಕು, ರೀತಿಯು ತನ್ನಿಂದ ತಾನೇ ಉದಯಿಸುವುದು. ಕಾರ್ಲಾಯಿಲನ ಬರೆಹಗಳಲ್ಲಿಯೂ ಜೀವನ ಉಂಟು. ರಸ್ಕಿನ್ನನ ಬರೆಹಗಳಲ್ಲಿಯೂ ಜೀವನ ಉಂಟು. ಒಬ್ಬನ ಬರೆಹಗಳಲ್ಲಿ ಭಾಷೆಯೆಂದರೆ ಈಸದಾರ್ಢ್ಯ! ಅದು ಜೀವನದ ದುಮ್ಮಿಕ್ಕುವ ತೆರೆಗಳನ್ನು ಅನುಸರಿಸಬೇಕು. ಭಾಷೆಯಿದ್ದರೂ ಸರಿಯೇ; ಇಲ್ಲದಿದ್ದರೂ ಜೀವನದ ತೆರೆಗಳು ಒಂದರಮೇಲೊಂದು ಅಪ್ಪಳಿಸಿ ಭಾಷೆಯನ್ನುಂಟು ಮಾಡುವುವು ಕಾರ್ಲಾಯಿಲನ ವ್ಯಾಖ್ಯಾನಗಳಲ್ಲಿ. ಶೆಕ್ಸಪಿಯರನ ಸರ್ವೋತ್ಕೃಷ್ಟವು ಕಲಾಕೃತಿಯಾದ ಹ್ಯಾಮಲೆಟ್ ನಾಟಕದಲ್ಲಿ, ಹ್ಯಾಮಲೆಟ್‌ನ ಕೆಲವು ಭಾಷಣಗಳಲ್ಲಿಯು ವಿಚಾರವು ಭಾಷೆಯ ಕಟ್ಟುಗಳ ದಡಗಳನ್ನೊಡೆದು ಹರಿದಾಡುತ್ತಿದೆ. ವಿಚಾರದ ಭಾರದಿಂದ ಭಾಷೆಯು ಪುಡಿಪುಡಿಯಾಗುವುದನ್ನು ನೋಡುವುದಿದ್ದರೆ ಹ್ಯಾಮಲೆಟ್ಟನ ಭಾಷಣಗಳನ್ನು ಓದಬೇಕು. ಆದರೆ ರಸ್ಕಿನ್ನನ ಭಾಷೆಯು ಮಾತು ಹಾಗಲ್ಲ. ಅಲ್ಲಿ ವಿಚಾರ ಮತ್ತು ಉದ್ಗಾರ (Impression and expression) ಗಳ ಮಧುರ ಸಂಗಮದಂತೆ ರೀತಿ ಮಧುರವಾದದ್ದು, ನುಣುಪಾದದ್ದು, ಜಿನುಗಾದದ್ದು. ವಿಚಾರಜೀವನವಿಲ್ಲದೆ ಭಾಷೆಯ ಕಾರಂಜಿಯು ಎಷ್ಟು ಪುಟಿದರೇನು? ಜೀವನದ ಝರಿಯಿಂದ ತುಂಬಿ ನುಣುಪಾಗಿ ದಿನ್ನೆಯಿಂದ ಮಂಜುಳವಾಗಿ ಹರಿಯುವ ತೊರೆಗೆ ಸಮಾನವೇ? ಜೀವನವೇ ಚಲನದ ಕುರುಹು. ಇದು ಸೌಂದರ್ಯರೂಪವಾಗಿದ್ದರೂ ಅದರಲ್ಲಿ ಅನುಪಮೇಯವಾದ ತೇಜವೊಂದು, ಸೂಕ್ಷ್ಮ ತೇಜವೊಂದು, ಬೆಳುದಿಂಗಳಿನ ಅಮೃತದಂತೆ ಹರಿಯುತ್ತಲಿರುತ್ತದೆ. ಅದೇ ಜೀವನ.

ಇನ್ನು ಉಳಿದದ್ದೆಂದರೆ ಕೌಶಲ್ಯದ ಶಿಖರವಾದದ್ದು. ಮುಕುಟ ಮಣಿಯಾದದ್ದು. (೮) ಸೂಕ್ಷ್ಮಸೌಂದರ್ಯ (finish). ಇದು ಕಲಾವಿದನ ಆತ್ಮವನ್ನೇ ತೋರಿಸುತ್ತದೆ. ಒಂದು ಚಿತ್ರವನ್ನು ಬರೆದು ಒಬ್ಬ ಚಿತ್ರಕಾರನ ಮುಂದೆ ಇಟ್ಟು ನೋಡಿರಿ. ಅವನು ಅದನ್ನು ನೀರೀಕ್ಷಿಸುವನು. ಅವನಿಗೆ ಒಮ್ಮೆಲೇ ಅದು ಒಂದು ಮುದ್ರೆಯನ್ನು ಕೊಡುವುದು. ಅದನ್ನು ಧೇನಿಸಿ ಒಂದು ಕುಂಚವನ್ನು ಸ್ವಲ್ಪ ಬಣ್ಣದಿಂದ ಒರಸಿ, ಎಲ್ಲಿಯೋ ಒಂದು ಸ್ವಲ್ಪ ತೀಡುವನು. ಮೊದಲು ಇದ್ದ ಚಿತ್ರಕ್ಕೂ ಈಗಿನದಕ್ಕೂ ಅಂತರವೆಷ್ಟು? ಅದೇ ಚಿತ್ರವು ಇದು ಎಂದರೆ— ಅನ್ನಬೇಕೋ ಇಲ್ಲವೋ— ಎನ್ನುವಷ್ಟು ಅಂತರವಿರುವುದು. ಕಟ್ಟಕಡೆಯ ಸೂಕ್ಷ್ಮವಾದದ್ದೊಂದು ಸ್ವರ, ಒಂದು ಬಣ್ಣದ ಒಂದು ಬರೇ ಟಮ್ಮು, ಅದರಲ್ಲಿಯೇ ಕಲೋಪಾಸಕನ ಕೌಶಲ್ಯದ ಕೊನೆಯನ್ನು ನೋಡಬಹುದು. ತನ್ನ ಕೌಶಲ್ಯದ ಅನುಭವದ ಒಂದು ಬಿಂದುವನ್ನು ಕೊಟ್ಟು, ಹಾಳಾದ ರೂಪಕ್ಕೆ ಸೌಂದರ್ಯದ ಆಭರಣವನ್ನು ತೋರಿಸುವನು ಕಲೋಪಾಸಕನು. ಈ ಸೂಕ್ಷ್ಮ ಸೌಂದರ್ಯದರ್ಶನವೇ ಸಾಕ್ಷಾತ್ ಪರಮೇಶ್ವರನಿತ್ತ ಪ್ರತಿಭೆಯ ದಾನವು. ನೆಪೊಲಿಯನ್ನನಿಗೆ ರಣಾಂಗಣದಲ್ಲಿ ಹೋದಕೂಡಲೇ ಫ್ರೆಂಚರಿಗಳ ವ್ಯೂಹದಲ್ಲಿಯ ಹುಳುಕುಗಳು ಒಡೆದು ಕಾಣುತ್ತಿದ್ದುವಂತೆ. ಇವ್ವರಿಂದಲೇ ಅವನಿಗೆ ಪ್ರತಿಯೊಂದು ಯುದ್ಧದಲ್ಲಿ ಜಯವು ಕಟ್ಟಿಟ್ಟದ್ದೇ ಇರುತ್ತಿತ್ತು. ಅದೇ ಮಾತು ಕಲೋಪಾಸಕನದು. ಅವನು ಯಾವುದೊಂದು ಕೃತಿಯನ್ನು ನೋಡಿದ ಕೂಡಲೆ, ಸೌಂದರ್ಯಸ್ಥಾನದಲ್ಲಿಯ ಹುಳುಕುಗಳು ಎದ್ದು ತೋರುವುವು ಅವನ ದೃಷ್ಟಿಗೆ. ಅವುಗಳನ್ನಷ್ಟೇ ತಿದ್ದಿದರೂ ಸಾಕು; ಆದೊಂದು ಸೌಂದರ್ಯ ದೇವತೆಯನಗೆಯಂತೆ ಹೊಳೆಯುವುದು. ಇದೇ ಮುಖ್ಯ. ಏನು? ಕಲೋಪಾಸಕನ ಕಲಾದೃಷ್ಟಿ (vision). ಇದು ದೇವರಿಂದರೇ ಕೊಟ್ಟದ್ದು. ದೇವರು ದಯೆಪಾಲಿಸದಿದ್ದರೆ— ಇಲ್ಲ— ಇಷ್ಟೇ.

ಕೌಶಲ್ಯವು ಬಹಿರಂಗವಾದದ್ದೇ ಎಂದು ಹೇಳಿಲ್ಲ. ಅದೂ ಅಂತರಂಗದಿಂದಲೇ ಹೊರಹೊಮ್ಮುವದು. ಕೌಶಲ್ಯವು ಕಷ್ಟಸಾಧ್ಯವಾಗಿರುವುದೇನೋ ನಿಜ. ಆದರೂ ದೇವರಿಂದ ಕೊಡಲ್ಪಡುವ ಪ್ರತಿಭಾಸಾಮರ್ಥ್ಯವಿಲ್ಲದಿದ್ದರೆ, ಎಷ್ಟು ಪರಿಶ್ರಮಪಟ್ಟರೂ ಕಲೆಯು ಸಾಧ್ಯವಲ್ಲವೆಂದೇ ಅದರ ವೈಶಿಷ್ಟ್ಯ. ಕವಿತೆಗಳನ್ನು ಮಾಡುವ ವಿಶ್ವವಿದ್ಯಾಲಯಗಳನ್ನು ಕಟ್ಟಿಸಿದರೂ ವ್ಯರ್ಥವೇ. ಕಲಾದೃಷ್ಟಿಯಿಂದ ವ್ಯರ್ಥವೇ. ವಿಶ್ವವಿದ್ಯಾಲಯಗಳ ಬಂಧನಗಳಿಂದ ಬಲು ದೂರವಾಗಿ ಹುಟ್ಟುವನು ಕವಿ—ಒಂದು ಅರಣ್ಯದಲ್ಲಿ, ಒಂದು ನಿರ್ಜನವಾದ ಜೀವನದ ಸ್ಥಳದಲ್ಲಿ. ಅಲ್ಲಿ ಅವನು ತನಗೆ ದೇವರು ದಯೆಪಾಲಿಸಿದ ಸಾಮರ್ಥ್ಯವನ್ನು ಕೊನೆಗಾಣಿಸುವನು. ವಿಶ್ವವಿದ್ಯಾಲಯಗಳು ಬಹಳಾದರೆ ಕೌಶಲ್ಯವನ್ನು ಕಲಿಸಬಲ್ಲವು. ಆದರೆ ಪ್ರತಿಭಾವಂತನಾವ ಕಲಾಶಾಲಿಯು ಇರುವ ಸ್ಥಳವೇ ಒಂದು ವಿಶ್ವವಿದ್ಯಾಲಯವಾಗುವುದು. ಸಾಯೋಧ್ಯಾ ಯತ್ರ ರಾಘವಃ!!!

ಮುಂಬೈ ಸರಕಾರದಿಂದ ಮನ್ನಣೆ ಪಡೆದ

ಒಂದೇ ಒಂದಾದ

ಕರ್ನಾಟಕ ಹೊಲಿಗೆಯ ವಿದ್ಯಾಲಯ

ಸರಕಾರೀ ಸರ್ಟೀಫಿಕೇಟಿಗಾಗಿ ಅಭ್ಯಾಸಮಾಡುವವರು ಆಗಸ್ಟ್ ತಿಂಗಳೊಳಗಾಗಿ ಪ್ರವೇಶಪಡೆಯಿರಿ. ಶಿಕ್ಷಕ-ಶಿಕ್ಷಿಕೆಯರು ಇವರ ಲಾಭ ಪಡೆಯಬೇಕು.

ವಿಶೇಷ ಮಾಹಿತಿಗಾಗಿ ಒಂದಾಣೆ ಟಿಕೇಟು ಕಳಿಸಬೇಕು.

ಕರ್ನಾಟಕ ಹೊಲಿಗೆಯ ವಿದ್ಯಾಲಯ

ಗಾಂಧೀಚೌಕ, ಧಾರವಾಡ

ಧನ್ಯನಹೆ ಮುದ್ದಣನೆ !

ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ.ಎ. ಹೈದರಾಬಾದ

★

೧

ತಿರುಳುಗನ್ನಡ ನುಡಿಯ ಸಿರಿಯರಳುಗಳನಾಯ್ದು,
ಪುರುಳೊಂದಿ ಪೊಚ್ಚಪೊಸ ಮಾಲೆಗೈದು,
ಕನ್ನಡಾಂಬೆಯ ಪದಕೆ ಭಕುತಿಯಲಿ ಮಣಿದಂದು
ಧನ್ಯನಹೆ ಮುದ್ದಣನೆ ಮುಡಿಪು ಗೈದು !

೨

ಎತ್ತಿದಳು ನಲ್ವಾಯಿ ವರದಹಸ್ತದಿ ಸರವ
ಸಸ್ಯವರ್ಣದಿ ಪೊಳೆವ ಚಾಪವೆಂದು—
ಪೊತ್ತಳ್ಳೆ ಒಲವಿಂದೆ ಸಿರಿಗೊರಳ ಹಾರವನು
"ವತ್ಸ ನಿನ್ನಯ ಸೇವೆ ಸಾರ್ಥ"ವೆಂದು.

೩

ನೀನಾಯ್ದು ಮಲರುಗಳ ನೀ ಕೊಡದ ಪೂಮಾಲೆ
ತೊನೆಯುತಿವೆ ಕನ್ನಡದ ಪೆಂಪ ಪೆರೆದು ;
ಎಣ್ಪೆಸೆಗು ಸೂಸುತಿವೆ ದಿವ್ಯ ಸೌರಭವಿಂದು
ಕನ್ನಡದ ಕಸ್ತೂರಿಯು ಕಂಪುಗರೆದು.

೪

ಎಡೆಯೆಡೆಗೆ ಸಕ್ಕದದ ನಲ್ನುಡಿಯನಳವಡಿಸಿ
ಹೃದ್ಯವಹ ಗದ್ಯದಲಿ ಕೃತಿಯನೊರೆದೆ ;
ನಿನ್ನ ನಲ್ಲೆಗೆ ಪೇಳ್ದ ಸರಸಸಂಕಥೆಯಲ್ಲಿ
ಕನ್ನಡದ ರಸಿಕತೆಯ ಜಗದಿ ಮೆರೆದೆ.

೫

ಕಬ್ಬಿಗರ ಬಲ್ಲಹನೆ ! ರಸಿಕಜನ ಮನದಾಣ್ಮ !
ಅಬ್ಬೆಯೊಲಿಸಿದ ದಿಟದ ಪರಿಯ ತೋರಾ !
ನಾಡಿನರುಣೋದಯದಿ ನಲ್ನುಡಿದ ಕವಿವರನೆ !
ನಾಡಿನಣುಗರನಿಂದು ಹರಸು ಬಾರಾ !

ಸ್ವಾತಂತ್ರ್ಯವೀರನಿಗೆ :

ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ.ಎ.,ಬಿ ಟಿ. ಗೋಕಾಕ

★

ಆಶಾ-ನಿರಾಶೆಗಳ ಘೋರ ಘರ್ಷಣೆಯಲ್ಲಿ
ನಾಡಿನಾಶಾಪೂರ್ಣ ಸೃಷ್ಟಿ ಎಲ್ಲಿ ?
ನಾಡ ಬಿಡುಗಡೆಗಾಗಿ ಹೋರಾಟವೆಸಗಿರುವ
ನಾಡ ಯೋಧರಿಗಿಂದು ಹೊಸದೃಷ್ಟಿ ಎಲ್ಲಿ ?

ಪ್ರಾಣವನೆ ಪಣವಿಟ್ಟು ನಾಡನುದ್ಧರಿಸಿರುವ
ನಾಡಬಂಟನ ನಾಡು ಕಾಡಾಯಿತೇಕೆ ?
ತ್ಯಾಗ-ಬಲಿದಾನಗಳ ಯೋಗಸಿದ್ಧಿಯುಗ್ಗಡಿಪ
ನಿನ್ನಪುರುಷನ ನಾಡು ಕೇಡಾಯಿತೇಕೆ ?

ಸ್ವಾತಂತ್ರ್ಯವೆಂದರದು ಸ್ವಚ್ಛಂದವೇ ಗೆಳೆಯ !
ನಿನ್ನಂತರಂಗವನು ಬೆದಕಿ ನೋಡು,
ಸ್ವಾರ್ಥಮೂಲವೆ ನಿನ್ನ ಬಡುಗಡೆಯ ಬಲಿದಾನ
ದೇಶವತ್ಸಲನಾಗಿ ತಿಳಿದು ನೋಡು !

ಚಿಂತೆ ಎಂಬ ಚಿತೆ !

ಶ್ರೀ. ರಾಮಚಂದ್ರ ಶೇಡಬಾಳ, ಮುಂಬಯಿ

★

ಯೌವನಾತ್ಮ ಜೀವಕ್ಕೆ ಮುಪ್ಪಿನ—
ಉಡುಪು ತೊಡಪು ಕೊಟ್ಟು !
ಚಿಂತೆ ನಿಂತಿ ಬಾಳುದ್ದ ಬದುಕಿಯೂ
ಹರುಷ ಹೀರಿ ಬಿಟ್ಟು. ॥ ೧ ॥

ನಿನ್ನ ರಥದ ಚಕ್ರಕ್ಕೆ, ಮತ್ತೆ
ವೇಗಕ್ಕೆ ತಾಳವಿಟ್ಟು !
ಮಿನ್ನುಳಿಣಿ ಮಿಡಿಯುತ್ತಲಿತ್ತು
ಹೃದಯಕ್ಕೆ ಶೂಲವಿಟ್ಟು ॥ ೨ ॥

ಜೀವಭಾವದುನ್ಮಾದದುಬ್ಬರ—
ಒನ್ಮೈಗಿಳಿಯಜೀಕು !
ಚಿಂತೆ ಎಂಬ ಚಿತೆ, ನಿನ್ನ ಕಂಡರೆ
ಬದುಕದೇಕೆ ಬೇಕು ? ॥ ೩ ॥

ಕುಂಭಕರ್ಣ

(ಒಂದು ರೇಡಿಯೊ ನಗೆಹಾಟ *)

ಲೇ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

ಶಂಕರಣ್ಣ.....ತಂದೆ
ಶ್ಯಾಮು.....ಮಗ, ವಯಸ್ಸು ೧೩.
ರಾಮು.....ಎರಡನೆಯ ,, ,, ೧೧.
ಇಟ್ಟಿ.....ಮಗಳು ,, ೬.

[ಹೊತ್ತು ರಾತ್ರಿ ೮ ಗಂಟೆ. ಶ್ಯಾಮು, ರಾಮು, ಇಟ್ಟಿ ಅಭ್ಯಾಸ ಮಾಡಲು ಕೂತಿದ್ದಾರೆ. ಶಂಕರಣ್ಣ ಬೀಡಿ ತರುವದಕ್ಕಾಗಿ ಹೊರಡುತ್ತಾನೆ.]

ಶಂಕರಣ್ಣ :— ಶ್ಯಾಮ್ಯಾ, ರಾಮ್ಯಾ, ನಾ ಅಂಗಡಿಗೆ ಹೋಗಿ ಬೀಡಿ ತರ್ತೀನಿ. ನೀವು ಅನಕಾಶಕ ಅಭ್ಯಾಸ ಮಾಡಿಕೋತ ಕೂಡ್ರಿ. ಬಂದನ್ಯಾಲ ಊಟಕ್ಕ ಬಡಸ್ತೀನಿ. ಈಕಿ ಅರಿಷಿಣಾ ಕುಂಕುಮಕ್ಕ ಹೋದಾಕಿ ಇನ್ನೂ ಬರಲಿಲ್ಲ. ಸತಗೋನಳ್ಯಾಕ ಅಲ್ಲೇ! ಏ ಇಟ್ಟಿ, ನೀನೂ ಅಕ್ಷರ ತೀಡಿಕೋತಕ ಕೂಡು ಹಂ! ಈಗ ಬರ್ತೀನಿ. ಯಾರೂ ನಿದ್ದೀ ಹೋಗಬ್ಯಾಡ್ರಿ ಮತ್ತ.

[ಎಲ್ಲರೂ 'ಹುಂ,' 'ಹುಂ,' ಅನ್ನುವ ಶಬ್ದ. ಶಂಕರಣ್ಣ ಹೋಗುತ್ತಾನೆ. ಶ್ಯಾಮು, ರಾಮು ಓದುವದರಲ್ಲಿ ತೊಡಗುವರು. ಇಟ್ಟಿ ಪಾಟಿಯನ್ನು ತರುವಾಗ, ಜಮಖಾನದ ಹರಕಿನಲ್ಲಿ ಕಾಲು ತೊಡಕಿ ಮುಗ್ಗರಿಸುತ್ತಾಳೆ. ಕೈಯಲ್ಲಿಯ ಪಾಟಿ ನೆಲಕ್ಕೆ ಅಪ್ಪಳಿಸಿ ಒಂದು ಕಡೆಯ ಕಟ್ಟು ಉಚ್ಚಿ, ಮೂಲೆಯಲ್ಲಿ ತುಂಡಾಗುತ್ತದೆ. ಅಳುವ ದನಿ ಕೇಳಬರುತ್ತದೆ.]

ಶ್ಯಾಮು :— ಏಳು, ಏಳು. (ಎಬ್ಬಿಸುತ್ತಾನೆ) ನಿನ್ನೇನು ಮಂದಿ ಕೆಡವಿದರೇನು ಅಳ್ಳಿಕ್ಕೆ?

[ಇಟ್ಟಿಯ ಅಳುವ ದನಿ ಕಡಿಮೆಯಾಗುತ್ತದೆ. ಶ್ಯಾಮು, ರಾಮು ಮತ್ತೆ ಓದಲು ಪ್ರಾರಂಭಿಸುವರು. ರಾಮು ಗಟ್ಟಿಯಾಗಿ ಓದ ತೊಡಗುವನು. ಶ್ಯಾಮು ಮನಸ್ಸಿನಲ್ಲಿಯೇ ಓದಿಕೊಳ್ಳುವನು.]

ರಾಮು :— ಜಿ....ಓ.....ಡಿ ಗಾಡ್ ಅಂದರ ದೇವರು. ಜಿ....ಓ..... ಡಿ ಗಾಡ್ ಅಂದರ ದೇವರು, ಜಿ.... ಓ..... ಡಿ ಗಾಡ್ ಅಂದರ ದೇವರು.

ಶ್ಯಾ :— ರಾಮ್ಯಾ, ನೀ ಫಟ್ಯಾಗಿ ಪಾಠಮಾಡಬ್ಯಾಡ; ನನಗ ತ್ರಾಸಾಗ್ತದ.

ರಾ :— ಶ್ರಾಸಾದರ ನನಗೇನು ಹೇಳ್ತೀ? ನೀನೂ ಒದರು ಬೇಕಾದರ, ನಾ ಎಲ್ಲಿ ಬ್ಯಾಡಂತೀನಿ? ಗಾಡ್ ಅಂದರ ದೇವರು. ಜಿ.... ಓ..... ಡಿ ಗಾಡ್ ಅಂದರ ದೇವರು. (ಏರಿಕೆಯ ದನಿಯಲ್ಲಿ ಹೇಳುತ್ತಾನೆ.) ಜಿ.... ಓ..... ಡಿ ಗಾಡ್ ಅಂದರ ದೇವರು !

ಶ್ಯಾ :— ನೀ ಮನಸಿನ್ಯಾಗ ಪಾಠಮಾಡ್ತೀಯೊ ಇಲ್ಲೊ ?

ರಾ :— ನಾ ಮಾಡೂದಿಲ್ಲ. ಎನ್ ಮಾಡ್ತೀ ?

ಶ್ಯಾ :— ಬಡತಾ ತಿಂತಿ ಹಾಂ, ಇನ್ನ.

ರಾ :— ಯಾಕ ? ಅಪ್ಪ ಹೊರಗ ಹೋಗ್ಯಾನ ಅಂತ ಬೆದರಸ ಬ್ಯಾಡ. (ಇನ್ನಷ್ಟು ಎತ್ತರದ ದನಿಯಲ್ಲಿ) ಜಿ....ಓ.....ಡಿ ಗಾಡ್ ಅಂದರ ದೇವರು.

ಶ್ಯಾ :— ಈಗ ಒಂದು ಕೊಟ್ಟೀ ಅಂದರ, ದೇವರ್ನ ನೆನಸೀ ನೋಡು. ಜಿ....ಓ.....ಡಿ—ದ ಉಚ್ಚಾರ ಗಾಡ್ ಆಗ್ತದೇನು ?

ರಾ :— ಮತ್ತೇನಾಗ್ತದ ?

ಶ್ಯಾ :— ಹುಚ್ಚ, ಜಿ....ಓ.....ಡಿ.....ದ ಉಚ್ಚಾರ ಡಾಗ್ ಅಂತಾಗ್ತದ.

ರಾ :— ನೀನs ಡಾಗ್! ನನಗ ಕಲಸಬ್ಯಾಡ. ನನಗೆಲ್ಲಾ ಗೊತ್ತದ. ಡಾಗ್ ಅಂದರ ನಾಯಿ.

ಶ್ಯಾ :— ಯಾರು ?

ರಾ :— ನೀನು.

[ಶ್ಯಾಮು ರಾಮುನಿಗೆ ಫಟ್ ಎಂದು ಒಂದೇಟು ಕೊಡುತ್ತಾನೆ. 'ಯಾಕೋಲೆ' ಎನ್ನುತ್ತ ರಾಮು ಶ್ಯಾಮುನ ಪುಸ್ತಕವನ್ನು ಕಸಿದು ಕೊಳ್ಳುತ್ತಾನೆ. ಈ ಎಳೆವಾಟದಲ್ಲಿ ಮಸಿಯ ದೌತಿ ಉರುಳಿ, ಮಸಿ ಶ್ಯಾಮುನ ಪುಸ್ತಕದ ಮೇಲೆ ಚೆಲ್ಲುತ್ತದೆ, ಶ್ಯಾಮು ದೌತಿಯಲ್ಲಿ ಉಳಿದ ಮಸಿಯನ್ನು ರಾಮುನ ಮೈಮೇಲೆ ಸುರುವುತ್ತಾನೆ. ಅವನ ಅಂಗಿಯೆಲ್ಲ ಮಸಿಯಾಗುತ್ತದೆ. ರಾಮು ಶ್ಯಾಮುನ ಇತಿಹಾಸದ ಪುಸ್ತಕದ ಪಾನು ಹರಿಯುತ್ತಾನೆ. ಶ್ಯಾಮು ಅದನ್ನು ಕಸಿದು ಕೊಳ್ಳುತ್ತಾನೆ; ಪುಸ್ತಕಕ್ಕೆ ಹತ್ತಿದ ಮಸಿಯನ್ನು ರಾಮುನ ಮುಖಕ್ಕೆ ಒರಸುತ್ತಾನೆ.]

ರಾ :— ಅಪ್ಪ ಬರಲಿ. ತೋರಸ್ತೀನಿ ನಿನ್ನಾಟಾ, ಮಂಗ್ಯಾ!

ಶ್ಯಾ :— ಅಪ್ಪ ಬರಲಿ ಮಾಡಸ್ತೀನಿ ನಿನ್ನ ವಾಲಗಾ, ಮುಶ್ಯಾ!

[ಶ್ಯಾಮು, ಇಟ್ಟಿ ಚೆಪ್ಪಾಳಿ ಹೊಡೆದು, 'ಮುಶ್ಯಾ, ಮುಶ್ಯಾ ಫೂಕ್,' 'ಮುಶ್ಯಾ, ಮುಶ್ಯಾ ಫೂಕ್' ಎಂದು ಕುಣಿದಾಡುತ್ತಾರೆ.]

ರಾ :— ಮಂಗ್ಯಾನ ಮಗನ!

ಶ್ಯಾ :— ಅಪ್ಪಗ ಮಂಗ್ಯಾ ಅಂತೀಯಾ? ಮುಶ್ಯಾನ ಮಗನ!

ರಾ :— ನೀನು? ಅಪ್ಪಗ ಮುಶ್ಯಾ ಅಂದೆಲ್ಲ ಮತ್ತ? ಈಗ ಅಪ್ಪ ಬರಲಿ, ಹೇಳೇ ಬಿಡ್ತೀನಿ.

ಶ್ಯಾ :— ಹೇಳಿದರ ಹೇಳದಿ ಹೋಗು. ಅಪ್ಪೇನು ಮಾಡ್ತಾನ?

* ೩೦-೭-೪೮ ರಂದು ಮುಂಬಯಿ ಆಕಾಶವಾಣಿಯ ಹಳ್ಳಿಗರ ಕಾರ್ಯಕ್ರಮದಲ್ಲಿ ಆಡಿದ ನಗೆಹಾಟವಿದು. —ಸಂ. ಜ.

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.

ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೊಜೆನ್— ಕರ್ನಾಟಕದ ಪ್ರಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ಕ್ವಿನಾಯ್ನ್ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ಮೇಲೆ ಅತ್ಯಂತ ಆಶ್ಚರ್ಯಕಾರಕ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಪ್ಲೀಹವನ್ನು ಸಂಪಡಿಸಿ ಪೂರ್ವ ಸ್ಥಿತಿಗೆ ತರುವದು.

ವರ್ಮಿನೋಲ್ (ಜಂತುನಾಶಿನಿ)— ಈ ಔಷಧಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇದರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ

ಮ್ಯಾನೇಜಿಂಗ್ ಏಜೆಂಟರು :
ಮೆಸರ್ಸ್ : ವಿಜ್ಞಾನಕರ ಮುಕ್ತ ಕಂಪನಿ

ಅವ್ವಗ ಹೇಳಿದರೆ ಸುಮ್ಮನ ಕೂಡ್ತಾನ! ನನಗ ಇತಿಹಾಸ ಮಾಡಬೇಕಾಗೇದ. ನನ್ನ ಮಾತಾಡಸಬ್ಯಾಡ.

ರಾ :— ನನಗ ಇಂಗ್ಲೀಷ್ ಮಾಡಬೇಕಾಗೇದ. ನನ್ನ ಗೊಡವಿಗೆ ಬರಬ್ಯಾಡ. ನಾ ಒದರೇ ಪಾಠ ಮಾಡಂವ.

ಶ್ಯಾ :— ಹಂಗಾರ ನಾನೂ ಒದರಿ ಇತಿಹಾಸ ಪಾಠಮಾಡ್ತೀನಿ. ಇಟ್ಟೇ, ನೀನೂ ಒದರಿ ಅನ್ನಽ.

ಇ :— (ಪುಸ್ತಕವನ್ನು ತೆರೆದು) ಹುಂ, ಕ—ಕ ಕರಡಿ, ಕಾ—ಕಾ ಕಾಗಿ, ಕು—ಕು.....

ರಾ :— ಕುಂಭಕರ್ಣ....ಶ್ಯಾಮ್ಯಾ! (ಎಲ್ಲರೂ ನಗುವರು.)

ಶ್ಯಾ :— ಲಂಬಕರ್ಣ....ರಾಮ್ಯಾ!

ರಾ :— ಲಂಬಕರ್ಣ ಅಂದರೇನು?

ಶ್ಯಾ :— ಉದ್ದನ ಕಿವಿವು! ತಿಪ್ಪೇಮ್ಯಾಲಿರ್ತಾವಲ್ಲ? (ಕತ್ತೆಯಂತೆ ಒನು ತೋರಿಸುವನು.)

ಇ :— ಕತ್ತಿ! (ಎಲ್ಲರೂ ನಗುವರು.)

ಶ್ಯಾ :— ಹುಂ. ಅದನ ನೋಡು! ರಾವ್ಯಾ....ಕತ್ತಿ!

ರಾ :— ನೀನು....ಹಿರೇ ಕತ್ತಿ!

ಇ :— ಅದಕ್ಕನ ಅಪ್ಪ ನಿಮ್ಮಿಬ್ಬರಿಗೆ ಹಗಲೆಲ್ಲ 'ಕತ್ತಿ' 'ಕತ್ತಿ' ಅಂತಿರ್ತಾನಲ್ಲ?

ಶ್ಯಾ :— ಯಾಕ? ಇಟ್ಟೇ ಜಿಟ್ಟೇ ಕುಂಬಳ ಸೊಪ್ಪಿ, ಬಿಡ್ಲೇನೊಂದು ತಪ್ಸಾಕಿ ಕುಟ್ಟಿ!

ಇ :— ಅಪ್ಪ ನಿಮಗ ಬೈಯೋದನ್ನ ನಾ ಕೇಳಿ ಅಂದೆ!

ರಾ :— ಸಾಕು, ಸುಮ್ಮನೆ ಕೂಡು. ಅಪ್ಪ ಬೈದರ ಅದೇನು ಖರೆಯೇನು? ನಿನಗೂ ಅನ್ನ ಹುಚ್ಚನುಂಡೆ ಅಂತಾಳಲ್ಲ!

ಇ :— ಯಾಕೊ ಬೋಳ್ಯಾ! ನಾ ಇಲ್ಲೆ ಕೂಡೋದೇ ಇಲ್ಲ ಹೋಗು.

ಶ್ಯಾ :— ಕೂಡದಿದ್ದರ ಹೋಗು ಹಾಳಾಗಿ. ಇತಿಹಾಸದ ಪಾಸು ಹರದದ. ನಾ ರಾಮಾಯಣದ ಕಥಿ ಓದ್ತೀನಿ.

ರಾ :— ನಾ ಭಾರತದ ಕಥೀ ಓದ್ತೀನಿ!

ಇ :— ಹಂಗಾರ ನಾ ಕೂತು ಕೇಳೋ ಆಕೇ.

ಶ್ಯಾ :— (ಸುಳ್ಳೆ ಓದುವವನಂತೆ) ದಶರಥ ರಾಜನಿಗೆ ರಾಮ, ಲಕ್ಷ್ಮಣ, ಸೀತಾ, ಹನಮಂತಾ ಎಂದು ನಾಲ್ಕು ಮಕ್ಕಳಿದ್ದರು.

ರಾ :— ಏ ಮಗನ, ಸೀತಾ ಹನಮಂತಾ ದಶರಥನ ಮಕ್ಕಳೇನು?

ಶ್ಯಾ :— ನಮ್ಮ ಪುಸ್ತಕದಾಗ ಹಾಂಗಽ ಅದ! ಹಾಂಗಿರಬಿದ್ದರೂ ನಾ ಹಾಂಗಽ ಓದಂವ. ನೀಯೇನು ಮಾಡ್ತೀ?

ರಾ :— ಓದು, ನಿನಗ್ಯಾರು ಬ್ಯಾಡಂತಾರ? (ಪುಸ್ತಕವನ್ನು ತೆರೆದು) ನಾ ಭಾರತಾ ಓದ್ತೀನಿ: ಧರ್ಮರಾಜನಿಗೆ ಅಕಬರ, ಹುಮಾಯೂನ, ಜಹಾಂಗೀರ, ಔರಂಗಜೇಬ ಎಂದು— ನಾಲ್ಕು ಮಂದಿ ತಮ್ಮಂದಿರಿದ್ದರು.

ಶ್ಯಾ :— ಅವರು ಯಾವಾಗಲೂ ಬಡಿದಾಡುತ್ತಿದ್ದರು.

ರಾ :— ನಾವಿಬ್ಬರೂ ಬಡದಾಡಿದ್ಹಾಂಗ!

ಶ್ಯಾ :— ಯಾಕ ರಾಮ್ಯಾ, ನನ್ನ ಓದಿನ್ಯಾಗ ಬರಬ್ಯಾಡಾ ಅಂತ ಹೇಳಲಿಲ್ಲೇನು?

ರಾ :— ನನ್ನ ಪುಸ್ತಕದಾಗಿಂದು ನಾ ಓದ್ತೀನಿ.

ಶ್ಯಾ :— ನಿನ್ನ ಪುಸ್ತಕದಾಗ ಹೀಂಗಽ ಅದಯೇನು?

ರಾ :— ಇರದಿದ್ದರೂ ನಾ ಹಾಂಗಽ ಓದಂವ! (ಮತ್ತೆ ಓದುವನು) ಧರ್ಮರಾಜನಿಗೆ ರಾವಣ, ಕುಂಭಕರ್ಣ ಎಂದು ಇಬ್ಬರು ಮಕ್ಕಳು ಹುಟ್ಟಿದರು.

ಶ್ಯಾ :— ಯಾಕ? ರಾವಣ, ಕುಂಭಕರ್ಣ ನನ್ನ ರಾಮಾಯಣದಾಗಿನವರು. ನಿನ್ನ ಭಾರತತಾಗ ಓದಿದಿ ಅಂದರ ಮಸಡಿಗೆ ಕುಟ್ಟೀನು!

ರಾ :— ರಾಮಾಯಣಕ್ಕ ಅವರ್ನೇನ ಗುತ್ತಿಗಿ ಕೊಟ್ಟಽದೇನು? ಅಪ್ಪ ನಿನಗ ಹೆಸರಿಟ್ಟಲ್ಲೇನು ಕುಂಭಕರ್ಣ ಅಂತ! ಕಲಿಯುಗದ ಕುಂಭಕರ್ಣ!

ಶ್ಯಾ :— ಮತ್ತ ನೀನು?

ರಾ :— ಕಲಿಯುಗದ ರಾಮಚಂದ್ರ! ನನ್ನ ಹೆಸರು ರಾಮು ಅಂತ ಅದನಽ ಅದ!

ಶ್ಯಾ :— ರಾವುನ ಹೆಣ್ತಿನ್ನ ರಾವಣ-ಕುಂಭಕರ್ಣ ಒಯ್ತಾರ ನೋಡು, ಗೊತ್ತದಕನೊ ಇಲ್ಲೊ ?

ರಾ :— ಅದಕ್ಯಕ ಅವರ್ನ ಕೊಂದು ಹಾಕ್ತಾನಲ್ಲ ರಾಮ; ಬಿಡ್ತಾನೇನು ?

ಶ್ಯಾ :— ಅಪ್ಪ ಬರೋಹೊತ್ತಾತು. ನಾ ನಿಬಂಧ ಬರಕೊಂಡು ಹೋಗಬೇಕು ನಾಳಿಗೆ. ನನ್ನ ತಡವಬ್ಯಾಡ ಇನ್ನ! ತೂಕಡಸ್ತೀ ಏನಕ ಇಟ್ಟೇ? ನನಗೂ ನಿದ್ದಿ ಬರಲಿಕ್ಕೆ ಹತ್ತೀದ ಈಗಾಗಲೆ! (ನಿಬಂಧ ಬರೆಯಲು ತೊಡಗುವನು.)

ರಾ :— ಯಾವ ನಿಬಂಧಲೇ ?

ಶ್ಯಾ :— ' ಸಭ್ಯತನ. '

ರಾ :— ಅಂದರೇನು ?

ಶ್ಯಾ :— ಒಳ್ಳೇರೀತಿಯಿಂದ ನಡಿಯೋದು.

ರಾ: — ನೀನು ನಡೀತಿಯೇನು ?

ಶ್ಯಾ :— ಬರೆ ನಿಬಂಧ ಬರಿಯೋದು! ಹಾಂಗ ನಡೀತಿರ್ತಾರೇನು, ಹುಚ್ಚಾಕ!

ರಾ :— ಮತ್ತ ಗಾಂಧಿಯವರು ಆಡಿಧಾಂಗ ನಡೀಲಿಲ್ಲೇನು ?

ಶ್ಯಾ :— ಮತ್ತದಕ ಕೊಂದು ಹಾಕಲಿಲ್ಲೇನು ಅವರ್ನ ? ಸತ್ಯ, ಸಭ್ಯತನ ನಡಿಯೋದಕ್ಕಲ್ಲ!

ರಾ :— ಭಾಳ ಶಾಣ್ಯಾ ಇದ್ದೀದಿ. ಅದರಂತೆ ನಡೀಬೇಕು ಅಂತಿರೋದು.

ಶ್ಯಾ :— ಯಾಂನ ನಡೀತಾನ ? ಮಾಸ್ತರ್ರು ನಮಗ ಹೇಳಿಧಾಂಗ ತಾವು ನಡೀತಾರೇನು ? ಅಪ್ಪ ತಾ ಬೀಡೀ ಸೇದ್‌ತಾನ; ನಾವು ಸೇದಿದರ ಸುಮ್ಮನಿರ್ತಾನೇನು ?

ರಾ :— ಅಪ್ಪ ಬರ್ಲಿ. ಇದನ್ನ ಹೇಳೀ ಬಿಡ್ತೀನಿ.

ಶ್ಯಾ :— ಹೇಳಿದರ ಹೇಳಿದಿ. ಹೋಗು! ನಾ ಬರಕೋತ ಕೂತು ಬಿಡ್ತೀನಿ. ನಿದ್ದಿ ಬರೊದತಾಗ ಇದನ್ನ ಮುಗಸಬೇಕು. (ಬರೆಯ ತೊಡಗುವನು.)

ರಾ :— ಏ ಇಟ್ಟೆ, ಏಳಕ! ಮಲಕೊಂಡಕ ಬಿಟ್ಟಿತು. ನಾ ಇನ್ನೂ ಕವಿತಾ ಪಾಠ ಮಾಡಬೇಕಾಗೇದ; ಅದನ್ನಕರೆಕ ಮಾಡೋಣು. (ಕವಿತಾ ದನಿ ತೆಗೆದು) ' ಉತ್ತರ ಧ್ರುವದಿಂ ದಕ್ಷಿಣ ಧ್ರುವಕು ಚುಂಬಕ ಗಾಳಿಯು ಬೀಸುತಿದೆ! '

ಶ್ಯಾ :— ಏನು ಕೆಟ್ಟ ಧನೀಲೆ ಕೂಗತೀಯಲೆ ? ಆ ರಿಕಾರ್ಡು ಹೆಚ್ಚೆ ಅದರ್ಹಾಂಗಾರೇ ಪಾಠಮಾಡು.

ರಾ :— ಈಗ ಫೋನೊಹಚ್ಚಿದರ ಅಪ್ಪ ಬೈದಗೀದಾನಪಾ.

ಶ್ಯಾ :— ಬೈತಾನ್ಯಾಕ ? ಅದಕ ಕವಿತಾ ಪಾಠಮಾಡೋದದ ಅಂತ ಹೇಳಿದರಾತು.

ರಾ :— ಹಾಂಗಕ ಮಾಡ್ತೀನಿ. ನಿಂದ್ರು.

(ರಾಮ ಫೋನೊ ತಂದು ' ಉತ್ತರ ಧ್ರುವದಿಂ ' ರಿಕಾರ್ಡು ಹಚ್ಚುವನು. ರಿಕಾರ್ಡು ಸಂಗೀತ ಮುಗಿಯುವ ಹೊತ್ತಿಗೆ ಶಂಕರಣ್ಣ ಬರುವನು. ಶ್ಯಾಮ ತೂಕಡಿಸಹತ್ತುವನು)

ಶಂ :— ಅಭ್ಯಾಸ ಮಾಡೋದು ಬಿಟ್ಟು ಫೋನೋ ಹಚ್ಚಿಗೊಂಡು ಕೂತಿರೇನು ? ಇಟ್ಟ ಮಲಗೇ ಬಿಟ್ಟಾಳಲ್ಲ! ಇಂವ ಕುಂಭಕರ್ಣ ತೂಕಡಿಸಲಿಕ್ಕೆ ಹತ್ಯಾನ! ಅಭ್ಯಾಸಕ್ಕ ಕೂತ ಅಂವರ ಕಣ್ಣು ಮುಚ್ಚೇ ಪುಸ್ತಕಾ ತೆರೀತಾನ, ಲಾಡೀಗಂಡ! ರಾಮ್ಯಾ, ನಾನು ಎಲೀ ಬಡಿಸಿ ಕರೀತಿನಿ ಇಬ್ಬರನ್ನೂ ಎಬ್ಬಿಸಿಗೊಂಡು ಬಾ. ಕೂಳು ತಿಂದು ಬೀಳ್ರಿ; ಅಂದ್ರ ಇವತ್ತಿನ ಕೆಲಸ ಮುಗಧಾಂಗಾತ್ಯು; ಆಕಿ ಯಾವಾಗ ಬರ್ತಾಳೋ ಬರ್ಲಿ !

ರಾ :— ಅಪ್ಪಾ, ನೀ ತಾಟು ಹಾಕೋತನಕ ನಾ ಇನ್ನೊಂದು ಹಾಡು ಹಚ್ಚತೀನೊ ? ಅದನ್ನೂ ಪಾಠಮಾಡಿಕೊಂಡು ಬರ್ರಿ ಅಂತ ಮಾಸ್ತರು ಹೇಳ್ಯಾರ.

ಶಂ :— ಹಚ್ಚಿಗೊಂಡು ಬಾರ್ಲ ಬೀಳು. ಲಗೂ ಬರ್ರಿ.

[ಶಂಕರಣ್ಣ ಆಡಿಗೆಯ ಮನೆಗೆ ಹೋಗುತ್ತಾನೆ. ರಾಮು ಪ್ಲೇಟು ತಿರುವಿ ಹಚ್ಚುತ್ತಾನೆ. ಅದರಲ್ಲಿ ' ನನ್ನ ಹರಣ ನಿನಗೆ ಶರಣ ' ಎಂಬ ಹಾಡು ಕೇಳಬರುತ್ತದೆ. ಮುಗಿಯುವ ಹೊತ್ತಿಗೆ ಒಳಗಿಂದ ಶಂಕರಣ್ಣನ ಕೂಗು— ' ಶ್ಯಾಮ್ಯಾ, ರಾಮ್ಯಾ ಬರ್ರಿನ್ನ. ']

ಸುಖಕರವಾದ ವಸತಿ ! .... ರುಚಿಕರವಾದ ಊಟ !

ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟ್ಯಾಂಡಿಗೆ ಸಮೀಪ, ' ಶಕ್ತಿ ಟಾಕೀಜ್ ' ಹತ್ತಿರ

ಒಡೆಯರು—ಎಲ್. ಪಿ. ಮಾರಕೋಡ

ರಾ:— ಏ ಶ್ಯಾಮ್ಯಾ ಏಳೊ. ಅಪ್ಪ ಊಟಕ್ಕ ಕರೀತಾನ. ಏ ಇಟ್ಟ ಇಟ್ಟೇ....ಏಳs, ಏಳು.

[ಇಬ್ಬರನ್ನೂ ರಾಮು ಎಬ್ಬಿಸುತ್ತಾನೆ. ಶ್ಯಾಮು ನಿದ್ದೆಯಲ್ಲಿಯೇ ಎದ್ದು ನಿಲ್ಲುತ್ತಾನೆ. ರಾಮು ಇಟ್ಟನ್ನ ರಟ್ಟೆ ಹಿಡಿದು ಎತ್ತಿ ನಿಲ್ಲಿಸುತ್ತಾನೆ. ಅವಳು ಜೋಲಿ ಹೋಗಿ ಶ್ಯಾಮನ ಮೇಲೆ ಬೀಳುತ್ತಾಳೆ. ಶ್ಯಾಮು ಜೋಲಿ ತಾಳಿಕೊಳ್ಳಲಾರದೆ ಫೋನೋಕ್ಕೆ ಕಾಲು ತಾಕಿಸುತ್ತಾನೆ. ಆ ಧಕ್ಕೆಗೆ ಧ್ವನಿವಾಹಕದ ಮುಳ್ಳು ಜೋರಾಗಿ ಒತ್ತಿದಂತಾಗಿ ರಿಕಾರ್ಡು ಕೆಡುತ್ತದೆ.]

ರಾ:— ಅಪ್ಪಾ, ಶ್ಯಾಮು ಫೋನೋಕ್ಕ ಕಾಲು ತಾಕಿಸಿದಾ! ಮತ್ತ ರಿಕಾರ್ಡು.....

ಶಂ:— (ಹೊರಗೆ ಬರುತ್ತ) ಏನು ರಿಕಾರ್ಡು ಬ್ರೆಕ್ ಮಾಡಿದನ? ಹಿಂಗ ಮಾಡಿದರs ಮಾಡಿಧಾಂಗ ನೀವು! ಯಾವದಾದರೂ ವಿಷಯದಾಗ ರಿಕಾರ್ಡ್ ಬ್ರೆಕ್ ಮಾಡೋದು ನಿಮ್ಮ ಹಣೆಬರದಾಗs ಬರದಿಲ್ಲ!

ರಾ:— ಒಡಿದಿಲ್ಲಪಾ! ಬರೇ ಗೀಚಿಧಾಂಗಾಗಿ ಒಂದುಕಡೆ ಸಣ್ಣ ಕುಣಿ ಬಿದ್ದದ! ಇನ್ನ ಅದನ್ನ ಹಚ್ಚಿದರ ತಿರಿತಿರಿಗಿ ಅದs ನುಡಿ ಕೇಳಸ್ತದ ಹಾಡಿನ್ಯಾಗ! ನನಗ ಪಾಠ ಮಾಡಲಿಕ್ಕೆ ನೆಟ್ಟಗಾತ್ಯ!

ಶಂ:— ತಲಿ ಬೋಳಿಸಿತು! ನಡೀರಿನ್ನ ಕೂಳಿಗೆ. ಏ ಶ್ಯಾಮ್ಯಾ, ಕಣ್ಣ ತಿಕ್ಕ್ಯೋತ ನಿಂದ್ರಬ್ಯಾಡ, ನೀರಗಲ್ಲಿನ್ಹಾಂಗ! ರಾಮ್ಯಾ, ನಾ ಇಟ್ಟನ್ನ ಎತ್ತಿಗೋತೀನಿ, ನೀ ಶ್ಯಾಮ್ಯಾನ್ನ ರಟ್ಯಾಗ ಕೈಹಾಕಿ ತೊಗೊಂಡು ಬಾ!

[ಶಂಕರಣ್ಣ ಇಟ್ಟನ್ನ ಎತ್ತಿಕೊಂಡು ಹೋಗುತ್ತಾನೆ. ರಾಮು ಶ್ಯಾಮನನ್ನು ಕೈಹಿಡಿದು ಕರೆದೊಯ್ಯುತ್ತಾನೆ. ಶ್ಯಾಮು, ರಾಮು, ಇಟ್ಟು, ಶಂಕರಣ್ಣ ಎಲ್ಲರೂ ಊಟಕ್ಕೆ ಕೂಡುತ್ತಾರೆ.]

ಶಂ:— ಏ ಶ್ಯಾಮ್ಯಾ, ನೆಟ್ಟಗ ಕಣ್ಣ ತಗಿ. ಕೂಳಿಗೆ ಕೂತೀದಿ ಎಲೀಮ್ಯಾಲ! ಎಚ್ಚರಾತೋ ಇಲ್ಲೊ?

ಶ್ಯಾ:— ಹುಂ.

ಶಂ:— ಹುಂ ಏನು ನಿನ್ನತಲಿ? ನೋಡು ಕಣ್ಣು ತಗದು! ಆಗಲೆ ಕಣ್ಣು ಸೇದಿ ಹೋದವು. ಯಾಕೋ? ಶ್ಯಾಮ್ಯಾ.....

ಶ್ಯಾ:— ಇಲ್ಲಪಾ, ಓದ್ತೀನಿ.

ಶಂ:—ಓದ್ತೀನಿ? ಎಲಾ ಲೌಡಿಗಂಡ! ಉಣತೀನಿ ಅನ್ನೊ! ಓದ್ತೀಯೇನು ಹಿಂಡೇಕೂಳು! ರಾಮ್ಯಾ. ಅವನ ಕಣ್ಣಿಗಿಷ್ಟು ಥಣ್ಣೀರು ಬಡಿ! (ರಾಮು ಹಾಗೆ ಮಾಡುತ್ತಾನೆ.)

ರಾ:— ಅಪ್ಪಾ, ಚಟ್ಣೀ ಸಾರಿನ್ಯಾಗ ಕಲಿಸಿದ!

ಶಂ:— ಅದನ್ನs ಎತ್ತಿ ಅವನ ಕಣ್ಣಾಗ ಸುರವ! ಏ ಶ್ಯಾಮ್ಯಾ.

ಶ್ಯಾ:— ಎಚ್ಚರಾಗೇದಪಾ, ಉಣತೀನಿ.

ಶಂ:— ಎನು ಉಣತೀದಿ? ಅದು ನೋಡು ಚಪಾತಿ! ಕಾಣಸ್ತsದೇನು?

ಶ್ಯಾ:— ಕಾಣಸ್ತsದ.

ಶಂ:— ರಾಮ್ಯಾ, ನಿನ್ನ ಮಾರಿ ಕಪ್ಪು ಕಪ್ಪು ಯಾಕಾಗೇದೊ? ಕಾಡಿಗೀ ನುಂಗೀದೇನು ಕೂಳಿಗೆ ತಡಾ ಆತ್ಯ ಅಂತ?

ರಾ:— ಇಲ್ಲಪಾ, ಶ್ಯಾಮ್ಯಾ ನನ್ನ ಮಾರಿಗೆ ಮಸಿ ಹಚ್ಚಿದ— ನೀ ಹೊರಗ ಹೋದಾಗ.

ಶಂ:— ಇವತ್ತ ನಿನ್ನ ಮಾರಿಗೆ ಹಚ್ಚಿದ. ನಾಳೆ ನನ್ನ ಮಾರಿಗೂ ಹಚ್ಚತಾನ.

ರಾ:— ಅಪ್ಪಾ, ಅದು ನೋಡು, ಚಪಾತಿಗೆ ಅನ್ನಾ ಬಾಡಿಸಿಗೋತಾನ.

ಶಂ:— ಅಂವ ಏನಾರೇ ತಿನವಲ್ಲನ್ಯಾಕ! ನೀ....ಅವನ ಕಡೆ ನೋಡs ಬ್ಯಾಡ. ಯಾಕೋ ಶ್ಯಾಮ್ಯಾ, ಎದ್ದೆಲ್ಲ? ಸ್ನಾನಾ ಮಾಡಿ ಬರ್ತೀಯೇನು?

ಶ್ಯಾ:— ಇಲ್ಲ, ಹೊಟ್ಟೆ ತುಂಬಿತು. (ಬಚ್ಚಲಕ್ಕೆ ಹೋಗುತ್ತಾನೆ.)

ರಾ:— ಅಪ್ಪಾ, ಅದು ನೋಡು, ಬಕೀಟನ್ಯಾಗs ಮುಸರೀ ಕೈ ಎದ್ದಿದ!

ಶಂ:— ಎದ್ದವಲ್ಲನ್ಯಾಕ! ಅಲ್ಲೇ ಬಚ್ಚಲದಾಗs ಶಯನಾ ಹಾಕ್ಯಾನು! ಅವನ್ನ ಎಡಗೈಲೇ ಕರದೊಯ್ದು ಹಾಸಿಗೀಮ್ಯಾಲ ಕೆಡವು.

ರಾ:— ಹುಂ, ಕರಕೊಂಡು ಹೋಗ್ತೀನಿ.

ಶಂ:— ಮತ್ತ ಬಂದನಲ್ಲೊ ಇಂವ! ಯಾಕೊ ಶ್ಯಾಮ್ಯಾ, ಮತ್ತ್ಯಾಕ ಎಲೀಮ್ಯಾಲ ಬಂದಿ?

ಶ್ಯಾ:— ಹೊಟ್ಟ ಹಸತsದ, ಊಟಾ ಮಾಡ್ತೀನಿ.

ಶಂ:— ನಿನ್ನ ಊಟಕ್ಕ ಬೆಂಕೀ ಹಚ್ಚಿತು. ಹೋಗಿ ಬೀಳು, ಸಾಕು. ರಾಮ್ಯಾ, ಅವನ ತಾಟು ಒಯ್ದು ತಲೆಗಿಂಬದಲೀಲೆ ಇಡು. ಕೂಳೂ ನಿದ್ದಿ ಕೂಡೇ ಸಾಗಲಿ ಅವಂದು.

ಶ್ಯಾ:— ಇಲ್ಲ. ಎಚ್ಚರಾಗೇದ ಊಟಾ ಮಾಡ್ತೀನಿ.

ಶಂ:— ಹುಂ, ಕುಕ್ಕರಸು. ನಿಂದು ನಿದ್ದೀನೂ ಅಷ್ಟsಕ. ಎಚ್ಚರಾನೂ ಅಷ್ಟsಕ! ಈಕಿ ಇನ್ನೂ ಬರಲಿಲ್ಲ. ನಮ್ಮ ಸಂಸಾರಾನೂ ನಿದ್ದಿಗಣ್ಣಾಗs ನಡಧಾಂಗ ನಡದsದ, ನ ಡ ದ s ದ, ನಡದsದ!

ರಾ:— ಅಪ್ಪಾ, ಅವ್ವ ಬಂದ್ಲು.

ಶಂ:— ಬಂದ್ಯಾ, ಈ ಕುಂಭಕರ್ಣನ್ನ ತೊಗೊ ನಿನ್ನ ಸ್ವಾಧೀನಕ್ಕ; ನಾ ಪಾರಾದೆ! ಇಂಥಾ ರಾಕ್ಷಸ ಮಕ್ಕಳ್ನ ಹಡಿಯುವವರ ಮಾರಿಗೆ ಬೆಂಕೀ ಹಚ್ಚಿತು!

———— o ————

ನನ್ನ ಹಿಮಾಲಯದ ಯಾತ್ರೆ

ಶ್ರೀಶಿವಯೋಗಿಗಳು, ಸುಕ್ಷೇತ್ರ ಬಂಥನಾಳ

ಹಿಮಾಲಯವೆಂದರೆ ನಿಸರ್ಗ ಸೌಂದರ್ಯದ ತವರುಮನೆ. ಅಲ್ಲಿಯ ಭೌತಿಕ ಸೌಂದರ್ಯದಲ್ಲಿಯೆ ಭಾರತೀಯ ಅಧ್ಯಾತ್ಮಿಕ ಸೌಂದರ್ಯವು ಜನಿಸಿ, ಭಾರತದ ತುಂಬ ಪ್ರವಹಿಸುತ್ತಲಿದೆ. ಪ್ರತಿಯೊಬ್ಬ ಭಾರತ ಪುತ್ರನೂ ಹಿಮಾಲಯ ಯಾತ್ರೆ ಮಾಡಿ, ಜನ್ಮಸಾಫಲ್ಯ ಮಾಡಿಕೊಳ್ಳಬೇಕು.

ಹಿಮಾಲಯವು ಹಿಂದುಗಳ ಪವಿತ್ರಸ್ಥಾನವೆಂದೂ, ಯೋಗಿಗಳ ಯೋಗಭೂಮಿಯೆಂದೂ, ತಪಸ್ವಿಗಳ ತಪೋವನವೆಂದೂ, ಅರಣ್ಯಕ (ಉಪನಿಷತ್ತು) ಗಳನ್ನು ಬರೆದ ಋಷಿಗಳ ಜ್ಞಾನ ಮಂದಿರವೆಂದೂ, ವೈದಿಕರ ಯಜ್ಞಶಾಲೆಯೆಂದೂ, ಬಹು ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿರುವುದು ಸರ್ವಶ್ರುತವಿದೆಯಷ್ಟೇ? ಅಂತಹ ಮಂಗಲಮಯ ಭೂಮಿಯನ್ನು ಒಮ್ಮೆ ಕಾಣಬೇಕು. ಅಲ್ಲಿರುವ ಮುನಿ, ಋಷಿ, ತಪಸ್ವಿ, ಜ್ಞಾನಿ, ಯೋಗಿಗಳನ್ನು ಕಂಡು, ಶಕ್ಯವೆನಿಸಿದರೆ ಯೌಗಿಕ-ಆಧ್ಯಾತ್ಮಿಕ ವಿಷಯವಾಗಿ ವಿಚಾರ ವಿನಿಮಯ ಮಾಡಿಕೊಂಡು ಬರಬೇಕೆಂಬ ಕುತೂಹಲವು ಬಹು ದಿವಸಗಳಿಂದಲೂ ನನ್ನಲ್ಲಿತ್ತು. ಅದರಂತೆ ರೂಢಿಗನುಸರಿಸಿ ಒಂದು ಧ್ಯೇಯವನ್ನಿಟ್ಟುಕೊಂಡು ಹೊರಡಬೇಕೆಂದು ನಿಶ್ಚಯಿಸಿ, ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಅತ್ಯಂತ ಕಠಿನ ಹಾಗು ದೂರದ ಪ್ರವಾಸವಾದ—ಹಿಮಮಯವಾಗಿರುವ ಕೇದಾರನಾಥನ ದರ್ಶನದ ಗುರಿಯನ್ನಿಟ್ಟುಕೊಂಡು, ಕೆಲವು ಸಹಕಾರಿ ಸಂಗಡಿಗರೊಡನೆ, ದಿನಾಂಕ ೨೨-೪-೧೯೪೪ನೆಯ ದಿವಸ ಹಿಮಾಲಯದ ಯಾತ್ರೆಗೆ ಹೊರಟುದಾಯಿತು.

ಮುಂಬಯಿಯಲ್ಲಿ ಮರುದಿನ ಎಂದರೆ ದಿನಾಂಕ ೨೩ಕ್ಕೆ ಜಗದ್ವಿಖ್ಯಾತ ತತ್ತ್ವಜ್ಞರಾದ ಸರ್ ರಾಧಾಕೃಷ್ಣನ್‌ರ ಅಧ್ಯಕ್ಷತೆಯಲ್ಲಿ ಸರ್ವಧರ್ಮ ಪರಿಷತ್ತು ಕೂಡುವುದೆಂದು ಗೊತ್ತಾದುದರಿಂದ, ಮುಂಬಯಿದಾದರಿನಲ್ಲಿ ಇಳಿದೆವು. ವಾಕ್ಪಟುತ್ವನಿ ನಿರ್ದೇಶಕರಾದ, ಶಾಂತೇಶ ಪಾಟೀಲ ಎಮ್. ಎಸ್‌ಸಿ. ಅವರು ನಮ್ಮನ್ನು ಸ್ಟೇಶನಿನಲ್ಲಿ ಸ್ವಾಗತಿಸಿ, ತಮ್ಮ ಅತಿಥಿಗಳಾಗಿರಿಸಿಕೊಂಡು, ಸರ್ವಧರ್ಮ ಪರಿಷತ್ತಿಗೆ ನನ್ನನ್ನೇ ಕರ್ನಾಟಕದ ಪ್ರತಿನಿಧಿಯನ್ನಾಗಿ ಮಾಡಿ ಕರೆದುಕೊಂಡು ಹೋದರು. ಅಲ್ಲಿ ಶ್ರೀಯುತ ಮುನಶಿ, ಡಾ. ಮುಕರ್ಜಿ, ರಾಜಾ ಮಹಾರಾಜಸಿಂಗ್—ಗವ್ಹರ್ನರ್ ಮುಂಬಯಿ, ಸರ್ ರಾಧಾಕೃಷ್ಣನ್ ಮೊದಲಾದವರ — ಸರ್ವಧರ್ಮಗಳಲ್ಲಿ ಸೌಹಾರ್ದವನ್ನು ಬೆಳೆಯಿಸುವ—ಭಾಷಣಗಳನ್ನು ಕೇಳಿದ್ದಾಯಿತು. ಮರುದಿನ ಕರ್ನಾಟಕ ಸಂಘದವರ ಆಗ್ರಹದ ಮೇರೆಗೆ ಅಲ್ಲಿಗೆ ಹೋಗಿ ಭೆಟ್ಟಿಕೊಟ್ಟು ಬಂದದ್ದಾಯಿತು.

ಶ್ರೀ. ಶಾಂತೇಶ ಪಾಟೀಲರ ಅಪೇಕ್ಷೆಯಂತೆ ದಿನಾಂಕ ೨೫ರಂದು, ಮುಂಬೈಯಿಂದ ವಿಮಾನ ಮಾರ್ಗವಾಗಿ, ಸೌರಾಷ್ಟ್ರ ಸೋಮನಾಥನ ದರ್ಶನಕ್ಕೆ ಹೋದೆವು. ಸಮುದ್ರತೀರದ ಪ್ರಭಾಸ ಪಟ್ಟಣದಲ್ಲಿ, ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಸೋಮನಾಥನ ದೇವಾಲಯವಿದೆ. ಮೊದಲಿನ ಸೋಮನಾಥ ಲಿಂಗವು ಅಂತರದಲ್ಲಿತ್ತೆಂದು ಹೇಳುತ್ತಾರೆ. ಆದರೆ ಘಜನಿ ಮಹಮ್ಮದನು ಬಂದು ಒಡೆದು, ಅದರ ಬುಡದಲ್ಲಿರುವ ೧೮ ಕೋಟಿ ಬೆಲೆ ಬಾಳುವ ಮುತ್ತು-ರತ್ನಗಳನ್ನು ತಕ್ಕೊಂಡು ಹೋದನಂತೆ. ಅಂದಿನಿಂದ ಸಮುದ್ರತೀರದಲ್ಲಿರುವ ಸೋಮನಾಥನ ಮಂದಿರವು ಹಾಳಾಗಿಯೇ ಇದೆ. ಇಂದೂರಿನ ಮಹಾರಾಣಿ ಅಹಲ್ಯಾಬಾಯಿಯು, ಹೊಸದೊಂದು ಗುಡಿ ಕಟ್ಟಿಸಿ, ಮ್ಲೇಂಛರಿಗೆ ಅಂಜಿ ಬಾಗಿಲ ಕಪಾಟುಗಳ ಹಿಂದೆ ದ್ವಾರಮಾಡಿ, ನೆಲಮನೆಯಲ್ಲಿ ಸೋಮನಾಥನ ಹೆಸರಿನಿಂದ ಹೊಸದಾದ ಲಿಂಗವನ್ನು ಸ್ಥಾಪಿಸಿದ್ದಾಳೆ. ಆ ದೇವಾಲಯದ ವ್ಯವಸ್ಥೆಯು ಈಗ ಅಷ್ಟು ಚೆನ್ನಾಗಿಲ್ಲ. ಕೊಳೆ-ಕಸಗಳಿಂದ ತುಂಬಿದೆ. ವರ್ಷಕ್ಕೆ ನಾಲ್ಕು ಸಾವಿರ ಸಂಬಳವನ್ನು ತಿನ್ನುವ

ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ

ಸುಮಾರು ೬೦೦ ಪುಟಗಳಲ್ಲಿ ನಾಲ್ಕು ಗ್ರಂಥಗಳು.

ವಾರ್ಷಿಕ ಚಂದಾ ೫-೦-೦ (ರಜಿಸ್ಟರ್) ಪೋ. ವೆಚ್ಚಸೇರಿ.

ಸಂಪಾದಕರು— ಕಲಮದಾನಿ ಗುರುರಾಯರು

೩ನೆಯ ವರ್ಷದ ಮೊದಲನೆಯ ಗ್ರಂಥ

ಉತ್ಕಲಾ ಭಾಗ ೨

ಇದೀಗ ಹೊರಟಿದೆ. ಬೇಗ ಚಂದಾದಾರರಾಗಿರಿ.

ಬಹುಮಾನ ೫೦೦ ರೂ.

— ಅದ್ಭುತ ಸಂಶೋಧನ —

ಮಾಯಾ ಉಂಗುರ

ಈ ಉಂಗುರವನ್ನು ಮೆಸ್ಮೆರಿಜಮ್ ಹಾಗು ಮಂತ್ರಶಕ್ತಿಯಿಂದ ತಯಾರಿಸಲಾಗಿದ್ದು ಇದರ ಮಂತ್ರಶಕ್ತಿ ಅಪಾರವಾಗಿದೆ. ಈ ಉಂಗುರವನ್ನು ಧರಿಸುವವರು ಇಚ್ಛಿಸಿದ ಯಾವುದೇ ಅಸಾಧ್ಯ ಕಾರ್ಯವು ಸುಲಭವಾಗಿ ಸಾಧಿಸುವದು. ಈ ಉಂಗುರವು ನಿಮ್ಮ ಬೆರಳಿನಲ್ಲಿದ್ದರೆ ನಿಮಗೆ ಯಾವ ಸಂಕಟವೂ ಕಷ್ಟವೂ ಒದಗಿ ಬರದು. ಕೆಟ್ಟ ನಕ್ಷತ್ರಗಳು ನಿಮ್ಮನ್ನು ಪೀಡಿಸಲಾರವು. ಈ ಉಂಗುರ ಧಾರಿಗಳು ಎಂಥ ಗರ್ವಿಷ್ಠ ಹಾಗು ತಲೆಬಾಗದ ವ್ಯಕ್ತಿಯ ಮೇಲೂ (ಆ ವ್ಯಕ್ತಿ ಗಂಡಿರಲಿ, ಹೆಣ್ಣಿರಲಿ) ಅಧಿಕಾರವನ್ನು ನಡಸಬಹುದು. ಇದರ ಮೂಲಕ ನೀವು ಪ್ರೇಮದಲ್ಲಿ, ಕೋರ್ಟು ವ್ಯವಹಾರಗಳಲ್ಲಿ, ನವಕರಿಯಲ್ಲಿ ಗೆಲವನ್ನು ಪಡೆಯುವದಲ್ಲದೆ ಹಣವನ್ನು ಗಳಿಸುವಿರಿ. ನಿಮಗೆ ಈ ಉಂಗುರ ಅಂಗರಕ್ಷಕನಂತೆ ಬೆಂಬಲವಾಗಿರುವದು. ಒಮ್ಮೆ ಇದನ್ನು ತರಿಸಿ. ಮೊದಲನೆ ರಾತ್ರಿಯೇ ಇದರ ಚಮತ್ಕಾರ ನಿಮ್ಮ ಅನುಭವಕ್ಕೆ ಬಂದೀತು.

ಉಂಗುರ ೧ ಕ್ಕೆ .... ೨—೦—೦
೩ ಉಂಗುರಗಳಿಗೆ .... ೫—೦—೦

ಪ್ಯಾಕಿಂಗು ಪೋಷ್ಟ ಖರ್ಚು ಬೇರೆ.

MAHAKALI ASHRAM,
NO 247, KANPUR.

ಪೂಜಾರಿಗಳಿಗೆ, ಹೀಗೆ ಅಸ್ಪಚ್ಛತೆ ಇಡಬಾರದೆಂದು ಹೇಳಿದೆವು. ದೇವಾಲಯವೇ ಮಲಿನವಾಗಿರುವಾಗ ಊರು ಸ್ವಚ್ಛವಾಗಿರಲು ಸಾಧ್ಯವೇ? ಪಟ್ಟಣವು ದುರ್ಗಂಧಮಯವಾಗಿದ್ದು, ಅಲ್ಲಿಯ ಎಲ್ಲ ಜನರೂ ಯಾತ್ರಿಕರ ಮೇಲೆಯೇ ಉಪಜೀವಿಸುವವರಾಗಿದ್ದಾರೆ.

ಸೌರಾಷ್ಟ್ರ ಸೋಮನಾಥದಿಂದ ಹಿಮಾಲಯಕ್ಕೆ ಹೋಗುವುದರ ಸಲುವಾಗಿ, ರೈಲ್ವೆ ಮಾರ್ಗದಿಂದ ಹೊರಟು ನೇರವಾಗಿ ದಿಲ್ಲಿಗೆ ಬಂದೆವು. ಅಲ್ಲಿಯ ದೊಡ್ಡ ಆಫೀಸರರಾದ ವಿಜಯಪುರದ ಸಿ.ಪಿ. ಹಳಕಟ್ಟಿಯವರು, ಸ್ಟೇಶನಿನಲ್ಲಿಯೇ ನಮ್ಮೆಲ್ಲರನ್ನು ಸ್ವಾಗತಿಸಿ, ತಮ್ಮ ಅತಿಥಿಗಳನ್ನಾಗಿರಿಸಿಕೊಂಡು, ದಿಲ್ಲಿಯಲ್ಲಿರುವ ಎಲ್ಲ ಹಳೆಯ ಹೊಸ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಿದರು. ಮಹಾತ್ಮಾ ಗಾಂಧಿಯವರ ಕೊಲೆಯಾದ ಸ್ಥಾನವನ್ನೂ ಅಲ್ಲಿ ಬರೆದ 'ಹೇ ರಾಮಾ' ಎಂಬ ಅಕ್ಷರಗಳನ್ನೂ ನೋಡಿದ ಕೂಡಲೇ ನನಗೆ ಬಹು ಕಳವಳವಾಯಿತು. ಅಲ್ಲಿಂದ ಹರಿದ್ವಾರಕ್ಕೆ ಹೋದೆವು. ದಾರಿಯಲ್ಲಿ ಗಂಗಾನದಿಯ ಕಾಲುವೆಗಳಿಂದ ಉತ್ತರ ಹಿಂದುಸ್ಥಾನದ ಬಹು ಭಾಗವು ಹಸಿರು ಬೆಳೆಗಳಿಂದ ಶೋಭಿಸುವುದನ್ನು ಕಂಡೆವು. ನಿಜವಾಗಿಯೂ ಹರಿದ್ವಾರವು ಹಿಮಾಲಯ ಪರ್ವತದ ಪ್ರವೇಶದ್ವಾರವೇ ಆಗಿರುವುದು. ಯಾತ್ರಿಕರ ಹಿಮಾಲಯದ ಪ್ರವಾಸವು ಇಲ್ಲಿಂದಲೇ ಪ್ರಾರಂಭವಾಗುವುದು,

ಕೇದಾರವು ಇಲ್ಲಿಂದ ೧೪೦ ಮೈಲು ದೂರವಾಗಿರುವುದು. ಹರಿದ್ವಾರದಲ್ಲಿ ಬ್ರಹ್ಮಕುಂಡ, ಸತೀಕುಂಡ, ದಕ್ಷಪ್ರಜಾಪತಿ ಮಂದಿರ ಮೊದಲಾದುವುಗಳನ್ನು ನೋಡಿಕೊಂಡು, ಹೃಷೀಕೇಶಕ್ಕೆ ಹೋದೆವು. ಮಧ್ಯದಲ್ಲಿ ಸತ್ಯನಾರಾಯಣನ ದರ್ಶನವೂ ಆಯಿತು. ಹೃಷೀಕೇಶದಿಂದ ೨ ಮೈಲಿನ ಮೇಲೆ ಇರುವ ಮುನಿರೇತಸದಲ್ಲಿ, ಸ್ವಾಮಿ ಶಿವಾನಂದರ 'ಆನಂದಕುಟೀರ'ದಲ್ಲಿ ವಸತಿ ಮಾಡಿದೆವು. ಶಿವಾನಂದ ಸರಸ್ವತಿಯವರು ಯೋಗ-ವೇದಾಂತ ಅರಣ್ಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದಾರೆ. ಅಲ್ಲಿ ಯೋಗ, ವೇದಾಂತ, ಸಿದ್ಧಾಂತ, ಯಜ್ಞ, ಭಜನೆ, ಕೀರ್ತನೆ, ಪ್ರಾಥಮಿಕ ಶಾಲೆ, ವೈದ್ಯಕ, ಇಂಗ್ಲಿಷ್ ಮೊದಲಾದ ಎಲ್ಲ ಕಲೆಗಳ ಶಿಕ್ಷಣವನ್ನು ಕೊಡುತ್ತಾರೆ. ಎರಡುನೂರರ ವರೆಗೂ ಸಾಧಕರಿದ್ದಾರೆ. ಶಿವಾನಂದ ಸ್ವಾಮಿಜಿಯವರ ಸಂಪಾದಕತ್ವದಲ್ಲಿ 'ಡಿವಾಯಿನ್ ಲಾಯಿಫ್ (ಸಾತ್ವಿಕ ಜೀವನ)' ಎಂಬ ಇಂಗ್ಲಿಷ್ ಮಾಸಪತ್ರಿಕೆಯು ಹೊರಡುತ್ತದೆ. ಸ್ವಾಮಿಜಿಯವರು ತುಂಬ ಸರಳ ಹೃದಯರೂ ಶಾಂತರೂ ವಿದ್ಯಾವಂತರೂ ಅನುಭವಿಗಳೂ ಆಗಿದ್ದಾರೆ. ಅವರು ಸೊದಲು ಮದ್ರಾಸಿನಲ್ಲಿ ಪದವೀಧರ ಡಾಕ್ಟರರಿದ್ದು, ಈಗ ೨೫ ವರ್ಷಗಳಿಂದ ಸಂನ್ಯಾಸಿಗಳಾಗಿ ಹಿಮಾಲಯದಲ್ಲಿದ್ದಾರೆ. ಅವರು ನನ್ನನ್ನು ಬಹು ಪ್ರೀತಿಸಿದರು. ಒಮ್ಮೆ ಪ್ರವಚನ ಮಾಡಬೇಕಾಗಿಯೂ ಒತ್ತಾಯ ಪಡಿಸಿದುದರಿಂದ 'ಎಲ್ಲ ಧರ್ಮಗಳ ಧ್ಯೇಯ ಒಂದೆ' ಎಂಬ ವಿಷಯದ ಮೇಲೆ, ಕನ್ನಡದಲ್ಲಿ ಪ್ರವಚನವನ್ನು ಮಾಡಿದೆನು. ಆ ಸಂಸ್ಥೆಯ ಸೆಕ್ರೆಟರಿಯವರಾದ ಸಚ್ಚಿದಾನಂದ ಮೂರ್ತಿಗಳು ಅದನ್ನು ಇಂಗ್ಲಿಷಿನಲ್ಲಿ ಭಾಷಾಂತರ ಮಾಡಿ ಎಲ್ಲರಿಗೂ ಹೇಳಿದರು. ಅಲ್ಲಿಯ ಎಲ್ಲ ವ್ಯವಹಾರವೂ ಇಂಗ್ಲಿಷಿನಲ್ಲಿಯೇ ನಡೆಯುವುದಲ್ಲದೆ ಎಲ್ಲರೂ ಇಂಗ್ಲಿಷ್ ಮಾತನಾಡುವವರೇ ಇರುವರು.

ಶಿವಾನಂದ ಕುಟೀರದಲ್ಲಿ ೫ ದಿವಸಗಳಿದ್ದು, ಅವರ ಕೂಡ ಯೌಗಿಕ ವೇದಾಂತ ವಿಷಯವಾಗಿ ವಿಚಾರವಿನಿಮಯ ನಾಡಿಕೊಂಡು, ೪೦ ಮೈಲು ದೂರದಲ್ಲಿರುವ ದೇವಪ್ರಯಾಗಕ್ಕೆ ಮೋಟಾರ್ ಮಾರ್ಗವಾಗಿ—ಹೋದೆವು. ಅಲ್ಲಿ ಭಾಗೀರಥಿ ಹಾಗೂ ಅಲಕನಂದಾ ನದಿಗಳ ಸಂಗಮವಾಗಿದೆ. ಇಲ್ಲಿಂದಲೇ ಈ ನದಿಯು ಮುಂದೆ 'ಗಂಗಾನದಿ' ಯೆಂಬ ಅಭಿಧಾನದಿಂದ ಹರಿಯುವುದು. ಇಲ್ಲಿ ಶ್ರೀರಾಮನು ತಪಸ್ಸು ಮಾಡಿರುವನೆಂದು ಹೇಳುವರು. ಇಲ್ಲೊಂದು ರಘುಪತಿ ಮಂದಿರವು ಇರುವುದು. ಇಲ್ಲಿಂದಲೇ ನಾವುಗಳೆಲ್ಲ ಕಾಲುನಡಿಗೆಯಿಂದ ಕೇದಾರಕ್ಕೆ ಹೊರಟಿದ್ದಾಯಿತು. ಆಶಕ್ತರನ್ನು ಕುಳ್ಳಿರಿಸಿಕೊಂಡು ಹೋಗಲು ಇಲ್ಲಿಯೇ 'ದಂಡಿ-ಖಂಡಿ' ಕೂಲಿಯವರು ದೊರೆಯುತ್ತಿರುವುದರಿಂದಲೂ ರಜಿಸ್ಟರ್ ಆಫೀಸುಗಳು ಇಲ್ಲಿಯೇ ಇದ್ದುದರಿಂದಲೂ ನಾವು 'ದಂಡಿ-ಖಂಡಿ' ಯ ಮತ್ತು ಸಾಮಾನುಹೊರುವ ಕೂಲಿಯವರನ್ನು ರಜಿಸ್ಟರ್ ಮಾಡಿಸಿಕೊಂಡು ಹೊರಟೆವು. ನದಿಯ ದಂಡೆಯನ್ನು ಹಿಡಿದು

ಕೇವಲ ಕಾಲುದಾರಿಯಿಂದಲೇ ಹೋಗಬೇಕಾಗುವುದು. ಒಂದು ಬದಿಗೆ ಆಳವಾದ ತಗ್ಗಿನಲ್ಲಿ ನದಿಯು ಹರಿಯುವುದು; ಮತ್ತೊಂದು ಬದಿಗೆ ಆಕಾಶ ಮುಟ್ಟುವಷ್ಟು ಎತ್ತರವಾದ ಪರ್ವತ ಕಾಣುವುದು. ಇವುಗಳನ್ನು ನೋಡುತ್ತ ಹೋಗುವ ಪ್ರವಾಸಿಕನಿಗೆ ತಾನು ಹೊಸದೊಂದು ಜಗತ್ತಿನಲ್ಲಿ ಹೋಗುತ್ತಿರುವಂತೆ ಭಾಸವಾಗುತ್ತಿರುತ್ತದೆ. ಅಳ್ಳಿದೆಯವರನ್ನು ಭಯವು ಕೆಣಕುತ್ತಿರುತ್ತದೆ. ಎಚ್ಚರಿಕೆಯಿಲ್ಲದೆ ನಡೆದರೆ ನದಿಯ ಪಾಲಾಗುವಷ್ಟು ದಾರಿಯು ಒಂದೊಂದು ಕಡೆಗೆ—ಚಿಕ್ಕದಾಗಿರುತ್ತದೆ. ೪-೫ ಮೈಲುಗಳಿಗೊಂದು 'ಚಟ್ಟಿ' ಎಂದರೆ ಪಾಂಥಶ್ಶರು ಇಳಿದುಕೊಳ್ಳಲಿಕ್ಕೆ ಹುಲ್ಲಿನ ಹಂಚಿನ ಚಿಪ್ಪರಗಳಿರುತ್ತವೆ. ಅಲ್ಲಿ ಊಟಕ್ಕೆ ಬೇಕಾಗುವ ಹಿಟ್ಟು, ಅಕ್ಕಿ, ಸಕ್ಕರೆ ಮೊದಲಾದ ಸಾಮಾನುಗಳು ಮಾರಾಟಕ್ಕೆ ಸಿಗುತ್ತವೆ; ಆದರೆ ಬೆಲೆಯು ಮಾತ್ರ ಇಲ್ಲಿಯ ಇಮ್ಮಡಿಯಾಗಿರುತ್ತದೆ. ಅಡಿಗೆ ಮಾಡಿಕೊಳ್ಳಲು ಪಾತ್ರೆಗಳೂ ಸಿಗುತ್ತವೆ. ನಾವು ದಾರಿಯಲ್ಲಿ ಕಂಡ ಪ್ರದೇಶಗಳೆಂದರೆ ಕ್ರಮವಾಗಿ ಸಹಸ್ರ ಕಮಲೇಶ್ವರ, ಅಗಸ್ತ್ಯಮುನಿ, ಬಾಲ ಕೇದಾರನಾಥ, ಶ್ರೀನಗರ, ಗುಪ್ತಕಾಶಿ. ಇಲ್ಲಿಂದ ಓಖೀಮಠವು ಒಂದುವರೆ ಮೈಲಿನ ಮೇಲಿದೆ. ಗೌರೀಕುಂಡದಲ್ಲಿ ಬಿಸಿನೀರಿನ ಸೆಲೆ ಇರುತ್ತದೆ. ಅಲ್ಲಿ ಯಾತ್ರಿಕರು ಸ್ನಾನ ಮಾಡುವರು. ಇವುಗಳನ್ನೆಲ್ಲ ನೋಡಿ ತೀರ್ಥಗಳಲ್ಲಿ ಸ್ನಾನ ಮಾಡಿ, ಮುಂದೆ ಬಹು ಕಡಿದಾದ ಹಿಮದ ಬಂಡೆಗಳಿಂದ ಕೂಡಿದ ಕಠಿನ ಮಾರ್ಗದಿಂದ ನಡೆದು, ನೇ ದಿನಾಂಕ ೧೬ ಮುಂಜಾನೆ ೯ಕ್ಕೆ ಕೇದಾರ ಪುರಿಯನ್ನು ಮುಟ್ಟಿದೆವು. ಕೂಡಲೇ ಕೇದಾರನಾಥನ ಸಂದರ್ಶನ ಮಾಡಿಕೊಂಡೆವು.

ಈಗ ಕೇದಾರನಾಥನ ಪೂಜೆಯನ್ನು ಮಾಡುತ್ತಿರುವವರು ಬಳ್ಳಾರಿ ಜಿಲ್ಲೆಯವರು— 'ಸದಾಶಿವ ಲಿಂಗ' ಎಂಬ ಹೆಸರಿನವರು. ನಮ್ಮೆಲ್ಲರನ್ನು ಅತ್ಯಾದರದಿಂದ ಸ್ವಾಗತಿಸಿ, ನೇಪಾಳ್ಮಹಾರಾಜರ ಬಂಗಲೆಯಲ್ಲಿರಲು ನಮಗೆ ವ್ಯವಸ್ಥೆ ಮಾಡಿದರು. ಅಲ್ಲಿ ಚಳಿ ಅತಿಯಾಗಿ ಇರುವುದು. ಕೇದಾರನಾಥನ ದೇವಾಲಯದ ಹಿಂದೆಯೆ ಪೂರ್ಣ ಹಿಮಾಚ್ಛಾದಿತ ಪರ್ವತವಿರುವುದರಿಂದ, ನೇ ತಿಂಗಳ ಮಧ್ಯಾನ್ಹದಲ್ಲಿ ಕೂಡ ತುಂಬ ಚಳಿಯಾಗುವುದು. ಅಲ್ಲಿಯವರು. ಯಾವಾಗಲೂ ಉಣ್ಣೆಯ ಬಟ್ಟೆಗಳನ್ನೇ ಧರಿಸುತ್ತಾರೆ. ಪೂಜಾರಿಗಳು ಕೂಡ— ಪೂಜೆ ಮಾಡುವಾಗಲೂ— ಮೈ ತುಂಬ ಉಣ್ಣೆಯ ಬಟ್ಟೆಗಳನ್ನು ಧರಿಸಿರುತ್ತಾರೆ. ಅಲ್ಲಿ ಯಾರೂ ಬಟ್ಟೆಯನ್ನು ತೆಗೆಯ ಬಾರದೆಂದು ಆರೋಗ್ಯಖಾತೆಯವರು ಉಪದೇಶ ಮಾಡುತ್ತಾರೆ. ನಾವು ಮಾತ್ರ ರೂಢಿಯಂತೆ ಬಟ್ಟೆ ತೆಗೆದು, ಸ್ನಾನ— ಪೂಜಾ— ಪ್ರಸಾದಗಳನ್ನು ಮಾಡಿದೆವು. ಆದರೆ ಚಳಿಯು ಮಾತ್ರ ನಮ್ಮನ್ನು ತುಂಬ ನಡುಗಿಸಿತು.

ಕೇದಾರನಾಥನು ಲಿಂಗಾಕಾರವಾಗಿರದೆ, ಒಂದು ದೊಡ್ಡ ಕರಿಯ ಬಂಡೆಯಂತೆ ಇರುವನು. ಪ್ರದಕ್ಷಿಣೆ ಹಾಕುವಷ್ಟು ಸ್ಥಾನ ಬಿಟ್ಟು ಗರ್ಭಗುಡಿಯ ತುಂಬೆಲ್ಲ ಕೇದಾರನಾಥನೇ ಇರುವನು. ಮುಂದಿನ ಸಭಾಮಂಟಪದಲ್ಲಿ ಪಾಂಡವರು, ಕೃಷ್ಣ, ಹಣ್ಣುಮು, ಮಾರುತಿ, ವಸಿಷ್ಠ, ಅಗಸ್ತ್ಯ, ಪರುಶುರಾಮ, ಭೈರವ ಮೊಲಾದವರ ಮೂರ್ತಿಗಳಿರುತ್ತವೆ. ಆದರೆ ವೀರಶೈವರ ಪಂಚಾಚಾರ್ಯರಲ್ಲಿ ಒಬ್ಬರಾದ —ಕೇದಾರ ಲಿಂಗೋದ್ಭವರೆಂದು ಹೇಳುವ— ಏಕೋರಾಮರ ಮೂರ್ತಿಯು ಅಲ್ಲಿ ಇಲ್ಲದಿರುವುದು ವಿಚಾರಣೀಯ ವಿಷಯವಾಗಿರುತ್ತದೆ. ಇಷ್ಟೇ ಅಲ್ಲ, ಆ ಭಾಗದಲ್ಲಿ ಏಕೋರಾಮರೆಂಬ ಹೆಸರನ್ನೊರಿತವರೂ ಯಾರೂ ಇದ್ದಂತೆ ತೋರಲಿಲ್ಲ. ಶಂಕರಾಚಾರ್ಯರ ಕುರುಹುಗಳನ್ನು ಮಾತ್ರ ಹೇಳುತ್ತಾರೆ.

ಕೇದಾರನಾಥ, ಗುಪ್ತಕಾಶಿಯಲ್ಲಿ ವಿಶ್ವನಾಥ, ಓಖೀಮಠದಲ್ಲಿ ಓಂಕಾರೇಶ್ವರ, ತುಂಗನಾಥ ಈ ನಾಲ್ಕು ಮೂರ್ತಿಗಳ ಪೂಜೆಯು ವೀರಶೈವರವೆಂದು ಹೇಳುತ್ತಾರೆ; ಆದರೆ ಅಲ್ಲಿ ವೀರಶೈವರ ವಸತಿಯೇ ಇಲ್ಲ. ಇತ್ತಣವರು ಅಲ್ಲಿ ಪೂಜೆ ಮಾಡುತ್ತಾರೆ. ಆದರೆ ಅವರು ಅಲ್ಲಿ ವೀರಶೈವ ಅಥವಾ ಲಿಂಗಾಯತರೆಂದು ಹೇಳದೆ, ಬ್ರಾಹ್ಮಣರೆಂದು ಹೇಳಿಕೊಳ್ಳುತ್ತಾರೆ. ಅಲ್ಲದೆ ಜನಿವಾರ ಕೂಡ ಹಾಕುತ್ತಾರೆ. ಈಗಿದ್ದ ಅರ್ಚಕ ಸದಾಶಿವಲಿಂಗರು, ತಾವು ಹಾಕಿದ ಜನಿವಾರವನ್ನು ನಮಗೆ ತೋರಿಸಿದರು.

ಈ ಲಿಂಗಗಳ ಪೂಜೆ ಮಾಡುತ್ತಿರುವವರಿಗೆ ಓಖೀಮಠದಲ್ಲಿರುವ 'ರಾವಲ್ ಗದ್ದುಗೆ'ಯು ದೊರೆಯುತ್ತದೆ. ಆದರಂತೆ ಈ ಪೊದಲು ಪೂಜಾಮಾಡುತ್ತಿರುವ ಜಯಲಿಂಗ ಸ್ವಾಮಿಗಳಿಗೆ ಈಗ ರಾವಲ್

ಮಲೇರಿಯಾ
ಇನ್ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಸಣ್ಣ ಕತೆಯಲ್ಲಿ ಸ್ವಾರಸ್ಯ!

ಇದನ್ನು ಬಯಸುವವರಿಗೆ ಹದಿನಾರು ವರ್ಷಗಳಿಂದ ಪ್ರಿಯವಾಗಿರುವ

ಮಾಸಪತ್ರಿಕೆ

ಕತೆಗಾರ

ಪ್ರತಿ ಸಂಚಿಕೆಯಲ್ಲೂ

ಉತ್ತಮ ಸಣ್ಣಕತೆಗಳು,

ಕನ್ನಡ ಪತ್ರಿಕೆಗಳಲ್ಲಿ ಆಯಾ ತಿಂಗಳು ಪ್ರಕಟವಾದ ಕತೆಗಳ ಪರಿಚಯ,

ಚಿತ್ರರಂಗವೀಕ್ಷಣ, ಇನ್ನೂ ಇತರ.....?

ಇವೆಲ್ಲ ಆಂದವಾದ ಅಚ್ಚುಕಟ್ಟಿನೊಳಗೆ.

ಬಿಡಿಪ್ರತಿ ನಾಲ್ಕಾಣೆಗೆ ದೊರೆಯುವುದು.

ವಾರ್ಷಿಕ ಚಂದಾ ಮೂರು ರೂಪಾಯಿ

(ಅಂಚೆ ಉಚಿತ.)

ಪ್ರಕಾಶಕರು

ಆರ್. ಎನ್. ನ್ಯೂಸ್ ಏಜನ್ಸಿ,

೬೬೫, ಚಿಕ್ಕಪೇಟೆ. ಬೆಂಗಳೂರು, ೩.

ಗದ್ದುಗೆಯು ದೊರೆಯುತ್ತಿದ್ದು, ಅವರು ಗೃಹಸ್ಥಾಶ್ರಮಿಗಳೂ ಸಂತಾನವಂತರೂ ಆಗಿದ್ದಾರೆ. ಇವರೇ ನಮ್ಮ ಪಂಚಾಚಾರ್ಯರಲ್ಲಿ ಒಬ್ಬರಾದ ಕೇದಾರ ಪೀಠದವರು. ಇವರೇ ಈವರೆಗೂ ಕೇದಾರನಾಥನ ಜಹಾಗೀರಿನ ಹಳ್ಳಿಗಳ ಉತ್ಪನ್ನವನ್ನು ಉಪಭೋಗಿಸುತ್ತಿದ್ದರು. ಆದರೆ ಈ ವರ್ಷದಿಂದ ಸರಕಾರದವರು, ಜಯಲಿಂಗ ಸ್ವಾಮಿಗಳ ಒಪ್ಪಿಗೆಯಿಂದ ಸರ್ವ ಉತ್ಪನ್ನವನ್ನೂ ತಮ್ಮ ಸಾಧೀನಕ್ಕೆ ತೆಗೆದು ಕೊಂಡು, ಟ್ರಸ್ಟ್ ಮಾಡಿದ್ದಾರೆ. ಈಗಿನ ರಾವಲ್ ಜಯಲಿಂಗಸ್ವಾಮಿಗಳಿಗೆ ತಿಂಗಳಿಗೆ ೧೨೦ ರೂಪಾಯಿ ಸಂಬಳ ಕೊಡುತ್ತಾರೆ. ಈ ಸಂಗತಿಯನ್ನೆಲ್ಲ ಸದಾಶಿವಲಿಂಗ ಪೂಜಾರಿಗಳು ನಮಗೆ ತಿಳಿಸಿದ್ದಲ್ಲದೆ, ಕೇದಾರ ಪೀಠದ ವ್ಯಾಜ್ಯವು ಇನ್ನೂ ನಡೆದಿದೆ—ಎಂದೂ ಹೇಳಿದರು. ನಾನು ನಿಶ್ಚಯ ಮಾಡಿಕೊಂಡು ಹೊರಟೆಂತೆ, ಹಿಮಾಲಯದಲ್ಲಿ ತುರ್ಯಾತೀತ ಅವಸ್ಥೆಯಲ್ಲಿರುವ—ಶೇಷಧಾರೆಯಲ್ಲಿಯು ರಾಮಕೃಷ್ಣ ಯತಿಗಳನ್ನು, ಸತ್ಸಂಗಾಶ್ರಮನುದಲ್ಲಿಯು ರಾಮು ಸುಖದಾಸಜಿಯವರನ್ನು, ಸ್ವರ್ಗಾಶ್ರಮದಲ್ಲಿಯು ಜೀವದಯಾಲ ಗೋವಿಂದಜಿಯವರನ್ನು, ಆರಂಪು ಕುಟೀರದಲ್ಲಿಯ ಶಿವಾನಂದ ಸರಸ್ವತಿಯವರನ್ನು, ಋಷಿಕುಲದಲ್ಲಿರುವ ತರಸ್ವಿಗಳನ್ನು, ಗೋರಖಪುರದಲ್ಲಿ ಶಿವಕುಮಾರ ಶಾಸ್ತ್ರಿಗಳನ್ನು, ಮುಂಬಯಿಯಲ್ಲಿ ಯೌಗಿಕ ಹೆಲ್ತ್ ಸೆಂಟರಿನ ಅಧ್ಯಕ್ಷರಾದ ಭೂಷಣರನ್ನು ಕಂಡು, ಅವರ ಕೂಡ ಯೌಗಿಕ ವೇದಾಂತ ವಿಷಯವಾಗಿ ಮಾತಾಡಿ, ಅವರ ಅನುಭವ ತಿಳಿದು ಕೊಂಡು, ನನ್ನ ಅನುಭವವನ್ನು ಅವರಿಗೆ ತಿಳಿಸಿದೆ. ಕೆಲವರ ಕೂಡ ವಿರೋಧವಾಗಿ ವಾದಮಾಡಬೇಕಾದ ಸಂದರ್ಭಗಳೂ ಒದಗಿದುವು.

ಹಿಮಾಲಯ, ಕಾಶಿ, ಪ್ರಯಾಗರಾಜ ಮೊದಲಾದ ಎಲ್ಲ ಕ್ಷೇತ್ರ-ತೀರ್ಥಗಳಲ್ಲಿ, ಸತ್ಪುರುಷರಿಗಿಂತ ಮಿಥ್ಯಾಚಾರಿಗಳೇ ವಿಶೇಷವಾಗಿದ್ದಾರೆ. ದುಡ್ಡಿಗಾಗಿಯೇ ದೊಡ್ಡ ಸಾಧುಗಳಂತೆ ನಟನೆ ಮಾಡುವವರು ಅಧಿಕರಾಗಿದ್ದಾರೆ. ದುಡ್ಡು ಕೊಡದಿದ್ದರೆ ಅಡ್ಡ ತಿಡ್ಡ ಬೈದಾದರೂ ರೊಕ್ಕ ಬಿಡಿಸುವಷ್ಟು ಚಪಲರೂ ಇದ್ದಾರೆ. ಆದರೆ ಯಾತ್ರಿಕರು ಅವರ ಟೀಕೆ-ಟಿಪ್ಪಣಿ ಬೆದರಿಕೆಗಳಿಗೆ ಬಗ್ಗದೆ, ತಮ್ಮ ಶಕ್ತಿಗನುಸರಿಸಿ ಅವಯವಹೀನರಿಗೆ ರೋಗಿಗಳಿಗೆ ಸಹಾಯ ಮಾಡ ಬೇಕಲ್ಲದೆ, ಅಲ್ಲಿಯ ವರೋಪಜೀವಿಗಳ ದಾಕ್ಷಿಣ್ಯಕ್ಕೊಳಗಾಗಿ ಇದ್ದ ದುಡ್ಡು ಕಳೆದುಕೊಂಡು ದೊಡ್ಡ ಸಂಕಟಕ್ಕೊಳಗಾಗಬಾರದಾಗಿ ಯಾತ್ರಾರ್ಥಿಗಳಿಗೆಲ್ಲ ಎಚ್ಚರಿಕೆಯ ಸೂಚನೆ.

ಹಿಮಾಲಯದ ಜನರು ಬಹು ರೂಪವಂತರು. ಕಪ್ಪು ಜನರೇ ಅತ್ತ ಕಾಣುವುದಿಲ್ಲ. ವಿನಯಶಾಲಿಗಳು. ಹಿಂದೀ ಭಾಷೆಯನ್ನಾಡಿದರೂ ಸಂಸ್ಕೃತ ಶಬ್ದಗಳನ್ನು ಹೆಚ್ಚು ಮಿಶ್ರಮಾಡಿ ಮಾತಾಡುವರು. ಯಾವಾಗಲೂ ಉಣ್ಣೆಯ ಬಟ್ಟೆಗಳನ್ನೇ ಧರಿಸುವರು. ಹೆಣ್ಣುಮಕ್ಕಳು ಕಂಬಳಿಗಳನ್ನುಟ್ಟು ಉಣ್ಣೆಯ ಆಂಗಿಗಳನ್ನು ಹಾಕುವರು. ಜನರೆಲ್ಲ ಬಡವರಾಗಿದ್ದು, ವಿಶೇಷ ಜನರು ಪರೋಪಜೀವಿಗಳಾಗಿದ್ದಾರೆ. ವೇದದಲ್ಲಿ ಋಷಿಗಳು ಅಗ್ನಿಹೋತ್ರಕ್ಕೆ ಮಹತ್ತ್ವ ಕೊಟ್ಟದ್ದರ ಕಾರಣವೇನೆಂದರೆ— ಅಲ್ಲಿ ಚಳಿ ವಿಶೇಷವಾಗಿರುವುದರಿಂದ, ಯಾವಾಗಲೂ ಅಗ್ನಿಯ ಆವಶ್ಯಕತೆ ಇರುವುದು. ಅದಕ್ಕಾಗಿಯೇ ಅಗ್ನಿಹೋತ್ರಿಯು ಶ್ರೇಷ್ಠನೆಂದು ಹೇಳಿರುವರು.

ಒಟ್ಟಿನ ಮೇಲೆ ಹಿಮಾಲಯದ ಯಾತ್ರೆಯು, ಸಂನ್ಯಾಸಿಗೆ ಹಾಗು ಸಂಪತ್ತುಳ್ಳವನಿಗೆ ಮಾತ್ರ ಅನುಕೂಲವು; ಮಧ್ಯಸ್ಥರಿಗೆ ತೊಂದರೆಯೆನಿಸಿದರೂ, ಭಾರತೀಯನು ಬದುಕಿರುವಾಗ ಒಮ್ಮೆಯಾದರೂ ಈ ಯಾತ್ರೆ ಮಾಡುವುದು ಆವಶ್ಯಕವಾದುದು. ಯೋಗ್ಯ ರೀತಿಯ ವ್ಯವಸ್ಥೆಯಿಂದ ಹೊರಟರೆ ಅಷ್ಟೇನು ತೊಂದರೆಯಾಗುವುದಿಲ್ಲ. ಆದರೆ ಬಹುಜನರು ಕೇವಲ ದೇವರ ಮೇಲೆಯೇ ಹೊರೆ ಹಾಕಿ, ಊಟ-ಉಡಿಗೆಗಳ ಯಾವ ವ್ಯವಸ್ಥೆಯೂ ಇಲ್ಲದೆ ಹೊರಟು ಬಹು ಕಷ್ಟಕ್ಕೀಡಾಗುವರಲ್ಲದೆ, ಜೀವವನ್ನು ಕೂಡ ಕಳೆದುಕೊಳ್ಳುತ್ತಿರುತ್ತಾರೆ. ಪ್ರಯುಕ್ತ ಮೇಲ್ಕಾಣಿಸಿದ ಎಲ್ಲ ಸಂಗತಿಗಳನ್ನೂ ಪರ್ಯಾಲೋಚಿಸಿ, ಯಾತ್ರಿಕರು ಯಾತ್ರೆ ಮಾಡ ಬೇಕಾಗಿ ಪುನಃ ಪುನಃ ಸೂಚಿಸಿ, ನನ್ನ ಲೇಖನವನ್ನು ಪೂರೈಸುತ್ತೇನೆ.

ಪುಣ್ಯದ ತಾಯಿ

(ಕಥೆ)

ಶ್ರೀ. ವರಗಿರಿ ಮಾರ್ತಾಂಡರಾಯರು ಎಂ.ಎ, ಬಿ.ಟಿ. ಧಾರವಾಡ

★

ತಿಳಿಯದಂತಿರುವ ಒಳಗಿನ ಸೆಳೆತವು ಒಲವಿಗೆ ಕಾರಣವಾಗುವುದು—ಎಂದು ಕವಿಪ್ರವರ ಭವಭೂತಿ ಹೇಳಿದ್ದಾನೆ. ಶ್ಯಾಮಸುಂದರನ ವಿಷಯದಲ್ಲಿ ತಳೆದ ಶಾಂತಾಬಾಯಿಯ ಒಲವಿಗೆ ಕೂಡ ಅಂತಹ ಒಳಸೆಳೆತವೇ ಕಾರಣವೆಂದು ಹೇಳಬಹುದಲ್ಲವೆ ?

★

ಆಯಿತು; ಇನ್ನು ಎರಡೇ ಎರಡು ದಿನ. ಎರಡು ದಿನ ಕಷ್ಟಪಟ್ಟು ಬಿಟ್ಟರೆ, ಎರಡು ರಾತ್ರಿ ನಿದ್ದೆಗೆಟ್ಟು ಬಿಟ್ಟರೆ, ಶ್ಯಾಮಸುಂದರನು ಆರು ತಿಂಗಳ ಪರೀಕ್ಷೆಯ ಕಳವಳದಿಂದ ಮುಕ್ತನಾದನು. ಆದರೂ, ಎರಡು ದಿನಗಳೂ ಅವನಿಗೆ ಎರಡು ಯುಗಗಳಷ್ಟು ದೀರ್ಘ ಎನಿಸಿವೆ. ಬೇಜಾರಿನಿಂದ ಕ್ಷಣಕ್ಷಣವೂ ಮಾರುದ್ದ ಹೀಚುತ್ತಿದೆ.

ಓದಿ ಓದಿ ತಲೆ ಭಾರವಾಗಿದ್ದುದರಿಂದ, ಅರ್ಧ ತಾಸಿನ ವರೆಗೆ ಹೊರಗೆ ಅತ್ತಿತ್ತ ಅಲೆದಾಡಿ ಬಂದರಾಯಿತೆಂದು, ಶ್ಯಾಮಸುಂದರ ಚಿತ್ತವನ್ನು ಖೋಲಿಯ ಕಿಟಕಿಯಿಂದಾಚೆ ಜೆಲ್ಲಿಪ. ಮುಂಜಿನಂತಹ ಮಳೆ ಚಿಟಿ-ಚಿಟಿ ಹಿಡಿದಿದ್ದಿತು. ಮೇಜಿನ ಮೇಲಿನ ಗಡಿಯಾರದತ್ತ ನೋಡಿದ. ಆಗಲೇ ಆರು ಹೊಡೆದಿತ್ತು. ಇನ್ನು ಅರ್ಧ ತಾಸು, ಆಷ್ಟರಲ್ಲಿ ಊಟದ ಡಬ್ಬಿ ಬರುವುದು. ಮಳೆಯಲ್ಲಿ ಹೋಗುವುದಾದರೂ ಎಲ್ಲಿ ? ಹೊರಗೆ ಹೋಗಲು ಅನುಕೂಲವಿಲ್ಲ; ಓದಲೂ ಮನಸ್ಸಿಲ್ಲ. ಡಬ್ಬಿ ಬರುವ ವರೆಗೆ ಸುಮ್ಮನೆ ಕುಳಿತರಾಯಿತೆಂದು ಮೇಜಿನ ಮುಂದಿನ ಖುರ್ಚಿಯನ್ನು ಹಿಂದೆ ಸರಿಸಿ, ಅಲ್ಲಿ ಕುಳಿತುಕೊಂಡ. ಮೇಜಿನ ಅಂಚಿನಲ್ಲಿ ಎರಡೂ ಉಂಗುಟಗಳನ್ನಿಟ್ಟು, ಖುರ್ಚಿಯ ಬೆನ್ನಿಗೆ ತನ್ನ ಬೆನ್ನನ್ನು ಹತ್ತಿಕ್ಕಿ, ಖುರ್ಚಿಯ ಹಿಂಗಾಲುಗಳ ಮೇಲೆ ತನ್ನನ್ನು ತೂಗಿಕೊಳ್ಳಹತ್ತಿದ. ಬಾಯಿದೆರೆದು ಎಡಗೈ ಬೆರಳುಗಳಿಂದ ಹಲ್ಲುಗಳನ್ನು ಕಟೆಯಹತ್ತಿದ. ಮೇಜಿನ ಮೇಲಿನ ಪುಸ್ತಕಗಳಲ್ಲಿ ಹುದುಗಿಕೊಂಡಿದ್ದ ಹಣಿಗೆಯನ್ನು ಹುಡುಕಿ, ಅಂದವಾಗಿ ತೆಗೆದಿದ್ದ ಬಯಿತಲನ್ನು ಕೆದಿಸಿ, ಕೂದಲನ್ನು ಹಿಂದೆ ಹಿಕ್ಕಲು ಪ್ರಯತ್ನಪಟ್ಟ. ಇಷ್ಟಾದರೂ ಗಡಿಯಾರದ ದೊಡ್ಡ ಮುಳ್ಳು ಹತ್ತು ಮನೆ ಸಹ ಮುಂದೆ ಸರಿದಿರಲಿಲ್ಲ. ಚಿಟ್ಟನೆ ಮೇಲೆ ಎದ್ದು, ಕಾಟನ ಮೇಲೆ ಧುಮುಕಿದ. ಮಂಚದ ಮಿದುತನದಿಂದ ಮನಸ್ಸಿನ ಆಯಾಸ, ಬೇಸರು ಸ್ವಲ್ಪ ಕಡಿಮೆಯಾಗಿ, ಮನಸ್ಸು, ಸವಿ-ಸವಿ ಬಯಕೆಗಳ ಬೆನ್ನು ಹತ್ತಿ ಓಡಹತ್ತಿತು :

'ಎರಡೇ ದಿನ. ಆ ಮೇಲೆ ತಾನು ರೆಕ್ಕೆ ಬಿಚ್ಚಿದ ಹಕ್ಕಿಗಿಂತಲೂ ಸ್ವತಂತ್ರ. ನಾಡಿದೇ ಊರಿಗೆ ಹೊರಡಬಹುದು; ಆರು ತಿಂಗಳ ನರೆಗೆ ಅಗಲಿ ಇದ್ದ ತಾಯಿಯ ಮೋರೆ ನೋಡಬಹುದು; ಆಕೆಯ ಅಂತಃಕರಣದ ಕರುಳಿನ ಸಾನ್ನಿಧ್ಯದಲ್ಲಿ ಸುಳಿದಾಡಬಹುದು; ಮನಸ್ಸಿಗೆ ಬಂದುದನ್ನು ಮೇಯಬಹುದು; ಪುಟ್ಟ ತಂಗಿಯೊಡನೆ ಜರಟಿ ಹೊಡೆಯಬಹುದು; ಕಣ್ತುಂಬ ನಿದ್ದೆ ಮಾಡಬಹುದು; ಹಚ್ಚ ಹಸುರಿನಲ್ಲಿ ವೈದಣಿಯೆ ತಿರುಗಾಡಿ ಬರಬಹುದು; ಮಟಮಟ ಮಧ್ಯಾಹ್ನದಲ್ಲಿ ತಿಳಿಗೊಳದ ತಿಳಿನೀರಿನಲ್ಲಿ ಈಸಬಹುದು; ಗೆಳೆಯರೊಡನೆ ಆಟವಾಡಬಹುದು.... '

ಆದರೂ ಇನ್ನೂ ಎರಡು ದಿನ ಕಳೆಯಬೇಕಲ್ಲ !

ಮತ್ತೆ ಮನ ಮುದುಡಿತು, ಕದಡಿತು; ಭಾರವಾಯ್ತು. ಶ್ಯಾಮಸುಂದರ ಮೇಲೆ ಎದ್ದು, ಈಗಾಗಲೇ ಕೋಣೆಯಲ್ಲಿ ಕವಿದುಕೊಂಡಿದ್ದ ಕತ್ತಲೆಯನ್ನು ಹೊರಹಾಕಲು, ವಿದ್ಯುದ್ದೀಪದ ಗುಂಡಿಯನ್ನು ಒತ್ತಿದ. ಹೊರಗೆ ಈಗ ಮಳೆ ಜೆನ್ನಾಗಿಯೇ ಬರಹತ್ತಿದ್ದಿತು. ಇರುಚಲ ಹನಿಗಳು ಕಿಟಕಿಯಿಂದ ಒಳಗೆ ಸಿಡಿದು, ಮೇಜಿನ ಮೇಲಿನ ಪುಸ್ತಕಗಳನ್ನು ತೋಯಿಸಹತ್ತಿದ್ದುವು. ನೋಡಿ ಕಿಟಕಿಗಳನ್ನು ಇಕ್ಕಿದ.

ಮಳೆ ನಿಲ್ಲುವ ಲಕ್ಷಣ ಕಾಣಲಿಲ್ಲ. ಪ್ರತಿಕ್ಷಣವೂ ಮಳೆಯ ಸಪ್ಪಳ ಹೆಚ್ಚುತ್ತಲೇ ಇದ್ದಿತು. ಇಂತಹ ಸುರಿಮಳೆಯಲ್ಲಿ ಊಟದ ಡಬ್ಬಿಯಾದರೂ ಬರುವುದೆಂತು ? ಖಾನಾವಳಿಯೇನು ಹತ್ತಿರ ಇದೆಯೇ ? ಮಳೆ ನಿಲ್ಲದೆ ಡಬ್ಬಿ ಬಾರದು. ಡಬ್ಬಿ ಬಂದ ಹೊರತು ಊಟವಿಲ್ಲ. ಊಟ ಮುಗಿಸಿಯೇ ಓದಲು ಸುರುವು ಮಾಡಬೇಕೆಂಬ ಸಂಕಲ್ಪ ಬೇರೆ. ಹೀಗಾಗಿ ಶ್ಯಾಮಸುಂದರ ಚೇಚಿನಲ್ಲಿ ಬಿದ್ದ.

ಆಷ್ಟರಲ್ಲಿ ಬಾಗಿಲ ಚಿಲಕ ತಟ್ಟಿದ ಸಪ್ಪಳ ಕೇಳಿಸಿತು.

೨

" ಯಾರವರು ? " ಎಂದ ಶ್ಯಾಮಸುಂದರ.

" ಡಬ್ಬಾ. " ಮಿದುವಾದ ನಡುಗುವ ಧ್ವನಿ ಕೇಳಿಸಿತು.

ಬಾಗಿಲು ತೆರೆಯಿತು.

ಬಾಗಿಲಲ್ಲಿ ಶಾಂತಾಬಾಯಿ—ನಾಲ್ವತ್ತು ನಾಲ್ವತ್ತೈದರ ವರುಷಗಳ ಹೆಣ್ಣುಮಗಳು—ನಿಂತಿದ್ದಾಳೆ. ಬಲಗೈಯಲ್ಲಿ ಅನ್ನದ ಡಬ್ಬಿ; ಕೆಳಗಿನ ಅಂಚಿನಗುಂಟ ಕೆಸರಡಸಿದ ಸೀರೆಯ ಮುಂದಿನ ನಿರಿಗೆಗಳು ಹೆಚ್ಚಿಗೆ ಕೆಸರಾಗಬಾರದೆಂದು, ಅವನ್ನು ಎಡದ ಕೈಯಿಂದ ಸ್ವಲ್ಪ ಎತ್ತಿ ಹಿಡಿದಿದ್ದಾಳೆ; ಮಳೆಯಿಂದ ಸೀರೆಯೆಲ್ಲ ತಪತಪ ತೊಯಿದು ಹೋಗಿದೆ; ತಲೆಯ ಕೂದಲಿನ ನೀರು ಗಲ್ಲಗಳ ಗುಂಟ ಇಳಿಯಹತ್ತಿವೆ; ಹರಿದು ಛಿದ್ರ-ಛಿದ್ರವಾದ ಸೀರೆಯೊಳಗಿಂದ ಅವಳ ಬಡತನವು ಹೊರಗೆ ಹಣಿಯಿಕ್ಕುತ್ತಿದೆ; ತೋಯಿಸಿಕೊಂಡು ಇದ್ದುದರಿಂದ ಅರ್ಧ, ತಾನು ಡಬ್ಬಿಯನ್ನು ಸ್ವಲ್ಪ ತಡವಾಗಿ ತಂದುದಕ್ಕೆ—

ಶ್ಯಾಮಸುಂದರನಿಗೆ ತಡವೆಲ್ಲಿ ಆಯಿತೋ ಎಂಬ— ಅಂಜಿಕೆಯಿಂದ ಅರ್ಧ, ಆಕೆ ನಡುಗುತ್ತಿದ್ದಳು. ಬಾಗಿಲನ್ನು ತೆರೆದೊಡನೆ, ಶ್ಯಾಮಸುಂದರನನ್ನು ಬೆದರುಗಣ್ಣಿನಿಂದ ಒಮ್ಮೆ ನೋಡಿ, ಡಬ್ಬಿಯನ್ನು ಕೋಣೆಯ ಮೂಲೆಯಲ್ಲಿಯ ಊಟದ ಮೇಜಿನ ಮೇಲೆ ಇಟ್ಟಳು. ಅಲ್ಲಿ ಅಸ್ತವ್ಯಸ್ತವಾಗಿ ಬಿದ್ದಿದ್ದ ಕವ್ಪು-ಬಸಿ, ಚಹಮಾಡಿದ ಡಬರಿ (ಪಾತೇಲಿ) ಮೊದಲಾದುವುಗಳನ್ನು ಹೊಂದಿಸಿ, ಬಾಗಿಲ ಹಿಂದೆ ತಂದಿಟ್ಟು, ತಾಟು-ತಂಬಿಗೆ-ಥಾಲಿಗಳನ್ನು ಅಣಿಮಾಡಿದಳು.

ಶಾಂತಾಬಾಯಿಯ ತೊಯ್ದ ಸೀರೆ, ಆಕೆಯ ನಡುಕ, ಆಕೆಯ ಅಂಜಿಕೆಯ ಮುಖಚರ್ಯೆ — ಇವೆಲ್ಲವನ್ನು ನೋಡಿ ಶ್ಯಾಮಸುಂದರನ ಎದೆ ಕರಗಿತು. ಕನಿಕರದ ಧ್ವನಿಯಿಂದ ಅವನೆಂದ : "ಇಂಥ ಮಳೆಯಲ್ಲಿಯೇ ಯಾಕೆ ತೋಯಿಸಿಕೊಂಡು ಬಂದೆ ಶಾಂತಾಬಾಯಿ ? ಮಳೆ ನಿಂತ ಮೇಲೆ ಬರಬಹುದಾಗಿತ್ತಲ್ಲ !"

ಬಾಗಿಲ ಹಿಂದೆ ಗೋಡೆಗೆ ಆತುಕೊಂಡು ನಿಂತ ಶಾಂತಾಬಾಯಿಗೆ, ಶ್ಯಾಮಸುಂದರನ ಕನಿಕರದ ಧ್ವನಿ ಧೈರ್ಯ ತಂದುಕೊಟ್ಟಿತು. ಮೋರೆಯ ಮೇಲಿನ ಹಸಿಮೆಯನ್ನು ಸೆರಗಿನಿಂದ ಒರಸಿಕೊಳ್ಳುತ್ತ ಆಕೆ ಉತ್ತರ ಕೊಟ್ಟಳು :

"ಮಳಿ ಇದ್ರ ಏನಾಗತೈತ್ರಿ ಸಾಹೇಬರ, ಸೀರಿ ಈಗ ಆರತೈತಿ. ನಾ ಖಾನಾವಳಿಗೆ ಹೋಗೂದ್ಯಾಗ ಡಬ್ಬಾ ತುಂಬಿ ಇಟ್ಟಿದ್ರು, ಅನ್ನ ಆರೀತೂ ಅಂತಾ ಗಡಾನಕ ತಂದು ಬಿಟ್ನಿ."

ಕೋಣೆಯ ನಡುವೆ ಜೋಲಾಡುತ್ತಿದ್ದ ವಿದ್ಯುದ್ದೀಪದ ಬೆಳಕು ಶಾಂತಾಬಾಯಿಯ ಮೋರೆಯ ಮೇಲೆ ತುಂಬಾ ಬಿದ್ದಿತ್ತು. ಕೆಂಪು ಬಣ್ಣ; ಆದರೂ ಇಳಿವಯಸ್ಸಿನ ಕಳೆ ಮೋರೆಯ ಮೇಲೆ ಎದ್ದು ಕಾಣುತ್ತಿದ್ದಿತು. ಹಣೆಯ ಮೇಲೆ, ಗಲ್ಲದ ಮೇಲೆ, ನಿರಿಗೆಗಳು ಮೂಡಿದ್ದುವು. ಎರಡೂ ಕಣ್ಣುಗಳ ಕೆಳಗೆ ಕಪ್ಪಗಿನ ದುಂಡು ಕಲೆಗಳು, ಹಿಂದೊಮ್ಮೆ ಅಂದವಾಗಿದ್ದಿರಬಹುದಾದ ಕಣ್ಣಳ ಜೆಲುವನ್ನು ಕುಗ್ಗಿಸಿದ್ದುವು. ದುಃಖದಿಂದಲೋ, ಕಷ್ಟದಿಂದಲೋ ಕಣ್ಣು-ಕೆರಡೂ ಕಣ್ಣೆಪ್ಪೆಗಳ ಆಳದಲ್ಲಿ ತೇಲಾಡುತ್ತಿದ್ದುವು. ತಲೆತುಂಬ ಇದ್ದ ಕೂದಲುಗಳಲ್ಲಿ ನರೆಗೂದಲುಗಳೂ ಏಗುಚುತ್ತಿದ್ದುವು. ಬೋಳುಗಿವಿ; ಬೋಳುಗೊರಳು. ಆದರೂ ಆಕೆಯ ಮುಖವನ್ನು ಒಂದು ಸಲ ನೋಡಿದರೆ ಸಾಕು—ಅವಳು ತನ್ನ ವಯಸ್ಸಿನಲ್ಲಿ ಸಾಕಷ್ಟು ಚೆಲುವೆಯಾಗಿರಬಹುದೆಂದು ಕಟ್ಟನೆ ಹೇಳಬಹುದು. ತೀಕ್ಷ್ಣಬುದ್ಧಿಯವರಿಗೆ ಅವಳ ಹೃದಯದ ಅಂತರಾಳದಲ್ಲಿ ಅದಾವುದೋ ಒಂದು ಅನಿರ್ವಚನೀಯವಾದ ದುಃಖವು ನೆಲೆಮಾಡಿಕೊಂಡಿರುವುದೆಂದೂ ತಕ್ಷಣ ಎನಿಸದೆ ಇರದು.

ಶ್ಯಾಮಸುಂದರ ತನ್ನ ಖುರ್ಚಿಯೊಂದನ್ನು ಊಟದ ಮೇಜಿನ ಕಡೆಗೆ ಸರಿಸಿಕೊಂಡು, ಕೈಯಲ್ಲಿ ಸ್ವಲ್ಪ ನೀರು ಹಾಕಿಕೊಂಡು ಅಲ್ಲಿಯೇ ತೊಳೆಮಳೆಕೊಂಡು, ಕೈಗಳ ತೋಳುಗಳನ್ನು ಮೇಲೆ ಏರಿಸಿ, ಡಬ್ಬಿಯ ಹಿಡಿಕೆಯನ್ನು ಉಚ್ಚೈಹತ್ತಿದನು. ಶಾಂತಾಬಾಯಿ ನಿಂತಲ್ಲಿಯೇ ನಿಂತಿದ್ದಳು. ಶ್ಯಾಮಸುಂದರ ಕೇಳಿದ :

"ನಿನ್ನ ಛತ್ರಿ ಇಲ್ಲೇನು ಶಾಂತಾಬಾಯಿ ?"

"ಇಲ್ರಿ ಸಾಹೇಬ. ಹೋದ ವರ್ಸ ಒಂದು ಕೊಂಡಿದ್ದೆ. ಖಾನಾವಳಿಯಾಗ ಹೊರ್ಯಾಕಿಟ್ಟು ಒಳ್ಯಾಕ ಡಬ್ಬಾ ತರ್ಲಾಕ ಹೋದಾಗ, ಯಾರೋ ಕದ್ದು ಬಿಟ್ಟರು. ತಿರುಗಿ ತಗೊಣ್ಣೋದು ಆಗಿಲ್ಲ."

ಈಗ ಆಕೆಯ ಚಿತ್ತ ಬದಿಯಲ್ಲಿಯೇ ಸ್ಟೋವಿನ ಮೇಲಿಟ್ಟ ಹಾಲಿನ ಡಬರಿಯ ಕಡೆಗೆ ಬಿತ್ತು. ಅದರಲ್ಲಿ ಹಾಲು ಇರಲಿಲ್ಲ.

"ಇಂದ ಹಾಲು ಉಳಿದಾಂಗ ಕಾಣೋದಿಲ್ಲ. ರಾತ್ರಿ ಚಾ ಮಾಡಾಕ ಹಾಲು ತಂದು ಕೊಡಲೇನ್ರಿ ?" ಎಂದಳಾಕೆ.

"ಈಗೇನೂ ಬೇಡವ್ವಾ. ಮಳೀ ಬರತಕದ." ಎಂದ ಶ್ಯಾಮಸುಂದರ.

ಅವನ ಊಟವಾದ ಮೇಲೆ ಎಲ್ಲವನ್ನೂ ತೊಳೆದು, ತಂಬಿಗೆಯಲ್ಲಿ ನೀರು ತುಂಬಿಟ್ಟು, ಡಬ್ಬಿಯನ್ನು ಸರಿಪಡಿಸಿಗೊಂಡು, ಅವನು ಬೇಡಬೇಡವೆಂದರೂ ತನ್ನ ಮನೆಯಿಂದ ಸ್ವಲ್ಪ ಹಾಲು ತಂದು ಕೊಡುವುದಾಗಿ ಹೇಳಿ, ಕೋಣೆಯಿಂದ ಹೊರಬಿದ್ದು ಹಿಂದಿನಿಂದ ಬಾಗಿಲು ಹಾಕಿಕೊಂಡಳು.

ಶಾಂತಾಬಾಯಿಯು ಶ್ಯಾಮಸುಂದರನಿಗೂ ಒಂದು ದೊಡ್ಡ ಸಮಸ್ಯೆಯೇ ಆಗಿದ್ದಳು. ಈ ಆರು ತಿಂಗಳ ಅವಧಿಯಲ್ಲಿ ಆಕೆಯ ಬಡತನ, ವಿನಯ, ಕಾರುಣ್ಯ, ಸೇವಾತತ್ಪರತೆ, ಸಭ್ಯತೆ ಮೊದ-

ಾದ ಗುಣಗಳ ನಡುವೆ, ತನ್ನ ವಿಷಯದಲ್ಲಿ ಒಂದು ವಿಶಿಷ್ಟ ತರ್ಹನೆಯನ್ನು ತೋರುತ್ತಿದ್ದುದು ಅವನಿಗೆ ಹೆಜ್ಜೆ ಹೆಜ್ಜೆಗೆ ಒಡೆದು ಾಣುತ್ತಿತ್ತು. ಆಕೆಯ ಪ್ರಥಮ ಪರಿಚಯವೂ ಒಂದು ವಿಚಿತ್ರ ೀತಿಯಿಂದಲೇ ಆಗಿದ್ದಿತು :

೩

ಐದಾರು ತಿಂಗಳುಗಳ ಹಿಂದೆ, ಶ್ಯಾಮಸುಂದರ ಪುಣೆಗೆ ಬಂದ ವಾರ ಎರಡು ವಾರಗಳಲ್ಲಿಯೆ ಊರಿಂದ ಪತ್ರ ಬಂದಿತ್ತು : ತಂದೆಗೆ ಜಪ್ತಾಗಿದ್ದಿತೆಂದೂ ಪುಣೆಯಿಂದ---ಸಾಧ್ಯವಾದರೆ—ಮೋಸಂಬಿಯ ಹಣ್ಣನ್ನು ಕಳಿಸಿಕೊಡಬೇಕೆಂದೂ. ಶ್ಯಾಮಸುಂದರ ಪತ್ರ ಬಂದ ದಿನವೇ ಸಂಜೆಯ ಮುಂದೆ, ಹಣ್ಣು ಕೊಂಡು ತರಲು 'ಮಂಡಯಿ'ಗೆ ಹೋದನು. ತನ್ನ ಸಾಯ್‌ಕಲ್ಲನ್ನು ಸ್ಟ್ಯಾಂಡಿನಲ್ಲಿ ಇಟ್ಟು, ಬಗ್ಗಿ ಪೈಜಮದ ತುದಿಗೆ ಸಿಲುಕಿಸಿದ ಸಾಯಕಲ್ ಕ್ಲಿಪ್ಪನ್ನು ತೆಗೆದುಕೊಳ್ಳುವಾಗ, ಅವನ ಚಿತ್ತ ಅಕಸ್ಮಾತ್ ಮಂಡಯಿಯ ಕಟಾಂಜನದ ಬಾಗಿಲ ಕಡೆಗೆ ಹೋಯಿತು. ಅಲ್ಲಿ ಮುಂದೆ ಒಂದೊಂದು ಬುಟ್ಟಿಯನ್ನೂ ಬುಟ್ಟಿಯಲ್ಲೊಂದೊಂದು ಸಿಂಬೆಯನ್ನೂ ಇಟ್ಟುಕೊಂಡು ಕುಳಿತ ಕೂಲಿಯ ಹೆಂಗುಸರಲ್ಲಿ ಒಬ್ಬಳು, ತಲೆಯನ್ನು ಎಡದ ಮೊಣಕಾಲ ಮೇಲೆ ಇರಿಸಿ, ಈತನ ಮುಖವನ್ನೇ ಹುಳುಹುಳು ನೋಡುತ್ತಿದ್ದುದನ್ನು ಕಂಡನು. ಅವಳು ಹಾಗೆ ನೋಡಲು ಹತ್ತಿ ಆಗಲೇ ಎರಡು ಮೂರು ಕ್ಷಣ ಆಗಿರಬಹುದು. ಆ ಅರಳಿದ ಬೆರಗಾದ ನಿಶ್ಚಲವಾದ ಕಣ್ಣುಗಳನ್ನು ತಿಳ್ಳಗಿನ ನೀರ ಪರೆ ಆವರಿಸಿದ್ದಿತು. ಇವನ ನೋಟ ಅವಳ ನೋಟಕ್ಕೆ ತಳಕು ಬಿದ್ದೊಡನೆ, ಆಕೆ ಬೆಚ್ಚಿಬಿದ್ದು ಮೋರೆಯನ್ನು ಬೇರೆ ಕಡೆಗೆ ಹೊರಳಿಸಿ, ಸೆರಗಿನಿಂದ ಕಣ್ಣೊರಸಿಕೊಂಡಳು.

ಶ್ಯಾಮಸುಂದರನಿಗೆ ಒಂದು ಕ್ಷಣ ಆಶ್ಚರ್ಯವಾಯಿತು.

ಮಂಡಯಿಯ ಒಳಗೆ ಹೋಗಿ, ಅಲ್ಲಿ ಇಲ್ಲಿ ಸುತ್ತು ಹಾಕಿ, ಹಣ್ಣಿನ ಬುಟ್ಟಿಯೊಂದನ್ನು ಕೊಳ್ಳುವಷ್ಟರಲ್ಲಿ ಹಿಂದಿನಿಂದ ಧ್ವನಿ ಬಂತು :

" ಕೂಲೀ ಪಾಹಿಜೇ ಕಾಯ್ ಸಾಹೇಬ? (ಕೂಲೀ ಬೇಕೇನು ಸಾಹೇಬರೆ!) "

ಶ್ಯಾಮಸುಂದರ ನೋರೆ ತಿರುಹಿದ. ಅದೇ ಹೆಂಗುಸು!

ಶ್ಯಾಮಸುಂದರನ ಹರುಕು ಮುರುಕು ಮರಾಠಿಯಿಂದ, ಇವನು ಕನ್ನಡ ಮನುಷ್ಯನೆಂದು ತಿಳಿಯಲು ಆಕೆಗೇನು ತಡ ಹಿಡಿಯಲಿಲ್ಲ. ಅವಳೂ ಕನ್ನಡದಲ್ಲಿಯೇ ಮಾತಾಡ ಹತ್ತಲು ಶ್ಯಾಮಸುಂದರನಿಗೆ ತುಂಬ ಆಶ್ಚರ್ಯ, ಆನಂದ. ಆಕೆಯ ಬಗ್ಗೆ ಆಪ್ತತ್ವ, ಆತ್ಮೀಯತೆ ಅವನಲ್ಲಿ ಸ್ವಾಭಾವಿಕವಾಗಿಯೇ ನೆಲಸಿದುವು.

ಶ್ಯಾಮಸುಂದರ ತನ್ನ ಮನೆ, ತನ್ನ ಊರು, ತನ್ನ ಜನ, ಬಿಟ್ಟು ದೂರ ಪರದೇಶದಲ್ಲಿ, ತನಗೆ ಗಂಧವೂ ಇಲ್ಲದ ಮರಾಠಿಯ ಹೃದಯನಾದ ಪುಣೆಗೆ ಬಂದುದು ಇದೇ ನೊದಲು. ಹೊರಡುವಾಗೇನೋ ಹೊಸ ಹುರುಪಿನಿಂದ ಹೊರಟು ಬಿಟ್ಟ. ಆದರೆ ಅಲ್ಲಿಗೆ ಹೋಗಿ ಎಂಟೇ ದಿನಗಳಲ್ಲಿ, ಪುಣೆಯ ಹೊಸತನ ಬೇಜಾರು ಬಂದು ಹೋಗಿದ್ದಿತು. ಮರಾಠಿಯ ಭಾಷೆ ಬಾರದ್ದಕ್ಕೆ ಹೆಜ್ಜೆ-ಹೆಜ್ಜೆಗೂ ಪೇಚಿನಲ್ಲಿ ಬೀಳುತ್ತಿದ್ದನು. ಕನ್ನಡ ಮಾತಾಡುವ ಜನ ಸಿಕ್ಕರೆ ಅವನಿಗೆ ಅಪರೂಪದ ವಸ್ತುವೇ ಸಿಕ್ಕಂತೆ.

ಅವನಿಗೆ ಕನ್ನಡ ಮಾತಾಡುವ ಒಂದು ಆಳಿನ ಅಗತ್ಯ ಬಹಳವಾಗಿದ್ದಿತು. ಸ್ವಲ್ಪ ಹೆಚ್ಚಿಗೆ ಸಂಬಳ ತೆಗೆದುಕೊಂಡರೂ ಚಿಂತೆಯಿಲ್ಲ, ಈ ಹೆಣ್ಣುಮಗಳನ್ನು ತನ್ನ ಕೆಲಸದ ಸಲುವಾಗಿ ನಿಚಾರಿಸಬೇಕೆಂದು ಮನದಂದ. ಅವನು ಈ ಪ್ರಸ್ತಾಪವನ್ನು ಆಕೆಯೊಡನೆ ಎತ್ತಿದಾಗ ಆಕೆ ಒಮ್ಮೆಲೆ ಒಪ್ಪಿಕೊಂಡಿದ್ದರಿಂದ, ಅವನಲ್ಲಿ ಆಕೆಯ ಬಗ್ಗೆ ಕುತೂಹಲ ಹೆಚ್ಚಿತು.

ಮರುದಿನದಿಂದಲೇ ಶಾಂತಾಬಾಯಿ ಅವನ ಕೆಲಸಕ್ಕೆ ಪ್ರಾರಂಭ ಮಾಡಿದಳು. ಕೆಲಸಕ್ಕೆ ಆರಂಭಿಸಿದ ದಿನದಿಂದಲೇ ಅವನು ಇವಳಲ್ಲಿ ಕೆಲವು ವೈಶಿಷ್ಟ್ಯಗಳನ್ನು ಕಾಣಹತ್ತಿದನು. ದಿನದಿನಗಳು ಉರುಳಿದಂತೆ, ಅವಳ ಬಗ್ಗೆ ಇವನ ಕುತೂಹಲ ಸಹಾನುಭೂತಿಗಳು ಹೆಚ್ಚಹತ್ತಿದುವು. ಆಕೆಯ ವಯಸ್ಸು, ಸೌಜನ್ಯ, ತನ್ನ ಬಗ್ಗೆ ತೋರುವ ಆದರ—ಇವೆಲ್ಲ ಅವನಲ್ಲಿಯೂ ಅವಳ ಬಗ್ಗೆ ಆದರವನ್ನು ಹುಟ್ಟಿಸಿದುವು. ತನಗೆ ಬೇಜಾರು ಬಂದಾಗ, ತನ್ನ ಮನಸ್ಸು ನೊಂದಾಗ, ತನ್ನ ತಾಯಿ-ತಂದೆಗಳ ನೆನಪಾದಾಗ, ಆಕೆಯನ್ನು

ZANDU

PROTOCASEIN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City)

ಭಸ್ಮಗ್ರಸ್ತ ಆಯುರ್ವೇದ ವಿದ್ವಾನ್ ಜಿ. ವಿ. ಪಂಡಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಕೂಡಿಸಿಕೊಂಡು ಹರಟೆ ಹೊಡೆಯುತ್ತಿದ್ದನು. ಆಕೆಯಾದರೂ ತಾನು ಆಳು, ಅವನು ಒಡೆಯ; ತಾನು ಹೆಂಗುಸು, ಅವನು ಗಂಡುಸು; ತಾನು ಬಡವಳು, ಅವನು ದೈವುಳ್ಳವ; ತಾನು ಅಸಂಸ್ಕೃತಳು, ಅವನು ಸಂಸ್ಕೃತನು; ತಾನು ನಿರಕ್ಷರಿ, ಅವನು ಸುಶಿಕ್ಷಿತ—ಎಂಬುದೆಲ್ಲವನ್ನೂ ಲಕ್ಷ್ಯಿಸಿ, ಅವನೊಡನೆ ನಿತಿಯಿಂದ, ಸಭ್ಯತೆಯಿಂದ, ವಿನಯದಿಂದ ನಡೆಯುತ್ತಿದ್ದಳು. ಅವನು ಕೇಳಿದ ಮಾತಿಗೆ ಉತ್ತರಕೊಡುತ್ತಿದ್ದಳು; ಆದರೆ ಅವನಿಗೆ ತಿರುಗಿ ಪ್ರಶ್ನೆಮಾಡುವುದು ವಿರಲವಾಗಿ. ಒಂದು ಪ್ರಶ್ನೆಗೆ ಉತ್ತರ ಒಂದೇ ಮಾತಿನಲ್ಲಿ! ಅಂತೆಯೇ ಅವನಿಗೆ ಅವಳ ಜೀವನದ ಅಭ್ಯಾಸ ಮಾಡಬೇಕೆಂದು ಅದೆಷ್ಟೋ ಕುತೂಹಲವಿದ್ದಿತಾದರೂ, ತಾನೇ ಕೆದರಿ ಕೆದರಿ ತೆಗೆಯುವ ಮನಸ್ಸಾಗಲಿಲ್ಲ. ಒಂದೆರಡು ಸಲ ಅಕಸ್ಮಾತ್ತಾಗಿ ಅವಳ ಬಾಯಿಂದಲೇ ಹೊರಟ ಕೆಲವು ಸಂಗತಿಗಳ ಮೇಲಿಂದ, ಆಕೆ ಮುರಾಠರವಳೆಂದೂ ಹುಟ್ಟಿದೂರು ಧಾರವಾಡ ಜಿಲ್ಲೆಯ ಒಂದು ಹಳ್ಳಿಯೆಂದೂ ಗಂಡನು ದುಡಿಯಲು ಪುಣೆಗೆ ಬಂದವನು ತೀರಿಕೊಂಡು ಆಗಲೇ ಹದಿನೈದು ವರುಷಗಳ ಮೇಲೆ ಆಯಿತೆಂದೂ ಪರಿಚಯ ಸಂಗ್ರಹಿಸಿದ್ದನು. ಅವಳ ಜೀವನವು ಅವನಿಗೊಂದು ಸಮಸ್ಯೆಯಾಗಿದ್ದಂತೆ, ಅವಳ ಮನಸ್ಸಿನ ಹಿನ್ನೆಲೆಯೂ ಒಂದು ಸಮಸ್ಯೆಯೇ ಆಗಿದ್ದಿತು—ಎಂಬುದು ಕೆಳಗಿನ ಸಂಗತಿಗಳ ಮೇಲಿಂದ ಯಾರಿಗಾದರೂ ಎನಿಸಬಹುದು.

೪

ನಾಲ್ಕು ತಿಂಗಳ ಹಿಂದಿನ ಮಾತು. ಶ್ಯಾಮಸುಂದರ ತನ್ನ ಕಾಲೇಜಿನ ಕೆಲಸ ಮುಗಿಸಿಕೊಂಡು, ಆ ದಿನ ಸ್ವಲ್ಪ ತಡವಾಗಿಯೇ ಕೋಣೆಗೆ ಬಂದ. ದೂರದಲ್ಲಿದ್ದಾಗಲೇ ಕೋಣೆಯ ಬಾಗಿಲು ತೆರೆದದ್ದನ್ನು ಕಂಡು ಸ್ವಲ್ಪ ಗಾಬರಿಯಾದ. ಸಂಜೆಯ ಐದೂವರೆಯ ಸುಮಾರಿಗೆ ಶಾಂತಾಬಾಯಿಯು ಮಧ್ಯಾಹ್ನದ ಕಪ್ಪು-ಬಸಿ ತೊಳೆಯಲು ಬರುತ್ತಿದ್ದುದು ನೆನಪಿಗೆ ಬಂತು. ಆಕೆಯ ಕಡೆಗೆ ಒಂದು ಕೀಲಿಯ ಕೈಯನ್ನು ಕೊಟ್ಟದ್ದೂ ನೆನಪಿದ್ದಿತು. ಆದರೂ ಅವನಿಗೆ ಸ್ವಲ್ಪ ಸಂಶಯ ಬಂದು, ತಾನು ಕಾಣದಂತೆ ಬದಿಯಿಂದಲೇ ಮೆಲ್ಲಗೆ ಕೋಣೆಯ ಕಡೆಗೆ ಹೊರಟ. ಬಾಗಿಲ ಎದುರಿಗೆ ಇದ್ದ ಚಹದ ಮೇಜು ದೂರದಿಂದಲೇ ಕಾಣುತ್ತಿತ್ತು. ಶಾಂತಾಬಾಯಿ ಅಲ್ಲಿ ಇರಲಿಲ್ಲ. ಸಂಶಯ ಸ್ವಲ್ಪ ಹೆಚ್ಚಿ, ನೆಟ್ಟಗೆ ಖೋಲಿಯಲ್ಲಿಯೇ ಹೋಗದೆ, ಆದರ ಹಿಂಬದಿಗೆ ಹೋಗಿ, ಅಲ್ಲಿ ಮೂಲೆಯಲ್ಲಿದ್ದ ಕಿಟಕಿಯೊಳಗಿಂದ ಓರೆಯಾಗಿ ಹಣೆಯಿಕ್ಕಿ ನೋಡಿದ.

ಕೋಣೆಯ ಎಡಗಡೆಯ ಗೋಡೆಯ ಮೇಲೆ, ಶ್ಯಾಮಸುಂದರ ಅದೇ ತೆಗೆಸಿದ ತನ್ನದೊಂದು ಫೋಟೋ ಹಾಕಿದ್ದನು. ಅದರ ಮುಂದೆ, ಕಾಟನ ತಲೆಯ ಕಡೆಯ ಕಟಾಂಜನಕ್ಕೆ ತನ್ನ ಕೈಗಳನ್ನು ಆನಿಸಿ, ಮೈಯನ್ನೆಲ್ಲ ಮುಂದಕ್ಕೆ ಬಾಗಿಸಿ, ಶಾಂತಾಬಾಯಿ, ಆ ಫೋಟೋವನ್ನೇ ನಿಟ್ಟಿಸಿ ನೋಡುತ್ತಿದ್ದಾಳೆ.

ಫೋಟೋದಲ್ಲಿ ಶ್ಯಾಮಸುಂದರ ಕೈಯಲ್ಲಿ ಟೆನಿಸು-ರ್ಯಾಕೇಟು ಹಿಡಿದಿದ್ದಾನೆ. ಮೈಮೇಲೆ ಬಿಳಿಯ ಹಾಫ್ ಶರ್ಟ್; ಬಿಳಿಯ ಹಾಫ್ ಪ್ಯಾಂಟು; ಬಿಳಿಯ ಕ್ಯಾನ್‌ವಾಸ್ ಶ್ಯೂಜು; ಕ್ಯಾನವಾಸ್ ರೂಜಿನ ಮೇಲೆ ಮಡಿಚಿದ ಬಿಳಿಯ ಕಾಲುಚೀಲಗಳು; ಹಾಫ್ ಪ್ಯಾಂಟಿನ ಬಲದ ಕಿಸೆಯಲ್ಲಿ ಸ್ವಲ್ಪೇ ಹೊರಗೆ ಕಾಣುವ ಬಿಳಿಯ ಕರವಸ್ತ್ರ; ಕಂಠದಲ್ಲಿ ಬಂಗಾರದ ಎಳೆ; ಎಡಗೈಯಲ್ಲಿ ಗಡಿಯಾರ; ಬಯಿತಲೆಯ ತಲೆ; ಕಾಣುವ ಮೈಯೆಲ್ಲ ಹುರಿಕಟ್ಟಿನದು; ಅದೇ ಅಂಕುರಿಸಿದ ಮೀಸೆಗೆ ಫ್ರೆಂಚ್ ಕಟ್ಟು; ನೊಗವು ನೋಡಲು ಸುಂದರ; ತುಂಬಿದ ಗಲ್ಲ; ಬಲಗಡೆ ಗಲ್ಲ-ಗದ್ದಗಳ ನಡುವೆ ಅಂದವಾದ ಮಚ್ಚೆಯೊಂದು.

ಶಾಂತಾಬಾಯಿ ಅಲ್ಲಿ ನಿಂತು ಎಷ್ಟು ಹೊತ್ತು ಆಗಿದ್ದಿತೋ ಏನೋ? ಫೋಟೋದಲ್ಲಿ ನೆಟ್ಟ ದೃಷ್ಟಿ ಅಚಲವಾಗಿದೆ. ಆಕೆಯ ಬಾಗಿದ ದೇಹವು ಹಾಗೆಯೇ ಇದೆ. ಆದರೆ ಕಣ್ಣುಗಳಲ್ಲಿ ಸೆಲೆಯೊಡೆಯುತ್ತಿದ್ದ ಕಂಬನಿಗಳನ್ನು ಆಕೆ ಆಗಾಗ ಸೀರೆಯ ಸೆರಗಿನಿಂದ ಒರಸಿಕೊಳ್ಳುತ್ತಿದ್ದಳು ಮಾತ್ರ.

ಶ್ಯಾಮಸುಂದರನಿಗೆ ಏನೂ ತಿಳಿಯದಾಯ್ತು. 'ಇದೊಂದು ವಿಚಿತ್ರ ವ್ಯಕ್ತಿ' ಎಂದು ಮನದಂದು, ತಿರುಗಿ ಬಾಗಿಲ ಕಡೆಗೆ ಬಂದ. ತಾನು ಹಿಂದೆ ನಿಂತು ಆಕೆಯನ್ನು ನೋಡಿದ್ದು ಆಕೆಗೆ

ತ್ತಳಯಬಾರದೆಂದು, ಆಗ ತಾನೇ ಬಂದನೋ ಏನೋ ಎನ್ನುವಂತೆ ಯಾರದು ಒಳಗೆ ? ' ಎನ್ನುತ್ತ ಬಾಗಿಲ ಬಳಿ ಬಂದ.

ಶಾಂತಾಬಾಯಿ ಕಕ್ಕಾವಿಕ್ಕಿಯಾಗಿ ಕಣ್ಣೊರಸಿಕೊಂಡು " ನಾನ್ರಿ, ಶಾಂತಾಬಾಯಿ ! " ಎಂದು ಕಪ್ಪು-ಬಸಿಗಳನ್ನು ಕಲೆಹಾಕಹತ್ತಿದಳು. ಶ್ಯಾಮಸುಂದರ ನಗೆಮೊಗದಿಂದ ಸಹಜವಾಗಿ, " ಏನು ಶಾಂತಾಬಾಯಿ, ನಾನು ಬರೋದು ಸ್ವಲ್ಪ ತಡಾ ಆಯಿತು. ನಿನಗೆ ತೊಂದರಿ ಆಗಲಿಲ್ಲವಷ್ಟೇ ? " ಎಂದ.

ಆಕೆ, "ನನಗೇನು ತ್ರಾಸ್ರಿ ? ನೀವು ಬರದಿದ್ರ ಹತೀಲೆ ಕೀಲೀ ಕೈ ಐತಿ. ನಿಮ್ಮದು ಇನ್ನೂ ಜಾ ಆಗಿಲ್ಲ ಕಾಣತೈತಿ. ಭಾಂಡೀ ತೊಳ್ದು ಕೊಡಲ್ಯಾ ? " ಎಂದಳು.

" ಈಗೇನು ಬ್ಯಾಡ. ನಾನು ಚಹಾ ಕುಡಿದು ಬಂದೇನಿ. ಅಲ್ಲ ಶಾಂತಾಬಾಯಿ, ನಿನ್ನ ಪಗಾರ ತೊಗೊಂಡು ಬಿಡು! ನಾಲ್ಕು ತಿಂಗಳಾಯಿತು—ನೀನು ಒಯ್ಯದೆ. "

" ಬ್ಯಾಡ್ರಿ ಸಾಹೇಬರ, ನಿಮ್ಮ ಕಡೇನ ಇರಲಿ ಅನಕಾ " ಎಂದು ಆಕೆ ತನ್ನ ಕೆಲಸ ಮುಗಿಸಿ, ಹೊರ-ಹೊರಟಳು. ಅತ್ತಿದ್ದ ಕಣ್ಣಳ ಕೆಂಪು ಆಕೆ ಹೋಗುವಾಗ ಇನ್ನೂ ತಿಳಿಯಾಗಿರಲಿಲ್ಲ.

೫

ಒಂದು ಸಲ ತಿರುಗಾಡಲು ಹೋದಾಗ ಚಳಚಳಿಯೆನಿಸಿ ಕೋಣೆಗೆ ಬಂದವ, ತಲೆಗೆ ಸ್ಕಾರ್ಫನ್ನು ಬಿಗಿದುಕೊಂಡು ದೀಪವನ್ನಾರಿಸಿ, ಕೋಣೆಯ ಬಾಗಿಲುಗಳನ್ನು ಮುಂದೆ ಮಾಡಿ ಮಲಗಿ ಬಿಟ್ಟ ಶ್ಯಾಮಸುಂದರ. ತಲೆ ಹೊಡೆಯಹತ್ತಿದ್ದಿತು. ಮೈ ಕಾಯ್ದಿದ್ದಿತು.

ತಿರುಗಿ ಅವನಿಗೆ ಎಚ್ಚರಾದದ್ದು ಸರಿರಾತ್ರಿಯಲ್ಲಿಯೆ. ಮೈಯೆಲ್ಲ ಬೆವರು. ಅಂಗಿ ತೊಯಿದು, ಆ ಹಸಿಯಿಂದ ಅವನಿಗೆ ಸ್ವಲ್ಪ ಚಳಿಯಾಗಹತ್ತಿದ್ದಿತು. ಮುಸುಕು ತೆಗೆದು ನೋಡಲು, ಕೋಣೆಯಲ್ಲಿ ದೀಪ ಮೂಡಿದ್ದಿತು; ಬಾಗಿಲು ತೆರೆದಿದ್ದಿತು. ಅವನು ಬೆಚ್ಚಿ ಬಿದ್ದ; ಅತ್ತಿತ್ತ ನೋಡಿದ. ಕಾಲ್ದೆಸೆಗೆ, ಬಾಗಿಲ ಹಿಂದೆ ಶಾಂತಾಬಾಯಿ ಕಾಲು ಮುದುಡಿಸಿಕೊಂಡು, ಎಡದ ತೋಳನ್ನು ತಲೆಯ ಕೆಳಗಿಟ್ಟುಕೊಂಡು ಅಡ್ಡವಾಗಿದ್ದಳು. ಆಕೆಯ ಮುಂದೆಯೇ ಕಾಟನ ಕಾಲ ಹತ್ತಿರ, ಒಂದು ಕಂಚಿನ ಗಿಂಡಿಯೂ ಅದರ ಮೇಲೆ ಮೋಸಂಬಿಯ ತೊಳೆಗಳಿಂದ ತುಂಬಿದ ಬಸಿಯೂ ಇದ್ದುವು. ಮೇಜಿನ ಮೇಲೆ ಅನ್ನದ ಡಬ್ಬಿಯು ದಾರಿ ನೋಡುತ್ತಿದ್ದಿತು.

" ಶಾಂತಾಬಾಯಿ ? "

ಶಾಂತಾಬಾಯಿ ಸರಕ್ಕನೆ ಎದ್ದು ಕುಳಿತಳು.

" ನೀನು ಯಾವಾಗ ಬಂದೆಯವ್ವಾ ? "

" ಬಂದು ಆಗಲೇ ತಾಸಿನ ಮ್ಯಾಗ ಆತ್ರಿ. ಮೂರೂ ಜೆಂಜಿಗೆ ಡಬ್ಬೀ ಇಡ್ಲಾಕ ಬಂದಾಗ ನೀವು ಮಲಗಿಕೊಂಡಿದ್ರಿ. ತಾಪ (ಜ್ವರಾ) ಬಂದಿದ್ದೂ ಕಾಣಸತೈತಿ, ನೆಳ್ಳಾಕಹತ್ತಿದ್ರಿ. ಮುತ್ತು ಒಂದು ತಾಸು ಇಟ್ಟು ಬಂದೆ. ಆಗೂ ಹಂಗs ಮಲಗಿದ್ರಿ. ಡಬ್ಬಾನೂ ಹಾಂಗೇ ಕುಂತಿತ್ತು. ತಾಪ ಬಹಳ ಬಂದಿದ್ದೇನ್ರಿ?.....ಉಪಾಸ ಅದಾರು ಎರಡು ಮೋಸಂಬೀ ಹಣ್ಣಾರs ತರೂಣಾ ಅಂತ ಪ್ಯಾಟಿಗೆ ಹೋದ್ರ, ಅಂಗಡಿ ಬಂದ ಆಗಿದ್ದವು. ಆ ಬಾಗವಾನ ನರಸಿಂಗಸಾನ ಮನೀ ನೋಡಿದ್ದೆನ್ರಿ! ಮನಿಯಾಗರ ಏನಾರ ಸಿಕ್ಕಾವಂತ ಅವನ ಮನೀಗೆ ಹೋದೆ. ಹೀಂಗೀನ ಮಾತು ಹೀಂಗ....ನಮ್ಮ ಸಾಹೇಬ್ರಿಗೆ ತಾಪ ಬಂದಾವ, ಬೇಕಾರ ಎರಡು ಆಣೆ ಹೆಚ್ಚಿಗಿ ತೊಗೋ—ಅಂದಕೂಡ್ಲೆ, ಆ ಮಾರಾಯಾ ಮನಿಯಾನವೇ ಎರಡು ಹಣ್ಣು ಕೊಟ್ಟ. ಮನೀಗೆ ಬಂದು, ತುಸು ಕಾಪೀ ಕಾಸಿಕೊಂಡು ಬಂದು ನೋಡತ್ಕೀ, ಇನ್ನೂ ಮಲಗೇ ಇದ್ರಿ. ಈಗ ಎದ್ದಾರು—ಅಂತ ಕುಂತುಗೊಂಡಾಗ ಹಾಂಗs ಜಂಪು ಹತ್ತಿತ್ತು ನೋಡ್ರಿ! ಕಾಪಿ ಆರೈತೀ ಏನ್ರಿ, ಎರಡು ತೊಳೀ ತಿಂದು ಕಾಪಿ ಕುಡೀತೀರಾ? " ಎಂದು ಆಕೆ ಮೋಸಂಬಿಯ ಬಸಿಯನ್ನು ಅವನ ಗಾದೆಯ ಮೇಲೆ ಇಟ್ಟಳು. ಕಪ್ಪಿನಲ್ಲಿ ಗಿಂಡಿಯಲ್ಲಿಯ ಕಾಫಿಯನ್ನು ಸುರುವಿದಳು.

ಶಾಂತಾಬಾಯಿಯ ನಿರ್ಮಲ ಅಂತಃಕರಣ, ಹೆಣ್ಣೆದೆಯ ಶ್ಯಾಮಸುಂದರನ ಕಣ್ಣಲ್ಲಿ ನೀರು ತರಿಸಿತು. " ಶಾಂತಾಬಾಯಿ, ನೀನು ನನ್ನ ಆಳಲ್ಲ ; ತಾಯಿ " ಎಂದ.

ಆಗ ಆಕೆಗೆ ಏನೋ ಹೇಳಬೇಕೆನಿಸಿತು. ನಾಲಗೆಯ ತುದಿಯವರೆಗೆ ಬಂದ ಮಾತನ್ನು ನುಂಗಿಕೊಂಡಳು.

— ಶರಚ್ಚಂದ್ರರ ಶ್ರೇಷ್ಠ ಕಾದಂಬರಿ —

ಶ್ರೀ ಕಾಂತ

(ಎಂಟು ಭಾಗಗಳೂ ಪೂರ್ಣ ಆಯ್ತಾಗಿವೆ)

ಬೆಲೆ ಹತ್ತು ರೂಪಾಯಿ ಮಾತ್ರ

ಪರಭಾಷೆಗಳಲ್ಲಿಯೂ ಭಾಷಾಂತರವಾಗಿ, ಎಲ್ಲೆಲ್ಲಿಯೂ ಮನ್ನಣೆ ಪಡೆದ ಸ್ವಾರಸ್ಯವಂತ ಕಾದಂಬರಿ. ಕೆಲವೇ ಪ್ರತಿಗಳಿವೆ. ೧೦ ರೂ. M. O. ಕಳಿಸಿ, ಈಗಲೇ ತರಿಸಿಕೊಳ್ಳಿರಿ.

ಬೇರೆ ಕೆಲವು ಶರತ್ಚಾದಂಬರಿಗಳು

ದೇವದಾಸ (ಅಂಚೆವೆಚ್ಚ ಸೇರಿ ೧—೧೨—೦
ವಿಜಯಾ ,, ೧—೧೨—೦
ವೈಕುಂಠನ ಮೃತ್ಯುಪತ್ರ ,, ೧—೧೨—೦
ರಾಜಲಕ್ಷ್ಮಿ ,, ೧—೧೨—೦
ಷೋಡಶಿ ,, ೨— ೬—೦
ಚಿತ್ರ ,, ೧— ೦—೦

(ಪ್ರೇಮಸಖಿ, ಹೇಮಾಂಗಿನಿ, ಮಹೇಶ, ಗುರುಚರಣ, ಮಂಗಲಸೂತ್ರ, ಮಹಾಸತಿ, ಅಭಾಗಿನಿ ಸ್ವರ್ಗ ಈ ಏಳು ಕತೆಗಳ ಸೂಡು ೨—೦—೦)

ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ :—

ಸಮಾಜ ಪುಸ್ತಕಾಲಯ, ಧಾರವಾಡ.

ಕಡೆಗೊಮ್ಮೆ ಶ್ಯಾಮಸುಂದರನ ಪರೀಕ್ಷೆ ಮುಗಿಯಿತು. ಮೈ ಭಾರವೆಲ್ಲ ಇಳಿದಂತಾಯಿತು. ಪರೀಕ್ಷೆ ಮುಗಿದ ದಿನವೇ ಊರಿಗೆ ಹೊರಡಬೇಕೆಂದು ಮೊದಲೇ ನಿಶ್ಚಯಿಸಿಕೊಂಡಿದ್ದ. ತನ್ನ ಅನುಕೂಲತೆಗೋ ಏನೋ ಎನ್ನುವಂತೆ, ಕಡೆಯ ಪೇಪರು ಮುಂಜಾನೆಯೇ ಇದ್ದಿತು. ಪೇಪರು ಮುಗಿಸಿಕೊಂಡು ಕೋಣೆಗೆ ಬರುವಷ್ಟರಲ್ಲಿ, ಶಾಂತಾಬಾಯಿ ಕೋಣೆಯ ಕಸ ತೆಗೆದು, ಕಪ್ಪು ಬಸಿಗಳನ್ನು ತೊಳೆದು ಅನ್ನದ ಡಬ್ಬಿಯನ್ನು ತುಂಬಿಸಿಕೊಂಡು ಬರಲು ಹೊರಟು ನಿಂತಿದ್ದಳು.

"ಶಾಂತಾಬಾಯಿಾ, ಸ್ವಲ್ಪ ತಡೆ." ಎಂದ ಅವನು.

ಆಕೆ ನಿಂತಳು.

"ಈ ದಿನ ಡಬ್ಬೀ ತರಬೇಡ."

"ಯಾಕ್ರೀ ಸಾಹೇಬ ?"

"ನಾನೇ ಅಲ್ಲಿ ಹೋಗಿ ಊಟ ಮಾಡಿ ಬರತೇನೆ."

ಕೀಲಿಯನ್ನು ತೆಗೆದು ಶ್ಯಾಮಸುಂದರ ಒಳಹೊಕ್ಕ. ಶಾಂತಾಬಾಯಿಯೂ ಅವನ ಬೆನ್ನ ಹಿಂದೆ ಹೋಗಿ ಮೂಲೆಯಲ್ಲಿ ಡಬ್ಬಿಯನ್ನಿಟ್ಟಳು. ಶ್ಯಾಮಸುಂದರನು ತಾನು ಹಾಕಿಕೊಂಡಿದ್ದ ಕೋಟನ್ನು ಪಟ್ಟಿಗೆ ಸಿಕ್ಕಿಸಿ, ಕಾಟನ ಮೇಲೆ ಅಡ್ಡಾಗಿ ಎಂದ:

"ಇನ್ನೊಂದು ಮಾತು, ಶಾಂತಾಬಾಯಿ: ನಾನು ಈ ದಿನ ಎರಡೂವರೆ ಗಾಡಿಗೆ ಊರಿಗೆ ಹೋಗತೇನೆ"

"ಇವತ್ತs ಹೊರಡತೀರಾ ?" ಆಕೆ ಆಶ್ಚರ್ಯದಿಂದ ಕೇಳಿದಳು, "ತಿರಗಿ ಎಂದ ಬರತೀರಿ, ಸಾಹೇಬ್ ?"

"ಇನ್ನು ನಾನು ತಿರುಗಿ ಬರೋದೆ ಇಲ್ಲ. ಮುಂದಿನ ಟರ್ಮು ಧಾರವಾಡಕ್ಕೆ ಹೋಗತೀನಿ."

"ತಿರುಗಿ ಬರೋದೆ ಇಲ್ಲರೀ ?"

"ಇಲ್ಲ."

"ಎಂದೂ ಬರೋದೇ ಇಲ್ಲರೀ ?"

ಈ ಪ್ರಶ್ನೆ ಕೇಳುವಾಗ ಶಾಂತಾಬಾಯಿಯ ಮೋರೆ ಬಾಡಿದ್ದಿತು. ಅವಳಿಗೆ ಕೆಟ್ಟೆನಿಸಿದ್ದುದು ಯಾರಿಗಾದರೂ ಹೊಳೆಯ ಬಹುದಾಗಿದ್ದಿತು. ಶ್ಯಾಮಸುಂದರ ಬೇಕೆಂದೇ ಉತ್ತರ ಕೊಡಲಿಲ್ಲ.

ಶಾಂತಾಬಾಯಿ ಗೋಡೆಗೆ ಎಡಭುಜವನ್ನಾನಿಸಿ, ಎಡಗೈಯಲ್ಲಿ ಗಲ್ಲವನ್ನಿಟ್ಟು, ತಲೆಯನ್ನೂ ಗೋಡೆಗೆ ಒರಗಿಸಿ ನೆಲವನ್ನು ನಿಟ್ಟಿಸಹತ್ತಿದಳು. ನೋಡು-ನೋಡುತ್ತಲೇ ಅವಳ ಎರಡೂ ಕಣ್ಣಾಳೂ ನೀರಿನಲ್ಲಿ ತೇಲಹತ್ತಿದುವು.

ಒಂದು ನಿಮಿಷ ನಿಶ್ಶಬ್ದ. ಶಾಂತಾಬಾಯಿ ಉಸಿರುಗರೆದು ಕಣ್ಣು ಒರೆಸಿದಳು. ತುಂಬಿದ ಕಣ್ಣಾಳ ಕುಣಿಕೆಗಳೊಳಗಿಂದ ಕಣ್ಣೀರು ಹೊರಜಿಲ್ಲಿದುವು.

"ಶಾಂತಾಬಾಯ್ಗೆ" ಎಂದ ಶ್ಯಾಮಸುಂದರ.

"ಸಾಹೇಬ." ಎಂದಳಾಕೆ ಮೋರೆಯನ್ನು ಅವನೆಡೆಗೆ ತಿರುಹಿ.

"ಆರು ತಿಂಗಳ ವರೆಗೆ ನೀನು ನನ್ನನ್ನು ಮಗನಂತೆ ಜೋಪಾನ ಮಾಡಿದಿಯವ್ವಾ! ನನ್ನಿಂದ ನಿನಗೆ ತ್ರಾಸ ಮಾತ್ರ ಆಯಿತು."

"ತ್ರಾಸ ಎಲ್ಲೀದು ಸಾಹೇಬ್. ನನ್ನ ಯಜಮಾನ ತೀರಿ ಮ್ಯಾಗ, ಈ ಹದಿನೈದು ಹದಿನಾರು ವರಸದಾಗ, ನಾನು ಹೊಟ್ಟ ತುಂಬ ಉಂಡು ಕಣ್ತುಂಬ ನಿದ್ರೀ ಮಾಡಿದ್ದು ಇದೇ ಆರು ತಿಂಗಳು." ಎಂದು ಕಣ್ಣೊರಸಿಕೊಂಡಳು. ಮುಂದೆ ಒಂದು ಕ್ಷಣ ಮತ್ತೆ ಶಾಂತತೆ. ಆಮೇಲೆ ಆಕೆಯೇ ಮಾತಿಗೆ ಮೊದಲು ಮಾಡಿದಳು.

"ಸಾಹೇಬ್ರ, ನನ್ನ ಹಣೇಬಾರ ಬಾಳ ಕೆಟ್ಟ ಐತಿ. ನಿಮಗೊಂದ ಮಾತು ನಾ ಇಲ್ಲೀತನಕ ಹೇಳಿದ್ದಿಲ್ಲ..... ನನಗೂ ಒಬ್ಬ ಮಗ ಇದ್ದ. ಆರು ವರಸದಾಂವ ಆಗೋತಂಕಾ ಇದ್ದು, ಮುಂದ ತೀರಿ ಕೊಂಡ. ಅಂವಾ ಹುಟ್ಟದs ಇದ್ದಿದ್ರ ಅಷ್ಟು ಕೆಟ್ಟ ಅನಿಸತಿರಲಿಲ್ಲ. ಆದರ ಮುತ್ತಿನಂತಾ ಮಗನ್ನ ಕಳಕೊಂಡದ್ದಕ್ಕ ನನ್ನ ಗೋಳ ದೇವ್ರs ಬಲ್ಲ. ಈಗ ಇದ್ದಿದ್ರ ನಿಮ್ಮಾಟೆs ದೊಡ್ಡಮಗಾ ಆಗತಿದ್ದ ದೊಡ್ಡಾಂವ ಆಗಿದ್ರ ಅವನೂ ನಿಮ್ಮಂಗs ಕಾಣತಿದ್ದ. ನಿಮ್ಮಂಗ ಕೆಂಪು ಬಣ್ಣ; ನಿಮ್ಮಂಗs ದೊಡ್ಡ ಹಣೆ; ನಿಮ್ಮಂಗs ಉದ್ದ ಆಳ ಅವನ ಬಲಗಡಿ ಗಲ್ಲದ ಮ್ಯಾಗೂ ನಿಮ್ಮಂಗs ಮಚ್ಚ ಇತ್ತ ನೀವು ಎಷ್ಟs ಕೆಟ್ಟಾಕಿ ಆನ್ರಿ— ನನಗ ಗಂಡ ಸತ್ತಿದ್ದು ಅನ್ಯೈಸನ ಆಗಲಿಲ್ಲ. ಆದ್ರ ಮಗನ್ನ ಕಳಕೊಂಡು ಬಾಳ ದಿ ಪೇಚಾಡಿದೆ. ದುಡಿಯೋದ್ಯಾಗ ಮನಸ್ಸು ಹಾಕಿ, ಅವನ್ನ ಮರಿಯೂ ಪರ್ಯತ್ನ ಮಾಡಿದ್ದೆ. ಆದರೂ ಕಳ್ಳು ಕೇಳೀತ್ರೀ ಸಾಹೇಬ ಅವನ ವಾರಿಗೀ ಹುಡುಗರ್ನ ನೋಡಿದ ಕೂಡಲೇ, ಮತ್ತ ಎದಿ ಜ ಅನತಿತ್ತು..... ಇತ್ತಿತ್ತಲಾಗ ಸ್ವಲ್ಪ ಮರತಾಂಗ ಆಗಿತ್ತು..... ಮೊದಲನೇ ಬಾರಿ ಮಂಡಯಾಒಳಗ ನಿಮ್ಮನ್ನ ನೋಡಿದಾ ನಾನು ಒಂದು ಅರಗಳಿಗಿ ಹುಚ್ಚಾಮಂಗಾದೆ. ನಿಮ್ ನಿಲು ನಿಮ್ ಹಣೆ, ನಿಮ್ ಬಣ್ಣ, ನಿಮ್ಮ ಮಚ್ಚೆ—ಇವನ್ನೆಲ್ಲ ನೋಡಿ ಕೂಡ್ಲೆ, ನನ್ ಮಗನs ಎಲ್ಲಾರs ಬೆಳದು ದೊಡ್ಡಾಂವಾಗಿ ಬಂದ ನೇನೋ ಅನಿಸಿತು.....ಇದೆಲ್ಲಾ ಇಲ್ಲೀ ತಂಕಾ ನಿಮಗ ಹೇಳ ನಂಗ ಧೈರ್ಯ ಆಗಲಿಲ್ಲ. ಈಗ ಆರು ತಿಂಗಳು ನನ್ನ ಮಗ ಮರತು ಬಿಟ್ಟದ್ದೆ. ನೀನs ನನ್ನ ನುಗಾ ಅಂತ ತಿಳಿದಿದ್ದೆ.... ಆದ್ರ ಇನ್ನ ಮತ್ತ....."

ಆಕೆಯ ದುಃಖ ಮಿಗಿಲಾಯ್ತು. ಶ್ಯಾಮಸುಂದರನೂ ಆ ಕರುಣಕಥೆಯನ್ನು ಎವೆಯಿಕ್ಕದೆ ನೋಡುತ್ತ ಕೇಳುತ್ತಿದ್ದ. ಕೇಳು-ಕೇಳುತ್ತ ಇಲ್ಲಿಯ ವರೆಗಿನ ಆಕೆಯ ವರ್ತನೆಯ ಅ ಒಂದೊಂದಾಗಿ ಆಗಹತ್ತಿತು. ಆಕೆಯೊಬ್ಬ ವಿಚಿತ್ರ ಪ್ರಾಣಿ ಎ ಕಲ್ಪನೆ ಮಾಯವಾಗಿ, ಮಗುವನ್ನು ಕಳಿದುಕೊಂಡು ದುಃಖದಿ ಬೆಂದು ಪರಿಪಕ್ವವಾದ 'ತಾಯಿ' ಎಂದೆನಿಸಿತು.

ಶ್ಯಾಮಸುಂದರನಿಗೆ ಏನು ಮಾತಾಡಬೇಕು— ಎಂಬುದು ತಿಳಿಲಿಲ್ಲ. ಮಾತನ್ನು ಬದಲಿಸಿದರಾದರೂ ಆಕೆಯ ದುಃಖ ಕಡಿಮೆ ಯಾದೀತೇ ?— ಎಂದೆಂದು:

"ಇಷ್ಟೆಲ್ಲ ನನಗ ಇಲ್ಲೇತನಕಾ ಗೊತ್ತರಲಿಲ್ಲನ್ವಾ ಶಾಂತಾಬಾಯಿ! ನಿನ್ನ ಹಣೇಬರಹಾ ನೋಡಿ ಯಾರಿಗಾದರೂ ಕೆಟ್ಟ ಅನಿಸದೇ ಇರೋದಿಲ್ಲ..... ಶಾಂತಾಬಾಯಿ, ನಿನಗ ನಾನು ಪಗಾರದ ಸಂಬಂಧೀ ಎಷ್ಟು ಕೊಡೋದದ? ನಿನ್ನ ಪಗಾರಾ ನೀ ಇಸಗೊಂಡೇ ಇಲ್ಲ," ಎಂದು ಕಿಸೆಯೊಳಗಿಂದ ಪಾಕೀಟು ತೆಗೆಯಲು ಕೋಟಿನ ಕಡೆಗೆ ಮೋರೆ ತಿರುಗಿಸಿ, ಲೆಖ್ಖ ಹಾಕ ಹತ್ತಿದನು.

ಮತ್ತೆ ಆಕೆಯ ಕಡೆಗೆ ತಿರುಗಿದಾಗ, ಶಾಂತಾಬಾಯಿ ಅಲ್ಲಿ ಇರಲೇ ಇಲ್ಲ! ಆ ಮೇಲೆ ಬಂದಾಳು—ಎಂದು ಸುಮ್ಮನಾದ.

೭

ತಾಸಾಯಿತು, ಎರಡು ತಾಸಾಯಿತು. ಶಾಂತಾಬಾಯಿ ತಿರುಗಿ ಬರಲೇ ಇಲ್ಲ. ಶ್ಯಾಮಸುಂದರನ ಮನಸ್ಸು ಕಳವಳಿಸತೊಡಗಿತು. ಊರಿಗೆ ಹೊರಡುವ ಹುರುಪು ಮಂದವಾಗಹತ್ತಿತು. ಖಾನಾವಳಿಗೆ ಹೋಗಿ ಅಲ್ಲಿಯಾದರೂ ಆಕೆಯ ಸುಳಿವು ಹತ್ತಬಹುದೇ— ಎಂದು ನೋಡಿದ. ಕಂಡಕಂಡವರನ್ನು ಕೇಳಿದ.

ಮಂಡಯಿಗೆ ಹೋಗಿ ಅಲ್ಲಿ ಅಂಡಲೆದ. ಬಾಡಿಗೆ ಸಾಯ್ಕಲ್ಲನ್ನು ತೆಗೆದುಕೊಂಡು, ಅವಳು ಹಿಂದೊಮ್ಮೆ ಸ್ಥೂಲವಾಗಿ ಅಸ್ಪಷ್ಟವಾಗಿ ತಿಳಿಸಿದ್ದ ಅವಳ ಜೋಪಡಿಯನ್ನು ಹುಡುಕಿ ತೆಗೆದ. ಅದಕ್ಕೆ ಕೀಲಿ ಬಿದ್ದಿತ್ತು. ಅರ್ಧ ತಾಸು ಅಲ್ಲಿ ದಾರಿಯನ್ನು ನೋಡಿ, ಗಾಡಿಯ ಹೊತ್ತು ಸಮೀಪಿಸಿದ್ದರಿಂದ, ಆಕೆ ತನ್ನ ಖೋಲಿಗೇ ಹೋಗಿರಬಹುದೇನೊ ಎಂದು ಅಲ್ಲಿ ಹೋದ; ಬಂದಿರಲಿಲ್ಲ.

ಅರೆಮನಸ್ಸಿನಿಂದಲೇ ಸಾಮಾನುಗಳನ್ನು ಕಟ್ಟುವುದಾಯಿತು. ಟಾಂಗೆಯೊಂದೂ ಬಂದು ನಿಂತಿತು. ಆದರೂ ಶಾಂತಾಬಾಯಿಯ ಸುಳಿವಿಲ್ಲ.

ಸ್ಟೇಶನ್ನಿನಲ್ಲಿಯೂ ಅತ್ತ ಇತ್ತ ನೋಡಿದ. ಎರಡುವರೆ ಆಯಿತು; ಗಂಟೆ ಬಡಿಯಿತು, ಗಾಡಿ ಕೂಗಿತು.

ಶ್ಯಾಮಸುಂದರ ಸುಂದನಾಗಿ, ತಾನು ಕುಳಿತ ಡಬ್ಬಿಯ ಕಿಟಕಿಯೊಂದರಲ್ಲಿ ಮೊಳಕೈಯನ್ನಿಟ್ಟು, ತಲೆಯನ್ನು ಹೊರಗೆ ಹಾಕಿ ಶೂನ್ಯದೃಷ್ಟಿಯಿಂದ ಕುಳಿತುಕೊಂಡ.

ಸ್ಟೇಶನ್ನಿನ ಗಂಟೆ, ಗಡಿಯಾರ, ಆಂಗಡಿ, ಜನ ಸಮುದಾಯ—ಎಲ್ಲ ಒಂದೊಂದಾಗಿ ಹಿಂದೆ ಓಡಹತ್ತಿದುವು. ಗಾಡಿಯ ವೇಗ ಹೆಚ್ಚಿತು. ಶ್ಯಾಮಸುಂಧರನ ಶೂನ್ಯತೆ ಮಾತ್ರ ನಶಿಸಲಿಲ್ಲ.

ಅಷ್ಟರಲ್ಲಿ ಹಳಿಗೆ ಹೊಂದಿದ ಕಬ್ಬಿಣದ ಬೇಲಿಯ ಆಚೆಯಿಂದ "ಸಾಹೇಬ್!" ಎಂಬ ಧ್ವನಿ ಬಂತು.

ಕಬ್ಬಿಣದ ಬೇಲಿಯನ್ನು ಎಡಗೈಯಿಂದ ಹಿಡಿದು, ತಲೆಯ ಪೇಲೆ ತನ್ನ ಕೂಲಿಯ ಬುಟ್ಟಿಯನ್ನು ಡಬ್ಬುಹಾಕಿಕೊಂಡು, ಬಲಗೈಯನ್ನು ಮೇಲೆ ಎತ್ತಿ ಮುಂದೆ ಮಾಡಿದ ಶಾಂತಾಬಾಯಿಯ ದೈನ್ಯ ಮೂರ್ತಿ, ಕಣ್ಮುಂದೆ ಮೂಡು-ಮೂಡುವಷ್ಟರಲ್ಲಿಯೇ ಹಿಂದೆ ಓಡಿತು.

ಶ್ಯಾಮಸುಂದರನ ಮುಖ ಅರಳಿತು. ಕಿಟಕಿಯಿಂದ ಹೊರಗೆ ಕೈ ಚಾಚಿ "ಶಾಂತಾಬಾಯಿ!" ಎಂದು ಒದರಿದ.

* * *

ಅರೆನಿಮಿಷದಲ್ಲಿ ಶ್ಯಾಮಸುಂದರ ಕಣ್ಮರೆಯಾದ. ಆದರೂ ಶಾಂತಾಬಾಯಿ ನಿಂತಲ್ಲಿಯೇ ನಿಂತಿದ್ದಳು. ದಟ್ಟವಾಗಿ ತುಂಬಿದ ಕಣ್ಣೀರು ಅವಳನ್ನು ಹೊರಜಗತ್ತಿನಿಂದ ಬೇರ್ಪಡಿಸಿದ್ದಿತು. ಆಕೆ ಈಗ ಹದಿನೈದು ವರುಷದ ಹಿಂದಿನ ಜಗತ್ತಿನಲ್ಲಿದ್ದಳು. ಶ್ಯಾಮಸುಂದರ ಅವಳ ಸ್ಮೃತಿಪಟಲದಲ್ಲಿ, ನಾಲ್ಕು ವರುಷದ ಅವಳ ಮುದ್ದಾದ ಮಗುವಾಗಿ ನೆಲಸಿದ್ದ.

* * *

ಶಾಂತಾಬಾಯಿಯು ಕಣ್ಮರೆಯಾದರೂ ಅವಳ 'ಸಾಹೇಬ' ಎಂಬ ಕೂಗು ಗಾಡಿಯ ವೇಗವನ್ನು ಮೀರಿ ಗಾವುದ ಗಾವುದ ಮುಂದೆ ಸಾಗಿ, ಗಾಡಿಯ ಸಪ್ಪಳದಲ್ಲಿ ನುಸುಳಿ, ಶ್ಯಾಮಸುಂದರನನ್ನು ತಬ್ಬು ಬಲು ಪ್ರಯತ್ನಿಸಿತು; ಅವನ ತಲೆಯಲ್ಲಿ ಸುಳಿಯ ಹತ್ತಿತು.

ಮರುದಿನ ಅವನು ತಮ್ಮೂರನ್ನು ತಲುಪಿದಾಗ, ಅವನ ಮನ ಮರಳಿ ಪುಣೆಗೆ ಬಂದಿದ್ದಿತು. ಶಾಂತಾಬಾಯಿಯು ಏನು ಮಾಡುತ್ತಿರಬಹುದು, ಎಲ್ಲಿ ಅಲೆದಾಡುತ್ತಿರಬಹುದು?— ಎಂಬುದನ್ನು ಕಂಡುಹಿಡಿಯಲು ಯತ್ನಿಸುತ್ತಿದ್ದಿತು. ರಾತ್ರಿಯೆಲ್ಲ ಗಾಡಿಯಲ್ಲಿ ನಿದ್ರೆಯಿಲ್ಲದುದರಿಂದಲೂ, ಶಾಂತಾಬಾಯಿಯ ಚಿಂತನೆಯಿಂದಲೂ ಅವನು ಮಧ್ಯಾಹ್ನ ಊಟವಾಗುವವರೆಗೂ ಸುಂದನಾಗಿಯೇ ಅಲೆದಾಡಿದ.

ಊಟಮಾಡಿ ಮಲಗಿಕೊಂಡಾಗ, ಶ್ಯಾಮಸುಂದರನಿಗೆ ಗಾಢ ನಿದ್ರೆ ಹತ್ತಿದ್ದಿತು. ನಡುನೆ ಒಮ್ಮಿಂದೊಮ್ಮೆ ಗೊರಕೆಯನ್ನು ಬಂದು ಮಾಡಿ "ಶಾಂತಾಬಾಯಿ!" ಎಂದು ಜೆಟಕ್ಕನೆ ಎದ್ದುಕುಳಿತ. ಬಳಿಯಲ್ಲಿಯೇ ಅಕ್ಕಿಯನ್ನು ಹಸನು ಮಾಡುತ್ತ ಕುಳಿತಿದ್ದ ಶ್ಯಾಮಸುಂದರನ ತಾಯಿ "ಯಾಕ ಶಾಮಣ್ಣಾ, ಕನಕರಸೀ ಏನು?" ಎಂದಾಗ, ಆರೆಕ್ಷಣ ಶ್ಯಾಮಸುಂದರನಿಗೆ, ಶಾಂತಾಬಾಯಿಯೇ ಹೀಗೆ ಕೇಳಿದಳು ಎಂಬ ಭ್ರಮೆಯಾಯಿತು. ಆ ಭ್ರಮೆಯ ಅವಧಿಯಲ್ಲಿ, ಅಕ್ಕಿಯನ್ನು ಹಸನುಮಾಡುತ್ತಿದ್ದ ತಾಯಿಯ ಬದಲು ಶಾಂತಾಬಾಯಿಯನ್ನೇ ಕಂಡ.

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ

ಸಂಪಾದಕರು : ಬಸವರಾಜ ಕಟ್ಟೀಮನಿ

ವರ್ಷಕ್ಕೆ ಆರುನೂರು ಪುಟಗಳಷ್ಟು ಸಾಹಿತ್ಯ. ಕತೆ, ಕಾದಂಬರಿ, ನಾಟಕ, ಪ್ರಬಂಧ ಇತ್ಯಾದಿ.

ವಾ. ಚಂದಾ ೫ ರೂಪಾಯಿ (ರಜಿಸ್ಟರ್ ಅಂಚೆವೆಚ್ಚ ಸೇರಿ)

ಮೊದಲನೆಯ ಪ್ರಕಟಣೆ:

ಸೆರೆಯಿಂದ ಹೊರಗೆ

(ಸಣ್ಣಕತೆಗಳ ಸಂಕಲನ)

ಈಗ ತಾನೆ ಹೊರಟಿದೆ. ಕೂಡಲೆ ಚಂದಾದಾರರಾಗಿರಿ.

ಶ್ರೀ ಧರ್ಮಸ್ಥಳ ಹೆಗ್ಗಡೆಯವರ ಜೀವನದ ಸಂದೇ

ಶ್ರೀ. ಮಂಜೇಶ್ವರ ರಾಮಣ್ಣಶೆಟ್ಟಿ

ಭಕ್ತನ ಭಕ್ತಿ, ವೀರನ ಪೌರುಷ, ಜ್ಞಾನಿಯ ಜ್ಞಾನ, ಕಲಾವಿದನ ಕಲೆ, ತಾತ್ತ್ವಿಕನ ಅಹಿಂಸೆ, ಸರ್ವಾತ್ಮಪ್ರೇಮಿಯ ಪ್ರೇಮ, ಮಗುವಿನ ನಗೆ, ಮುದುಕನ ಪ್ರೌಢತೆ, ತರುಣನ ಕಾರ್ಯಶಕ್ತಿ— ಇವೆಲ್ಲ, ಶ್ರೀ. ಹೆಗ್ಗಡೆಯವರಲ್ಲಿ ಸಮರಸಗೊಂಡು ಶೋಭಿಸುತ್ತಲಿವೆ.

ಪ್ರತಿಯೊಬ್ಬ ವ್ಯಕ್ತಿಯೂ ಜನ್ಮವೆತ್ತುವಾಗಲೇ ಒಂದು ಉದ್ದೇಶ, ಧ್ಯೇಯ ಅತನಿಗಾಗಿ ವಿಸಲಾಗಿರುತ್ತದೆ—ಎಂಬ ಅಭಿಪ್ರಾಯ ವಿದೆ. ಆ ಉದ್ದೇಶ—ಧ್ಯೇಯದ ಕಡೆಗೆ ಅತನು ಹೃತ್ಪೂರ್ವಕವಾಗಿ ಮುಂದುವರಿದಿದ್ದಾನೆಯೇ? ಅದು ಬಹುಜನರ ಆದರ-ಪ್ರೇಮ ಗಳಿಗೆ ಒಳಗಾಗಿದೆಯೇ? ತನ್ನ ಧ್ಯೇಯದ ಕಡೆಗೆ ಸಾಗುವಾಗ ಒದಗುವ ಅನುಕೂಲ-ಪ್ರತಿಕೂಲ ಪರಿಸ್ಥಿತಿಗಳಲ್ಲಿ ಅತನ ಮಾನಸಿಕ ಏರಿಳಿತಗಳ ಪರಿಣಾಮವು ಹೇಗೆ? ಅತನ ಜೀವನದ ಆದರ್ಶ ಯಾವುದು? ಅದನ್ನು ಸಾಧಿಸುವುದರಲ್ಲಿ ಅತನು ಎಷ್ಟೊಂದು ಕೃತಾರ್ಥನಾಗಿದ್ದಾನೆ? ಅತನ ಜೀವನದಿಂದ ಸಮಾಜಕ್ಕೆ ದೊರೆಯುವ ಸಂದೇಶ ಯಾವುದು?—ಎಂಬ ಪ್ರಶ್ನೆಗಳಿಗೆ ನಾವು ಉತ್ತರವನ್ನು ಹುಡುಕುವಾಗ, ಆ ವ್ಯಕ್ತಿಯ ಹಿರಿಮೆ-ಗರಿಮೆಗಳನ್ನೂ ಗೊತ್ತು ಹಚ್ಚಬಹುದು.

ಶ್ರೀಧರ್ಮಸ್ಥಳವು ವಿಶಾಲಭಾರತದ ಬಹುಮಂದಿಗೆ ಪರಿಚಯವಿರುವ ಕ್ಷೇತ್ರವಾಗಿದೆ. ಅಲ್ಲಿಯ ಧರ್ಮಾಧಿಕಾರಿಗಳಾಗಿದ್ದ ಶ್ರೀ. ಹೆಗ್ಗಡೆಯವರನ್ನು ಅರಿಯದ ಕನ್ನಡಿಗನಿರಲಾರನೆಂಬುದಂತೂ ನಿರ್ವಿವಾದ. ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತೀ ನದೀ ತೀರದಲ್ಲಿ, ಮಂಗಳೂರಿನಿಂದ ೪೬ ಮೈಲು ದೂರದಲ್ಲಿರುವ ಶ್ರೀಧರ್ಮಸ್ಥಳ ಕ್ಷೇತ್ರವು, ಬಹು ಪುರಾತನವೂ ಕಲಾಸಾನ್ನಿಧ್ಯ ಪರಿಪೂರ್ಣವೂ ಆದ ಕ್ಷೇತ್ರವಾಗಿದೆ. ೧೯೧೮ನೆಯ ಇಸವಿಯಲ್ಲಿ **ಶ್ರೀ. ಚಂದಯ್ಯ ಹೆಗ್ಗಡೆಯವರು** ದಿವಂಗತರಾದ ಮೇಲೆ, **ಶ್ರೀ. ಮಂಜಯ್ಯ ಹೆಗ್ಗಡೆಯವರು** ಅಧಿಕಾರವಹಿಸಿದರು. ಕಾಲೇಜುವಿದ್ಯೆ ಕಲಿಯುತ್ತಿದ್ದವರೇ ಬಂದು ಕ್ಷೇತ್ರದ ಅಧಿಕಾರ ವಹಿಸಬೇಕಾಯಿತು. ಬಾಲ್ಯದಿಂದಲೂ ಚಿತ್ರಕಲಾ ಪ್ರೇಮಿಯಾದ ಇವರು ಕಂಡ ಉತ್ತಮವಾದ ಚಿತ್ರಗಳನ್ನು ಬರೆಯಲು ಅಭ್ಯಾಸ ಪಡೆದಿದ್ದರು. ವಿದ್ಯಾರ್ಥಿಜೀವನವು ಅನಾರೋಗ್ಯದ ನಿಮಿತ್ತ ಆಗಾಗ ನಡುನಡುವೆ ತಡೆಯಲ್ಪಟ್ಟಿತು. ತುಂಬಾ ವಿದ್ಯಾಭ್ಯಾಸ ಮಾಡಬೇಕೆಂಬ ಇವರ ಮಹದಾಶೆಯೊಂದೇ ಕಾಲೇಜಿನ ವರೆಗೂ ಇವರನ್ನು ಕೊಂಡೊಯ್ದಿತು. ಒಡನಾಟದ ವಿದ್ಯಾರ್ಥಿಗಳೊಂದಿಗೆ ಸೇರದೆ, ಕಾಫಿ-ಅಟ-ನಾಟಕ ಮೊದಲಾದ ಯಾವ ವಿನೋದ-ವಿಲಾಸಕ್ಕೂ ಬಲಿಯಾಗದೆ, ಏಕಾಂತವಾಗಿ, ಗುರುಗಳಿಗೆ ವಿಧೇಯನಾಗಿ, ಮಿತಭಾಷಿಯಾಗಿಯೇ ಇವರ ವಿದ್ಯಾರ್ಥಿಜೀವನವು ಕಳೆಯಿತು. ಹೀಗೆ ಯಾರೊಡನೆಯೂ ಗೆಳೆತನಕ್ಕೆ ಸೇರದ ಇವರು, ಕ್ಷೇತ್ರದ ಅಧಿಕಾರ ಸ್ವೀಕರಿಸಿ, ಸ್ವಲ್ಪಕಾಲ ತುಂಬ ಬೇಸರಪಡಬೇಕಾಯಿತು. ನೂರಾರು ಮಂದಿ ಯಾತ್ರಿಕರ ಅಭಿಲಾಷೆಗಳಿಗೆ ಸಮಾಧಾನ ಹೇಳಿ, ನೂರಾರು ಮಂದಿ ನೌಕರರ ಮೇಲ್ವಿಚಾರ ನೋಡಿ, ನೂರಾರು ವಿಧದ ಮನುಷ್ಯರನ್ನು ಒಲಿಹಚ್ಚಿ ಕೆಲಸ ಮಾಡಬೇಕಾಗುವ ದೊಡ್ಡ ಜವಾಬ್ದಾರಿಯ ಕಾರ್ಯವು, ದಿಗ್ಭ್ರಮೆಗೊಳಿಸುವಂತಹದಾಗಿದ್ದಿತು. ಕ್ಷೇತ್ರದಲ್ಲಿ ಪರಂಪರಾಗತವಾಗಿ ಬಂದ ಕಾರ್ಯಗಳ ಪೂರ್ಣ ಅನುಭವವಿಲ್ಲದೆ, ಎಲ್ಲವನ್ನೂ ಸಮರ್ಪಕವಾಗಿ ನಡೆಯಿಸಿಕೊಂಡು ಹೋಗುವಷ್ಟು ಧಾರಾಳವಾದ ಧನ-ಸಂಗ್ರಹವು ಇಲ್ಲದೆ, ಆಯಾ ಕಾಲದಲ್ಲಿ ನಡೆಯಲೇ ಬೇಕಾದ ಕ್ಷೇತ್ರದ ಕಾರ್ಯಕಲಾಪಗಳನ್ನು ಲೋಪವಿಲ್ಲದಂತೆ ನಡೆಯಿಸಿಕೊಂಡು ಹೋಗುವುದು, ಎಂತಹವನಿಗಾದರೂ ಅತಿ ಪ್ರಯಾಸದ ಕೆಲಸವೇ ಸರಿ. ಆದರೂ ಇವರು ಎದೆಗುಂದದೆ, ಶ್ರೀಸ್ವಾಮಿಯಲ್ಲಿ ಪೂರ್ಣ ಭಕ್ತಿವಿಶ್ವಾಸವನ್ನಿಟ್ಟು, ಸಕಾಲಕ್ಕೆ ಎಲ್ಲವನ್ನೂ ಪೂರ್ವನಿಯಮದಂತೆಯೇ ನಡೆಯಿಸಿಕೊಂಡು ಬಂದರು. ಹಿಂದಿನಿಂದ ನಡೆದು ಬಂದ ದೇವದಾಸೀ ಪದ್ಧತಿಯನ್ನೂ, ದೈವ-ದೇವತೆಗಳಿಗೆ ತಿರುತ್ತಿದ್ದ ರಕ್ತಾಹುತಿಯನ್ನೂ, ಉತ್ಸವ-ಜಾತ್ರೆಗಳಲ್ಲಿ ಆಡಂಬರಕ್ಕಾಗಿ ಉರಿಸುತ್ತಿದ್ದ ಮದ್ದುಸು-ಬಾಣಗಳನ್ನೂ ಪೂರ್ಣ ನಿಲ್ಲಿಸಿದರು. ಬರಿ ಮರುಭೂಮಿಗಳಲ್ಲಿ ಕೃಷಿ ಪ್ರಾರಂಭಿಸಿ, ಊರವರ ಜಟುವಟಿಕೆಗಳಿಗಾಗಿ ಪುರಸಭೆಯನ್ನು ಪ್ರಾರಂಭಿಸಿ, ಯಾತ್ರಿಕರಿಗೂ ಊರವರಿಗೂ ಬೇಕಾಗಿ ಧರ್ಮಾರ್ಥ ಆಸ್ಪತ್ರೆಯನ್ನೂ, ಪಾಠಶಾಲೆಯನ್ನೂ ಪ್ರಾರಂಭಿಸಿದರು. ದೇವಾಲಯದ ಮುಂದುಗಡೆ ಉದ್ಯಾನವನ್ನು ಉಂಟುಮಾಡಿ, ವಿದ್ಯುದ್ದೀಪಗಳನ್ನು ಸುತ್ತಲೂ ಹಾಕಿಸಿ, ಯಾತ್ರಿಕರಿಗಾಗಿ ಬಿಡಾರಗಳನ್ನು ಕಟ್ಟಿಸಿ, ಜನೋಪಯೋಗಿವನ್ನು ಪರಿಪೂರ್ಣಗೊಳಿಸಿದರು. ಕ್ಷೇತ್ರಕ್ಕೆ ಬರುವವರಿಲ್ಲರಿಗೂ ಊಟವೇ

ರಿಯುವಂತೆ ಏರ್ಪಾಡು ಮಾಡಿ, ಉಜ್ರೆಯಲ್ಲಿ 'ಸಿದ್ಧವನ' ಎಂಬ ಗುರುಕುಲವನ್ನು ಪ್ರಾರಂಭಿಸಿದರು. ಸರ್ವಧರ್ಮ ಸಮನ್ವಯವಾದವನ್ನು ಜನತೆಗೆ ಬೋಧಿಸುವುದಕ್ಕಾಗಿ 'ಧರ್ಮ ಸಮ್ಮೇಳನ'ವನ್ನೂ, ಸಾಹಿತ್ಯದ ಅಭಿರುಚಿಗಾಗಿ 'ಸಾಹಿತ್ಯ ಸಭೆ' ಯನ್ನೂ ಪ್ರಾರಂಭಿಸಿದರು. ವೈದ್ಯವಿದ್ಯೆಗೆ ಪ್ರೋತ್ಸಾಹವಾಗುವಂತೆ ಆಯುರ್ವೇದ ಪರಿಷತ್ತನ್ನೂ, ಕೈಗಾರಿಕೆಗೆ ಸಹಕಾರ ದೊರೆಯಂತೆ ವಸ್ತುಪ್ರದರ್ಶನವನ್ನೂ ಮಾಡಿಸಿದರು. ಮಲೇರಿಯಾ ಜ್ವರವಳಿಯಿಂದ ಕ್ಷೀಣಿಸುತ್ತಿದ್ದ ಊರಿನ ಜನಸಂಖ್ಯೆಯನ್ನು ಕಂಡು, ಸುತ್ತಣ ಕಾಡನ್ನು ಕಡಿಸಿ, ಔಷಧೋಪಚಾರಗಳಿಂದ ಗುಣಪಡಿಸಿದರು. ಎಲ್ಲಾ ಮತಧರ್ಮಗಳ ಶಾಸ್ತ್ರ-ಪುರಾಣಗಳನ್ನೂ ಓದಿ, ವಿಮರ್ಶಿಸಿ, ಅದರ ಸಾರವನ್ನು ರಕ್ತಗತಮಾಡಿಕೊಂಡರು. ಸ್ವಂತ ಭಾವನೆಯಿಂದಲೇ ಕೆಲವು ಚಿತ್ರಗಳನ್ನು ಬರೆದರು. ಅವರ ಮನೆಯನ್ನು ಪ್ರವೇಶಿಸಿದಾಗ ನಾವು 'ಚಿತ್ರಶಾಲೆ'ಯೆಂದೆಣಿಸುವಂತೆ ಕಾಣಿಸುವ ಎಲ್ಲಾ ಚಿತ್ರಗಳೂ ಅವರೇ ಸ್ವಂತವಾಗಿ ಬರೆದುವುಗಳೇ. ಎಂದರೆ ಅವುಗಳಲ್ಲಿ ಅವರ ಮಿತ್ರರು ಬರೆದ ನಾಲ್ಕಾರು ಚಿತ್ರಗಳಿರಲೂಬಹುದು.

ನೇತ್ರಾವತೀ ನದಿಯ ನೀರು ಉಕ್ಕಿಬಂದು, ಪಾಣೇ ಮಂಗಳೂರು ಅಂಟವಾಳ ಪೇಟೆಗಳು ಹಿಂದೊಮ್ಮೆ ಮುಳುಗಿದಾಗ, ಅಕ್ಕಿಯ ಬೆಲೆ ವಿಪರೀತ ಏರಿ, ಮನೆಯ ಮಂದಿಯೆಲ್ಲ ಉಸವಾಸ ಬೀಳುವಾಗ, ಇವರು ತಮ್ಮಲ್ಲಿದ್ದ ಅಕ್ಕಿಯನ್ನೆಲ್ಲ ಅತಿ ಕಡಿಮೆ ಕ್ರಯಕ್ಕೆ ಕೊಟ್ಟು ಸಹಕರಿಸಿದ್ದಾರೆ. ಸಾರ್ವಜನಿಕರಿಗೆ ಉಪಯೋಗವಾಗುವ ಯಾವ ಸಂಘ-ಸಂಸ್ಥೆಗಳೂ ಶ್ರೀ. ಹೆಗ್ಗಡೆಯವರ ಉದಾರದಾನಕ್ಕೆ ಒಳಗಾಗದಿರಲಾರವೆಂಬ ಮಾತು ಅತಿಶಯವಾದುದಲ್ಲ. ವಿವಿಧ ಕಲಾವಿದರು ಬಂದು ತಂತಮ್ಮ ಕಲೆಯ ರುಚಿಯನ್ನು ತೋರಿಸಿ, ಅವರಿಂದ ಆಶೀರ್ವಚನ ಪಡೆದು, ಸಂಭಾವನೆ ಹೊಂದಿ ಹೋಗುತ್ತಿದ್ದಾರೆ. ಯಾಚಕನ ಪಾತ್ರಾಪಾತ್ರವರಿತು ವ್ಯಕ್ತಿಯ—ಕಾಲದ—ದೇಶದ ದೃಷ್ಟಿಯಿಂದ, ಸಾಕಷ್ಟು ದಾನ ನೀಡುವ ಸೂಕ್ಷ್ಮ ಮನಃಶಕ್ತಿಯೂ ವಿಶಾಲವಾದ ಹೃದಯವೂ ಅವರಿಗೆ ವಿಪುಲವಾದುದು. ಮುಖವನ್ನು ಕಂಡೊಡನೆ ಭವಿಷ್ಯ ಹೇಳುವ ಮುಖಸಾಮುದ್ರಿಕಜ್ಞನಂತೆ, ಒಬ್ಬನ ಮುಖದಿಂದಲೇ ಆತನ ಹೃದಯದ ಆಳವನ್ನು ಅರಿಯುವ ಅಮಾನುಷಶಕ್ತಿ ಅವರಲ್ಲಿದೆ. ಜೈನಮತಸ್ಥರಾದ ಅವರು 'ಅಹಿಂಸಾ ಧರ್ಮ'ವನ್ನು ಕಾರ್ಯರಂಗದಲ್ಲಿ ಆಚರಿಸಿ ತೋರಿಸುವುದು ಎಲ್ಲರಿಗೂ ಆದರ್ಶವಾಗಿದೆ. ತಪ್ಪಿತಸ್ಥನನ್ನು ಶಿಕ್ಷಿಸದೆ, ಇದಿರಾಡಿದವನಿಗೆ ಬಿರುನುಡಿ ಆಡದೆ, ಹೊಗಳಿದವನಿಗೆ ಮೆಚ್ಚದೆ, ತೆಗಳಿದವನನ್ನು ದೂರೀಕರಿಸದೆ ಇರುವ ಅವರ ಸಹನಪೂರ್ಣವಾದ ಅಹಿಂಸಾ ಧರ್ಮವು, ಒಂದು ಮಹಾ ಆದರ್ಶಕ್ಕೆ ಸೆರೆಯಾಗಿದೆ ಎಂದು ತಿಳಿಯಬೇಕಾಗಿದೆ. ಜವಾಬ್ದಾರಿಯ ಕಾರ್ಯವನ್ನು ಹೊತ್ತು, ಯಾರನ್ನೂ ಹಿಂಸಿಸದೆ, ಕಾಯಾ-ವಾಚಾ-ಮನಸಾ ಒಬ್ಬನನ್ನೂ ನೋಯಿಸದೆ, ಕಾರ್ಯನಿರ್ವಹಣಮಾಡಬಹುದೆಂಬುದನ್ನು ನಡೆದು-ನುಡಿದು ತೋರಿಸುವವರು ಶ್ರೀ. ಹೆಗ್ಗಡೆಯವರು.

ಚಿತ್ರಕಲೆಯಲ್ಲಿ ತುಂಬಾ ಸುರಿತ ಇವರು, ಅದೇ ಕಲೆಯ ಮಾರ್ಗದಿಂದಲೇ ಮನಸ್ಸಿನ ನೆಲೆಯನ್ನು ಅರಿತರು. **ಕರ್ಣಾರ್ಜುನ, ಪಂಪಮಹಾಕವಿ, ಕಡಗೋಲುಕೃಷ್ಣ, ಸನುವಸರಣ, ಪ್ರಸನ್ನಮಹಾದೇವ** ಇವು ಅವರ ಚಿತ್ರಗಳಲ್ಲಿ ಅತಿ ಉತ್ತಮ ತರಗತಿಗೆ ಸೇರತಕ್ಕವುಗಳು ಮತ್ತು ಅವರ ಸ್ವತಂತ್ರ ಕೃತಿಗಳು.

ಸಿದ್ಧವನ ಗುರುಕುಲದಲ್ಲಿ, ಸಂಸ್ಕೃತ, ಹಿಂದಿ, ಕನ್ನಡ, ಇಂಗ್ಲಿಷ್ ಈ ನಾಲ್ಕು ಭಾಷೆಗಳ ಮತ್ತು ಮತ-ಧರ್ಮಗಳ ಹಾಗೂ ಇತರ ಕೈಗಾರಿಕೆಗಳ ಕುರಿತಾದ ವಿದ್ಯಾಭ್ಯಾಸವು, ಸರ್ವ ಮತಧರ್ಮದ ಹುಡುಗರಿಗೂ ಸಂಪೂರ್ಣ ಧರ್ಮಾರ್ಥವಾಗಿ ಕೊಡಲ್ಪಡುವುದು. ಎರಡು ವರ್ಷಗಳ ಹಿಂದೆ ಕರ್ನಾಟಕ ವಿದ್ಯಾಲಯವೆಂಬ ಪ್ರಾಥಮಿಕ ವಿದ್ಯಾಸಂಸ್ಥೆಯೊಂದು, ಊರವರ ಸಹಕಾರದಿಂದ ಶ್ರೀ. ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಆರಂಭಿಸಲ್ಪಟ್ಟಿದೆ. ಶ್ರೀಧರ್ಮಸ್ಥಳ ವಿದ್ಯಾರ್ಥಿನಿಲಯವನ್ನು ಅದಕ್ಕಾಗಿ ಕಟ್ಟಿಸಿ ಕೊಟ್ಟಿದ್ದಲ್ಲದೆ, ಹಣವನ್ನೂ ಖಾಸಗಿ ಸ್ಥಳವನ್ನೂ ದಾನವಿತ್ತಿದ್ದಾರೆ.

ಮದ್ರಾಸು ಶಾಸನಸಭಾ ಸದಸ್ಯರಾದುದು ಮಾತ್ರವಲ್ಲದೆ, ಜಿಲ್ಲೆಯ ಪ್ರಮುಖ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ, ಸೆಂಬರರಾಗಿ,

೫೫ ವರ್ಷಗಳಿಂದ ಅನುಭವಪಟ್ಟ

ಕರೀ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವದು.

ವಿಳಾಸ:—

ಗಣೇಶ ರಾಮಚಂದ್ರ ಕರೀ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ಹಳ್ಳಿ ಪಟ್ಟಣಗಳಲ್ಲಿ, ಬೀದಿ ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ★ ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು

ಅರವಿಂದ ಪಬ್ಲಿಸಿಟಿ ಆಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

೭೦-೩೨ ವರ್ಷಗಳಿಂದಲೂ ಸಾವಿರಾರು ಜನರನ್ನು
ರೋಗಮುಕ್ತಗೊಳಿಸಿ ಅನುಭವಪಡೆದುಕೊಂಡ

ಶಕ್ತಿವರ್ಧಕ ಧಾತುಪೌಷ್ಟಿಕಪಾಕ

ಇವಿಲ್ಲದಂತೆ ಮುಖ್ಯವೊಂದಿಗೆ—ಸ್ವಪ್ನ ... ವೀರ್ಯಸ್ಖಲನ ಆಗುವುದು, ಸ್ವರತಿಯ ಪೂರ್ವಕ್ಕಿಂತಲೂ ಉಂಟಾದ ಅಶಕ್ತತೆ, ನಪುಂಸಕತ್ವ, ಇಂದ್ರಿಯಶೈಥಿಲ್ಯ ಇತ್ಯಾದಿಗಳನ್ನೆಲ್ಲ ಹೊಡೆದೋಡಿಸಿ, ವೀರ್ಯವನ್ನು ಸಶಕ್ತಿಯುಕ್ತವಾಗಿಸುವುದು. ಪುಲಕಾದ್ಧಿಯಾಗಿ ತುಂಬ ಪುಷ್ಟಿಯಾಗುವುದು. ತರುಣರು ಇದರ ಪ್ರಯೋಜನ ಪಡೆಯುವುದಿಷ್ಟೆ ಅಲ್ಲ; ೭೦-೮೦ ವಯಸ್ಸಿನ ವೃದ್ಧರೂ ಇದರ ಸೇವನೆಯಿಂದ ನವಚೈತನ್ಯಪೂರ್ಣ ಉತ್ಸಾಹ ಹೊಂದುವುದರಲ್ಲಿ ಸಂದೇಹವಿಲ್ಲ ಹೆಣ್ಣು ಮಕ್ಕಳಿಗೆ ರಕ್ತಪ್ರದರ, ಶ್ವೇತಪ್ರದರ, ಬಂಜೆತನ ಅಥವಾ ಅದ ಪುತ್ರಳು ಕೂಡಲೆ ಸಾಯುವುದು, ಮೊದಲಾದುವುಗಳ ಮೇಲೆ ಇದು ರಾಮಬಾಣೋಪಾಯ. ಇದರಲ್ಲಿ ಹಲವು ಗಿಡಮೂಲಿಕೆ, ಭಸ್ಮ, ಸುವರ್ಣವಸಾಲೀಕಸಂತ ಮೊದಲಾದ ಬೆಲೆಯುಳ್ಳ ಔಷಧಿಗಳನ್ನು ಕೂಡಿಸಲಾಗಿದೆ.

೧ ಡಬ್ಬಿಯ ಬೆಲೆ ೧೫ ರೂ. ೭ ದಿನಗಳಲ್ಲಿ ಗುಣ. ಸಂಶಯ ಬೆಲೆ ೭ ರೂ. ೧೫ ದಿನಗಳಲ್ಲಿ ಗುಣ. ಶ್ರೀಮಂತ ಸೆಟ್ಟು-ಸಾಧಾರಣರ ಸಲುವಾಗಿ ಸ್ಪೆಶಲ್ ಡಬ್ಬಿಗೆ ೩೬ ರೂ. ಕೂಡಲೇ ಗುಣ. ಇದರಲ್ಲಿ ಅನೇಕ ಬೆಲೆಯುಳ್ಳ, ಶಕ್ತಿವರ್ಧಕ ಔಷಧಗಳು ಕೂಡಿವೆ.

ಆರ್ಡರ್ ಜೊತೆಗೆ ಪ್ರತಿಯೊಂದು ಡಬ್ಬಿಗೆ ೧ ರೂ. ಯಂತೆ ಅಡ್ವಾನ್ಸು ಕಳುಹಬೇಕು. ಅದನ್ನು ವಜಾವಾದಿ ಉಳಿದ ಹಣಕ್ಕೆ ವಿ. ಪಿ. ಮಾಡುತ್ತೇವೆ. ಪತ್ರವೇಕೂ ಇಲ್ಲ. ೧ ಡಬ್ಬಿ ೩೦ ದಿನಕ್ಕೆ ಸಾಲುವುದು. ೩ ಡಬ್ಬಿ ತೆಗೆದುಕೊಳ್ಳುವವರಿಗೆ ಅಂಚೆಯ ವೆಚ್ಚ ವಿಲ್ಲ. ೪ ಡಬ್ಬಿ ತೆಗೆದುಕೊಳ್ಳುವವರಿಗೆ ೧ ಡಬ್ಬಿ ಬಕ್ಷೀಸು. ಗುಣದಬಗೆ ಅನೇಕ ಸರ್ಟಿಫಿಕೇಟುಗಳು ಬಂದಿವೆ.

ವಿಳಾಸ:— **ಮ್ಯಾ. ಡಿ. ಎಸ್. ಆ್ಯಂಡ್ ಕೊ. ಔಷಧಾಲಯ**

ಮು. ಪೋ. ಮಿರಜ (ಎಸ್. ಎಂ. ಸಿ.)

ಸಲಹೆಗಾರರಾಗಿ ಸೇರಿದವರಾಗಿದ್ದಾರೆ. ಶ್ರೀ. ಹೆಗ್ಗಡೆಯವರು ಸ್ವಮತ ಪ್ರೇಮಿಗಳೆಷ್ಟೋ ಅಷ್ಟೇ ಪರಮತ ಸಹಿಷ್ಣುಗಳು. ಕುಂದು-ಕೊರತೆಗಳನ್ನು ಹೇಳಲೇಬೇಕಾಗುವ ವೇಳೆ, ಎಲ್ಲಾ ಮತದ ನ್ಯೂನತೆಗಳನ್ನೂ ಹೇಳುತ್ತಾರೆ. ಶ್ರೀಮಂತರಷ್ಟೇ ಬಡವರಿಗೂ, ಬ್ರಾಹ್ಮಣರಷ್ಟೇ ದಲಿತರಿಗೂ, ಸ್ವಜಾತೀಯರಷ್ಟೇ ಪರಕೀಯರಿಗೂ ಪ್ರೀತಿವಂತರಾದವರು ಒಪ್ಪೊತ್ತಿನ ಊಟ, ಒಂದಿಷ್ಟು ಕಾಫಿ-ತಿಂಡಿಯಿಂದ ದೇಹಪೋಷಣೆ ಮಾಡಿ, ಒಂದೆರಡು ತಾಸುಗಳ ನಿದ್ದೆಯಿಂದ ರಾತ್ರಿಯನ್ನು ಕಳೆದು ದಿನಹರಣೆ ಮಾಡುವ ಅವರಿಗೆ, ದೇಹಾಭಿಮಾನವೆಷ್ಟೆಂಬುದನ್ನು ಸರ್ವರೂ ತಿಳಿದುಕೊಳ್ಳಬಹುದು. ಸಾಮಾನ್ಯವಾದ, ತಿಳುವಾದ ಬಿಳಿಬಟ್ಟೆಯ ಕಚ್ಚೆಹಾಕಿ, ರುಮಾಲು ಸುತ್ತಿ, ಮೈಗೆ ಧೋತರ ಹೊದ್ದು, ದೇವಾಲಯಕ್ಕೆ ಹೋಗುವಾಗ-ಬರುವಾಗ-ಹೊರಗಡೆ ತಿರುಗಾಡುವಾಗ— ಅವರ ಸಾಮಾನ್ಯತೆಯನ್ನು ಕಂಡು, ಅವರ ಸಂಪತ್ತಿನ ಪ್ರೇಮವೆಷ್ಟೆಂದು ನಿಶ್ಚಯಿಸಬಹುದು. ಜೀವನದ ಸಂಗಾತಿಯಾಗಿ ನಿತ್ಯವೂ ತನ್ನ ಸೇವೆಮಾಡುವ ಪತ್ನಿಯು, ಎಷ್ಟು ಪರಿಶ್ರಮದಿಂದಲಾದರೂ ತನ್ನ ಪತಿಯು ಹೃದಯವನ್ನಾಗಲೀ ನಿಶ್ಚಯವನ್ನಾಗಲೀ ತಿಳಿಯಲು ಅಸಾಧ್ಯವಾಗಿದೆಯೆನ್ನುವಾಗ, ಪತ್ನೀಮೋಹದಲ್ಲಿ ಅವರು ಎಷ್ಟು ದೃಢಮನಸ್ಕರಾಗಿದ್ದರೆಂದೂ ನಾವು ಊಹಿಸಿಕೊಳ್ಳಬಹುದು. ನಾಲ್ಕು ವರ್ಷಗಳ ಹಿಂದೆ ಪತ್ನಿಯು ದಿವಂಗತರಾದಾಗ, ಅವರ ಅಭಿಷೇಕ ಕಾಲದಲ್ಲಿ ನೆರೆದ ಬಂಧುಗಳ ಮುಂದೆ ಶ್ರೀ. ಹೆಗ್ಗಡೆಯವರು ಹೇಳಿದ ಮಾತುಗಳು ಅರ್ಥಪೂರ್ಣವಾದುವು ಮತ್ತು ನಿಷ್ಕಾಮವಾದುವು.

ಧರ್ಮ-ಕ್ಷೇತ್ರ-ಸತ್ಯ-ಪ್ರೇಮ-ಅಹಿಂಸೆ ಮೊದಲಾದ ಮಹಾ ಶಬ್ದಗಳಿಗೆ ಶ್ರೀ. ಹೆಗ್ಗಡೆಯವರು ಯಾವ ಅರ್ಥ ತಿಳಿದಿರುವರೋ ಅದನ್ನು ಅವರು ನಡೆದು ತೋರಿಸುತ್ತಾರೆ. ಭಕ್ತನು ದೇವರ ಮೇಲಿನ ವಿಶ್ವಾಸದಿಂದ, ದೇವರ ಕಲಾಸಾನ್ನಿಧ್ಯವಿದೆಯೆಂದು ನಂಬುವ ಕ್ಷೇತ್ರಕ್ಕೆ ಬಂದಾಗ, ಆತನಿಗೆ ಯಾವ ವಿಧದ ಸುಲಿಗೆ-ತೊಂದರೆಗಳೂ ಆಗಬಾರದು; ಅವನ ಮನೋವೇದನೆಗೆ ತಕ್ಕ ಪರಿಹಾರ ದೊರೆಯಬೇಕು; ಕ್ಷೇತ್ರದ ನ್ಯಾಯವಾದ ವೆಚ್ಚ ಕಳೆದು ಉಳಿಯುವ ಹಣವು, ಭಕ್ತಾದಿಗಳ ಸಲಕರಣೆಗೂ ಊರಿನ ಉಪಯೋಗಕ್ಕೂ, ಕ್ಷೇತ್ರದ ಕಲಾಭಿವೃದ್ಧಿಗೂ, ಔಷಧ-ವಿದ್ಯೆ-ಅನ್ನ-ಬಟ್ಟೆ ಮೊದಲಾಗಿ ಸರ್ವ ಮತ-ಧರ್ಮಗಳ ಜನರಿಗೆ ದಾನವಾಗಿ ಕೊಡಲಿಕ್ಕೂ ವ್ಯಯವಾಗಬೇಕೆಂಬ ಆದರ್ಶವನ್ನು, ಹೆಗ್ಗಡೆಯವರು ಜನತೆಯ ಮುಂದೆ ಸಾಧಿಸಿ ತೋರಿಸಿದ್ದಾರೆ.

ಹಿಂದೂ ಕ್ಷೇತ್ರಗಳ ವಿಧಿ-ವಿಧಾನಗಳು, ನೈರ್ಮಲ್ಯ, ವ್ಯವಸ್ಥೆ, ಆಡಳಿತ ಹೇಗಿರಬೇಕೆಂಬುದನ್ನು ಶ್ರೀ. ಹೆಗಡೆಯವರಿಂದ ನಮ್ಮ ನಾಡು ಕಲಿತುಕೊಳ್ಳಬೇಕಾಗಿದೆ. ಒಂದು ದಾರಿಯನ್ನು ಕಂಡು ಆಳವಾಗಿ ವಿಚಾರಿಸಿ, ತನಗೆ ಮಾನ್ಯವಾದುದನ್ನು ಆರಿಸಿ, ಅದಕ್ಕೆ ಸ್ವಯಂಜ್ಞಾನದ ಬೆಳಕನ್ನು ಬೀರಿ, ಸ್ವತಂತ್ರವಾದ ಮಾರ್ಗದಿಂದ ಮುಂದುವರಿವ ಅಸಹಾಯವೀರನ ದಾರಿ ಶ್ರೀ. ಹೆಗ್ಗಡೆಯವರದು. ಭಕ್ತನ ಭಕ್ತಿ, ವೀರನ ಪೌರುಷ, ಜ್ಞಾನಿಯ ಜ್ಞಾನ, ಕಲಾವಿದನ ಕಲೆ, ತಾತ್ತ್ವಿಕನ ಅಹಿಂಸೆ, ಸರ್ವಾತ್ಮಸ್ಫೋಮಿಯ ಪ್ರೇಮ, ಮಗುವಿನ ನಗೆ, ಮುದುಕನ ಪ್ರೌಢತೆ, ತರುಣನ ಕಾರ್ಯಶಕ್ತಿ, ಕವಿಯ ಪ್ರತಿಭೆ, ವಿರಕ್ತನ ವೈರಾಗ್ಯ ಇವೆಲ್ಲವೂ ಸಮರಸಗೊಂಡು ಶ್ರೀ ಹೆಗ್ಗಡೆಯವರಲ್ಲಿ ಶೋಭಿಸುತ್ತಲಿವೆ. ಅವರು ನಿಂತಲ್ಲಿಯೇ ಕೂತಲ್ಲಿಯೇ, ತನ್ನ ಸುತ್ತಲಿನ ನೂರಾರು ಮಂದಿಯ ಮನೋಗತವನ್ನು ಕ್ಷಣವಲ್ಲೇ ತಿಳಿದುಕೊಳ್ಳುತ್ತಿದ್ದಾರೆ. ಒಂದನ್ನು ಕೊಂದು ಒಂದನ್ನು ಬದುಕಿಸುವ ದಾರಿ ಅವರದಲ್ಲ; ಒಂದರೊಡನೊಂದು ಸೇರಿ ಸಹೋದರ ಭಾವದಿಂದ ಸರ್ವವೂ ಬದುಕಬೇಕೆಂಬುದು ಅವರ ಬಯಕೆ. ಬ್ರಿಟಿಷರ ಕರ್ಮಕುಶಲತೆಯನ್ನು, ಮಹಾತ್ಮರ ಸತ್ಯ-ಅಹಿಂಸೆಗಳನ್ನು, ಜವಾಹರರ ಧೀರಗಂಭೀರವನ್ನು ಮೆಚ್ಚುವವರು ಅವರು. ಒಂದು ಸಂಸ್ಥೆಯ ಜವಾಬ್ದಾರಿ ಹೊತ್ತ ಅವರು, ಯಾವ ಆಂದೋಲನದಲ್ಲಿಯೂ ಭಾಗವಹಿಸಿ ಮುಂದುವರಿದವರೂ ಅಲ್ಲ; ಹಾಗೆ ದುಡುಕುವುದು ಸರಿಯೂ ಅಲ್ಲ. ದೇಶಭಕ್ತ

ಅಚ್ಚಿನಲ್ಲಿದೆ ! ಅಚ್ಚಿನಲ್ಲಿದೆ !!

ಶ್ರೀಮಾನ್ ಪುರಾಣಿಕ ಕೃಷ್ಣಮೂರ್ತಿ ಅವರು
ಸರಳರಗಳಿಯ ಸುಂದರ ಶೈಲಿಯಲ್ಲಿ
ಕಲಾಪೂರ್ಣವಾಗಿ ಬರೆದ

ದೊರೆಸಾನಿ
(ನಾಟಕ)

ಬೇಗನೇ ಹೊರಬೀಳುವದು. ಪ್ರಕಟನೆಯ ದಿನವನ್ನು ನಿರೀಕ್ಷಿಸಿರಿ.

ನೆಂದು ಜೈಲುವಾಸವನ್ನೂ, ಗ್ರಂಥಕರ್ತನೆಂದು ದೊಡ್ಡ ದೊಡ್ಡ ಗ್ರಂಥರಚನೆಯನ್ನೂ, ಸುಧಾರಕನೆಂದು ಪ್ರಚಾರ ಭಾಷಣಗಳನ್ನೂ ಮಾಡಿದವರಲ್ಲ. ಹೊರಗಿನ ಯಾವ ಆಡಂಬರಕ್ಕೂ ಮೆಚ್ಚದೆ, ಒಳಗಿನ ಸಾರವನ್ನರಿತು ಸವಿದು—ಸನಿಯಲು ಸಿದ್ಧಗೊಳಿಸಿ ಕೊಡುವವರು ಅವರು. ದಿನದ ಒಂದೆರಡು ತಾಸು ಏಕಾಂತ ವಾಸ ಮಾಡುತ್ತಾ ಮೌನವಾಗಿ ಕುಳಿತು, ನಿಶ್ಚಿಂತನಾಗಿ ಶ್ರೀ-ಸ್ವಾಮಿಯನ್ನು ಹೃದಯದಲ್ಲಿ ಪ್ರಾರ್ಥಿಸುವ ಮಾನಸಿಕತಪಸ್ಸು ಅವರಿಗಿದೆ. ಎದ್ದು ನಡೆಯಲು ಸಾಮರ್ಥ್ಯವಿರುವವರೆಗೂ, ಅವರು ತಮ್ಮ ನಿತ್ಯವಿಧಿ, ನಿಯಮ, ಜಪತಪ—ಸ್ವಾಮಿಯ ದರ್ಶನವನ್ನು ಬಿಡುವವರಲ್ಲ. ಮಕ್ಕಳನ್ನೂ, ಹುಚ್ಚರನ್ನೂ ಕಂಡರೆ ತಿಂಡಿಗಳನ್ನು ಕೊಟ್ಟು ಪ್ರೀತಿಯಿಂದ ಮಾತಾಡಿಸಿ ನಗುತ್ತಿರುತ್ತಾರೆ. ಹೆಂಗುಸರಲ್ಲಿ ತುಂಬಾ ಪೂಜ್ಯಭಾವ. ಹೆಣ್ಣ ಕಣ್ಣೀರಿಗೆ ಅವರು ಕೊಡುವ ಬೆಲೆ ಬಹಳ. ಹೆಂಗುಸಿನ ಕೂಗನ್ನು ಕೇಳಿ ಅವರ ಸಹನೆ- ಶಾಂತಿಯ ನಿಧಿ ಬರಿಯದಾಗಿ, ಹೃದಯವು ಕುದಿದು ಉಕ್ಕುತ್ತದೆ. ವಿದ್ಯಾವಂತನನ್ನೂ, ಕಲಾವಿದನನ್ನೂ ಕಂಡಾಗ, ಅವರ ಹೃದಯ ಉಕ್ಕಿ ಬರುತ್ತದೆ. ನಾಲ್ಕಾರು ಮಾತುಗಳಿಂದ ಅವನನ್ನು ಒಲೆದು ನೋಡುತ್ತಾರೆ. ವಂಚಕನನ್ನೂ, ಸುಳ್ಳುಗಾರನನ್ನೂ, ಲೋಭಿಯನ್ನೂ, ದುಂದುಗಾರನನ್ನೂ, ಅನೀತಿವಂತೆಯಾದ ಸ್ತ್ರೀಯನ್ನೂ ಅವರು ಬಹು ಬೇಗನೇ ಕಂಡುಕೊಳ್ಳುತ್ತಾರೆ. ಎಷ್ಟು ನಿಚಕ್ಷಣತೆಯಿಂದ ತನ್ನ ಸಹಜ ಪ್ರವೃತ್ತಿಯನ್ನು ಮುಚ್ಚಿ ಕೃತಕವಾದ ಗೌರವವನ್ನು ತೋರಿಸಲು ಪ್ರಯತ್ನಪಟ್ಟರೂ, ಅವರ ಪೂರ್ಣ ಅಹಿಂಸಾಮಯ ಪ್ರೇಮಧರ್ಮದ ಅನುನಿತ್ಯದ ಅನುಷ್ಠಾನದ ಬಲದಿಂದ ಅದು ಅಸಾಧ್ಯವಾಗುತ್ತದೆ. ಇದು ತುಂಬಾ ಮಂದಿ ಸ್ವತಃ ಅನುಭವದಿಂದಲೇ ತಿಳಿದ ವಿಷಯ

ಹಿಂದೂ ದೇವಾಲಯಗಳಿಗೆ ಭಕ್ತಿ-ವಿಶ್ವಾಸದಿಂದ ಬರುವ ಕ್ರೈಸ್ತ-ಮುಸ್ಲಿಂ ಮತದವರನ್ನು ನಾವು ಬಹಳ ಕಡೆಗೆ ಕಾಣಲಾರೆವು. ಕ್ಷೇತ್ರಾಧಿಪತಿಯ ಸಂಕುಚಿತ ಭಾವನೆಯೇ ಇದಕ್ಕೆ ಕಾರಣವೆಂಬುದನ್ನರಿತು ಎಲ್ಲ ಕ್ಷೇತ್ರಗಳಿಗೂ ಆದರ್ಶವಾಗಿ ನಡೆದ್ದನುಡಿದು, ಶ್ರೀ. ಹೆಗ್ಗಡೆಯವರು, ತಮ್ಮ ಕ್ಷೇತ್ರಕ್ಕೆ ಬರುವ ಸರ್ವ ಮತಧರ್ಮಗಳ ಬಾಂಧವರಿಂದ ಸಮಾಜಕ್ಕೆ ಬೋಧಿಸುತ್ತಿದ್ದಾರೆ.

ಹತ್ತಾರು ದಿನಗಳಲ್ಲಿ ಎಡೆಬಿಡದೆ ಹಗಲು ರಾತ್ರಿ ನಡೆಯುವ ಉತ್ಸವಾದಿ ಕಾರ್ಯಗಳಲ್ಲಿ ಭಾಗವಹಿಸಿದರೂ ಶ್ರೀ. ಹೆಗ್ಗಡೆಯವರ ಮುಖದಕಳೆ ಎಂದಿನಂತೆಯೇ ಪ್ರಕಾಶವಾಗಿರುವುದನ್ನೂ, ಸುಳ್ಳನ್ನೇ ಹೆಣೆದುಕೊಂಡು ಅವರ ಮುಂದೆ ಹೋಗಿ ಮಾತಾಡಲು ಬಯಸಿದ ವ್ಯಕ್ತಿಯು ಸತ್ಯವನ್ನೇ ಹೇಳಿದುದನ್ನೂ ಸ್ವತಃ ಕೇಳಿದಾಗ, ಅವರಲ್ಲವಿತ ಅಂತಃಶಕ್ತಿಯ ಅರಿವಾಗುವುದು. ಜನಜೀವನದ, ನಾಡಿನ ಪ್ರತಿಯೊಂದು ಘಟನೆಯ ತಳದಲ್ಲಿಯೂ ಬಾಹ್ಯಕ್ಕೆ ಕಾಣಿಸದ ಒಂದು ಪ್ರಬಲವಾದ ಕಾರಣ – ತತ್ತ್ವ ಇದೆಯೆನ್ನುವವರು ಅವರು. ಗಾಂಧೀಜಿಯ ಮರಣವಾರ್ತೆ ಅವರ ಮನೆಯ ರೇಡಿಯೋನಲ್ಲಿ ಕೇಳಿದ ಒಡನೆ, ಕಣ್ಣೀರು ಸುರಿಸಿ ಅರ್ಧ ತಾಸು ಮೌನವಾಗಿದ್ದರು. ಗಾಂಧೀವಾದದ ಸಾರವನ್ನೆಲ್ಲಾ ಶೋಧಿಸಿ, ರಾಮರಾಜ್ಯದ ಕನಸು ನೆನಸಾಗಲು ನಡುನೆ ಕರಾಳವಾದ ಕಾರ್ಗತ್ತಲೆಯನ್ನು ಜನತೆ ದಾಟಬೇಕಾಗುವುದೆಂದು ಹೇಳಿದವರು ಅವರು. ಪರತಂತ್ರದಿಂದ ಸ್ವತಂತ್ರಕ್ಕೆ ಗಾಂಧೀಜಿ ತಂದಿದ್ದಾರೆ. ಅದು ರಾಜಕೀಯ ಸ್ವಾತಂತ್ರ್ಯ. ತಾತ್ತ್ವಿಕವಾದ—ಧಾರ್ಮಿಕವಾದ ಸ್ವಾತಂತ್ರ್ಯವನ್ನು ನಾವು ಪಡೆಯಲು ಇನ್ನೂ ಹಲವು ಕಾಲ ಸಂಘಟನೆಯಿಂದ ದುಡಿಯಬೇಕು. ಅದನ್ನು ಪಡೆಯದ ವಿನಾ ನಮ್ಮ ಸ್ವಾತಂತ್ರ್ಯ ಸ್ಥಿರವಾಗಲಾರದು—ಎಂದು ಶ್ರೀ. ಹೆಗ್ಗಡೆಯವರ ಅಭಿಮತ.

ಶ್ರೀ. ಹೆಗ್ಡೆಯವರ ಸಂಭಾಷಣೆ ತುಂಬಾ ಸುಖಕರ. ಯಾರನ್ನು ಹೇಗೆ ಗೌರವಿಸಬೇಕು? ಹೇಗೆ ಮಾತಾಡಿಸಬೇಕು? ಹೇಗೆ ಒರೆ ಹಚ್ಚಬೇಕು?—ಎಂಬ ಜ್ಞಾನ ಅವರಿಗೇ ವಿಾಸಲು. ಅವರ ಭೆಟ್ಟಿ ಪಡೆಯುವ ಪ್ರತಿಯೊಬ್ಬನೂ ತಿಳಿಯತಕ್ಕ ವಿಚಾರ ಇದು. ಕೆಲವು ಮಂದಿ 'ನಾವು ತುಂಬಾ ಬಲ್ಲವರು" ಎಂಬ ಅಭಿಮಾನದಿಂದಲೂ, 'ಹೆಗ್ಡೆಯವರು ಸಾಮಾನ್ಯವಾದ ಒಂದು ಜನ' ಎಂಬ ತಾತ್ಸಾರ ಭಾವದಿಂದಲೂ ಅವರೊಡನೆ ಸಂಭಾಷಣೆ ಮಾಡಿ, ತಮಗೆ ತಿಳಿಯದೆಯೇ ತಮ್ಮನ್ನೇ ಅವರು ಮಾರಿಕೊಂಡು ಹೋಗಿಬಿಡುವುದಿದೆ. ಶ್ರೀ. ಹೆಗ್ಡೆಯವರ

....ನಮ್ಮ ಪ್ರಕಟನೆಗಳು....

ದಾಸರ ಹುಡಿಗೆ [೨ನೇ ಆವೃತ್ತಿ] ೧-೮-೦, ಪ್ರತಿಫಲ ಮತ್ತು ಇತರ ಕತೆಗಳು ೧-೪-೦. ಸಂಗೊಳ್ಳಿ ರಾಯಣ್ಣ [ತಿದ್ದಿದ ೨ನೇ ಆವೃತ್ತಿ]೧-೮-೦, ವಿಜಯ ಸಾಮ್ರಾಜ್ಯ [ಐತಿಹಾಸಿಕ ನಾಟಕ]. ೧-೮-೦, ಕನ್ನಡ ಸಾಹಿತ್ಯವಾಹಿನಿ [ತಿದಿ. ಬೆಳೆಸಿದ ೨ನೇಆವೃತ್ತಿ] ೨-೮-೦. ಆರು ಕತೆಗಳು ೧-೪-೦. ಶೋಕ ವ್ಯಾಪಾರಿಗಳಿಗೆ ಹೆಚ್ಚಿನ ಸವಲತ್ತು.

'ಕಥಾಕುಂಜ' ಗ್ರಂಥಭಾಂಡಾರ,
ಗಣಪತಿ ಬೀದಿ, ಬೆಳಗಾಂವಿ,



ಮೇಲ್ತರಗತಿಯ ಸುಂದರ ಕೈಗಡಿಯಾರಗಳು

ಎಲ್ಲಾ ಗಡಿಯಾರಗಳೂ ಸ್ವಿಸ್ ತಯಾರಿಕೆಯವೂ, ಸರಿಯಾದ ಹೊತ್ತನ್ನು ಕೋರಿಸುವವೂ ಆಕರ್ಷಕವಾದವೂ ಆಗಿವೆ. ಪ್ಲಾಸ್ಟಿಕ್ ಪಟ್ಟಿಸಹಿತ. (೨ ವರ್ಷ ಗ್ಯಾರಂಟಿ.)

ಪರ್ಲಾಕಾರದ ಕ್ರೋಮಿಯಂ ಗಡಿಯಾರ	ರೂ,	೧೪
,, ಸೆಕಂಡ ,,	,,	೨೨
ಚೌಕಾಕೃತಿ ಕ್ರೋಮಿಯಂ ,,	,,	೨೪
ಹೆಚ್ಚಿನ ತರಗತಿಯದು ,,	,,	೨೮
೫ ಹರಳುಗಳುಳ್ಳದ್ದು—ಚದ್ದಟ್ ಆಕಾರ ,,	,,	೩೨
೧೫ ,, ,,	,,	೪೬
ಉದ್ದಾಕಾರದ—	,,	೪೨
,, ಹೆಚ್ಚಿನ ತರಗತಿಯದು ,,	,,	೫೦
೧೫ ಹರಳು ಉದ್ದಾಕಾರದ—ಶ್ರೇಷ್ಠವಾದದ್ದು	,,	೬೦

ಬಂಗಾರದ ಹೊದಿಕೆ ರೂ. ೫೦/- ೧೫ ಹರಳುಗಳುಳ್ಳದ್ದು

ರೋಲ್ಡ್‌ಗೋಲ್ಡ್ ರೂ, ೨೦/- ಹೆಚ್ಚಿನ ತರಗತಿಯದು ೪೦

ಪೋಸ್ಟೇಜು ೧೪ ಆಣೆ. (ಇಂಗ್ಲಿಷಿನಲ್ಲಿ ಬರೆಯಿರಿ.)

KAMALA WATCH CO. (J)

P. O. Box No. 803, CALCUTTA 1.

ಮಾತು ನಿಜವಾಗುತ್ತದೆ ಎಂದು ಕೆಲವರು, 'ಮಾತಾಡುವ ಮಂಜುನಾಥ' ಎಂದು ಕೆಲವರು ಹೇಳುವುದುಂಟು. ಅದು ಶ್ರೀ ಸ್ವಾಮಿಯ ಕೃಪಾಪೂರ್ಣತೆಯಿಂದಲೂ, ಅವರ ಸದಾಚಾರ ನಿಷ್ಠೆಯಿಂದಲೂ, ಮನದ ತಪಸ್ಸಿನಿಂದಲೂ ಅವರಿಗೆ ಸಿದ್ಧಿಸಿದ ಶಕ್ತಿ. ಈ ಕಾಲದ ನಾಸ್ತಿಕ ತರುಣ ವೃಂದವನ್ನಾದರೂ ಶ್ರೀ. ಹೆಗ್ಡೆಯವರು ಮಾತಾಡಿಸಿದಾಗ, ಅವರಲ್ಲಿ ತಾನಾಗಿಯೇ ಆಸ್ತಿಕ ಭಾವನೆ ಹುಟ್ಟಿ ಬೆಳೆದುದೂ ಇದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಮೈಸೂರು ಸೀಮೆಯಷ್ಟೇ ತನ್ನ ಕೀರ್ತಿಯನ್ನು ಹರಡಿದ್ದ ಶ್ರೀ ಕ್ಷೇತ್ರವು, ಶ್ರೀ. ಹೆಗ್ಗಡೆಯವರ ಕಾಲದಲ್ಲಿ ಸಮಗ್ರ ಭಾರತದ ವಿಶಾಲ ಪರಿಚಯಕ್ಕೆ ಒಳಗಾಗಿದೆ. ಸಾವಿರಾರು ಮುಂದಿಯ ನೂಕು-ನುಗ್ಗಲಾಗುವ ಜನಸಂದಣಿಯ ಜಾತ್ರೆಯುತ್ಸವಗಳಲ್ಲಿ ಪೋಲೀಸರೇ ಬಂದು ದಾರಿ ಬಿಡಿಸಲಾಗದ ವೇಳೆಯಲ್ಲಾದರೂ, ಶ್ರೀ ಹೆಗ್ಡೆಯವರು ಸಾಮಾನ್ಯರಂತೆ ನಗುನಗುತ್ತಾ ಬಂದು ಬಿಟ್ಟರೆಂದರೆ, ಜನರ ಗುಂಪು ತಾನಾಗಿಯೇ ದಾರಿ ಬಿಟ್ಟು ದೂರ ಸರಿಯುವುದನ್ನು ಕಂಡು ಆಶ್ಚರ್ಯಪಟ್ಟವರಿದ್ದಾರೆ. ದಾರಿಯ ಪರಿಶ್ರಮದಿಂದ ಕೈಯಲ್ಲಿದ್ದ ಹಣವೆಲ್ಲಾ ಖರ್ಚಾದ ಯಾತ್ರಿಕನು, ಊರು ಸೇರುವುದಕ್ಕಾಗಿ ಶ್ರೀ ಹೆಗ್ಡೆಯವರಿಂದ ಸಾಲ ಕೊಳ್ಳುವುದುಂಟು ಒಂದೆರಡು ಮಾತಿನಿಂದ ಅವನ ಯೋಗ್ಯತೆ ತಿಳಿದು, ದಾರಿಖರ್ಚಿಗೆ ಹಣ ಕೊಡುವುದೂ ಇದೆ. ತಮ್ಮ ಅಧಿಕಾರದ ೨೫ನೆಯ ವರ್ಷದಲ್ಲಿ ಊರವರ ಉತ್ಸಾಹದಿಂದ ರಜತೋತ್ಸವ ಆಚರಿಸಿ ಸಂಚಿಕೆ ಪ್ರಕಟಿಸಿದಾಗಲೂ ಇವರು ಬೇಡವೆಂದರು. ಕಡೆಗೆ ದೂರದ ಮಹನೀಯರು, ಶ್ರೀ. ಹೆಗ್ಗಡೆಯವರನ್ನು ಸಮಾಧಾನದಿಂದ ಒಪ್ಪಿಸಿದರು. ಸ್ತುತಿ ಕೀರ್ತಿಗೆ ಮೆಚ್ಚದ ಮನ ಅವರದು. ಈಗ ಶ್ರೀ. ಹೆಗ್ಗಡೆಯವರಿಗೆ ಅರುವತ್ತನೆಯ ವರ್ಷ. ಮೈಸೂರವರೂ ದಕ್ಷಿಣ ಕನ್ನಡದವರೂ ಜಟ್ಟಾಗಿ, ಅರುವತ್ತನೆಯ ವರ್ಧಂತಿ ಮಾಡಿ 'ಗ್ರಂಥ ಕಾಣಿಕೆ' ಕೊಡಲು ಕಮಿಟಿ ಮಾಡಿದ್ದಾರೆ. ತುಂಬಾ ಹಿರಿಯ ಲೇಖಕರೂ, ಉದಾರಿಗಳೂ ಸಹಕರಿಸಿದರೂ ಶ್ರೀ. ಹೆಗ್ಡೆಯವರು ಹಲವು ಸಾರೆ ಆಕ್ಷೇಪಿಸಿದ್ದಾರೆ. "ವ್ಯಕ್ತಿಯ ಪೂಜೆ ನ್ಯಾಯವಲ್ಲ—ಕೀರ್ತಿ ವ್ಯಕ್ತಿಯ ಅಶಕ್ತಿಯ ಲಾಂಛನ; ನಿಜವಾದ ಪ್ರೀತಿಗೆ ಕೊಡು-ಕೊಳ್ಳುವ ವ್ಯವಹಾರವಿಲ್ಲ. ಯಾರಿಗೂ, ಯಾವುದಕ್ಕೂ, ಯಾವಾಗಲೂ ನೋಯಿಸದೆ ಯಾಚಿಸದೆ-ಪರಿಗ್ರಹಿಸದೆ ಇರಬೇಕೆಂಬ ನನ್ನ ಇಚ್ಛೆಗೆ ಇದು ತೀರಾ ವಿರೋಧವಾದುದು. ಹತ್ತು ಮಂದಿ ಸೇರಿ ಮಾಡುವ ಕಾರ್ಯದಲ್ಲಿ ಏನಾದರೊಂದು ಗೊಣಗಾಟ ಇಲ್ಲದೆಯೇ ಕೆಲಸ ಕೊನೆಗೊಳ್ಳುವಷ್ಟು ನಮ್ಮ ಸಮಾಜ ಬಲಿತಿಲ್ಲ-ಪರಿಪಕ್ವವಾಗಿಲ್ಲ. ಅದರಲ್ಲಿಯೂ ವಾಚಾ-ಮನಸಾ ಏಕತ್ರವಾಗಿರುವ ಕಲಾವಿದರಾಗಲೀ-ಉದಾರಿಗಳಾಗಲೀ ನಮ್ಮ ನಾಡಿನ ದೌರ್ಭಾಗ್ಯದಿಂದ ಅತಿ ಕಡಿಮೆ. ನನ್ನ ಊರವರೇ, ನನ್ನ ಸ್ವಮತಬಾಂಧವರೇ 'ಗ್ರಂಥ ಕಾಣಿಕೆ'ಗೆ ನೇರಿದುದು ನನಗೇಕೋ ಇದಕ್ಕೂ ಹೆಚ್ಚಿನ ಬೇಸರ." ಎಂದರು. ಆಗ ಕಮಿಟಿಯವರೊಬ್ಬರು "ತಾವು ಹಾಗೆನ್ನಬಾರದು. ಸೂರ್ಯನಿಗೆ ಬೆಳಕು ಹಿಡಿಯುವ ಅಗತ್ಯವಿಲ್ಲ. ನಿಮಗೆ ಗ್ರಂಥಕಾಣಿಕೆ ಕೊಟ್ಟು ನಿಮ್ಮ ಕೀರ್ತಿಯನ್ನು ಹೆಚ್ಚಿಸಲು ಆಶಿಸಿಲ್ಲ. ಯಾರನ್ನೂ ನೋಯಿಸಲು-ಯಾಚಿಸಲು ಬಯಸಿಲ್ಲ. ತಾವಾಗಿಯೇ ಪ್ರೀತಿಯಿಂದ, ಅವರಿಗೆ ಇಷ್ಟವಿದ್ದಷ್ಟು ಹಣವನ್ನಾಗಲೀ, ಲೇಖನವನ್ನಾಗಲೀ ತಮ್ಮ ಹಾಗೂ ಕ್ಷೇತ್ರದ ಪ್ರೀತ್ಯಾದರಗಳಿಂದ ಕೊಟ್ಟರೆ, ಅದನ್ನೇ ಸಂಗ್ರಹಿಸಿ ಗ್ರಂಥರೂಪದಿಂದ ತಮಗೆ ಕೊಡಲು ನಾವು ಯೋಚಿಸಿದ್ದೇವೆ. ಹಿರಿಯ ಸಾಹಿತಿಗಳ ಲೇಖನಸಂಗ್ರಹದ ಗ್ರಂಥವು, ನಾಳಿನ ಮುಂದಿಗೆ ಒಂದು ಜ್ಞಾನನಿಧಿಯಾಗಿ ಉಳಿಯುವುದು. ತಮ್ಮಲ್ಲಿ ಜನತೆಗಿರುವ ಪ್ರೇಮದ ಸದುಪಯೋಗವನ್ನು ಶಾಶ್ವತವಾಗಿ ಸರ್ವರಿಗೂ ಸಿಗುವಂತೆ ಮಾಡುವ ಈ ಕಾರ್ಯದಿಂದ ತಾವು ಬೇಸರಿಯುವಂಥಾವುದನ್ನೂ ಮಾಡಲಾರೆವು. ಇದು ಕೀರ್ತಿ-ಲಾಭ-ಸುಖ ಮೊದಲಾದ ಯಾವ ಸ್ವಾರ್ಥಕ್ಕೂ ಒಳಗಾಗಿಲ್ಲ. ಸಹಕರಿಸುವವರೂ, ಪರಿಶ್ರಮಿಸುವವರೂ ಯಾವ ಸುಖ-ಲಾಭವನ್ನೂ ಪಡೆಯಲವಕಾಶವಿಲ್ಲ. ಹತ್ತು ಮಂದಿಯ ಅಪೇಕ್ಷೆಗೆ ತಾವು ಅಡ್ಡ ಬರಬಾರದು." ಎಂದು ವಿಜ್ಞಾಪಿಸಿಕೊಂಡರು. ಕನ್ನಡ ನಾಡಿಗೆ ಮಾರ್ಗದರ್ಶಕರಾದ ಇವರಿಗೆ ಶ್ರೀಸ್ವಾಮಿಯು ದೀರ್ಘಾಯುರಾರೋಗ್ಯಗಳನ್ನಿತ್ತು ಕಾಪಾಡಲಿ. ಅವರ ಜೀವನ ರಥವು ಸುಸೂತ್ರವಾಗಿ ಸಾಗಿ, ಜನಜೀವನಕ್ಕೆ ರಥೋತ್ಸವದ ಆನಂದವನ್ನು ಕೊಡಲಿ. ನಾಳಿನ ಜಗತ್ತಿಗೆ ಅವರ ಪರಿಪಕ್ವ ಅನುಭವ ಸಂಜೀವನವಾಗಿ ಕಾಪಾಡಲಿ. ಈ ಬಯಕೆ ಕನ್ನಡಿಗರೆಲ್ಲರದಾಗಿರಲಿ.

ರಾಜ

(ಒಂದು ಉದ್‌ಬೋಧಕ ಕಥಾಪ್ರಬಂಧ)

ಸಿರಿಯಾದೇಶದ ಸುಪ್ರಸಿದ್ಧ ಸಾಹಿತ್ಯಿಕ ಖಲೀಲ್‌ಗಿಬ್ರಾನ್ ಅವರ ಕೃತಿಯೊಂದರ ಅನುವಾದ

★

ಇಂದು ನಮ್ಮಲ್ಲಿ ಜನರು, ಎಲ್ಲ ತಪ್ಪುಗಳನ್ನೂ ಸರಕಾರದ ತಲೆಯ ಮೇಲೆ ಹೊರಿಸಿ ಅದನ್ನು ಬೈಯುವರು; ಸರಕಾರವು ಆ ತಪ್ಪುಗಳ ಹೊರೆಯನ್ನು ಜನತೆಯ ತಲೆಯ ಮೇಲೆ ಹೇರುತ್ತಿರುವುದು. ಈ ಕತೆ ಇಬ್ಬರಿಗೂ ಹೊಸ ಬೆಳಕನ್ನು ಕೊಡುವಂತಿದೆ.

★

ಸಾದಿಕ ದೇಶದ ನಾಗರಿಕರು ಅರಮನೆಗೆ ಮುತ್ತಿಗೆಯನ್ನು ಹಾಕಿ, ರಾಜನ ವಿರುದ್ಧ ಬಂಡಾಯ ಹೂಡಿರುವುದಾಗಿ ಸಾರಿದರು. ಆಗ ರಾಜ ಒಂದು ಕೈಯಲ್ಲಿ ತನ್ನ ಮುಕುಟ, ಇನ್ನೊಂದು ಕೈಯಲ್ಲಿ ರಾಜದಂಡವನ್ನು ಹಿಡಿದುಕೊಂಡು, ಅರಮನೆಯ ಮೆಟ್ಟಿಲುಗಳನ್ನು ಇಳಿಯುತ್ತ ಹೊರಗೆ ಬಂದ. ತೇಜಃಪುಂಜವಾದ ರಾಜನ ಮುಖಮುದ್ರೆಯನ್ನು ನೋಡಿ ಗುಂಪು ತುಸು ಹಿಮ್ಮೆಟ್ಟಿದಂತಾಗಿ, ಅದರ ಕೂಗಾಟ ಕಡಮೆಯಾಯಿತು. ಜನರೆದುರು ನಿಂತು ರಾಜನೆಂದ:—

'ಮಿತ್ರರೆ, ಈಗ ನೀವು ನನ್ನ ಪ್ರಜಾಜನರಾಗಿಲ್ಲ. ಎಂತಲೇ ಈ ನಿಮ್ಮವೇ ಆಗಿರುವ ಮುಕುಟ ಮತ್ತು ರಾಜದಂಡ ಇವುಗಳನ್ನು ನಿಮಗೆ ಒಪ್ಪಿಸುತ್ತೇನೆ. ನಿಮ್ಮಂತೆ ನಾನೂ ಒಬ್ಬ ಸಾಮಾನ್ಯ ಆಳು. ನಿಮ್ಮಲ್ಲಿಯ ಒಬ್ಬನಾಗಿಯೇ ಇನ್ನು ಮುಂದೆ ನಾನು ಇರಬಯಸುತ್ತೇನೆ. ನಿಮ್ಮೊಡನೆ ಕೂಡಿಕೊಂಡು ನಿಮ್ಮ ಏಳಿಗಾಗಿ ದುಡಿಯಬೇಕೆನ್ನುತ್ತೇನೆ. ಮೇಲಾಗಿ ರಾಜನ ಅಗತ್ಯವಾದರೂ ಏನಿದೆ? ನಿಮಗೆ ರಾಜ ಬೇಡವೇ ಬೇಡ; ನಾವು ಹೊಲದಲ್ಲಿ ಕೆಲಸಮಾಡೋಣ, ತೋಟದಲ್ಲಿ ದುಡಿಯೋಣ, ಹೆಗಲಿಗೆ ಹೆಗಲು ಹಚ್ಚಿ ನಮ್ಮ ನಮ್ಮ ಕಾಯಕ ನಡೆಯಿಸೋಣ. ಇನ್ನು ನಾನು ಯಾವ ಹೊಲದಲ್ಲಿ, ಯಾವ ತೋಟದಲ್ಲಿ ಕೆಲಸಮಾಡಬೇಕೆಂಬುದನ್ನಷ್ಟು ಹೇಳಿಬಿಡಿರಿ. ಈಗ ನೀವೆಲ್ಲರೂ ರಾಜರೇ!'

ಜನರು ಇದನ್ನು ಕೇಳಿ ದಂಗು ಬಡಿದರು. ಅವರಿಗೆ ಮಾತೇ ನಿಂತಿತು. ತಮ್ಮ ಅಸಂತೋಷಕ್ಕೆ ರಾಜನೇ ಕಾರಣ—ಎಂದು ಅವರು ಭಾವಿಸಿದ್ದರು. ಆದರೆ ಅವನೇನೋ ತನ್ನ ಕಿರೀಟ-ರಾಜದಂಡಗಳನ್ನು ಒಪ್ಪಿಸಿ, ತಮ್ಮಂತೆಯೇ ಇರಲು ಬಯಸುತ್ತಾನೆ!

ಎಲ್ಲರೂ ತಮ್ಮ ತಮ್ಮ ಮನೆಯ ಹಾದಿಹಿಡಿದರು. ರಾಜನೂ ಒಬ್ಬ ಒಕ್ಕಲಿಗನ ಜೊತೆಗೆ ಹೊಲದಲ್ಲಿ ದುಡಿಯಲು ಹೊರಟ.

ಆದರೆ ಸಾದಿಕದ ರಾಜ್ಯದಲ್ಲಿ, ರಾಜನಿಲ್ಲದ್ದರಿಂದ ಜನರ ಸ್ಥಿತಿಗತಿಯೇನು ಸುಧಾರಿಸಲಿಲ್ಲ. ಅಸಂತೋಷದ ಬೇಗೆ ದೇಶದ ತುಂಬೆಲ್ಲ ಮೊದಲಿಗಿಂತಲೂ ಹೆಚ್ಚಾಗಿ ಹಬ್ಬಿಕೊಂಡಿತು. ಬೀದಿಯಲ್ಲಿ ನಿಂತು, ಚಾವಡಿಯ ಕಟ್ಟೆಯ ಮೇಲೆ ಕುಳಿತು, ಜನರು ಕೂಗಾಟ ನಡೆಸಿದರು—'ನಮಗೆ ರಾಜನೇಬೇಕು. ನಮ್ಮ ತಲೆಯ ಮೇಲೆ ರಾಜನ ಆಡಳಿತ ಎಂಬುದಿಲ್ಲದಿದ್ದರೆ, ನಾವು ಬದುಕಿ ಬಾಳುವುದು ಹೇಗೆ? ನಮ್ಮ ರಾಜ ನಮಗೆ ತಿರುಗಿ ಬರಲಿ.'

ಎಲ್ಲರೂ ರಾಜನನ್ನು ಹುಡುಕಲು ಹೊರಟರು. ಅವನು ಒಂದು ಹೊಲದಲ್ಲಿ ರಂಟೆ ಹೊಡೆಯುತ್ತಿರುವುದನ್ನು ಕಂಡರು. ಅವನನ್ನು ಕರೆದೊಯ್ದು, ಸಿಂಹಾಸನದ ಮೇಲೆ ಕುಳ್ಳಿರಿಸಿ, ಅವನ ಮುಕುಟ ಹಾಗೂ ರಾಜದಂಡವನ್ನು ಅವನಿಗೆ ಅರ್ಪಿಸಿ ಕೇಳಿಕೊಂಡರು:—'ಪ್ರಭೋ, ನಿಮ್ಮ ಎಲ್ಲ ಶಕ್ತಿ, ನ್ಯಾಯಬುದ್ಧಿ ಇವನ್ನು ಸಯೋಗಿಸಿ ನಮ್ಮ ಮೇಲೆ ರಾಜ್ಯ ಮಾಡಿರಿ!'

ರಾಜ ನಾನ್ಮುಡಿದ:—'ಬಲ ನನ್ನ ಕೈಯಲ್ಲಿಯದು; ಅದನ್ನು ನಾನು ಪೂರ್ಣವಾಗಿ ಉಪಯೋಗಿಸುತ್ತೇನೆ. ನನ್ನ ರಾಜ್ಯಕಾರಭಾರವು ಮಾತ್ರ ನ್ಯಾಯವಾಗಿ ನಡೆಯಲಿ ಎಂದು ದೇವರನ್ನು ಬೇಡಿಕೊಳ್ಳುತ್ತೇನೆ.'

ಜನರು ಆನಂದದಿಂದ ರಾಜನಿಗೆ ಪಟ್ಟಗಟ್ಟಿದರು. ತುಸು ದಿನಗಳಲ್ಲಿಯೇ ಕೆಲವು ಸ್ತ್ರೀ-ಪುರುಷರು ರಾಜನ ಬಳಿ ಬಂದು, ಒಬ್ಬ ಜಮೀನ್‌ದಾರನು ತಮ್ಮನ್ನು ಹೊಲಗಳಲ್ಲಿ ಗುಲಾಮರಂತೆ ದುಡಿಸಿಕೊಳ್ಳುತ್ತಿರುವನೆಂದೂ, ಅದರಿಂದ ತಾವು ಬಹಳ ಕಷ್ಟಕ್ಕೀಡಾಗಿರುವೆವೆಂದೂ ದೂರು ಹೇಳಿದರು. ರಾಜ ಜಮೀನ್‌ದಾರನನ್ನು ಕೂಡಲೆ ಕರೆಯಿಸಿ, "ದೇವರ ಕಣ್ಣಿಗೆ ಎಲ್ಲರೂ ಸಮ; ಆತನ ತಕ್ಕಡಿಯಲ್ಲಿ ಒಬ್ಬನು ಹೆಚ್ಚು ಒಬ್ಬನು ಕಡಿಮೆ— ಎಂಬ ತಾರತಮ್ಯವಿಲ್ಲ. ನಿನ್ನ ಹೊಲ-ತೋಟಗಳಲ್ಲಿ ಕಾಯಾಕಷ್ಟದಿಂದ ದುಡಿಯುವ ರೈತರ ಸೊತ್ತು-ಜೀವಿತಗಳ ಬೆಲೆ ನೀನರಿಯೆ. ಎಂತಲೇ ನಿನಗೆ ಹದ್ದುಪಾರಿನ ಶಿಕ್ಷೆಯನ್ನು ವಿಧಿಸಿದ್ದೇನೆ. ಈ ಕ್ಷಣ ನನ್ನ ರಾಜ್ಯ ಬಿಟ್ಟು ಹೊರಡು!" ಎಂದು ವಿಧಿಸಿದ.

ಮರುದಿನ ಮತ್ತೆ ಕೆಲಪರು ಬಂದು, ಗುಡ್ಡದಾಜೆಯಲ್ಲಿರುವ ದೇಸಾಯಿತಿಯು ಅನಂತ ಯಾತನೆಗಳನ್ನು ಕೊಡುತ್ತಿರುವುದಾಗಿಯೂ, ತಮ್ಮನ್ನು ಕೂಡಲೆ ಇದರಿಂದ ಉಳಿಸಬೇಕಾಗಿಯೂ ಬೇಡಿಕೊಂಡರು. ರಾಜ ಅವಳನ್ನೂ ಕರೆ ಕಳುಹಿ ಹೇಳಿದ:—'ಇವರು ಹೊಲಗಳಲ್ಲಿ ದುಡಿಯುತ್ತಾರೆ. ಅನೇಕ ಕಷ್ಟಗಳನ್ನು ಸಹಿಸಿ ನಿನಗೆ ಉಣ್ಣಲು ಧಾನ್ಯ, ಕುಡಿಯಲು ಹಾಲು ಒದಗಿಸುತ್ತಾರೆ. ನಾವು ಕುಳಿತು ಜೆಕ್ಕಂದದಿಂದ ಉಂಡು ತಿಂದು ನಲಿಯುತ್ತೇವೆ. ನಿಜವಾಗಿ ಅವರೇ ನಮಗಿಂತ ಶ್ರೇಷ್ಠರು, ಬಾಳಲು ಯೋಗ್ಯರು. ಈ ಮಾತು ನಿನಗೆ ಒಪ್ಪಿಗೆಯಾಗದು—ಎಂದು ತೋರುತ್ತದೆ. ಆದು-

ಗರ್ಭ ನಿರೋಧದ ಸಾಧನಗಳು

ಂಡಸರ ಮರ್ಮಚೀಲ ಬಹಳ ತಾಳಕೆಯುಳ್ಳದ್ದು ೧ ಕ್ಕೆ ೧-೪-೦
,, ,, ಸಾಧಾರಣ ,, ೧ ಕ್ಕೆ ೧-೦-೦
,, ,, ಸಾದಾ ,, ೧ಕ್ಕೆ ೦-೪-೦
,, ಮಣಿ ಕಂಚುಕ ,, ೧ಕ್ಕೆ ೦-೪-೦
ಪುರುಷೇಂದ್ರಿಯ ಬೆಳೆಯಿಸುವ, ಉದ್ರೇಕಿಸುವ ವ್ಹಾಕ್ಯೂಮ್ ಪಂಪು ಸುಂದರವಾದ ಪೆಟ್ಟಿಗೆಯಲ್ಲಿ } ೧ಕ್ಕೆ ೨೫-೦-೦
ಬೀಜಾಂತಕ ತೈಲ ಬಾ. ೧ ಕ್ಕೆ ೧-೦-೦
ಹೆಂಗಸರಿಗೆ ಚಿಕ್ಕಪೆಸರಿ ನಂ. ೧ ೧-೪-೦
,, ,, ನಂ. ೨ ೧-೪-೦
,, ,, ನಂ. ೩ ೧-೦-೦
ಜನನೇಂದ್ರಿಯ ತೊಳೆಯುವ ಜೀಕಳಿ ೧-೦-೦

ಬೆಲೆಯನ್ನೂ ಅಂಚೆ ವೆಚ್ಚವನ್ನೂ ೧೨ ಆಣೆ ಮುಂಗಡ ಕಳಿಸಬೇಕು. ವ್ಹಿ. ಪಿ. ಕಳಿಸಲಾರೆವು.

ಶ್ರೀಕಾಂತ ಮತ್ತು ಕಂಪನಿ

ಸುಭಾಸ ಬೀದಿ, ಧಾರವಾಡ

ದರಿಂದ ನೀನು ನನ್ನ ರಾಜ್ಯವನ್ನು ಬಿಟ್ಟು ಕೂಡಲೆ ಹೊರಟು ಹೋಗು; ಮತ್ತೆ ಎಂದೂ ಮರಳಿ ಇತ್ತ ಬರಬೇಡ!'

ಇದು ಮುಗಿ-ಮುಗಿಯುವುದರೊಳಗಾಗಿಯೇ ಜನರ ಮೂರನೆಯ ಗುಂಪೊಂದು ರಾಜನೆದುರು ನಿಂತು:— 'ಮಹಾರಾಜರೆ, ನಮ್ಮ ಧರ್ಮಗುರುಗಳು ನಮ್ಮನ್ನು ಬಿಟ್ಟಯ ಕೆಲಸಕ್ಕೆ ಹಿಡಿದು, ಗುಡಿಕಟ್ಟಿಸುವ ನೆವದಿಂದ ಕಲ್ಲೊಡೆಯಲು ಹಚ್ಚಿದ್ದಾರೆ. ಈ ಗುರುಗಳ ಬೊಕ್ಕಸದಲ್ಲಿ ಬೆಳ್ಳಿ-ಬಂಗಾರದ ನಾಣ್ಯಗಳ ರಾಶಿಯೇ ಬಿದ್ದಿದೆ. ಆದರೆ ನಾವು ಮಾತ್ರ ತುತ್ತು ಕೂಳನ್ನೂ ಕಾಣದಾಗಿದ್ದೇವೆ. ಹೊಟ್ಟೆಯೆಲ್ಲ ಬೆಂಕಿಯ ಚೀಲವಾಗಿದೆ. ಕೂಲಿಯನ್ನು ಕೊಡದಿದ್ದರೆ ನಾವು ಬದುಕುವುದು ಹೇಗೆ ಪ್ರಭು?' ಎಂದು ಅರಚಿದರು. ರಾಜ ಧರ್ಮಗುರುವನ್ನು ಕರೆಯಿಸಿ ಹೇಳಿದ:— 'ಕೊರಳಲ್ಲಿ ಹಾಕಿದ ಈ ಧಾರ್ಮಿಕ ಚಿಹ್ನವು ಯಾತಕ್ಕಾಗಿದೆಯೆಂಬುದು ನಿಮಗೆ ಗೊತ್ತಿದೆಯೆ? ಇದು ತ್ಯಾಗದ ದ್ಯೋತಕ. ಬಲಿದಾನದ ದ್ಯೋತಕ! ಪ್ರಾಣಕ್ಕೆ ಪ್ರಾಣ ಕೊಡುವುದನ್ನು ಬಿಟ್ಟು, ನೀವು ಜನರ ಪ್ರಾಣವನ್ನೇ ಹೀರುವ ಕಾಯಕವನ್ನು ನಡೆಯಿಸಿರುವಿರಿ! ಒಂದು ಕ್ಷಣಕೂಡ ನನ್ನ ರಾಜ್ಯದಲ್ಲಿ ನಿಲ್ಲಲಾಗದು. ಕೂಡಲೆ ಇಲ್ಲಿಂದ ಮರೆಯಾಗಿರಿ, ಮತ್ತು ಎಂದೂ ನನ್ನ ರಾಜ್ಯದಲ್ಲಿ ಪುನಃ ಕಾಲಿಡಬೇಡಿರಿ.'

ಹೀಗೆ ಒಂದು ತಿಂಗಳವರೆಗೆ ಜನರು ಪ್ರತಿದಿನವೂ ಬಂದು ತಂತಮ್ಮ ಕಷ್ಟಗಳನ್ನು ರಾಜನೆದುರು ಹೇಳಿಕೊಳ್ಳುತ್ತಿದ್ದರು: ಮತ್ತೆ ದಿನವೂ ಯಾವನಾದರೂ ಒಬ್ಬನು ರಾಜನು, ವಿಧಿಸುವ ಶಿಕ್ಷೆಗೆ ಗುರಿಯಾಗುತ್ತಿದ್ದನು.

ಸಾದಿಕದ ಪ್ರಜರಿಗೆ ರಾಜನ ಈ ನ್ಯಾಯನಿಷ್ಠುರತೆಯನ್ನು ನೋಡಿ ಆನಂದವಾಯಿತು.

ಮುಂದೆ, ಒಂದು ದಿನ, ಪಟ್ಟಣದಲ್ಲಿಯ ಎಲ್ಲ ಹಿರಿಯರೂ ಕಿರಿಯರೂ ಅರಮನೆಯ ಎದುರು ಸೇರಿ, ರಾಜನನ್ನು ಹೆಸರು ಗೊಂಡು ಕರೆದರು. ಒಂದು ಕೈಯಲ್ಲಿ ಮುಕುಟ, ಇನ್ನೊಂದು ಕೈಯಲ್ಲಿ ರಾಜದಂಡವನ್ನು ಹಿಡಿದುಕೊಂಡೇ ರಾಜ ಹೊರಬಂದು, ಜನರನ್ನುದ್ದೇಶಿಸಿ ನುಡಿದ: 'ಹೇಳಿರಿ, ಈಗ ನಾನೇನು ಮಾಡಬೇಕೆಂದು ನಿಮ್ಮ ಅಪೇಕ್ಷೆ? ನೀವು ನನಗೆ ಧರಿಸಲು ಕೊಟ್ಟ ಈ ವಸ್ತುಗಳನ್ನು ನಾನು ನಿಮಗೆ ತಿರುಗಿಕೊಡುತ್ತಾ ಇದ್ದೇನೆ. ಇವನ್ನು ತಕ್ಕೊಂಡು ಬಿಡಿರಿ.'

ಆದರೆ ನಾಗರಿಕರೆಂದರು:—'ಛೇ ಛೇ, ನೀನೇ ನಮ್ಮ ನಿಜವಾದ ರಾಜರು. ನೀವು ದೇಶದಲ್ಲಿಯ ಎಲ್ಲ ಕೃಷ್ಣಸರ್ಪಗಳನ್ನು ನಾಶಗೊಳಿಸಿ, ತೋಳಗಳನ್ನು ದೇಶಬಿಟ್ಟು ಓಡಿಸಿದಿರಿ. ನಾವು ನಿಮ್ಮನ್ನು ಹರಸುವುದಕ್ಕಾಗಿ ಬಂದಿದ್ದೇವೆ—ಈ ರಾಜದಂಡ ಹಾಗು ಈ ಮುಕುಟ ನಿಮಗೇ ಒಪ್ಪುವುದು.'

ರಾಜನೆಂದ—'ನೀವು ತಪ್ಪುತ್ತಿದ್ದೀರಿ! ರಾಜನು ನಾನಲ್ಲ. ರಾಜತ್ವವು ನಿಮಗೇ ಸೇರಿದುದು. 'ನಾನು ದುರ್ಬಲ, ಆಡಳಿತವನ್ನು ನಡೆಯಿಸಲು ಅಯೋಗ್ಯ— ಎಂದು ನಿಮಗೆನಿಸಿದಾಗ, ನಿಜವಾಗಿ ನೀವೇ ದುರ್ಬಲರಾಗಿದ್ದಿರಿ. ನೀವೇ ತಪ್ಪುದಾರಿಯನ್ನು ಹಿಡಿದಿದ್ದಿರಿ. ಮತ್ತೆ ಈಗ ರಾಜ್ಯ ಚೆನ್ನಾಗಿ ನಡೆದಿರುವುದಕ್ಕಾದರೂ ನೀವೇ ಕಾರಣರಾಗಿದ್ದೀರಿ. ನಾನು ಎಂದರೆ ಬೇರೆಯಲ್ಲ, ನಿಮ್ಮೆಲ್ಲರ ಸಂಕಲ್ಪದ ಪ್ರತೀಕ. ನಿಮ್ಮ ಕ್ರಿಯೆಯಲ್ಲಿಯೇ ನನ್ನ ಇರುವು. ರಾಜ್ಯಕರ್ತನೆಂಬುದೊಂದು ಸ್ವತಂತ್ರವಾದ ವ್ಯಕ್ತಿಯಲ್ಲ. ಪ್ರಜರೇ ಪ್ರಜರನ್ನು ಆಳುತ್ತಿರುತ್ತಾರೆ.'

ಹೀಗೆಂದು ರಾಜ ತನ್ನ ಮುಕುಟ ಹಾಗು ರಾಜದಂಡವನ್ನು ಧರಿಸಿ ಅರಮನೆಯೊಳಕ್ಕೆ ಹೋದ; ಜನರೂ ಸಂತುಷ್ಟರಾಗಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಅಂದಿನಿಂದ ಸಾದಿಕದೇಶದ ಪ್ರತಿಯೊಬ್ಬ ನಾಗರಿಕನೂ ರಾಜದಂಡ ಹಾಗು ಮುಕುಟವನ್ನು ತಾನೇ ಧರಿಸಿರುವುದಾಗಿ ಭಾವಿಸಹತ್ತಿದನು.

ಕನ್ನಡ ಒಗಟಗಳು

ಶ್ರೀಮತಿ ಶಾಮಲಾ ಬೆಟಗೇರಿ

(ಉರಟಣಿಯ ಪ್ರಾರಂಭದಲ್ಲಿ ನಿಂತು ಹೇಳಲು)

ಹೆಂಡತಿ ಗಂಡನ ಹೆಸರನ್ನು ಹೇಳುವಾಗ, ಸಾಹಿತ್ಯದ ಸವಿನುಡಿಯಲ್ಲಿ ಆ ಹೆಸರನ್ನು ಸಂಕಥಿರ್ಾಚಿತವಾಗಿ ಸೇರಿಸಿ ಹೇಳುತ್ತಿರುವುದು, ಉತ್ತರ ಕರ್ನಾಟಕದಲ್ಲೆಲ್ಲ ರೂಢವಾಗಿದೆ. ಇಂತಹ ಮುಂದು ಸಾಹಿತ್ಯಗಳಿಗೆ ' ಒಗಟು ' ಎಂದು ಹೆಸರಿದೆ. ಇದೀಗ ಕೆಲವು ಹೊಸ ಒಗಟುಗಳು. ಇನ್ನೂ ಕ್ರಮವಾಗಿ ಬರಲಿವೆ. —ಸಂ. ಜ.

೧

ಶ್ರೀದೇವಿರಮಣನನು ಸಕಲ ದೇವತೆಗಳನು
ಆದರದಿ ನಾ ಮೊದಲು ವಂದಿಸುವೆನು;
* * * ರಾಯರನು ಅನುಸರಿಸಿ ನಡೆವುದಕೆ
ದಾರಿ ತೋರಿಸಿರೆಂದು ಕೋರುತಿಹೆನು.

೨

ಒಂದು ಮನೆಯಲಿ ಮೂಡಿ, ಒಂದು ಹೆಸರನು ಕೂಡಿ,
ಅಂದು ಏನೇನೊ ಚಿಣ್ಣಾಟಗಳನಾಡಿ,
ಇಂದು ಹೊಸ ಹೆಸರಿನಲಿ ಒಲವಿನಾಟವ ಹೂಡಿ
ಬಂದಿರುವೆ * * * ರಾಯರೆಡೆ ನೋಡಿ !

೩

ಜಗದೊಡೆಯನನು ಭಕ್ತಿಭಾವದಲಿ ಪೂಜಿಸುತ
ಮುಗಿದು ಕರಯುಗಲಗಳ ಬೇಡಿಕೊಂಬೆ;
ಬಗೆಯೊಡೆಯ * * * ರಾಯರಾ ಹೃದಯವನು
ಬಿಡದೆ ತಣಿಸುವ ಭಾಗ್ಯ ನೀಡು— ಎಂಬೆ.

೪

ಇದುವರೆಗೆ ಯಾವ ಹೊಣೆ-ಹೊರೆಗಳೂ ಇಲ್ಲದೆಯೆ
ಬೆಳೆದಿರುವೆ ತವರವರ ಸಲುಗೆಯಲ್ಲಿ.
ಇಂದೆಲ್ಲ ಹೊಣೆಹೊತ್ತು * * * ರಾಯರಲಿ
ನಿಂದಿಹೆನು ಗೃಹಿಣಿಯಾ ಅಧಿಕಾರದಲ್ಲಿ.

೫

ಬಂದ ಹಿರಿಯರಿಗೆಲ್ಲ ವಂದಿಸುವೆ, ನಾ ವಿನಯ-
ದಿಂದ ನಿಮ್ಮೊಳು ಒಂದೆ ಬೇಡಿಕೊಂಬೆ:
* * * ರಾಯರಾ ಸವಿಹೆಸರ ಹೇಳುವೆನು,
ಕಿವಿಗೊಟ್ಟು ಮನವಿಟ್ಟು ಕೇಳಿರೆಂಬೆ.

೬

ಬಿಸನ-ಬೇಸರು ಬರಲಿ, ಸಂತಸದ ದಿನವಿರಲಿ
ಹಸಿನೆ-ತೃಷೆಯೆನ್ನದೆಯೆ ನಿತ್ಯದಲ್ಲಿ
* * * ರಾಯರವೆ ಸೇವೆಯೆಂದರಿತು ನಾ
ನಿರತಳಾಗಿರುವೆ ಮನೆವಾರ್ತೆಯಲ್ಲಿ.

೭

ನನ್ನ ತಾಯ್-ನುಡಿಯುಳಿದು ಇನ್ನೊಂದು ಭಾಷೆಯಲಿ
ನನ್ನೊಡೆಯರ ಹೆಸರ ಹೇಳದಿರುವೆ;
ನನ್ನೆದೆಯಲಿರುವ * * * ರಾಯರ ಹೆಸರ
ಕನ್ನಡದೊಳೇ ನುಡಿದು ತಣಿಪ ಪಡೆವೆ.

೮

ಅರ್ಥವರಿಯದೆ ಅನ್ಯಭಾಷೆಯೊಗಟವ ಹೇಳಿ
ವ್ಯರ್ಥ ಶ್ರಮಪಡುವವರೆ ಕೇಳಿರಿದನು;
ಕಸ್ತೂರಿಯಂಥ ಕನ್ನಡ ನುಡಿಯ ಹೆಣಿಕೆಯಲಿ
* * * ರಾಯರಾ ಹೆಸರ ಹೇಳುವೆನು.

೯

ಅಂಗೈಯೊಳಿರುವ ಅರಗಿಳಿಯಂತೆ ಇದುವರೆಗೆ
ಮಮತೆಯಲಿ ಮುಚ್ಚಿ ತಾಯ್-ತಂದೆ ಕಾಪಾಡಿ,
ಸಿಂಗರಿಸಿ * * * ರಾಯರಿಗೆ ನನ್ನನ್ನು
ನೀಡಿಹರು; ನಾವಿನ್ನು ಜೀವನದಿ ಜೋಡಿ !

೧೦

ಮನೆಗೆಲಸಗಳನು ಮನಮುಟ್ಟಿ ನಾ ಮಾಡುವೆನು
ಅತ್ತೆ-ಮಾವದಿರ ಎದೆ-ಮನವನೊಲಿಸಿ;
ನಾದಿನಿಯ ಮೈದುನರ ಆದರದಿ ಕಾಣುವೆನು
* * * ರಾಯರೊಲವನ್ನು ಗಳಿಸಿ.

೧೧

ಮನೆಗೆ ಬಂದತಿಥಿಗಳ ಸೇವಿಸಲು ನಾ ಮೊದಲೆ
ತಂದೆ-ತಾಯದಿರಿಂದೆ ತಿಳಿದುಕೊಂಡಿರುವೆ.
ಮನ-ವಚನ-ದೇಹದಿಂದವರ ಸೇವೆಯ ಮಾಡಿ
* * * ರಾಯರಿಗೆ ಕೀರ್ತಿತರುವೆ.

೧೨

ಚಿತ್ತದೊಡೆಯರ ಮನವು ಮೆಚ್ಚಬೇಕಿದ್ದರೆ—
ಅತ್ತೆ-ಮಾವದಿರ ಅನುನಯವೆ ಅತಿ ಮುಖ್ಯ!
ಇದನರಿತು ಸಲಿಸುವೆನು * * * ರಾಯರಾ
ಬಳಗದಲಿ ಭಕ್ತಿ-ವಿಶ್ವಾಸ-ಸಖ್ಯ!

ವಿ. ಸೂ:— ಮೇಲಿನ ಒಗಟುಗಳಲ್ಲಿ * * * ಹೀಗೆ ಚಿಹ್ನೆಗಳಿರುವಲ್ಲಿ, ಗಂಡನ ಹೆಸರನ್ನು ಕೂಡಿಸಿ ಹೇಳಬೇಕು. ಗೋವಿಂದ, ಗೋಪಾಲ, ಹನುಮಂತ, ನರಸಿಂಹ, ಶೇಷಾದ್ರಿ ಮೊದಲಾದ ಏಕ ಪದಾತ್ಮಕ ಹೆಸರುಗಳು ಸಹಜವಾಗಿ ಕೂಡುವುವು. ರಾಮ, ಕೃಷ್ಣ, ಪರ್ಶ್ವ, ಶಂಭು ಮೊದಲಾದ ದ್ವಿಪದಾತ್ಮಕ ಹೆಸರು ಕೂಡಿಸಿ ಹೇಳಬೇಕಾದಾಗ, ಹೆಸರುಗಳ ಹಿಂದೆ ಶ್ರೀಕಾರ ಹೊಂದಿಸಬೇಕು. —ಲೇ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ತಮಗೆ ಅತ್ಯಂತ ಪ್ರೀತಿಪಾತ್ರವಾದ ಕಾದಂಬರಿಯನ್ನು ಕುರಿತು ಗುಣಪ್ರದರ್ಶಕ ಪ್ರಬಂಧವನ್ನು ಬರೆದು ಕಳುಹಲು ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಳ್ಳಲಾಗಿತ್ತು. ಅದಕ್ಕನುಸಾರವಾಗಿ ಬೇರೆ ಬೇರೆ ೧೨ ಜನರಿಂದ, ಬೇರೆ ಬೇರೆ ಹನ್ನೆರಡು ಕಾದಂಬರಿಗಳನ್ನು ಕುರಿತ ಲೇಖನಗಳು ಬಂದಿವೆ. ಅವುಗಳ ವಿವರ ಹೀಗೆ:

ಶ್ರೀಮಾನ್ ಕೋ. ಶಿ. ಕಾರಂತರ 'ಸಂನ್ಯಾಸಿಯ ಬದುಕು' ಎಂಬುದನ್ನು ಶ್ರೀ. ರಾಘವೇಂದ್ರ ಬೆನಕಟ್ಟಿ, ವಿಜಾಪುರ ಅವರೂ— 'ನುರಳಿ ಮಣ್ಣಿಗೆ' ಎಂಬುದನ್ನು ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ ಅವರೂ— 'ಜೋಮನ ದುಡಿ' ಯನ್ನು ಶ್ರೀ. ಕೆ. ವಿ. ಸುಬ್ಬಣ್ಣ, ಮುಂಡಿಗೇಸರ ಅವರೂ ಮೆಚ್ಚಿ ಬರೆದಿದ್ದಾರೆ.

ಶ್ರೀಮಾನ್ ಅ. ನ. ಕೃಷ್ಣರಾಯರ 'ನಟ ಸಾರ್ವಭೌಮ' ನನ್ನು ಶ್ರೀ. ಎಸ್ ಎಚ್. ಬಸವಕುಮಾರ, ನಿಡಗುಂದಿ ಅವರೂ— 'ಮಂಗಳಸೂತ್ರ' ವನ್ನು ಶ್ರೀ. ಕೃಷ್ಣ ಮೂಡಲಗಿ, ಗೋಕಾಕ ಅವರೂ ಮೆಚ್ಚಿ ಬರೆದಿರುವರು.

ಪ್ರಾ ವಿ. ಎಂ. ಇನಾಮದಾರರ 'ಕನಸಿನ ಮನೆ' ಯನ್ನು ಶ್ರೀ. ಸೀತಾರಾಘವ ಹಾಸನ ಅವರೂ— 'ವಿಜಯಯಾತ್ರೆ' ಯನ್ನು ಶ್ರೀ. ಜಿ. ಎಸ್. ಮತಕರ್ ಎಂ. ಎ., ಬಿ. ಟಿ. ಪುಣೆ ಅವರೂ ಮೆಚ್ಚಿ ಬರೆದವರು.

ಶ್ರೀ. ಮಿರ್ಜಿ ಅಣ್ಣಾರಾಯರ 'ನಿಸರ್ಗ' ವನ್ನು ಮೆಚ್ಚಿ ಬರೆದವರು ಇಬ್ಬರು: ಶ್ರೀ. ಎಸ್. ಆರ್. ಮಳಗಿ, ಬಾಗಲಕೋಟೆ ಮತ್ತು ಸೌ. ಸುಶೀಲಾ ಜೋಶಿ ಜ್ಯೂ. ಬಿ. ಎ. ಧಾರವಾಡ.

ಶ್ರೀ. ಎಸ್. ಅನಂತನಾರಾಯಣರ 'ಮುರುಕು ಮಂಟಪ' ವನ್ನು ಕುರಿತು 'ತುಹಿನಕರ' ಚಿತ್ರದುರ್ಗ ಎಂಬವರೂ, ಶ್ರೀ. ರಾ. ವೆಂ. ಶ್ರೀನಿವಾಸರ 'ಸವತಿ' ಯನ್ನು ಕುರಿತು ಶ್ರೀ. ಆರ್. ಎ. ಕುಸುಗಲ್ಲ, ವಿಜಾಪುರ ಅವರೂ— ಶ್ರೀ. 'ಅನಂದಕಂದ'ರ 'ರಾಜಯೋಗಿ'ಯನ್ನು ಕುರಿತು ಶ್ರೀ. ವೀರೇಶ ಅಗಡಿ, ಬೆಳಗಾಂವಿ ಅವರೂ ಬರೆದು ಕಳುಹಿದ್ದಾರೆ.

ನಮ್ಮ ಸಂಪಾದಕ ಮಂಡಲಿಯವರೇ ಬಂದ ವಿಮರ್ಶೆಗಳನ್ನೊದಿ ನಿರ್ಣಯ ಕೊಟ್ಟಿರುವರು. 'ಜೋಮನ ದುಡಿ' ಯನ್ನು ಮೆಚ್ಚಿ ಬರೆದ ಶ್ರೀ. ಕೆ. ವಿ. ಸುಬ್ಬಣ್ಣ, ಮುಂಡಿಗೇಸರ ಅವರ ಗುಣವಿಮರ್ಶೆ ಅತ್ಯುತ್ತಮ. ಶ್ರೀ. ಶ್ರೀಕೃಷ್ಣ ಪೆರಡಾಲ ಮತ್ತು ಸೌ. ಸುಶೀಲಾ ಜೋಶಿಯವರವು ಚೆನ್ನಾಗಿವೆ. ಶ್ರೀ. ಜಿ. ಎಸ್. ಮತಕರ್, ಶ್ರೀ. ಕೃಷ್ಣ ಮೂಡಲಗಿ, ಶ್ರೀ. ರಾಘವೇಂದ್ರ ಬೆನಕಟ್ಟಿ ಶ್ರೀ. ವೀರೇಶ ಅಗಡಿ ಅವರವೂ ತಕ್ಕಮಟ್ಟಿಗಿವೆ. ಮಿಕ್ಕುವೆಲ್ಲ ಸಾಮಾನ್ಯ.

ವಿ. ಸೂ:— ಮುಂದಿನ ತಿಂಗಳ ವಿಮರ್ಶೆಗಳು ಈ ಸಂಚಿಕೆಯಲ್ಲಿ ಪ್ರಕಟವಾಗಿರುವ **'ಪುಣೆಯ ತಾಯಿ'** ಎಂಬ ಕತೆಯನ್ನು ಕುರಿತು ಬರೆದುವುಗಳಿರಲಿ. ವಿಮರ್ಶೆಗಳು ತಾ. ೨೦-೮-೪೯ ರೊಳಗಾಗಿ ಬರಲಿ.

ನನ್ನ ಪ್ರೀತಿಯ ಕಾದಂಬರಿ

ಕಾರಂತರ "ಜೋಮನ ದುಡಿ"

★

ಶ್ರೀ. ಕೆ. ವಿ. ಸುಬ್ಬಣ್ಣ, ಮುಂಡಿಗೇಸರ

ಕನ್ನಡ ಕಾದಂಬರೀ ಪ್ರಪಂಚದ ಇತಿಹಾಸದಲ್ಲಿ ಶ್ರೀ. ಶಿವರಾಮ ಕಾರಂತರ ಹೆಸರು ಚಿರಸ್ಥಾಯಿಯಾಗಿ ನಿಲ್ಲುವಂತಹದು. ಸ್ವತಂತ್ರ ಸಾಮಾಜಿಕ ಕಾದಂಬರಿಗಳ ಕೊರತೆ ಬಹಳವಾಗಿದ್ದ ಕಾಲದಲ್ಲಿ, ಅದನ್ನು ಹೋಗಲಾಡಿಸಲು ಬಹುಮಟ್ಟಿಗೆ ಪ್ರಯತ್ನಿಸಿ, ಆರೆಂಟು ಸುಂದರ ಕಾದಂಬರಿಗಳ ಕಾಣಿಕೆಯನ್ನು ಕನ್ನಡಕ್ಕರ್ಪಿಸಿ, ಕೃತಾರ್ಥರಾಗಿದ್ದಾರೆ. ಸತ್ತೇದಾರಿ ಕಾದಂಬರಿಯಿಂದಾರಂಭಿಸಿ, ಕ್ರೂರ ವಿಡಂಬನೆಯ ಮಾರ್ಗದಲ್ಲಿ ಹಾಯ್ದು ಅನುಭವ ವಿಶೇಷಗಳಿಂದ ಪಳಗಿ, ಅನಂತರ ಸಹಜ ಸುಂದರ ಕಾದಂಬರಿಗಳ ನಿರ್ಮಾಪನೆಯಲ್ಲಿ ತೊಡಗಿ, ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಅವ ನಾಲ್ಕನೆಯ ಕೃತಿ—ಮೊದಲನೆಯದು "ವಿಚಿತ್ರಕೂಟ" ದೊ ತಿಲ್ಲ.—"ಜೋಮನ ದುಡಿ' ಕನ್ನಡಕ್ಕೆ ಅವರು ಅರ್ಪಿಸಿರು ಅಮೂಲ್ಯ ಕಲಾಕೃತಿ. ಗಾತ್ರದಲ್ಲಿ ಚಿಕ್ಕದಾದರೂ ಈ ಕಾದಂಬ ಕಾರಂತರ ಸಮಾಜ ಸದ್ದರ್ಶನಕ್ಕೊಂದು ಸುಂದರ ನಿದರ್ಶ ಪಾತ್ರಸೃಷ್ಟಿ ಕೌಶಲಕ್ಕೊಂದು ಉದಾಹರಣೆ; ಕಥೆಯೊರೆಯುವ ಜಾಣತನದ ಬಗೆಗೊಂದು ದೃಷ್ಟಾಂತ.

ವಿಮರ್ಶೆಗೆ ಮೊದಲೊನ್ನೆ ವಿಹಂಗಮನೋಟದಿಂದ ಕಾದಂ ಬರಿಯ ಕಥಾನಲೋಕನ ಮಾಡುವುದು ಅತ್ಯಗತ್ಯ. ದಕ್ಷಿಣ ಕನ್ನಡ ಜಿಲ್ಲೆಯ—ತೀರ ಕೀಳು ಜಾತಿಯ—**ಅಸ್ಪೃಶ್ಯ ಜೋಮ** ಅನನಿಗೆ ಬೇಸಾಯಗಾರನಾಗಲು ಅಧಿಕಾರವಿಲ್ಲ. ಕಾದಂಬ ಮೊದಲಾಗುವ ವೇಳೆಗೆ ಜೋಮನ ಹೊಲತಿ ತೀರಿಕೊಂಡಿರುತ್ತಾಳೆ ಅವನ ಕುಟುಂಬವೆಂದರೆ ತಾ ನೊಬ್ಬ ಮುದುಕ, ಹರೆಯದ

ಮಗಳೊಬ್ಬಳು,—ಬೆಳ್ಳಿ: ಅವಳ ಅಣ್ಣಂದಿರಿಬ್ಬರು, ತಮ್ಮಂದಿ ರ್ಬರು. ಬೇಸರು ಬಂದಾಗ ಹೆಂಡಕುಡಿದು ದುಡಿಮೆಟ್ಟುತ್ತ ಕುಳಿತುಕೊಳುವ ಹವ್ಯಾಸ ಜೋಮನದು. ಆತ ಹಿಂದೊಮ್ಮೆ ಕಾಡಿನಲ್ಲಿ ಸಿಕ್ಕ ಎರಡು ಕರುಗಳನ್ನು ಮಮತೆಯಿಂದ ಬೆಳೆಯಿಸಿದ್ದ; ಈಗ ಅವು ಬಲಿತ ಹೋರಿಗಳಾಗಿದ್ದುವು. ಅವುಗಳನ್ನು ಕಂಡು ಬೇಸಾಯಗಾರನಾಗುವ ಬಯಕೆ ಜೋಮನದು. ಆದರೆ ದನಿಯರು ಒಪ್ಪುವುದಿಲ್ಲ. ತಾನು ಹಿಂದೆ ಮಾಡಿದ ಸಾಲವನ್ನು ತೀರಿಸಲು, ಈ ವೇಳೆಗೆ, ಜೋಮ ತನ್ನ ಹಿರಿಯ ಮಕ್ಕಳಿಬ್ಬರನ್ನು ಕಟ್ಟಿದ ಮೇಲಿನ ಕಾಫೀ ತೋಟದಲ್ಲಿ ದುಡಿಯಲು ಕಳುಹುವನು. ಆದರೆ ಸಾಲ ತೀರುವ ಬದಲು ಏರುತ್ತದೆ. ಒಬ್ಬನು ಕುಡಿದು ಖರ್ಚು ಮಾಡುತ್ತಾನೆ. ಇನ್ನೊಬ್ಬನು ಅಲ್ಲೇ ತಾನು ಪ್ರೀತಿಸಿದ ಒಬ್ಬ ಕ್ರೈಸ್ತಿಯನ್ ಹುಡುಗಿಗೆ ಕೊಟ್ಟು ಖರ್ಚು ಮಾಡುತ್ತಾನೆ. ಕೆಲವು ದಿನಗಳ ನಂತರ ಆತ ಅವಳನ್ನು ಲಗ್ನವಾಗಿ, ಅಣ್ಣನಿಗೆ ತಿಳಿಯದಂತೆ ಓಡಿ ಹೋಗಿ, ಕ್ರೈಸ್ತಿಯನ್ ಮತಕ್ಕೆ ಸೇರುತ್ತಾನೆ. ಇನ್ನೊಬ್ಬ ಮನೆಗೆ ಬಂದು, ಕೆಲವು ದಿನಗಳಲ್ಲಿ ಕಫ ಜ್ವರದಿಂದ ತೀರಿಕೊಳ್ಳುತ್ತಾನೆ. ಜೋಮನಿಗೆ ಈ ದುಃಖ ಸಹಿಸಲು ಅವನ ಹೆಂಡ, ದುಡಿ ಇವೇ ಸಹಾಯಕವಾಗುತ್ತವೆ. ಮಾರನೆಯ ವರ್ಷ ಕಾಫೀ ತೋಟದಿಂದ ಕರೆಬರುತ್ತದೆ ಸಾಲ ತೀರಿಸಲು. ಈ ಬಾರಿ ಬೆಳ್ಳಿ ಹೋಗುತ್ತಾಳೆ. ಅಲ್ಲಿ ಮನ್ವೇಲನ ಕಾಮ ಪಿಪಾಸೆಗೆ ಬಲಿಯಾಗುತ್ತಾಳೆ. ಅಂತೂ ಸಾಲ ತೀರುತ್ತದೆ! ಜೋಮ ತನ್ನ ಇಚ್ಛೆಗೆ ವಿರುದ್ಧವಾಗಿ ತನ್ನ ಎತ್ತುಗಳನ್ನು ದನಿಯರ ಗದ್ದೆ ಉಳಲು ಕಟ್ಟಬೇಕಾಗುತ್ತದೆ. ಅಂತೂ ಎಷ್ಟು ಕಾಡಲಿ, ಬೇಡಲಿ, ತಾನು ಬೇಸಾಯಗಾರನಾಗಲಾರ! ಒಂದು ದಿನ ಈ ಜೋಮನ ಮಗ ನೀಲ, ನೀರಾಟದ ಭರದಲ್ಲಿ ಕೆರೆಯಪಾಲಾಗುತ್ತಾನೆ. ಅವನನ್ನು ರಕ್ಷಿಸಲು ಒಬ್ಬ ಬ್ರಾಹ್ಮಣ ಯುವಕ ಯತ್ನಿಸಿದಾಗ, ಜನರು ತಡೆಯುತ್ತಾರೆ. ಮಗನ ಸಾವು, 'ಹೊಲೆಯನ ಬಾಳ್ವೆಯ ಹುಣ್ಣಿ'ನ ನೋವು, ಆ ಮುದುಕನ ಸಹನೆಗೆ ಮೀರಿದ್ದು. ಆದರೂ ಆತನಿಗೆ ಇದ್ದೇ ಇದೆ ಅವನ ಅಮೃತಲೇಪ—ದುಡಿ! ಮತ್ತೆ ಮಳೆಗಾಲ ಪ್ರಾರಂಭವಾದಾಗ, ಆತನಿಗೆ ಬೇಸಾಯಗಾರನಾಗುವ ಬಯಕೆ ಬಂದು, ಕ್ರೈಸ್ತಿಯನ್ ಧರ್ಮಕ್ಕೆ ಸೇರಲು ನಿರ್ಧರಿಸಿ, ಪಾದ್ರಿಗಳಲ್ಲಿಗೆ ಹೊರಡುತ್ತಾನೆ. ಊರ ತುದಿಯ ಭೂತನ ಗುಡಿಯೆದುರು ಎಂದಿನಂತೆ ಮೊಣಕಾಲೂರುತ್ತಾನೆ. ವಿಜಾತಿಗೆ ಸೇರಿದರೆ 'ಗುಳಿಗ' ಮುನಿದಾನೆಂದು ಮನೆಗೆ ಹಿಂದಿರುಗುತ್ತಾನೆ. ಮನೆಗೆ ಬಂದು ನೋಡುತ್ತಾನೆ; ಒಂದೆ ಚಾಪೆಯ ಮೇಲೆ ಕುಳಿತು ಲಲ್ಲೆಯಾಡುತ್ತಿದ್ದಾರೆ—ಬೆಳ್ಳಿ, ಮನ್ವೇಲ. ಜೋಮ ಬಂದೊಡನೆ ಮನ್ವೇಲ ಪರಾರಿಯಾಗುತ್ತಾನೆ. ಜೋಮ ಬೆಳ್ಳಿಯ ಕತ್ತು ಹಿಸುಕಿ

ಇವುಗಳಲ್ಲದೆ ಕರ್ನಾಟಕದ ತುಂಬೆಲ್ಲ ಪಸರುಗಳಿಸಿದ ಉಮರಜಿ ಮತ್ತು ಸೋಸುಬಾಯಿ ಇವರ ಕಲಾಪಥಕವವರು ಹಾಡಿದ 'ಅಕ್ಕ ಮಹಾದೇವಿ' ನಾಟಕದಲ್ಲಿಯ ಈಗಾಗಲೇ ಜನಪ್ರಿಯವಾದ ಧ್ವನಿಮುದ್ರಿಕೆಗಳು (GE 8342 ರಿಂದ 8344 ರ ವರೆಗೆ ಇಂದೇ ಕೋಲಂಬಿಯಾದ ಮೇಲೆ ಕೇಳಿರಿ.

ಶ್ರೀಮತಿ ಸುಶೀಲಾ ಟೇಂಬೆ

GE 8394 — ಇದೆ ನಮ್ಮ ದೇವರ ಪೂಜೆ / ಇದು ಸುದರ್ಶನ

GE 8092 — ನೋಡೇ ಮಧುವಸಂತವಿದು ಹಾ / ನಲಿದು ಬಾರೊ ಮುರಲಿ

ಶ್ರೀ. ಸೋಸೂಬಾಯಿ ಹಾವೇರಿ

GE 8359 — ಸಖಿ ಬಾರೆ ಪೋಗಿ ತಾರೆ / ನಗಿ ಸವಾರಿ ಬಂದಿತು ಸ್ವಾರಿ

ಶ್ರೀ. ಭಾಗವತ

GE 8202 — ವಸಂತಮುಖ / ಯಾರಿಗೂ ಹೇಳೋಣು ಬ್ಯಾಡಾ

GE 8093 — ಕನ್ನಡದ ಬಾವುಟ / ರಕ್ಷಿಸು ಕರ್ನಾಟಕ ದೇವಿ!

ಬೇಗನೆ ಬಸವೇಶ್ವರ, ಮಲ್ಲಮ್ಮ, ಶರಣ ಬಸವ ಮುಂತಾದ ನಾಟಕಗಳ ಧ್ವನಿಮುದ್ರಿಕೆಗಳು ಹೊರಬೀಳಲಿವೆ. ಇದಾದ ಮೇಲೆ ಕೆಲದಿನಗಳಲ್ಲಿಯೇ ಕಿತ್ತೂರ ಚೆನ್ನಮ್ಮ, ಪುರಂದರ ದಾಸ, ಕಬೀರದಾಸ ಈ ನಾಟಕಗಳ ಧ್ವನಿಮುದ್ರಿಕೆಗಳನ್ನೂ ಒದಗಿಸುವ ಏರ್ಪಾಡು ಮಾಡಲಾಗಿದೆ.

ಇದರ ಬಗ್ಗೆ ಬೇಕಾದ ವಿವರಗಳು ನಿಮ್ಮ ಊರಿನ ಗ್ರಾಮೋಫೋನ್ ಅಂಗಡಿಯಲ್ಲಿ ದೊರೆಯುವುವು.

ಕೋಲಂಬಿಯಾ ಗ್ರಾಫೋಫೋನ ಕಂ.ಲಿ

ಕಲಕತ್ತೆ • ಮುಂಬಯಿ • ಮದ್ರಾಸ • ದಿಲ್ಲಿ • ಬಾಸೆರ್

COLUMBIA GRAPHOPHONE CO. LTD. CALCUTTA BOMBAY MADRAS DELHI AMBER



ಮನೆಯ ಹೊರಗೆ ದಬ್ಬುತ್ತಾನೆ. ಆಕೆ ಮಾತನಾಡಲು ಶಕ್ತಿಯಿಲ್ಲದೆ ಮನೆಯೆದುರು ಮರದಡಿಯಲ್ಲಿ ಬೀಳುತ್ತಾಳೆ. ಕೆಲಸಕ್ಕೆ ಹೋದ ಬೆಳ್ಳಿಯು ತಮ್ಮ ಮನೆಗೆ ಬರುತ್ತಾನೆ. ಪರಿಸ್ಥಿತಿಯು ಅರಿವಾಗದೆ ಅಕ್ಕನ ಬಳಿ ಹೋಗಿ ನಿದ್ರಿಸುತ್ತಾನೆ. ರಾತ್ರಿಯಾಗುತ್ತದೆ. ಜೋಮು ಒಮ್ಮೆ ತನ್ನ ಎತ್ತುಗಳಿಂದ ದನಿಯುರ ಗದ್ದೆಯನ್ನು ಉತ್ತು ಬಂದು, ಎತ್ತುಗಳ ಮೈತೊಳೆದು, ಅವು ಹಿಂದೆ ತನಗೆ ಸಿಕ್ಕಿದ ಕಾಡಿಗೆ ಕೊಂಡೊಯ್ದು ಬಿಟ್ಟು ಬರುತ್ತಾನೆ. ನೇಗಿಲನ್ನು ಸುಟ್ಟು ಹಾಕಿ, ಮನೆಯೊಳಗೆ ಹೋಗಿ ದುಡಿ ಮೆಟ್ಟಲು ಪ್ರಾರಂಭಮಾಡುತ್ತಾನೆ. ಸ್ವಲ್ಪ ಹೊತ್ತು ಡಮಡಮನಿನಾದ ಕೇಳಿ ಬರುತ್ತದೆ. ಒಮ್ಮೆಗೇ ನಿಂತಿತು; ಜೋಮನ ಎದೆಬಡಿತವೂ ನಿಂತಿತು!

ಈ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಜೋಮು, ದಿನ ನಿತ್ಯ ನಮ್ಮೆದುರಿನಲ್ಲಿ ಕಂಡು ಬರುವ ಸಾವಿರ ಹೊಲೆಯರ ಜೀವಂತ ಪ್ರತೀಕ. ಸಮಾಜದ ಹಾಲಾಹಲವನ್ನು ನಂಜುಂಡನಂತೆ ತಾನು ನುಂಗಿ, ಅನ್ಯರಿಗೆ ಅಮೃತವನ್ನು ನೀಡುತ್ತಾನೆ. ತನ್ನ ಏಕಮಾತ್ರ ಪ್ರಬಲೇಚ್ಛೆಗೆ ವಿರುದ್ಧ ನಡೆದರೂ ಜೋಮು ತನ್ನ ದನಿಯನ್ನು ದೂಷಿಸುವುದಿಲ್ಲ. ಅಕನ ಪಾತ್ರದಲ್ಲಿ ಸ್ವಲ್ಪವೂ ಅತಿರೇಕ ಚಿತ್ರಣವಿಲ್ಲ. ಉದ್ದಕ್ಕೂ ಅತನನ್ನು ಕಸಿವೆಂದು ತೆಗೆಳದೆ, ಅಥವಾ ಅತನೊಬ್ಬ ವೇದಾಂತಿ, ರಸಘಟ್ಟ — ಎನ್ನದೆ, ಸಮಾಜ ಅತನಲ್ಲಿ ಆರೋಪಿಸಿರುವ ಕಸದ ರಾಶಿಯನ್ನು ಒರೆಮಾಡಿ, ಒಳಗಿರುವ ಇನಿತು ರಸವನ್ನೂ ಕಾಣುವಂತೆ ಮಾಡಿದ್ದಾರೆ. ಜೋಮು ಜೀವಂತನಾಗಿರಲು ಅತನ ಎದೆ ಬಡಿತ ಎಷ್ಟು ಕಾರಣವೊ ದುಡಿಯ ಬಡಿತವೂ ಅಷ್ಟೇ ಕಾರಣ. ದುಃಖರಾಶಿಯಿಂದ ಎದೆ ಕಲ್ಲಾಗಿದ್ದರೂ, ಹೋದಾಗಲೆಲ್ಲ— ನೀರು ಜಿರಸಿಕೊಟ್ಟರೂ ಸರಿಯೆ—ಇಷ್ಟು ಹೆಂಡವನ್ನು ನೀಡುವ ಬಿರುಮನಾದರೂ ಇರದಿದ್ದರೆ, ಜೋಮು ಇಹದಿಂದ ಎಂದೋ ಇಲ್ಲವಾಗಿರುತ್ತಿದ್ದ.

ಬೆಳ್ಳಿಯ ಪಾತ್ರವೂ ಅಷ್ಟೇ ನೈಜವಾದದ್ದು. ಈ ಹೊತ್ತಿಗೆ ಆಕೆ ನಲ್ಲನೊಡನೆ ಸುಖದಿಂದ ಬಾಳಬೇಕಾಗಿತ್ತು. ಆದರೆ ಆಕೆ ತಂದೆಯ ಸುಖಕ್ಕಾಗಿ ತನ್ನ ಸುಖವನ್ನು ತ್ಯಾಗ ಮಾಡುತ್ತಾಳೆ. ತಂದೆಗೆ ತಾಯಿಯಾಗಿ, ಮಗಳಾಗಿ, ಹಿತೋಪದೇಶಕಳಾಗಿ ಬಾಳುತ್ತಾಳೆ. ಆಕೆ ನೀತಿಯಿಂದ ದೂರವಾದದ್ದಾದರೂ ತಂದೆಯ ಸಾಲ ತೀರಿಸಲು ಉದ್ದಕ್ಕೂ ಕಣ್ಣೀರು ಕರೆಯುವ ಬಾಳು ಅವಳದು.

ಕಾದಂಬರಿ ನೊದಲಾಗುವ ವೇಳೆಗೆ, ಕೆಲವು ಮಾತುಗಳಲ್ಲೆ ಕಾರ್ಗತ್ತಲೆಯನ್ನು ಕಣ್ಣಿಗೆ ಕಟ್ಟುವಂತೆ ಮಾಡುತ್ತಾರೆ ಕಾರಂತರು. ಅಂತಹ ವೇಳೆಯಲ್ಲಿ 'ಡಮು ಡಮ್ಮ–ಡಕ ಡಕ್ಕ' ಎಂಬ ಸದ್ದು ಅದೇ ಜೋಮನ ದುಡಿ. ಅದೊಂದು ರೋಮಾಂಚಕಾರಿ (Romantic) ಸನ್ನಿವೇಶ. ಹೀಗೆ ದುಡಿಯಿಂದ ಮೊದಲಾಗುವ ಕಾದಂಬರಿಯಲ್ಲಿ, ಉದ್ದಕ್ಕೂ ಅದೇ ಸದ್ದು ಕೇಳಿ ಬರುತ್ತದೆ ಮುಗಿಯುವುದೂ ಅದೇ ಸದ್ದಿನಿಂದಲೇ. ಹೀಗೆ ಕಾದಂಬರಿ ಜೀವಂತವಾಗಿರುವುದು ಈ ದುಡಿಯಿಂದ. ಜೋಮನ ದುಡಿಯ ಬಡಿತವೆ ಕಾದಂಬರಿಯ ಎದೆಯ ಮಿಡಿತ ಎನ್ನಿಸುತ್ತದೆ ನಮಗೆ. ದುಡಿ ಜೋಮನ ಬಾಳ ಹೊಳೆಗೆ ಆಣೆಕಟ್ಟಾಗಿ ಅದನ್ನು ಬೇರೆ ಕಡೆಗೆ ತಿರುಗಿಸುತ್ತದೆ. ದುಡಿಯೊಂದು ನಿರ್ಜೀವ ವಸ್ತುವಲ್ಲ—ಅದೆ ಒಂದು ಪಾತ್ರ ಎನ್ನುವಂತಿದೆ. ಕಾದಂಬರಿಯ ಸ್ವಾರಸ್ಯಕ್ಕೆ ಜೋಮು ಎಷ್ಟು ಕಾರಣನೋ, ದುಡಿಯೂ ಅಷ್ಟೇ ಕಾರಣ.

ಕಾದಂಬರಿಯ ಮುಗಿವು ಎಷ್ಟು ಕಲಾಪೂರ್ಣವಾಗಿದೆ, ಸುಂದರವಾಗಿದೆ! "ದುಡಿಯ ಡಮಡಮ್ಮವು ನಿಂತಿತು.... ಬೆಳ್ಳಿ ಒಳಗೆ ಹೋದಳು! ಅರೆಗತ್ತಲಲ್ಲಿ ಕಂಡಿತು ಜೋಮನ ಸಮಾಧಿ ಹಿಡಿದ ದುಡಿ, ಎತ್ತಿದ ಕೈ, ತುಂಬಿದ ಆನೇಶ! ಎಲ್ಲವೂ ಇದ್ದ ಕೈದ್ದಂತೆಯೇ ಇವೆ! 'ಜೋಮು' ನು ಮಾತ್ರ ಇಲ್ಲ!"

ಐದು ದಿನಗಳಲ್ಲಿ ಬರೆದ ಈ ಸಣ್ಣ ಕಾದಂಬರಿ, ಕನ್ನಡದ ಕಾದಂಬರಿಗಳಲ್ಲೆಲ್ಲ ಒಂದು ವಿಶಿಷ್ಟ ಸ್ಥಾನ ಪಡೆಯಲು ಅರ್ಹವಾಗಿದೆ. ಕಾರಂತರು ಕಲಾದೃಷ್ಟಿ, ಕಲ್ಪನಾ ಚಾತುರ್ಯ, ಕಥನ ಕೌಶಲ, ಸಮಾಜ ದರ್ಶನ, ತಿಳಿಹಾಸ್ಯ, ಕೆಲವು ಮಾತುಗಳಲ್ಲಿ ಬಹು ಅರ್ಥವನ್ನು ಹುದುಗಿಸಿಡುವ ರೀತಿ, ಮೊದಲಾದೆಲ್ಲವುಗಳ 'ಅವಿಲಿ' ತಮ್ಮ ಅನುಭವದ ರಸವನ್ನು ಹಿಂಡಿದ್ದಾರೆ. ಹೀಗಾಗಿ ಅದೊಂದು ಅಪೂರ್ವ ಪಾಕವಾಗಿದೆ!

ಈ ಕಾದಂಬರಿಯನ್ನೋದಿ, ಎಷ್ಟೋ ವೇಳೆಯ ವರೆಗೆ ಕಿವಿಯಲ್ಲಿ ನಿರಿಯುತ್ತಲೇ ಇರುತ್ತದೆ: ಆ 'ಪ್ರಳಯ ತಾಂಡವದ ಡಮರು ನಿನಾದ!, "ಡಮು ಡಮ್ಮ – ಡಕ ಡಕ್ಕ"

ಪೂಜಾಫಲ

(ಸಾಮಾಜಿಕ ಕಾದಂಬರಿ)

ಲೇಖಕರು: ಶ್ರೀ. 'ನೆರಂಗ', ಧಾರವಾಡದ ಪ್ರತಿಭಾ ಗ್ರಂಥಮಾಲೆಯ ಪುಷ್ಪ.

ಶ್ರೀಮಾನ್ 'ನೆರಂಗ'ರು ನೀಳ್ಗತೆಗಳನ್ನೂ, ಶಾಸ್ತ್ರೀಯ ಗ್ರಂಥವನ್ನೂ, ಜೀವನ ಚರಿತ್ರೆಯನ್ನೂ ಬರೆದು, ಈಗಾಗಲೆ ಕನ್ನಡ ಓದುಗರಿಗೆ ಪರಿಚಿತರಾಗಿದ್ದಾರೆ. ರಂಗನಾಥರದು ಎಲ್ಲದರಲ್ಲೂ ಹೊಸ ಪ್ರಯೋಗ— (He refuses to beat the trodden path). ತುಳಿದ ಹಾದಿಯನ್ನು ತುಳಿಯುವುದು ಇವರಿಗೆ ಎಂದಿಗೂ ರುಚಿಸದು. ಆದುದರಿಂದಲೆ ಅವರ ಈ ಮೊದಲ ಕಾದಂಬರಿಯನ್ನೋದಲು ನನಗೆ ಎಲ್ಲಿಲ್ಲದ ಕುತೂಹಲ.

ಅರಿಕೆಯಲ್ಲಿಯೇ ಲೇಖಕರು ಗ್ರಂಥದ ಉದ್ದಿಶ್ಯವನ್ನು ಹೇಳಿಕೊಂಡಿದ್ದಾರೆ: 'ಕರ್ಮತತ್ತ್ವದ ವಿವೇಚನೆಯನ್ನು ನನ್ನ ದೃಷ್ಟಿಯಿಂದ ಮಾಡಲು ಯತ್ನಿಸಿದ್ದೇನೆ.' ಕರ್ಮದ ಬಗ್ಗೆ ರೂಢವಾದ ಕಲ್ಪನೆಗಳ ಪುನರುಚ್ಚರಣೆ ಮಾಡುವುದು ಅನಾವಶ್ಯಕ. 'ನಾ ಮಾಡಿದ ಕರ್ಮ, ಬಲವಂತವಾದರೆ....' 'ಮಾಡಿದ್ದುಣ್ಣೊ ಮಹಾರಾಯ' ಮೊದಲಾದ ಜಾಣ್ನುಡಿಗಳು ಎಲ್ಲರ ಬಾಯಲ್ಲಿಯೂ ಇವೆ. ಸಂಚಿತ ಕರ್ಮ, ಪುನರ್ಜನ್ಮ ಇದೆಲ್ಲ ಅರ್ಥವಿಲ್ಲದ ಮಾತು. ಇದೇ ಜನ್ಮದಲ್ಲಿಯೇ ತಾನು ಮಾಡಿದ ಕೃತಿಗೆ (ಪೂಜೆ) ತಾನೇ ಹೊಣೆ (ಫಲ); ತನ್ನ ಪೂಜೆಯ ಫಲವನ್ನು ತಾನು ಅನುಭೋಗಿಸಬೇಕಷ್ಟೆ. ಇಲ್ಲಿ ರಚಿತವಾದ ಕಥಾನಕದಿಂದ ಈ ವಿಚಾರ ಸ್ಪಷ್ಟವಾಗುವಂತಿದೆ.

ಬಡ್ಡಿಯ ವ್ಯವಹಾರದ ಜಿಪುಣ ಬಾಳಪ್ಪನ ಮಗಳು ಪುಟ್ಟವ್ವ, ತಂದೆಯ ಮನೆಯಲ್ಲಿ ಬೇಕಾದ ಸಂಪತ್ತು ಇದ್ದರೂ ಅನುಭವಿಸುವ ಅವಕಾಶವಿಲ್ಲದ ಮೂಲಕ, ಹಾಗೆಯೆ ತನ್ನ ಆಶೆ-ಆಕಾಂಕ್ಷೆಗಳನ್ನು ಹತ್ತಿಕ್ಕಿ ಬೆಳೆದುಕೊಂಡು ಬಂದು, ೮ ವರ್ಷದವಳಿದ್ದಾಗ ಬಡ ಕುಟುಂಬದ ಕೃಷ್ಣಪ್ಪ ಕುಲಕರ್ಣಿಯ ಕೈಹಿಡಿದು, ಒಟ್ಟು ಕುಟುಂಬದಲ್ಲಿಯ ಕಷ್ಟ-ನಷ್ಟಗಳನ್ನನುಭವಿಸಿ, ಸಾವು ನೋವುಗಳನ್ನೇ ಕಂಡುಂಡು, ಗಂಡನಿಗೆ ಸ್ವತಂತ್ರ ಕೆಲಸ ಸಿಕ್ಕಾಗ 'ಬಡತನವಿದ್ದರೂ ಪಾರತಂತ್ರ್ಯವಿಲ್ಲವಲ್ಲ' ಎಂಬ ಸಮಾಧಾನದಿಂದ ಕಾಲಹರಣ ಮಾಡಿ, ಮಕ್ಕಳನ್ನು ಹೆತ್ತು, ಸೊಸೆಯಂದಿರನ್ನು ಕಂಡಳು. ಆದರೆ ಯಾವ ಕಷ್ಟ-ನಷ್ಟಗಳನ್ನು ತಾನು ಸೊಸೆಯಾಗಿದ್ದಾಗ ಅನುಭವಿಸಿದ್ದಕೊ— ಅವುಗಳಿಂದ ತನ್ನ ಅನುಭವವನ್ನು ಹೆಚ್ಚಿಸಿಕೊಂಡು ಅವುಗಳಿಂದ ಪಾಠಕಲಿಯದೆ,—ಅನೇ ಕಷ್ಟ-ನಷ್ಟಗಳಿಗೆ ತನ್ನ ಸೊಸೆಯಂದಿರನ್ನು ಗುರಿಮಾಡಿ, ಎಲ್ಲರಿಗೂ ಬೇಡವಾಗಿ. ಕೊರಗಿ-ನುರುಗಿ-ಸೊರಗಿ, ಯಾರೂ ಹತ್ತಿರ ಹಾಯದೆ, ಅತ್ತ ನೋಡದೆ ಕೂಡ, ತೊಳಲುತ್ತ ಬಿದ್ದು ಸಾಯಬೇಕಾಯಿತು. 'ಕೈಯಾಗ ಸಿಕ್ಕಾಗ ಕಾಡಿ, ಕೈಸಾಗದಂತಾದ ಮೇಲೆ ಎಲ್ಲರಿಗೂ ಬೇಡಾದಳು.' ಇದಕ್ಕೆ ಯಾರು ಹೊಣೆ? ಮುದುಕಿಯೇ ಅಲ್ಲವೇ? ಪೂರ್ವ ಜನ್ಮ, ಸಂಚಿತಕರ್ಮ ಇದಾವುದೂ ಅಲ್ಲ. 'ಕೃತಿಮಾಡುವ ವ್ಯಕ್ತಿ, ಕೃತಿಯ ಪರಿಣಾಮಕ್ಕೆ ಬಲಿಯಾಗುತ್ತಾನೆ. ಕೃತಿಯಾಗುವುದು ವ್ಯಕ್ತಿ ಇರುವ ಪರಿಸರದ ಮೂಲಕ. ಈ ಪರಿಸರವನ್ನು ತಿಳಿದು ಕೊಳ್ಳುವುದು ವ್ಯಕ್ತಿಯ ತಿಳಿವಳಿಕೆಯ ಮೂಲಕ. ಒಂದು ಮತ್ತೊಂದನ್ನು ಬಿಡದ ಹಾಗೆ ಅನುಸರಿಸಿರುತ್ತದೆ. ಒಂದು ಕೃತಿ ಮತ್ತೊಂದಕ್ಕೆ ಕಾರಣವಾಗುತ್ತದೆ. ಅದು ಇನ್ನೊಂದಕ್ಕೆ. ಈ ಬಿಡಿಸಲಾರದ ಕಾರಣಗಳ ಕಗ್ಗಂಟೇ ಕರ್ಮ!' ಇಲ್ಲಿಯ ಕೃತಿಮಾಡುವ ವ್ಯಕ್ತಿ ಮದುಕಿ ಪುಟ್ಟವ್ವ. ಅವಳ ಪರಿಸರ, ಪರಿಸರವನ್ನು ತಿಳಿದುಕೊಳ್ಳದ ಅವಳ ತಿಳಿವಳಿಕೆ, ಅದು ಇನ್ನೊಂದು ಕೃತಿಯನ್ನು ಮಾಡಹಚ್ಚುವುದು, ಅದರಿಂದ ಇನ್ನೊಂದು ಪರಿಣಾಮ— ಇದೆಲ್ಲವನ್ನೂ ಸ್ಪಷ್ಟವಾಗಿ ವಿವರಿಸಲಾಗಿದೆ. ಕಾದಂಬರಿಯನ್ನೋದಿ ಮುಗಿಸಿದಾಗ, ವ್ಯಕ್ತಿ ತನ್ನ ಪರಿಸರವನ್ನು ತಿಳಿದುಕೊಂಡು ಅದರಿಂದ ತನ್ನ ಅನುಭವವನ್ನು ಹೆಚ್ಚಿಸಿಕೊಳ್ಳದಿದ್ದರೆ, ತನ್ನ ತಪ್ಪುಗಳನ್ನೇ ತಿದ್ದಿಕೊಳ್ಳದಿದ್ದರೆ, ಹೇಗೆ ಅನರ್ಥ ಪರಂಪರೆಗೆ ಕಾರಣವಾಗುತ್ತದೆಂಬುದರ ತಿಳಿವು ಉಂಟಾಗುತ್ತದೆ.

ಸಾಮಾನ್ಯವಾಗಿ ಕಾದಂಬರಿಗಳಲ್ಲಿ ನಲ್ಲ-ನಲ್ಲೆಯರ ಶೃಂಗಾರ ಕಥೆಯೇ ಪ್ರಮುಖ. ಆದರೆ ಇಲ್ಲಿಯ ಕಥಾವಸ್ತು ತೀರ ನವೀನವಾದುದು. ಹಾಗೆಯೆ ಪ್ರಧಾನವ್ಯಕ್ತಿ ಒರ್ವ ಮುದುಕಿಯಾಗಿರುವುದಂತೂ ಹೊಚ್ಚ ಹೊಸತು. ಮುದುಕಿಯ ಪಾತ್ರ ತುಂಬ ಸಮಾಧಾನಕರವಾಗಿದೆ. ಹಾಗೆಯೆ ಸ್ಪುಟವಾಗಿ ಬಂದಿದೆ. ಅವಳ ಮೊದಲ ಪರಿಚಯವೆ ಬಹು ಮಾರ್ಮಿಕವಾಗಿದೆ. ಮುದುಕಿ ಯಾರು? ಅವಳಿಗೆ

ಕ್ರಾಂತಿಪುರುಷ
ಬಸವಣ್ಣನವರು.
ಬೇಗನೆ ಪ್ರಸಿದ್ಧವಾಗುವದು!
ಎರಡು ಬಣ್ಣಗಳಲ್ಲಿ ಆಕರ್ಷಕವಾದ ಮುದ್ರಣ !! ಬೆಲೆ ೧ ರೂ. ೪ ಆ. ಮೊದಲೇ ಹಣ ಕಳುಹಿ ಹೆಸರು ನೋಂದಾಯಿಸುವವರಿಗೆ ೧ ರೂ. ಮಾತ್ರ. ಇದು "ಗಲಗಲಿ" ಬರಹ.
ಕೆ. ಕೆ. ಗಲಗಲಿ, ಪೋ. ಸವದತ್ತಿ.

ಮನೋಹರ ಗ್ರಂಥಮಾಲೆ, ಧಾರವಾಡ.

೧೫ ವರ್ಷಗಳಿಂದಲೂ ಹೊರಡುತ್ತಲಿದ್ದು, ಈಗಾಗಲೇ ೯೧ ಕ್ಕಿಂತ ಹೆಚ್ಚಿಗೆ ಕಥೆ-ಕಾದಂಬರಿ-ನಾಟಕಗಳನ್ನು ಬೆಳಕಿಗೆ ತಂದಿದೆ.

ಶ್ರೀ. ರಂ. ಶ್ರೀ. ಮುಗುಳಿಯವರ 'ಅನ್ನ' (ಸಾ. ಕಾದಂಬರಿ)
ಶ್ರೀ ಬೇಂದ್ರೆ ಲಕ್ಷ್ಮಣರಾಯರ 'ಪರಿವರ್ತನ' (ಸಾ. ನಾಟಕ)
ಇದೀಗ ಪ್ರಕಟವಾಗಿವೆ. ನಾ. ಚಂ. ಸ್ಥಳಿಕರಿಗೆ ೫-೮-೦
ಪರಸ್ಥಳದವರಿಗೆ ೬-೮-೦.

ಈ ಕರುಣಾಜನಕ ಸ್ಥಿತಿ ಬಂದಿದು ಹೇಗೆ? ಮೊದಲಾದ ವಿವರಗಳನ್ನು ತಿಳಿದುಕೊಳ್ಳುವ ಕುತೂಹಲ ಹೆಚ್ಚಿಸಿ, ೭೦-೮೦ ವರ್ಷದ ಹಿಂದಿನ ಕತೆಯೆಲ್ಲವನ್ನೂ ಹೇಳುತ್ತ ಹೋಗುತ್ತಾರೆ. ಮುದುಕಿಯ ಪಾತ್ರಕ್ಕೆ ಕಳಿಕಟ್ಟಲು, ಅದಕ್ಕೆ ಪೋಷಕವಾಗಿ ಮುದುಕ ಭಿಕ್ಷುಕ, ಅತ್ತೆಯ ಮನೆಗೆ ನಡೆದ ೧೦ ವರ್ಷದ ಹುಡುಗಿ, ಮೊದಲಾದ ಸನ್ನಿವೇಶಗಳನ್ನು ತಂದಿದ್ದಾರೆ. ಇವುಗಳಿಂದ ಮುದುಕಿಯ ಪಾತ್ರವು ಯಥಾರ್ಥ ಕಲ್ಪನೆಯಾಗಲು ಅನಕಾಶವಿದೆ.

ಮೇಲ್ಕಾಣಿಸಿದ ಸನ್ನಿವೇಶಗಳನ್ನು ಬಿಟ್ಟರೆ, ೧೫೫ ಪುಟದ ಕಾದಂಬರಿಯಲ್ಲಿ ೬-೭ ಆಖ್ಯಾನಗಳು ಸೇರಿಕೊಂಡಿವೆ. ವಿಧವಾ ಸಮಸ್ಯೆ (ಪು. ೪೩), ವಿಭಕ್ತ ಕುಟುಂಬದ ಲಾಭಾಲಾಭಗಳು (ಪು. ೪೭), ಯಂತ್ರಗಳು (ಪು. ೪೮), ಹೆಣ್ಣು-ಗಂಡಿನ ಸಂಬಂಧ (ಪು. ೬೦-೬೧), ಕನ್ನಡ ಶಾಲಾ ಶಿಕ್ಷಕ (ಪು. ೭೧), ಕರ್ಮ (ಪು. ೮೬). ಈ ಆಖ್ಯಾನಗಳನ್ನು ಸೇರಿಸಿದುದು ಕೆಲವರಿಗೆ ರುಚಿಸಲಿಕ್ಕಿಲ್ಲ. ಏಕೆಂದರೆ ಅವುಗಳಿಂದ ಕತೆಯ ಓಟಕ್ಕೆ ತಡೆಯಾಗುವಂತಿದೆ. ಅವು ವ್ಯಾಖ್ಯಾನದ ಮಟ್ಟಿಗೆ ಒಳಿತಾಗಿದ್ದರೂ, ಇಲ್ಲಿ ಅಷ್ಟು ಹೊಂದಿಕೆಯಾಗಿಲ್ಲವೆನಿಸಬಹುದು. ಕಾದಂಬರಿಯನ್ನು ಬದಿಗಿಟ್ಟು, ಲೇಖಕರು ತುಸು ಪ್ರಚಾರಕ್ಕೆ ನಿಂತ ಹಾಗಿದೆ. ಇವರ ವ್ಯಾಖ್ಯಾನ ಮುಗಿವನರೆಗೆ ಕಾದಂಬರಿ ಹೊಗೆಬತ್ತಿ ಸೇದುತ್ತ ವೇಟಿಂಗ್‌ರೂಮಿನಲ್ಲಿ ತಂಗಬೇಕಾಗುತ್ತದೆ. ಆದರೆ ಕಥೆಯ ಆಶಯವನ್ನು ನೆನಪಿನಲ್ಲಿಟ್ಟರೆ, ಇದು ಅನಿವಾರ್ಯ. ಯೋಗ್ಯವಾದ ವಾತಾವರಣವನ್ನು ಕಲ್ಪಿಸಿಕೊಳ್ಳಲು ಅನುಕೂಲ.

ಆದೇ ರೀತಿ ಇಲ್ಲಿಯ ಕಥೆ ಹೇಳುವ ರೀತಿಯೂ ತುಸು ಕ್ಲಿಷ್ಟವಾದುದು. ಹೊರಗಿನ ಸಂಗತಿಗಳಿಂದಾಗಿ, ಮಾಧವನ ಮನಸಿನೊಳಗಿನ ವಿಚಾರಗಳನ್ನು ಕೆರಳಿಸುವ ರೀತಿಯಲ್ಲಿ ಹೇಳಿದ್ದಾರೆ. ಇದು ಓದುಗರಿಗೆ ತುಸು ಗಡುಬಿನಿಸಿದರೂ ರೀತಿ ಸಮರ್ಥವಾಗಿದೆ. ಇಲ್ಲಿ ಕಥೆಯ ಓಟಕ್ಕಿಂತಲೂ ವ್ಯಕ್ತಿಯ ಪರಿಸರದ ಕಲ್ಪನೆಮಾಡಿಕೊಟ್ಟು, ಆ ಪರಿಸರದಲ್ಲಿ ಆ ವ್ಯಕ್ತಿ ಹೇಗೆ ನಡೆದುಕೊಂಡಿತು, ಎಂಬುದನ್ನು ಸ್ಪಷ್ಟಕ್ಕರಿಸಿ ತೋರಿಸಬೇಕಾಗಿದೆ. ಈ ರೀತಿಯ ವಿಶ್ಲೇಷಣಾತ್ಮಕ (Analytical) ಕತೆಗೆ ಈ ಶೈಲಿ ತುಂಬ ಸಹಾಯಕಾರಿಯಾಗಿದೆ.

ಇನ್ನು ಬಳಸಿದ ಭಾಷೆ, ಬರೆದ ರೀತಿಯ ಬಗ್ಗೆ ಭಿನ್ನಾಭಿಪ್ರಾಯ ವಿರುವುದು ಸಹಜ. ಸಾಹಿತ್ಯವು ಜನಜೀವನದ ಪ್ರತಿಬಿಂಬವೆಂದ ಮೇಲೆ, ಜನಜೀವನವನ್ನು ಚಿತ್ರಿಸುವಾಗ ಜನ ಬಳಸುವ ಭಾಷೆಯಲ್ಲಿ ಉಚ್ಚರಿಸುವ ರೀತಿಯಲ್ಲಿಯೆ ಬರೆವುದು ಹಿತವಾದುದೆಂದು ಒಂದು ಪಕ್ಷವಾಗಿದ್ದರೆ, ವ್ಯಾಕರಣಶುದ್ಧವಾಗಿ ಬರೆವುದೇ ಉತ್ತಮ, ಸಾಧುವಾದುದು— ಎಂದು ಹೇಳುವ ಇನ್ನೊಂದು ಪಕ್ಷವೂ ಇದೆ. ಇದರಲ್ಲಿ ಯಾವುದು ಗ್ರಾಹ್ಯವೆಂದು ಹೇಳುವದಕ್ಕಿಂತಲೂ, ಅದನ್ನು ಪರಿಣಾಮದಿಂದ ತಿಳಿಯುವುದೇ ಲೇಸು. ಪ್ರಸ್ತುತ ಕಾದಂಬರಿಯನ್ನೋದುವಾಗ, ಬರೆಹದ ರೀತಿಯಿಂದಾಗಿ ಯಾವ ತೊಡಕೂ ಉಂಟಾಗುವುದಿಲ್ಲವೆಂದ ಮೇಲೆ, ಅದು ಹಿತವಾಗಿರಬೇಕಷ್ಟೆ? ನೇರಂಗರ ಕಲಾವಿಕಾಸಕ್ಕೆ ಈ ಕಾದಂಬರಿ ಹೆಗ್ಗುರುತು. ಸಾಹಿತ್ಯವು ವ್ಯಕ್ತಿಯ ಅನುಭವವನ್ನು ಹೆಚ್ಚಿಸಿ, ಜೀವನದ ನಿದರ್ಶನವನ್ನು ಮಾಡಿಕೊಡಬೇಕೆಂದು ಹೇಳುವುದುಂಟು. ಹಾಗೆ ಈ ಕಾದಂಬರಿ ತನ್ನ ಕೆಲಸವನ್ನು ಸಮರ್ಪಕವಾಗಿ ಮಾಡಿದೆಯಾದ್ದರಿಂದ, ಸಾಹಿತ್ಯದಲ್ಲಿ ಇದಕ್ಕೂ ಸ್ಥಾನವಿದೆ. ಇದೇ ರೀತಿಯಲ್ಲಿ, ಇಂದಿನ ಸಾಮಾಜಿಕ ಜೀವನದಲ್ಲಿಯ ಹತ್ತಾರು ಸಮಸ್ಯೆಗಳನ್ನೆತ್ತಿಕೊಂಡು, ಇನ್ನೂ ಅದೆಷ್ಟೋ ಕಾದಂಬರಿಗಳು ನೇರಂಗರ ಲೇಖಣಿಯಿಂದ ಬರಲಿ ಎಂದು ಹಾರೈಸುತ್ತೇನೆ.

ಮುದ್ರಣ ದೋಷ ಹೆಚ್ಚಾಗಿರುವುದೊಂದು ಓದುಗರಿಗೆ ಕೊರತೆಯೆಂದು ಕಾಣದಿರದು.

—ಎಸ್. ಟಿ. ಕುಲಕರ್ಣಿ

ಓದಲೇ ಬೇಕಾದ ಉಪಯುಕ್ತ ಪುಸ್ತಕ

ದಕ್ಷಿಣ ಭಾರತದ ಖನಿಜ ಸಂಪತ್ತು ಮತ್ತು ಕೈಗಾರಿಕೆಗಳು

ಲೇ- ಯಂ. ವಾಸುದೇವರಾವ್, ಎಂ.ಎ., ಬಿ.ಟಿ.

ಸುರತ್ಕಲ್ ದ. ಕ.

೫ ವಿಶಿಷ್ಟ ಭೂಪಟಗಳು — ೧೫ ಚಿತ್ರಗಳು

ಮದ್ರಾಸು ವಿಶ್ವವಿದ್ಯಾನಿಲಯದ ಬಹುಮಾನ ಪಡೆದ ಪುಸ್ತಕ.

ಬೆಲೆ ೨-೮-೦

(೧) ಪ್ರತಿಗಳನ್ನು ಗ್ರಂಥಕರ್ತರಿಂದಾಗಲಿ (೨) ಮನೋಹರ ಗ್ರಂಥ ಭಾಂಡಾರ, ಧಾರವಾಡ. (೩) ಸಚ್ಚಿದಾನಂದ ಪುಸ್ತಕ ಭಾಂಡಾರ ಬಂಗಳೂರು. (೪) ಇಂಡಿಯನ್ ಇಂಡಸ್ಟ್ರಿಯಲ್ಸ್ ಮತ್ತು ಪಬ್ಲಿಸ್ಟೀಜ್ ಮಂಗಳೂರು ಇವರಿಂದಾಗಲಿ ಪಡೆಯಬಹುದು.

ನಗೀಗೆ ನೇವಿದ್ಯ

(೧)
ಏನಾದರೇನು?

[ಇಬ್ಬರು ಸ್ನೇಹಿತರು ಬಹಳ ವರ್ಷಗಳ ಮೇಲೆ ಭೆಟ್ಟಿಯಾದರು. ಅವರಲ್ಲಿ ನಡೆದ ಸಂಭಾಷಣೆ ಇದು.]

"ಈಗ ಹತ್ತು ವರ್ಷಗಳ ನಂತರ ನಿನ್ನನ್ನು ಕಂಡದ್ದು. ಎಲ್ಲ ಸರಿಯಷ್ಟೇ?"

"ಸರಿಯಾತರದು? ಎರಡು ವರ್ಷದ ಹಿಂದೆ ಮದುವೆಯಾದೆ."

"ಹಾಗಾದರೆ ಅಭಿನಂದನೆಗಳು. ಅಂತೂ ಖರ್ಚಿನಲ್ಲಿ ಬಿದ್ದೆ."

"ಹಾಗೇನಿಲ್ಲ; ಹೆಂಡತಿ ಬರುವಾಗ ೧೦ ಸಾವಿರ ರೂಪಾಯಿ ತಂದಳು."

"ಬೇಷ್, ಬೇಷ್! ಕೈತುಂಬ ರೊಕ್ಕ!"

"ರೊಕ್ಕ ಎಲ್ಲಿಯದು? ಆ ರೊಕ್ಕ ಹಾಕಿ ಕುರಿಗಳನ್ನು ಕೊಂಡೆ."

"ಅದೂ ಒಳ್ಳೇದೇ."

"ಒಳ್ಳೇದೇನು ಮಣ್ಣು! ಪಿಡುಗು ಬಂದು ಅವು ಸತ್ತೇ ಹೋದವು!"

"ಅಯ್ಯೋ ಪಾಪ!"

"ಪಾಪವೇನಿಲ್ಲ. ಅದರ ಉಣ್ಣೆಯನ್ನು ನಾಲ್ಕರಷ್ಟು ಬೆಲೆಗೆ ಕಳ್ಳಪೇಟೆಯಲ್ಲಿ ಮಾರಿದೆ."

"ಅಂದಮೇಲೆ, ಈಗ ಯಾತಕ್ಕೂ ಕೊರತೆಯಿಲ್ಲ ಅನ್ನು."

"ಇಲ್ಲ ಹೇಗೆ? ಆ ಹಣದಲ್ಲಿ ಮನೆ ಕಟ್ಟಿಸಿದೆ."

"ಹಾಗಾದರೆ ಸ್ವಂತ ಮನೆಯಲ್ಲಿಯೇ ಇದ್ದೀಯನ್ನು"

"ಎಲ್ಲಿಯದು! ಅದು ಮೊನ್ನೇ ಸುಟ್ಟು ಹೋಯಿತು.!"

"ಬಹಳೇ ಕೆಡಾಯಿತು."

"ಹಾಗೇನಿಲ್ಲ. ಎರಡರಷ್ಟು ಬೆಲೆಗೆ ಅದರ ವಿಮಾ ಇಳಿಸಿದ್ದೆ."

"ಮನೆ ಹೋದರೂ ಹೆಂಡತಿ ಇದ್ದಾಳಲ್ಲ?"

"ಛೆ, ಛೆ. ಅವಳೂ ಆ ಮನೆಯಲ್ಲಿ ಸುಟ್ಟು ಸತ್ತಳು."

"ಕಷ್ಟವಾಯಿತು!"

"ಕಷ್ಟನೇತರದು? ಅವಳಿಗೆ ಕ್ಷಯರೋಗವೇ ಆಗಿತ್ತು."

ಪ್ರಶ್ನೆ ಕೇಳಿದ ಮನುಷ್ಯನಿಗೆ ಗಾಬರಿ: ಇನ್ನು ಮುಂದೆ ತಾನು ಏನಾದರೂ ಮಾತನಾಡಿದರೆ, ಇನ್ನೂ ಏನೇನು ಕೇಳಬೇಕಾಗುವುದೋ — ಎಂದು. ಅದುದರಿಂದಲೆ ಮುಚ್ಚಿದ ಬಾಯಿ ತೆರೆಯದೆ, ಮುಂದೆ ಓಟಬಿಟ್ಟ.

(೨)

ಸಾಬಕ್ಕ:— (ಸಿಟ್ಟಿನಿಂದ) ಯಾಕ್ರೇ ಸುಬ್ಬಕ್ಕಾ, ನಮ್ಮ ಪಾಂಡೂಗ ಬೆನ್ನು ಬಾಯೋಹಾಂಗ ಏಟು ಹಾಕಿದಿರಿ.... ಅಂವ ಏನು ಮಾಡಿದಾ ನಿಮಗ?

ಸುಬ್ಬಕ್ಕ:—ಮಾಡೋದೇನು? ಕಂಡಾಗೆಲ್ಲಾ ಗೌಳೀರ ಎಮ್ಮಿ, ಗೌಳೀರ ಎಮ್ಮಿ ಅಂತ ನನಗಂತಾನ! ಇದೇನು ಛಂದೇನು?

ಸಾಬಕ್ಕ:— ಅಲ್ಲಾ, ಇಷ್ಟು ನಿಮಗ ತಿಳೀಬಾರದೇನ್ರೆವ್ವಾ—ನಿಮ್ಮ ಎಮ್ಮಿತನ ಕಳಕೋಬೇಕಾಗಿದ್ರ, ಪಾಂಡೂನ್ನ ಹೊಡೆಯೋದೇನು ಉಪಾಯ ಅಲ್ಲ; ಅದರ ಬದಲಾಗಿ ಉಪಾಸ ಮಾಡಬೇಕು, ವ್ಯಾಯಾಮ ಮಾಡಬೇಕು — ಇಷ್ಟೂ ನಿಮಗ ತಿಳೀಬಾರದಕ?

(೩)
ರೇಶನ್ ರಾಜ್ಯದ ನಿಯಮು

ರೇಶನ್ ಅಧಿಕಾರಿ—(ಕೊಳಿಗಳನ್ನು ಸಾಕುವ ಗೃಹಸ್ಥನಿಗೆ) 'ನಿಮ್ಮ ಕೋಳಿಗಳಿಗೆ ತಿನ್ನಲು ಏನು ಹಾಕುತ್ತೀರಿ.?

ಗೃ— 'ಕಾಳು.'

ರೇ. ಅ.— 'ಇದು ತಪ್ಪು, ಕಾಯಿದೆಗೆ ವಿರುದ್ಧ. ನಿಮಗೆ ಶಿಕ್ಷೆ ಕಟ್ಟಬೇಕಾಗುತ್ತದ್ದು. ಧಾನ್ಯ ಮನುಷ್ಯರಿಗೆ ತಿನ್ನುವದಕ್ಕಾಗಿವೆ.'

ಇನ್ನೊಬ್ಬನನ್ನು ಕೇಳಲಾಯಿತು—'ನೀವು ಏನು ಹಾಕುತ್ತೀರಿ.?'

'ಬೇಯಿಸಿದ ಅನ್ನ'

'ಅದೂ ತಪ್ಪು. ನೀವು ಕೂಡ ಶಿಕ್ಷೆಗೆ ಪಾತ್ರರು. ಬೇಯಿಸಿದ ಅನ್ನವೂ ಮನುಷ್ಯರಿಗಾಗಿಯೇ ಇದೆ.'

ಮೂರನೆಯವನನ್ನು ಕೇಳಲಾಯಿತು—'ನೀವು ಏನು ಹಾಕುತ್ತೀರಿ?'

'ನಾನು ಇದಾವದನ್ನೂ ಮಾಡುವದಿಲ್ಲ. ಕೋಳಿಗಳಿಗೆ ನಗದು ಹಣ ಕೊಡುತ್ತೇನೆ. ಅವೇ ಕಳ್ಳಸಂತೆಯಲ್ಲಿ ತಂದುಕೊಳ್ಳುತ್ತವೆ.'

(೪)

'ನಾವು ಎಲ್ಲಿ ಭೆಟ್ಟಿಯಾಗೋಣ?'

'ನೀವು ಹೇಳಿದಲ್ಲಿ.'

'ಯಾವ ಹೊತ್ತಿಗೆ?'

'ನಿಮಗೆ ಅನುಕೂಲವಿದ್ದ ಹೊತ್ತಿಗೆ.'

'ಸರಿ, ಹಾಗಾದರೆ ಹೊತ್ತಿಗೆ ಸರಿಯಾಗಿ ಬರ್ರಿ ಹಂ.'

ಸಾದರ ಸ್ವೀಕಾರ

★

೨೦. **ಕನ್ನಡ ಸಾಹಿತ್ಯ ಪಾಠಗಳು** (ಗದ್ಯ-ಪದ್ಯಸಂಕಲನ ೧ನೆಯ ಭಾಗ). ಸಂಪಾದಕರು: ಶ್ರೀ. ಜೆ. ವಾಮನಭಟ್ಟ, ಬಿ. ಎ., ಎಲ್. ಟಿ. ಅಸಿಸ್ಟಂಟ್, ಕ್ಯಾನರಾ ಹೈಸ್ಕೂಲ್, ಮಂಗಳೂರು. ಪ್ರಕಾಶಕರು: ಭಟ್ಟ ಮತ್ತು ಕಂಪನಿ, ಮಂಗಳೂರು. ಕ್ರೌ. ಅ. ೧೯೩ ಪುಟಗಳು. ಬೆಲೆ ೧-೪-೦.

೨೧. **ಕನ್ನಡ ಸಾಹಿತ್ಯ ಪಾಠಗಳು** (೨ನೆಯ ಭಾಗ). ಸಂಪಾದಕರು, ಪ್ರಕಾಶಕರು ಮೇಲೆ ಹೇಳಿದವರೆ ಕ್ರೌ. ಅ. ೨೦೨ ಪುಟಗಳು. ಬೆಲೆ ೧-೪-೦.

೨೨. **ಸರ್ವಜ್ಞನ ವಚನಗಳು** (ಆಯ್ದು ಸಂಗ್ರಹಿಸಿದುವು). ಪ್ರಕಾಶಕರು: ಶ್ರೀ. ಪ. ಅಂಕಿ ಉಪಾಧ್ಯಾಯ, ಉಪಾಧ್ಯಾಯ ಪ್ರಕಟನಾಲಯ, ೪೦ ಗೋಪಾಲಕೃಷ್ಣ ಗುಡಿಬೀದಿ, ಚಿಕ್ಕಪೇಟೆ, ಬೆಂಗಳೂರು ನಗರ. ಕ್ರೌ. ಅ. ೩೨ ಪುಟಗಳು. ಬೆಲೆ ೦-೬-೦.

೨೩. **ಶಿವಾನಂದ ಸೂಕ್ತಿಗಳು** (ಆಧ್ಯಾತ್ಮಿಕ ವಿಚಾರಗಳು). ಶ್ರೀಸ್ವಾಮಿ ಶಿವಾನಂದ ಸರಸ್ವತಿಗಳವರು ಇಂಗ್ಲಿಷಿನಲ್ಲಿ ಬರೆದುದನ್ನು, ಶ್ರೀಸ್ವಾಮಿ ಶಂಕರಾನಂದ ಸರಸ್ವತಿಗಳವರು ಭಾಷಾಂತರಿಸಿದ್ದಾರೆ. ಪ್ರಕಾಶಕರು: ಶಿವಾನಂದ ಪಬ್ಲಿಕೇಶನ್ ಲೀಗ್, 'ಆನಂದಕುಟೀರ', ಹೃಷೀಕೇಶದ ಮಾರ್ಗ (ಹಿಮಾಲಯ). ಡಿ. ಗ್ರೈದ ೧೧೨ ಪುಟಗಳು. ಬೆಲೆ ೧-೦-೦.

೨೪. **ಸಾಧನಾ** (ವಾರಪತ್ರಿಕೆ). ಸಂಪಾದಕರು: ಶ್ರೀ. ಆರ್. ಜಿ. ಜಾಗೀರದಾರರು. ನಿರ್ದೇಶಕರು ಮತ್ತು ಪ್ರಕಾಶಕರು: ಶ್ರೀ. ಜೆ. ಕೆ. ಪ್ರಾಣೇಶಾಚಾರ್ಯರು, ಹೈದರಾಬಾದ್ (ದಕ್ಷಿಣ). ಡೆ. ಫೊ. ೪ ಪುಟ. ಬಿ. ಸಂ. ೦-೨-೦.

ಕನ್ನಡ ಪತ್ರಿಕೆಗಳಿಗೆ ಅವಕಾಶವೇ ಇರದಿದ್ದ ಹೈದರಾಬಾದಿನಲ್ಲಿ ಈಗ ಎರಡು ಪತ್ರಿಕೆಗಳು ಹೊರಟು, ಜನಜಾಗೃತಿಯ ಕೆಲಸ ಮಾಡುತ್ತಿರುವುದು ಸಂತೋಷದ ಸಂಗತಿ. ಆದರೆ ಪತ್ರಿಕೆಗಳು ಕೇವಲ ಒಂದು ಪಕ್ಷಪ್ರಚಾರವನ್ನು ಮಾಡದೆ, ಜನಹಿತದ ದೃಷ್ಟಿಯನ್ನಿರಿಸಿಕೊಂಡು, ನಿರ್ದಾಕ್ಷಿಣ್ಯದಿಂದ ಸತ್ಯಪ್ರಚಾರ ಮಾಡುತ್ತಿರುವುದು ಅವಶ್ಯವೆಂಬುದನ್ನು ನಮ್ಮ ಸಂಪಾದಕ ಕುಲ ಮರೆತು ನಡೆಯಲಾಗದು. 'ಸಾಧನಾ' ಕನ್ನಡದ ಅಭ್ಯುದಯಕ್ಕಾಗಿ ಬಹುಕಾಲ ಬಾಳಲಿ.


ದಮ್ಮಿನ ಕಾಟ
ಶಾಸ್ತ್ರೀಯ
ಉಪಾಯದಿಂದಲೇ ಕಡಿಯೋದು
ಪೇಟೆಯಲ್ಲಿಯಾ ಔಷಧದಿಂದಲ್ಲ. ಅವು ಬರೇ ಕ್ಷಣಿಕ ಗುಣಪಡಿಸುವಂಥವು. ಸ್ವಲ್ಪ ತಪ್ಪಿದಿಟ್ಟ ದಮ್ಮು ಹೆಚ್ಚಾಗುತ್ತ ಹೋಗುವುದು. ಆದರೆ ಪುರೋಹಿತ ಶ್ವಾಸಹಾರಿಯು ಅಂಥ ಔಷಧವಲ್ಲ. ಅದು ದಮ್ಮಿಗಾಗಿ ಶಾಸ್ತ್ರೀಯ ಉಪಾಯವೆಂದು ಎಲ್ಲ ಡಾಕ್ಟರರಿಗೂ ಎಷ್ಟೋ ವರ್ಷಗಳಿಂದ ಗೊತ್ತಿದ್ದ ಮಾತು.
ಪುರೋಹಿತ ಶ್ವಾಸಹಾರಿಯು ಮೂರ್ತ ಇಂಥ ಔಷಧವಿದೆ; ಅದನ್ನು ತೆಗೆದು ಕೊಳ್ಳಲು ಹತ್ತಿದ ಕೂಡಲೇ ಕೆಮ್ಮು ಕಡಿದು ಹೋಗಿ ತೇಕು ಕಡಿಮೆ ಆಗುವುದು. ಪಚನಕ್ರಿಯೆ ಹೆಚ್ಚುವುದು. ಫುಪ್ಫುಸ ಗಟ್ಟಿಮುಟ್ಟಾಗಿ ದಮ್ಮು ಖಂಡಿತವಾಗಿ ಬಿಟ್ಟು ಹೋಗುವುದು.
೭-೮, ೬ ಮತ್ತು ೧೦ ರೂ. ಸ್ಯಾಕೆಂಗದಲ್ಲಿ ಎಲ್ಲ ಕಡೆಗೂ ಸಿಗುವದು. ಇಲ್ಲವೆ ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ. ಇವರಿಂದ ತರಿಸಿ ಕೊಳ್ಳಬೇಕು.
ಪುರೋಹಿತ
ಶ್ವಾಸಹಾರಿ

ಜಯಂತಿ ದೃಷ್ಟಿಯನ್ನಿರಿಸಿಕೊಂಡು, ನಿರ್ದಾಕ್ಷಿಣ್ಯದಿಂದ ಸತ್ಯಪ್ರಚಾರ ಮಾಡುತ್ತಿರುವುದು ಅವಶ್ಯವೆಂಬುದನ್ನು ನಮ್ಮ ಸಂಪಾದಕ ಕುಲ ಮರೆತು ನಡೆಯಲಾಗದು. 'ಸಾಧನಾ' ಕನ್ನಡದ ಅಭ್ಯುದಯಕ್ಕಾಗಿ ಬಹುಕಾಲ ಬಾಳಲಿ.

೨೫. **ಜಯ ಗುರುದೇವ** (ಸ್ವತಂತ್ರ ಕಾದಂಬರಿ). ಬರೆದವರು: ಶ್ರೀಮಾನ್ ಸಾಲಿ ರಾಮಚಂದ್ರರಾಯರು. ಪ್ರಕಾಶಕರು: ಸಂಸ್ಕೃತಿ ಪ್ರಕಾಶನ, 'ಶ್ರೀನಿಕೇತನ' ಧಾರವಾಡ. ಕ್ರೌ. ಅ. ೯೩ ಪುಟಗಳು. ಬೆಲೆ ೧-೮-೦.

೨೬. **ಕಾಲಪ್ರವಾಹ** (ನವಕಲ್ಯಾಣ ಮಠದ ಶ್ರೀಕುಮಾರಸ್ವಾಮಿಗಳವರ ಉಪನ್ಯಾಸಗಳು). ಸಂಗ್ರಾಹಕರು: ಶ್ರೀಮಾನ್ ವಿ. ರು. ಕೊಪ್ಪಳ, ಎಂ. ಎ, ಬಿ. ಟಿ. ನವಕಲ್ಯಾಣಮಠ, ಧಾರವಾಡ. ಕ್ರೌ. ಅ. ೯೬ ಪುಟಗಳು. ಬೆಲೆ ೧-೪-೦.

೨೭. **ಪ್ರೇಮಾ ಸುಸಾರಿ** (ಸುಗಂಧೀ ಅಡಿಕೆಯ ಪುಡಿ). ಸಿದ್ಧಗೊಳಿಸುವವರು: ಆಲೈಡ್ ಇಂಡಸ್ಟ್ರೀಜ್, ಧಾರವಾಡ.

ಈ ಸುಗಂಧೀ ಅಡಿಕೆಯು ಮಾದರಿಗಾಗಿ ನಮ್ಮ ಕಡೆಗೆ ಬಂದಿದೆ. ಒಳ್ಳೆಯ ಅಯ್ದ ಅಡಿಕೆಯನ್ನು ಪಯೋಗಿಸಿ, ರುಚಿಕರವೂ ಹಿತಕರವೂ ಎನಿಸುವಂತಹ ಮಸಾಲೆಯನ್ನು ಬೆರಸಲಾಗಿದೆ. ಪವಿಗಾರರು ಇದನ್ನು ಉಪಯೋಗಿಸಿ, ತಮ್ಮ ಸಂತಸವನ್ನು ಹೆಚ್ಚಿಸಿಕೊಳ್ಳಬೇಕು.

೨೮. **ಗೀತಾಪ್ರಭಾ** (ಸಂಚಿಕಾರೂಪದಿಂದ ಪ್ರಕಟವಾಗುತ್ತಲಿರುವ ಗ್ರಂಥ) ಗ್ರಂಥಕರ್ತರು ಮತ್ತು ಪ್ರಕಾಶಕರು: 'ಕೀರ್ತನ ರತ್ನಾಕರ' 'ತತ್ತ್ವಭೂಷಣ' 'ರಾಮಕೋಟಿ ಪ್ರಬೋಧಕ' 'ವಿದ್ಯಾನಿಧಿ' ಕಾರುಪಲ್ಲಿ ಶಿವರಾಮದಾಸರು. ಕೆಲಮಂಗಲಂ (ಶೇಲಂ ಜಿಲ್ಲಾ). ಕ್ರೌ. ಅ. ೧೬ ಪುಟಗಳು.

೨೯. **ಮಣಿ-ಮುತ್ತುಗಳು** (ಕಥಾ-ಂಕಲನ). ಬರಹಗಾರರು: ಶ್ರೀಮಾನ್ : ಶೀ. ಮಣಿ, ಶಿಕಾರಿಪುರ. ಪ್ರಕಾಶಕರು: ರ್ಷ ಮುದ್ರಣ ಪ್ರ ಕ ಟ ನಾ ಲ ಯ, ತ್ತೂರು (ದ. ಕ.). ಕ್ರೌ. ಅ. ೨೩೪ ಪುಟಗಳು. ಬೆಲೆ ೨–೪–೦.

೩೦. **ಮರೆಯಲಾರದ ಮು ಡ ದಿ** ಸ್ವತಂತ್ರ ಸಾಮಾಜಿಕ ಕಾದಂಬರಿ). ಲೇಖಕರು: ಶ್ರೀ. ಪಿ. ಯೋಗೀಶರಾಯರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ಲನೆಯ ವರ್ಷದ ೩ನೆಯ ಕೆರಣ. ಕ್ರೌ. ಅ. ೨೦೪ ಪುಟಗಳು. ಬೆಲೆ ೨–೦–೦.

೩೧. **ಸ್ವರ್ಣಭೂಮಿ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಲೇಖಕರು: ಶ್ರೀ. ಮಂಗಳೂರು ವಾಮನ ಪುಲ್ಯರು. ಮೇಲಿನ ಪ್ರತಿಭಾ ಗ್ರಂ. ಮಾಲೆಯ ೯ನೆಯ ವರ್ಷದ ೪ನೆಯ ಕಿರಣ. ಕ್ರೌ. ಅ. ೧೧೨ ಪುಟಗಳು. ಬೆಲೆ ೧–೪–೦.

೩೨. **ಪ್ರಕಾಶ** (ಮಾಸಪತ್ರಿಕೆಯ ಮೇ ೧೯೪೪ ರ ಸಂಚಿಕೆ). ಸಂಪಾದಕರು: ಶ್ರೀಮಾನ್ ಆರ್. ಕೆ, ನಾಯಕ ಬಿ. ಎ. ಅವರು. ಬೆಳಗಾಂವಿಯಲ್ಲಿ ಕರ್ನಾಟಕ ಪ್ರಾದೇಶಿಕ ಸಾಮಾಜಿಕ ಶಿಕ್ಷಣ ಸಮಿತಿಯಿಂದ ಪ್ರಕಾಶಿತವಾಗುತ್ತಲಿದೆ. ಕ್ರೌ. ಡಿ ಪ ೩೬ ಪುಟಗಳು. ವಾ. ಚಂ. ೩–೦–೦. ಬಿಡಿ ಸಂಚಿಕೆಗ ೦–೪–೦.

೩೩. **ಅಮೃತಬಿಂದು** (ಕವನ ಸಂ-ಗ್ರಹ). ಬರೆದವರು: ಶ್ರೀಮಾನ್ ಬ. ಹೆ. ಶ್ರೀಧರರು. ಪ್ರಕಾಶಕರು: ಸಂಯುಕ್ತ ಕರ್ನಾಟಕ ಕಾರ್ಯಾಲಯ, ಹುಬ್ಬಳ್ಳಿ. ಕ್ರೌ. ಅ. ೮೦ ಪುಟಗಳು ಬೆಲೆ ೧–೪–೦.

೩೪. **ಬಾಪೂಜಿಯವರ ಸ ಪ್ಸ ಂ ಗ** (ಪರಿಚಯಾತ್ಮಕ ಗ್ರಂಥ). ಬರೆದವರು: ಶ್ರೀ. ಕೃ. ನಾ. ಗೋಸಾವಿ, 'ಭಾರತ ಸಂಚಾರಿ' ಪ್ರಕಾಶಕರು: ಮನೋಹರ ಗ್ರಂಥ ಭಾಂಡಾರ, ಧಾರವಾಡ. ಕ್ರೌ. ಅ. ೪೨ ಪುಟಗಳು. ಬೆಲೆ ೦–೧೦–೦.

೩೫. **ವೇಣುಮಾವ** (ಅನುವಾದಿತ ನಾಟಕ). ಅನುವಾದಕರು ಶ್ರೀಮತಿ ಸೌ. ಪಡುಕೋಣೆ ಸೀತಾದೇವಿಯವರು. ಧಾರವಾಡದ ಮನೋಹರ ಗ್ರಂಥಮಾಲೆಯ ೪ನೆಯ ಕುಸುಮ. ಕ್ರೌ. ಅ. ೨೪+೭೨ ಪುಟಗಳು. ಬೆಲೆ ೦–೧೨–೦.

ದೀಪಾವಳಿಯ ಆನಂದವು ನಿಮಗೆ ನಿಜವಾಗಿ ದೊರೆಯಬೇಕಾಗಿದ್ದರೆ

'ಜಯಂತಿ'ಯನ್ನು ಓದಿರಿ!

ಈ ಸಲದ 'ಜಯಂತಿ'ಯ **ದೀಪಾವಳಿಯ** ಸಂಚಿಕೆ ಹಿಂದಿನಕಿಂತಲೂ ಹೆಚ್ಚು ಆಕರ್ಷಕವಾಗಿ ಬರಲಿದೆ. ಮೂರು ಬಣ್ಣದ ಚಿತ್ರವುಳ್ಳ ಹೊದಿಕೆ, ಸುಮಾರು ೮೦ ಪುಟಗಳಲ್ಲಿ ವೈಶಿಷ್ಟ್ಯ ಪೂರ್ಣವಾದ ಲಲಿತ ಲೇಖನಗಳು, ನಗೆಯ ಚಿತ್ರಗಳು, ಹಿರಿ ಸಾಹಿತಿಗಳ ಉತ್ತಮ ಕಥೆ-ಹರಟೆಗಳು.

ಈ ಸಂಚಿಕೆಯ ಬೆಲೆ ೦—೧೨—೦

ಸಂಚಿಕೆ ಅಕ್ಟೋಬರ್ ೧೦ ನೆಯ ತಾರೀಖಿಗೆ ಹೊರಬೀಳುವದು!

ಮಾರಾಟಗಾರರು ಕೂಡಲೆ ಪ್ರತಿಗಳಿಗಾಗಿ ಬರೆಯಬೇಕು.

ವ್ಯವಸ್ಥಾಪಕರು— **ಜಯಂತಿ, ಧಾರವಾಡ**

ನಿಮ್ಮ ಮನೆ, ಹೊಲ ಅಥವಾ ಕಾರಖಾನೆಯಲ್ಲಿ ನೀರಿನ
ಸಮಸ್ಯೆ ಪರಿಹಾರವಾಗಬೇಕಿದ್ದರೆ

ಕಿರ್ಲೋಸ್ಕರ
'ಸೆಂಟ್ರಿಫ್ಯೂಗಲ್ ಪಂಪ'ನ್ನೇ
ಉಪಯೋಗಿಸಿರಿ



ಹೆಚ್ಚಿನ ವಿವರಗಳಿಗಾಗಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ.

ಇವರಿಗೆ ಬರೆಯಿರಿ.

V.P. 180

Printed by Mr.V.Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar. 1937-49

ಜಯಂತಿ

ಸೆಪ್ಟೆಂಬರ್

೧೯೪೯

★

೮ ಆಣೆ

★

ಸಂಚಿಕೆ

೪

★

JAYANTI

★

SEPTEMBER

1949

★

ಜಯಂತಿ

JAYANTI

ಸಪ್ಟಂಬರ್ ೧೯೪೪

ವಾರ್ಷಿಕ ವರ್ಗಣಿ . . ೪—೮—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್.ಜಿ. ಜೇಂಡ್ರೆ

ಪ್ರಕಾಶಕರು— ಶ್ರೀ. ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೪೦	ಒಂದು ಸಲ
½	,,	,,	೨೫	,,
¼	,,	,,	೧೫	,,
⅛	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

—೦—

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.

For particulars write to

Advt: *Manager*, Jayanti; Dharwar

ಜಯಂತಿಗೆ ಏಜಂಟರು ಬೇಕು.

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೨ | ೧ನೆಯ ಸಪ್ಟಂಬರ್ ೧೯೪೪ | ಸಂಚಿಕೆ ೧

ಈ ಸಂಚಿಕೆಯಲ್ಲಿ:

ಕನ್ನಡ ನಾಡಿನ ಬಾನುಲಿ ಕಟ್ಟೆ (ಸಂಪಾದಕೀಯ)
ಸಂಪಾದಕರು

ಕಾಯಿದೆ ಮತ್ತು ಸೆರೆಯಾಳು (ವ್ಯಂಗ್ಯರೂಪಕ)
ಕೀರ್ತಿಶೇಷ ಖಲೀಲ್ ಜಿಬ್ರಾನರ ಕೃತಿಯ ಅನುವಾದ

ಪ್ರಶ್ನೆಗೆ ಉತ್ತರ
ಸಂಪಾದಕ ಸಮಿತಿ

"ಇಲ್ಲಿ ಶಾಸ್ತ್ರ ಹೇಳುತ್ತೇವೆ" (ಸಣ್ಣಕತೆ)
ಶ್ರೀ. ಎ. ಎಸ್. ರಾಮಕೃಷ್ಣ, ಬೆಂಗಳೂರು

ಕಲೆಯೂ ರಸವೂ (ಸಾಹಿತ್ಯಶಾಸ್ತ್ರವಿಚಾರ)
ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ

ಬಂದ ಭಾಗ್ಯ (ಕವನ)
ಶ್ರೀ. ನ. ಮ. ಕೊ. ಸೋಗಿ ತಾಂಬರಂ—ಮದ್ರಾಸು

ಸಿಗದಿದ್ದ ಪೆನ್ನಿಗಾಗಿ (ಲಘುಪ್ರಬಂಧ)
ಶ್ರೀ. ಎನ್. ಎಸ್. ಗದಗಕರ್ ಬಿ.ಎ. ಧಾರವಾಡ

ಕೃತಜ್ಞತೆಯ ಕಾಣಿಕೆ (ಸಣ್ಣಕತೆ)
ಶ್ರೀ. ಮಾ. ನ. ಮೂರ್ತಿ, ತುಮಕೂರು

ಅಹಿಂಸಾ ರಾಮಾಯಣ (ಮಕ್ಕಳಿಗಾಗಿ ರೂಪಕ ಕಥೆ)
ಪ್ರೊ. ರಂ. ಶ್ರೀ. ಮುಗಳಿ ಎಂ ಎ , ಬಿ. ಟಿ. ಸಾಂಗಲಿ

ಪ್ರಿನ್ಸಿಪಾಲ್ ವಿ. ಕೆ. ಗೋಕಾಕರು (ವ್ಯಕ್ತಿಪರಿಚಯ)
ಶ್ರೀ. ವರಗಿರಿ ಮಾರ್ತಾಂಡರಾಯರು ಎಂ. ಎ., ಬಿ. ಟಿ. ೧೫೯

ಪಲ್ಲವರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ (ಪರಿಚಯ)
ಪ್ರೊ. ಆರ್. ಸಿ. ಹಿರೇಮಠ ಎಂ. ಎ. ೧೬೪

ಕನ್ನಡ ಒಗಟುಗಳು (ಪ್ರೇಮ ಪದ್ಯಗಳು)
ಶ್ರೀಮತಿ ಶಾಮಲಾ ಬೆಟಗೇರಿ

ವಿಮರ್ಶೆಯ ಶಿಕ್ಷಣರಂಗ
ಶ್ರೀ. ಎಸ್. ಶ್ರೀಕೃಷ್ಣ, ಪೆರತಾಲ

ಪುಸ್ತಕ ವಿಮರ್ಶೆ (ನುಡಿ-ಮುತ್ತುಗಳು)
ಶ್ರೀ. ಬಿ. ಪಿ. ಎಸ್. ರಾವ್

ಉ. ಕ. ಜಿಲ್ಲೆಯ ಜನಪದ ಸಾಹಿತ್ಯ
ಶ್ರೀ. ಉಪೇಂದ್ರ ನಾಯಿಕ, ಕಾರವಾರ

ನಗೀಗೆ ನೇವೀದ್ಯ (ನಕಲೀ ನಾರಾಯಣಾಚಾರ್ರು)

ಸಾದರ ಸ್ವೀಕಾರ

ವರ್ಷ ೧೨ | ಸಂಚಿಕೆ ೪ | ಸಪ್ಟೆಂಬರ್ | ೧೯೪೯



ಸಂಪಾದಕೀಯ

ಕನ್ನಡನಾಡಿನ ಬಾನುಲಿಕಟ್ಟೆ

ಭಾರತದಲ್ಲಿ ಸ್ವತಂತ್ರ ರಾಷ್ಟ್ರೀಯ ಸರಕಾರ ಬಂದೊಡನೆಯೆ, ಎಲ್ಲ ಪ್ರಾಂತೀಯ ಭಾಷಾಕೇಂದ್ರನಗರಗಳಲ್ಲಿ ಒಂದರ ಹಿಂದೆ ಒಂದರಂತೆ ಬಾನುಲಿಕಟ್ಟೆಗಳು ಪ್ರಾರಂಭವಾಗಿ ಕೆಲಸಮಾಡಲು ತೊಡಗಿವೆ. ಪದ್ಧತಿಯಂತೆ, ಕನ್ನಡನಾಡಿಗೆ ಕೊಡಲಿರುವ ಧಾರವಾಡದ ಬಾನುಲಿಕಟ್ಟೆ ಕೆಲಸ ಪ್ರಾರಂಭಿಸುವುದು ದಿನದಿನಕ್ಕೂ ಮುಂದುವರಿಯುತ್ತಲೆ ನಡೆದಿದೆ. ಯೋಗ್ಯವಾದ ಕಟ್ಟಡ ಧಾರವಾಡದಲ್ಲಿ ಇದ್ದರೂ, ಅದು ಇದೆಯೆಂದು ತಿಳಿಯಲು ಅನೇಕ ತಿಂಗಳು ಹೋದುವು. ತಿಳಿದ ಮೇಲೂ ಅದು ಕೈಗೆ ಬರಲಿಕ್ಕೆ ಎಷ್ಟೋ ತಿಂಗಳು ಕಳೆದುವು. ಸರಕಾರದ ಆಶ್ವಾಸನದ ಮೇಲೆ ನಂಬುಗೆಯನ್ನಿರಿಸಿದ್ದ ಕನ್ನಡಿಗರು, ಧಾರವಾಡದ ಬಾನುಲಿಕಟ್ಟೆಯ ಬರವನ್ನು ಆಶೆಯಿಂದ ನೋಡಿಯೆ ನೋಡುತ್ತಲಿದ್ದರು. ಒಂದೊಂದು ಪ್ರಾಂತ್ಯದಲ್ಲಿ ಆ ಆ ಪ್ರಾದೇಶಿಕ ಭಾಷೆಯಲ್ಲಿ ಕಾರ್ಯಕ್ರಮ ನಡೆಯಿಸುವ ಎರಡೆರಡು ಮೂರು ಮೂರು ಬಾನುಲಿಕಟ್ಟೆಗಳು ಕೂಗಲು ತೊಡಗಿದರೂ, ಕನ್ನಡಿಗರಿಗಾಗಿ ಎಂದಿದ್ದ ಒಂದೇ ಒಂದು ಬಾನುಲಿಕಟ್ಟೆಯೂ, ಕಾರಣವಿದ್ದೋ ಇಲ್ಲದೆಯೋ, ಬರುವುದು ಮುಂದೆ ಮುಂದೆ ಬೀಳುತ್ತಲೆ ನಡೆದಿತ್ತು. ಈಗ, ಬರಲಿರುವ ಆಕ್ಟೋಬರ್ ಮೊದಲನೆಯ ವಾರದಲ್ಲಿ ಅದು ಪ್ರಾರಂಭವಾಗುವುದೆಂದು ಸುದ್ದಿಯಿದೆ. ಹಲವು ದಿನಗಳಿಂದ ಕೇಳುತ್ತ ಬಂದ ಇಂತಹ ಸುದ್ದಿಗಳು ಒಂದು ಸಲವೂ ಸತ್ಯವಾಗಿ ಪರಿಣಮಿಸಿಲ್ಲವಾದುದರಿಂದ, ಈ ಸುದ್ದಿಯನ್ನೂ ನಮ್ಮ ಜನ ನಂಬದೆ ಇರಬಹುದು. ಆದರೆ ಹಾಗೆ ನಂಬದಿರುವುದಕ್ಕೆ ಕಾರಣವಿಲ್ಲ. ಯಂತ್ರಸಾಮಗ್ರಿ ಬಂದಿದೆ. ಹೊಂದಿಸುವ ಕೆಲಸ ನಡೆದಿದೆ. ಅಧಿಕಾರಿವರ್ಗದಲ್ಲಿಯ ಕೆಲವರ ಯೋಜನೆಯೂ ಆಗಿದೆ.

ಕೇಂದ್ರದಲ್ಲಿ ಅಖಿಲ ಭಾರತ ಆಕಾಶವಾಣಿಯ ವಿಭಾಗ, ಕನ್ನಡಿಗರಾದ ಮಂತ್ರಿಯೊಬ್ಬರ ನೇತೃತ್ವದಲ್ಲಿಯೆ ಇರುವುದರಿಂದ, ಇಷ್ಟಾದರೂ ಬೇಗನೆ ನಮಗೆ ಬಾನುಲಿಕಟ್ಟೆ ಸಿಕ್ಕಿತೇನೋ—ಎನ್ನಬಹುದು. ಬೇರೆ ಭಾಷೆಯವರಾರಾದರೂ ಆ ಅಧಿಕಾರದಲ್ಲಿ ಇದ್ದರೆ, ಮಿಕ್ಕೆಲ್ಲ ವಿಭಾಗಗಳಲ್ಲಿ ಕನ್ನಡ ಭಾಷೆ ದುರ್ಲಕ್ಷ್ಯಿತವಾಗುತ್ತಿರುವಂತೆ, ಈ ಕನ್ನಡ ಬಾನುಲಿಕಟ್ಟೆಯ ವಿಷಯವೂ ದುರ್ಲಕ್ಷ್ಯಿತವಾಗಬಹುದಾಗಿದ್ದಿತು. ನಮ್ಮಜನರಲ್ಲಿ ಸ್ವಂತದ ಹಕ್ಕುಗಳನ್ನು ಪ್ರಸ್ಥಾಪಿಸಿಕೊಳ್ಳುವಂತಹ ಜಾಗೃತಿ-ಸಂಘಟನೆಗಳಿಲ್ಲ. ಮುಂದಾಳುಗಳೆನಿಸಿಕೊಳ್ಳುವವರಲ್ಲಿ, ವೈಯಕ್ತಿಕ ಸ್ಥಾನ-ಮಾನಗಳ ಆಶೆಯೊಂದಲ್ಲದೆ, ಪ್ರಾಂತೀಯ ಹಿತದ ವಿಚಾರವು ಔಷಧಕ್ಕಿಲ್ಲ. ಹೀಗಿರುವಾಗ ಕನ್ನಡ ನಾಡು-ನುಡಿಗಳು ಮೇಲಿನ ಸರಕಾರಗಳಿಂದ ದುರ್ಲಕ್ಷ್ಯಿತವಾಗುವುದು ಸಹಜ.

ಈಗ ಕನ್ನಡಕ್ಕೊಂದು ಬಾನುಲಿಕಟ್ಟೆ ಸಿಕ್ಕಿತೆಂದು ಅಲ್ಪ ಸಂತುಷ್ಟಿಯವರು ಸಮಾಧಾನಪಟ್ಟುಕೊಳ್ಳಬಹುದಿಷ್ಟೆ! ಹರಳಿನುಂಗುರ ಬೇಡಿ ಹಟಮಾಡಿದ ಹುಡುಗನಿಗೆ ನಕಲೀ ಹರಳಿನ ಉಂಗುರ ಕೊಡಿಸಿ ಸಮಾಧಾನಮಾಡುವ ದೊಡ್ಡಪ್ಪನಂತೆ, ಕೇಂದ್ರ ಸರಕಾರದವರು ಕನ್ನಡಿಗರಿಗೂ ಒಂದು ಆಟದ ಬಾನುಲಿಕಟ್ಟೆಯನ್ನು ಹಣ್ಣಿಸಿಕೊಟ್ಟಿದ್ದಾರೆ. ಹಿಂದುಸ್ತಾನದ ಯಾವ ನಗರದ ಬಾನುಲಿಕಟ್ಟೆಯಲ್ಲಿಯೂ ಕಾಣಲು ಸಿಕ್ಕದಂತಹ ಕಡಿಮೆ ಶಕ್ತಿಯ ಯಂತ್ರ ಸಾಮಗ್ರಿಯನ್ನು ಧಾರವಾಡದ ಕಟ್ಟೆಗೆ ದಯೆಪಾಲಿಸಿದ್ದಾರೆ. ಇಲ್ಲಿಯ ಕಾರ್ಯಕ್ರಮಗಳ ಪ್ರಯೋಜನ, ಹೊರನಾಡುಗಳಲ್ಲಿಯ ಕನ್ನಡಿಗರಿಗೆ ಸಿಕ್ಕದಿದ್ದರೆ ಹೋಗಲಿ, ಕನ್ನಡ ನಾಡಿನಲ್ಲಿರುವ ಅನೇಕ ಜನರಿಗೂ ಇದರ ಪ್ರಯೋಜನ ದೊರೆಯಲಾರದೆಂದು ತೋರುವುದು. ೫೦-೫೫ ಮೈಲಿನ ಸುತ್ತಳತೆಯವರೆಗೆ ಮಾತ್ರ ಧ್ವನಿಯನ್ನು ತಲ್ಪಿಸಬಹುಬಾದ ಈ ಯಂತ್ರದಿಂದ, ನೂರಾರು ಮೈಲು ಸುತ್ತಳತೆಯ ಮೇಲಿರುವ ಕನ್ನಡಿಗರು ಈ 'ಕನ್ನಡ ಬಾನುಲಿಕಟ್ಟೆ'ಯ ಕೊಡುಗೆಗಾಗಿ ಎಂತಹ ಸಮಾಧಾನ ಪಡಬೇಕು? ಇದು ನಾಚಿಕೆಗೇಡಿನ್ನಮಾತು ಹೊರನಾಡಿನವರಿಗೆ ಕರ್ನಾಟಕದ ನಾಡು-ನುಡಿಯ ಅಸ್ತಿತ್ವಕ್ಕೂ ಗೊತ್ತಾಗಬಾರದೆಂದು ಇಂತಹ ಯೋಜನೆಯೆ?

ಸರಕಾರದ ಇಂತಹ ಸೋಗಿನ ಸಹಾನುಭೂತಿಯನ್ನು ಕನ್ನಡಿಗರಾದ ನಾವು ಧಿಕ್ಕರಿಸಲೇ ಬೇಕು. ನಮ್ಮ ಸಂಘಟನಾ ಬಲದಿಂದ, ಕೂಗಿ ಚಳವಳಿ ನಡೆಯಿಸಿ, ತಮಗೆ ಸಲ್ಲಲೇಬೇಕಾದ ಅನುಕೂಲತೆಗಳನ್ನು ಸಲ್ಲಿಸಿಕೊಳ್ಳಲೇಬೇಕು. ಒಬ್ಬರಿಗೆ ರೊಟ್ಟಿ, ಇನ್ನೊಬ್ಬರಿಗೆ ಕಲ್ಲು ಕೊಡುವುದು, ನಿಷ್ಪಕ್ಷಪಾತಬುದ್ಧಿಯಿಂದ ಎಲ್ಲರನ್ನೂ ನೋಡಬೇಕಾಗಿದ್ದ ಕೇಂದ್ರಸರಕಾರದವರಿಗೆ ಉಚಿತವಾದುದಲ್ಲವೆಂಬುದರ ಎಚ್ಚರಿಕೆಯನ್ನು ಹುಟ್ಟಿಸಬೇಕು. ಧಾರವಾಡದ ಬಾನುಲಿಕಟ್ಟೆಯಲ್ಲಿ ಅಧಿಕಾಂಗಳೆಲ್ಲ ಇರುವರು. ನಡೆಯುವ ವೆಚ್ಚವೆಲ್ಲ ನಡೆಯುವುದು. ಯಾರು ಯಾರೋ ಹಣವನ್ನು ಮೇಯುವರು. ಆದರೆ ಕನ್ನಡಿಗರಿಗೆ ಮಾತ್ರ ಇದಾವುದರ ಉಪಯೋಗವೂ ಆಗದು. ನಮ್ಮ ಜನರಿಗೆ ಇದರ ಎಚ್ಚರವಿರಲಿ. ಆಕಾಶವಾಣಿಯ ಅಧಿಕಾರಿವರ್ಗ ನಡೆಯಿಸಿರುವ ಈ ಪಜ್ಜಾಪ್ರಪಂಚವನ್ನು ತಡೆಹಿಡಿಯಲಿ.

ದೀಪಾವಳಿ ಸಂಚಿಕೆ

ಅಕ್ಟೋಬರ್ ಜಯಂತಿ, ದೀಪಾವಳಿ ಸಂಚಿಕೆಯಾಗಿ ಅಕ್ಟೋಬರ್ ೧೯ನೆಯ ತಾರೀಖಿಗೆ ಹೊರಡುವುದೆಂಬುದರ ಕಡೆಗೆ ನಮ್ಮ ವಾಚಕವರ್ಗದ ಲಕ್ಷ್ಯವನ್ನು ಎಳೆಯುವೆವು. ೧೯ನೆಯ ತಾರೀಖಿಗೆ ಜಯಂತಿ ಬರಲಿಲ್ಲವೆಂದು ಯಾರೂ ಪತ್ರವ್ಯವಹಾರ ಪ್ರಾರಂಭಿಸಬಾರದೆಂದು ವಿನ್ನಹ.

ಒಂದು ಸ್ಪಷ್ಟೀಕರಣ

ಜಯಂತಿಯ 'ಕಥಾಸಂಚಿಕೆ' (ಮೇ ೧೯೪೪) ಯಲ್ಲಿ ಶ್ರೀ. ಬಸವರಾಜ ಕಟ್ಟಿಮನಿಯವರ 'ಸೆರೆಯಿಂದ ಹೊರಗೆ' ಎಂಬುದೊಂದು ಕತೆ ಪ್ರಕಟವಾಗಿದೆ. ಅದು ಕೇವಲ ಒಂದು ಕತೆಯೆಂದು ಜಯಂತಿಯಲ್ಲಿ ಅವಕಾಶಕೊಡಲಾಗಿದ್ದು. ಅದು ತೀರ ಕಲ್ಪಿತ ಕತೆಯೆಂದು ಲೇಖಕರೂ ಹೇಳುತ್ತಾರೆ. ಆದರೆ ಅದರಲ್ಲಿ ಬರುವ ಸಂಸ್ಥೆಯೂ ಸ್ವಾಮಿಗಳೂ, ವಿಶಿಷ್ಟವಾದ ಒಂದು ಸಂಸ್ಥೆಯನ್ನೂ ಅದರ ಸಂಚಾಲಕರಾದ ಪೂಜ್ಯ ಸ್ವಾಮಿಗಳನ್ನೂ ಕಣ್ಣೆದುರಿಟ್ಟುಕೊಂಡು ಬರೆದುನೆಂದು ಕೆಲವರ ಆರೋಪವಿದೆ. ಆ ಪೂಜ್ಯಸ್ವಾಮಿಗಳ ಮತ್ತು ಸಂಸ್ಥೆಯ ಅಭಿಮಾನಿಗಳು ಕೆಲವರು ತಮಗಾದ ಅಸಮಾಧಾನವನ್ನು ಪ್ರತ್ಯಕ್ಷ-ಪರೋಕ್ಷವಾಗಿ ನಮಗೆ ತಿಳಿಸಿರುವರು. ಆ ಕತೆಯಲ್ಲಿ ಟೀಕಿಸಿರುವರೆಂದು ಹೇಳುವ ಸಂಸ್ಥೆ ಮತ್ತು ಸ್ವಾಮಿಗಳವರ ವಿಷಯದಲ್ಲಿ, ಇನ್ನಾರಿಗಿಂತಲೂ ಕಡಿಮೆಯಲ್ಲದಷ್ಟು ಆದರ-ವಿಶ್ವಾಸಗಳು ನಮ್ಮಲ್ಲಿಯೂ ಇವೆಯೆಂಬುದನ್ನು ಇಲ್ಲಿ ಸೂಚಿಸಬಯಸುತ್ತೇವೆ. —ಸಂಪಾದಕರು

— ಕಾಯಿದೆ ಮತ್ತು ಸೆರೆಮನೆ —

(ಕೇರಿಶೇಷ ಖಲೀಲ್ ಜಬ್ರಾನ್ ಅವರ ವ್ಯಂಗ್ಯರೂಪಕವೊಂದು)

ದ್ವಾಪರ ಯುಗದಲ್ಲಿ ಪ್ರಜಾಹಿತ ತತ್ಪರನಾದ ಒಬ್ಬ ರಾಜನಿಗೆ ಪ್ರಜರ ಹಿತಕ್ಕಾಗಿ ಕಾಯಿದೆಗಳನ್ನು ಮಾಡಬೇಕೆಂದೆನಿಸಿತು.

ಅವನು ತನ್ನ ರಾಜ್ಯದಲ್ಲಿಯ ಸಾವಿರ ಜಾತಿಯ ಸಾವಿರ ಬುದ್ಧಿವಂತರನ್ನು ತನ್ನ ಓಲಗಕ್ಕೆ ಕರೆಯಿಸಿ, ಕಾಯಿದೆಗಳನ್ನು ರಚಿಸಲು ಆಜ್ಞಾಪಿಸಿದ.

ರಾಜನ ಇಚ್ಛೆಯಂತೆ ಎಲ್ಲವೂ ನೆರವೇರಿತು. ದೇಶದ ಬುದ್ಧಿವಂತರೆಲ್ಲ ಸೇರಿ ಕಾಯಿದೆಗಳನ್ನು ರಚಿಸಿದರು. ಅವನ್ನು ತಾಮ್ರಪಟದ ಮೇಲೆ ಬರೆಯಿಸಿ, ರಾಜನ ಮುಂದೆ ಇರಿಸಿದರು. ಆದರೆ ಅವನ್ನು ಓದಿ ರಾಜನಿಗೆ ಅಪರಿಮಿತ ದುಃಖವಾಯಿತು. ಅವನು ಮಗುವಿನಂತೆ ಅತ್ತೂ ಬಿಟ್ಟ! ತನ್ನ ರಾಜ್ಯದಲ್ಲಿ ಇಷ್ಟೊಂದು ಅನಾಚಾರಗಳು ನಿತ್ಯವೂ ನಡೆಯುತ್ತಿರುವುದನ್ನು ಓದಿ ಅವನ ಜೀವ ತಳಮಳಗೊಂಡಿತು.

ರಾಜನಿಗೆ ಸಾವಿರ ಕಾಯಿದೆಗಳು ಅನಾವಶ್ಯಕ ಎನಿಸಿತು. ತನ್ನ ಕರಣಿಕನನ್ನು ಕರೆಯಿಸಿದ; ತಾನೇ ಕಾಯಿದೆಗಳನ್ನು ಬರೆಯತೊಡಗಿ, ಏಳು ಕಾನೂನುಗಳಲ್ಲಿಯೇ ಕಾರ್ಯವನ್ನು ಪೂರೈಸಿದ!

ಆದರೆ ಇವ್ವರಿಂದ ಆ ಸಾವಿರ ಬುದ್ಧಿವಂತರಿಗೆ ಸಮಾಧಾನವಾಗಲಿಲ್ಲ! ಅವರು ಸಿಡಿಮಿಡಿಗೊಂಡು, ತಮ್ಮ ಕಾಯಿದೆಗಳನ್ನು ಕಟ್ಟಿಕೊಂಡು, ತಮ್ಮ ತಮ್ಮ ಜಾತಿಯವರ ಕಡೆಗೆ ಹೋದರು. ಮತ್ತು ಆ ಆ ಜಾತಿಯವರು, ಈ ಬುದ್ಧಿವಂತರ ಕಾಯಿದೆಗಳನ್ನು ಪಾಲಿಸಿಯೇ ನಡೆಯಹತ್ತಿದರು. ಹೀಗಾಗಿ ಅಲ್ಲಿ ಸಾವಿರ ಕಾಯಿದೆಗಳು ಜಾರಿಯಲ್ಲಿ ಬಂದುವು!

ಆ ದೇಶ ಬಹಳ ದೊಡ್ಡದಿದೆ! ಅಲ್ಲಿ ಈಗ ಸಾವಿರ ಸೆರೆಮನೆಗಳಿವೆ! ಆದರೆ ಆ ಸಾವಿರ ಸೆರೆಮನೆಗಳೂ ಸಾವಿರ ಕಾಯಿದೆಗಳನ್ನು ಮುರಿಯುವ ಸ್ತ್ರೀ-ಪುರುಷರಿಂದ ಕಿಕ್ಕಿರಿದು ತುಂಬಿವೆ! ಸೆರೆಮನೆಯನ್ನು ತಪ್ಪಿಸಿ ಹೊರಗುಳಿದವರ ಸಂಖ್ಯೆಗಂತೂ ಮಿತಿಯೇ ಇಲ್ಲ!!



ನಮ್ಮ ಗದುಗಿನ ಏಜಂಟರು:

ಶ್ರೀನಿವಾಸ ಸ್ಟೋರ್ಸ್; ಗದಗ

ಪ್ರಶ್ನೆಗೆ ಉತ್ತರ

★

೫

ಶ್ರೀ. ವಸಂತ ಬೆಟಗೇರಿ, ಬೆಳಗಾಂವಿ

೧. ವಿಶ್ವಶಾಂತಿಗೆ ಅಹಿಂಸೆಯು ತಳಹದಿಯಾಗಬಲ್ಲದೆ?

ಉತ್ತರ: ಆಗಬಲ್ಲದು—ಎಂದು ನಾನು ಹೇಳುವುದನ್ನು ನೀವು ಕೇಳುವುದರಿಂದ ಆಗುವುದೇನು? ಜೀವನವನ್ನೇ ಅಹಿಂಸೆಯ ಪ್ರಚಾರಕ್ಕಾಗಿ ಮುಡಿಪಾಗಿ ಇಟ್ಟ ಮಹಾತ್ಮಾಜಿ, ಮಾನವನ ಹಿಂಸಾವೃತ್ತಿಗೆ ಬಲಿಯಾಗಬೇಕಾಯಿತು. ಮಹಾತ್ಮರ ಅಹಿಂಸೆಯನ್ನು ಹೊಗಳಿ-ಹಾಡುತ್ತಲೇ ಜಗತ್ತಿನಲ್ಲಿಯ ಮಹಾ ಮಹಾ ರಾಷ್ಟ್ರಗಳು ಇಂದು ಹಿಂಸೆಯ ಸಿದ್ಧತೆಗಳನ್ನು ಎಡೆಬಿಡದೆ ನಡೆಸಿವೆ.

೨. ಸಾಹಿತ್ಯದಿಂದ ಜನಜೀವನದ ಏಳಿಗೆಯೊ? ಜನಜೀವನದಿಂದ ಸಾಹಿತ್ಯದ ಏಳಿಗೆಯೊ?

ಉತ್ತರ: ಬೀಜದಿಂದ ಮರವೊ? ಮರದಿಂದ ಬೀಜವೊ? ಜನಜೀವನ ಮರವಿದ್ದಂತೆ; ಸಾಹಿತ್ಯ ಬೀಜವಿದ್ದಂತೆ. ಒಂದರಿಂದ ಇನ್ನೊಂದು ಏಳಿಗೆ ಪಡೆಯುವುದು.

೬

ಶ್ರೀ. ಮೋಹನದಾಸ ಎಸ್. ಉಡುಪಿ

ನಿಮ್ಮ ಹದಿನೆಂಟು ಪ್ರಶ್ನೆಗಳ ದೊಡ್ಡ ಪಟ್ಟಿ ತಲ್ಪಿದೆ. ಧನ್ಯವಾದಗಳು. ನಿಮ್ಮ ಪ್ರಶ್ನೆಗಳನ್ನು ನೋಡಿದರೆ, ನಾವೇನಾದರೂ ಅವುಗಳಿಗೆ ಉತ್ತರ ಬರೆದರೆ ಅವುಗಳ ಅರ್ಥ ಕೂಡ ತಿಳಿಯದಷ್ಟು ಎಳೆಯ ವಯಸ್ಸಿನವರೋ, ಬಲಿಯದ ಬುದ್ಧಿಯವರೋ, ಇರುವಿ-

ಮನೋಹರ ಗ್ರಂಥಮಾಲೆ, ಧಾರವಾಡ.

೧೫ ವರ್ಷಗಳಿಂದಲೂ ಹೊರಡುತ್ತಲಿದ್ದು, ಈಗಾಗಲೇ ೯೦ ಕ್ಕಿಂತ ಹೆಚ್ಚಿಗೆ ಕಥೆ-ಕಾದಂಬರಿ-ನಾಟಕಗಳನ್ನು ಬೆಳಕಿಗೆ ತಂದಿದೆ.

ಇದೀಗ ಹೊರಬಿದ್ದಿರುವವು

ನೇಣುಮಾವ — ಬಹುಮಾನ ಪಡೆದ ಬರೆಹಗಳು

— ಮುನಿಯನ ಮಾದರಿ

ವಾ. ಚಂ. ಸ್ಥಳಿಕರಿಗೆ ರೂ. ೫—೮—೦
ಪರಸ್ಥಳದವರಿಗೆ ರೂ. ೬—೮—೦

ರಿಂದು ಎನಿಸುತ್ತದೆ. ಆದುದರಿಂದಲೆ ಉತ್ತರ ಕೊಡುವ ತೊಂದರೆಯಲ್ಲಿ ನಾವು ಬೀಳುವುದಿಲ್ಲ. ಆದರೆ ನಿಮ್ಮ ಪ್ರಶ್ನೆಗಳ ಮಾದರಿ ಜನಕ್ಕೆ ಗೊತ್ತಾಗಲೆಂದು, ಕೆಲವನ್ನು ಇಲ್ಲಿ ಉದ್ಧರಿಸಿ ಕೊಡಲಾಗಿದೆ:

ಪ್ರ: ೩. ಈಗೀಗ ಹಲವಾರು ಸ್ತ್ರೀಯರಿಗೆ ೩೦ ವರ್ಷದ ತನಕವೂ ವಿವಾಹವಾಗದೆ ಇರುವ ಕಾರಣವೇನು?

೧೧. ಇತ್ತೀಚೆಗೆ ಮಂಗಳೂರಿನ ಎರಡು ಮಾಸಪತ್ರಿಕೆಯು ಇನ್ನುಮುಂದೆ ಹೊರಡುವುದಿಲ್ಲವಂತೆ. ಇದು ನಿಜವೆ?

೧೨. ತಮ್ಮ ಸಂಚಿಕೆಯು 'ಜಯಂತಿ' ಎಂದು. ಆದರೆ ಇದು ಸ್ತ್ರೀಯರ ನಾಮವಾದ್ದರಿಂದ, ಇದಕ್ಕೆ ಸ್ತ್ರೀಯರೇ ಸಂಪಾದಕಿಯರಾಗಬೇಕಿತ್ತು. ಈ ತಮ್ಮ 'ಜಯಂತಿ' ಯನ್ನು ತೆಗೆದು 'ಜಯಂತ'ನೆಂದು ಇಡಬಾರದೆ?

೧೪. ನಾನು ಒಬ್ಬ ಹೈಸ್ಕೂಲ್ ವಿದ್ಯಾರ್ಥಿ. ತಾವು ಯಾವ ಸ್ಕೂಲು ವಿದ್ಯಾರ್ಥಿ?

೧೫. ನಾನು ಜಲಚ್ಚಿತ್ರ ನೋಡುವುದರಲ್ಲಿ ರಸಿಕ. ತಾವು?

೧೮. ನನಗೆ ಒಂದು ಮಾಸಪತ್ರಿಕೆಯ ಸಂಪಾದಕನಾಗಲು ಆತುರ ಇರುವುದು. ಅದಕ್ಕೆ ತಮ್ಮ ಸಮ್ಮತವಿರುವುದೆ?

೭

ಶ್ರೀ. ಆರ್. ವಿಠ್ಠಲರಾವ್, ಧಾರವಾಡ

೧. ಈ ಸಂಸಾರವು 'ನೀರಿನ ಮೇಲಿನ ಗುಳ್ಳೆಯ ಹಾಗೆ' ಎಂಬುದು ಮಾನವನಿಗೆ ಗೊತ್ತಿದ್ದರೂ ಕೂಡ, ಅವನು ಈ ಕ್ಷಣ ಭಂಗುರವಾದ ಸಂಸಾರ ನೌಕೆಯನ್ನು ಆದರ, ಪ್ರೀತಿ, ತಲ್ಲೀನತೆಗಳ ದೃಷ್ಟಿಯಿಂದೇಕೆ ನೋಡುವನು?

ಉತ್ತರ: ಮಾನವನಿಗೆ ಹಾಗೆ ಗೊತ್ತಾಗಿದೆಯೆಂದು ಯಾರು ಹೇಳಿದರು? ಗೊತ್ತಾಗಿದ್ದರೆ ಅಂತಹ ಮಾನವರಾರೂ ಬದುಕಿ ಉಳಿಯುವ ತೊಂದರೆಯನ್ನೆ ತೆಗೆದುಕೊಳ್ಳುತ್ತಿರಲಿಲ್ಲ.

೨. ಈ ಪೃಥ್ವಿಗೆ ಆಗಸವು ಯಾವ ಪ್ರಕಾರವಾಗಿ ಹೊದಿಕೆಯಾಗಿರುವುದೊ, ಅದೇ ಪ್ರಕಾರ ನಾವು ಸ್ವರ್ಗವೆಂದು ಕರೆಯುವ ಮೇಲಿನ ಲೋಕಕ್ಕೆ ಆಗಸದ ಹೊದಿಕೆ ಇರುವುದೊ? ಅಲ್ಲಿ ಏನಿರುವುದೆಂದು ನಿಮ್ಮ ಕಲ್ಪನೆಗೆ ನಿಲುಕುವುದು?

ಉತ್ತರ:— ನೀವು ಪ್ರಶ್ನೆಗಳನ್ನು ಬರೆದ ಪಳಗಿದ ಕೈಬರೆಹವನ್ನು ನೋಡಿದರೆ, ನೀವು ಪಾಠಶಾಲೆಗೆ ಹೋಗಿ ಶಿಕ್ಷಣ ಪಡೆದವರೆಂದು ತೋರುತ್ತದೆ. ಆದರೆ ವಿಜ್ಞಾನದ ಪ್ರಾಥಮಿಕ ಪಾಠಗಳನ್ನು ಓದಿದವನೂ ಇಂತಹ ಪ್ರಶ್ನೆಗಳನ್ನು ಕೇಳಲಾರನಾದುದರಿಂದ, ನೀವು ಪಾಠಶಾಲೆಯ ಮುಖವನ್ನೇ ಕಂಡಿರಲಾರಿರೆಂದು ತೋರುತ್ತದೆ. ಪಾಪ! ಈ ಪ್ರಶ್ನೆಗೆ ಉತ್ತರವನ್ನು ನಿಮ್ಮ ಮನೆಗೆ ಸತ್ಯನಾರಾಯಣನ ಪೂಜೆ ಮಾಡಿಸಲು ಬರುವ ಪುರೋಹಿತರನ್ನು ಕೇಳಿ ತಿಳಿದುಕೊಳ್ಳಿರಿ.

ದೀಪಾವಳಿಯ ಸಾಹಿತ್ಯದೂಟ

'ಜಯಂತಿ'ಯ ವಿಶೇಷ ಸಂಚಿಕೆ

ನಿಮ್ಮ ನಿಮ್ಮ ಪ್ರಿಯ ಜನರಿಗೆ ಹಬ್ಬದ ಒಲುವಿನ ಕಾಣಿಕೆಯೆಂದು ಈ ವಿಶೇಷ ಸಂಚಿಕೆ ಸಲ್ಲಿಸಿದರೆ ಎಷ್ಟು ಆನಂದ!

ಈ ಸಂಚಿಕೆಯಲ್ಲಿ

ಶ್ರೀಯುತರುಗಳಾದ ದ. ರಾ. ಬೇಂದ್ರೆ, ವಿ. ಕೃ. ಗೋಕಾಕ, ಕೊ. ಶಿ. ಕಾರಂತ, ರಂ. ಶ್ರೀ. ಮುಗಳಿ, ಕೆ. ಎ. ಎಸ್. ರಾವ, ಎನ್. ಕೆ. ಕುಲಕರ್ಣಿ, ಆರ್. ವಿ. ಕುಲಕರ್ಣಿ, ಮಿರ್ಜಿ ಅಣ್ಣಾರಾಯರು, ವರಗಿರಿ, ಎಸ್. ಕೆ. ಐರಣಿ, ಬಿ. ಜಿ. ಕುಲಕರ್ಣಿ, ಮುಂತಾದ ನುರಿತ ಸಾಹಿತ್ಯಿಕರ ಲಲಿತ ಲೇಖನಗಳು, ಕವನಗಳು, ಲೇಖನ-ಪ್ರಬಂಧಗಳು ಬರಲಿವೆ.

ಸುಂದರ ಚಿತ್ರಗಳು! ಬಣ್ಣ ಬಣ್ಣದ ಮುದ್ರಣ!

ಏಜೆಂಟರು ಹೆಚ್ಚಿನ ಪ್ರತಿಗಳು ಬೇಕಾದಲ್ಲಿ ಕೂಡಲೆ ಬರೆಯಬೇಕು.

ಜಾಹೀರಾತುದಾರರು ಸಪ್ಟಂಬರ್ ೨೫ ತಾರೀಖಿನೊಳಗಾಗಿ ಜಾಹೀರಾತು ಕಳಿಸಬೇಕು!

ಸಂಚಿಕೆಯ ಬೆಲೆ ೦—೧೨—೦ ಆಣೆ.

'ಕಾಶ್ಮೀರ ಫಿಲ್ಮ್'ದ

ಅಹಿಂಸಾ

ಬೇಗನೆ ಬರಲಿದೆ.

೧೯೪೨ ರ ಕ್ವಿಟ್ ಇಂಡಿಯಾ ಚಳುವಳಿ, ಅದರಲ್ಲಿ ಧುಮುಕಿ ಅಹಿಂಸಾ ತತ್ತ್ವಕ್ಕಾಗಿ ಪ್ರಾಣಾರ್ಪಣ ಮಾಡಲು ಕೂಡ ಸಿದ್ಧನಾದ ಪ್ರೊ. ವಿದ್ಯಾಸಾಗರ, ಪೋಲೀಸರಿಂದ ಅವನನ್ನು ಬಿಡಿಸಲು ಹವಣಿಸಿದ ವಿದ್ಯಾರ್ಥಿ ಭೂಷಣ ಹಾಗು ಶೇಖರರು! ಇಂತಹ ಹಲವು ರೋಮಾಂಚಕಾರಕ ಘಟನೆಗಳು ಕಣ್ಣು ಮುಂದೆ ಪ್ರತ್ಯಕ್ಷ ನಡೆಯುವುದನ್ನು ನೋಡಿರಿ.

ಈಗ ನಡೆದಿರುವ ಚಿತ್ರ—

— ಮಿಠಿಕೆ ಖಿಲೋನೆ —

ರೀಗಲ್ ಚಿತ್ರಮಂದಿರ

ಧಾರವಾಡ

೫೫ ವರ್ಷಗಳಿಂದ ಅನುಭವಪಟ್ಟ

ಕರ್ಕ್ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೪-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವದು.

ವಿಳಾಸ:—

ಗಣೇಶ ರಾಮಚಂದ್ರ ಕರ್ಕ್ ಮತ್ತು ಕಂಪನಿ

ಗಿರಗಾಂವ, ಮುಂಬಯಿ.

ಹಳ್ಳಿ ಪಟ್ಟಣಗಳಲ್ಲಿ, ಬೀದಿ ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ★ ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು

ಅರವಿಂದ ಪಬ್ಲಿಸಿಟಿ ಆ್ಯಂಡ್ ಹೇಂಟಿಂಗ್ ವರ್ಕ್ಸ್

ಗಾಂಧಿಚೌಕ, ಧಾರವಾಡ.

"ಇಲ್ಲಿ ಶಾಸ್ತ್ರ ಹೇಳುತ್ತೇವೆ"

(ಸಣ್ಣ ಕಥೆ)

ಶ್ರೀ. ಎ. ಎಸ್. ರಾಮಕೃಷ್ಣ, ಬೆಂಗಳೂರು

★

ಅನಂತಯ್ಯ ಧ್ಯೇಯವಾದಿಯಾಗಿ ಸಜ್ಜನಿಕೆಯಿಂದ ಬಾಳಬೇಕೆಂದರೆ, ಲೋಕ ಹಾಗೆ ಬಾಳಗೊಡಲಿಲ್ಲ. ಮೋಸದ ವೇಷಹಾಕಿದಾಗ, ಲೋಕ ಅವನ ಕಾಲು ಬೀಳುತ್ತ ಬಂದಿತು; ಅವನನ್ನು ಸುಖದ ಸಾಗರದಲ್ಲಿ ಜೆಲ್ಲಿತು. 'ಮೋಸಾ ನನಗ್ ಮಾಡಂತ ಬೇಡ್ತಾದ್ ಜಗತ್ತು!'

★

ಅದೇನು ಅಷ್ಟೊಂದು ಮುಖ್ಯವಾದ ಬೀದಿಯಲ್ಲ. ಅದರೆ ಗಲ್ಲಿನ್ನುವಷ್ಟು ಹೊಲಸಲ್ಲ. ಆಟದ ಬಯಲಿಗೆ ಟಾರುರಸ್ತೆಯ ಮೂಲಕ ಹೋಗುವುದೆಂದರೆ ದಾರಿ ಕೊಂಚ ಬಳಸಾಗುತ್ತದೆ. ಈ ಕ್ಕ ಅಡ್ಡರಸ್ತೆಗೆ ತಿರುಗಿದರೆ ಬೇಗನೆ ತಲುಪಬಹುದು. ಅಂತೆಯೇ ಸ್ವಾಮಿ ಮತ್ತು ಅವನ ಗೆಳೆಯ ವಾಸು—ಆ ಮಾತು ಈ ಮಾತು ಆಡುತ್ತ— ಆ ಬೀದಿಯಲ್ಲಿ ನಡೆಯುತ್ತಿದ್ದರು.

ವಾಸು ಆ ಊರಿಗೆ ಬಂದು ಬಹಳ ದಿನಗಳಾಗಿರಲಿಲ್ಲ. ಅವನು ಆ ರಸ್ತೆಯಲ್ಲಿ ಅದೇ ಮೊದಲ ಸಾರಿ ನಡೆಯುತ್ತಿದ್ದುದು. ಸಹಜವಾಗಿ ಅವನ ದೃಷ್ಟಿ ಅಕ್ಕಪಕ್ಕಗಳಿಗೆ ಹೊರಳುತ್ತಿತ್ತು. ಹೀಗೆ ಮುಂದುವರಿಯುವಾಗ, ಒಂದು ಮನೆಯ ಗೋಡೆಯ ಮೇಲೆ ಕುಂಬಳಕಾಯಿ ಗಾತ್ರದ ಅಕ್ಷರಗಳಲ್ಲಿ ಏನೋ ಬರೆದಿದ್ದಿತು. ವಾಸುನಿಗೆ ಸ್ವಲ್ಪ ನಗು ಬಂತು. ಸ್ವಾಮಿ ಇದನ್ನು ಗಮನಿಸಿದನೆಂದು ಕಾಣುತ್ತದೆ. "ಏನೋ ಅದು ನಗ್ತಾ ಇರೋದು?"— ಎಂದು ಕೇಳಿದ.

ವಾಸು ದೃಷ್ಟಿಯನ್ನು ಆ ಬರೆಹವಿದ್ದ ಗೋಡೆಯ ಕಡೆ ಹೊರಳಿಸಿದ. ಸ್ವಾಮಿ ನಸುನಗುತ್ತಾ ಕೊಂಚ ನಿಧಾನವಾಗಿ ಹೇಳಿದ—"ನಮ್ಮೂರ ವೈಶಿಷ್ಟ್ಯಗಳಲ್ಲಿ ಅದೂ ಒಂದು ಕಣೋ!"

ಗೆಳೆಯರಿಬ್ಬರೂ ಆ ಮನೆಯನ್ನು ದಾಟಿ ಹತ್ತು ಹೆಜ್ಜೆ ಮುಂದೆ ಹೋಗುವುದರೊಳಗೆ, ಯಾರೋ ಹಿಂದಿನಿಂದ ವಾಸುವನ್ನು ಸಂಬೋಧಿಸಿ ಕರೆದುದು ಕೇಳಿಸಿತು. ವಾಸು ಥಟ್ಟನೆ ಹಿಂದಿರುಗಿ ನೋಡಿದಾಗ, ಆ ಮನೆಯ ಹೊಸ್ತಿಲ ಮೇಲೆ ನಿಂತಿದ್ದ ಅನಂತಯ್ಯ ಮತ್ತೊಮ್ಮೆ ಕೂಗಿಯಾಗಿತ್ತು. ವಾಸುವನ್ನು ನೋಡಿ "ಏನಯ್ಯಾ, ಯಾವತ್ತು ಬಂದೆ? ಇಲ್ಲಿ ಯಾರಿದ್ದಾರೆ? ಇವರು ಯಾರು?"— ಎಂದು ಪ್ರಶ್ನೆಗಳ ಸುರಿಮಳೆ ಸುರಿಸಿದರು. ವಾಸು ಇನ್ನೂ ಎಚ್ಚರು ತಪ್ಪಿದ ಸ್ಥಿತಿಯಲ್ಲೇ ಇದ್ದ. ನಾಲ್ಕು ವರ್ಷಗಳ ಹಿಂದೆ ಊರು ಬಿಟ್ಟು ಬಂದ ಅನಂತಯ್ಯನವರನ್ನು ಹೀಗೆ ಹಠಾತ್ತಾಗಿ ನೋಡಿದ ಅವನಿಗೆ ದಿಗ್ಭ್ರಮೆಯಾಗಿರಬೇಕು. ಸ್ವಾಮಿಗೂ ಏನೊಂದೂ ಅರ್ಥವಾಗಲಿಲ್ಲ.

ವಾಸು 'ಹಾ-ಹೂ' ಎಂದು ಮಾತು ಪ್ರಾರಂಭಿಸುವುದರಲ್ಲಿ, ಅನಂತಯ್ಯನವರು ಅವನ ಕೈ ಹಿಡಿದು "ಬಾರಯ್ಯ, ಇದೇ ನಮ್ಮ ಮನೆ"— ಎಂದು ಅವನನ್ನು ಹಿಂದಿರುಗಿಸಿಬಿಟ್ಟರು. ಸ್ವಾಮಿಗೂ ಒತ್ತಾಯದ ಸ್ವಾಗತ ದೊರೆಯಿತು. "ನಮ್ಮ ಹುಡುಗ ಸ್ವಾಮೀ, ನಾಲ್ಕು ಕಾಲವಾದರೂ ಎರಡಕ್ಷರ ಹೇಳಿಕೊಟ್ಟಿದ್ದೇನೆ" ಎನ್ನುತ್ತಾ, ಅನಂತಯ್ಯ ಗೆಳೆಯರಿಬ್ಬರನ್ನೂ ಮನೆಯೊಳಗೆ ಕರೆದೊಯ್ದರು. ಸ್ವಾಮಿಯ ಯೋಚನೆ ಕ್ರಿಕೆಟ್ಟಿನ ಮೇಲಿದ್ದರೂ, ಅಸಮ್ಮತಿ ಸೂಚಿಸಲು ಅವನಿಗೆ ಬಾಯಿ ಬರಲಿಲ್ಲ.

ಅದೊಂದು ಸಾಮಾನ್ಯವಾದ ಮನೆ. ಮುಂದುಗಡೆ ಜೆನ್ನಾಗಿ ಸಾರಿಸಿ ರಂಗೋಲಿ ಹಾಕಿದ್ದರು. ಕಾವಿ ಬಳಿದಿದ್ದ ಆ ಬಾಗಿಲನ್ನು ದೂಡಿದಾಗ, ಅದು ಕಿರ್ರೆಂದು ಹಿಂದೆ ಸರಿಯಿತು. ಒಳಗೆ ಒಂದು ಹಾಲು. ಹಾಲಿನ ಪಕ್ಕನಲ್ಲಿ ಒಂದು ಕೋಣೆ. ಗೆಳೆಯರಿಬ್ಬರೂ ಬೂಟು ಕಳಚುತ್ತಿರುವಾಗ ಅನಂತಯ್ಯ 'ಈ ಕಡೆ ಬನ್ನಿ' ಎಂದು ಕರೆಯುತ್ತಿದ್ದರು. ಇಬ್ಬರೂ ಒಳಹೊಕ್ಕು ಹಾಸಿದ್ದ ಜಮಖಾನದ ಮೇಲೆ ಕುಳಿತುಕೊಂಡರು.

ಇತ್ತೀಚೆಗೆ ಬೆಳೆದಿದ್ದ ತಮ್ಮ ಸ್ಥೂಲ ಶರೀರವನ್ನು ಹೊತ್ತುಕೊಂಡು, ಅನಂತಯ್ಯ ಬಹಳ ಸಂಭ್ರಮದಿಂದ ಮನೆಯೊಳಗೆಲ್ಲ ಓಡಾಡಿದರು. ಉಕ್ಕಿ ಬರುವ ಉತ್ಸಾಹ-ಪ್ರಸನ್ನಮುಖದ ಇಂದಿನ ಅನಂತಯ್ಯ, ತಾನು ಕಂಡ ಮೊದಲಿನ ಅನಂತಯ್ಯನಾಗಿ ಕಾಣಲಿಲ್ಲ ವಾಸುವಿಗೆ.

ಅನಂತಯ್ಯ ಇಬ್ಬರನ್ನೂ ಕುಳ್ಳಿರಿಸಿ, ಅಡುಗೆಮನೆಗೆ ನಡೆದಿದ್ದರು.

ಕೋಣೆಯ ಗೋಡೆಗಳ ಮೇಲೆಲ್ಲ ಪಟಗಳನ್ನು ತೂಗು ಹಾಕಿತ್ತು. ತಗ್ಗಾದ ಮನೆಯಾದರೂ ಸುತ್ತುಮುತ್ತಲೂ ಸ್ವಚ್ಛತೆ ಎದ್ದು ಕಾಣುತ್ತಿತ್ತು. ಎಲ್ಲ ವಸ್ತುಗಳನ್ನೂ ಓರಣವಾಗಿರಿಸಿದ್ದರು. ಒಂದು ಪಕ್ಕದಲ್ಲಿ ವ್ಯಾಸಪೀಠದ ಮೇಲೆ ದಪ್ಪದಪ್ಪ ಗ್ರಂಥಗಳೂ, ಓಲೆಗರಿಯ ಪುಸ್ತಕಗಳೂ ಇದ್ದುವು. ಅಲ್ಲೇ ಕೃಷ್ಣಾಜಿನ ಹಾಸಿತ್ತು. ನಿಷ್ಠಾವಂತರ ವಸತಿಯ ಒಂದು ಮಧುರ ವಾತಾವರಣ ಅಲ್ಲಿ ನೆಲಸಿತ್ತು.

ಗೆಳೆಯರಿಬ್ಬರೂ ಒಬ್ಬರನ್ನೊಬ್ಬರು ನೋಡಿ ನಸುನಕ್ಕರು. "ಯಾರೋ ಇದು?"— ಎಂದ ಸ್ವಾಮಿ "ನಮ್ಮೂರ ಹತ್ತಿರ ಹಳ್ಳಿಯಲ್ಲಿದ್ದರು ಕಣೋ, ನಮ್ಮ ಮನೆಯಲ್ಲಿ ಹುಡುಗರಿಗೆಲ್ಲ ಮನೆ ಮೇಷ್ಟರಾಗಿದ್ದರು— ನನಗೂ ಕೂಡ!....ಬಹಳ ವರ್ಷಗಳಿಂದ, ಅವರಿದ್ದ ಹಳ್ಳಿಯ ಸ್ಕೈಮರಿ ಸ್ಕೂಲಿನಲ್ಲೂ ಕಲಿಸುತ್ತಿದ್ದರು...."

ಅನಂತಯ್ಯ ಬಂದರು. ವಾಸುವಿನ ಮನೆಯವರನ್ನೆಲ್ಲ ಕುರಿತು ವಿಚಾರಿಸಿದರು. ವಾಸುವಿನ ಹಿರಿಯರೊಡನೆ ಬಹುಕಾಲದಿಂದ ಇದ್ದ ಬಳಕೆ, ಗಾಢವಾದ ಸ್ನೇಹ—ಇವುಗಳನ್ನು ಕುರಿತು ಬಾಯಿ ತುಂಬ ಮಾತೆನಾಡಿದರು.

"ನೀವು ನಮ್ಮೂರು ಬಿಟ್ಟ ಮೇಲೆ ನಿಮ್ಮ ಸಮಾಚಾರವೇ ತಿಳಿದಿರಲಿಲ್ಲ"— ಎಂದು ವಾಸು ಮಾತೆತ್ತಿದ.

"ಅದನ್ನೆಲ್ಲ ಹೇಳುವುದೆಂದರೆ ಒಂದು ಕಂತೆ ಪುರಾಣವಾಗು ನಾನು ಎಣಿಸದಿದ್ದುದೆಲ್ಲ ಆಗಿ ಹೋಯಿತು ಮಗೂ. ಒಳ್ಳೆ ದಕ್ಕೋ ಕೆಟ್ಟುದಕ್ಕೊ—ಅಂತೂ ನನ್ನ ಜೀವನದಲ್ಲಿ ಪೂರ್ತಿ ಲಾವಣಿಯಾಗಿರುವುದೊಂದು ಗೊತ್ತು!" ಎಂದರು ಅನಂತ

ಅಷ್ಟರಲ್ಲಿ ಬಾಳೆಯೆಲೆಯ ಸರಗಳಲ್ಲಿ ಉಪ್ಪಿಟ್ಟು ಬಂದು ಗೆಳ ಮುಂದೆ ಕೂತಿತು. ಅನಂತಯ್ಯನವರೇ ಲೋಟಾಗಳಿಗೆ ಬಸಿದರು. "ತಗೋ ವಾಸು, ತಗೊಳ್ಳಿ ಸ್ವಾಮೀ" ಎಂದು ಚಾರವಾಯಿತು. ಇಬ್ಬರೂ ಉಪಾಹಾರ ಮುಗಿಸಿ ಬಹಳ ಹೊ ಗಿರಲಿಲ್ಲ. ಆದರೂ ಒಲ್ಲೆನೆನ್ನಲಾರದೆ ತಿನ್ನತೊಡಗಿದರು. ಆ ಹಾರ ತಂದವಳು ಅನಂತಯ್ಯನವರ ಮಗಳು ಶಶಿಯೆಂದು ತಲೆಯೆತ್ತಿದ್ದ; ಆದರೆ ಅವನ ಎಣಿಕೆ ತಪ್ಪಾಗಿತ್ತು. ನಾಚಿ ತಗ್ಗಿಸಿದ.

ಉಪಾಹಾರ ಮುಗಿದ ಮೇಲೆ, ವಾಸು ಸೂಚಿಸಿದ ಸ್ವಾಮಿ ಅನಂತಯ್ಯನವರನ್ನು ಬೀಳ್ಕೊಂಡು, ಆಟದ ಬ ನಡೆದ. ಅನಂತಯ್ಯ, ತಾವು ಊರು ಬಿಟ್ಟು ಹೊರಟ ಅನುಭವಿಸಿದುವನ್ನು ವಾಸುವಿಗೆ ವಿವರಿಸತೊಡಗಿದರು. ಆಗ ಮಾತಿನಲ್ಲಿ ಒಂದು ಗಂಭೀರತೆ ಬಂದಿತ್ತು. ವಾಸು ಸ ಕೇಳುತ್ತಿದ್ದ:

ಗದುಗಿನಲ್ಲಿ

ಮೇಲ್ತರಗತಿಯ ಊಟ ಹಾಗೂ ವಸತಿಗೃಹ

ದುರ್ಗಾ ಲಾಜ್

ಗದುಗಿಗೆ ಬರುವ ಪ್ರವಾಸಿಕರಿಗೆ ಇನ್ನು ಮೇಲೆ
ಯಾವ ತೊಂದರೆಯೂ ಇಲ್ಲ.

ಉತ್ತಮ ಊಟ, ಹೊಸಮಾದರಿಯ ಸ್ನಾನಗೃಹ, ಬೆಳಕು—ಹವೆಯುಳ್ಳ
ಕೋಣೆಗಳು. ಸಹಕುಟುಂಬ ಬಂದವರಿಗೆ ಪ್ರತ್ಯೇಕ ವ್ಯವಸ್ಥೆ.

ನಾವು ನೀಡುವ ಸೌಕರ್ಯಕ್ಕೆ ನೀವು ಕೊಡುವ ಬೆಲೆ ಅತ್ಯಲ್ಪ!
ಅವಶ್ಯ ಸಂದರ್ಶಿಸಿರಿ.

.....ಆ ಊರಿನಲ್ಲಿ, ಉಳಿದವರೆಲ್ಲ ಗಂಡುಮಕ್ಕಳಿಗೆ ಹತ್ತು ಹನ್ನೆಂದು ವಯಸ್ಸಾದೊಡನೆ ಮೈಸೂರು ದೇಶಕ್ಕೆ ಹೋಟಲು ಕೆಲಸಕ್ಕೆಂದು ಕಳುಹಿಸಿದರೆ, ಅನಂತಯ್ಯನವರ ತಂದೆ ಅವರನ್ನು ಮೈನೆಯ ತರಗತಿಗಿಂತಲೂ ಮುಂದಕ್ಕೆ ಓದಿಸಿದರು. ಹೈಸ್ಕೂಲು ವಿದ್ಯಾಭ್ಯಾಸ ಕೊಡಿಸಲಾಗದಿದ್ದರೂ ಟ್ರೈನಿಂಗ್ ಮುಗಿಸಿ ಫರ್ಸ್ಟ್‌ಗ್ರೇಡ್ ಉಪಾಧ್ಯಾಯನಾಗಿ, ಮಗ ತಮ್ಮೂರು ಶಾಲೆಯಲ್ಲಿ ಶಿಕ್ಷಕನಾದಾಗ, ಮುದುಕ ತಂದೆಯ ಸಂತೋಷ ಹೇಳಿ ತೀರದು. ಒಳ್ಳೆಯ ನಂಟಸ್ತಿಕೆ ನೋಡಿ ಮಗನಿಗೆ ಲಗ್ನ ಮಾಡಿಸಿದರು; ಆದರೆ ಮೊಮ್ಮಗನನ್ನು ನೋಡುವ ಆಶೆ ಈಡೇರುವ ಮುಂಚೆಯೇ—ಮೊಮ್ಮಗಳನ್ನು ಕೂಡ ನೋಡದೆ—ತಂದೆ ಕಣ್ಣು ಮುಚ್ಚಿದರು. ಅನಂತಯ್ಯನವರ ಹೆಗಲ ಮೇಲೆ ಸಂಸಾರದ ಜವಾಬ್ದಾರಿ ಬಿತ್ತು. ಆಗ ಅವರ ಜೀವನಸಂಗ್ರಾಮ ಪ್ರಾರಂಭವಾಯಿತು.

ಪಾಸಗೀ ಶಾಲೆಯ ಶಿಕ್ಷಕನ ಶಲಬು ಹೆಸರಿಸಲು ನಾಚುವಂತಹದು. ಅದರಲ್ಲಿಯೇ ಅನಂತಯ್ಯನವರ ಸಂಸಾರ ಸಾಗಬೇಕು. ಮಾರಾಧನೆಗಳಲ್ಲಿ ಅಡಿಗೆ ಕೆಲಸಕ್ಕೆ ಹೋಗಿ ಜೀವಿಸಬೇಕಾಗಿದ್ದ ಅವರ ತಂದೆ, ಭೂಮಿ ಕಾಣಿ ಏನೂ ಮಾಡಿರಲಿಲ್ಲ. ಅನಂತಯ್ಯನವರ ಹೆಂಡತಿಗೋ ಸದಾ ಕಾಹಿಲೆ. ಔಷಧಿಗಾಗಿಯೇ ತುಂಬ ಖರ್ಚವಾಗುತ್ತಿತ್ತು. ಆದರೂ ಅನಂತಯ್ಯ ಗೊಣಗಲಿಲ್ಲ. ನಾಲ್ಕು ಮೈಲಿ ದೂರದ ಪಟ್ಟಣಕ್ಕೆ ಹೋಗಿ, ಎರಡು ಮೂರು ಮನೆಯ ಮಕ್ಕಳಿಗೆ ಪಾಠ ಹೇಳತೊಡಗಿದರು. ಅವುಗಳಲ್ಲಿ ವಾಸುವಿನ ಮನೆಯೂ ಒಂದು. ಸಾಯಂಕಾಲ ತಮ್ಮ ಶಾಲೆಯ ಕೆಲಸ ಮುಗಿದ ಮೇಲೆ ಪೇಟೆಗೆ ಹೋಗಿ ಪಾಠಹೇಳಿ ಹಿಂದಿರುಗುವಾಗ, ಹೊತ್ತು ರಾತ್ರಿಯಾಗುತ್ತಿತ್ತು. ಇಷ್ಟು ಶ್ರಮಪಡದಿದ್ದರೆ ಅವರೆನ್ನುತ್ತಿದ್ದಂತೆ 'ಜೀವನ ಮರ್ಯಾದೆಯಿಂದ ಸಾಗುವಹಾಗಿರಲಿಲ್ಲ.'

ಎರಡನೆಯ ಹೆರಿಗೆಯಲ್ಲಿ ಅನಂತಯ್ಯನವರ ಹೆಂಡತಿ ತೀರಿಕೊಂಡಾಗ, ಅವರ ಮೊದಲ ಮಗು—ಶಶಿಗೆ ನಾಲ್ಕು ವರ್ಷ ತುಂಬಿದ್ದು. ಅವರ ಅತ್ತೆ ಮನೆಯಲ್ಲಿದ್ದುದರಿಂದ, ಮಗುವಿನ ಕೈಮೈ ತೊಳೆದುಕೊಳ್ಳುವ ಭಾರ ಅನಂತಯ್ಯನವರ ಮೇಲೆ ಬೀಳಲಿಲ್ಲ. ತರೂ ಅವರಿಗೆ ತಮ್ಮ ಸಂಸಾರಸುಖ ಒಂದು ರೀತಿಯಿಂದ ಮುಗಿದಂತೆ ಕಂಡಿತು. ಆಗ ಅವರಿಗಿನ್ನೂ ೨೫ ವಯಸ್ಸು. ಹೆಣ್ಣು ಕೊಡಲು ಕೆಲವರು ಮುಂದೆ ಬಂದರು; ಆದರೆ ಅನಂತಯ್ಯನವರ ನಿರ್ಧಾರ ನಿಶ್ಚಲವಾಗಿತ್ತು,

ಚರಖಾ, ಖಾದಿ, ಹರಿಜನ ಸೇವೆ, ಶಾಲೆಯಲ್ಲಿ ವೃತ್ತಿಶಿಕ್ಷಣ—ಇದೆಲ್ಲ ತಲೆಗೆ ಹಚ್ಚಿಕೊಂಡು, ಒಳಗೆ ಕೊರೆಯುತ್ತಿದ್ದ ಚಿಂತೆಯನ್ನು ಅನಂತಯ್ಯ ಮರೆಮಾಡ ನೋಡಿದರು. ಮೊದ-ಮೊದಲು ಅವರಿಂದ ಪ್ರಶಂಸೆಯೂ ದೊರೆಯಿತು. ಆದರೆ ಕಾಸು ಕೈ ಸೇರುತ್ತು; ಸಾಲವಾಯಿತು. ಕೆಲವರಿಗೆ ಅವರ ಮೇಲೆ ದ್ವೇಷಾಸೂಯೆಗಳೂ ಬೆಳೆದುವು. ಮನೆ ಮಾರಾಟವಾಗಿ ನಗ ಅಡಗುವ ಹೊತ್ತಿಗೆ, ಅವರನ್ನು ಕಂಡಾಗ ಮುಖ ಸುರುಟಿಸುವವರ ಸಂಖ್ಯೆ ದೊಡ್ಡದಾಯಿತು. ಅನಂತಯ್ಯನವರ ಬಾಲ್ಯದ ಗೆಳೆಯರು ದೊಡ್ಡ ನಗರಗಳಲ್ಲಿ ಸ್ವಂತ ಹೋಟಲುಗಳನ್ನಿಟ್ಟು— 'ಮಾಣಿ' ಗಳೆನಿಸಿಕೊಂಡಿದ್ದವರು ಧನಿಕರಾಗಿ—ಸರ್ಜಕೋಟು, ಉಂಗುರ, ಚೈನು, ಆಸ್ತಿಪಾಸ್ತಿ, ಕಾರು-ಗೀರು ಎಂದು ಓಡಾಡತೊಡಗಿದ್ದರು. ಅದರೆ ಯಾರೋ ಪುಣ್ಯಾತ್ಮರು ಅನಂತಯ್ಯನವರ ಕಿವಿಗೆ ಊದಿ ಬಿಟ್ಟಿದ್ದರು: "ಶಿಕ್ಷಕವೃತ್ತಿ ಪವಿತ್ರವಾದುದು" ಎಂತ. ಆದ್ದರಿಂದ ಅನಂತಯ್ಯ ನೆಮ್ಮದಿಯಿಂದ ಹತ್ತೆಂಟು ವರ್ಷ ಕಳೆದರು. ಆಗ ಒಂದು ಬಿರುಗಾಳಿ ಬೀಸಿತು.

ಅನಂತಯ್ಯ ಶಿಕ್ಷಕರಾಗಿದ್ದ ಪಾಸಗೀ ಶಾಲೆಯ ವ್ಯವಸ್ಥಾಪಕರಾಗಿದ್ದ ಮಹನೀಯರು ಧನಾಢ್ಯರು, ತುಂಬ ಆಸ್ತಿವಂತರು. ಹಠಾತ್ತಾಗಿ ಅವರಿಗೆ ಕುಬೇರರಾಗುವ ಮನಸ್ಸಾಯಿತು. ಉಪಾಯವನ್ನೂ ಯಾರೋ ಹೇಳಿದರು. ಒಂದು ಧರ್ಮಾಸ್ಪತ್ರೆಯೆಂದು ಹೆಸರಿಟ್ಟು ಕಾಗದದಲ್ಲಿ ಸ್ಥಾಪಿಸಿ, ಅದಕ್ಕಾಗಿ ಒಂದು ಲಾಟರಿ ಪ್ರಾರಂಭಿಸುವುದು. ಸಾವಿರಗಟ್ಟಲೆ ಬಹುಮಾನವೆನ್ನುವುದು. ಅಚ್ಚುಕೂಟಗಳಿಗೆ ನೂರಾರು ತೆತ್ತು ಪ್ರಚಾರ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವುದು. ಉತ್ತರ ಇಂಡಿಯಾದ ಮೂಲೆಮೂಲೆಗಳಲ್ಲಿ ಪ್ರಚಾರಮಾಡುವುದು. ಟಿಕೆಟ್‌ಗಳನ್ನು ಮಾರಿಬಂದ ಹಣವನ್ನು ಟ್ರೆಜರಿಯಲ್ಲಿ ಭದ್ರಪಡಿಸಿ, ಬಹುಮಾನಪಡೆದ ನಂಬರುಗಳ ಪಟ್ಟಿಯನ್ನು ಕ್ರಮವಾಗಿ ಪ್ರಕಟಿಸುವುದು. ಟಿಕೆಟ್‌ಗಳನ್ನು

ಸುಖಕರವಾದ ವಸತಿ! .... ರುಚಿಕರವಾದ ಊಟ!

ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟ್ಯಾಂಡಿಗೆ
ಸಮೀಪ, 'ಶಕ್ತಿ ಟಾಕೀಜ್' ಹತ್ತಿರ

ಒಡೆಯರು—ಎಲ್. ಪಿ. ಮಾರಕೋಡ

ಕೊಂಡನಂತೆಲ್ಲ ತಮ್ಮ ನಂಬಿಕೆಗಳನ್ನು ಪಟ್ಟಿಯಲ್ಲಿ ಕಾಣದೆ, ತಮ್ಮ ಸರದಿ ಬಂದೇಬರುವುದೆಂಬ ನಂಬಿಕೆಯಲ್ಲಿ ಮತ್ತೂ ಮತ್ತೂ ಟಿಕೆಟ್‌ಗಳನ್ನು ಕೊಳ್ಳುತ್ತಲೇ ಇರುತ್ತಾರೆ. ಕೇಕಡಾ ನಲವತ್ತ ರಷ್ಟು ಕಮೀಶನ್ನನ್ನು ಏಜಂಟರುಗಳು ಪಡೆಯುತ್ತಲೇ ಇರುತ್ತಾರೆ.... ಸೊಗಸಾದ ಯೋಜನೆ! ಆದರೆ....

ಆದರೆ ಇದನ್ನು ಕಾರ್ಯರೂಪಕ್ಕೆ ತರಲು ಆ ಮಹನೀಯರಿಗೆ ಒಂದು ತೊಡಕು. ಅವರಿಗೆ ಇಂಗ್ಲೀಷ್‌ನಲ್ಲಿ ರುಜು ಹಾಕುವುದಕ್ಕಲ್ಲದೆ, ಕನ್ನಡದಲ್ಲಿ ಕೂಡ ನಾಲ್ಕಕ್ಷರ ಸರಿಯಾಗಿ ಬರೆಯಲು ತಿಳಿಯದು. ಕಮಲಜ ಸೃಷ್ಟಿಸುವಾಗ ತಲೆಯೊಳಗೆ ಮೆದುಳಿಡಲು ಮರೆಯದಿದ್ದರೂ, ವಿದ್ಯೆಕೊಡದ "ಸರಸ್ವತಿಯನ್ನು ಅವರು ಬೈದಾಡಿದರು." ಆದರೆ ಲಕ್ಷ್ಮಿಯ ಕೃಪೆ ಇರುವ ತನಕ ಭಯವೇಕೆ! ತಿಂಗಳಿಗೆ ಇಪ್ಪತ್ತೋ ಮೂವತ್ತೋ ಕೊಟ್ಟು ಯಾರನ್ನಾದರೂ ಈ ವ್ಯವಹಾರಕ್ಕೊಸ್ಕರವೇ ಗುಮಾಸ್ತೆಯನ್ನಾಗಿ ನೇಮಿಸಿಕೊಳ್ಳುವುದೆಂದು ಅವರು ನಿಶ್ಚಯಿಸಿದರು. ಆದರೂ ವಿದ್ಯಾವಂತರು—ಅದರಲ್ಲೂ ಅನುಭವಸ್ಥರು— ಸಿಗಬೇಕಲ್ಲ! ಬಹಳವಾಗಿ ಯೋಚಿಸಿದಾಗ, ಕೊನೆಗೆ ಆರಿಸಲು ಸಿಕ್ಕಿದುದು ಅನಂತಯ್ಯನವರೊಬ್ಬರೆ. ಬೇರೆಯವರು ಒಂದಲ್ಲ ಒಂದು ದಿವಸ ತಮಗೇ ಎರಡು ಗುಟುಕು ನೀರು ಕುಡಿಸಿಯಾರೆಂದು ಅವರಿಗೆ ಗೊತ್ತು. ಅನಂತಯ್ಯನವರಾದರೆ ಹಾಗಲ್ಲ, ನಂಬಿಗಸ್ಥಮನುಷ್ಯ. ವಂಚನೆಯೆಂದರೆ ಏನೆಂದು ತಿಳಿಯದು. ಆಲ್ಲದೆ ಮನೆ-ಮಾರು ಇಲ್ಲದ ಬಡವ. ಹೀಗೆ ದಾರಿ ತೋರಿಸಿದರೆ ಪ್ರತಿನಿತ್ಯ ಪಾಠ ಹೇಳಲು ಜೋಗಲು ಎಂಟು ಮೈಲಿ ನಡೆಯುವುದಾದರೂ ತಪ್ಪುತ್ತದೆ— ಎಂದುಕೊಂಡು, ಆ ಮಹನೀಯರು ಅನಂತಯ್ಯನನ್ನು ಉದ್ಧಾರ ಮಾಡುವ ಯೋಚನೆ ಮಾಡಿದರು. ಒಂದು ದಿನ ಸಾಯಂಕಾಲ ಅವರನ್ನು ಕಯಿರೆಸಿಕೊಂಡು ಪ್ರಸ್ತಾಪವನ್ನು ಎತ್ತಿದರು.

ಆದರೆ ಅನಂತಯ್ಯನವರು ಉದ್ಧಾರವಾಗುವ ಮಾತಿರಲಿ; ಈ ಯೋಚನೆಯನ್ನು ಖಂಡಿಸಿ ವ್ಯವಸ್ಥಾಪಕರಿಗೇ ಹಿತೋಪದೇಶ ಕೊಡುವ ಸಾಹಸಕ್ಕೆ ಕೈಹಾಕಿದರು. ಅನಂತಯ್ಯನವರನ್ನು ವ್ಯವಸ್ಥಾಪಕರು ಹೆಚ್ಚು ಬಲವಂತಮಾಡಲಿಲ್ಲ — ಮಾತ್ರವಲ್ಲದೆ ಅನರೆಂದುದಕ್ಕೆಲ್ಲ ತಲೆದೂಗಿದರು. ಆದರೆ ಒಳಗೊಳಗೇ ಹಲ್ಲು ಕಚ್ಚಿದರು. ಒಂದು ಹೆಜ್ಜೆ ತೀರ ಮುಂದೆ ಹೋಗಿದ್ದ ಅನಂತಯ್ಯ ಆಗಲೇ ಕಾಲುಜಾರಿಬಿದ್ದಿದ್ದರು. ವ್ಯವಸ್ಥಾಪಕರ ಯೋಜನೆ ಬೇರೆಯವರ ನೆರವಿನಿಂದ ಕೆಲವು ದಿನ ನಡೆಯಿತು. ಕೊನೆಗೆ ನಿಂತುಹೋಯಿತು. ಆದರೆ ಅನಂತಯ್ಯ ಅವರ ಕೋಪಕ್ಕೆ ಪಾತ್ರರಾದರು.

ಮುಂದಿನ ಕಾಲಾವಧಿಗೆ ಬೇರೆ ಉಪಾಧ್ಯಾಯರನ್ನು ಆ ಊರ ಶಾಲೆಗೆ ನೇಮಿಸುವ ಸುದ್ದಿ ಹರಡಿತು. ಅನಂತಯ್ಯ ಯಾರಗೊಡವೆಗೂ ಹೋಗದಿದ್ದರೂ, ಊರ ಮುಖಂಡರ ಅವಿಶ್ವಾಸಕ್ಕೆ ಪಾತ್ರರಾಗಿದ್ದುದರಿಂದ ದೇವಸ್ಥಾನ, ಗುರುಮನೆ, ಹರಿಸುನೆಗಳಲ್ಲೆಲ್ಲ ಪ್ರೇಷಿಸಲ್ಪಟ್ಟರು. ತಮ್ಮ ವ್ಯವಹಾರದ ಗುಟ್ಟನ್ನು ಸೊದಲೇ ಬಿಟ್ಟುಕೊಟ್ಟಿದ್ದ ವ್ಯವಸ್ಥಾಪಕರಿಗೆ ಒಳಗೊಳಗೇ ಭೀತಿಯಿದ್ದುದಕ್ಕೂ, ಅವರಿವರು ಬಂದು 'ಅನಂತಯ್ಯ ನಿಮ್ಮನ್ನು ಹೀಗಂದನು, ಹಾಗಂದನು!' ಎಂದು ತರಲೆಚುಚ್ಚುತ್ತಿದ್ದುದಕ್ಕೂ ಸರಿಹೋಯಿತು. ಊರಿನ ಮಹಂತ ಒಬ್ಬ ಬಡವನ ಮೇಲೆ ಮುನಿದರೆ, ಜನವೆಲ್ಲ ಬಲಿಷ್ಠನ ಬಾಲಹಿಡಿದು ಬಡವನ ಮೇಲೆ ಉಗುಳುವರು. ಇಲ್ಲಿಯೂ ಹಾಗೆಯೆ ನಡೆಯಿತು.

ಈ ಹೊತ್ತಿಗೆ ವಾಸುವಿನ ಮನೆಯೊಂದಲ್ಲದೆ ಉಳಿದ ಕಡೆ ಪಾಠ ಹೇಳುವುದು ನಿಂತುಹೋಗಿತ್ತು.

ಅನಂತಯ್ಯನವರ ಮಗಳು ಶಶಿಗೆ ಆಗ ಹದಿನೈದು ವಯಸ್ಸು. ಹಳ್ಳಿಯ ಪದ್ಧತಿಯಲ್ಲಾದರೆ—ಆಗಿದ್ದರೆ ಲಗ್ನವಾಗಿರಬೇಕಿತ್ತು. ಸ್ವಲ್ಪಮಟ್ಟಿಗೆ ವಿದ್ಯಾಭ್ಯಾಸ ಕೊಡಿಸಿದ್ದರು; ಆದರೆ ಚಿನ್ನ-ಬಣ್ಣಗಳು ಇರಲಿಲ್ಲ. ಅನಂತಯ್ಯ ವರಾನ್ವೇಷಣೆಗೆ ತೊಡಗಿದರು. ಮೈನೆರೆದ ಹುಡುಗಿಯನ್ನು ಯಾರು ಮದುವೆಯಾಗುತ್ತಾರೆ?— ಎನ್ನುವ ಕಹಿಮಾತು ಅಲ್ಲಲ್ಲಿ ಕೇಳಿಬಂತು.

ವಾಸುವಿನ ಮನೆಯವರಿಗೆ ಮನೆ ಮೇಸ್ಟರ ಮೇಲೆ ತುಂಬ ವಿಶ್ವಾಸವಿತ್ತು. ಅನಂತಯ್ಯ ಬಡವರೆಂದೂ ಅವರಿಗೆ ಗೊತ್ತು. ದೊಡ್ಡಮನುಷ್ಯರೆದುರಿಗೆ ತಮ್ಮ ಕಷ್ಟಗಳನ್ನೆಲ್ಲ ವಿವರಿಸುವುದು ನಾಚಿಕೆಗೇಡೆಂಬ ಭಾವನೆಯಿಂದ ಅನಂತಯ್ಯ, ವಾಸುವಿನ ತಂದೆಯ ಮುಂದೆ ಯಾವ ಪ್ರಸ್ತಾಪವನ್ನೂ ಎತ್ತಿರಲಿಲ್ಲ. ಅವರಿಂದ ಪಡೆಯಬಹುದಾಗಿದ್ದ ಹೆಜ್ಜೆಯ ಸಹಾಯವನ್ನೂ ಪಡೆಯಲಿಲ್ಲ. ತಂದೆ-ಮಗಳು ರಾಯರ ಮನೆಯ ವಿಶೇಷದಿನಗಳ ಔತಣಕ್ಕೆ ಬಂದಿದ್ದಿದೆ. ರಾಯರ ಮನೆಯ ಮಕ್ಕಳೂ ಮೇಸ್ಟರ ಮನೆಗೆ ಹೋದುದುಂಟು. ವಾಸುವನ್ನು ಕಂಡರಂತೂ ಅನಂತಯ್ಯನವರಿಗೆ ತೀರ ವಿಶ್ವಾಸ. ಹೀಗೆ ಅನಿರೀಕ್ಷಿತವಾಗಿ ಸಂಧಿಸಿದಾಗ, ತಾವು ಪಟ್ಟ ಪಾಡುಗಳನ್ನೆಲ್ಲ ಹಳೆಯ ಶಿಷ್ಯನಿಗೆ ಹೇಳಿದರು:

"ನೋಡು ವಾಸು, ಹಳ್ಳಿಗಳ ಉದ್ಧಾರಕ್ಕೆ ಹೊರಟ ಪಟ್ಟಣಿಗರು ಕೆಲವರು, ಹಳ್ಳಿಯ ಜನರೆಂದರೆ ಮುಗ್ಧರು ಕಪಟತಿಳಿಯದವರು— ಎಂದೆಲ್ಲ ಬಾಯಿತುಂಬ ಬಣ್ಣಿಸುತ್ತಾರೆ. ನಾಲ್ಕುದಿನ ಹಳ್ಳಿಗಳಲ್ಲಿ ಬಂದಿದ್ದು ಸುಖವಾಗಿ ಊಟೋಪಚಾರ ಪಡೆದು, ಪುನಃ ಪಟ್ಟಣಗಳಿಗೆ ಹಿಂದಿರುಗುವವರಿಗೆ 'ಹಳ್ಳಿಯಲ್ಲಿರುವುದೆಲ್ಲಾ ಚೆನ್ನು' ಎಂದು ಕಾಣಿಸುವುದು ಸಹಜ. ಆದರೆ ಹಳ್ಳಿಯ ಬಡವನ ಕತ್ತು ಹಳ್ಳಿಯವರೇ ಆದ ಧನಿಕರ ಕೈಯಲ್ಲಿರುವ ಸತ್ಯದ ಸ್ವರೂಪ, ಅವರಿಗೆ ತಿಳಿಯದು"— ಎಂದರು ಅನಂತಯ್ಯ. ತಮ್ಮ ಹಳ್ಳಿಯಲ್ಲಿ ಬಾಳು ದುಸ್ತರವೆನಿಸಿ, ಅಲ್ಲಸಲ್ಲದ ಅಪವಾದಗಳನ್ನು ಹೊರುವುದಕ್ಕಿಂತ ಹತ್ತಿರದ ಪೇಟೆಯಲ್ಲಾದರೂ ಹೋಗಿ ನೆಲಸುವುದು ಒಳ್ಳೆಯದೆಂದು ಅನಂತಯ್ಯ ಯೋಚಿಸಿದರು. ಕೊನೆಗೆ ಅಲ್ಲಿಯೂ ಸುಖವಿಲ್ಲವೆನಿಸಿತು. ಅವರದೆನ್ನುವ ಸೊತ್ತು ಇದ್ದುದು ಒಂದಿಷ್ಟು ಪಾತ್ರೆ-ಪರಡಿ. ಅವನ್ನೆಲ್ಲ ಆರುಮೂರು ಕಾಸಿಗೆ ಮಾರಿದರು. ಮುದುಕಿ ಅತ್ತೆ ತಮ್ಮ ಮಗಳ ಮನೆಗೆ ಹೋಗಿದ್ದರು. ಅನಂತಯ್ಯ ಶಶಿಯನ್ನು ಕರೆದುಕೊಂಡು, ಯಾರಿಗೂ ಹೇಳದೆ ಒಂದು ದಿನ ಹೊರ-

ನಿದ್ದರು; ತಮ್ಮ ಹುಟ್ಟೂರಿಗೆ ಬೆನ್ನು ಹಾಕಿದರು. ಅವರಲ್ಲಿ ತಕ್ಕ ಮಟ್ಟಿಗೆ ವಿಶ್ವಾಸವಿದ್ದ ಅವರ ಬಾಲ್ಯದ ಗೆಳೆಯರೊಬ್ಬರು, ಬೆಂಗಳೂರಲ್ಲಿ ಹೋಟಲಿಟ್ಟು ತೀರ ಯಶಸ್ವಿಯಾಗಿದ್ದರು. ಅನಂತಯ್ಯನವರಿಗೆ ಕಾಗದ ಬರೆದು ತಿಳಿಸಿದ್ದರು. ತಾತ್ಕಾಲಿಕವಾಗಿ ಅವರ ಮನೆಯಲ್ಲೇ ಬಂದು ಇಳಿದರು.

ಇನ್ನು ಯಾವ ಉದ್ಯೋಗ ಮಾಡಬೇಕೆಂಬ ಸಮಸ್ಯೆ ಮುಂದೆ ಬಂತು. ಅಲ್ಲಲ್ಲಿ ಪಾಠಹೇಳಿ ಜೀವನ ನಡೆಸೋಣವೆಂದರೆ, ಅನುಕೂಲವಾಗಿ ಮನೆಗಳೇ ಸಿಗಲಿಲ್ಲ. ಎಲ್ಲಾದರೂ ಅಂಗಡಿಗಳಲ್ಲಿ ಗುಮಾಸ್ತೆಕೆಲಸ ಮಾಡೋಣವೆಂದು, ಅದಕ್ಕಾಗಿ ದಿನಪತ್ರಿಕೆಗಳನ್ನೊಡನೆ ಓಡಾಡತೊಡಗಿದರು. ಆದರೆ ಎಲ್ಲಿಯೂ ಅನುಕೂಲವಾಗಲಿಲ್ಲ. ಅವರ ಗೆಳೆಯರು ಹೋಟಲ್‌ನಲ್ಲಿಯೇ ಇದ್ದು ಬಿಲ್ ಬರೆಯುವ ಕೆಲಸ ಮಾಡಬಹುದಲ್ಲಾ— ಎಂದು ಸೂಚಿಸಿದರು. ಆದರೆ ಅನಂತಯ್ಯನವರ ಪ್ರಬಲ ಸ್ವಾಭಿಮಾನ ಅದಕ್ಕೊಪ್ಪಲಿಲ್ಲ. ಆಗಲೇ ಅನಂತಯ್ಯ ಬೆಂಗಳೂರಿಗೆ ಬಂದು ಹತ್ತೆಂಟು ದಿನಗಳು ಕಳೆದಿದ್ದುವು.

ಒಂದು ದಿನ ರಾತ್ರಿ ಅನಂತಯ್ಯ ಯೋಚಿಸುತ್ತ ಒಂದು ಕೋಣೆಯಲ್ಲಿ ಕುಳಿತಿದ್ದರು. ಹೊಸಪರಿಚಯದ ಗೆಳೆಯರೊಬ್ಬರು ಅವರನ್ನು ತಮ್ಮೂರಿಗೆ ಆಹ್ವಾನಿಸಿದ್ದರು. ಚಿಕ್ಕಪಟ್ಟಣವಾದ್ದರಿಂದ ಸಂಸಾರನಿರ್ವಹಣೆ ಕಷ್ಟವಲ್ಲ. ಮೊದಲಿಗೆ ಪಾಠದ ಮನೆಗಳನ್ನು ಗೊತ್ತುಮಾಡಿಕೊಂಡು, ಅನಂತರ ಅನುಕೂಲವಾದಂತೆ ಮಾಡಬಹುದು. ಆದರೆ ಅನಂತಯ್ಯ ಯಾವ ನಿರ್ಧಾರಕ್ಕೂ ಬಂದಿರಲಿಲ್ಲ.

ಆಗ ಅವರ ಮಗಳು ಶಶಿ ಅಲ್ಲಿಗೆ ಬಂದಳು. ಅನಿರೀಕ್ಷಿತವಾಗಿ ಆಕೆ ತಮ್ಮ ಕಾಲಮೇಲೆ ಬಿದ್ದು ಅಳತೊಡಗಿದಾಗ ಅವರಿಗೆ ತುಂಬ ಗಾಬರಿಯಾಯಿತು. ಯಾರಾದರೂ ನೋಡುವರೇ ಎಂದು ಸುತ್ತಮುತ್ತ ನೋಡಿಕೊಂಡು "ಯಾಕೆ ಮಗೂ, ಏನಾಯಿತು?"— ಎಂದು ಪರಿಪರಿಯಿಂದ ವಿಚಾರಿಸಿದರು. ಆದರೆ ಹುಡುಗಿ ಬಿಕ್ಕಿ ಬಿಕ್ಕಿ ಅಳುವುದನ್ನು ನಿಲ್ಲಿಸಲಿಲ್ಲ.

ಬಡತನ ಗೆಳೆತನಕ್ಕೆ ದೂರವಾಗಿರುವುದು ಹೆಚ್ಚು. ಅದರೂ ಎರಡು ದಿನ ಎಲ್ಲವೂ ಚೆನ್ನಾಗಿ ನಡೆಯಿತು. ಮನೆಯ ಮಕ್ಕಳೊಡನೆ ಶಶಿಗೆ ಬಲು ಬೇಗನೆ ಸ್ನೇಹ ಬೆಳೆಯಿತು. ಅವರ ಹೆರಳು ಹಾಕುವುದು ಅಲಂಕಾರಮಾಡುವುದು, ಅವರೊಡನೆ ಕಸೂತಿ ಹಾಕುವುದು, ಆಟವಾಡುವುದು ಇವೆಲ್ಲ ಸಂತೋಷಕರವಾಗಿ ಕಂಡಿತು. ಮಾರನೆಯ ದಿದ ಯಜಮಾನಿತಿ "ಸ್ವಲ್ಪ ಈ ಚಟ್ನಿ ರುಬ್ಬಿಕೊಡಮ್ಮಾ"—ಎಂದಾಗಲೂ ಉತ್ಸಾಹ ಮುಂದಾಯಿತು. ಒಂದು ವಾರ ಮುಗಿಯುವುದರೊಳಗೆ ಕೆಲಸಗಳ ಹೊರೆಯೇ ಅವಳಿಗೆ ಎದುರಾಯಿತು. ಮನೆಯ ಮಕ್ಕಳೊಡನೆ ಊಟ-ಉಪಹಾರ ನಡೆಯುತ್ತಿದ್ದುದು ಹೋಗಿ, ಕೆಲಸದವರೊಡನೆ ಹೊತ್ತುಗೊತ್ತಿಲ್ಲದೆ ಆಹಾರ ಪಡೆಯುವುದಾಯಿತು. ಸದಾ ಕೆಲಸದ ಮೇಲೆ ಅಲೆಯುತ್ತಿದ್ದ ಅನಂತಯ್ಯನವರು ಯಾವುದನ್ನೂ ಲಕ್ಷಿಸಲಿಲ್ಲ. ಆದರೆ ಹುಡುಗಿಗೆ ಈಗ ತೀರ ಕಷ್ಟವೆನಿಸಿತು. ಹೇಳದ ಕೆಲಸಗಳನ್ನೆಲ್ಲ ಅಚ್ಚುಕಟ್ಟಾಗಿಯೇ ಮಾಡುತ್ತಿದ್ದಳು. ಆ ದಿನ ಬೆಳಗ್ಗೆ ಮಾತ್ರ, ಅವಳು ದೋಸೆಗೆ ಹಿಟ್ಟು ರುಬ್ಬಿದುದರಲ್ಲಿ ಊನ ಕಂಡು ಬಂದಾಗ, ಯಜಮಾನಿತಿ ಮನಸ್ಸಿಗೆ ಬಂದಂತೆ ಮಾತನಾಡಿದರು. ಎಂದೂ ಎದುರಾಡದ ಶಶಿ ಮಾತನಾಡಲು ಬಾಯಿ ಎತ್ತಿದಾಗ, ಬೆನ್ನಿಗೆ ಎರಡೇಟು ಬಿತ್ತು. ತಾಯಿಯಿಲ್ಲದ ಈ ಹುಡುಗಿಯನ್ನ ಅನಂತಯ್ಯ ತನ್ನ ಜೀವನ ಸರ್ವಸ್ವವೆಂಬಂತೆ ಬೆಳಸಿದ್ದರು. ಬಡತನದಲ್ಲಿ ಬೆಳೆದರೂ ಏಟು-ಬೈಗಳು ಎಂದರೆ ಏನೆಂದು ತಿಳಿದವಳಲ್ಲ. ತನಗೆ ಏಟುಬಿದ್ದಾಗ, ಅಲ್ಲಿದ್ದ ಕೆಲಸದ ಹುಡುಗರೆಲ್ಲ ನಕ್ಕು ಗೇಲಿ ಮಾಡಿದರು. ಯಾರೂ ತನ್ನ ಪರವಾಗಿ ಒಂದು ಮಾತನಾಡಲಿಲ್ಲ ಪಲ್ಲ—ಎನ್ನಿಸಿತು ಶಶಿಗೆ.

ಪಾಪ, ಮುಗ್ಧ ಹುಡುಗಿ! ದಿನವೆಲ್ಲ ನೀರು ಕೂಡ ಮುಟ್ಟಿಸಿಕೊಳ್ಳದೆ ಕುಳಿತಳು. ದುಃಖ ಉಕ್ಕಿ, ಕಂಠದವರೆಗೂ ಬಂದು ನಿಂತಿತ್ತು. ತಂದೆಯನ್ನು ಸಂಧಿಸುವ ಅವಕಾಶದೊರೆತಾಗ, ಎಲ್ಲವನ್ನೂ ಅವರೆದುರು ತೋಡಿಕೊಂಡಳು. ಅನಂತಯ್ಯನವರ ಗಂಡೆದೆ ಬೆಂದು ಹೋಯಿತು. ತಾವೂ ಏನೂ ಅರಿಯದ ಮಗು ಎಂದು ತಿಳಿದಿದ್ದ ಹುಡುಗಿ "ಬೇಡಿ ತಿಂದರೂ ಚಿಂತೆಯಿಲ್ಲ ಅಪ್ಪಯ್ಯ, ನಿನ್ನನ್ನೊಮ್ಮೆ ಇಲ್ಲಿಂದ ಪಾರುಮಾಡಿದ್ದರೆ ಭಾವಿಗಾನವರೂ ಬಿದ್ದು ಪ್ರಾಣ ಬಿಟ್ಟುಕೊಳ್ಳುತ್ತೇನೆ"—ಎಂದು ಹೇಳಿದಾಗ, ಎಂತಹ ಕಹಿಯನ್ನಾದರೂ ಸ್ವಾದುವಾಗಿ ಮಾಡಿಕೊಳ್ಳಲು ಅರಿತಿದ್ದ ಅನಂತಯ್ಯ ಆಧೀರರಾಗಿ ತತ್ತರಿಸಿದರು.

ಮಾರನೆಯ ದಿನ ಯಾವ ಕಾರಣವನ್ನೂ ಹೇಳದೆ ಅನಂತಯ್ಯ, ಮಗಳೊಡನೆ ಹೋಟಲು ಬಿಟ್ಟು ಹೊರಟರು. ಹಿಂದೆ ಹೇಳಿದ ಗೆಳೆಯರ ಸಲಹೆಯ ಮೇರೆಗೆ ಈ ಊರಿಗೆ ಬಂದರು. ಅವರು ಈಗಿರುವ ಮನೆ ಕಡಿಮೆ ಬಾಡಿಗೆಗೇ ದೊರೆಯಿತು. ಒಂದೆರಡು ಪಾಠದ ಮನೆಗಳೇನೋ ದೊರೆತುವು. ಕೈಯಲ್ಲಿದ್ದ ಒಂದೈವತ್ತು ರೂಪಾಯಿ ವೆಚ್ಚವಾಗುವ ವರೆಗೆ ಎಲ್ಲವೂ ಸುಲಭವಾಗಿ ನಡೆಯಿತು. ಮುಂದೇನು ಎಂಬ ಸಮಸ್ಯೆ ಪುನಃ ಎದುರಾಯಿತು. ಶಶಿಗೆ ಆಗ ಹದಿನಾರು ವಯಸ್ಸು. ನೈತುಂಬಿ ಬೆಳೆದಿದ್ದಳು.

ಒಂದು ದಿನ ಅನಂತಯ್ಯ ಪೊರಗೋಡೆಯ ಮೇಲಿನ ಜೇಡರ ಬಲೆಗಳನ್ನು ತೆಗೆಯುತ್ತಿದ್ದಾಗ, ಗೋಡೆಯ ಮೇಲೆ ಸೊದಲು ಏನೋ ಬರೆದಿದ್ದಂತೆ ಕಾಣಿಸಿತು. ಈಗ ಅದರ ಮೇಲೆ ಸುಣ್ಣ

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ
ಔಷಧಿ!
ಡಾ. ವಾಮನ ಗೋಪಾಳ
ಇವರ
ಸಾರ್ಸಾ ಪರಿಲ್ಲಾ

ಬಳಿದಿತ್ತು. ಪ್ರಯತ್ನಿಸಿ ಓದಿದರು : "ಇಲ್ಲಿ ಶಾಸ್ತ್ರ ಹೇಳುತ್ತೇವೆ"—ಎಂದು ಬರೆದಿದ್ದಿತು. ಅನಂತಯ್ಯ ಕುತೂಹಲದಿಂದ ನೆರೆಯವರೊಡನೆ ಆ ಮನೆಯಲ್ಲಿ ಮೊದಲು ಯಾರಿದ್ದರೆಂದು ವಿಚಾರಿಸಿದರು. ಜ್ಯೋತಿಷ್ಯರೊಬ್ಬರು ಅಲ್ಲಿದ್ದರೆಂದೂ ತಿಳಿಯಿತು; ಶಾಸ್ತ್ರ ಹೇಳುವುದೆಂದರೇನೆಂದೂ ತಿಳಿಯಿತು.

ಅನಂತಯ್ಯ ಇಷ್ಟರತನಕ ಗಂಭೀರವಾಗಿ ಮಾತನಾಡುತ್ತ ತಮ್ಮ ಕತೆಯನ್ನು ಹೇಳುತ್ತಿದ್ದವರು, ಈಗ ತುಸು ನಕ್ಕು ಮುಂದುವರಿಸಿದರು :

ಮಾರನೆಯ ದಿನ ಅನಂತಯ್ಯ "ಇಲ್ಲಿ ಶಾಸ್ತ್ರ ಹೇಳುತ್ತೇನೆ" ಎಂಬ ಅಕ್ಷರಗಳನ್ನು ಪುನಃ ದೊಡ್ಡದಾಗಿಯೇ ಬರೆಯಿಸಿದರು. ಕವಡಿ, ವಿಭೂತಿ, ಮಂತ್ರ ತಂತ್ರ ಎಂದು ಪ್ರಾರಂಭಿಸಿಯೇ ಬಿಟ್ಟರು. ಆತ್ಮಸಾಕ್ಷಿಯೇನೋ ವಿರೋಧಿಸುತ್ತಲೇ ಇತ್ತು. ಆದರೆ ಸಮಾಜದಲ್ಲಿ ತನ್ನ ಅಸ್ತಿತ್ವಕ್ಕೆ, ಅವರು ಮಾರ್ಗ ಹುಡುಕಬೇಕಾಗಿತ್ತು.. ದಿಕ್ಕುತೋರಲಿಲ್ಲ. ಎಟಕಿದ ಬೇರಿಗೆ ಜೋತು ಬಿದ್ದರು ಅನಂತಯ್ಯ. ಊರಲ್ಲಿ ಅಲ್ಪ ಸ್ವಲ್ಪ ನೋಡಿ, ಓದಿ, ತಿಳಿದುಕೊಂಡಿದ್ದ ಜ್ಯೋತಿಷ್ಯ ಅವರ ಸಹಾಯಕ್ಕೆ ಬಂದಿತು.

ಮುಂದೇನಾಗುತ್ತದೆ ಎಂದು ತಿಳಿಯಲು ಹಾತೊರೆಯುವ ಮಂದಿ, ಅನಂತಯ್ಯ ಹೇಳಿದಂತೆ ಕುಣಿದರು. ಅನಂತಯ್ಯನವರಿಗೆ ಈ ಜನದ ಮೇಲೆ ಕನಿಕರ. ದಿನವೂ ದೇವರೆದುರಿನಲ್ಲಿ 'ನನ್ನನ್ನು ಕ್ಷಮಿಸು'—ಎಂದು ಮೊರೆಯಿಟ್ಟರು.

ಅನಂತಯ್ಯನವರ ಜೀವನದ ಪರಿ ಪೂರ್ಣ ಬದಲಾಯಿತು. ಅನಿವಾರ್ಯವಾಗಿ ಆತ್ಮಸಾಕ್ಷಿಗೊಪ್ಪದುದನ್ನು ಮಾಡಿದರು. ಆದರೆ ಅವರ ಮೊದಲಿನ ಧ್ಯೇಯಗಳೆಲ್ಲ ಹಸುರಾಗಿಯೇ ಉಳಿದುವು. ಸಂದರ್ಭಕ್ಕಾಗಿ ಹೊಂಚುಹಾಕುತ್ತಿದ್ದುವು.

ಅನಂತಯ್ಯನವರ ಕೈಯಲ್ಲಿ ಈಗ ನಾಲ್ಕು ಕಾಸು ಕೂಡಿಕ್ತು. ಶಶಿಗೆ ಒಬ್ಬ ವಿದ್ಯಾವಂತ ವರನೇ ದೊರಕಿದನು. ಅನಂತಯ್ಯನವರ ಮೇಲಿಂದ ಒಂದು ದೊಡ್ಡ ಹೊರೆ ಕೆಳಗಿಳಿದಂತಾಯಿತು. ಅಂದಿನಿಂದಲೇ ಅವರ ನೆಮ್ಮದಿಯ ಜೀವನ ಆರಂಭವಾಯಿತು.

ಎಲ್ಲ ಘಟನೆಗಳನ್ನೂ ವಾಸು ಕೌತುಕದಿಂದ ಕೇಳುತ್ತಿದ್ದ. ಅನಂತಯ್ಯ ಹೇಳಿದರು. "ಮೊನ್ನೆ ಮೊನ್ನೆಯವರೆಗೆ ನಮ್ಮೂರಿಂದರೆ ಎಪ್ಪರಮಟ್ಟಿಗೆ ಬೇಸರು ಹತ್ತಿ ಹೋಗಿತ್ತೆನ್ನುವುದಾದರೆ, ನಿಮ್ಮ ಮನೆಗೂ ಕೂಡ ಒಂದು ಕಾಗದ ಬರೆಯುವುದು ಬೇಡವಾಗಿತ್ತು. ನನ್ನ ಹಿಂದಿನ ಜೀವನವನ್ನೆ ಮರೆಯಬೇಕು ಎನ್ನಿಸಿತ್ತು."

"ಹೌದು, ನಮಗೂ ಕೂಡ ನಿಮ್ಮ ನೆನಪು ಆಗಾಗ ಆಗುತ್ತಲೇ ಇತ್ತು" ಎಂದ ವಾಸು.

ಹಿಂದಿನ ವರ್ಷ ತಮ್ಮ ಬದುಕಿನಲ್ಲಿ ಹೊಸ ಘಟ್ಟವೊಂದು ಪ್ರಾರಂಭವಾದುದನ್ನು, ಅನಂತಯ್ಯ ವಾಸುವಿಗೆ ತುಸು ನಾಚಿದವರಂತೆ ಸೂಕ್ಷ್ಮವಾಗಿ ತಿಳಿಸಿದರು. ಅನಂತಯ್ಯನವರ ಮಗಳನ್ನು ವಾಸು ಚಿಕ್ಕಂದಿನಿಂದಲೂ ನೋಡಿ ಬಲ್ಲ. ಆದರೆ ತನಗೆ ಉಪಾಹಾರ ತಂದವರು ಯಾರಿರಬಹುದೆಂದು ವಾಸು ವಿಸ್ಮಯಪಡುತ್ತಿದ್ದವನಿಗೆ ವಿಚಾರ ತಿಳಿದು, ಎಲ್ಲವೂ ಮನದಟ್ಟಾಯಿತು. ತುಂಬ ಹರ್ಷವೂ ಉಂಟಾಯಿತು.

ಅನಂತಯ್ಯನವರ ವಯಸ್ಸು ನಾಲ್ವತ್ತರ ಸಮೀಪವಿತ್ತು. ಅವರದು ಕ್ರಮಬದ್ಧವಾದ ಬಾಳಾದ್ದರಿಂದ, ಮೈಯಲ್ಲಿ ಎಳೆಯತನವಿತ್ತು. ಶಶಿಗೆ ಲಗ್ನವಾಗಿ ಗಂಡನಮನೆಗೆ ಹೋದಳು. ತಂದೆ ಮನೆಯಲ್ಲಿ ಒಬ್ಬರೇ ಆದರು. ಅನಂತಯ್ಯನವರಿಗೆ ಅರಿವಿಲ್ಲದಿದ್ದರೂ ಏನೋ ಒಂದು ಕೊರತೆ ಅವರ ಬಾಳಿನಲ್ಲಿ ಕಾಲಿಟ್ಟಂತಾಯಿತು. ಆಗ ಅವರನ್ನು ಆ ಊರಿಗೆ ಕರೆತಂದ ಗೆಳೆಯರು ಮುಂದೆ ಬಂದರು. ಒಪ್ಪಲಾರದಿದ್ದವರನ್ನು ಒಪ್ಪುವಂತೆ ಮಾಡಿ, ತಮ್ಮ ಸೊಸೆಯನ್ನೇ ಕೊಟ್ಟು ಧಾರೆ ಎರೆದರು. ಹದಿಮೂರು ವರ್ಷಗಳ ನಂತರ ಪುನಃ ದಾಂಪತ್ಯಜೀವನ ಪ್ರಾರಂಭಿಸಿದೆನಲ್ಲಾ ಎಂದು ಅನಂತಯ್ಯ ಮೊದಮೊದಲು ಕಸಿವಿಸಿಗೊಂಡರೂ, ಕೈಹಿಡಿದ ಹುಡುಗಿ ತಮ್ಮ ಜೀವನದಲ್ಲಿ ಹೊಸ ಬೆಳಕೊಂದನ್ನು ಮೂಡಿಸಿದುದು ಅರಿವಾಗುತ್ತ ಬಂದಂತೆ, ಅವರ ಬೇಗುದಿ ಹೋಗಿ ನೆಮ್ಮದಿ ಬಲವಾಗಿ ನೆಲೆಯಾಯಿತು.

"ಅಮ್ಮ ಅಪ್ಪ ನಿಮ್ಮ ಸಮಾಚಾರವೆಲ್ಲ ಕೇಳಿದರೆ ಎಷ್ಟು ಸಂತೋಷಪಡುವರೊ?—ನನ್ನ ಜೊತೆಗೆ ನೀವೆಲ್ಲ ಊರಿಗೆ ಬಂದು ಕೆಲವು ದಿನ ಇದ್ದು ಹೋಗಬೇಕು"—ಎಂದ ವಾಸು.

"ಬರುವುದಕ್ಕೇನಾಗಬೇಕು ವಾಸು; ಈಗ ನನಗೆ ಅಂತಹ ತೊಂದರೆಯೇನೂ ಇಲ್ಲ. ಶಾಸ್ತ್ರ ಹೇಳುವುದನ್ನೆಲ್ಲ ಕಳೆದವರ್ಷವೇ ಬಿಟ್ಟು ಬಿಟ್ಟಿದ್ದೇನೆ. ನಾಲ್ಕಾರು ಹುಡುಗರು ಮನೆಗೆ ಬರುತ್ತವೆ; ಪಾಠ ಹೇಳುತ್ತಿದ್ದೇನೆ. ಆದ್ದರಿಂದ ಎಲ್ಲಿಯೂ ಆಡ್ಡಾಡಿ ಬರಬಹುದು. ಮುಂದಿನ ವರ್ಷ ಒಬ್ಬಿಬ್ಬರು ಮೇಷ್ಟರುಗಳನ್ನು ಕೂಡಿಸಿಕೊಂಡು, ಖಾಸಗೀಶಾಲೆಯನ್ನೂ ಪ್ರಾರಂಭಿಸಬೇಕೆಂದಿದ್ದೇನೆ. ಮನೆಯನ್ನೂ ಕೊಂಡುಕೊಂಡಿದ್ದೇನೆ ಬಡಾವಣೆಯಲ್ಲಿ. ಆಗ ದೇವರು ನಡೆಸಿದರೆ ನಿಮ್ಮನ್ನೆಲ್ಲ ಕರೆಸಿಕೊಳ್ಳುತ್ತೇನೆ."—ಎಂದರು ಅನಂತಯ್ಯ

ಆಗ ಅವರ ಹೆಂಡತಿ ಅಲ್ಲಿಗೆ ಬಂದರು. "ನಮ್ಮ ಹುಡುಗ" ಎಂದು ಪರಿಚಯಮಾಡಿಸಿದರು. ಎಲ್ಲರೂ ಕುಳಿತು ಸ್ವಲ್ಪ ಹೊತ್ತು ಮಾತನಾಡಿದರು. ಪುನಃ ಕಾಫಿಯೂ ಆಯಿತು.

ವಾಸು ಹೊರಡಬೇಕೆಂದು ಎದ್ದು ನಿಂತಾಗ, ಇಲ್ಲಿಯೇ ಇದ್ದು ಬಿಡೆಂದು ಗಂಡ-ಹೆಂಡಿರಿಬ್ಬರೂ ಒತ್ತಾಯ ಪಡಿಸಿದರು.

ಅವರ ಕೇಳಿಕೆಯಂತೆ ಗೆಳೆಯನೊಡನೆ ನಾಳೆ ಬರುತ್ತೇನೆಂದು ವಾಸು ಒಪ್ಪಿಗೆ ಕೊಟ್ಟಮೇಲೆ, ಅವನ ಬಿಡುಗಡೆಯಾಯಿತು.

ಮನೆಯಿಂದ ಹೊರಗೆ ಬರುವಾಗ ವಾಸು ಗೋಡೆಯ ಕಡೆ ನೋಡಿದ. "ಇಲ್ಲಿ ಶಾಸ್ತ್ರ ಹೇಳುತ್ತೇವೆ!"

ಇದನ್ನು ಗಮನಿಸಿದ ಅನಂತಯ್ಯ "ನಾಳೆ ನೀನು ಬರುವಾಗ ಸುಣ್ಣಬಳಿಸಿ ಬಿಟ್ಟಿರುತ್ತೇನೆ ಕಣೋ"—ಎಂದು ನಕ್ಕರು.

ವಾಸುವೂ ನಗುತ್ತ ಹೊರಟುಹೋದ.

ಕಲೆಯೂ ರಸವೂ

ಡಾ. ಖಾನೋಳಕರ ಶ್ರೀಧರರಾಯರು, ಪುಣೆ

★

ನಮ್ಮಲ್ಲಿ ನಾಲಗೆ ಬಯಸುವ ಷಡ್ರಸಗಳ ಪರಿಚಯವುಳ್ಳವರು ಬಹಳ ಜನ; ಆದರೆ ಮನಸ್ಸು ಮೆಚ್ಚುವ ನವರಸವಿಚಾರವನ್ನು ಅರಿತವರು ತೀರ ಅಪರೂಪ. ನವರಸಗಳನ್ನರಿತವನೇ ನಿಜವಾದ ಮಾನವನೆನಿಸಬಲ್ಲ.

★

ಕಲಾಕೃತಿಯು ಕನಸೆಂದು ತಿಳಿಸಿದೆನು. ಕನಸಿನ ಅರ್ಥವನ್ನೂ ಪೂರ್ಣವಾಗಿ ಹೇಳಿದೆನು. ಇದು ಕವಿಯಾಗಲಿ, ಯಾವನೇ ಕಲಾವಂತನಾಗಲಿ, ತನ್ನ ಕೃತಿಯನ್ನು ನಿರ್ಮಿಸುವಾಗ ಆಗುವ ವ್ಯಾಪಾರ. ಇನ್ನು ಇಂಥ ಕಲಾಕೃತಿಯಿಂದ ಯಾರ ಮೇಲೆ ಯಾವ ಪರಿಣಾಮವಾಗುತ್ತದೆಂಬುದನ್ನು ವಿಚಾರಿಸುವಾ :

ಕಲಾವಂತನು ಕಲಾಕೃತಿಯನ್ನು ನಿರ್ಮಿಸುವಾಗ, ಅವನಿಗೆ ಆನಂದವಾಗುತ್ತದೆಯೆಂದು ಹೇಳಬೇಕೇನು? ಕಲಾಕೃತಿಯೆಂದರೊಂದು ಆಧ್ಯಾತ್ಮಿಕ ಜನ್ಮವಿದ್ದಂತೆ. ಸಾಮಾನ್ಯ ಹೆರಿಗೆಯ ನಿಯಮಗಳೂ ಈ ನಿಯಮಗಳೂ ಒಂದೇ. ತರುಣ-ತರುಣಿಯರು ಪ್ರೇಮಬದ್ಧರಾದರೆಂದರೆ ಗರ್ಭಧಾರಣೆ. ಆಮೇಲೆ ನವಮಾಸಗಳವರೆಗೆ ಗರ್ಭವು ಪೂರ್ಣವಾಗಿ ಬಲಿಯಿತೆಂದರೆ; ಮಗುವಿನ ಜನ್ಮ. ಇಜ್ಜೋಡುದಂಪತಿಗಳ ಮಕ್ಕಳು ದೇಹದಲ್ಲಿ ಬಲಹೀನರೂ ಮುಖದಲ್ಲಿ ಕಾಂತಿಹೀನರೂ, ಆತ್ಮದಲ್ಲಿ ತೇಜೋವಿಹೀನರೂ ಆಗುವರೆಂಬುದು ಸೃಜನ ಶಾಸ್ತ್ರದ ನಿಯಮ. ಕಲಾವಂತನಲ್ಲಿಯೂ ಒಂದು ಭಾವದ, ವಿಚಾರದ, ರಸದ, ಗರ್ಭಧಾರಣೆಯಾಗುವುದು ಮೊದಲು. ಆದೇ ಭಾವವನ್ನು (Spirit) ಮೇಲಿಂದ ಮೇಲೆ ಮನಸ್ಸಿನಲ್ಲಿ ತಂದು ಕಲಾವಂತನು ಅದರ ಪೋಷಣೆಯನ್ನು ಮಾಡುವನು. ಆ ಭಾವವು ಬಲಿದು ಮನಸ್ಸಿನಲ್ಲಿ ಹಿಡಿಸಲಾರದಾಯಿತೆಂದರೆ, ಅದು ಯಾವುದಾದರೊಂದು ರೂಪದಲ್ಲಿ ಹೊರಬೀಳುವುದು, ಅದರ ಅವಿಷ್ಕಾರವಾಗುವುದು. ಅದೇ ಕಲಾಕೃತಿ.

ಕಲಾಕಾರನೆ ಕೃತಿಯನ್ನು ನೋಡಿ ಆನಂದಪಡುವಂಥವರಿಗೇ ರಸಿಕರೆಂದು ಹೆಸರು. ರಸವನ್ನು ಬಲ್ಲವನೇ ರಸಿಕ. ಹೃದಯದ ಸಹಾನುಭೂತಿಯಿದ್ದವನೇ ಸಹೃದಯ. ರಸಿಕನೆಂದರೂ ಒಂದೇ; ಸಹೃದಯನೆಂದರೂ ಒಂದೇ. ಕಲಾಕೃತಿಯಲ್ಲಿ ಮೂಡಿದ ರಸವು ಸಾಮಾಜಿಕನಲ್ಲಿ ಬರಬೇಕಾದರೆ, ಅವರಿಬ್ಬರಲ್ಲಿ ಸಹಾನುಭೂತಿಯುಂಟಾಗಬೇಕಾಗುವುದು. ಪ್ರೇಮವಿಲ್ಲದಿದ್ದರೆ ಆನಂದವೂ ಆಗದು. ಎಂದ ಮೇಲೆ ಕಲಾಕೃತಿಯ ಮೇಲೆ ಪ್ರೇಮವಿಲ್ಲದಿದ್ದರೆ ರಸಾನಂದವೂ ಆಗಲಾರದು. ಆದ್ದರಿಂದಲೇ ಸುಭಾಷಿತದಲ್ಲಿ : ಕವಿಯು ಕಲಾಕೃತಿಯ ತಂದೆಯಿದ್ದಂತೆ; ರಸಿಕನೋ ನಲ್ಲನಿದ್ದಂತೆ! ತನ್ನ ಮಗಳು ಎಷ್ಟು ಸುಂದರಿಯಾದರೂ ತಂದೆಯಲ್ಲಿ ಹುಟ್ಟುವ ರಸವು ವಾತ್ಸಲ್ಯವೆ. ಶಕುಂತಲೆಯು ಸುಂದರಿಯಾಗಿದ್ದಳಲ್ಲ! ಆಕೆಯ ಸೌಂದರ್ಯರಸದ ಪೂರ್ಣ ಅನುಭವವು ಕಣ್ವನಿಗೆ ಆಗಲಿಲ್ಲ. ಶಕುಂತಲೆಯ ಪಾದಸಂವಾಹನವನ್ನು ಮಾಡಲೆಳಸಿದ ದುಷ್ಯಂತನೇ ಶಕುಂತಲೆಯ ನಿಜವಾದ ರಸಿಕ. ಆಕೆಯ ಸೌಂದರ್ಯಸೇವೆಯಲ್ಲಿ ತಾನು ಸಾಮ್ರಾಜ್ಯದ ಸಮ್ರಾಟನೆಂಬುದನ್ನೂ ಮರೆತುಬಿಟ್ಟನಲ್ಲ! ಕಣ್ವಮಹಾಮುನಿಯು ಎಷ್ಟು ಮಮತೆಯನ್ನು ಮಾಡಿದರೂ ಶಕುಂತಲೆಗೋಸ್ಕರ ತನ್ನ ತಪವನ್ನು ಬಿಡು ಎಂದಿದ್ದರೆ ಬಿಡಬಹುದಾಗಿತ್ತೇ? ತಂದೆಯ ಮಮತೆಗೂ ಗಂಡನ ಪ್ರೇಮರತಿಗೂ ಅಜಗಜಪಷ್ಟು ಅಂತರ. ಇಬ್ಬರ ದೃಷ್ಟಿಯೇ ಬೇರೆ. ಗಂಡನದೇ ಪೂರ್ಣ ದೃಷ್ಟಿ! ಈ ಪ್ರಕಾರ ಕಲಾಕೃತಿಯ ಸಂಗಡ ತನ್ನನ್ನೇ ಮರೆತುಬಿಡುವ ಪ್ರೇಮಭಾವನೆಯಿಲ್ಲದಿದ್ದರೆ, ರಸಿಕನಿಗೆ ಕಲಾಕೃತಿಯಿಂದ ರಸಾನಂದವುಂಟಾಗುವ ಮಾತು ಅಸಂಭವನೀಯವಾದದ್ದೇ ಆಗಿದೆ.

ಕಲಾವಂತನು ತಾನು ಕಂಡ ಭಾವವನ್ನು ಒಂದು ದ್ರವ್ಯದಲ್ಲಿ ಒಡಮೂಡಿಸುವನು. ಚಿತ್ರಕಾರನ ದ್ರವ್ಯ ಬಣ್ಣ, ಶಿಲ್ಪಿಯ ದ್ರವ್ಯ ಕಲ್ಲು (ಕಟ್ಟಿಗೆ, ಮೇಣ ಮುಂ.). ಗಾಯನ ಕೋವಿದನ ದ್ರವ್ಯವು ಸ್ವರಗಳು; ಕವಿಯ ದ್ರವ್ಯ ಶಬ್ದಾರ್ಥಗಳು. ಈ ದ್ರವ್ಯದಲ್ಲಿ ಎನ್ನಿರಿ ಅಥವಾ ಮಾಧ್ಯಮದಲ್ಲಿ (medium) ಎನ್ನಿರಿ ಕಲಾಕಾರನು ತನ್ನ ಭಾವವನ್ನು ತೋರಿಸುವನು, ಕಟೆಯುವನು, ಹೊಯ್ಯುವನು. ಆ ಮೂರ್ತಿಯೆ ಕಲಾಕೃತಿ. ಆ ಮೂರ್ತಿ (image, Symbol) ಯಲ್ಲಿಯೇ ಸೂಚನೆಗಳ ರೂಪದಿಂದ, ಧ್ವನಿಯಿಂದ ಅವನ ಭಾವವು ಮೂಡಿರುವುದು ಕಲಾವಂತನು ತನ್ನ ಮಾಧ್ಯಮದ ಮೇಲೆ ಮಾಡುವ ಪ್ರೀತಿಯು ಗಂಡ-ಹೆಂಡಿರ ಪ್ರೇಮವನ್ನೂ ಮಿಕ್ಕಿರುವುದು. ಗಣಪತಿಗಳನ್ನು ಮಾಡುವ ಮುಂದೆ ನೋಡಬೇಕು : ಮೂರ್ತಿಕಾರನು ತಾನು ತಂದ ಮಣ್ಣಿನ್ನು ಮಣ್ಣಿಗೆ ಪುಡಿಮಾಡುವುದೆಷ್ಟು, ತೋಯಿಸುವುದೆಷ್ಟು, ನಾದುವುದೆಷ್ಟು, ಹಿಸುಕಿ ಹಿಸುಕಿ ನೋಡುವುದೆಷ್ಟು! ಕಲಾಕಾರನು ತನ್ನ ಭಾವವನ್ನು ಮೂಡಿಸುವುದರ ಮೊದಲು, ತನ್ನ ಆತ್ಮವನ್ನೇ ತನ್ನ ಮಾಧ್ಯಮದ್ರವ್ಯದಲ್ಲಿ ಕೂಡಿಸುವನು. ಗೀತನಿಪುಣರನ್ನು ನೋಡಿರುವಿರಾ? ಸಾರಿಗಮಪಧನೀ ಇಷ್ಟೆ ಸ್ವರಗಳಲ್ಲಿ ಅವರು ಚಮತ್ಕಾರ ತೋರಿಸುವುದು. ಈ ಒಂದೊಂದು ಸ್ವರವನ್ನು ಲಕ್ಷಾವಧಿ ಸಾರೆ ನುಡಿದು ನುಡಿದು, ಅದರಲ್ಲಿ ತಮ್ಮ ಆತ್ಮವನ್ನೇ ಹೆಣೆಯುತ್ತಾರೆ. ಆದರೂ ಈ ಜೋಡಿ ಸ್ವರಗಳು ಕಂಠದಿಂದ—ಕರೆದಾಗ ಬರುವುದಿಲ್ಲ. ಇಷ್ಟು ಉದ್ದಾಮವೃತ್ತಿ ಈ ಸ್ವರಗಳದು. ಇವುಗಳನ್ನೂ ಸಹ ಅಂಕುಶ ಹಚ್ಚಿ ಹಚ್ಚಿ ಮದ್ದಾನೆಯನ್ನು ವಶಕ್ಕೆ ತರುವಂತೆ ಸಂಗೀತಸುಕಲಾ ನಿಪುಣನು ತನ್ನ ವಶದಲ್ಲಿರಿಸಿಕೊಳ್ಳುವನು. ಪರಲೋಕವಾಸಿಗಳಾದ

— ಶರಚ್ಚಂದ್ರರ ಶ್ರೇಷ್ಠ ಕಾದಂಬರಿ —

ಶ್ರೀ ಕಾಂತ

(ಎಂಟು ಭಾಗಗಳೂ ಪೂರ್ಣ ಅಚ್ಚಾಗಿವೆ)

ಬೆಲೆ ಹತ್ತು ರೂಪಾಯಿ ಮಾತ್ರ

ಶರಚ್ಚಂದ್ರರಲ್ಲಿಯೂ ಭಾಷಾಂತರವಾಗಿ, ಎಲ್ಲೆಲ್ಲಿಯೂ ಮನ್ನಣೆ ಪಡೆದ ಸ್ವಾರಸ್ಯವುಳ್ಳ ಕಾದಂಬರಿ. ಕೆಲವೇ ಪ್ರತಿಗಳಿವೆ. ೧೦ ರೂ. M. O. ಕಳಿಸಿ, ಈಗಲೇ ತರಿಸಿಕೊಳ್ಳಿರಿ.

ಬೇರೆ ಕೆಲವು ಶರತ್ಕಾದಂಬರಿಗಳು

ದೇವದಾಸ (ಅಂಚೆವೆಚ್ಚ ಸೇರಿ)		೧—೧೨—೦
ವಿಜಯಾ	,,	೧—೧೨—೦
ವೈಕುಂಠನ ಮೃತ್ಯುಪತ್ರ	,,	೧—೧೨—೦
ರಾಜಲಕ್ಷ್ಮಿ	,,	೧—೧೨—೦
ಹೋಡತಿ	,,	೨— ೬—೦
ಚಿತ್ರ	,,	೧— ೦—೦

(ಪ್ರೇಮಸಥ, ಹೇಮಾಂಗಿನಿ, ಮಹೇಶ, ಗುರುಚರಣ, ಮಂಗಲಸೂತ್ರ, ಮಹಾಸತಿ, ಅಭಾಗಿನಿ ಸ್ವರ್ಗ ಈ ಏಳು ಕತೆಗಳ ಸೂಡು ೨—೦—೦)

ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ:—

ಸಮಾಜ ಪುಸ್ತಕಾಲಯ, ಧಾರವಾಡ.

ಸಂಗೀತಾಚಾರ್ಯ ವಝೋಬುವಾ ಅವರು ಒಂದೆಡೆಯಲ್ಲಿ ಹೇಳಿದ್ದಾರೆ: 'ಗಂಭೀರ ಜ್ವರ ಬಂದರೂ ಮುಂಜಾನೆಯ ಸಾಧನೆಯನ್ನು ಬಿಡುವುದಿಲ್ಲ' ಎಂದು. ಪೈಗಂಬರವಾಸಿಗಳಾದ ಅಬ್ದುಲ್ ಕರೀಮಸಾಹೇಬರು, ತಂಬೂರಿಯ ಸ್ವರಹಚ್ಚಿ ಬರೇ 'ಸಾರಿಗಮ ಪಧನಿ' ಸ್ವರಗಳ ಆರೋಹ-ಅವರೋಹಗಳನ್ನು ಆರಾರು ತಾಸು ಹಾಡುತ್ತಿದ್ದರಂತೆ. ಬಡೋದೆಯ ಸಂಗೀತಶಿರೋಮಣಿಗಳಾದ ಫೈಯ್ಯಾಝುಖಾನ್ ಸಾಹೇಬರು ಈಗಲೂ ಮುಸ್ಸಿನಲ್ಲಿಯೂ ಆರಾರು ಎಂಟೆಂಟುತಾಸು ಸಂಗೀತವ್ಯಾಯಾಮ ಮಾಡುತ್ತಾರಂತೆ! ಏಕೆಂದರೆ ತಮ್ಮ ಮಾಧ್ಯಮವು ಶುದ್ಧವಾಗಿರಬೇಕೆಂದು! ರವೀಂದ್ರನಾಥರಂಥ ವಿಶ್ವಕವಿಗಳು ತಮ್ಮ ಓಮು-ಬರೆಹಗಳನ್ನು ಕಣ್ಣುಮುಚ್ಚುವವರೆಗೂ ಬಿಡಲಿಲ್ಲವಲ್ಲ? ಏಕೆ? ತಮ್ಮ ಮಾಧ್ಯಮವಾದ ಶಬ್ದಾರ್ಥಗಳು ಶುದ್ಧವೂ ಸಿದ್ಧವೂ ಆಗಿರಬೇಕೆಂದು. ಇರಲಿ.

ಇಷ್ಟೆಲ್ಲ ಪಟಾಟೋಪವು ಯಾತಕ್ಕಾಗಿ? ರಸಾನಂದಕ್ಕಾಗಿ. ರಸವೆಂದರಾದರೂ ಏನು? ನಾಟ್ಯಾಚಾರ್ಯರಾದ ಭರತಮುನಿಗಳದೊಂದು ಸೂತ್ರವಿದೆ: "ವಿಭಾವಾನುಭಾವ ವ್ಯಭಿಚಾರಿ ಸಂಯೋಗಾತ್ ರಸೋತ್ಪತ್ತಿಃ" ಎಂದು. ಎಂದರೆ ವಿಭಾವ, ಅನುಭಾವ, ಮತ್ತು ವ್ಯಭಿಚಾರಿಭಾವಗಳ ಸಂಯೋಗವು, ಪಾತ್ರದ್ವಾರಎಂದ ರಸಿಕನ ಮನಸ್ಸಿಗೆ ಆದಕೂಡಲೆ ರಸೋತ್ಪತ್ತಿಯಾಗುವುದು ಎಂದು.

ಮಾನಸಸಾಸ್ತ್ರದೃಷ್ಟಿಯಿಂದ ವಿಚಾರಿಸುವಾ. ಎಲ್ಲ ಮಾನವರಿಗೆ ಮನಸ್ಸಿರುವುದು (ಮನುತೇ ಇತಿ ಮಾನವಃ) ವಿಚಾರನಾಡುವ ಶಕ್ತಿಯಿದ್ದವನೇ ಮಾನವ.

ಮಾನವನಲ್ಲಿ ವಿಚಾರದಂತೆ ವಿಕಾರಗಳೂ ಹುಟ್ಟುತ್ತಲೆ ಬರುತ್ತವೆ, ಇರುತ್ತವೆ. ಮಾನವನ ಆತ್ಮದಲ್ಲಿ ಸಂಸ್ಕಾರದಿಂದ, ಪೂರ್ವಜನ್ಮದ ಸಂಸ್ಕಾರದಿಂದ ತಾಯಿಯಂತೆ ಮಗಳು, ತಂದೆಯಂತೆ ಮಗ—ಸಾಧಾರಣವಾಗಿ ಆದರೂ, ಅಜ್ಜನಂತೆ ಮೊಮ್ಮಕ್ಕಳು ಆಗುತ್ತ-ವೆಂದು ವಂಶಶಾಸ್ತ್ರದ ನಿಯಮ. ನನ್ನ ದೇಹ, ನನ್ನ ಊಟದ ರೀತಿ, ನನ್ನ ನಿದ್ರೆ, ನನ್ನ ಸಮಾಧಾನ ಮನಸ್ಸು, ನಮ್ಮ ಅಜ್ಜಂದಿರನ್ನು ಹೋಲುವುದೆಂದು ನಮ್ಮ ಅಜ್ಜಿ ಹೇಳುತ್ತಿದ್ದಳು. ಗರ್ಭವಾದಂದಿನಿಂದಾದರೂ ಈ ಸಂಸ್ಕಾರಗಳಿಗೆ ಪ್ರಾರಂಭವಾಗುತ್ತ-ದೆಂದರೂ ಅಡ್ಡಿಯಿಲ್ಲ. ಗರ್ಭವತಿಯರ ಮನಸ್ಸಿಗೆ ಸಂತಾಪ ಕೊಡಬಾರದು, ದುಃಖದ ಗಾಳಿ ತಗಲಗೊಡಬಾರದು, ಭಯಂಕರವಾದ ದೃಶ್ಯಗಳಿಂದ ದೂರವಾಗಿಡಬೇಕು. ಬಸಿರು ಹೆಂಗುಸರಿಗೆ ಉತ್ಸವ-ದಂಥ ಪ್ರಸಂಗಗಳನ್ನು ತೋರಿಸಬೇಕು, ದಿನಾಲು ಹಾಲು-ಸಕ್ಕರೆಯನ್ನು ಕುಡಿಸಬೇಕು, ಹೊಸ ಸೀರೆ ಕುಪ್ಪಸಗಳಿಂದ ಶೃಂಗರಿಸಬೇಕು. (ವಿಶೇಷತಃ ಶಾಂತಬಣ್ಣದ ಹಸಿರು ಉಡಿಸಬೇಕು.) ಯಾಕೆಂದರೆ ಆಕೆಯ ಗರ್ಭಕ್ಕೆ ಹಾನಿ ತಟ್ಟಬಾರದೆಂದು. ಮುಂದೆ ಆಗುವ ಮಗುವಿನ ಮನಸ್ಸಿನ ಮೇಲೆ ಕೆಟ್ಟ ಸಂಸ್ಕಾರಗಳು ಆಗಬಾರದೆಂದು. ಅಭಿಮನ್ಯುವು ಸುಭದ್ರೆಯ ಹೊಟ್ಟೆಯಲ್ಲಿರುವಾಗ ಚಕ್ರವ್ಯೂಹದ ಕಥೆಯನ್ನು ಕೇಳಿದನಂತೆ. ಚಕ್ರವ್ಯೂಹದಲ್ಲಿ ಹೇಗೆ ಹೋಗಬೇಕೆಂಬುದು ಮುಗಿದ ಕೂಡಲೆ ಸುಭದ್ರೆಗೆ ನಿದ್ದೆ ಬಂತು. ಆದ್ದರಿಂದ ಮುಂದೆ ಅಭಿಮನ್ಯುವಿಗೆ ಪೂರ್ವಸಂಸ್ಕಾರದಿಂದ—ಗರ್ಭಸಂಸ್ಕಾರದಿಂದ—ಚಕ್ರವ್ಯೂಹದೊಳಗೆ ಹೋಗುವುದು ಸುಲಭವಾಯಿತು; ಆದರೆ ತಿರುಗಿ ಬರಲಿಕ್ಕೆ ಬರಲಿಲ್ಲವೆಂದು ಕಥೆ ಇದೆ. ಇದೆಲ್ಲ ತಪ್ಪು, ಮಾನವನ ಮನಸ್ಸೆಂದು ಶುದ್ಧ ಪಾಟಿಯಂತೆ (Clean Slate) ಇರುವುದೆಂದು ಕೆಲವರು— ಇದ್ದರೂ ಮೂರು ದಿವಸಗಳಿಂದ ಮೂರು ವರ್ಷಗಳ ವರೆಗೆ ಮುಂಪೆ ಬೇಕಾಗುವ ಎಲ್ಲ ಭಾವನೆಗಳ ಉಗಮವು— ಕಾಮ ವಾಸನೆಯೂ ಸಹ— ಆಗುವುದೆಂದು ಎಲ್ಲರೂ ಒಪ್ಪುವರು.

ಈ ಸಂಸ್ಕಾರಗಳಾವುವು? ಇವುಗಳಿಗೇ ಭಾವಗಳೆಂದೆನ್ನುವರು. ಕಾಲಿದಾಸನು ಹೇಳಿದಂತೆ ಪೂರ್ವಜನ್ಮದಲ್ಲಿಯ ಸ್ನೇಹ (ದ್ವೇಷ ಮುಂತಾದುವುಗಳು)ಗಳು ಭಾವರೂಪದಿಂದ ಮಾನವನ ಮನೋಭಿತ್ತಿಯಲ್ಲಿ ಮೂಡಿರುತ್ತವೆ. ಸೃಷ್ಟಿಯಲ್ಲಿ ಜೀವ ಹಿಡಿದುಕೊಂಡು ಪ್ರತಿಯೊಂದು ಜೀವಿಯು ಇರಬೇಕೆಂದು ಸೃಷ್ಟಿದೇವಿಯ ಉದ್ದೇಶವಿರುತ್ತದಲ್ಲ! ಅದು ಸಫಲವಾಗಬೇಕೆಂದು ಸೃಷ್ಟಿಯ ಕೆಲವು ಚಮತ್ಕಾರಗಳು ಇರುತ್ತವೆ. ಅವುಗಳಲ್ಲಿ ಮುಖ್ಯವಾದದ್ದು ಪ್ರೇಮ. ಪ್ರೇಮದಿಂದಲೇ ಜೀವಿತದಲ್ಲಿ ಆನಂದ. ಪ್ರೇಮದಿಂದಲೇ ತರುಣ-ತರುಣಿಯರ ಸಮಾಗಮ. (ಇಲ್ಲದಿದ್ದರೆ ಈ ಹೊಲಸು ದೇಹಗಳು

ಒಬ್ಬರೊಬ್ಬರ ಅಪ್ಪುಗೆಯಲ್ಲಿ ಬರುವುದು ಹೇಗೆ?) ಪ್ರೇಮದಿಂದಲೇ ಜನನ. ಪ್ರೇಮದಿಂದಲೇ ಜನನವಾದದ್ದರ ಜತನ (ವಾತ್ಸಲ್ಯ). ಆದ್ದರಿಂದಲೇ ವಾಙ್ಮಯದಲ್ಲಿಯೇ ಶೃಂಗಾರಕ್ಕೆ ಮೊದಲನೆಯ ಪಟ್ಟ. ಎರಡನೆಯದು ಭಯ. ಭಯವಿಲ್ಲದಿದ್ದರೆ ರಕ್ಷಣವಾಗುವ ಸಂಭವವೇ ಇರುತ್ತಿರಲಿಲ್ಲ. ಭಯವಿಲ್ಲದೆ ಬಿಳಿವಣಿಗೆಯೂ ಇಲ್ಲ. ಮೂರನೆಯದು ದುಃಖ. ಭಯವೇತಕ್ಕೆ? ದುಃಖವಾಗುವುದೆಂದು. ಚಿಕ್ಕ ಮಗುವು ಬೆಕ್ಕಿಗೂ ಅಂಜುತ್ತದೆ, ನಾಯಿಗೂ ಅಂಜುತ್ತದೆ, ದೀಪಕ್ಕೂ ಅಂಜುತ್ತದೆ. ಯಾಕೆ? ತನಗೆ ದುಃಖವಾದೀತೆಂದು. ದುಃಖವಾಗಲಿ ಎಂದರೆ, ಅದನ್ನು ತಡೆಯುವ ಸಾಮರ್ಥ್ಯವನ್ನು ದೇವರು ಕೊಟ್ಟಿಲ್ಲವಲ್ಲ! ಆದ್ದರಿಂದಲೇ ಡಾಕ್ಟರು ಎಚ್ಚರು ತಪ್ಪಿಸುವರು. ಎಚ್ಚರು ತಪ್ಪಿದ ಮೇಲೆ ಹುಣ್ಣನ್ನು ಹಣ್ಣಿನಂತೆ ಹಿಂಡಿದರೂ ತಿಳಿಯುವುದಿಲ್ಲ. ಕಾಲನ್ನು ಕರಗಸದಿಂದ ಕೊರೆದುಬಿಟ್ಟರೂ ತಿಳಿಯುವುದಿಲ್ಲ. ಹದಿನಾಲ್ಕು ಭಾವಗಳನ್ನು ಮಾನಸಶಾಸ್ತ್ರಜ್ಞರು ತೆಗೆದಿರುವರು. ಇವುಗಳಿಂದಲೇ ಸೃಷ್ಟಿಯ ಜೀವನವು ಸಾಗಿರುವುದು. ಈ ಭಾವಗಳ ಜಾಗೃತಿಯೇ ರಸಾನಂದ. ಕಲಾವಂತನು ತನ್ನ ಕೃತಿಯನ್ನು ಜನರಿಗೆ ತೋರಿಸಿ, ಅವರಲ್ಲಿ ಭಾವಜಾಗೃತಿಯನ್ನುಂಟುಮಾಡುವನು. ಈ ಭಾವಜಾಗೃತಿಯ ಪರಿಪೂರ್ಣ ಅವಸ್ಥೆಯೇ (State of mind) ರಸವು.

ಭಾವಗಳು ಎರಡು ವಿಧವಾದುವುಗಳು: ಸ್ಥಾಯೀಭಾವ, ವ್ಯಭಿಚಾರೀ ಭಾವ. ಎಷ್ಟು ರಸಗಳೋ ಅಷ್ಟು ಸ್ಥಾಯೀಭಾವಗಳು. ಶೃಂಗಾರ-ಹಾಸ್ಯ-ಕರುಣಾ-ರೌದ್ರ-ವೀರ-ಭಯನಕಾಃ। ಬೀಭತ್ಸ-ಅದ್ಭುತ ಸಂಜ್ಞೌ ಚ ಇತ್ಯಷ್ಟೌ ನಾಟ್ಯೇ ರಸಾಸ್ಮೃತಾಃ॥ ಶಾಂತೋಪಿ ನವಮೋ ರಸಃ॥ ಇವುಗಳಿಗೆ ಅನುಕ್ರಮವಾಗಿ ರತಿರ್ಹಾಸಶ್ಚ-ಶೋಕಶ್ಚ-ಕ್ರೋಧ-ಉತ್ಸಾಹೌ-ಭಯಂ ತಥಾ। ಜುಗುಪ್ಸಾ ವಿಸ್ಮಯಶ್ಚೇತ್ಥಮಷ್ಟೌ ಪ್ರೋಕ್ತಾಃ ಶಮೋಪಿ ಚ॥ ನವರಸ ರುಚಿರವಾದ ಕಲಾನಿರ್ಮಿತಿಯು ಇವೆಲ್ಲ ರಸಗಳನ್ನು (ಅಥವಾ ಕೆಲವು) ತೋರಿಸಿ, ನಮ್ಮಲ್ಲಿರುವ ಸ್ಥಾಯೀಭಾವಗಳನ್ನು ಜಾಗೃತ ಮಾಡುವುದು. ವ್ಯಭಿಚಾರೀ ಭಾವಗಳು ಮೂವತ್ತುಮೂರು; ಅವು ಅಲ್ಲಲ್ಲಿ ಬಂದು ಮುಖ್ಯ ರಸವನ್ನು ಜಾಗೃತಗೊಳಿಸುವುವು. ರಸವು ಯಾವುದೊಂದು ವಸ್ತುವನ್ನಾಗಲಿ ರೂಪವನ್ನಾಗಲಿ ಹಿಡಿದೇ ಇರುವುದು. ಈ ವ್ಯಕ್ತಿಗೆ 'ಆಲಂಬನ ವಿಭಾವ' ಎಂದೆನ್ನುವರು. ಒಬ್ಬವಳ ವಿಷಯದಲ್ಲಿ ಪ್ರೇಮ ಹುಟ್ಟಿಸುವುದಿದ್ದರೆ, ನವಪರಿಣೀತ ಪಥುವನ್ನು ತೋರಿಸಬೇಕಾಗುವುದು. ಇದಕ್ಕೊಂದು ಹಿನ್ನೆಲೆ (Background) ಬೇಕು. ಅದಕ್ಕೆ ಉದ್ದೀಪನ ವಿಭಾವವೆಂದೆನ್ನುವರು. ಒಬ್ಬವಳ ವಿಷಯವಾಗಿ ಜುಗುಪ್ಸೆಯನ್ನು ಹುಟ್ಟಿಸುವುದಾದರೆ, ಒಬ್ಬ ಮುದಿ-ಸೂಳೆ ಮತ್ತು ಒಬ್ಬ ಮುಪ್ಪಿನ ವಿಟ ಇವರ ಪ್ರೇಮವನ್ನು ಬೀದಿಯಲ್ಲಿ ತೋರಿಸಬಹುದು. ಇದರಲ್ಲಿಯೇ ಭಯಾನಕವನ್ನು ತೋರಿಸುವುದಾದರೆ, ಸ್ಮಶಾನ. ಇದರಲ್ಲಿಯೇ ಹಾಸ್ಯವೂ ಬರುವುದು. ಇನ್ನು ಅನುಭಾವ. ಭಾವದ ಅವಿಷ್ಕಾರವೇ ಅನುಭಾವ. ಕ್ರೋಧದ ಭಾವಕ್ಕೆ ಅವಡುಕಚ್ಚುವುದು, ಹುಬ್ಬುಗಂಟಿಕ್ಕುವುದು, ಕೈ ಮುಷ್ಟಿಗಟ್ಟುವುದು. ಪ್ರೇಮಕ್ಕೆ ನಾಚುವುದು, ಸೆರಗು ಸರಿಸಿ ಮತ್ತೆ ತೆಗೆದು ಕೊಳ್ಳುವುದು, ನೆಲವನ್ನು ಕಾಲ ಹೆಬ್ಬೆರಳಿನಿಂದ ಅಗಿಯುವುದು. ಇವೆಲ್ಲ ಜನವ್ಯವಹಾರದಿಂದಲೇ ತಿಳಿದುಕೊಳ್ಳಬೇಕಾಗುತ್ತದೆ. ವಿಭಾವ-ಅನುಭಾವ-ಸಂಚಾರಿ-ಭಾವಗಳನ್ನು ತಾನು ನಿರ್ಮಿಸಿದ ಪಾತ್ರ (ರಸವನ್ನು ಸಾಮಾಜಿಕರಿಗೆ ಕುಡಿಸುವ ಪಾತ್ರೆ)ದಲ್ಲಿ ಮಾತಿನಿಂದ ಹಾಡಿನಿಂದ ಶೃಂಗರಿಸಿ, ತನ್ನಲ್ಲಿರುವ ಭಾವ (Spirit) ಸತ್ಯಗಳನ್ನು ಕಲಾವಂತನು ತೋರಿಸಿ, ಜನರ ಮನಸ್ಸಿನಲ್ಲಿ ರಸವನ್ನು ಹುಟ್ಟಿಸುವನು. ಈ ರಸಾನುಭವವೇ ರಸಾನಂದ.

ಇದನ್ನೆಲ್ಲ ಕೌಶಲ್ಯದಿಂದ ತೋರಿಸುವ ಶಕ್ತಿಗೆ ಸ್ಫೂರ್ತಿಯೆಂದೆನ್ನುವರು. ಇದು ದೇವದತ್ತವಾದ ದಾನ. ಇದು ಎಲ್ಲರಿಗೂ ಬರಲಾರದು. ಇದಕ್ಕೇ ನಮ್ಮಟಾಚಾರ್ಯರು (ಕಾವ್ಯ) ಶಕ್ತಿಯೆಂದು ಹೇಳಿರುವರು. ಶಕ್ತಿಯಿಂದಲೇ ಆಗಲಿಲ್ಲ. ಆ ಶಕ್ತಿಯ ವಿಲಾಸಗಳನ್ನು ತೋರಿಸುವ ನಿಪುಣತೆ ಬೇಕು (Technics). ಈ ನಿಪುಣತೆಯು ಆಯಾ ಕಲೆಯ ಶಾಸ್ತ್ರಗಳಿಂದಲೂ ಜನವ್ಯವಹಾರದ ಸೂಕ್ಷ್ಮ ನಿರೀಕ್ಷಣೆಯಿಂದಲೂ ಬರುವುದು. ಒಂದು ಸಾರ್ವಜನೀನವಾದ ಕಲಾಕೃತಿಯ ನಿರ್ಮಾಣವೆಂದರೆ ಸಾಮಾನ್ಯ ಪರಿಶ್ರಮದ ಕೆಲಸವಲ್ಲ. ಪ್ರತಿಭೆಯು ಕಾಳಿನಷ್ಟು, ಪರಿಶ್ರಮವು

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ

ಸಂಪಾದಕರು : **ಬಸವರಾಜ ಕಟ್ಟೀಮನಿ**

ವರ್ಷಕ್ಕೆ ಆರುನೂರು ಪುಟಗಳಷ್ಟು ಸಾಹಿತ್ಯ. ಕತೆ, ಕಾದಂಬರಿ, ನಾಟಕ, ಪ್ರಬಂಧ ಇತ್ಯಾದಿ.

ವಾ. ಚಂದಾ ೫ ರೂಪಾಯಿ (ರಜಿಸ್ಟರ್ ಅಂಚೆವೆಚ್ಚ ಸೇರಿ)

ಮೊದಲನೆಯ ಪ್ರಕಟಣೆ:

ಸೆರೆಯಿಂದ ಹೊರಗೆ

(ಸಣ್ಣಕತೆಗಳ ಸಂಕಲನ)

ಈಗ ತಾನೆ ಹೊರಟಿದೆ. ಕೂಡಲೆ ಚಂದಾದಾರರಾಗಿರಿ.

ಖಂಡಗದಷ್ಟು! ಬಿತ್ತುವುದು ಕಾಳು, ಜೀರಿಗೆಯಷ್ಟು! ಸಾಸಿವೆ ಕಾಳಿನಂತೆ ಕಲಾಶಕ್ತಿಯಿಂದ ಸಾಸಿವೆಕಾಳು ಗಣಪ್ಪನು ಆಗಬೇಕಾದರೆ, ಗುಡ್ಡದಂಥ ಪರಿಶ್ರಮ ಬೇಕು. ಎಡಿಸನ್ ಎಂಬ ಶಾಸ್ತ್ರಜ್ಞನು "Genius is one percent inspiration and ninety nine percent perspiration" "ಪ್ರತಿಭೆಯು ನೂರಕ್ಕೆ ಒಂದರಂತೆ; ಪರಿಶ್ರಮ ನೂರಕ್ಕೆ ತೊಂಬತ್ತರೊಂಬತ್ತರಂತೆ ಕೂಡಿದರೆಯೇ ಮಹಾನುಭಾವನಾಗುವನು" ಎಂದಿರುವನು. ಕಾರ್ಲಾಯಿಲ್ ತತ್ತ್ವಜ್ಞಾನಿಯು: What is genius but the capacity of taking infinite pains "ಅನಂತ ಪರಿಶ್ರಮ ಮಾಡುವ ಮಹಾಶಕ್ತಿಗೇ ಮಹಾನುಭಾವತೆ" ಎಂದು ಕರೆದಿದ್ದಾನೆ. ದಂಡಿಯೂ ಸಹ ಸೈಸರ್ಗಿಕವಾದ ಪ್ರತಿಭೆಯ ಸಂಗಡ ನಿರ್ಮಲವಾದ ಜ್ಞಾನವು, ಅದರ ಸಂಗಡನೇ ಅಮಂದವಾದ ಅಭಿಯೋಗ (ಅಭ್ಯಾಸ) ವೂ ಬೇಕೆಂದು ಹೇಳಿರುವನು. ಫಿಡಿಯಸ್ ಎಂಬ ಶಿಲ್ಪಿಯು ವ್ಹೀನಸ್ ಎಂಬುವ ತನ್ನ ಪುತ್ತಳಿ (Statue) ಯನ್ನು ಅಧದಿಂದ ಇತಿಯವರೆಗೆ ಕಟೆಯಲಿಕ್ಕೆ ಹದಿನೈದು ವರ್ಷ ವೆಚ್ಚಮಾಡಿದನಂತೆ! ಕೆಲವರು ತಮ್ಮ ಕಾವ್ಯಗಳನ್ನು (ಹದಿನೈದೇ ವರ್ಷವೇಕೆ) ಇಡೀ ಜನ್ಮವೇ ಬರೆದಿರುವರು. ಮಧುರಾಲಾಪ ನಿಸರ್ಗಪಂಡಿತನಾದ ಕವಿಚಕ್ರವರ್ತಿಯಾದ ಕಾಲಿದಾಸನಿಗೂ, ಋತುಸಂಹಾರದಿಂದ ಶಾಕುಂತಲದವರೆಗೆ ಹೋಗಬೇಕಾದರೆ ಎಷ್ಟು ಪರಿಶ್ರಮವಾಗಿರುವುದೆಂಬುದನ್ನು ಊಹನೆಯಿಂದಲೇ ತಿಳಿದುಕೊಳ್ಳಬೇಕಾದ ವಿಷಯವಾಗಿದೆ.

ಬ್ರಹ್ಮಾನಂದಸಹೋದರವಾದ ರಸಾನಂದವೊಂದು, ಈ ಮರ್ತ್ಯ ಜೀವನವು ಸಫಲವಾಗಬೇಕೆಂದು ದೇವರು ದಯಪಾಲಿಸಿದ ವರವಾಗಿವೆ. ಪ್ರಕೃತಿಯೆಂದರೆ ಒಂದು ತೋಟ. ತರತರದ ಬಣ್ಣದ ಹೂವುಗಳಿಂದೊಡಗೂಡಿದ ಗಿಡಗಳಿರುತ್ತವೆ. ಹಣ್ಣು ಹಂಪಲುಗಳ ಸಮೃದ್ಧಿಯಿರುತ್ತದೆ. ಬೇಕಾದವರು ಸವಿಯಬಹುದು. (ದುಡ್ಡಿಲ್ಲದಲೆ, ಪರಿಶ್ರಮವಿಲ್ಲದಲೆ ಅಲ್ಲ). ಸಮೀಪದಲ್ಲಿರುವ ಜುಳು ಜುಳು ಹರಿಯುವ ಮಂದವಾದ ಸುಳಿಗಾಳಿಯು ಉಸವನದ ಸೌಸವವನ್ನು ಸುಲಭವಾಗಿ ತಂದು ಹರಹುತ್ತದೆ. ಇಂಥ ಮನೋಹರವಾದ ತೋಟದ ಸೌಂದರ್ಯವನ್ನು ಅನುಭವಿಸುವುದು ಮಾನವನ ಕರ್ತವ್ಯದಲ್ಲಿ ಒಂದು. ತೋಟದ ಸೌಂದರ್ಯವನ್ನು, ಅದರ ರಚನೆಯನ್ನು, ಆದು ನಮ್ಮ ಮನಸ್ಸಿನಲ್ಲಿ ಮಾಡುವ ಆನಂದೋತ್ಸವವನ್ನು ಅನುಭವಿಸಿ, ಇವುಗಳನ್ನೆಲ್ಲ ಗೈದ ತೋಟಿಗನ ಆತ್ಮದ ಕಡೆಗೂ ಹೋಗಿ ನೋಡಿದರೆ, ಅದೇ ಆನಂದವು ದ್ವಿಗುಣಿತವಾಗುವುದು— ಅನಂತ ಗುಣಿತವಾಗುವುದು. ಬರೇ ಹೋಗಿ ಕುಳಿತುಕೊಂಡರೆಯೂ ಆನಂದವಾಗುವಲ್ಲಿ, ಕಲಾಕಾರನ ಕೌಶಲ್ಯವನ್ನು ಕಂಡುಹಿಡಿಯುವ ಜಾಣತನವನ್ನು ತಂದುಕೊಂಡರೆ, ಹಾಲಿನಲ್ಲಿ ಸಕ್ಕರೆಯನ್ನು ಹಾಕಿದಂತಾಗುವುದು. ಅದರಲ್ಲಿಯೂ ಸಹಾನುಭೂತಿಯ ಕೇಸರವು ಬಿದ್ದಮೇಲೆ ಅದಕ್ಕೆ ಎಷ್ಟು ರುಚಿ ಬರುವುದೆಂಬುದನ್ನು ಪ್ರತ್ಯಕ್ಷವಾಗಿಯೇ ನೋಡಬೇಕಾದ ವಿಷಯ ಮಸಾಲೆಯ ಹಾಲಿನ ರುಚಿಗೆ ಮರ್ಯಾದೆಯಿರುವುದು. ಎಷ್ಟು ಬೇಕೋ ಅಷ್ಟೇ ತೆಗೆದುಕೊಂಡರೆ ಅದಕ್ಕೆ ರುಚಿ. ರಸಾನಂದವು ಹಾಗಲ್ಲ. ಅದು ನಮ್ಮ ಹೃದಯದಲ್ಲಿ ಆನಂದವನ್ನುಂಟುಮಾಡುವುದರಿಂದ ಅದಕ್ಕೆ ಅಂತವೇ ಇಲ್ಲ; ಪಾರವೇ ಇಲ್ಲ. ಅದು ಅನಂತವಾಗಿರುವುದು.

ರಸಾನಂದವನ್ನು ಹೊಂದಬೇಕೆಂದು ನಿಶ್ಚಯ ಮಾಡಿದ ಮೇಲೆ ತಮಗೆ ಯಾವುದಾದರೊಂದನ್ನು ಬೇಕಾದಂತೆ ಆರಿಸಿಕೊಳ್ಳಬೇಕು. ಕಲೆಗಳಲ್ಲಿ ಎರಡು ಶ್ರೋತ್ರೇಂದ್ರಿಯ ವಿಷಯಗಳು: ಸಂಗೀತ, ನಾಟ್ಯ. ಮೂರು ನಯನೇಂದ್ರಿಯ ವಿಷಯಗಳು: ಚಿತ್ರ, ವಾಸ್ತು, ಕಾವ್ಯ. ಇವುಗಳಲ್ಲಿ ಒಂದನ್ನು ಆಯ್ದುಕೊಂಡು ಅದರಲ್ಲೆ ತನ್ಮಯನಾದರೆ ಜೀವನವೇ ಆನಂದಮಯವಾಗುವುದು. ಆದ್ದರಿಂದ ಒಮ್ಮೆಯೇ ಓದಿ 'ಝಟಪಟ' ವಿಮರ್ಶಕನಾಗುವ ಧಾಂದಲೆಯಲ್ಲೆ ಬೀಳದೆ, ರಸಾನುಭವವನ್ನು ಹೊಂದುವ ಗುರಿಯನ್ನೆ ಇಟ್ಟುಕೊಂಡ ಅದನ್ನು ಸಂಪೂರ್ಣವಾಗಿ, ಎಂದರೆ ಎಲ್ಲ ಅಂಗಗಳಿಂದ ತಿಳಿದುಕೊಳ್ಳುವ ಪರಿಶ್ರಮಮಾಡಿದರೆ, ರಸಾನಂದದ ಜೇನುಹುಟ್ಟೇ ಕೈಸಿಕ್ಕಂತಾಗುವುದು. ಎಲ್ಲಕ್ಕೂ ಸುಲಭವಾದದ್ದು ಕಾವ್ಯ, ನಾಟಕ ಅದಕ್ಕೂ ಸುಲಭವಾದದ್ದೆಂದರೆ ಸಂಗೀತ. ಸಂಗೀತವೆಂದರೆ "ವಾದ್ಯ ನೃತ್ಯಂ ತಥಾಗಾನಂ ತ್ರಯಂ ಸಂಗೀತಮುಚ್ಯತೆ" ನೃತ್ಯ, ವಾದ್ಯ ಮತ್ತು ಗೀತಗಳಿಂದೊಡಗೂಡಿದಂತಹದು. ಕಾವ್ಯಗಳಿಗೇನು ಕಡಿಮೆ? ಕನ್ನಡದಲ್ಲಂತೂ ಪರ್ವತವೇ ಇರುವುದು. ಸಂಗೀತಗಾರರಿಗೂ ಕೊರತೆಯಿಲ್ಲ. ಮನೆಯಲ್ಲಿ ಕಾವ್ಯ, ಹೊರಗೆ ಸಂಗೀತ— ಇವೆರಡಾದರೆ ರಸಾನಂದದ ಲೂಟಿಯೇ ಕೈಗೆ ಸಿಕ್ಕಂತೆ.

ಬಂದ ಭಾಗ್ಯ!

ಲೇ. ನ. ಮು. ಕೊ. ಸೋಗಿ, ಮದರಾಸು

★

೧

ನೀರಸವ ರಸಮಾಡಿ ಜೀವನದ ಸೊಗನೀಡಿ ।
ಮನದ ಬಿನದದ ಭಾಗ್ಯವೆಮ್ಮದಿಂದು; ॥
ಬಹುದಿನಗಳಿಂ ಹೆಣಗಿ ಆತುಲತ್ಯಾಗವ ಮಾಡಿ ।
ಬಯಸಿರ್ದ ಬಯಕೆಯನು ಉಂಬೆವಿಂದು. ॥

೨

ಆಳುತನದಿಂದೆಮ್ಮನೆತ್ತಿರುವ ಸೌಭಾಗ್ಯ ।
ನಮ್ಮನ್ನೆ ನಾವಾಳಿ ಸೊಗಯಿಸುವ ಭಾಗ್ಯ; ॥
ವರರೂಪದಿಂ ಹೊಳೆವ ಕಮನೀಯತರ ಭಾಗ್ಯ ।
ಕಣ್ದೆರೆಸಿ ಮನಕುಣಿಸಿ ಮೆರೆಸುವಾ ಭಾಗ್ಯ! ॥

೩

ಮೂಡಣದಿ ಮೂಡಿರ್ದ ಪಡುವಣದಿ ಮುಣುಗಿರ್ದ
ಸ್ವಾತಂತ್ರ್ಯ ಭಾರ್ಗವನು ತಂದ ಭಾಗ್ಯ: ॥
ದಾಸ್ಯದಾ ನಿಶೆಯಲ್ಲಿ ದೃಷ್ಟಿಮಂದಾಗಿರಲು,
ನಮ್ಮ ಕಣ್ಣರಳಿಸಲು ಬಂದ ಭಾಗ್ಯ! ॥

೪

ಅಣ್ಣಗಳು ಅಪ್ಪಗಳು ತಮ್ಮ ಜೀವವ ತೆತ್ತು ।
ನಮಗಿಂದು ನೀಡಿರುವ ಅತುಲ ಸೌಭಾಗ್ಯ; ॥
ವರ್ಷಗಟ್ಟಲೆ ಬಳಲಿ ಪರರ ಪಾದವ ಪೊತ್ತು ।
ಜೀವನವ ಜಗ್ಗಿದ ಅನರ್ಘ್ಯ ಭಾಗ್ಯ! ॥

೫

ಅಶನ-ವಸನವ ತ್ಯಜಿಸಿ ಹಗಲಿರುಳನೆಣಿಸದಲೆ ।
ಹೋರಾಡಿ ಗಳಿಸಿರ್ದ ಅಮರ ಭಾಗ್ಯ; ॥
ಕುರಿತನವ ನೀಗಿಸುತ ನಮ್ಮಿರವ ತಿಳಿಸುತಲಿ ।
ಸಿಂಹತನ ಕೊಟ್ಟ ಸ್ವಾತಂತ್ರ್ಯ ಭಾಗ್ಯ! ॥

೬

ಏನಿನ್ನು ನಮಗಿಂದು? ನಾವಿನ್ನು ಸುಖಿಗಳ್ಕೈ! ।
ದುಃಖದೂರಾಯ್ತೆಂದು ಮೆರೆಯಬೇಕೇ? ॥
ನಮಗಾಗಿ ಮಡಿದಿರ್ದ ನಮ್ಮವರ ಧ್ಯೇಯವನು ।
ನಮ್ಮ ಕರ್ತವ್ಯವನು ಮರೆಯಬೇಕೇ? ॥

೭

ಸ್ವಾತಂತ್ರ್ಯ ಭವನದಲಿ ಸೌಖ್ಯದಾ ಬೀಡಿನಲಿ ।
ಕಾಲಿಟ್ಟೆವೆಂದು ಹಿರಿಹಿಗ್ಗಬೇಕೇ? ॥
ಮನೆಯೊಡೆದು ಮುಕ್ಕಾಗಿ ಬಂಧು ಬೇರ್ಪಟ್ಟನೆಂ- ।
ದತೃಪ್ತಿಯಿಂ ಕೊರಗಿ ಕುಗ್ಗಬೇಕೇ? ॥

೮

ನೋಡಿರೈ ಅಣ್ಣಗಳೆ ಬಾಳು ಹೋಳ್ಮಾಡಿಹರು! ।
ನಮ್ಮ ಸಿರಿ ಭೂಮಿಯನು ಸೂರಗಿಸಿಹರು; ॥
ಫಲಿಸಿದಾ ಭೂಮಿಯನು ಬೀಳ್ಗಡವಿ ಕೊಟ್ಟಿಹರು ।
ನಮ್ಮ ನೆಲದೊಳಗೆ ವಿಷಬೀಜ ಬಿತ್ತಿದರು. ॥

೯

ಸಾಗರವ ಕಡೆದ ಸುರವೃಂದ-ರಾಕ್ಷಸರಂದು ।
ಅಮೃತವನು ಪಡೆದಂತೆ ಪಡೆದ ಭಾಗ್ಯ! ॥
ಆದರೇನಿನ್ನು! ನಡುವೆ ಹಾಲಾ ಹಲವು ಎದ್ದು ।
ಧಗಿಸುವಂತಾದುದೀ ರಾಷ್ಟ್ರದ ವಿಭಾಗ ॥

೧೦

ಬೇಡಿರೈ ಅಣ್ಣಗಳಿ, ಕೈಮುಗಿದು ಬೇಡುನೆನು ।
ಬಂದ ಭಾಗ್ಯವನುಣಪೆ ಬಿಡುವಿರೇಕೆ? ॥
ಕರುಳ್ಕೊರೆದು ಪಡೆದಿರುವ ಭಾಗ್ಯಲಕುಮಿಯ ಬಿಟ್ಟು ।
ಮೊದಲಿದ್ದ ಇರುವಿಕೆಯ ಕರೆವಿರೇಕೆ? ॥

೧೧

ನಮ್ಮವರು ನಮಗಾಗಿ ಮಡಿದುದನು ಮರೆತಿರಾ? ।
ನೋಡಿರದೂ! ನಿಂತಿಹರು ನಾಕದಾ ತೋರಣದಿ! ॥
ನಿಮ್ಮನ್ನು ಹರಸಲಿಕೆ ಕೈ ಚಾಚುತಿಹರದೋ ।
ದೇಶದೊಡಕನು ನೆನೆದು ಮಿಡುಕುತಿಹರು. ॥

೧೨

ಅವರಾತ್ಮಗಳಿಗೆ ಚಿರಶಾಂತಿಯನು ದೊರಕಿಸುತ ।
ಅವರ ಹರಕೆಯ ಪಡೆದು ಧನ್ಯರಾಗಿ ॥
ಅಮ್ಮನನು ಮೆರೆಸಲಿಕೆ ಒಮ್ಮನದಿ ಒಗ್ಗೂಡಿ ।
ಅಡಿಯ ಇಮ್ಮಡಿಗೊಳಿಸಿ ನಡೆಯಿರೈ ಮುಂದೆ! ॥

ಸಿಗದಿದ್ದ ಪೆನ್ನಿಗಾಗಿ

(ಲಘುಪ್ರಬಂಧ)

ಶ್ರೀ. ಎನ್. ಎಸ್. ಗದಗಕರ್ ಬಿ. ಎ. ಧಾರವಾಡ

★

ಕಳೆದ ಪೆನ್ನು ಹಳಿಯದಿದ್ದರೇನಾಯಿತು! ಅದು ಸಲ್ಲಿಸಿದ ವಿವಿಧ ಬಗೆಯ ಸೇವೆಯ ಮೂಲಕ, ಅದರ ಅಗಲಿಕೆ ಹಳಹಳಿಯನ್ನುಂಟುಮಾಡಲೇಬೇಕು. ಇದೊಂದು ಮನೋಧರ್ಮ; ಮಾನವಧರ್ಮ.

ಮಾಡಿದ್ದ ಸೇವೆಯನ್ನು ಮರೆಯುವುದು
ಕೃತಘ್ನತನವಲ್ಲವೆ?

★

ಅಂದು ನಮ್ಮ ವಿದ್ಯಾಲಯದ ಸ್ನೇಹಸಮ್ಮೇಲನ. ಆತಿಥಿಗಳಾಗಿ ದೊರೆತವರು ಬಹುಭಾಷಾ ಬಲ್ಲಿದರು. ಅವರ ನಿರರ್ಗಳ ಮಾತು, ಹಾಸ್ಯ ವೈಖರಿ, ಅಚ್ಚುಕಟ್ಟಿನ ಶೈಲಿ, ಕ್ರಾಂತಿಕಾರಕ ವಿಚಾರಗಳನ್ನೊಳಗೊಂಡ ಭಾಷಣ—ಕೇಳಲು, ಪರಂಪರೆಯಂತೆ ಜನಸಂದಣಿ ನೆರೆದಿತ್ತು. ಇನ್ನೇನು? ಮಾತಿನ ಜೇನು ಸವಿದ ತರುವಾಯ ಬಡಿಸುವವರ ಬಾಯಿಯಲ್ಲಿಯೂ ನೀರು ತರಿಸುವ ಫಲಹಾರದ ವ್ಯವಸ್ಥೆ ಇದ್ದಿತು. ಆಯಿತು, ವಿದ್ಯಾರ್ಥಿ-ಶಿಕ್ಷಕರ ನಡುವಿನ ವ್ಹಾಲಿಬಾಲ್ ಆಟವಂತೂ ಅತ್ಯಂತ ಪ್ರೇಕ್ಷಣೀಯವಿತ್ತೆಂದು ಅಭಿಪ್ರಾಯ ಪಡದವರೇ ಉಳಿಯಲಿಲ್ಲ. ಎಂದೂ ಮನಸ್ಸುಗೊಟ್ಟು ಆಡದ ನನಗೂ ಅಂದು ಆಟದ ಹಿರಿಮೆಯ ಬಗ್ಗೆ ಮನವರಿಕೆಯಾಗದೇ ಹೋಗಲಿಲ್ಲ. ಹೀಗೆ ಭಾವಲೋಕದಲ್ಲಿ ವಿಹರಿಸುತ್ತ ರಾತ್ರಿ ಎಂಟಕ್ಕೆ ವಿವಿಧ ವಿನೋದಾವಳಿ ಕಾರ್ಯಕ್ರಮದ ಗ್ರೀನ್-ರೂಮಿಗೆ ಕಾಲಿಡುವಾಗಲೇ, ಅಕಸ್ಮಿಕ ಕೋಟಿನ ಕಾಲರಿನೆಡೆಗೆ ಕೈ ಹೋಯಿತು. ಯಾವಾಗಲೂ ಕೈ ಚುಂಬಿಸುವ ಪೆನ್ನೇ ಮಾಯವಾಗಿರಬೇಕೆ? ಕ್ಷಣಕಾಲ ಭೂತ-ವರ್ತಮಾನ-ಭವಿಷ್ಯತ್ಕಾಲದ ತಂತಿಯೇ ಕತ್ತರಿಸಿದಂತಾಯಿತು. 'ಎಲ್ಲಿ ಹುಡುಕಲಿ? ಎಲ್ಲೆ ಹುಡುಕಲಿ?' ಎಂದು ಲೆಕ್ಕ ಹಾಕುವಾಗಲೇ, ಮನದ ಹಕ್ಕಿಯು ಗಾವುದ ಗಾವುದ ಗಾವುದ ನುಂದೆ ಹಾರಿ, ಹಿಂದಿನ ನೆನಪಿನ ಸಮಗ್ರ ಸರಪಳಿಯನ್ನೇ ಈಕ್ಷಿಸತೊಡಗಿತು. ಆ ದಿನದ ಗೀತನಾಟಕ, ನೃತ್ಯ, ವೇಣುವಾದನ, ಹ್ಯಾಮ್ಲೆಟ್ ನಾಟಕ, ಅಣಕು—ಯಾವುದೂ ರುಚಿಸಲಿಲ್ಲವೆಂದಮೇಲೆ, ನನ್ನ ಫೌಂಟನ್ ಪೆನ್ನಿನ ಯೋಗ್ಯತೆಯನ್ನು ಏರಿಸಿ ಹೇಳುವೆನೆಂದು ನೀವು ವೃಥಾರೋಪ ಮಾಡುವ ಸಂಭವನವಿದೆ. ಅಂತೇ ಅಂತಹ ಭಾವನೆಗೆ ಎಡೆ ದೊರೆಯದಂತೆ, ಅವರ ನೈಜಚರಿತೆಗೆ ಕೈಹಾಕದೆ ಗತ್ಯಂತರವಿಲ್ಲ. ಈ ವಿಶಾಲವಿಶ್ವದಲ್ಲಿ ದಿನವೂ ಕಳವಾಗುವ ಅಸಂಖ್ಯ ಅಮೂಲ್ಯ ವಸ್ತುಗಳಿರುವಾಗ, ಇಂತಹ ಸಾಮಾನ್ಯ ಪೆನ್ನನ್ನು ಕೇಳುವರಾರು?—ಎಂದು ಶರಾ ಹಾಕುವವರಿಗೆ, ಒಂದು ನೇಳೆ ತಾಳ್ಮೆಯ ಮಹತ್ತ್ವವನ್ನೇ ತಿಳಿಹೇಳುವ ಪ್ರಸಂಗ ಒದಗೀತು!

ಎಂತಹ ಪೆನ್ನೆನ್ನುವಿರಾ? ಅದರ ಬಹಿರಂಗ ಸ್ವರೂಪಕ್ಕೆ ಮರುಳಾಗದವರೇ ಪಾಪಿ! ಥಕಥಕ ಹೊಳೆಯುವ ಆ ಕಪ್ಪು ಬಣ್ಣಕೆ ಹೆಸರಿಡುವವರಾರು? ಕರೀ ಪಕ್ಷಿ ಮಧ್ಯಭಾಗದಲ್ಲಿ ವಿರಾಜಮಾನವಾಗಿದೆ. ಕಾಮನ ಬಿಲ್ಲಿನ ಸಪ್ತರಂಗಗಳನ್ನು ನೆನಪಿಗೆ ತರುವ ಅದರ ಸಿಲೊಲಾಯಿಡ್ ಕ್ಲಿಪ್ಪನ್ನು ಕದಿಯಲು ಮನಸ್ಸು ಮಾಡದ ಸಣ್ಣ ಮಕ್ಕಳು, ಪರಾಮರ್ಶಿಸುವ ಕುತೂಹಲ ತೋರದ ಮುಹಿಳೆಯರೇ ವಿರಳ. ಅಲ್ಪ ಪರಿಚಯವಿದ್ದ ಗೆಳೆಯರೇ ಒಮ್ಮಿಂದೊಮ್ಮೆ ವಿಲಕ್ಷಣ ಸಲುಗೆಯಿಂದ— 'ರಾಯರs ಇದಕ್ಕೇನು ಕೊಟ್ರಿ ಎಂದ ಕೊಂಡಿರಿ—'ಎಂದು ಕೇಳಿದ್ದು ನೆನಪಾದಾಗೊಮ್ಮೆ, ಅಭಿಮಾನದ ಅವರ್ಣನೀಯ ಮಿಂಚು ನನ್ನ ಕಣ್ಣಲ್ಲಿ ಕಾಣಿಸಿಕೊಂಡದ್ದುಂಟು.

ದೊಡ್ಡ ದೊಡ್ಡ ಸ್ಟೇಶನರಿ ಅಂಗಡಿಗಳ ಅಕ್ಷರಶತ್ರು ಮಾಲಕರು ಇಂತಹ ನೂರಾರು ಪೆನ್ನುಗಳನ್ನು ನಿತ್ಯವೂ ಪರದೇಶದಿಂದ ತರಿಸಿ ಮುಂಬಯಿ, ಕಲ್ಕತ್ತೆಯಂತಹ ಗಂಡುಮೆಟ್ಟಿನ ನಗರಗಳಲ್ಲಿ ಮಾರುವಾಗ ಏನೂ ಜಂಭ ಬಡಿಯುವುದಿಲ್ಲ. ಆದರೆ ಸೊಟ್ಟ ಹತ್ತಿಪ್ಪತ್ತು ರೂಪಾಯಿಯ—ಈಗ ಸೆಕೆಂಡ್ ಹ್ಯಾಂಡ್ ಆಗಿದು ಪೆನ್ನಿಗಾಗಿ ಇವನದೆಂತಹ ಅಲೌಕಿಕ ಪ್ರೇಮ?—ಎಂದು ಹಲವು ಚಿಕಿತ್ಸಕರು ಮೂಗು ಮುರಿಯಬಹುದು. ಆದರೆ 'Antiquit thou art a wonderous thing, that being nothin you are every thing' ಎಂಬ ಲ್ಯಾಂಬನ ನುಡಿ ಅವರಿಗೇನ ಗೊತ್ತು? 'ಹಳೆಯದೆಲ್ಲವೂ ಹೊನ್ನು'ಎಂಬ ತೀರ ಸಾಮಾನ್ಯವಾ ಕನ್ನಡದ ಗಾದೆಯನ್ನು ಅರಿತವರಂತೂ ಪೆನ್ನಿನಿಂದ ನನಗುಂಟಾ ವಿಯೋಗ (?) ವ್ಯಥೆಯನ್ನು ಕಡೆಗಣಿಸಲಾರರು.

ಇಂಗ್ಲೀಷ್ ಶಾಲೆಯಲ್ಲಿ ಕಾಲಿಟ್ಟು ೬ನೆಯ ವರ್ಗದಲ್ಲಿ ಬಂದಾಗ ಆ ಪೆನ್ನಿನ ಪ್ರಥಮ ಸಹವಾಸ ಹಾಗೂ ಪರಿಚಯವಾದದ್ದು. ನನ್ನ ಸಹೋದರನು ಮುಂಬಯಿಯಿಂದ ಹೊಸ ಪಾರ್ಕರ್ ಪೆನ್ನು ತಂದಂದಿನಿಂದಲೇ ನನಗೆ ಅವನ ಹಳೆಯ ಪೆನ್ನು—ಈಗ ಚರಿತ್ರಾರ್ಹವಾದದ್ದು—ದೊರೆತದ್ದು. ಏನೋ ಒಂದು ಅನಿರ್ವಚನೀಯ ಮಮತೆಯಿಂದ, ನಾಲ್ಕಾಣೆ ಕೊಟ್ಟು ಸುವರ್ಣಾಕ್ಷರಗಳಿಂದ—ನನ್ನ ಹೆಸರಿನ ಅಕ್ಷರ ಕೆತ್ತಿಸಿದ್ದೆ. ಎಫ್. ವಾಯ್. ದಿಂದಲೂ ಜತನವಾಗಿ ಉಳಿದು, ತೀರ ಮೊನ್ನೆ ಮೊನ್ನೆ ಪಿಎಚ್. ಡಿ. ಅಭ್ಯಾಸ ಅಸ್ತಿವಾರದ ಕಲ್ಪನೆ ಮೊಳಗಿದವರೆಗೂ ಅದಕ್ಕೆ ನನ್ನನ್ನಗಲಲೇ ಅನುವು ದೊರೆತಿದ್ದಿಲ್ಲ. ಜಗತ್ತಿನ ದೃಷ್ಟಿಯಿಂದ ಇಷ್ಟ ಕಾಲಾವಧಿ ದೀರ್ಘವಲ್ಲವೆನಿಸಿದರೂ ನನ್ನ ಸಾಹಿತ್ಯಿಕ ಚಟುವಟಿಕೆಗಳಿಗೇ ಅದು ಸ್ಫೂರ್ತಿಯನ್ನೊದವಿಸುವ ಅದರವಿತ್ತಿಂದ ಯಾರೂ ಅದರ ಕೀರ್ತಿಯ ಬಗ್ಗೆ ತಪ್ಪು ತಿಳಿದುಕೊಳ್ಳಲಿಕ್ಕಿಲ್ಲವಷ್ಟೆ

ಹಾಂ! ಎಷ್ಟೊ ಲೇಖನಗಳೂ ನಿರಾಕೃತವಾಗಿ ಮರಳಿ ಬರಲು ಅದು ದುಡಿಯಿತೆಂದು ಹಲವರು ಉಪದ್ವ್ಯಾಪಿ ಪ್ರಶ್ನೆ ಹಾಕಲಿಸ-ಗಿದರೂ, ಗಟ್ಟಿಮುಟ್ಟಿ ಹೊರಮೈ ಅವರದು! ಒನ್ಮೊಮ್ಮೆಯಂತೂ ವಿಚಾರಗಳ ಅಲೆಗಳು ಏರೇರಿಬರುವಾಗ, ಅದನ್ನು ಹಣಿಗೆ ಹಚ್ಚಿ-ಕೊಂಡು ಕುಳಿತರೆ, ಎಲ್ಲ ಸಂತೆಯ ಚಿಂತೆಯನ್ನು ಮಾಯವಾಗಿಸುವ ಜಾದುಗಾರಿಕೆ ಅದರದೆಂದು ಎನಿಸುತ್ತಿತ್ತು. Sleep that knits up the ravelled sleeve of care ಎಂಬ ಸೆಕ್ಸ್‌ಪಿಯರನ ಉಕ್ತಿಯಂತೆ, ಅದು ನನ್ನನ್ನು ವಿಚಾರದ ಗಲಭೆಯಿಂದ ನಿಶ್ಚಿಂತ-ವಾಗಿ ಪಾರುಮಾಡಿ ಮನಶ್ಶಾಂತಿ ಒದಗಿಸುತ್ತಿತ್ತು.

ಹೆರವರ ವಾಚು, ಸಾಯಕಲ್, ವರ್ತಮಾನಪತ್ರ— ಪ್ರವಾಸ-ದಲ್ಲಿ ಮಾತ್ರ— 'ಒಂದು ಚೂರು ಕೊಡ್ರಿ ಇಲ್ಲೆ' ಎನ್ನುವ ಸುಶಿಕ್ಷಿತರನೇಕರು, ಮೈಮರೆವಿನಿಂದ ಚಕ್ ಬರೆಯುವಾಗ, ಸಹಿ ಮಾಡುವಾಗ, ದಿನಚರಿ ಗೀಚಿ ಒಗೆಯುವಾಗ ನನ್ನ ಪೆನ್ನನ್ನೇ ಬೇಡಿದ್ದುಂಟು. ಆಗ ನನ್ನ ಪೆನ್ನಿನ ಕವಡುಗಂಟಕ ಆಚರಣೆ (attitude) ಯಾವುದು ಗೊತ್ತೆ? ಮಸಿ ಇದ್ದರೂ ಏನೂ ಬರೆಯದೆ ಶಾಶ್ವತ ವಿಶ್ರಾಂತಿಸುಖ ಪಡೆಯುವುದು! ದುಡಿದು ದುಡಿದು ಬೇಸತ್ತು ಜುಗುಪ್ಸೆಯಿಂದ ಗೆಳೆಯರು ಅದನ್ನು ನನಗೆ ತಿರುಗಿ ಕೊಟ್ಟದ್ದುಂಟು. ಸ್ಥಾವರ ಅಸ್ತಿಯ ವಿಲಕ್ಷಣಪ್ರತೀಕವೆಂಬಂತೆ, ಮನೆಯ ಯಾವ ವಿಭಾಗದಲ್ಲಿ ಹೇಗೆಬಿದ್ದಾಗಲೂ ಕೂಡ ವಿರೂಪ-ಹೊಂದಿಲ್ಲ. ಅಷ್ಟು accident proof ಅದು!

ಸಂಘ-ಸಂಸ್ಥೆಗಳ ಆಶುಸ್ಪರ್ಧೆಗಳಿಗಾಗಿ ಯಾವ ವಿಷಯ ಕೊಡಲಿ?—ಎಂದು ಪೇಚಾಡಿ, ಕೊನೆಗೆ ನನ್ನ ಪೆನ್ನು ಕಣ್ಣಿಗೆಬಿದ್ದಾಗ ಅವನ್ನೇ ವಿಷಯವಾಗಿರಿಸಿದ್ದು ಕೇಳಿದಾಗ, ಆದರ ಹೆಗ್ಗಳಿಕೆ ಎಂತಹದೆಂದು ಯಾರೂ ಕಂಡುಕೊಳ್ಳಬಹುದು. ಹಾಗೆಯೇ ಅದರ ಮೇಲೆಯೇ ಮೇಲ್ತರಗತಿಯ ಕವನ ಹೊಸೆದು, ಮೊದಲ ಪಾರಿತೋಷಕಪಡೆದ ವಿದ್ಯಾರ್ಥಿಗಂತೂ ನನ್ನ ಪೆನ್ನಿನ ಲೀಲಾ-ಸಾಮ್ರಾಜ್ಯದ ಅರಿವಾಗಿರಲು ಸಾಕು.

ಪುರಾತನಗ್ರಂಥ ಓದಿದಾಕ್ಷಣ ಆಗಿನ ಸಮಾಜದ ಆಚಾರ, ವಿಚಾರ, ಸಂಸ್ಕೃತಿ, ನೈವಿಧ್ಯ, ಕಣ್ಣಾಟ್ಟ ಸಾಮಾನ್ಯರಿಗೆ ಅದರ್ಶಗಳ ಕಲ್ಪನೆಯಾಗುವಂತೆ, ನನ್ನ ದೃಷ್ಟಿಯಿಂದ, ಸಿಗದಿದ್ದ ಆ ಪೆನ್ನಿಗಾಗಿ ಅಂತಹ ನೆಗಳ್ತೆ ಇದೆ. ಎಲ್ಲಕ್ಕೂ ಮಹತ್ತ್ವದ ಮಾತೆಂದರೆ ನನ್ನ ಪೆನ್ನಿಗೆ ವೈಯಕ್ತಿಕ ಬೆಲೆ ಹೆಚ್ಚು. ಹಾಯಸ್ಕೂಲ್ ಹಾಗೂ ಕಾಲೇಜುಜೀವನದ ರಸನಿಮಿಷಗಳು ಅದರ ಜೀವನದ ಮೇಲೆ ತಮ್ಮ ಮುದ್ರೆಯನ್ನೊತ್ತಿವೆ. ಎಷ್ಟೋ ದಿನಗಳ ಉದಯಾಸ್ತಗಳ ವರ್ಣ-ಗಳು, ಸಾಮಾಜಿಕ- ರಾಜಕೀಯ- ಆರ್ಥಿಕ ತೊಡಕುಗಳ ಪರಿಣಾಮಗಳು, ಬೈಗುಬೆಳಗಿನ ನಲಿವು ಗೆಲವು ಸೋಲು, ಭವಿಷ್ಯತ್ ಜೀವನದ ಆಶೆ ಆಕಾಂಕ್ಷೆಗಳು, ವಿಧವಿಧ ವಿಹಗಸ್ವನಗಳ ನಿಸರ್ಗ, ಗೆಳೆಯರ ಸಹವಾಸ-ಸೌಹಾರ್ದ, ಪ್ರಣಯರಾಗ— ಕ್ರಮಕ್ರಮ-ವಾಗಿ ಅದರ ಜೀವನಕ್ಕೊಂದು ಹೊಸ ಹೊಸ ರೂಪಿಟ್ಟದ್ದು ಸಣ್ಣ ಸಂಗತಿಯೆ? 'Romance is everywhere; lift the stone there you will find, cleave the wood and there it is' ಎಂಬ ಶಾಶ್ವತಸತ್ಯಗಳ ವ್ಯಾಪಕತೆಯಂತೆ, ಆ ಪೆನ್ನನ್ನು ಕೈಯಲ್ಲಿ ತೆಗೆದುಕೊಂಡಾಕ್ಷಣ ಮೈಯಲ್ಲಿ ವಿದ್ಯುತ್ಸಂಚಾರವಾಗುತ್ತಿತ್ತು, ಒನ್ಮೊಮ್ಮೆ. ವಿಶ್ವವ್ಯಾಪಿಯಾದ ಪರಮಾತ್ಮನ ಲೀಲೆ ಹಿರಿವಸ್ತು-ಗಳಲ್ಲಿ ಹುದುಗಿರುವಂತೆ, ಕಿರಿದರಲ್ಲೂ ಕಾಣುವುದು -- ಎಂಬ ತತ್ತ್ವವು ಸ್ಮೃತಿಪಥದಲ್ಲಿ ಮಿಂಚಿ ಮೂಡಿ ಮಾಯವಾಗುತ್ತಿತ್ತು.

ಸಂಘ-ಸಂಸ್ಥೆಗಳ ಕಾರ್ಯಕಲಾಪಗಳು ರಭಸದಿಂದ ಜರುಗಿ-ದಾಗ, ಅಂಗಡಿ-ಅಂಗಡಿಗಳಲ್ಲಿ ಹೊಸ ಮೋರೆಗಳು ಸಾಲಿಟ್ಟಾಗ, ಸೌಂದರ್ಯದಾಗರವಾದ ವಸ್ತುಗಳು ಪ್ರದರ್ಶನಗಳಲ್ಲಿ ಆಕಸ್ಮಿಕ ಕಣ್ಣಿಗೆಬಿದ್ದಾಗ, ನನ್ನ ಪೆನ್ನಿನ ನೆನಪಾಗುವುದು. ಚರಿತ್ರಾರ್ಹವಾದ ನನ್ನ ಪೆನ್ನು ಅನಿವಾರ್ಯವಾಗಿ ಯಾರ ಕೋಟಿನಲ್ಲಿ ಅಡಗಿರ-ಬಹುದೋ—ಎಂಬ ಸಂಶಯವು ಆಗಾಗ ನನ್ನನ್ನಾವರಿಸುವುದು. ಮೊನ್ನೆ ಮೊನ್ನೆ ಕೊಲ್ಲಾಪುರದಿಂದ ಪಾರ್ಕರ್ ಪೆನ್ ತಂದಿದ್ದರೂ ಹಳೆಯದರ ಮೋಹವಳಿದಿಲ್ಲವೆಂದ ಮೇಲೆ, ಅದರ ಐಸಿರಿಗೆ ಕೊನೆ ಎಲ್ಲಿ? ಇನ್ನು ಸಿಗಲಾಗದ ಇಂತಹ ಪೆನ್ನಿಗಾಗಿ ಕೇವಲ ಒಂದು ಲಲಿತಪ್ರಬಂಧ ಬರೆದರೆ ನನಗೆ ಹೇಗೆ ತೃಪ್ತಿ ಆದೀತು? ಆದರೂ ಕವಿಕುಲಗುರು ಕಾಳಿದಾಸನು— 'ಸ್ನಿಗ್ಧಜನ ಸಂವಿಭಕ್ತಂ ಹಿ ದುಃಖಂ ಸಹ್ಯವೇದನಂ ಭವತಿ'—ಎಂದು ನುಡಿದಿರುವುದರಿಂದ, ಬರೆದೇ ತೃಪ್ತಿಪಡೆಯಬೇಕಾಯಿತು ಇಷ್ಟೆ!

ZANDU

PROTOCASEIN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.

BOMBAY 14

Sole Agents:—

M/s. Pranlal and Sons

Chemists, Druggists

Station Road. HUBLI

(H. O. Bangalore City)

ಕೃತಜ್ಞತೆಯ ಕಾಣಿಕೆ

(ಸಣ್ಣ ಕತೆ)*

ಶ್ರೀ. ಮಾ. ನ. ಮೂರ್ತಿ, ತುಮಕೂರು

★

ಕಳಿದ ಮಹಾಯುದ್ಧ ಕಮಲೆಯಂತಹ ನಿರಾಶ್ರಿತೆಯರನ್ನು ಎಷ್ಟೊಂದು ಸೃಷ್ಟಿ-
ಮಾಡಿತೇನೋ! ಆದರೆ ಕಮಲೆಯಂತೆ ಜೀವನ ಸುಖಾಂತವಾಗಿ
ಪರಿಣಮಿಸಿದವರು ಬಹುಜನರು ಇರಲಾರರು.

★

ವಾರದಲ್ಲಿ ಆರು ದಿನಗಳೂ ಬಿಡುವಿಲ್ಲದೆ ದುಡಿದ ಜೀವಿಗಳಿಗೆ ಭಾನುವಾರವು ಅತ್ಯಂತ ಮಹತ್ತ್ವದ ದಿನ; ಕಾರಣ ಅಂದು ಬಿಡುವು. ಆ ದಿನ ಕೊಂಚ ವೇಳಾಪತ್ರಿಕೆಯ ದಿನಚರಿಯ ಕಾರ್ಯ-ಕ್ರಮಕ್ಕೆ ಶರಣಾಗಬೇಕಾಗಿಲ್ಲ. ಮನೆಯಲ್ಲಿ ಎಲ್ಲದಕ್ಕೂ ಗಮನ ಕೊಡಬಹುದು. ಮಡದಿ-ಮಕ್ಕಳೊಡನೆ ಶಾಂತಚಿತ್ತದಿಂದಿರ-ಬಹುದು. ಬಂದವರಿಗೆ ಭೇಟಿಕೊಡಬಹುದು. ಕ್ಷಣಕಾಲ ನೆಂಟ-ರಿಷ್ಟರೊಡನೆ ಮಾತನಾಡಬಹುದು. ಎಲ್ಲರೊಡನೆ ಬೆರೆತು, ಕ್ರೂರಿ-ಯಾದ ಆಫೀಸರನ ವಕ್ರದೃಷ್ಟಿಗೆ ಬೀಳದೆ, ವಿನೋದದಿಂದ ಮೆರೆಯಬಹುದು. ನಿರೀಕ್ಷಣೆಯಲ್ಲಿರುವಷ್ಟು ಆನಂದವು ಲಭಿಸಿದಾಗ ಇರುವುದಿಲ್ಲವಾದರೂ, ಕೊನೆಯಲ್ಲಿ ಎಷ್ಟು ಬೇಗನೆ ಕಳೆದುಹೋಯಿ-ತೆಂಬ ಅಸಂತೋಷಕ್ಕೆ ಅವಕಾಶ ಕೊಡುವುದು.

ಇಂತಹ ಒಂದು ಭಾನುವಾರ ಬೆಳಿಗ್ಗೆ, ಸುಮಾರು ಹತ್ತು ಗಂಟೆಯ ಸಮಯ. ಕಾಫಿ ತಿಂಡಿ ಪೂರೈಸಿಕೊಂಡು ನಾನು, ಶ್ರೀಮಾನ್ ಕಾರಂತರ "ಮರಳಿ ಮಣ್ಣಿಗೆ" ಎಂಬ ಕಾದಂಬರಿಯನ್ನು ಓದುತ್ತಾ ಕೊಠಡಿಯಲ್ಲಿ ಕುಳಿತಿದ್ದೆ. ಹೊರಬಾಗಿಲಲ್ಲಿ "ಭಿಕ್ಷ ನೀಡಿ ತಾಯಿ!" ಎಂಬ ದೈನ್ಯವಾಣಿಯು ಕೇಳಿಸಿತು. ಕಿಟಕಿಯಿಂದ ನೋಡಿದೆ: ಅದೇ ಭಿಕ್ಷುಕ ತರುಣಿ. ಕುತೂಹಲಿಯಾಗಿ ಭಿಕ್ಷವನ್ನೆದುರು ನೋಡುತ್ತಾ ದೀನಮುದ್ರೆಯಿಂದ ನಿಂತಿದ್ದಳು.

ಆಕೆಯು ನಮಗೇನೂ ಹೊಸಬಳಲ್ಲವಾದರೂ, ಚಿರಪರಿಚಿತಳಲ್ಲ. ಸುಮಾರು ಕೆಲವು ತಿಂಗಳುಗಳಿಂದಲೂ ನೋಡುತ್ತಲೇ ಇದ್ದೇವೆ. ಆಕೆ ನಮ್ಮ ಮನೆಗೆ ಬರುತ್ತಿದ್ದುದು ವಾರಕ್ಕೊಮ್ಮೆ. ಅದೂ ಸಹ ಭಾನುವಾರವೇ. ಆಕೆಯನ್ನು ನೋಡಿದಾಗಲೆಲ್ಲಾ, ಸಂಭಾವಿತೆ-ಯೆಂತಲೂ, ಕುಲೀನ ಮನೆತನದವಳೆಂತಲೂ, ಸಂಪ್ರದಾಯಸ್ಥ ಕುಟುಂಬಕ್ಕೆ ಸೇರಿರಬಹುದಾದ ಶೀಲವಂತಳೆಂತಲೂ ಭಾಸವಾಗು-ತ್ತಿತ್ತು. ಆದರೂ ನಮ್ಮ ಗಡಬಿಡಿಯಲ್ಲಿ ಆ ವಿಚಾರವನ್ನು ಯೋಚಿ-ಸುವುದಕ್ಕೂ ಕಾಲಾವಕಾಶವಿರಲಿಲ್ಲ. ಅದೆಲ್ಲ ಮರೆತೇ ಹೋಗು-ತ್ತಿದ್ದಿತು. ಆದರೂ ಒಮ್ಮೆ ನಾನು ನಮ್ಮಾಕೆಯೊಡನೆ ಪ್ರಸ್ತಾ-ಪಿಸಿದೆ. ಅವಳೂ ಸದಭಿಪ್ರಾಯವುಳ್ಳವಳಾಗಿದ್ದಳು ಆ ಭಿಕ್ಷುಕಿಯ ವಿಷಯದಲ್ಲಿ. ಅವಳೊಮ್ಮೆ ಬಂದಾಗ, ಆಕೆಯನ್ನೇ ಕೇಳಿ ವಿಷಯ-ವನ್ನು ತಿಳಿಯಬೇಕೆಂಬ ಕುತೂಹಲ ನಮ್ಮಲ್ಲುಂಟಾಯಿತು. ಆದರೆ ಆಕೆ ಭಿಕ್ಷುಕಿ; ನಾಲ್ಕು ಮನೆ ಅಲೆದರೆ ಒಂದು ದಿನದ ಅನ್ನ. ಆಕೆಯನ್ನು ನಮ್ಮಲ್ಲೇ ನಿಲ್ಲಿಸಿಕೊಂಡರೆ, ಅವಳ ಜೀವನವನ್ನು ಅಂದು ನಾವು ಹಾಳುಮಾಡಿದಂತಾಗುವುದಿಲ್ಲವೇ?—ಎಂಬ ಶಂಕೆ-ಯೊಂದು ಕಡೆ. 'ಆತ್ಮಕತೆಯನ್ನು ಕೇಳಿದರೆ ಆಕೆ ಹೇಳಿಯಾಳೇ? ಏನು ಸಂಕಟದ ಕತೆಯೋ? ಎಲ್ಲಿ ಸಂಕೋಚಪಡುವಳೋ, ಎಷ್ಟು ದುಃಖಿಸುವಳೋ ಅಥವಾ ಉದಾಸೀನದಿಂದ ಹೊರಟು ಹೋಗಿ ಈಕಡೆಗೆ ಬರುವುದನ್ನೇ ನಿಲ್ಲಿಸುವಳೋ'—ಎಂದು ನಾನಾಬಗೆಯ ಸಂಶಯಗಳನ್ನೊಂದು ಕಡೆ. ಹೀಗಾಗಿ ಮನಸ್ಸು ಜೋಗಾಲಿ-ಯಂತೆ ಹೊಯ್ದಾಡತೊಡಗಿತು. ಆದರೂ ಕುತೂಹಲ ಕೇಳ-ಬೇಕಲ್ಲ! ನಮ್ಮ ನಿರ್ಧಾರವನ್ನು ಸ್ಥಿರಗೊಳಿಸಿತು. ಈ ದಿನವೆ ಕೇಳಿಯೇ ಬಿಡಬೇಕೆಂದು ನಿರ್ಧರಿಸಿ, ನಮ್ಮಾಕೆಯನ್ನೇ ಈ ಕಾರ್ಯಕ್ಕೆ ನಿಯಮಿಸಿದೆ. ಎಷ್ಟಾದರೂ ಹೆಂಗಳು ಗಂಡುಸಿನೆದುರಿಗೆ ಮನಬಿಚ್ಚಿ ಮಾತನಾಡಲಪ್ಪೆ? ಆಕೆಯ ಇಂದಿನ ಜೀವನ?....ನಮ್ಮಲ್ಲಿಯೇ ಊಟ ಮಾಡುವಂತೆ ಹೇಳಿದರಾಯಿತು....ಎರಡು ಪಾವು ಅಕ್ಕಿ-ಯೆನ್ನೂ ಕೊಡೋಣ. ಇನ್ನೇನಾಗಬೇಕು?—ಇಷ್ಟನ್ನೂ ಖಚಿತ-ವಾಗಿ ತೀರ್ಮಾನಿಸಿದೆನು. ಇಂದು ನನಗೂ ಪುರಸತ್ತಿತ್ತು. ಅಂತೆಯೇ ನಮ್ಮಾಕೆಯನ್ನು ಈ ಕಾರ್ಯಕ್ಕೆ ಹಚ್ಚಿದೆ. "ಒಳಗೆ ಕರೆದು ಆಕೆಯ ವಿಷಯವನ್ನು ತಿಳಿದುಕೋ" ಎಂದು ಹೇಳಿದೆ. ನಾನು ರೂಮಿನ ಬಾಗಿಲನ್ನು ಭದ್ರಪಡಿಸಿಕೊಂಡು, ನನ್ನ ಇರವಿನ ಸೂಚನೆಯನ್ನೇ ತೋರಗೊಡದೆ ಒಳಗೆ ಕುಳಿತೆ.

* ಜಯಂತಿಯ ಸಣ್ಣ ಕತೆಗಳ ಮೇಲಾಟಕ್ಕೆ ಬಂದುವುಗಳಲ್ಲಿ ಒಳ್ಳೆಯ ಕತೆಯೊಂದಿದು. —ಸಂ. ಜ.

ನಮ್ಮಾಕೆಯು ಬಾಗಿಲ ಬಳಿಗೆ ಹೋಗಿ "ಬಾರಮ್ಮ ಒಳಕ್ಕೆ" ಎಂದಳು. ಭಿಕ್ಷುಕಿಗೆ ಆಶ್ಚರ್ಯವಾಗಿರಬೇಕು. "ಯಾಕೆ ತಾಯಿ! ಭಿಕ್ಷ ಹಾಕಿ, ಮುಂದಕ್ಕೆ ಹೊರಡುವೆ," ಎಂದಳು. ಆಗ ರತ್ನ— ನಮ್ಮಾಕೆ—"ಬಾರಮ್ಮ, ಸಂಕೋಚವೇಕೆ? ಬಲುದಿನದಿಂದ ನಿನ್ನನ್ನು ಒಂದು ವಿಷಯ ಕೇಳಬೇಕೂಂತ ಇದ್ದೆ" ಎಂದಳು. ಆಗ ಆಕೆ "ಏನು ತಾಯಿ, ನನ್ನನ್ನು ಕೇಳುವುದು—ಈ ಭಿಕಾರಿಯನ್ನು? ನಾಲ್ಕು ಮನೆ ಅಲೆದು ಹೊಟ್ಟೆ ಹೊರೆಯುವುದು ನನ್ನ ಹಣೆಯಲ್ಲಿ ಬರೆದಿದೆ. ಭಿಕ್ಷೆಹಾಕಿ ತಾಯಿ ಹೊತ್ತಾಯಿತು, ಮುಂದಕ್ಕೆ ಹೋಗುತ್ತೇನೆ." ಎಂದಳು. ಆಗ ರತ್ನ "ಬಾಮ್ಮಾ, ಪರವಾ ಇಲ್ಲ, ಭಿಕ್ಷಾನೂ ಹಾಕುತ್ತೇನೆ. ಇಲ್ಲೇ ಊಟವನ್ನೂ ಮಾಡಿಕೊಂಡು ಹೋಗು! ಆ ಚಿಂತೆ ಬೇಡ! ನಿನ್ನ ವಿಷಯ, ಕೊಂಚ ಹೇಳಿ ಬಿಡಮ್ಮಾ. ನಿನ್ನನ್ನು ನೋಡಿದರೆ, ಉತ್ತಮ ಸಂಜೀವಕಳಂತೆ ಕಾಣುತ್ತೀಯೆ! ಇನ್ನೂ ಪಾಪ, ವಯಸ್ಸೂ ಚಿಕ್ಕದು. ನಿನಗೇಕೆ ಈ ವೃತ್ತಿ? ನಂಬಿದವರು ಕೈಬಿಟ್ಟರೆ? ತಂದೆ-ತಾಯಿಗಳು ಹೊರದೂಡಿದರೆ? ಆಪ್ತರು ಇಷ್ಟರು ಯಾರೂ ಇಲ್ಲನೇ? ನಾನು ನಿನ್ನ ಸೋದರಿಯೆಂದು ತಿಳಿದುಕೊ— ನಿನ್ನಿಂದಾಗುವ ಸಹಾಯಮಾಡುತ್ತೇನೆ. ವಿಶ್ವಾಸವಿಡು. ನಿನ್ನ ವಿಷಯ ತಿಳಿದು ಕೊಳ್ಳಬೇಕೆಂತ ಬಹುದಿನದ ಆಶೆ. ಒಳಗೆ ಯಾರೂ ಇಲ್ಲ, ಬಾಮ್ಮಾ ನಿಸ್ಸಂಕೋಚವಾಗಿ ಮಾತನಾಡು!" ಎಂದು ಒತ್ತಾಯ ಮಾಡಿದಳು. ಭಿಕ್ಷುಕಿಯ ಕಣ್ಣಲ್ಲಿ ನೀರು ಬಂತು: "ನನ್ನ ಕಷ್ಟ ಹಣೆಯಲ್ಲಿ ಬರೆದದ್ದು ತಾಯಿ; ಇದನ್ನು ನಿಮಗೂ ಹೇಳಿ ಸಂಕಟ ಪಡಿಸಲೇ? ಬೇಡ ತಾಯಿ—ಕ್ಷಮಿಸಿ," ಎಂದು ಕೇಳಿಕೊಂಡಳು. ರತ್ನ ಅವಳನ್ನು ಸಂತೈಸಿ, ಮತ್ತೊಬ್ಬರ ಕಷ್ಟ-ಸುಖಗಳಲ್ಲಿ ಭಾಗಿಯಾಗದವರು ಕಠಿಣ ಹೃದಯರು ಮನುಷ್ಯರಲ್ಲ, ಕಾಡು ಮೃಗಗಳು. ಮಾನವನು ಮಾನವನಿಗೆ ಆಗಲೇ ಬೇಕು. ಕಷ್ಟದಲ್ಲಿ ಇರುವವರಿಗೆ ಕೈಯಿಂದಾದ ನೆರವನ್ನು ನೀಡಲೇ ಬೇಕು, ಅದರಲ್ಲೂ ಸ್ತ್ರೀಜೀವನ: ಅಂಧ ಸಮಾಜದಲ್ಲಿ ಬಹುಕಠಿನ! ಸ್ತ್ರೀಯು ಪುರುಷರ ಕೈಗೊಂಬೆಯಾಗಿದ್ದಾಳೆ; ಯಾವ ರೀತಿ ಇದ್ದರೂ ಕಷ್ಟ. ಹೇಗೆ ಹೇಗೆ ನಡೆದರೂ ತಪ್ಪು. ದಿಕ್ಕಿಲ್ಲದವರ ಸ್ಥಿತಿಯಂತೂ ಬೀದಿಯ ನಾಯಿಗೂ ಕಡೆ. ಇದನ್ನೂ ನಾನು ಬಲ್ಲೆ. ಬಾಮ್ಮಾ, ಒಳಗೆ ಬಾ! ನಿನ್ನ ಕಷ್ಟವೇನಿದ್ದರೂ. ಸಂಕೋಚವಿಲ್ಲದೆ ಹೇಳು," ಎಂದು ಆಕೆಯ ಕೈಹಿಡಿದುಕೊಂಡು ಒಳಗೆ ಕರೆತಂದಳು. ಭಿಕ್ಷುಕಿಗೂ ಆತ್ಮೀಯತೆಯ ಭಾವನೆ ಬೆಳೆದು ಬಂತು. ಭಿಕ್ಷುಕಿಯು ಹೇಳಿದ ಕತೆ ಹೀಗೆ ಸಾಗಿತು:

"ನಮ್ಮ ಸ್ವಂತ ಸ್ಥಳ ಕಿಕ್ಕೇರಿ. ನನ್ನ ತಂದೆ-ತಾಯಿಗಳಿಗೆ ನಾನೊಬ್ಬಳೇ ಮಗಳು. ಬಹಳ ಅಕ್ಕರೆಯಿಂದ ನನ್ನನ್ನು ಸಾಕಿ ಸಲಹಿದರು. ನನ್ನ ತಂದೆಗೆ ಪಿತ್ರಾರ್ಜಿತವಾವ ಕೊಂಚ ಆಸ್ತಿಯಿತ್ತು. ಮನೆಗೆ ವರ್ಷಕ್ಕೆ ಬೇಕಾಗುವಷ್ಟು ದವಸ-ಧಾನ್ಯ ಬರುತ್ತಿತ್ತು. ಅಲ್ಲದೆ ನನ್ನ ತಂದೆ ಪ್ರೈಮರಿ ಸ್ಕೂಲ್ ಮೇಷ್ಟರಾಗಿ ಇದ್ದರು. ತಿಂಗಳಿಗೆ ಇಪ್ಪತ್ತು ರೂಪಾಯಿ ಸಂಬಳ ಬರುತ್ತಿತ್ತು. ಏನೋ, ಸಂಸಾರ ಬಡತನದ್ದೇ ಆದರೂ ಯಾರ ಹಂಗಿಲ್ಲದೆ ಜೀವನ ನಡೆಯಿಸುತ್ತಿದ್ದರು. ನಾನೂ ತಾಯಿ-ತಂದೆಗಳ ಪ್ರೇಮದ ಪ್ರತ್ಯಾಯಿಗಿ ಬೆಳೆದೆ; ಕಿರಿಯತನದಲ್ಲಿ ಕಷ್ಟ ಕಾಣಲಿಲ್ಲ. ನನ್ನನ್ನು ಶಾಲೆಗೆ ಕಳುಹಿಸಿದರು; ನಾನು ಮಿಡ್ಲ್ ಸ್ಕೂಲಿನಲ್ಲಿ ಮೂರನೆಯ ತರಗತಿಯ ವರೆಗೆ ಓದಿದೆ. ನಮ್ಮ ತಂದೆ ಧಾರ್ಮಿಕರು, ಆಚಾರಶೀಲರು; ಸಮಾಜ ಭೀರುಗಳು. ಆದಕಾರಣ ನನಗೆ ಚಿಕ್ಕವಯಸ್ಸಿನಲ್ಲೇ ಲಗ್ನ ಮಾಡಬೇಕೆಂದು ವರಾನ್ವೇಷಣೆಗೆ ತೊಡಗಿದರು. ಎಷ್ಟೋ ಊರುಗಳನ್ನು ತಿರುಗಿಬಂದರು. ದಿನದಿನಕ್ಕೆ ನಿರಾಶೆಯು ಹೆಚ್ಚುತ್ತಿತ್ತು. ವರದಕ್ಷಿಣೆ ಹಾಗೂ ವರೋಪಚಾರ ಸಾಮಗ್ರಿಗಳಿಗೆ ಸಾವಿರಾರು ರೂಪಾಯಿಗಳು ಬೇಕಾಗಿತ್ತು. ಅಷ್ಟೊಂದು ಖರ್ಚು ಮಾಡಿದರೂ ಮನಸ್ಸಿಗೆ ಒಪ್ಪುವ ಕಡೆ ವರನೂ ದೊರೆಯಲಿಲ್ಲ. ಕಡೆಗೆ ಚಿಕ್ಕಮಗಳೂರಿನಲ್ಲಿ ಒಬ್ಬ ವರನನ್ನು ಪತ್ತೆಮಾಡಿದರು. ಆತನಿಗೆ ತಂದೆ-ತಾಯಿಗಳು ಇರಲಿಲ್ಲ. ಹತ್ತಿರದ ನಂಟರೂ ಸಹ ಇರಲಿಲ್ಲ. ಆತನಿಗೆ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಫೇಲಾಗಿತ್ತು. ತಾಲ್ಲೂಕ್‌ಕಛೇರಿಯಲ್ಲಿ ಇಪ್ಪತ್ತೈದು ರೂಪಾಯಿ ವೇತನ ಬರುತ್ತಿತ್ತು. ನಮ್ಮಲ್ಲಿಗೆ ಬಂದು ನನ್ನನ್ನು ನೋಡಿಕೊಂಡು ಹೋದದ್ದಾಯಿತು. ಪರಸ್ಪರ ಒಪ್ಪಿಗೆಯಾದ ನಂತರ, ಮೊತ್ತುಕತೆ ನಿಶ್ಚಯವಾಗಿ ವಿವಾಹವೂ ನಡೆಯಿತು.

ಮೇಲ್ತರಗತಿಯ ಸುಂದರ ಕೈಗಡಿಯಾರಗಳು

ಎಲ್ಲ ಗಡಿಯಾರಗಳೂ ಸ್ವಿಸ್ ತಯಾರಿಕೆಯವು. ಸರಿಯಾದ ಹೊತ್ತನ್ನು ತೋರಿಸುವುದೂ ಆಕರ್ಷಕವಾದವೂ ಆಗಿವೆ. ಕ್ಲಾಸ್ಪಿಗೆ ಪಟ್ಟಿಸಹಿತ. (೨ ವರ್ಷ ಗ್ಯಾರಂಟಿ.)

ಸ್ತ್ರೀಯರಿಗಾಗಿರುವ ಕ್ರೋಮಿಯಂ ಗಡಿಯಾರ ರೂ. ೧೪
" ಸೆಕಂಡ್ " " ೧೫
ಚೌಕಾಕೃತಿ ಕ್ರೋಮಿಯಂವರ್ " " ೨೪
ಹೆಚ್ಚಿನ ತರಗತಿಯದು " " ೨೮
ಹೂವಳುಗಳುಳ್ಳದ್ದು—ಚೌಕಾಕೃತಿ " " ೨೨
ಗುಂ " " " " ೪೨
ಉದ್ದಾಕಾರದ— " ೪೦
" ಹೆಚ್ಚಿನ ತರಗತಿಯದು " " ೫೦
ಎಸ ಹರಳು ಉದ್ದಾಕಾರದ—ಶ್ರೇಷ್ಠವಾದದ್ದು " ೬೦
ಬಂಗಾರದ ಹೊದಿಕೆ ರೂ. ೨೮/- ೧೫ ಹರಳುಗಳುಳ್ಳದ್ದು
ರೋಲ್ಡ್‌ಗೋಲ್ಡ್ ರೂ, ೬೦/- ಹೆಚ್ಚಿನ ತರಗತಿಯದು ೧೦
ಪೋಸ್ಟೇಜು ೧೪ ಆಣೆ. (ಇಂಗ್ಲಿಷಿನಲ್ಲಿ ಬರೆಯಿರಿ.)

KAMALA WATCH CO. (J)
P. O. Box No. 803, CALCUTTA 1.

ಮುಂದೆ ನನ್ನ ತಂದೆ-ತಾಯಿಗಳಿಗೆ ನನ್ನನ್ನು ಆಗಲುವ ಚಿಂತೆಯೊಂದು ಪ್ರಬಲವಾಗುತ್ತಾ ಬಂತು; ಇಬ್ಬರೂ ಪರಿಪರಿಯಾಗಿ ಚಿಂತಿಸಹತ್ತಿದರು. ಕೆಲವು ತಿಂಗಳುಗಳಲ್ಲೇ ಆ ಆಗಲಿಕೆಯ ಕಾಲವೂ ಸಮೀಪಿಸಿತು. ನಾನೂ ದೊಡ್ಡವಳಾದೆ; ಒಂದು ಶುಭದಿನದಲ್ಲಿ ಶೋಭನಪ್ರಸ್ಥವೂ ನಡೆಯಿತು; ನಮ್ಮವರು ನನ್ನನ್ನು ಕಡೂರಿಗೆ ಕರೆದೊಯ್ದರು. ಆಗ ಅವರಿಗೆ ಕಡೂರಿಗೆ ವರ್ಗವಾಗಿತ್ತು.

ಕೆಲವು ಕಾಲ ಕಳೆಯಿತು. ನಮ್ಮ ತಂದೆಗೆ ವಿರಾಮವೇತನ ದೊರೆಯಿತು. ಆದರೂ ಸಹ ಮನೋನಿಶ್ಚಾಂತಿಯಿಲ್ಲವಾಯಿತು. ಸದಾ ನನ್ನದೇ ಚಿಂತೆ. ಈಮಧ್ಯೆ ನಾನು ಜೊಚ್ಚಲು ಗರ್ಭಿಣಿ. ನಮ್ಮವರು ಪತ್ರ ಬರೆದರು ನಮ್ಮ ತಂದೆಗೆ. ನಮ್ಮ ತಂದೆಯೇ ಬಂದು ನನ್ನನ್ನು ಬಾಣಂತನಕ್ಕೆ ಕರೆದೊಯ್ದರು. ಮುಂದೆ ಎಲ್ಲಾ ದೈವಕೃಪೆಯಿಂದ ಸುಸೂತ್ರವಾಗಿ ನೆರವೇರಿತು. ನಾನು ಗಂಡುಮಗುವಿನ ತಾಯಿಯಾದೆ. ನಮ್ಮವರೂ ಇದನ್ನು ತಿಳಿದು ಬಹಳ ಸಂತೋಷಪಟ್ಟರು. ಇನ್ನು ನನ್ನ ತಂದೆ-ತಾಯಿಗಳ ಸಂತೋಷಕ್ಕೆ ಮೇರೆಯೇ ಇಲ್ಲವಾಯಿತು. ಮುಂದೆ ಜಾತಕರ್ಮ, ನಾಮಕರಣ ಮುಂತಾದ ಶಾಸ್ತ್ರಗಳು ನೆರವೇರಿದುವು. ಮಗುವಿಗೆ 'ಸುಂದರ'ನೆಂದು ಹೆಸರಿಟ್ಟೆವು.

ಬಳಿಕ ಕೆಲವು ದಿನಗಳ ತರುವಾಯ, ನಾನು ಕಂದನೊಡನೆ ಪತಿಗೃಹವನ್ನು ಸೇರಿದೆ. ನನ್ನ ಅಗಲಿಕೆಯ ನೋವನ್ನು ನನ್ನ ತಂದೆ-ತಾಯಿಗಳು ಸಹಿಸದಾದರು. ನಮ್ಮ ತಂದೆಯಂತೂ ಚಿಂತೆಗೆ ಗುರಿಯಾಗಿಯೇನೊ, ಹಾಸಿಗೆಹಿಡಿದರು. ಪರಿಸ್ಥಿತಿ ವಿಷಮಸ್ಥಿತಿಗೆ ಮುಟ್ಟಿತು. ನಮ್ಮವರೊಡನೆ ತಂದೆಯ ದರ್ಶನಕ್ಕೆ ಬಂದೆ. ತಾಯಿಾ, ನನ್ನ ದೌರ್ಭಾಗ್ಯ. ತಂದೆಯವರ ಅಂತ್ಯದರ್ಶನವೂ ಲಭಿಸಲಿಲ್ಲ. ಮುಂದೆ ನಮ್ಮ ತಾಯಿ ನಮ್ಮ ಸೋದರಮಾವನ ಮನೆಯನ್ನು ಸೇರಿದಳು.

ನಮಗೂ ತರೀಕೆರೆಗೆ ವರ್ಗವಾಯಿತು. ಇಷ್ಟುಹೊತ್ತಿಗೆ ಸರಿಯಾಗಿ ಯುದ್ಧದ ಬಿಸಿಯು ದೇಶಾದ್ಯಂತ ವ್ಯಾಪಿಸಿತ್ತು. ಕಷ್ಟದ ದಿನಗಳು ಎಲ್ಲರಿಗೂ ಪ್ರಾಪ್ತವಾದುವು. ಪದಾರ್ಥಗಳ ಬೆಲೆಯು ದಿನದಿನಕ್ಕೆ ಏರತೊಡಗಿತು. ಆಹಾರಖಾತೆಯ ಮತ್ತು ಯುದ್ಧಖಾತೆಯ ನೌಕರರಿಗೆ ಮಾತ್ರ ಸುಭಿಕ್ಷವಾಗಿತ್ತು.

ನಮ್ಮವರಿಗೂ ಮಿಲಿಟರಿಗೆ ಸೇರಬೇಕೆಂಬ ಕುತೂಹಲ ಹೆಚ್ಚಿತು; ನನ್ನ ಮತ್ತು ಮಗುವಿನ ಸುಖಕ್ಕಾಗಿ, ನಮ್ಮಗಳ ಭವ್ಯ ಭವಿಷ್ಯಕ್ಕಾಗಿ ಈ ನಿರ್ಧಾರ.ನನ್ನೊಡನೆ ಒಮ್ಮೆ ಪ್ರಸ್ತಾಪಿಸಿದರು; ನಾನು ಬೇಡವೆಂದು ಅಂಗಲಾಚಿ, ಪರಿಪರಿಯಾಗಿ ಕೇಳಿಕೊಂಡೆ. ತಾಯಿ, ನನ್ನ ದುರ್ದೈವ. ಕೊನೆಗೊಮ್ಮೆ ಪತ್ರ ಒಂದನ್ನು ಬರೆದಿಟ್ಟು ಹೊರಟೇ ಹೋದರು. ನಾನು ಸಮ್ಮತಿಸುವುದಿಲ್ಲವೆಂಬ ಶಂಕೆ-

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇಸಿಕೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರಿ ಹೋಗುವದು ಶಕ್ಯವಿರುವದಿಲ್ಲ --ಮತ್ತು ಅತ್ಯೊಂದು ಅವಶ್ಯಕತೆಯೂ ಇರುವದಿಲ್ಲ. ಹೊಲ್ಬೆನೋವು, ವಾಂತಿ, ಅಜೀರ್ಣ, ಕಂಠ, ಮೈನೋವು, ಹಲ್ಲುನೋವು, ಸುಕ್ಕಳ ತಾಪ ವಿಕಾರ ಇತ್ಯಾದಿ ಅನೇಕ ಚಿಲ್ಲರೆ ಬೇನೆಬೇಸಿಕೆಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ನಿಸ್ಸಂಶಯವಾಗಿ ಗುಣಪಡಿಸುತ್ತದೆ. ಕಾಲರಾ ಮತ್ತು ಅಮಂಗಳಕಂಥ ಭಾಷುಕವಾದ ಪೀಡೆಯ ರೋಗಗಳ ಮೇಲೆ ಚಾದೂದಂತೆ ಇದರ ಉಪಯೋಗವಾಗುತ್ತದೆ. ಡಾಕ್ಟರ್ ಬರುವಾಗ ಯಾವಾಗಲೂ ಇದರ ಉಪಯೋಗವಾಗುವದರಿಂದ ಇದರ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಮತ್ತು ಪ್ರವಾಸದಲ್ಲಿ ಪತ್ತರಪಟ್ಟಿ ಇಟ್ಟುಕೊಳ್ಳುವದು (ಉತ್ಕೃಷ್ಟ ಮುಂಜಾಗ್ರತೆಯ ಉಪಾಯವಾಗಿದೆ) ಮೊದಲಿನಿಂದ ಲಕ್ಷವಾಗಿದೆ. ಕಮಿಕ್ಶರ್‌ದಲ್ಲಿಯೂ (ದಿವಸ ವ್ಯಾಪಾರಗಳಲ್ಲಿಯೂ) ಪಕ್ಕೆಗಳಲ್ಲಿ ಅಂಗವಿಜಾರ್ಜಿಯೂ ದೊರೆಯುತ್ತದೆ.

ಜವೇರಿಯನ್ ಮತ್ತು ಕಂ.
ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ -೨.

ಮಕ್ಕಳು ಶಕ್ತಿವಂತರು ತೇಜಸ್ವಿಗಳು ಆಗಬೇಕಿದ್ದರೆ ಬಾಯೋ ಟೋನಾ ಅವಶ್ಯ ಕೊಡಿ.

ಫಾಸ್‌ಫೊರಾ
ಏಕಮೇವ ಟಾನಿಕ್

" ಯಾವುದೇ ಕಾರಣದಿಂದ ಉಂಟಾದ ದೌರ್ಬಲ್ಯವನ್ನು ರೋಗದ ಸರಿಯಾದ ನಿದಾನದಿಂದಲೆ ಗುಣಪಡಿಸಬಹುದು.

ಫಾಸ್ಫೊರಾದಿಂದ ಈ ಅನುಭವ ಬರುವುದು.

ರಾಯ್, ಮತ್ತು ಕಂ.
ಮುಂಬಯಿ

ಯಿಂದ, ಹೀಗೆ ಮಾಡಿರುವುದಾಗಿ ತಿಳಿಸಿದ್ದರು. ನನಗೆ ದಿಕ್ಕೇ ತೋಚದಾಯಿತು; ದಿನವೆಲ್ಲಾ ಗೋಳಾಡಿದೆ. ತಾಯಿಗೆ ಕಾಗದ ಬರೆದೆ; ಅದಕ್ಕೂ ಜವಾಬು ಬರಲಿಲ್ಲ. ಪತಿಯ ಅಗಲುವಿಕೆಯೊಂದು ಕಡೆ, ತಾಯಿಯ ಸಮಾಚಾರ ತಿಳಿಯದ ಚಿಂತೆಯೊಂದು ಕಡೆ ನನ್ನನ್ನು ಕೊರೆಯಹತ್ತಿತು. ಮಗುವಿನ ಮುಖನೋಡಿಕೊಂಡು ಕಾಲ ಹಾಕುತ್ತಿದ್ದೆ. ಎರಡು ತಿಂಗಳ ಬಳಿಕ ನಮ್ಮವರಿಂದ ಒಂದು ಪತ್ರವೂ, ಮಣಿಯಾರ್ಡರೂ ಕೈಸೇರಿತು. ತುಂಬ ಅಭಿಮಾನದಿಂದ ಕಾಗದ ಬರೆದಿದ್ದರು; ಧೈರ್ಯವಾಗಿರಲು ಸಂದೇಶವಿತ್ತಿದ್ದರು. ಕ್ಷೇಮ-ಸಮಾಚಾರಕ್ಕೆ ಕಾಗದ ಬರೆಯುವಂತೆ ವಿಳಾಸವನ್ನೂ ಕೊಟ್ಟಿದ್ದರು. ಮುಂದೆ ತಿಂಗಳಿಗೆ ಸರಿಯಾಗಿ ಹಣ ಕಳುಹಿಸುತ್ತಿದ್ದರು; ಕಾಗದವೂ ಬರುತ್ತಿತ್ತು. ಜೀವನಕ್ಕೆ ಕೊರತೆಯಿರಲಿಲ್ಲವಾದರೂ, ಏಕಾಕಿಯಾಗಿ ಸ್ತ್ರೀಯೊಬ್ಬಳು ಪರವೂರಿನಲ್ಲಿ ಮಾನದಿಂದ ಬಾಳುವುದು ಕಷ್ಟವಾಯಿತು. ಆಗ ಸುಹಾತ್ಮರ ಹಿತವಚನಗಳೇ ನನ್ನನ್ನು ಕಾಪಾಡಿದುವು; ಅದರ ಬಲುಹಿನಿಂದ ನಾನು ಸತೀತ್ವವನ್ನು ರಕ್ಷಿಸಿಕೊಂಡೆ. ನನ್ನ ಕಷ್ಟದ ಸ್ಥಿತಿಯನ್ನು ವರ್ಣಿಸಿ, ಊರಿಗೆ ಮರಳುವಂತೆ ಅವರಿಗೆ ಕಾಗದ ಬರೆದೆ; ಅವರು ಸಂತೈಸಿ ಪತ್ರಬರೆದರು. ಮುಂದೆ ಅವರು ಜಬ್ಬಲಪುರ, ದೆಹಲಿ, ಪೆಷಾವರ್, ರಂಗೂನ್ ಕೇಂದ್ರಗಳಲ್ಲಿ ದುಡಿಯಬೇಕಾಯಿತು. ಪ್ರತಿತಿಂಗಳೂ ಹಣವು ಬರುತ್ತಿತ್ತು; ನಮ್ಮ ತಾಯಿಯಾದರೂ ನನ್ನ ನೆರವಿನಲ್ಲಿದ್ದರೆ, ನೆಮ್ಮದಿಯಿಂದ ಇರಬಹುದಾಗಿತ್ತು; ನನ್ನ ದುರದೃಷ್ಟ, ಆಕೆಯ ಸುಳಿವೇ ಹತ್ತಲಿಲ್ಲ.

ಹಾಗೂ ಹೀಗೂ ಕಣ್ಣೀರಿನಲ್ಲಿ ಕೈ ತೊಳೆಯುತ್ತ, ಒಂದು ವರ್ಷ ಕಳೆದೆ. ಇಷ್ಟರ ಮಟ್ಟಿಗೆ ನಾನಿರುವುದೂ ದೇವರ ಮನಸ್ಸಿಗೆ ಬರಲಿಲ್ಲವೇನೋ! ಇದ್ದಕ್ಕಿದ್ದ ಹಾಗೇ ಮಗು ಹಾಸಿಗೆ ಹಿಡಿಯಿತು; ವಿಷಮ ಶೀತಜ್ವರ ದಿನದಿನಕ್ಕೆ ಹೆಚ್ಚಿತು. ನನ್ನ ಕೈಯಲಾದಷ್ಟು ಚಿಕಿತ್ಸೆಮಾಡಿಸಿದೆ; ಕಂಡ ದೇವರಿಗೆಲ್ಲ ಕೈಮುಗಿದೆ; ನಮ್ಮವರಿಗೂ ಕಾಗದ ಬರೆದೆ. ಅವರೂ ಬರಲಿಲ್ಲ; ನನ್ನ ಸರ್ವಸ್ವ-ಮಗು ನನ್ನ ಕೈಬಿಟ್ಟಿತು. ದಿಕ್ಕೇ ತೋಚದಾಯಿತು ನನಗೆ. ಈ ನಿರ್ಗತಿಕ ಸ್ಥಿತಿಯಲ್ಲಿ ಪರಿಚಯದ ಜನರೊಡನೆ ಬಾಳಲಾರದೆ, ಒಂದು ರಾತ್ರಿ ಮನೆ ಬಿಟ್ಟು ಹೊರಟು, ರೈಲಿನಲ್ಲಿ ಪ್ರಯಾಣ ಮಾಡಿ ಈ ಊರನ್ನು ಬಂದು ಸೇರಿದೆ. ಸಂಭಾವಿತರನ್ನಾಶ್ರಯಿಸಿ ಒಂದು ಕೊಠಡಿಯನ್ನು ಪಡೆದೆ. ಅವರು ಪುನಃ ಬಂದಾರು, ನನಗಾಗಿ ಜೀವಿಸಿದ್ದಾರು, ಪತಿದೇವನ ದರ್ಶನವಾದೀತೆಂಬ ಅಳಿಯಾಸೆಯಿಂದ, ನಿಮ್ಮಂಥ ನಾಲ್ಕುಮಂದಿಯ ಮನೆಯಲ್ಲಿ ಭಿಕ್ಷೆ ಬೇಡಿ ಜೀವ ಹಿಡಿದಿದ್ದೇನೆ, ತಾಯಿ. ಆ ಭಾಗ್ಯವೆಂದು ಬಂದೀತೋ? ಯಾರು ಬಲ್ಲರು?" ಎಂದಾಕೆ ಕಣ್ಣೊರಸಿಕೊಂಡಳು.

ಅಂದು ಆಕೆಗೆ ನಮ್ಮ ಮನೆಯಲ್ಲೇ ಊಟ ಮಾಡಿಸಿದೆವು. ರತ್ನನ ನೆರವಿನಿಂದ ಆಕೆಯ ಪತಿಯ ಜಾಹಿರಿ, ಸುಮಾರು ವಯಸ್ಸು ಸುತ್ತು ಹೆಸರು— ಇವನ್ನು ತಿಳಿದುಕೊಂಡೆನು. ಆಶನ ಬಗ್ಗೆ ಪತ್ತೆಯ ತರದೂದು ಮಾಡುವುದಾಗಿ, ಆಕೆಗೆ ಧೈರ್ಯ ಹೇಳಿ ಕಳುಹಿಸಿಕೊಟ್ಟೆವು.

* * * *

ಘೋರ ಯುದ್ಧವು ಈ ವೇಳೆಗೆ ಮುಕ್ತಾಯವಾಯಿತು. ನಾನು ಎಲ್ಲಾ ಮಿಲಿಟರಿ ಕೇಂದ್ರಗಳಿಗೂ ಪತ್ರವ್ಯವಹಾರ ಬೆಳಸಿದೆ; ಪತ್ತೆಯಾಗಲಿಲ್ಲ. ಮೂರು ತಿಂಗಳ ಮೇಲೆ, ಸಿಂಗಪೂರ್ ಕೇಂದ್ರದಿಂದ ಪತ್ರ ಬಂತು. ಇದೂ ಹೆಚ್ಚು ಆಶಾದಾಯಕವಾಗಿರದಿದ್ದರೂ, ನನಗೆ ಕೊಂಚ ಆಶೆಯ ಕುಡಿಯನ್ನು ಹುಟ್ಟಿಸಿತು. ಆತನು ಬರ್ಮಾ ಮುತ್ತಿಗೆಯಲ್ಲಿ ಜಪಾನರ ಕೈಸೆರೆಯಾಗಿರಬೇಕು ಅಥವಾ I. N. A ಗೆ ಸೇರಿಕೊಂಡಿರಬೇಕು— ಎಂಬ ನಿರ್ಧಾರಕ್ಕೆ ಬಂದೆನು.

ಮತ್ತೆ ಕೆಲವು ದಿನಗಳು ನಿರಾಶೆಯಿಂದ ಸಾಗಿದುವು; ಮುಂದೆ I. N. A ದವರನ್ನು ಕೆಂಪು ಕೋಟೆಯಲ್ಲಿ ಬಂಧಿಸಿರುವುದು, ಅವರ ವಿಚಾರಣೆ, ದೇಶಪ್ರೇಮಿಗಳೂ ವಾಗ್ಮಿಗಳೂ ಆದ ಭೂಲಾಭಾಯ್ ದೇಸಾಯರೂ, ಅವರ ಮಿತ್ರರೂ ಅವರುಗಳ ಪರ ವಾದ ಮಾಡಿದ್ದು, I N. A. ದವರ ಬಿಡುಗಡೆ— ಮುಂತಾದ ಸುದ್ದಿಗಳು ವಾರ್ತಾಪತ್ರಿಕೆಗಳಲ್ಲಿ ನಾಡಿಗೆಲ್ಲಾ ಹಬ್ಬಿದುವು. ಶೂರಾಗ್ರಣಿ ನೇತಾಜಿ ಬೋಸರ ಪಡೆಗೆ ಸೇರಿ ತಾಯ್ನಾಡಿಗೆ ಸೇವೆ ಸಲ್ಲಿಸಿದ ಧೀರರು, ಬಿಡುಗಡೆ ಹೊಂದಿ ತಮ್ಮ ತಮ್ಮ ಸ್ಥಳಗಳಿಗೆ

ಬಹುಮಾನ ೫೦೦ ರೂ.

— ಅದ್ಭುತ ಸಂಶೋಧನ —

ಮಾಯಾ ಉಂಗುರ

ಈ ಉಂಗುರವನ್ನು ಮೆಸ್ಮೆರಿಜಮ್ ಹಾಗು ಮಂತ್ರಶಕ್ತಿಯಿಂದ ತಯಾರಿಸಲಾಗಿದ್ದು ಇದರ ಮಂತ್ರಶಕ್ತಿ ಅಪಾರವಾಗಿದೆ. ಈ ಉಂಗುರವನ್ನು ಧರಿಸುವವರು ಇಚ್ಛಿಸಿದ ಯಾವುದೇ ಅಸಾಧ್ಯ ಕಾರ್ಯವು ಸುಲಭವಾಗಿ ಸಾಧಿಸುವದು. ಈ ಉಂಗುರವು ನಿಮ್ಮ ಬೆರಳಿನಲ್ಲಿದ್ದರೆ ನಿಮಗೆ ಯಾವ ಸಂಕಟವೂ ಕಷ್ಟವೂ ಒದಗಿ ಬರದು. ಕೆಟ್ಟ ನಕ್ಷತ್ರಗಳು ನಿಮ್ಮನ್ನು ಪೀಡಿಸಲಾರವು. ಈ ಉಂಗುರ ಧಾರಿಗಳು ಎಂಥ ಗರ್ವಿಷ್ಠ ಹಾಗು ತಲೆಬಾಗದ ವ್ಯಕ್ತಿಯ ಮೇಲೂ (ಆ ವ್ಯಕ್ತಿ ಗಂಡಿರಲಿ, ಹೆಣ್ಣಿರಲಿ) ಅಧಿಕಾರವನ್ನು ನಡಸಬಹುದು. ಇದರ ಮೂಲಕ ನೀವು ಪ್ರೇಮವಿವಾಹ, ಕೋರ್ಟು ವ್ಯವಹಾರಗಳಲ್ಲಿ, ನೌಕರಿಯಲ್ಲಿ ಗೆಲವನ್ನು ಪಡೆಯುವದಲ್ಲದೆ ಧನವನ್ನು ಗಳಿಸುವಿರಿ. ನಿಮಗೆ ಈ ಉಂಗುರ ಅಂಗರಕ್ಷಕನಂತೆ ಬೆಂಬಲವಾಗಿರುವದು. ಒಮ್ಮೆ ಇದನ್ನು ತರಿಸಿ. ಮೊದಲನೆ ರಾತ್ರಿಯೇ ಇದರ ಚಮತ್ಕಾರ ನಿಮ್ಮ ಅನುಭವಕ್ಕೆ ಬಂದೀತು.

ಉಂಗುರ ೧ ಕ್ಕೆ .... ೨—೦—೦

೩ ಉಂಗುರಗಳಿಗೆ .... ೫—೦—೦

ಪ್ಯಾಕಿಂಗು ಪೋಸ್ಟು ಖರ್ಚು ಬೇರೆ.

MAHAKALI ASHRAM,
NO. 247, KANPUR.

ಹಿಂದಿರುಗಿದರು. ಮಹಾತ್ಮರ ಹಿರಿಯ ತಪಸ್ಸಿನ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. I N. A ದಿಂದ ಮರಳಿದ ಯಾರನ್ನಾದರೂ ವಿಚಾರಿಸುವ ಕುತೂಹಲ ಹೆಚ್ಚಿತು. ಬೆಂಗಳೂರಿಗೆ ಹೊರಟೆ; ಪೂನಾ ಪ್ಯಾಸೆಂಜರಿನಲ್ಲಿ ಒಬ್ಬ ಮಿಲಿಟರಿ ಆಫೀಸರು ಭೇಟಿಯಾದರು. ಅವರ ಪರಿಚಯ ಪಡೆದೆ—ಆಕೆಯ ಭಾಗ್ಯ ವಿಶೇಷ—ಆತ I. N. A ದವರು. ಅವರ ಹೆಸರು ವೆಂಕಟರಾವ್, ಕೋಲಾರದವರು—ಎಂದು ತಿಳಿಯಿತು ನನ್ನಲ್ಲಿದ್ದ ಚೀಟಿ ತೆಗೆದು 'ಇವರನ್ನು ಬಲ್ಲಿರಾ, ಸಾರ್?' ಎಂದೆ. 'ಓ, ಭೀಮರಾವ್ ಗೊತ್ತು. ನಮ್ಮೊಡನೆ ಇದ್ದರು; ನಮ್ಮ ಪಡೆಗೆ ಮುಖ್ಯಸ್ಥರು—ತುಂಬಾ ಒಳ್ಳೆಯವರು. ಬಿಡುಗಡೆ ಹೊಂದಿ ಇದೇ ರೈಲಿನಲ್ಲಿ ಬಂದರು; ಬೀರೂರಲ್ಲಿ ತರೀಕೆರೆಗೆ ಹೋಗುತ್ತೇನೆಂತ ಹೇಳಿ ಇಳಿದು ಬಿಟ್ಟರು. ಸಾರ್, ಅವರು ನಿಮಗೇನಾಗಬೇಕು?' ಎಂದರು. ನಾನು ನಾಲ್ಕು ಮಾತಿನಲ್ಲಿ ನಿಜಾರ ತಿಳಿಸಿದೆ; ಅಷ್ಟರಲ್ಲಿ "ಸಿಟಿ" ಸ್ಟೇಶನ್ ಬಂದಿತು. ಅವರನ್ನು ವಂದಿಸಿ, ಬೇರೆ ರೈಲಿನಲ್ಲಿ ಊರಿಗೆ ವಾಪಸು ಬಂದೆನು.

ರತ್ನನಿಗೆ ವಿವರ ತಿಳಿಸಿದೆ; ಪತಿಯು ಜೀವಂತವಿರುವುದು ಆಕೆಯ ಮಾಂಗಲ್ಯಭಾಗ್ಯವೆಂದೆ. ಆಕೆಯನ್ನೂ ಕರೆಯಿಸಿ ಎಲ್ಲವನ್ನೂ ತಿಳಿಸಿದ್ದಾಯಿತು. ಆ ನೊಂದ ಜೀವಕ್ಕಾದ ಆನಂದನನ್ನು ದೇವನೇ ಬಲ್ಲ. ಆಕೆ ತರೀಕೆರೆಗೆ ಹೋಗಬೇಕೆಂದು ಬಯಸಿದರು; ಒಬ್ಬಾಕೆಯನ್ನೇ ಕಳುಹಿಸಲಾರದೆ ನಾವೂ ಹೊರಟೆವು ಜೊತೆಯಲ್ಲಿ. ಆಕೆ ಬೇಡವೆಂದರೂ ನಮ್ಮಾಕೆಯು ಸೋದರಿಯನ್ನು ಶೃಂಗರಿಸಿದಳು. ಬೀರೂರು ನಿಲ್ದಾಣದಲ್ಲಿ ರೈಲನ್ನು ಬದಲಾಯಿಸಬೇಕೆಂದು ಇಳಿದೆವು. ಇನ್ನೂ ಕಾಲಾವಶಕಾವಿತ್ತು ರೈಲು ಹೊರಡಲು. ಹೆಂಗುಸರನ್ನು ವೆಯ್ಟಿಂಗ್ ರೂಮಿನಲ್ಲಿ ಕೂರಿಸಿ, ನಾನು ಪ್ಲ್ಯಾಟಫಾರಂನಲ್ಲಿ ಅಲೆದಾಡುತ್ತಿದ್ದೆ. ಒಬ್ಬ ಮಿಲಿಟರಿಯವ, ಒಂದು ಕಲ್ಲು ಬೆಂಚಿನ ಮೇಲೆ ಯೋಚನಾಪರನಾಗಿ ಕುಳಿತಿದ್ದ. ಚಹರೆಯಿಂದ ಹೋಲಿಕೆ ಸಿಕ್ಕಿತು. ನಾನೂ ಪಕ್ಕದಲ್ಲಿ ಕುಳಿತೆ; ಸಂಭಾಷಣೆಗೆ ಪ್ರಾರಂಭಿಸಿದೆ. ಅವರೂ ಆರೆಮನಸ್ಸಿನಿಂದ, ಬೇಜಾರಿನಿಂದ ಏನೇನೋ ಹೇಳಿದರು. "ತಮ್ಮ ಹೆಸರು?" ಎಂದೆ. "ಭೀಮರಾವ್" ಎಂದರು.

"ತರೀಕೆರೆಗೆ ಹೋಗಿ ಬಂದಿರಾ?"

"ಹೌದು ಸಾರ್."

"ಮನೆಯವರ ಪತ್ತೆ ಸಿಕ್ಕಿತೋ?"

"ಇಲ್ಲ ಸಾರ್. ನನ್ನ ಪತ್ನಿ ಊರನ್ನು ಬಿಟ್ಟು ಓ—ಲ ತಿಂಗಳಾಯಿತಂತೆ— ಏನಾದಳೋ ಎಲ್ಲಿ ಹೋದಳೋ! ತಾವು ಬಹಳ ಕುತೂಹಲದಿಂದ ವಿಚಾರಿಸುತ್ತೀರಿ—ತಮಗೇನಾದರೂ ಗೊತ್ತೆ?'

"ಬನ್ನಿ ತೋರಿಸುತ್ತೇನೆ" ಎಂದು ಆತನನ್ನು ಕರೆದುಕೊಂಡು ಬಂಗೆ.

ಇಬ್ಬರೂ ಒಬ್ಬರನ್ನೊಬ್ಬರು ಕ್ಷಣಕಾಲ ಈಕ್ಷಿಸಿದರು. ಆತ "ಕಮಲಾ!" ಎಂದರು. ಇಬ್ಬರ ಕಣ್ಣುಗಳಿಂದಲೂ ಆನಂದಬಾಷ್ಪ ಸುರಿಯುತ್ತಿತ್ತು. ಆನಂದದ ಭರದಿಂದ ಆಕೆ ಮುಂದಕ್ಕೆ ಧಾವಿಸಿ ಆತನನ್ನು ಅಪ್ಪಿಕೊಂಡರು; ಇದನ್ನು ಕಂಡ ನಾವೇ ಧನ್ಯರೆಂದು ನಮಗೆನಿಸಿತು. ಬಳಿಕ ಆಕೆ ನನಗೂ ನಮ್ಮಾಕೆಗೂ ನಮಸ್ಕರಿಸಿದಳು. "ತಾವು ನನ್ನ ಭಾಗದ ದೇವರು, ಪತಿಯನ್ನು ದೊರೆಕಿಸಿಕೊಟ್ಟಿರಿ. ದೇವರು ನಿಮ್ಮನ್ನು ಸುಖವಾಗಿ ಕಾಪಾಡಲಿ ಸೋದರಿಯವರ ಮುತ್ತೈದೆತನ ಸ್ಥಿರವಾಗಿರಲಿ," ಎನ್ನುತ್ತಾ ಆಕೆ ರತ್ನನನ್ನಾಲಿಂಗಿಸಿಕೊಂಡರು. ಅನಂತರ ಈ ಸುಯೋಗದ ಸಂತೋಷದಿಂದ, ಬಳಿಯ ಹೋಟಲಿನಿಂದ ಕಾಫಿ ತಿಂಡಿ ತರಿಸಿ ವಿನೋದವಾಗಿ ಮಾತನಾಡುತ್ತಾ ನಿಂತೆವು.

ಭೀಮರಾಯರನ್ನು ಆಗಲೇ ಪೂನಾದಲ್ಲಿ ಮಿಲಿಟರಿ ಕೇಂದ್ರದ Accountnt ಆಗಿ ನೇಮಕ ಮಾಡಿದ್ದರು. ಪತ್ನಿಯನ್ನು ಕರೆದೊಯ್ಯಬೇಕೆಂದು ಆತ ಬಂದುದಾಗಿಯೂ, ನಿರಾಶನಾಗಿ ಹಿಂದಿರುಗುವ ವೇಳೆಗೆ ಪತ್ನಿ ದೊರೆತು, ಜೀವನದಲ್ಲಿ ಸುಪ್ರಭಾತವಾಯಿತೆಂದೂ ಹೇಳಿ ಹಿಗ್ಗಿದರು. ನನ್ನನ್ನು ಬಹುವಾಗಿ ವಂದಿಸಿ ಪೂನಾಕ್ಕೆ ಬರಬೇಕೆಂದು ಕೇಳಿಕೊಂಡರು; ಅವರ ಪತ್ನಿಯು ಪ್ರಾರ್ಥಿಸಿದರು.

ಆಗ ನನಗೆನ್ನಿಸಿತು: "ಆಹಾ ದೈವ ವಿಲಾಸವೇ! ಕ್ಷಣ ಹಿಂದಿಕ್ಕಿಲ್ಲದ ಭಿಕಾರಿ—ಈಗ ಆಫೀಸರನ ಪತ್ನಿ. ದೈವ ಕಣ್ಣು ತೆರೆದರೆ

ಮೂರಿಟ್ಟಾರಕ್ಕು ಆರು ಹನ್ನೆರಡಕ್ಕು
ಹೇರುವಾ ಗೊಡ್ಡು ಹಯನಕ್ಕು
ಗುರುಕರುಣ ಸೇರುವಾ ಕಾಲಕ್ಕೆ"

ಎಂಬ ಸರ್ವಜ್ಞನ ನುಡಿಯು ನೆನಪಿಗೆ ಬಂತು; ಇದುವೇ ಅದೃಷ್ಟ

ನಾವು ನೆಪ ಹೇಳಿ, ದಂಪತಿಗಳನ್ನು ಸಂತಸದಿಂದ ಬೀಳ್ಕೊಟ್ಟೆವು. ರೈಲಿನಲ್ಲಿ ಕುಳಿತಾಗ ರತ್ನ "ತಂಗೀ ಕಮಲಾ, ಮರೆಂಬೇಡ ಕಂಡೆಯಾ? ಆಫೀಸರ ಪತ್ನಿಯಾದೆ." ಎಂದಳು. "ಅಕ್ಕ ಎಂದಿಗೆ ಮರೆತೇನು? ನಿಮ್ಮ ಹೆಸರಿನಲ್ಲಿ ದೇವರಿಗೆ ನಂದಾದೀಪ ಹಚ್ಚುವೆ; ನಿಮ್ಮ ಅಭ್ಯುದಯಕ್ಕೆ ಸರ್ವದಾ ಜಗದೀಶ್ವರನನ್ನು ಪ್ರಾರ್ಥಿಸುವೆ, ನೆನಪಿರಲಿ, ಅಕ್ಕ!" ಎಂದರಾಕೆ.

ಸರಿ. ಅವರು ಪ್ರಯಾಣ ಮಾಡಿದರು. ನಾವು ನಮ್ಮೂರಿಗೆ ಬಂದೆವು. ಪ್ರತಿತಿಂಗಳೂ ಪೂನಾದಿಂದ ಪತ್ರ ಬರುತ್ತಿತ್ತು. ಆ ವರ್ಷ ದೀಪಾವಳಿ ದೊಡ್ಡ ಹಬ್ಬ. ಹಬ್ಬಕ್ಕೆ ಖಂಡಿತವಾಗಿ ಬರಬೇಕೆಂದು ಭೀಮರಾಯರು ಆಹ್ವಾನಿಸಿದರು. ನಾವು ಹೋಗಲು ಆಗಲಿಲ್ಲ ಅಂತೆಯೇ ಬರೆದೂ ತಿಳಿಸಿಬಿಟ್ಟಿನು. ಹಬ್ಬದ ದಿನ, ನನ್ನ ಹೆಸರಿಗೆ ಒಂದು ಭಾಂಗಿ ಬಂದಿತು; ಆಶ್ಚರ್ಯದಿಂದ ಒಡೆದು ನೋಡಿದೆ. ಒಂದು ಕಾಶೀ ಪೀತಾಂಬರ, ಒಂದು ರೇಷ್ಮೆ ವಸ್ತ್ರ ಅದರಲ್ಲಿದ್ದುವು. ಪೀತಾಂಬರದ ಒಳಮಡಿಕೆಯಲ್ಲಿ "ಕೃತಜ್ಞತೆಯ ಕಾಣಿಕೆ" ಎಂ ಚೀಟಿಯೂ ಕೆಳಗೆ "ಸೋದರಿ ಕಮಲಾ" ಎಂಬ ಸಹಿಯೂ ಇತ್ತ

ಪರಮಾತ್ಮನ ಕೃಪೆಯಿಂದ ದಂಪತಿಗಳು ಮಿಲನವಾದರೆ ಹಿರಿಯ ತೃಪ್ತಿಯಿಂದ, ಹೆಬ್ಬದೂಟದ ರುಚಿಯು ಇಮ್ಮಡಿಸಿತು.

ಅಹಿಂಸಾ ರಾಮಾಯಣ

ಪ್ರೊ. ರಂ. ಶ್ರೀ. ಮುಗಳಿ, ಎಂ, ಎ., ಬಿ. ಟಿ. ಸಾಂಗಲಿ

(ಬಾಲಕಲ್ಪತೆಯ ಚಲನಚಿತ್ರವನ್ನು ಆಧರಿಸಿ ಬರೆದ ಬಾನ ಲಿಮೂರಳ ಕಥೆ)*

★

—ಪಮ್ಮಾ, ಅಲ್ಲೆ ಹಾಸಿಗಿ ಹಾಸೇದ ನಿನ್ನದು. ಹೋಗು ಮಲಕೋ, ರಾತ್ರ್ಯಾತು.

—ನನಗ ನಿದ್ದಿ ಬಂದಿಲ್ಲ. ನಾ ಒಲ್ಲೆ. ಮಲಕೊಳ್ಳುದಿಲ್ಲ.

—ಅಧೆಂಗ ನಿದ್ದಿ ಬಂದಿಲ್ಲದು? ನಡಿ, ನಾನೂ ನಿನ್ನ ಹತೀಲೆ ಮಲಕೋತೀನಿ, ಚುಕ್ಕೂ ಬಡೀತೀನಿ. ಆತಕ?

(ಹಾಡು)

ಮಗಳನು ಮಗ್ಗುಲದಲ್ಲಿಯೆ ಮಲಗಿಸಿ
ತಾನೂ ಮಲಗಿದ ತಂದೆ
ಎಲ್ಲಿಂದಲೊ ಬರಮಾಡುತ ನಿದ್ದೆಯ
ಮೋಹಿನಿಯನು ತರಲೆಂದೆ.

—ಅಣ್ಣಾ, ಬರೀ ಚುಕ್ಕೂಬಡದರ ನಿದ್ದಿ ಬರವಲ್ಲದು. ಒಂದು ಕಥಿ ಹೇಳತೀಯ?

—ಹೇಳತೀನಿ ಅಂ! ಯಾವದು ಹೇಳಲಿ?

—ಬೇಕಾದ್ದು ಹೇಳು. ಯುದ್ಧ-ಗಿದ್ದದ್ದು ಭ್ಯಾಡಪ. ನನಗ ಹೆದರಿಕಿ ಬರತದ.

—ಹೀಂಗಽ? ಹಂಗಾರ ಅಹಿಂಸಾರಾಮಾಯಣದ ಕಥಿ ಹೇಳತೀನಿ, ಕೇಳು.

—ಹೇಳು ಅಣ್ಣಾ. ನಾ ಹೂಂ ಅನಕೋತ ಮಲಕೋತೀನಿ.

—ಹೂಂ ಅನಕೋತ ಮಲಕೋತೀದ್ಯಾ? ಛಲೋ ಅದ. ಮುಗಿಯೋ ತನಕ ಹೂಂ ಅನ್ನು. ಆಲ್ಲಿಂದ ಮಲಕೋ.

ಹೀಂಗ ಒಂದಾನೊಂದು ಕಾಲಕ್ಕ, ದೂರ ಒಂದೂರಾಗ— ಆ ಊರ ಹೆಸರು ಅಯೋಧ್ಯಾ ತಿಳೀತಕ, ಅಲ್ಲೆ—ದಶರಥ ಅಂತ ರಾಜಾ ಇದ್ದ. ಭಾಳ ಛಲೋ ನುನಸ್ಯಾ ಅಂವ. ತನ್ನ ದೇಶದಾಗಿನ ಎಲ್ಲಾ ಜನರ ಮ್ಯಾಲೆ ಪ್ರೀತಿ ಅಂವಗ. ಕೌಸಲ್ಯಾ, ಕೈಕೇಯೀ, ಸುಮಿತ್ರಾ ಅಂತ ಅಂವಗ ಮೂರುಮಂದಿ ಹೆಂಡರಿದ್ದರು.

—ಅಣ್ಣಾ ಮೂರುಮಂದೇ?

—ಹೌದು, ಮೂರುಮಂದಿ. ಅಂತಕ ಅಂವಗ ಗೋಳು ಬಂತು.

—ಅಂದರಕ?

—ಅದನ್ನಕ ಮುಂದ ಹೇಳತೀನಿ ಕೇಳು. ಅಂವಗ ಮಕ್ಕಳಕ ಆಗಲಿಲ್ಲ. ದೇವರಿಗೆ ಬೇಡಿಕೊಂಡ. ದೇವರಂದರು, "ನಿನಗ ಮುತ್ತಿನಂಥಾ ಮಕ್ಕಳ್ನ ಕೊಡತೀನಿ. ಅವರು ಹೆಂಗ ಇರತಾರಂದ್ರ ನಿನ್ಹಂಗ ಎಲ್ಲಾರ ಮ್ಯಾಲೆ ಪ್ರೀತಿಮಾಡತಾರ. ಆದರ ಎಂಥಾ ಪ್ರಸಂಗ ಬಂದರೂ ನಿನ್ಹಂಗ ಯುದ್ಧ ಮಾತ್ರ ಮಾಡೂದಿಲ್ಲ. ಯುದ್ಧಗಿದ್ಧ ಮಾಡದಕ ಮುಂದಿನ್ನ ಗೆದೀತಾರ." ದಶರಥ 'ಆಗಲಿ' ಎಂದು ದೇವರಿಗೆ ಕೈ ಮುಗಿದ. ಮುಂದಪಗ ಕೌಸಲ್ಯಾನ ಹೊಟ್ಟೀಲೆ ರಾಮ, ಕೈಕೇಯಿ ಹೊಟ್ಟೀಲೆ ಭರತ, ಸುಮಿತ್ರಾನ ಹೊಟ್ಟೀಲೆ ಲಕ್ಷ್ಮಣ, ಶತ್ರುಘ್ನ ಅಂಬೂ ಮಕ್ಕಳು ಹುಟ್ಟಿದರು. ಅವರೆಲ್ಲರಿಗೆ ಹಿರಿಯವ ಅಂದರ ರಾಮ.

(ಹಾಡು)

ಒಲಿಯುತ ಒಲಿಸುತ ಎಲ್ಲರ ಕೂಡುತ
ಒಲವಿಂ ಕಲಹವ ಕಣ್ಮರೆ ಮಾಡುತ
ಬೆಳೆದರು ಬಾಲರು ತೇಜದ ಕಣಿಯಾಗಿ—
ಕಣ್ಣಿನ ಮಣಿಯಾಗಿ
ಕಳೆದರು ಬಾಲ್ಯವ ಆಡುತ ಆಟಗಳ —
ತೋರುತ ನೂಟಗಳ.

ನೋಡು ಪಮ್ಮಾ, ಒಂದು ದಿನ ರಾಮಲಕ್ಷ್ಮಣರನ್ನು ಕರಕೊಂಡು ಒಬ್ಬ ಋಷಿ-ಋಷಿ ಅಂದರ ಗಡ್ಡದ ಬಾವಾ ತಿಳೀತಿಲ್ಲೊ— ಅವರಿಗೆ ವಿದ್ಯಾಬುದ್ಧಿ ಕಲಿಸಬೇಕು, ಹೆದರಿಕೀ ಅಂಬೋದು ತಗದ ಹಾಕಬೇಕು—ಅಂತ ದೂರ, ಅಡವಿಯೊಳಗ ಕರಕೊಂಡು ಹೋದ. ಹಾದ್ಯಾಗ ಕ್ವಾರಿಹೆಲ್ಲಿನ ರಾಕ್ಷಸರು ಬಂದರು; ಬಿರುಗಾಳಿ ಹಂಗ ಭೋ ಅನಕೋತ ಅವರ ಮೈಮ್ಯಾಲೆ ಏರಿ ಬಂದರು. ಆ ಋಷಿ ಅವರ ಕೈಯಾಗ ಬಿಲ್ಲು-ಬಾಣ ಕೊಟ್ಟು ಹೊಡಿ—ಅಂದ.

—ಯುದ್ಧ ಸುರುವಾತೇನು ಅಣ್ಣ? ನಾ ಒಲ್ಲೆ ಹೋಗು.

—ಯುದ್ಧಲ್ಲ, ಪಮ್ಮಾ. ಯುದ್ಧ ಮಾಡಲಿಲ್ಲ ಅಂತ ಹೇಳತೀನಿ! ರಾಮ-ಲಕ್ಷ್ಮಣ ಏನು ಮಾಡಿದರಂತೀ, ಬಿಲ್ಲು ಬಾಣ ಕೈಯಾಗ ಸುಮ್ಮನಕ ಹಿಡಿದು, ಹೊಳೆಯೋ ಕಣ್ಣು ತೆಗೆದು ನೋಡುತ್ತ ಮುಗುಳುನಗಿ ನಗುತ್ತ ನಿಂತರು. "ಎಂಥಾ ಛಂದ ಅವ ಈ ಕೂಸು" ಅಂತ ಆ ರಾಕ್ಷಸರಿಗೆ ಸಹಿತ ಅನಿಸಿ, ಅವರು ಮಟಮಾಯ ಆಗಿಬಿಟ್ಟರು. ಮುಂದ ಅವರು ಜನಕರಾಜಾ ಅಂಬೂ ರಾಜಾನ ಊರಿಗೆ ಹೋಗಿ ನೋಡತಾರ, ಅಲ್ಲೊಂದು ದೊಡ್ಡ ಉತ್ಸವ ನಡದುಬಿಟ್ಟದ.

(ಮಂಗಲವಾದ್ಯಗಳ ಧ್ವನಿ, ಜನರ ಓಡಾಟದ ಸಪ್ಪಳ, ರಥಗಳ ಬರುವಿಕೆಯ ಉಲಿ).

---

*ಚಿತ್ರಪಟವು ದೇವಿಯೋ ದೇವೇಂದ್ರನ ಅಧಿಕಾರಿಗಳ ಅಪ್ಪಣೆಯಿಂದ ಪ್ರಕಟಿಸಲಾಗಿದೆ.

ಓದಲೇ ಬೇಕಾದ ಉಪಯುಕ್ತ ಪುಸ್ತಕ

ದಕ್ಷಿಣ ಭಾರತದ ಖನಿಜ ಸಂಪತ್ತು ಮತ್ತು ಕೈಗಾರಿಕೆಗಳು

ಲೇ– ಮು. ವಾ. ಪುರುಷೋತ್ತಮರಾವ್, ಎಂ.ಎ., ಬಿ.ಟಿ.

ಸುರಭ್ಯಲ್ ದ. ಕ.

೫ ವಿಶಿಷ್ಟ ಭೂಪಟಗಳು — ೧೫ ಚಿತ್ರಗಳು

ಮಾಧ್ಯಮ ವಿದ್ಯಾನಿಲಯದ ಬಹುಮಾನ ಪಡೆದ ಪುಸ್ತಕ.

ಬೆಲೆ ೨-೮-೦

೧) ಪ್ರತಿಗಳನ್ನು ಗ್ರಂಥಕರ್ತರಾದ ಇವರಿಂದ (೨) ಮನೋಹರ ಗ್ರಂಥ ಭಾಂಡಾರ, ಧಾರವಾಡ. (೩) ಸಂಶೋಧನ ಪುಸ್ತಕ ಭಾಂಡಾರ ಬಂಗಳೂರು. (೪) ಇಂಡಿಯನ್ ಇಂಡಸ್ಟ್ರಿಯಲ್ಸ್ ಮತ್ತು ಏಜನ್ಸೀಜ್ ಮಂಗಳೂರು ಇವರಿಂದಾಗಲಿ ಪಡೆಯಬಹುದು.

(ಹಾಡು)

ಜನಕಸುತೇ ಸೀತೆ ಇವಳು ಚೆಲುವೆ ಪ್ರೀತಿ ಮೂರುತಿ
ಇವಳ ಸ್ವಯಂವರಕೆ ಬಂದಿರುವುದು ರಾಜ ಸಂತತಿ.

ಜನಕ— ಶಿವನ ಧನುಸ್ಸನ್ನು ಎತ್ತಿ ಅದಕ್ಕೆ ಹೆದೆಯೇರಿಸ ಬಲ್ಲವನಿಗೆ ನನ್ನ ಮಗಳನ್ನು ಮದುವೆಮಾಡಿಕೊಡುತ್ತೇನೆ.

ರಾಜರು— ಅದೇನು ಹೆಚ್ಚಿನದು ? ನಾವದನ್ನು ಮಾಡುತ್ತೇವೆ, ಸೀತೆಯನ್ನು ಪಡೆಯುತ್ತೇವೆ.

ಪಮ್ಮಾ, ರಾಜರೆಲ್ಲಾ ಜಂಭ ಕೊಚ್ಚಿದರು. ಆದರೆ ಯಾರಿಗೂ ಆ ಶಿವನ ಬಿಲ್ಲು ಎತ್ತೋದಾಗಲಿಲ್ಲ. ರಾಮ ಸಣ್ಣ ಹುಡುಗ; ಅವ ನೋಡು ಅವನ್ನ ಎತ್ತಿದ; ಅದಕ್ಕ ಧಾರಾಕಟ್ಟಿ ಟ್ರೈಂಯ್ ಅನಿಸಿದ. (ಹೆದೆಯನಾದ) ಬಂದವರೆಲ್ಲಾ ಬಟ್ಟು ಕಚ್ಚಿದರು, ರಾಜರೆಲ್ಲಾ ಮಾರಿ ಕೆಳಗ ಹಾಕಿದರು. ರಾಮ ಎತ್ತಿ ಅದಕ್ಕೆ ಧಾರಕಟ್ಟಿ ಅದನ್ನು ಜಗ್ಗೋದ ಒಳಗ, ಅದು ಮುರದು ಬಿದ್ದು ಬಿಟ್ಟತು. ಬಿದ್ದರ ಎಂಥಾ ಸಪ್ಪಳಾತು ಅಂತೀ, ಸಿಡಿಲು ಬಿದ್ದಂಗಾತು. (ಸಿಡಿಲಿನ ಸಪ್ಪಳ.) ಎಲ್ಲಾರು ಗಾಬರ್ಯಾಗಿ ನೆಲಕ್ಕ ಬಿದ್ದರು. ಮುಂದ ರಾಮ-ಸೀತಾನ ಮದವಿ ಸಂಭ್ರಮದಿಂದ ಆತು. ಅವನ್ನ ನೋಡಿ ತಡಿಯೋದಾಗವ, ಹೊಟ್ಟೇಕಿಚ್ಚಿನಿಂದ ರಾಜರು ಯುದ್ಧಮಾಡಲಿಕ್ಕೆ ಬಂದರು. ರಾಮು ಅಂದ: "ನನ್ನ ಶಕ್ತಿ ಆಗಳೆ ತೋರಿಸೀನಿ, ಸುಮ್ಮನ ಹೋಗರಿ. ಶಿವನ ಬಿಲ್ಲು ಮುರದು ಹೋತು. ಇನ್ನ ರಾಮನ ಬಿಲ್ಲು ಬ್ಯಾರೆ ಥರ ಅದ. ಯುದ್ಧ ಮಾಡದ ಮುಂದಿನ್ನ ಗೆದೀತದ." ರಾಜರೆಲ್ಲ ತಿರಿಗಿ ಹೋದರು. ರಾಮು ಲಕ್ಷ್ಮಣ ಸೀತಾನ್ನ ಕರಕೊಂಡು ತಮ್ಮೂರಿಗೆ ಹೋದರು.

ಮುಂದ, ದಶರಥರಾಜಾ ಭಾಳ ಮುದಕಾದ, ರಾಜ್ಯ ಆಳೋದಾಗವಲ್ಲದು. ರಾಮನ್ನ ಕರದು ಹೇಳಿದ: ನಿನ್ನ ರಾಜಾನ್ನ ಮಾಡತೀನಿ—ಅಂತ. ರಾಮ 'ಹೂ ಆಗಲಿ' ಅಂದ. 'ರಾಮ ಇನ್ನ ರಾಜಾ ಆಗತಾನ' ಅಂತ ಜನರಿಗೆಲ್ಲ ಏನ ಹುರಪು! ಊರೆಲ್ಲಾ ತಳಿರು-ತೋರಣದಿಂದ ಸಿಂಗಾರಮಾಡಿದರು, ಎಲ್ಲಾ ಕಡೆ ಹೂ ಹರವಿದರು, ದೀಪ ಹಚ್ಚಿದರು, ಬಜಂತ್ರಿ ಬಾರಿಸಿದರು, ಕೋಲಾಟ ಆಡಿದರು. (ಆ ಆ ಧ್ವನಿ ಪ್ರದರ್ಶನ) ಆದರೆ, ಪಮ್ಮಾ, ಏನ ಹೇಳಲಿ? ಆಯ್ತಾ ಹೊತ್ತಿಗೆ ಕೈಕೇಯಿ–ಭರತನ ಅವ್ವ–ದಶರಥಗ ಅಂದ್ಲು: "ಹಿಂದ ನೀ ಯುದ್ಧ ನಾಡೂ ಮುಂಪ, ನಿನ್ನ ರಥದ ಛಾಲಿ ಮುರದಾಗ ನಾ ಕೈಕೊಟ್ಟಿದ್ದೆ. ಆಗ ವಚನ ಕೊಟ್ಟಿದ್ದಿ ನೀನು, ಆ ಪ್ರಕಾರ ನನ್ನ ಮಗ ಭರತನ್ನ ರಾಜಾನ್ನಮಾಡು, ಮತ್ತ ರಾಮನ್ನ ಅಡವಿಗೆ ಕಳಿಸು." ಇದನ್ನ ಕೇಳಿ ದಶರಥಗ ದಿಕ್ಕು ತಪ್ಪಿದಂಗಾತು. 'ಯಾಕರ ಆ ಯುದ್ಧ ಮಾಡಿದೆನ್ನೋ' ಅಂತಂದ. ಕಣ್ಣು ಕತ್ತಲೆಗಡಿಸಿ ನೆಲಕ್ಕ ಬಿದ್ದ. ಸ್ವಲ್ಪ ಹೊತ್ತಿಗೆ ಎಚ್ಚರಾತು. ರಾಮುಗ ಇದು ತಿಳೀತು. ತಂದಿಗೆ ಸಮಾಧಾನ ಹೇಳಿದ, "ಭರತನ್ನ ಅರಸನ್ನ ಮಾಡು, ನಾ ಅಡವಿಗೆ ಹೋಗ್ತಿನಿ' ಅಂತ ನಕ್ಕೋತ ಹೇಳಿದ. ಅಂವ ನಕ್ಕರೇನಾತು, ಎಲ್ಲಾ ಕಡೆ ಎಲ್ಲಾರು ಸಣ್ಣ ಮಾರಿ ಮಾಡಿದರು, ದುಃಖದಾಗ ಮುಳುಗಿದರು. (ದುಃಖ ಸೂಚಕ ವಾದ್ಯಧ್ವನಿ—ಕೆಳಪಟ್ಟಿಯಲ್ಲಿ.)

(ಹಾಡು)

ಬರಿಗಾಲಿನಲ್ಲಿ ನಗುನಗುತ ತಾ ನಗರದಿಂ
ತೆರಳಿದನು ಶ್ರೀ ರಾಮನು
ರಾಜ್ಯ ಹೋದರು ಜನದ ಹೃದಯ ಸಿಂಹಾಸನದಿ
ನೆಲೆ ನಿಂತ ಮಾರಾಜನು.
ಸೂರ್ಯನಂತೆ ಹೊರಟ ರಾಮು,
ದಿನಸದಂತೆ ಹೊರಟ ಲಚುಮುಣ.
ಬೆನ್ನ ಹಿಂದೆ ನೆರಳಿನಂತೆ
ಸೀತೆ ರಾಮ-ಪ್ರೀತಿ ಹೊರಟಳು.

ರಾಮು, ಲಕ್ಷ್ಮಣ, ಸೀತಾ ಈ ಮೂರು ಮುಂದಿ, ಬರಗಾಲಿಲೇ ನಾರುಬಟ್ಟೆ ಉಟಗೊಂಡು, ನದಿದಾಟಿ ಕಲ್ಲು ಮುಳ್ಳು ತುಳಕೋತ ಅಡವ್ಯಡವಿ ತಿರಿಗಿಕೋತ ಹೋದರು. ಹಾದ್ಯಾಗ ಹುಲಿ-ಸಿಂಹ ಗುಡುಗು ಹಾಕಿದವ್ವ. (ಆ ಧ್ವನಿ) ಆದ್ಯಾವದಕ್ಕೂ ಅವರು ಹೆದರಲಿಲ್ಲ. ನಡನಡವ ಋಷಿಗಳು ಬಂದು ಹೇಳತಿದ್ದರು: "ಕೆಟ್ಟ ರಾಕ್ಷಸರು ಬಂದು ನಮಗ ಭಾಳ ತ್ರಾಸ ಕೊಡತಾರ, ಯಜ್ಞದ ಬೆಂಕಿಯೊಳಗ ರಕ್ತ ಮಾಂಸ ಒಗದು ಕೆಡಸತಾರ" ಅಂತ. ರಾಮು ಆಲ್ಲಿಗೆ ಹೋಗಿ, ಅವರ ಅಗ್ನಿಯ ಮುಂದ ನಿಂತು 'ಅಫೆಂಗ ಉಪದ್ರ ಕೊಡತಾರ ನೋಡತೀನಿ' ಅಂತಿದ್ದ. ಅವನ್ನ ನೋಡಿದ ಘಳಿಗ್ಗೆ ಆ ರಾಕ್ಷಸರು 'ಇನ್ನ ಮ್ಯಾಲೆ ಹಿಂಗ ಮಾಡುದಿಲ್ಲ' ಅಂತ ಓಡಿ ಹೋಗಿ ಬಿಡತಿದ್ದರು.

ಹಿಂಗs ಒಂದು ಗುಡಸಲದಾಗ ಮೂರೂ ಮಂದಿ ಇರತಿರಲಿಕ್ಕೆ ಹಿಂಗಾತು ನೋಡು: ಒಂದುದಿನ ಆ ಗುಡಸಲ ಮುಂದ ಒಂದು ಭಂಗಾರದ—ಛೆಂದನ್ನ—ಚಿಗರಿ ಬಂತು. ಆದು ನನಗ ಬೇಕಂತ ಸೀತಾ ರಾಮುಗ ಗಂಟುಬಿದ್ದು. ತಂದು ಕೊಡತೀನಿ ಅಂತ ರಾಮು ಅದರ ಬೆನ್ನತ್ತಿ ಹೋದs ಹೋದ. ಅದು ಓಡೇ ಓಡಿತು. 'ಭಾಳ ಹೊತ್ತಾತು, ರಾಮು ಎಲ್ಲಿ ಹೋದ ನೋಡಿಕೊಂಡು ಬಾ' ಅಂತ

ಸೀತಾ ಲಕ್ಷ್ಮಣನ್ನ ಕಳಿಸಿದ್ಲು. ಇಬ್ಬರೂ ಹೋಗಿ ಬಿಟ್ಟರು. ಅಲ್ಲಿಂದ ಸೀತಾ ಒಬ್ಬಳೇ ಒಬ್ಬಾಕೆ ಗುಡಸಲದಾಗ. ಆಗ ನೋಡವ್ವ ಒಬ್ಬ ಧೊಡ್ಡ ಬಾವಾ ಬಂದ.

— ಬಾವಾ ? ಅಂವ್ಯಾಕ ಬಂದ ?

— ಹೇಳತೀನಿ ಕೇಳು. ಗುಡಸಲ ಮುಂದ ನಿಂತಕೊಂಡ ಅಂವ.

ಬಾವಾ:— ಯಾರಿದ್ದೀರಿ ಒಳಗ ?

ಸೀತಾ:— ನಾ ಇದ್ದೀನಿ. ಯಾರು ಬೇಕು ?

ಬಾವಾ:—ನನಗ ಹಸಿವ್ಯಾಗೇದ, ತಿಲ್ಲಿಕ್ಕೆ ತಂದು ಹಾಸು ಈ ಜೋಳಿಗ್ಯಾಗ.

ಸೀತಾ ತಿಲ್ಲಿಕ್ಕೆ ತಂದು ಹಾಕೋದರೊಳಗ ನೋಡವ್ವ, ಆ ಬಾವಾ—ರಾವಣಂತ ಅವನ ಹೆಸರು—ಸೀತಾನ್ನ ಎತ್ತಿ ಜೋಳಿಗ್ಯಾಗ ಹಾಕಿ, ಮ್ಯಾಲೆ ಮ್ಯಾಲೆ ಹಾರಿಹೋಗಿ ಬಿಟ್ಟ. ಸೀತಾಗ ಖಬರು ತಪ್ಪಿತು. ಎಚ್ಚರಾದ ಮ್ಯಾಲೆ ರಾಮು ರಾಮು ಅನಕೋತ ಅಳ್ಳಿಕ್ಕೆ ಹತ್ತಿದ್ಲು. ಒಂದು ಹದ್ದು ಅದನ್ನು ನೋಡಿ ಆ ಬಾವಾನ್ನ ಪೈ ಪೈ ತಿವೀತು. ಅಂವ ಅದರ ರೆಕ್ಕಿ ಕತ್ತರಿಸಿ ಹಾಕಿ, ದೂರ ಅತ್ತಲಾಗ ಸಮುದ್ರದ ನಡವಿದ್ದ ತನ್ನ ಊರಿಗೆ ಹಾರಿ ಹೋಗಿಬಿಟ್ಟ.

ರಾಮು-ಲಕ್ಷ್ಮಣ ಬಂದು ನೋಡತಾರ, ಗುಡಸಲದಾಗ ಸೀತಾನs ಇಲ್ಲ. ಎಲ್ಲಾ ಕಡೆ ಹುಡಕ್ಯಾಡಿದರು, ಭಾಳ ಮಿಡಕಿದರು. ಕಡೀಕ ಒಂದು ಕಡೆ ನೆಳ್ಳಿಕೋತ ಬಿದ್ದ ಹದ್ದು ಸುದ್ದಿ ಹೇಳಿತು. ಆ ದಿಕ್ಕಿಗೆ ಅವರಿಬ್ಬರು ಹೊರಟರು. ಅವರು ಹುಡುಕೋದ ನೋಡಿ, ಅಡವ್ಯಾಗಿನ ಎಲ್ಲಾ ಪ್ರಾಣಿ ಮುರಗಿದವು. ಮಂಗ್ಯಾ ಅಂತೂ ತಮ್ಮ ಮುಖಿಂಡ ಹನಮಂತನ್ನ ಕೂಡಿಕೊಂಡು ಬಂದವು. ಮತ್ತ್ಯಾರಾರು ಬಂದರು ಹೇಳಲ್ಯಾ ?

(ಹಾಡು)

ಕಾಗೆಯ ತಂಡವು ಬಂತು, ಗುಬ್ಬಿಯ ಹಿಂಡೂ ಬಂತು,
ಗಿಳಿಗಳ ಬಳಗವು ಬಂತು, ನಾಯಿಯ ನೆರವಿಯು ಬಂತು.

ಎಲ್ಲಾರೂ ಕೂಡಿ ಸಮುದ್ರಾ ದಾಟಿ, ಆ ರಾವಣನೂರು ಲಂಕಾ ಅಂತ ಹೆಸರು—ಅಲ್ಲಿಗೆ ಹೋದರು. ಆ ಊರ ಹತೀಲೆ ತ್ವಾಟದಾಗ ಒಂದು ಗಿಡದ ಬುಡಕ, ಸೀತಾ ಕೂದಲ ಬಿಟಗೊಂಡು ಶಾಂತ ಆಗಿ ರಾಮು ರಾಮು ಅನಕೋತ ಕೂತಬಿಟ್ಟಾಳ. ಸುತ್ತೆಲ್ಲ ಕಾಯಕೋತ ದೆವ್ವನಂತಾ ಹೆಂಗಸರು ಕೂತಾರ. ಸೀತಾನ್ನ ಹೆಂಗ ಬಿಡಿಸಬೇಕಪ್ಪ ಅಂತ ಎಲ್ಲಾರು ಎಣಿಕಿ ಹಾಕಲಿಕ್ಕೆ ಹತ್ತಿದರು. ಹನಮಂತ ಅಂದ: 'ಲಂಕಾ ಸುಟ್ಟು ಬರತೀನಿ ಅದರಾಗ ಆ ರಾವಣನೂ ಸುಟ್ಟುಹೋದ ನಂತರ ಸೀತಾನ್ನ ಕರಕೊಂಡು ಹೋಗೋಣಂತ.' ಸುಗ್ರೀವಂದ: 'ಬ್ಯಾಡ, ಯುದ್ಧಮಾಡಿ ಅವನ್ನ ಕೊಲ್ಲೂಣಂತ.'

— ಹಂಗಾರ ಅಣ್ಣ ಯುದ್ಧಾತೇನು ನುತ್ತ ?

— ಸ್ವಲ್ಪು ತಡಿ ಸಮ್ಮಾ; ಯುದ್ಧಗಿದ್ಧ ಏನೂ ಆಗಲಿಲ್ಲ. ರಾಮಂದ: 'ಆ ದುಷ್ಟ ರಾವಣ ಇಲ್ಲಿಗೆ ಬರೂಹಂಗ ನೀವು ತ್ವಾಟದಾಗ ಧಾಂದಲೆ ಹಾಕರಿ, ಮುಂದ ನಾ ನೋಡಿಕೋತೀನಿ.' ಅತು ಕೇಳತೀಯ, ಇಷ್ಟು ಹೇಳೂದೊಂದs ತಡ, ಮಂಗ್ಯಾ ಗಿಡದಿಂದ ಗಿಡಕ್ಕ ಹಾರಿಕೋತ ಟೊಂಗಿ ಮುರಿದು ತೂರಾಡಲಿಕ್ಕೆ ಹತ್ತಿದವು, ಗಿಳಿ ಹಣ್ಣು ಕಾಯಿ ಕಡದು ಕೆಳಗ ಒಗದವು. ಕಾಗಿ ಕಾಕಾ ಅಂತ ಕೇಸರಬಾಸರಿಟ್ಟವು, ಗುಬ್ಬಿ ಚಿಂವ್, ಚಿಂವ್ ಎಂದು ಚಿಲಿಪಿಲಿ ಗುಟ್ಟಿದವು, ನಾಯಿ ವೌವ್ ವೌವ್ ಅಂತ ಬೊಗಳಹತ್ತಿದವು. (ಆಯಾ ಧ್ವನಿಗಳ ಅನುಕರಣ) ಇದನ್ನೆಲ್ಲ ನೋಡಿ ಕೇಳಿ, ಕಾವಲಿದ್ದವರು ಓಡಿಹೋಗಿ, ರಾವಣನ್ನ ಕರಕೊಂಡು ಬಂದರು. ಅಂವ ತ್ವಾಟದಾಗಿನ ಧಾಂದಲೆ ನೋಡಿದ, ಸಿಟ್ಟುಬೆಂಕಿಯಾದ. ಆದರೆ ಅವು ಯಾವೂ ಕೈಗೆ ಹತ್ತುಹಂಗಿಲ್ಲ. ಸೀತಾಗ ರಾಮು ಬಂದದ್ದು ಕಾಣಿಸಿತ್ತು, ಅವನ ಜೋಡಿ ಬಂದ ಸೈನ್ಯದ ಧಾಂದಲೆ ಅಂತ ಗೊತ್ತಿತ್ತು. ರಾವಣ ಆಕಿ ಹತೀಲೆ ಬಂದು ಕೇಳಿದ :

ರಾವಣ :— ಯಾರು ತಂದರು ಇದನ್ನೆಲ್ಲ ? ಯಾರ ಧಾಂದಲೆ ಇದು ?

ಸೀತಾ :— ನೀನು ತಂದವನು. ನಿನ್ನದೇ ಧಾಂದಲೆ.

ರಾವಣ :— ಏನು ಹಿಂಗಂದರ ?

ಸೀತಾ :— ನೀ ನನ್ನ ಅನ್ಯಾಯದಿಂದ ಇಲ್ಲಿಗೆ ತಂದದ್ಕ ನನ್ನ ಗಂಡ ಈ ಸೈನ್ಯ ಕಟಗೊಂಡು ಬಂದಾನ.

ರಾವಣ—ಯಾರು ? ರಾಮು ಬಂದಾನs ?

ಇಷ್ಟರೊಳಗ ರಾಮು ಎಲ್ಲಾ ಪರಿವಾರ ಕರಕೊಂಡು ರಾವಣಿದ್ದಲ್ಲಿಗೆ ಬಂದ. ರಾವಣ ಅವನ್ನ ನೋಡಿದ, ಮಾರಿ ಕೆಳಗ್ಹಾಕಿದ. ರಾಮಗ ಹೇಳಿದ: "ಹೋಗು ಮಾರಾಯ, ನಿನ್ನ ಹೆಣ್ತಿನ್ನ ನೀ ಕಟಗೊಂಡು ಹೋಗು. ಆಕೇನು ನನಗ ಒಲೀವೊಲ್ಲಳು. ವ್ಯಾಲೆ ಆಕಿ ಮೈ ಮುಟ್ಟಿದರ ಬೆಂಕೀ ಮುಟ್ಟಿದಂಗ ಆಗ್ತದ ನನಗ. ಹಗಲು-ರಾತ್ರಿ ನಿನ್ನ ನೆನಸಿಗೋತ ಕೂತಾಳ. ಆಕಿನ್ನ ಕಾಯೂದೊಂದು ಕಾಟ, ಮ್ಯಾಲೆ ಈ ನಿನ್ನ ಸೈನ್ಯದ ಕಾಟ. ಯಾವದೂ ಬ್ಯಾಡ, ಕರಕೊಂಡು ಹೋಗು." ಸೀತೆಯ ಮುಖ ಹಿಗ್ಗಿತು. ರಾಮು ನಕ್ಕ. ಎಲ್ಲರೂ ಕೂಡಿ ತಿರುಗಿಬಂದರು. ಪಮ್ಮಾ, ಯಾಕ ಹೊಂಟಿನವೊಲ್ಲಿ? ತನ್ನ ಸೈನ್ಯಕ್ಕೆಲ್ಲ ಇನಾಮು ಕೊಟ್ಟು, ರಾಮು ವನವಾಸ ಮುಗಿಸಮ್ಯಾಲೆ, ಸೀತಾನ ಜೋಡಿ ಊರಿಗೆ ಬಂದು ರಾಜಾ ಆಗಿ ಆರಾಮು ಇದ್ದುಬಿಟ್ಟ.

ಪಮ್ಮಾ ಹೊಂ ಅನ್ನಲಿಲ್ಲ. ಅವಳಿಗೆ ಗೊರ್ ಗೊರ್ ಅಂತ ನಿದ್ದೆಹತ್ತಿಬಿಟ್ಟತ್ತು.

ಅಹಿಂಸಾರಾಮಾಯಣದ ಪ್ರಭಾವ ಅದು.

(ತೀರ ಕೆಳಪಟ್ಟಿಯಲ್ಲಿ ರಾತ್ರಿಯ ರಾಗವೊಂದರಲ್ಲಿ ವೀಣಾವಾದನ.)

ಪ್ರಿನ್ಸಿಪಾಲ್ ವಿ. ಕೆ. ಗೋಕಾಕರು

(ವ್ಯಕ್ತಿ ಪರಿಚಯ)

ಶ್ರೀ. ವರಗಿರಿ ಮೂರ್ತಾಂಡರಾಯರು, ಎಂ. ಎ., ಬಿ. ಟಿ., ಧಾರವಾಡ

★

ಪ್ರಿನ್ಸಿಪಾಲ್ ಗೋಕಾಕರು ಇಂದು ಕನ್ನಡ ನಾಡಿನ ಹೆಮ್ಮೆಗೆ ಪಾತ್ರರಿಷ್ಟೇ ಅಲ್ಲ;
ಅಖಿಲ ಭಾರತೀಯ ಕೀರ್ತಿ ಅವರನ್ನು ಮೆಚ್ಚಿ ಮಾಲೆ ಹಾಕಲು ನಿಂತಿದೆ.
ಇಂತಹರು ಕನ್ನಡ ಗಡಿಯಲ್ಲಿಯೆ ನೆಲಸುವಂತಾಗಿದ್ದುದು
ನಾಡಿನ ಸುದೈವವಾಗಿದೆ.

★

೧

ಅಂದು ಸವಣೂರಿನಲ್ಲಿ ನಾನು ಗೋಕಾಕ ವಿನಾಯೆರಾಯರನ್ನು ಮೊದಲ ಸಲ ಕಂಡೆ. ಸುಮಾರು ೧೯ ವರ್ಷಗಳ ಹಿಂದಿನ ಮಾತು. ಸಂಜೆಯ ಮುಂದೆ ಒಂದು ದಿನ ನನ್ನ ಶಾಲೆ ಮುಗಿದ ಮೇಲೆ, ಊರ ಹೊರಗಿನ ಅಗಸೆಯ ಮೇಲಿನ ಕಟ್ಟೆಡದಲ್ಲಿ ಕುಳಿತು, ಮುಂದೆ ವಿಸ್ತಾರವಾಗಿ ಪಸರಿಸಿದ, ತುಂಬ ತುಂಬಿದ ಕೆರೆಯ ನೀರನ್ನು ನಿರುಕಿಸುತ್ತಲಿದ್ದೆ. ಆಗ ಕೆರೆಯ ದಂಡೆಗುಂಟ ಅಗಸೆಯ ಕಡೆಗೇ ಬರುತ್ತಿದ್ದ ಒಂದು ತರುಣ ವ್ಯಕ್ತಿಯ ಕಡೆಗೆ ನನ್ನ ಲಕ್ಷ್ಯ ಹೋಯಿತು.

ತೆಳ್ಳನೆಯ ಬೀಸಾದ ಅಳ; ಸಾದು ಬಣ್ಣ. ಸ್ವಲ್ಪ ಕೆಂಪುವರಿದ ಧೋತರ ಉಟ್ಟಿದ್ದರು. ಸರಳ ರೀತಿಯ ಶರ್ಟು-ಕೋಟುಗಳನ್ನು ಹಾಕಿದ್ದರು. ದಪ್ಪ ಕಾಜಿನ ಕನ್ನಡಕ ಕಣ್ಣುಗಳ ಮೇಲೆ ಎದ್ದು ಕಾಣುತ್ತಿತ್ತು; ತಲೆಯ ಮೇಲೊಂದು ಎತ್ತರವಾದ, ತುದಿ ಮಡಿಸಿದ ಟೊಪ್ಪಿಗೆ; ಟೊಪ್ಪಿಗೆಯ ಕೆಳಗೆ ಜಿನುಗು ಮಸಿನ್ನು ಹಚ್ಚಿದ ಕೂದಲು. ಮುಖದ ಮೇಲೆ ಕತ್ತಿ-ಕತ್ತರಿಗಳು ಇನ್ನೂ ಮುಟ್ಟದ ಮೀಸೆಯ ಅಂಕುರಗಳು. ತಲೆ ತಗ್ಗಿಸಿ ಬೀಸಾದ ಹೆಜ್ಜೆಗಳನ್ನು ಇಡುತ್ತ ಬರುವಾಗ, ಅವರ ದೇಹ ಎಡಬಲಕ್ಕೆ ಹೊಯ್ದಾಡುತ್ತಲಿದ್ದಿತು. ದಪ್ಪ ಕನ್ನಡಕದಿಂದ ಮುತ್ತಿಷ್ಟು ಅರಳಿದಂತೆ ಕಾಣುವ ಅವರ ಕಣ್ಣಳ ಗಾಂಭೀರ್ಯ, ದೃಷ್ಟಿಯ ತೀಕ್ಷ್ಣತೆ, ನೆಲ-ನೀರು, ಗಿಡ-ಗಂಟಿ, ಹೂ-ಕಾಯಿ ಮೊದಲಾದುವುಗಳ ನಿರೀಕ್ಷಣೆಯ ಸೂಕ್ಷ್ಮತೆ— ಇವು ಎಲ್ಲೆಲ್ಲಿಯೂ ಎದ್ದು ಕಾಣುವ ಅವರ ಸರಳತೆಯ ಹಿನ್ನೆಲೆಯಲ್ಲಿ ಮುತ್ತಿಷ್ಟು ಒಡೆದು ಕಾಣುತ್ತಿದ್ದುವು. ಅದೇ ತಾನೇ ಬಿ. ಏ. ಪರೀಕ್ಷೆಯಲ್ಲಿ ಇಂಗ್ಲಿಷು ವಿಷಯವನ್ನು ಮುಖ್ಯವಾಗಿಟ್ಟುಕೊಂಡು ಪ್ರಥಮ ವರ್ಗದಲ್ಲಿ ಪ್ರಥಮಸ್ಥಾನ ಪಡೆದು, ಸವಣೂರಿನ ಎಲ್ಲರ ನಾಲಗೆಯ ಮೇಲೆ ನಲಿದಾಡುತ್ತಿದ್ದ 'ದಾದಾ' ಎಂಬವರು ಇವರೇ — ಎಂಬುದನ್ನು ತಿಳಿಯುವುದು ನನಗೆ ತೊಂದರೆಯ ವಿಷಯವಾಗಲಿಲ್ಲ. ಅವರನ್ನು ನಾನು ಬಿರಿಬಿರಿ ನೋಡುತ್ತ ಕುಳಿತೆ. ನೋಡು-ನೋಡುವಷ್ಟರಲ್ಲಿ ಅವರು ಮುಂದೆ ಮುಂದೆ ಸಾಗಿ, ಮುಂದಿನ ಮಾವಿನ ತೋಪಿನಲ್ಲಿ ಕಣ್ಮರೆಯಾದರು.

ವಿನಾಯಕರಾಯರ ಪರಿಚಯ ಮಾಡಿಕೊಳ್ಳುವ ಕುತೂಹಲ ನನ್ನಲ್ಲಿ ಹೆಚ್ಚಿತು; ಪರಿಚಯವೂ ಆಯಿತು. ನಮ್ಮಿಬ್ಬರ ಸಂಪರ್ಕವೂ ಬೆಳೆಯಿತು. ಬರುಬರುತ್ತ ಅವರ ಸಮೀಪಸ್ಥನಾಗಿ ಅವರ ನೆಳಲಿನಂತೆ ಓಡಾಡುವ ಸುಯೋಗವೂ ಬಂದಿತು ನನಗೆ.

ಬಾಲ್ಯದಿಂದ ಇಲ್ಲಿಯ ವರೆಗಿನ ಅವರ ಜೀವನವನ್ನು ಅಭ್ಯಾಸ ಮಾಡಿದರೆ, ಅವರ ವ್ಯಕ್ತಿತ್ವ ಹೇಗೆ ವಿಕಾಸ ಹೊಂದುತ್ತ ಬಂದಿದೆ, ಅವರು ತಮ್ಮ ಅಂತಸ್ಥ ಸುಪ್ತ ಶಕ್ತಿಗಳನ್ನು ಹೇಗೆ ಕಂಡುಕೊಂಡು ಬೆಳೆಯಿಸಿಕೊಂಡು ಬಂದಿದ್ದಾರೆ, ಅವರ ಹೃದಯದಲ್ಲಿಯ ಭಾವನೆಗಳು — ಸಾಮಾನ್ಯವಾಗಿ ಎಲ್ಲರಲ್ಲಿಯೂ ಇರಬಹುದಾದಂಥ ಭಾವನೆಗಳು — ಹೇಗೆ ಎಳೆಯವಿದ್ದಾಗಲೇ ಉದಾತ್ತೀಕರಣ ಹೊಂದಿ, ಬೆಳೆದು ಚಿಗುರಿ ಹೂತು ಅರಳಿ ಗಮಗಮಿಸುವ ಹೂವಾಗಿವೆ, ಅವರು ತಮ್ಮ ಮನೋಘಟಕಗಳನ್ನು ಕಂಡುಕೊಂಡು ಅಂತಃ ಸಂಸ್ಕಾರದಿಂದ ಬಾಹ್ಯಜ್ಞಾನದಿಂದ ಹೇಗೆ ಅದನ್ನು ಪರಿಪುಷ್ಟಗೊಳಿಸಿದ್ದಾರೆ— ಸಂಪತ್ತನ್ನು ಬೆಳೆಸಿದ್ದಾರೆ— ಎಂಬುನೆಲ್ಲವನ್ನೂ ನೋಡುವಂತಿದೆ. ಜಾದುಗಾರನು ಮಾವಿನ ಗೊಟ್ಟವೊಂದನ್ನು ತೆಗೆದುಕೊಂಡು, ಪ್ರೇಕ್ಷಕರ ಸಮಕ್ಷಮ ಅವರು ನೋಡುನೋಡುತ್ತಲೇ ಅದನ್ನು ಸಸಿಯಾಗಿ ಮಾಡಿ, ಸಸಿ ಗಿಡವಾಗಿ ಕಾಯ್ಬಿಡುವಂತೆ ಮಾಡಿ, ಪ್ರೇಕ್ಷಕರಿಗೆ ದಂಗು ಬಡೆಸುತ್ತಾನಂತೆ. ಅದರಂತೆಯೇ ಗೋಕಾಕರೂ ತಮ್ಮ ಬಳಗದವರನ್ನೂ ಗೆಳೆಯರನ್ನೂ ಉಳಿದವರನ್ನೂ ಬೆರಗುಗೊಳಿಸಿದ್ದಾರೆ— ಕಣ್ಮುಚ್ಚಿ ಕಣ್ಣು ತೆಗೆಯುವುದರಲ್ಲಿಯೇ ತಮ್ಮ ವ್ಯಕ್ತಿತ್ವಕ್ಕೆ ಪೂರ್ಣತೆಯನ್ನು ತಂದುಕೊಂಡು!

ಶ್ರೀಯುತ ಗೋಕಾಕರ ನಿರಾಡಂಬರದ ನಿರಾಭರಣದ ಜೀವಿತ ಇಂತಿದೆ: ಅವರು ಧಾರವಾಡ ಜಿಲ್ಲೆಯಲ್ಲಿ ಒಂದು ಸಣ್ಣ ಸಂಸ್ಥಾನವಾಗಿದ್ದ ಸವಣೂರಿನ ಒಂದು ಮಧ್ಯಮ ತರಗತಿಯ ಮನೆತನದಲ್ಲಿ

ಹುಟ್ಟಿದವರು; ಹೊಟ್ಟೆ-ಬಟ್ಟೆಗೆ ಏನೂ ತಾಪತ್ರಯವಿಲ್ಲದೆ ಬಾಲ್ಯವನ್ನು ಸವಣೂರಲ್ಲಿ ಕಳೆದು, ಅಲ್ಲಿಯ ಮಜಿದ್ ಹಾಯ್‌ಸ್ಕೂಲಿನಿಂದ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ, ಧಾರವಾಡಕ್ಕೆ ಉಚ್ಚಶಿಕ್ಷಣಕ್ಕಾಗಿ ಹೋದರು. ನಾಲ್ಕುವರುಷ ಕರ್ನಾಟಕ ಕಾಲೇಜಿನಲ್ಲಿಯೇ ಇದ್ದು, ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಬಿ.ಏ. ಪರೀಕ್ಷೆಯಲ್ಲಿ ಇಂಗ್ಲಿಷನ್ನು ಮುಖ್ಯವಾಗಿಟ್ಟುಕೊಂಡು ಪ್ರಥಮ ವರ್ಗದಲ್ಲಿ ಪ್ರಥಮಸ್ಥಾನ ಪಡೆದರು: 'ಎಲ್ಲೀಸ್' ಬಹುಮಾನವೂ ದೊರೆಯಿತು; ಕಾಲೇಜಿನ 'ದಕ್ಷಿಣಾಫೆಲೋ' ಆದರು. ಮುಂದೆ ಎರಡು ವರುಷಗಳ ನಂತರ, ಅವರ ಎಂ.ಏ. ಪರೀಕ್ಷೆಯ ಪರಿಣಾಮ ಹೊರಬೀಳುವ ಮೊದಲೆ, ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಇಂಗ್ಲಿಷು ಪ್ರೊಫೆಸರರಾದರು; ಅಷ್ಟರಲ್ಲಿ ಎಂ. ಏ. ಪರೀಕ್ಷೆಯಲ್ಲಿ ಪ್ರಥಮ ವರ್ಗ ಸಿಕ್ಕ ಪರಿಣಾಮ ಹೊರಬಿತ್ತು. ಫರ್ಗ್ಯುಸನ್ ಕಾಲೇಜಿನಲ್ಲಿ ಅತ್ಯುತ್ತಮ ಪ್ರೊಫೆಸರರಲ್ಲೊಬ್ಬರೆನಿಸಿಕೊಂಡಿದ್ದರಿಂದಲೂ ಅವರ ಸ್ವಭಾವ ಎಲ್ಲರ ಮೆಚ್ಚಿಗೆಗೂ ಪಾತ್ರವಾಗಿದ್ದುದರಿಂದಲೂ, ಅವರನ್ನು ಡಿ.ಇ. ಸೊಸಾಯಿಟಿಯವರು ಆಜೀವ ಸದಸ್ಯರನ್ನಾಗಿ ಮಾಡಿಕೊಂಡು, ಅವರಿಗೆ ಮರ್ಯಾದೆ ಮಾಡಿದರು. ಆ ಸೊಸಾಯಿಟಿಯ ಆಜೀವ ಸದಸ್ಯರಾದ ಅಚ್ಚ ಗನ್ನಡಿಗರಲ್ಲಿ ಗೋಕಾಕರೇ ಮೊದಲಿಗರು. ಕೆಲವೇ ದಿನಗಳಲ್ಲಿ ಸೊಸಾಯಿಟಿಯು ಅವರನ್ನು ಉಚ್ಚಶಿಕ್ಷಣಕ್ಕಾಗಿ ಆಕ್ಸಫೋರ್ಡಿಗೆ ಕಳಿಸಿಕೊಟ್ಟಿತು. ಅಲ್ಲಿ ಅವರು ಎರಡು ವರುಷ ತಪಶ್ಚರ್ಯ ಮಾಡಿ, ಬಿ.ಏ. ದಲ್ಲಿ ಮತ್ತೆ ಪ್ರಥಮ ಶ್ರೇಣಿಯನ್ನು ಪಡೆದರು. ಆಕ್ಸಫೋರ್ಡಿನಲ್ಲಿ ಈ ವಿಷಯದಲ್ಲಿ ಪ್ರಥಮ ಶ್ರೇಣಿಯನ್ನು ಪಡೆದ ಮೊದಲನೆಯ ಭಾರತೀಯರೆಂದರೆ ಗೋಕಾಕರೇ. ಅವರು ಭಾರತಕ್ಕೆ ತಿರುಗಿ ಬಂದೊಡನೆ, ಕುಸಿದು ಬೀಳುತ್ತಿದ್ದ ಸಾಂಗ್ಲಿಯ ವಿಲಿಂಗಡನ್ ಕಾಲೇಜನ್ನು ಪುನರುಜ್ಜೀವನಗೊಳಿಸುವ ಉದ್ದೇಶದಿಂದ, ಸೊಸಾಯಿಟಿಯವರು ಅವರನ್ನು ಆ ಕಾಲೇಜಿನ ಪ್ರಿನ್ಸಿಪಾಲರನ್ನಾಗಿ ಮಾಡಿದರು. ನಿಸ್ಸತ್ತ್ವವಾಗಿದ್ದ ವಿಲಿಂಗ್‌ಡನ್ ಕಾಲೇಜು ಮತ್ತೆ ಜೀವನದ ಹುಟ್ಟಾಯಿತು. ಅಷ್ಟರಲ್ಲಿ ಡಿ.ಇ. ಸೊಸಾಯಿಟಿ ಮತ್ತು ಗೋಕಾಕರಲ್ಲಿ ಭಿನ್ನಮತವುಂಟಾಗಲು, ಅವರು ರಾಜೀನಾಮೆ ಕೊಟ್ಟು ಹೊರಗೆ ಬಂದರು. ತತ್‌ಕ್ಷಣವೇ ದೇಶದ ಮೂಲೆಮೂಲೆಗಳಿಂದ ಅವರಿಗೆ 'ಕರೆ' ಬಂದುವು. ಹೈದರಾಬಾದಿನ 'ಉಸ್ಮಾನಿಯಾ ವಿಶ್ವವಿದ್ಯಾಲಯ'ದಲ್ಲಿ ಕೆಲವುದಿನ ಇಂಗ್ಲಿಷು ಪ್ರೊಫೆಸರರಾಗಿ ದುಡಿದು, ಮುಂದೆ ಬಡೋದಾ ಸಂಸ್ಥಾನದ ವೀಸನಗರ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿ ಗುಜರಾತಿಗಳ ಹೃದಯವನ್ನು ಅರಳಿಸಿದರು. ಮೊನ್ನೆಮೊನ್ನೆ ಬಡೋದೆಯೂ ಕೊಲ್ಹಾಪುರವೂ ಮುಂಬೈಯಲ್ಲಿ ವಿಲೀನ ಹೊಂದಿದಾಗ, ಮುಂಬೆ

ದೇಶದ ಸ್ವಾತಂತ್ರ್ಯವನ್ನು ಉಳಿಸಬೇಕಿದ್ದರೆ ಮೊದಲು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಲ್ಲವೆ

ಅದಕ್ಕಾಗಿ

★ ತಮ್ಮ ಆದಾಯವನ್ನು ಬೆಳೆಯಿಸಿಕೊಳ್ಳುವವರೂ

★ ತಮ್ಮ ಹಣವನ್ನು ಸರಿಯಾದ ರೀತಿಯಲ್ಲಿ ತೊಡಗಿಸಬೇಕೆನ್ನುವವರೂ

★ ತಾರುಣ್ಯದಲ್ಲಿರುವಾಗಲೇ, ತಮ್ಮ ನೃದ್ಧಾವ್ಯಕಾಲವು ನಿಶ್ಚಿಂತೆಯಿಂದ ಕಳೆಯಲು ಕೂಡಿಡಬೇಕೆನ್ನುವವರೂ

ಶ್ರೀ. ಶೇಟ್ ಬಿ. ಎಮ್. ಬಿರ್ಲಾ

ಇವರ ನೇತೃತ್ವದಲ್ಲಿ ನಡೆದ

ರುಬಿ ಜನರಲ್ ಮಿಮಾ ಕಂಪನಿ ಲಿಮಿಟೆಡ್

೧೫೬೨, ಮಾರುತಿಗಲ್ಲಿ, ಬೆಳಗಾಂವಿ

ಇವರಿಂದ ವಿವರಗಳನ್ನು ತಿಳಿದುಕೊಳ್ಳಬೇಕು.

ವಿ. ಸೂ.— ಕಮಿಶನ್ ಇಲ್ಲವೆ ಸಂಬಳದ ಮೇಲೆ ಬೇರೆ ಊರುಗಳಲ್ಲಿ ಸ್ತ್ರೀ ಪಾಸೂ ಪುರುಷ ಪ್ರತಿನಿಧಿಗಳನ್ನು ತಯಾರಿಸಬೇಕಾಗಿದೆ. ಕೆಲಸ ಮಾಡಬಯಸುವವರು ಕಾಣಬೇಕು.

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ
ವಿ ಎಸ್ ಕಾಪಸೇಯವರ
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ಮರತಿಯಿಂದುಂಟಾವ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧ ಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೩೧ ದಿನಗಳಿಗೆ ಸಾಲಬಹುದಾದ ಆಳ ತೊಲೆಯ ಒಂದು ಡಬ್ಬಿಗೆ ೫–೮–೦; ಅಂಚೆಯ ವೆಚ್ಚ ೧–೬–೦. ಶೀಘ್ರ-ಗುಣಕಾರಿಯಾದ ಸ್ಪೆಶಲ್‌ಡಬ್ಬಿಗೆ ೧೦–೮–೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧–೬–೦. ೩ ಡಬ್ಬಿಗೆ ೧೫–೦–೦ ಅಂಚೆಯವೆಚ್ಚ ೨–೧೩–೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: **ವಿ. ಎಸ್. ಕಾಪಸೇ** ಮು. ಪೋ. ಮಿರಜ

ಸರಕಾರವು ಅವರನ್ನು ಕೊಲ್ಲಾಪ್ಪರದ ರಾಜಾರಾಮ್ ಕಾಲೇಜಿನ ಪ್ರಿನ್ಸಿಪಾಲ್‌ರನ್ನಾಗಿ ಮಾಡಿದೆ.

ಒಂದು ಸಣ್ಣ ಮರಡಿಯ ಓರೆಯಲ್ಲಿ ಹುಟ್ಟಿ ಜುಳುಜುಳು ಹರಿಯುವ ಝರಿಯೊಂದು, ಹೇಗೋ ಅಂದವಾದ ಬುಗ್ಗೆಯಾಗಿ ಹಳ್ಳವಾಗಿ, ವಿಶಾಲವಾದ ಆಳವಾದ ಧಾರಾಳವಾದ ನಿರ್ಮಲ ಜಲದ ಹೊಳೆಯಾಗಿ, ಮುಂದೆ ಮುಂದೆ ಗಂಭೀರವಾಗಿ ಸಾಗುತ್ತದೆ; ಸಂಪರ್ಕದಲ್ಲಿ ಬಂದ ಎಡಬಲದ ಮಣ್ಣಿನಲ್ಲಿ ಜೀವದುಂಬಿ ಹುಲುಸು ಬೆಳೆಯನ್ನು ಬೆಳೆಯಿಸುತ್ತದೆ, ಅಸಂಖ್ಯಾತ ಗೊರವೆಗಳನ್ನು ಸುಣ್ಣಾದಾದ ಬೆನಕಗಳನ್ನಾಗಿ ಮಾಡುತ್ತದೆ— ಹೀಗೆಯೆ ಎನ್ನಿಸುತ್ತದೆ ಗೋಕಾಕರ ಜೀವನವಾಹಿನಿ. ಅವರು ಮುಟ್ಟಿದುದೆಲ್ಲ ಚೆನ್ನಾಗುತ್ತಿದೆ, ಉಸಿರಿದುದೆಲ್ಲ ಕುಸುರಾಗುತ್ತಿದೆ; ಬರೆದುದೆಲ್ಲ ಒರೆಗೆ ಹತ್ತುತ್ತಿದೆ; ಬಯಸಿದುದೆಲ್ಲ ಬದಿಯಲ್ಲಿಯೇ ಬಂದು ಕೂಡುತ್ತಿದೆ. ಇದೆಲ್ಲದರ ಇಂಗಿತವೇನು? ಹಿನ್ನೆಲೆಯಲ್ಲಿಯ ಅದೃಶ್ಯವಾದ ಶಕ್ತಿ ಯಾವುದದು? ಈ ಚೈತನ್ಯದ ಉಗಮವಾವುದು? ಯಾವ ವರ್ಚಸ್ಸಿನ ಪರಿಣಾಮವದು?

"ಎಲ್ಲಿ, ನಿನ್ನ ಕೈ ನೋಡೋಣ ತಾ." ಎಂದರವರು ಒನ್ಮೈ-ಬಿ.ಏ. ಪಾಸಾದೊಡನೆ ಸವಣೂರಿಗೆ ಬಂದಾಗ. ನಾನಾ ಹದಿನೇಳು ವರುಷದ ಹುಡುಗ. ಬಲಗೈಯನ್ನು ಮುಂದೆ ಮಾಡಿದೆ ಅವರು ಗಂಭೀರವಾಗಿ ನನ್ನ ಕೈಯನ್ನು ಅತ್ತ ಇತ್ತ ಹೊರಳಿಸಿದರು ಗೋಡೆಗೆ ತಿಕ್ಕಿ ಅಂಗೈ ಬೆರಳುಗಳನ್ನು ನಿಚ್ಚಳ ಮಾಡಿದರು.

"ನಿನ್ನ ಲಗ್ನ ಇಪ್ಪತ್ತೇಳನೆಯ ವರ್ಷದಲ್ಲಿ!" ಎಂದರು ನಾನು ನಕ್ಕೆ.

"ಯಾಕೋ, ನಗುತ್ತೀ? ಈಗಾಗಲೇ ಲಗ್ನ ಆಗಿಯೇ ಹೋಗಿದೆಯೇನು ಮತ್ತೆ?"

"ಇಲ್ಲ. ಆದರೆ ನಿಶ್ಚಯ ಆಗಿದೆ!" ಎಂದೆ.

ಇಬ್ಬರೂ ನಕ್ಕೆವು. ಅಷ್ಟು ಬೇಗನೆ ಲಗ್ನ ಮಾಡಿಕೊಳ್ಳಬಾರದಾಗಿ ಹೇಳಿ, ತಮ್ಮ ಕೈಯನ್ನು ನನ್ನ ಮುಂದೆ ಮಾಡಿ, "ಇದು ನೋಡು, ಜಲಪರ್ಯಟನದ ಗೆರೆ; ನನ್ನ ಜೀವಮಾನದಲ್ಲಿ ಒಂದು ಸಲವಾದರೂ ನಾನು ಸಮುದ್ರಪರ್ಯಟನ ಮಾಡುತ್ತೇನೆ." ಎಂದರು ನಿಶ್ಚಯಮುದ್ರೆಯಿಂದ; ಅಸಾಮಾನ್ಯ ದೈವ ತಮ್ಮ ಮುಷ್ಟಿಯಲ್ಲಿದೆ ಎನ್ನುವಂತೆ—ನಿನಯಪೂರಿತ ಹಸನ್ಮುಖದಿಂದ.

ಗೋಕಾಕರು ಹೆಸ್ತ ಸಾಮುದ್ರಿಕೆಯನ್ನು ಚೆನ್ನಾಗಿ ಅಭ್ಯಸಿಸಿದ್ದಾರೆ; ಆ ಶಾಸ್ತ್ರದಲ್ಲಿ ಅವರಿಗೆ ತುಂಬಾ ವಿಶ್ವಾಸ. ಅದಕ್ಕೆ ಕಾರಣ ವನ್ನು ಬೇರೆ ಕಡೆಗೆ ಹುಡುಕಬೇಕಾದುದಿಲ್ಲ. ಗೋಕಾಕರ ತಂದೆಯವರು ಸುಪ್ರಸಿದ್ಧರಾದ ನುರಿತ ಜ್ಯೋತಿಷಿಗಳು. ಮುಖನೋಡಿ ನಿಮ್ಮ ಅಗು-ಹೋಗುಗಳನ್ನು ಹೇಳಬಲ್ಲರು. ತಂದೆಯ ದೇವಭೀರುತ್ವ, ಅತಿಮಾನುಷರೆನಿಸಿಕೊಂಡ ಬಾಳೇಕುಂದ್ರಿಯ ಮಹಾರಾಜರಲ್ಲಿಯ ನಿಸ್ಸೀಮಭಕ್ತಿ— ಇವು ಗೋಕಾಕರು ಎಳೆಯರಿರುವಾಗಲೇ ಅವರ ಮನಸ್ಸಿನ ಮೇಲೆ ತಮ್ಮ ವರ್ಚಸ್ಸನ್ನು ಬೀರಿವೆ.

ಅವರು ಸಣ್ಣವರಿರುವಾಗ ಅವರ ಮನೆಯಲ್ಲೊಬ್ಬರು ಹಾಸಿಗೆ ಹಿಡಿದಿದ್ದರಂತೆ; ಜೀವ ಟುಕುಟುಕು ಎನ್ನುತ್ತಿದ್ದಿತಂತೆ. ಏಕಾಕಿಯಾಗಿ ಗೋಲಿಯ ಗುಂಡನ್ನಾಡುತ್ತಿದ್ದ ಗೋಕಾಕರಿಗೆ ಜಡ್ಡಿನವರ ನೆನಪಾಗಿ, ದಾರಿಯಲ್ಲಿಯ ಒಂದು ಗುಬುಟಿಗಲ್ಲಿನ ಕಡೆಗೆ ಗೋಲಿಯನ್ನು ತೂರಿ 'ಗುಂಡು ಕಲ್ಲಿನ ಆ ಕಡೆಗೆ ಹೋದರೆ, ರೋಗಿ ಸಾಯುತ್ತಾರೆ; ಈ ಕಡೆಗೆ ಬಿದ್ದರೆ, ಬದುಕುತ್ತಾರೆ!' ಎಂದು ರೋಗಿಯ ಹಣೆಯ ಬರೆಹವನ್ನು ನಿಶ್ಚಯಿಸಿದರಂತೆ ಮನಸ್ಸಿನಲ್ಲಿಯೇ!

ಸವಣೂರಿಗೆ ಬಂದಾಗೆಲ್ಲ— ಮೊನ್ನೆ ಮೊನ್ನೆಯವರೆಗೆ— ಗೋಕಾಕರು ಊರ ಹೊರಗಿನ ದುರಗವ್ವನ ಗುಡಿಗೆ ಹೋಗುತ್ತಿದ್ದರು; ಆ ಗುಡಿಯ ಪೂಜಾರಿ ಈಗ ತೀರಿಕೊಂಡಿದ್ದರೂ ಅವನ ಬಗ್ಗೆ ಇದ್ದ ಆದರ-ವಿಶ್ವಾಸಗಳು ಗೋಕಾಕರ ಹೃದಯದಲ್ಲಿ ಇನ್ನೂ ಅಂಟಿಕೊಂಡಿವೆ.

ಮನುಷ್ಯನ ಜೀವನ ಒಂದು ನಿರ್ದಿಷ್ಟವಾದ ರೀತಿಯಲ್ಲಿ ರೂಪುಗೊಳ್ಳಬೇಕಾದರೆ, ವಿಶ್ವಯಾಮಿಗಳ ಕೈವಾಡ ಕೆಲಮಟ್ಟಿಗೆ ಇದೆ.

ಯಂದೂ, ನಮ್ಮ ಬುತ್ತಿಯ ಕಲಮೊಂದು ಅಂಶವನ್ನಾದರೂ ನಾವು ಬರುವಾಗ ಕಟ್ಟಿಕೊಂಡೇ ಬಂದಿರುವೆನೆಂದೂ, ಅಂಗೈಯ ಗೆರೆಗಳೂ ಹಣೆಯಬರೆಹವೂ 'ದೈವ' ಎಂದು ನಾವು ಕರೆಯುವ ಅಧ್ಭುತ ಶಕ್ತಿಯ ಲಿಖಿತ— ಬ್ರಹ್ಮಲಿಖಿತ— ಎಂದೂ ಅವರ ನಂಬಿಗೆ— ಎಂಬುದು, ಅವರನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದ ನನ್ನ ಅನುಮಾನ. ಜೀವನವೆಂಬುದೊಂದು ರಕ್ತರಂಜಿತವಾದ ಕಡಲು; ಮಾನವನು ಬಿರುಗಾಳಿಗೆ ತುತ್ತಾದ— ಈ ಕಡಲಿದಲ್ಲಿ ತೇಲುವ— ನಿಸ್ಸಹಾಯಕವಾದ ರವುದೆಯೊಂದು; ತೇಲುತ್ತ ಮಳುಗುತ್ತ ಕಲ್ಲಿಗೆ ಹತ್ತಿ ಮುಳ್ಳಿಗೆ ಹತ್ತಿ ಮುಂದೆ ಸಾಗುತ್ತಾನೆ— ಎಂಬುದು ಗೋಕಾಕರ ಜೀವನ ಸಿದ್ಧಾಂತದ ಸಾರಾಂಶ.

೩

ಇದರ ಅರ್ಥ, ಗೋಕಾಕರು ಕೇವಲ ದೈವವನ್ನೇ ನಂಬಿ ಕುಳಿತವರು ಎಂದಲ್ಲ; ಕೇವಲ ಪರಿಸ್ಥಿತಿಗೆ ಮೈಯೊಡ್ಡಿ ಅದರ ಲಹರಿಯಂತೆ ನಮ್ಮ ಜೀವನಕ್ಕೆ ರೂಪುಗೊಡಬೇಕು ಎಂದೂ ಅಲ್ಲ ಅವರ ತತ್ತ್ವ. ಮನಸ್ಸಿನಲ್ಲಿ ಒಂದು ಉದಾತ್ತ ಧ್ಯೇಯ, ಒಂದು ಹಿರಿಯನಾದ ಆಸೆ, ಒಂದು ಮಹತ್ತ್ವಾಕಾಂಕ್ಷೆಯನ್ನಿಟ್ಟುಕೊಂಡು, ಇವುಗಳ ಸಾಧನಕ್ಕಾಗಿ ತಾಳ್ಮೆಯಿಂದ ದೃಢನಿಶ್ಚಯದಿಂದ ಏಕಾಗ್ರ ಚಿತ್ತತೆಯಿಂದ ಹೆಣಗುವವರು ಗೋಕಾಕರು; ಹಾಗೆ ದುಡಿಯುವಾಗ, ಪ್ರಸಂಗ ಬಿದ್ದರೆ, ತಮಗೆ ಸರಿಹೋಗುವಂತೆ ಪರಿಸ್ಥಿತಿಯನ್ನು ಬದಲಿಸಿ, ಮುಂದೆ ಸಾಗಬಹುದಾದ ಆತ್ಮವಿಶ್ವಾಸವುಳ್ಳವರು. ಧ್ಯೇಯದ ಸಾಧನೆಯಲ್ಲಿ ದಿನಾಲು ಹದಿನಾರು ತಾಸುಗಳವರೆಗೆ ರಕ್ತ ಸುಡಲು ಬಂದು ಮುಂದೆ ನೋಡರೆಂಬುದಕ್ಕೆ ಅವರು, ಬಿ.ಎ. ಪರೀಕ್ಷೆಗಾಗಿ ಮಾಡಿದ ತಪಶ್ಚರ್ಯವೇ ಸಾಕ್ಷಿ. ಫರ್ಗ್ಯುಸನ್ ಕಾಲೇಜಿನಲ್ಲಿ ಪ್ರೊಫೆಸರರಾದಾಗ ಸಹ, ನಿತ್ಯಕರ್ಮಕ್ಕೆ ಅತ್ಯಗತ್ಯವಾಗಿ ಬೇಕಾಗುವ ತೀಕೆಯನ್ನು ಬಿಟ್ಟರೆ, ಮುಂಜಾನೆಯ ಆರರಿಂದ ರಾತ್ರಿಯ ಹನ್ನೊಂದರ ವರೆಗೆ, ವಿದ್ಯೋಪಾಸನೆಯಲ್ಲಿಯೇ ಕಳೆಯುತ್ತಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಅವರ ಜೀವನದಲ್ಲಿ ನಾಳೆ ಆಗುವ ಮಾರ್ಪಾಡು, ಇಂದು ಆಶೆಯಾಗಿ ಅಂಕುರಿಸುವುದು ಅವರ ಹೃದಯದಲ್ಲಿ. ಆ ಆಶೆಗೆ ಭೌತಿಕ ರೂಪ ಕೊಡಲು ಅದರ ಬೆನ್ನು ಹತ್ತುವುದು ಮನ. ಆ ಮೇಲೆ ಅವರ ದೃಢನಿಶ್ಚಯ-ಕಾರ್ಯತತ್ಪರತೆಗಳು, ಅಲ್ಲಾವುದ್ದೀನನ ಜಾದುವಿನಿಗೆಯಾಗುವುವು.

ಅವರು ಎಂ. ಏ. ಕ್ಕೆ ಅಭ್ಯಾಸ ಮಾಡುತ್ತಿದ್ದ ಕಾಲ, ಆರ್ಥಿಕ ಕೃಷ್ಟಿಯಿಂದ ಅವನತಿಯ ಕಾಲ; ನಿರುದ್ಯೋಗವು ತಾಂಡವ ನೃತ್ಯಮಾಡುತ್ತಿದ್ದ ಕಾಲ; ಎಂ. ಏ. ಪದವಿಯೂ ಕಾಸಿಗೆ ಪಂಚೈರಾಗಿದ್ದ ಕಾಲ. ಆಗ ನಾವಿಬ್ಬರೂ ಒಂದು ದಿನ ಸಂಜೆಯ ಮುಂದೆ ವಣೂರ ಕೆರೆಯ ತುಂಬಿಯ ಮೇಲೆ ಕುಳಿತಾಗ, ಮಾತಿಗೆ ಮಾತು ಏರಲು ನಾನು ಸಹಜವಾಗಿ ಅವರನ್ನು ಕೇಳಿದೆ: "ದಾದಾ, ನ್ಮ ಜೀವನದ ಹಿರಿದಾದ ಆಶೆ ಯಾವುದು?" ಎಂದು.

ತಮ್ಮ ಅಮೌಲ್ಯವಾದ ಅಂತಸ್ಥಗೌಪ್ಯವನ್ನು ಹೊರಗಡಹಲು ಹಿಂದು ಮುಂದು ನೋಡಿದರೋ ಏನೋ. ಸುಮ್ಮನೆ ಕುಳಿತರು; ಅಡಿಯಲ್ಲಿಯ ಕೆರೆಯ ನೀರಿನಲ್ಲಿ ಕಲ್ಲನ್ನೊಂದನ್ನು ಎಸೆದು, ಅಚಲವಾಗಿದ್ದ ಅದರ ಮೇಲ್ಮೈಯಲ್ಲಿ ವರ್ತುಲ ತರಂಗವನ್ನೆಬ್ಬಿಸಿದರು; ಒಂದು ಕ್ಷಣ ಅವನ್ನು ದಿಟ್ಟಿಸಿ ನೋಡಿದರು. ಮುಖದ ಮೇಲೆ ಮೂಡಿದ ಮುಗುಳು ನಗೆಯ ಬೆನ್ನ ಹಿಂದೆಯೇ ಮನದ ಆಶೆ ಶಬ್ದರೂಪದಲ್ಲಿ ಹೊರಗೆ ಬಂತು:

"ನನಗೆ ಇಂಗ್ಲಂಡಿಗೆ ಹೋಗಿ ಕಲಿತು ಬರಬೇಕೆಂದು ಇದೆ."

"ಆ ಮೇಲೆ?"

"ಇಂಗ್ಲಿಷು ಪ್ರೊಫೆಸರನಾಗಬೇಕೆಂದಿದೆ!"

"ಮತ್ತೆ?"

ನನ್ನನ್ನು ಒಮ್ಮೆ ಕಣ್ಣರಳಿಸಿ ನೋಡಿದರು; ಹೃದಯದ ಅಂತರಾಳದಿಂದ ಉತ್ತರ ಹೊರಗೆ ಬಂತು:

"ಕರ್ಣಾಟಕ ಕಾಲೇಜಿನ ಪ್ರಿನ್ಸಿಪಾಲರಾಗಬೇಕೆಂದಿದೆ!"

ಇಬ್ಬರೂ ಏಕಕಾಲಕ್ಕೆ ನಕ್ಕೆವು. ಅವರು ನಕ್ಕುದು ವಿನಯದಿಂದ; ನಾನು ನಕ್ಕುದು ಮಾತ್ರ ಅವರ ಯೋಗ್ಯತೆಯ ಅಳವನ್ನರಿಯುವ ಸಾಮರ್ಥ್ಯವಿಲ್ಲದ ಪುಡುಗತನದ ಹುಚ್ಚಿನಿಂದ. ಮೂರರಲ್ಲಿಯ ಎರಡು ಬಯಕೆಗಳು ಆಗಲೇ ಈಡೇರಿವೆ. ಮೂರನೆಯದಾದರೂ

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.

ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೋಜೆನ್— ಕರ್ನಾಟಕದ ಪ್ರಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ಕ್ವಿನಾಯ್ನ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ಮೇಲ ಅತ್ಯಂತ ಆಶ್ಚರ್ಯಕಾರಕ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಪ್ಲೀಹವನ್ನು ಸರಿಪಡಿಸಿ ಪೂರ್ವ ಸ್ಥಿತಿಗೆ ತರುವದು.

ವರ್ಮಿನೋಲ್ (ಜಂತುನಾಶಿನಿ)— ಈ ಔಷಧ ಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇವರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುವ ಆವಶ್ಯಕತ ಇಲ್ಲ

ಮ್ಯಾನೇಜಿಂಗ್ ಏಜೆಂಟರು:

ಮೆಸರ್ಸ: ನಿಜಾರ್ ನಕರ ಮತ್ತು ಕಂಪನಿ

ಗರ್ಭ ನಿರೋಧದ ಸಾಧನಗಳು .

ಎಡಸರ ಮುರ್ಮುಚೀಲ ಬಹಳ ತಾಳಿಕೆ ಬರುವುದು ೧ ಕ್ಕೆ ೧-೪-೦
,, ,, ಸಾಧಾರಣ ,, ೧ ಕ್ಕೆ ೧-೦-೦
,, ,, ಸಾದಾ ,, ೧ಕ್ಕೆ ೦-೮-೦
,, ಮಣಿ ಕಂಚುಕ ,, ೧ಕ್ಕೆ ೦-೮-೦
ಶ್ರುತೇಂದ್ರಿಯ ಬೆಳೆಯಿಸುತ, ಉನ್ಮೇಕಿಸುವ ಇಂಪ್ಲಾಕ್ಯೂಮ್ ಪಂಪು ಸುಂದರವಾದ ಪೆಟ್ಟಿಗೆಯಲ್ಲಿ } ೧ಕ್ಕೆ ೨೫-೦-೦
ಬೀಜಾಂತಕ ತೈಲ ಬಾ. ೧ ಕ್ಕೆ ೧-೦-೦
ಹೆಂಗಸರಿಗೆ ಚಿಕ್ಕಪೆಸರಂ ನಂ. ೧ ೧-೮-೦
,, ,, ನಂ. ೨ ೧-೪-೦
,, ,, ನಂ. ೩ ೧-೦-೦
ಜನನೇಂದ್ರಿಯ ತೊಳೆಯುವ ಜೀಕಳಿ ೧೫-೦-೦

ಬೆಲೆಯನ್ನೂ ಅಂಚೆ ವೆಚ್ಚವನ್ನೂ ೧೨ ಆಣೆ ಮುಂಗಡ ಕಳಿಸಬೇಕು. ವ್ಹಿ. ಪಿ. ಕಳಿಸಲಾರೆವು.

ಶ್ರೀಕಾಂತ ಮತ್ತು ಕಂಪನಿ

ಸುಭಾಸ ಬೀದಿ, ಧಾರವಾಡ

ಅವರ ಅಳವಿನ ಹೊರಗಿಲ್ಲನೆಂಬುದು, ಇದೀಗ ಸ್ಪಷ್ಟವಾಗಹತ್ತಿದೆ. ಧಾರವಾಡವು ಕೊಲ್ಹಾಪುರದಿಂದ ತೀರ ದೂರವಿಲ್ಲ!

ಆತ್ಮವಿಶ್ವಾಸ ಗೋಕಾಕರ ಕೈದೀವಿಗೆ; ಕಾರ್ಮಿಕತೆ ಈ ಕೈದೀವಟಿಗೆಯನ್ನು ಪೋಷಿಸುವ ಎಣ್ಣೆ. ಈ ಆತ್ಮವಿಶ್ವಾಸ ಇಂದು-ನಿನ್ನೆಯದಲ್ಲ; ಹಿಂದಿನಿಂದಲೇ ಬಂದುದು. ಅದರ ಸೆಲೆಯನ್ನು ಅವರು ಇಂಗ್ಲಿಷ್ ಸಾಲೆಯ ವಿದ್ಯಾರ್ಥಿಯಾಗಿದ್ದಾಗಿನಿಂದಲೇ ಕಾಣಬಹುದು. ತಮಗೆ ಸಿಕ್ಕ ಸ್ಕಾಲರ್‌ಷಿಪ್ಪಿನ ಆರೇಳು ರೂಪಾಯಿಗಳನ್ನೂ ಒಮ್ಮೆ ತಮ್ಮ ತಂದೆಯ ಕಡೆಗೆ ಕೊಟ್ಟವ್ವರಂತೆ. ಆಗ ತಾವು ಬರೆದ ಕೆಲವು ಇಂಗ್ಲಿಷು ಗೀತೆಗಳನ್ನು ಪ್ರಕಟಿಸಬೇಕೆಂಬ ಹುರುಪುಸೊಕ್ಕು, ಅವುಗಳನ್ನು ಅಚ್ಚು ಹಾಕಿಸುವುದಕ್ಕಾಗಿ ತಮ್ಮ ಹಣನನ್ನು ತಮಗೆ ತಿರುಗಿ ಕೊಡಬೇಕಾಗಿ ತಂದೆಯೊಡನೆ ಜಗಳವಾಡಿದ್ದರಂತೆ ಗೋಕಾಕರು!

ಈ ಆತ್ಮವಿಶ್ವಾಸದ ಜ್ಯೋತಿ ಒಂದೇ ಒಂದು ಸಲ ಮುಂಕಾದುದು ಅವರು ಎಂ. ಎ. ಪರೀಕ್ಷೆಗೆ ಕೂಡುವ ಮುಂದೆ. ಆಗೊಂದು ನೋಜಾಯಿತು: ಲಗ್ನದ ಗಡಿಬಿಡಿಯ ಮೂಲಕ ಅವರಿಗೆ ಮೊದಲನೆಯ ವರುಷ ಸಾಕಷ್ಟು ಅಭ್ಯಾಸವಾಗಿಲಿಲ್ಲವಾದುದರಿಂದಲೂ, ತಾಯಿಯ ಜಡ್ಡಿನ ಮೂಲಕ ಎರಡನೆಯ ವರುಷವೂ ಅವರ ಮನಸ್ಸಿಗೆ ತೃಪ್ತಿಯಾಗುವಷ್ಟು ತಯಾರಿಯಾಗಲಿಲ್ಲವಾದುದರಿಂದಲೂ, ಪರೀಕ್ಷೆಗೆ ಕೂಡುವುದನ್ನು ಒಂದು ವರುಷ ಮುಂದೆ ಹಾಕುವ ವಿಚಾರವನ್ನು ತಲೆಯಲ್ಲಿ ಹಾಕಿಕೊಂಡರು. ತಂದೆಯವರೊಡನೆ ಸ್ವಲ್ಪ ಚಕಮಕಿಯಾಯಿತು. ಆ ವರುಷ ಅವರ ನಕ್ಷತ್ರಬಲ ಚೆನ್ನಾಗಿದ್ದಿತೆಂದೂ ಅವರು ಪರೀಕ್ಷೆಗೆ ಕೂಡಲೇ ಬೇಕೆಂದೂ ತಂದೆಯವರ ವಾದ. ತಂದೆಯವರ ಮನಃಸಂತೃಪ್ತಿಗಾಗಿ ಮುಂಬಯಿಗೆ ಹೋಗಿ, ಪರೀಕ್ಷಾಮಂಟಪದಲ್ಲಿ ಕಾಲಿಡುವ ಶಾಸ್ತ್ರಮಾಡಿ ಹೊರಗೆ ಬರಬೇಕೆಂದು ನಿಶ್ಚಯಮಾಡಿದರು ಅವರು. ವಕೀಲರಾದರೂ ಚಾಣಾಕ್ಷರು. ಮಗನು ಕಡೆಯ ಗಂಟೆಯಾಗುವ ವರೆಗೆ ಪಂಟಪದಲ್ಲಿಯೇ ಕೂಡುವುದನ್ನು ನೋಡಿಕೊಳ್ಳಲು, ತಮ್ಮ ವಿಶ್ವಾಸಕ್ಕೆ ಪಾತ್ರರಾದ ಗೋಕಾಕರ ಗೆಳೆಯರೊಬ್ಬರನ್ನು ಅವರೊಡನೆ ಮುಂಬಯಿಗೆ ಕಳಿಸಿದ್ದರು! ಎಂ. ಎ. ಯಲ್ಲಿಯೂ ಪ್ರಥಮವರ್ಗ ಸಿಕ್ಕಮೇಲೆ ಗೋಕಾಕರಿಗೆ ಎನಿಸಿರಬಹುದು:— ತಾವು ಬಿ. ಎ. ಪರೀಕ್ಷೆಗಾಗಿ ಮಾಡಿದ ಸಾಹಸದ ಸಂಚಯ, ಎಂ. ಎ.ಯ ಪ್ರಥಮವರ್ಗಕ್ಕೂ ಸಾಕುಸಾಕಾಗಿ ಹೆಚ್ಚಿಗೆ ಉಳಿಯುವಷ್ಟು ಇದ್ದಿತೆಂದು!

ಗೋಕಾಕರು ಇಂಗ್ಲಂಡಿಗೆ ಹೋಗುವ ಮುನ್ನ ಮುಂಬೈಯಲ್ಲಿ ಏರ್ಪಡಿಸಿದ ಬೀಳ್ಕೊಡುವ ಸಮಾರಂಭವೊಂದರಲ್ಲಿ, ಅವರ ಗುರುಗಳಾದ ಪ್ರೊ. ತಾಕಾಖಾವ್‌ರವರು, ಗೋಕಾಕರ ಎಂ. ಎ. ಪೇಪರುಗಳ ಸಂಬಂಧನಾಗಿ ಇನ್ನೊಂದು ಮೋಜಿನ ಸಂಗತಿಯನ್ನು ಹೇಳಿದರು: ಎಂ. ಎ. ಪರಿಣಾಮ ಹೊರಬೀಳುವ ಮುನ್ನ ಪ್ರೊ. ತಾಕಾಖಾವರು ಇವರ ಪರೀಕ್ಷಕರೊಬ್ಬರನ್ನು, ಇವರು ಹೇಗೆ ಬರೆದಿದ್ದಾರೆಂಬುದನ್ನು ಕೇಳಿದರಂತೆ. ಆಗ ಅವರೆಂದರಂತೆ "ಅದೇಕೋ ಗೋಕಾಕರು ಪೇಪರು ನೆಟ್ಟಗೆ ಮಾಡಿಲ್ಲ; ಇನ್ನೊಬ್ಬರಿಗೆ ಯಾರಿಗೋ ಫರ್ಸ್ಟ್‌ಕ್ಲಾಸು ಸಿಕ್ಕಿದೆ" ಎಂದು. ಪರಿಣಾವ ಹೊರಬಿದ್ದಮೇಲೆ ತಾವು ತಿಳಿದ 'ಇನ್ನೊಬ್ಬ'ರೇ ಗೋಕಾಕರೆಂದೂ ಗೋಕಾಕರೆಂದು ತಿಳಿದವರು ಇನ್ನೊಬ್ಬರಾರೋ ಎಂದೂ ಮನವರಿಕೆಯಾದಾಗ, ಹೊಟ್ಟೆತುಂಬ ನಕ್ಕರಂತೆ ಆ ಇಂಗ್ಲಿಷು ಗೃಹಸ್ಥ.

೪

ಆನುವಂಶಿಕತೆ, ಜನ್ಮಜಾತ ಸಂಸ್ಕೃತಿ, ಯೋಗಾಯೋಗ, ಪರಿಸ್ಥಿತಿ, ಪ್ರಯತ್ನ—ಇವೆಲ್ಲವೂ ಮನುಷ್ಯನ ಮೂರ್ತಿಗೆ ನಿರ್ದಿಷ್ಟ ರೂಪ ಕೊಡಲು ತಮ್ಮ ಉಳಿಗಳನ್ನು ಅದಕ್ಕೆ ಮುಟ್ಟಿಸುವುವಾದರೂ ವ್ಯಕ್ತಿತ್ವ ಪರಿಪೂರ್ಣತೆಯಲ್ಲಿ ಎರಡನೆಯ ವ್ಯಕ್ತಿಗಳ ಸಹವಾಸ, ಸಹಾನುಭೂತಿ, ವರ್ಜಸ್ಸು ಮೊದಲಾದುವುಗಳ ಕೈವಾಡ ಮಹತ್ತ್ವವಿದ್ದಿರುತ್ತದೆ.

ಗೋಕಾಕರ ವ್ಯಕ್ತಿತ್ವಕ್ಕೆ ಮೊದಲು ಹೊಳಹು ಹಾಕಿದವ ಅವರ ತಾಯಿಯ ತಂದೆ— 'ಬ್ಯಾಡಿಗಿ ಮಾಸ್ತರ'ರು. ಅವ ಇವರಲ್ಲಿ ಆಚ್ಚುಕಟ್ಟುತನ, ನಿಯಮಿತತನ, ಓದಿನಲ್ಲಿ ಹವ್ಯಾಸ ಮೊದಲಾದುವುಗಳನ್ನು ತುಂಬಿದರು. ಇಂಗ್ಲಿಷಿನ ತಳಹದಿಯದುದೂ ಅವರಿಂದಲೇ. ಸವಣೂರಿನ ಅಂದವಾದ ತಿಳಿಜೇ ಕಾಸಾರ, ಕಾಸಾರದ ಸುತ್ತಲಿನ ತೋಟ-ಪಟ್ಟಿಗಳು, ಗಿಡ-ಬಳ್ಳಿಗ

ಹೂ-ಕಾಯ್ಗಳು, ಹೆಚ್ಚ ಹೆಸರು—ಇವೆಲ್ಲವೂ ಪ್ರಕೃತಿದೇವಿಯ ಪ್ರಥಮದರ್ಶನವನ್ನು ಗೋಕಾಕರಿಗೆ ಮಾಡಿಕೊಟ್ಟಾಗ, ಆ ಸೌಂದರ್ಯದ 'ಕರೆ'ಗೆ ಅವರ ಹೃದಯಕಾವ್ಯ 'ಓ' ಕೊಟ್ಟಾಗ, ಅವರ ಕಾವ್ಯ ಮೊದಲು ಬಾಯ್ಬಿಟ್ಟಿದು ಇಂಗ್ಲಿಷಿನಲ್ಲಿಯೇ. ಗೋಕಾಕರು ಕಾಲೇಜಿಗೆ ಬರುವವರೆಗೆ ಕನ್ನಡದ ಕಡೆಗೆ ಅವರ ಒಲವು ಅಷ್ಟಿರಲಿಲ್ಲ. ಆಗ ಬೇಂದ್ರೆಯವರ ಪರಿಚಯವಾಯಿತು; ಅವರ ವರ್ಚಸ್ಸಿಗೆ ಒಳಗಾದರು ಅವರು; ಅವರು ತಮ್ಮ ಗುರುಗಳು, ಗೆಳೆಯರು ಎಂದು ಕಂಡುಕೊಂಡರು. ಬೇಂದ್ರೆಯವರು ಇವರ ಕಾವ್ಯಸೆಲೆಯ ಛಾಯೆಯನ್ನು ಬದಲಿಸಿದರು. ಗೋಕಾಕರಿಗೆ ಕನ್ನಡದ ಹುಚ್ಚೂ ಹಿಡಿಯಿತು. ಗೋಕಾಕರ ಜೀವನ ಚರಿತ್ರೆಯಲ್ಲಿ ಪ್ರೊ. ಮುಗಳಿಯವರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಇಬ್ಬರೂ ಕಾಲೇಜಿನಲ್ಲಿಯ ಗೆಳೆಯರು. ಮುಗಳಿಯವರು ಸ್ವಲ್ಪ ಮುಂದೆ; ಗೋಕಾಕರು ಸ್ವಲ್ಪ ಹಿಂದೆ. ಮುಗಳಿಯವರು ಕಾಲೇಜಿನಲ್ಲಿ ಮೊದಲನೆಯ ವರ್ಷದಿಂದಲೇ ಉಜ್ವಲ ಭೃಗತಿಯುಳ್ಳವರು. ಮುಗಳಿಯವರ ಸಂಪರ್ಕ ಬರುವ ವರೆಗೆ—ಜ್ಯೂನಿಯರ್ ಬಿ.ಎ. ದ ವರೆಗೆ— ಗೋಕಾಕರು ಸಾಮಾನ್ಯ ವಿದ್ಯಾರ್ಥಿಗಳಲ್ಲೊಬ್ಬರೇ ಆಗಿದ್ದರು. ಮುಗಳಿಯವರು ಅವರಲ್ಲಿ ಕಿಡಿಯನ್ನು ಕಂಡರು; ಅದಕ್ಕೆ ಪುಟಕೊಟ್ಟರು. ಕ್ಷಣಮಾತ್ರದಲ್ಲಿ ಆ ಕಿಡಿ ಉಜ್ವಲವಾಯಿತು. ಅರೇ ತಿಂಗಳಲ್ಲಿ ಕಾಲೇಜಿನ ಶಿಕ್ಷಕರನ್ನೂ ವಿದ್ಯಾರ್ಥಿಗಳನ್ನೂ ದಂಗುಬಡಿಸಿದರು ಗೋಕಾಕರು. ಮುಗಳಿಯವರು ಕಂಡು ಹಿಡಿದ ಕಿಡಿಯ ತೇಜ, ಅವರ ನಿರೀಕ್ಷಣೆಯನ್ನು ಮೀರಿ ಅವರನ್ನೂ ಬೆರಗುಗೊಳಿಸಿತು. ದೀಪದ ಕಡ್ಡಿಯೆಂದು ತಿಳಿದು ಕೊರೆದದ್ದು ಮಿಂಚಿನ ಕಡ್ಡಿಯೆಂದು ಆಮೇಲೆ ತಿಳಿಯಿತವರಿಗೆ. "ಸಕಾಲದಲ್ಲಿ ಮುಗಳಿಯವರ ಸಂಪರ್ಕ ನನಗೆ ಆಗದೆ ಇದ್ದಿದ್ದರೆ, ಅವರು ನನ್ನಲ್ಲಿಟ್ಟ ಮಹತ್ತ್ವಾಕಾಂಕ್ಷೆಯನ್ನು ತುಂಬಿ ನನ್ನನ್ನು ಹುರಿದುಂಬಿಸದಿದ್ದಿದ್ದರೆ, ನಾನು ಈ ಮಟ್ಟಕ್ಕೆ ಬರುತ್ತಿರಲಿಲ್ಲ!" ಎಂದು ಗೋಕಾಕರು ನನ್ನ ಮುಂದೆ ಎಂದುದು ನನಗೆ ಇನ್ನೂ ನೆನಪಿದೆ. ಗೋಕಾಕರ ವಿದ್ವತ್ತೆಯ ಶ್ರೇಯಸ್ಸಿನಲ್ಲಿಯ ಕೆಲವೊಂದು ಅಂಶ, ಅವರ ಪ್ರೊಫೆಸರರಾದ ತಾಕಾಖಾವರಿಗೆ ಸಲ್ಲುತ್ತಿದೆ. ಅವರು ಕನ್ನಡ ಸಾಹಿತ್ಯದಲ್ಲಿ ಗಳಿಸಿದ ಯಶಸ್ಸಿನ ಕೆಲವೊಂದು ಅಂಶ 'ಗೆಳೆಯರ ಗುಂಪಿ'ಗೆ ಸಲ್ಲುತ್ತದೆ.

ಗೋಕಾಕರ ನಾಳ-ನಾಳದಲ್ಲಿ ಹರಿಯುತ್ತಿರುವ ಪ್ರೀತಿ-ಪರೋಪಕಾರ ಗುಣಗಳು ನೇರವಾಗಿ ಅವರ ತಂದೆ ತಾಯ್ಗಳಿಂದ ಬಂದುವು ಎಂಬುದು, ಅವರ ತಂದೆ-ತಾಯ್ಗಳ ಪರಿಚಯವಿದ್ದವರಿಗೆ ಹೊಳೆಯದೆ ಇರದು. ಇವೆರಡೂ ಗುಣಗಳೂ ಗೋಕಾಕರಲ್ಲಿ ಬಹುಮುಖವಾಗಿ ಒಡೆದು ಕಾಣುತ್ತಿವೆ. ನೂರಾರು, ಸಾವಿರಾರು ವಿದ್ಯಾರ್ಥಿಗಳು ಗೋಕಾಕರಿಂದ ಒಂದಿಲ್ಲೊಂದು ರೀತಿಯಿಂದ ಸಹಾಯ ಪಡೆದಿದ್ದಾರೆ. ಕರ್ನಾಟಕ, ಕನ್ನಡ, ಕರ್ನಾಟಕದ ಕಲಾವಂತರು, ಸಾಹಿತಿಗಳು ಎಂದರೆ ಗೋಕಾಕರಿಗೆ ಅಭಿಮಾನ. ಅವರು ಹೊರನಾಡಿನಲ್ಲಿ ಇದ್ದಾಗ, ಅಲ್ಲಿಯ ಕನ್ನಡ ಜನರನ್ನು ಒಂದುಗೂಡಿಸಿ ಅವರೆಲ್ಲರನ್ನೂ ಒಂದು ಬಳಗದವರನ್ನಾಗಿ ಮಾಡಿಕೊಂಡಿರುವುದು ಕರ್ನಾಟಕದಿಂದ ಹೊರಗೆ ಇರುವ ಕನ್ನಡಿಗರಿಗೆಲ್ಲ ಗೊತ್ತು. ಕರ್ನಾಟಕದ ಬಗೆಗೆ ಇರುವ ಅಪಪ್ರಚಾರವನ್ನು ಹೋಗಲಾಡಿಸುವುದು, ಬೇರೆ ಭಾಷೆಯ ಸಾಹಿತಿಗಳ ಸಂಪರ್ಕ ಬೆಳೆಯಿಸಿಕೊಳ್ಳುವುದು, ಅವರಲ್ಲಿ ಕನ್ನಡದ ಬಗ್ಗೆ ತಿಳಿವಳಿಕೆಯನ್ನೂ ಆದರವನ್ನೂ ಹುಟ್ಟಿಸುವುದು—ಮುಂತಾದುವು, ಗೋಕಾಕರು ಪುಣೆ ಸಾಂಗ್ಲಿ-ಹೈದರಾಬಾದುಗಳಲ್ಲಿದ್ದಾಗ ಮಾಡುತ್ತಿದ್ದ ಮುಖ್ಯವಾದ ಚಟುವಟಿಕೆಗಳು.

ಗೆಳೆತನವೆಂಬುದು ಗೋಕಾಕರಲ್ಲಿ ಒಂದು ಕಲೆಯಂತೆ ಇದೆ; ಒಂದು ಶಾಸ್ತ್ರದಂತೆ ಇದೆ. ಅವರು ಆ ಕಲೆಯ ಉಪಾಸಕರು; ಆ ಶಾಸ್ತ್ರದ ಸಂಶೋಧಕರು ಗೆಳೆತನ ಹೇಗೆ ಸುರುವು ಮಾಡಬೇಕು, ಹೇಗೆ ಬೆಳೆಯಿಸಬೇಕು, ಉಳಿಯುವಂತೆ ಹೇಗೆ ನೋಡಿಕೊಳ್ಳಬೇಕು—ಎಂಬುದೆಲ್ಲ ಗೋಕಾಕರಿಗೆ ಗೊತ್ತಿದೆ. ಒಂದೊಂದು ಸಲ ಬಳಗದವರಿಂದ ಪುಸ್ತಕಗಳಿಂದ ಸಿಕ್ಕದ ಆನಂದವನ್ನು ಗೆಳೆಯರಿಂದ ಪಡೆಯುತ್ತಾರೆ ಅವರು.

ಇನ್ನು ಒಂದೇ ಒಂದು ಮಾತು. ಅದನ್ನು ಹೇಳದಿದ್ದರೆ ಈ ಚಿತ್ರ ಪೂರ್ಣವಾಗದು: ಇಂದು ಗೋಕಾಕರು ನುರಿತ ಶಿಕ್ಷಕರಾಗಿದ್ದಾರೆ; ವಿಚಾರಪೂರ್ಣ ಭಾಷಣಕಾರರಾಗಿದ್ದಾರೆ; ದ್ವಿಭಾಷಾ-ಪಂಡಿತರಾಗಿದ್ದಾರೆ; ಯೋಗ್ಯತಾಸಂಪನ್ನ ಆಡಳಿತಗಾರರಾಗಿದ್ದಾರೆ. ಕನ್ನಡ ಸಾಹಿತ್ಯರಂಗದಲ್ಲಿ ಕವಿಗಳ ಗುಂಪಿನಲ್ಲಿ, ನಾಟಕಕಾರರ ಗುಂಪಿನಲ್ಲಿ, ಕಾದಂಬರಿಕಾರರ ಗುಂಪಿನಲ್ಲಿ, ಅವರಿಗೆ ಒಂದೊಂದು ಸ್ಥಾನವಿದೆ. ವಿಮರ್ಶಕರ ಬಳಗದಲ್ಲಿಯೂ ಗೋಕಾಕರು ಮೇಲಿನ ಸ್ಥಾನ ಗಳಿಸಿಕೊಂಡಿರುವುದು ಇನ್ನೂ ವಿಶೇಷ.

ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ

ಶುಭಾರು ೬೦೦ ಪುಟಗಳಲ್ಲಿ ತಾಲ್ಕು ಗ್ರಂಥಗಳು.

ವಾರ್ಷಿಕ ಚಂದಾ ೫-೦-೦ (ರಜಿಸ್ಟರ್) ಪೋ. ಪೆಚ್ಚಪೇರಿ.

ಸಂಪಾದಕರು— **ಕಲಮುದಾನಿ ಗುರುರಾಯರು**

ಇನೆಯ ವರ್ಷದ ಮೊದಲನೆಯ ಗ್ರಂಥ

ಉತ್ಪಲಾ ಭಾಗ ೨

ಇದೀಗ ಹೊರಟಿದೆ. ಬೇಗ ಚಂದಾದಾರರಾಗಿರಿ.

ಪಲ್ಲವರ ವಾಸ್ತು ಮತ್ತು ಮೂರ್ತಿ ಶಿಲ್ಪ

(ಒಂದು ಕಣ್ಣು ಪರಿಚಯ)

ಪ್ರೊ. ಆರ್. ಸಿ ಹಿರೇಮಠ ಎಂ. ಎ, ಬಾಗಿಲುಕೋಟೆ.

★

ದಕ್ಷಿಣ ದೇಶದ ಪುರಾತನ ವಾಸ್ತು-ಶಿಲ್ಪಗಳಲ್ಲಿ, ಕಂಚಿಯ ಪಲ್ಲವರ ಕಾಲವು ಮೇಲುಗೈಯಾಗಿ ಕಾರ್ಯ ಮಾಡಿದೆ. ಕರ್ನಾಟಕ ಪ್ರಾಚೀನ ಶಿಲ್ಪಕಲೆಯು ಪಲ್ಲವರ ಶಿಲ್ಪಕಲೆಯಿಂದಲೇ ಪ್ರಚೋದಿತವಾದುದೆಂದು ಹೇಳುವಂತಿದೆ.

★

ಬನವಾಸಿಯ ಕದಂಬರು, ತಳಕಾಡಿನ ಗಂಗರು, ಬಾದಾಮಿಯ ಚಾಲುಕ್ಯ ಚಕ್ರೇಶ್ವರರು—ಕನ್ನಡಿಗರ ಕ್ಷಾತ್ರತೇಜಸ್ಸನ್ನು ಮೆರೆಯಿಸಿ ಕರ್ನಾಟಕ ಸಾಮ್ರಾಜ್ಯವನ್ನು ಸ್ಥಾಪಿಸಿದ ಇತಿಹಾಸವನ್ನು ನಾವೆಲ್ಲ ಹೆಮ್ಮೆಯಿಂದ ಓದುವುದುಂಟು. ಕದಂಬ-ಚಾಲುಕ್ಯರಿಗೆಲ್ಲ ಪ್ರತಿಸ್ಪರ್ಧಿಗಳಾಗಿ ಹೋರಾಡಿದ ಪಲ್ಲವರು 'ಮಧ್ಯಯುಗ'ದ ಮಧ್ಯ ಹಿಂದುಸ್ಥಾನದ ಇತಿಹಾಸದಲ್ಲಿಯೇ ಸುಪ್ರಸಿದ್ಧರಾಗಿರುವರು. ದಕ್ಷಿಣ ಭರತಖಂಡದ ಸಾಂಸ್ಕೃತಿಕ ಅಭಿವೃದ್ಧಿಗೆ ಪಲ್ಲವರು ಅನೇಕ ರೀತಿಯಿಂದ ಕಾರಣೀಭೂತರಾಗಿರುವರು. ಅವರ ಕಾಲದ ವಾಸ್ತು-ಶಿಲ್ಪಕಲೆಗಳು ಶಿಲ್ಪಕಲಾಭಿಜ್ಞರ ಮೆಚ್ಚುಗೆಯನ್ನು ಪಡೆದಿವೆ. ಪಲ್ಲವರ ವಾಸ್ತು ಮತ್ತು ಶಿಲ್ಪಕಲೆಗಳ ವಿಷಯವನ್ನೇ ನಾನಿಲ್ಲಿ ಸ್ವಲ್ಪ ವಿವೇಚಿಸಬಯಸುತ್ತೇನೆ. ಹೀಗೆ ಮಾಡುವ ಮುನ್ನ ಪಲ್ಲವರ ಇತಿಹಾಸವನ್ನು ವಿಹಂಗಮದೃಷ್ಟಿಯಿಂದ ವಿವರಿಸುವುದು ಅವಶ್ಯವೆನಿಸಿದೆ.

ಪಲ್ಲವರು ಉತ್ತರದಿಂದ ದಕ್ಷಿಣಕ್ಕೆ ಬಂದವರೆಂದೂ, ಮೊದಲನೆಯ **ರುದ್ರದಾಮನ** ಶಾಸನಗಳಲ್ಲಿ ಉಕ್ತರಾದ ಪಹ್ಲವರೇ ಈ ಪಲ್ಲವರೆಂದೂ ಕೆಲವು ಇತಿಹಾಸ ಸಂಶೋಧಕರು ಅಭಿಪ್ರಾಯಪಡುತ್ತಾರೆ. ಶಾತವಾಹನರೊಡನೆ ಪಲ್ಲವರು ವೈವಾಹಿಕ ಸಂಬಂಧವನ್ನು ಬೆಳೆಯಿಸಿ, ದಕ್ಷಿಣದಲ್ಲಿ ರಾಜ್ಯಸಂಪಾದಿಸಿದರೆಂದು ಪ್ರೋ. Jouvean Dubrwil ಅವರು ಹೇಳುತ್ತಾರೆ. ಅದೇನಿದ್ದರೂ ಪಲ್ಲವರು ಶಾತವಾಹನರ ಉತ್ತರಾಧಿಕಾರಿಗಳೆಂಬುದರಲ್ಲಿ ಅವ ಸಂಶಯವೂ ಇಲ್ಲ. ಕ್ರಿ. ಶ. ೩ನೆಯ ಶತಮಾನದ ಆದಿಭಾಗದಿಂದ ೪ನೆಯ ಶತಮಾನದ ಕೊನೆಯ ವರೆಗೆ, ಪಲ್ಲವರು ಪ್ರಸಿದ್ಧ ಅರಸರಾಗಿ ದಕ್ಷಿಣದಲ್ಲಿ ರಾಜ್ಯವಾಳಿರುವರು. ಪೊದಲು ಅಮರಾವತಿಯು ಅವರ ರಾಜಧಾನಿಯಾಗಿದ್ದಿತು. ಮುಂದೆ ಕಂಚಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಪಲ್ಲವರೆಂಬ ಪೆಸರಿನಿಂದ ನಾಲ್ಕುಮನೆತನದವರು ರಾಜ್ಯವಾಳಿರುವರು. ಪರಮೇಶ್ವರ ಪುಲಕೇಶಿಯು ಸೋಲಿಸಿದ ಮೊದಲನೆಯ ಮಹೇಂದ್ರವರ್ಮ, ಇದೇ ಪುಲಕೇಶಿಯನ್ನು ಸೋಲಿಸಿ ಚಾಲುಕ್ಯರ ರಾಜಧಾನಿಯಾದ ಬಾದಾಮಿಯನ್ನು ಹಾಳುಮಾಡಿದ ಮೊವಲನೆಯ ನರಸಿಂಹ—ಇವರೆಲ್ಲ ಕಂಚಿಯಲ್ಲಿ ಆಳಿದ ಪಲ್ಲವರ ಮೂರನೆಯ ಮನೆತನದ ಅರಸರು. ಬಾದಾಮಿಯ ಪಶ್ಚಿಮ ಚಾಲುಕ್ಯರಿಗೆ ಚಿರಶತ್ರುಗಳಾಗಿದ್ದ ಈ ಮನೆತನದ ಅರಸರೇ ದಕ್ಷಿಣ ಭರತಖಂಡದಲ್ಲಿ ಮೊತ್ತ ಮೊದಲು ಕಲ್ಲಿನ ಗುಡಿಗಳನ್ನು ಕಟ್ಟಿಸಿದವರೆಂದು ತಿಳಿದುಬಂದಿದೆ. ಈ ಪಲ್ಲವರ ಕಾಲವನ್ನಲ್ಲಿಯೇ ದಕ್ಷಿಣದ ವಾಸ್ತು-ಶಿಲ್ಪಕಲೆಗಳು ಮೂರ್ತಸ್ವರೂಪ ತಳೆದಿವೆಯೆನ್ನಬಹುದು. ಪಲ್ಲವರ ಈ ಕಲೆಗಳ ವ್ಯಾಪ್ತಿ-ದೀಪ್ತಿಗಳನ್ನೇ ಇಲ್ಲಿ ವಿಚಾರಿಸೋಣ.

ಲಲಿತಕಲೆಗಳ ಮೂಲ ಸೌಂದರ್ಯದಲ್ಲಿದೆಯೆಂಬುದು ನಿಜವಿದ್ದರೂ, ಧರ್ಮವು ಈ ಕಲೆಗಳಿಗೆ ಪ್ರಚೋದನೆಯನ್ನಿತ್ತು ಪೋಷಿಸುತ್ತ ಬಂದಿರುವುದನ್ನು ಯಾರೂ ಅಲ್ಲಗಳೆಯಲಾರರು. ನಮ್ಮ ನಾಡಿನೊಳಗಂತೂ ಧರ್ಮ-ಕಲೆಗಳ ನಡುವೆ ಅನ್ಯೋನ್ಯಸಂಬಂಧ ಬೆಳೆದುಬಂದಿದೆ. ಆದುದರಿಂದ ಪಲ್ಲವರ ಶಿಲ್ಪಕ್ಕೆ ಹಿನ್ನೆಲೆಯಾಗಿ ಸ್ಫೂರ್ತಿಯನ್ನಿತ್ತ ಧಾರ್ಮಿಕಶಕ್ತಿಯ ಸ್ವರೂಪವನ್ನು ಅರಿತುಕೊಳ್ಳುವುದು ಅವಶ್ಯವೆನಿಸಿದೆ. ಮೂರನೆಯ ಶತಮಾನದಿಂದ ೪ನೆಯ ಶತಮಾನದ ವರೆಗಿನ ಅವಧಿಯೆಂದರೆ, ಹಿಂದೂ ಧರ್ಮದ ಪುನರುಜ್ಜೀವನದ ಕಾಲ. ಜೈನ-ಬೌದ್ಧ ಧರ್ಮಗಳ ಪ್ರಭಾವವನ್ನು ಕಡಿಮೆಮಾಡಿ ತಲೆಯೆತ್ತಿ ನಿಂತ ಹಿಂದೂಧರ್ಮದಲ್ಲಿ ಭಕ್ತಿಗೆ ಮಹತ್ತ್ವದ ಸ್ಥಾನ ದೊರೆಯಿತು. ಭಕ್ತಿಪಂಥಗಳಾಗಿ ವೈವ-ವೈಷ್ಣವ ಧರ್ಮಗಳು ಜನಸಾಮಾನ್ಯರ ಮನಸ್ಸನ್ನು ಸೆಳೆಯಹತ್ತಿದುವು. ೬೩ ಮಂದಿ ಪುರಾತನರಲ್ಲಿ ಕೆಲವರು, ವೈಷ್ಣವ ಆಳ್ವಾರರಲ್ಲಿ ಹಲವರು—ಈ ಅವಧಿಯಲ್ಲಿಯೇ ಉದಿಸಿ, ಭಕ್ತಿಪಂಥದ ಪ್ರಚಾರ ಕೈಕೊಂಡರು. ಪುರಾತನರಲ್ಲಿಯೂ ಆಳ್ವಾರರಲ್ಲಿಯೂ ಕೊನೆಯವರೆನಿಸಿದ **ಸುಂದರಮೂರ್ತಿ** ಹಾಗೂ **ತಿರುಮಂಗೈ**

ನವರು ಪಲ್ಲವರ ಅಳಿಕೆಯ ಕೊನೆಯ ಶತಮಾನದಲ್ಲಿ ಬಾಳಿದವರು. ಹೀಗೆ ಪಲ್ಲವರ ಕಾಲದಲ್ಲಿ ಭಕ್ತಿ ಪಂಥಗಳು ಜಾಜ್ವಲ್ಯಮಾನವಾಗಿ ಪ್ರಜ್ವಲಿಸಿದುದನ್ನು ಕಾಣಬಹುದು. ಶೈವ-ಧರ್ಮವಂತೂ ಈಗ ನಾಡಿನ ಪ್ರಮುಖ ಧರ್ಮವಾಗಿ ಪರಿಣಮಿಸಿದ್ದಿತು. ವಾಕಾಟಕರಿಗೆ ಸಂಬಂಧಿಕರಾಗಿ ಅವರು ಉತ್ತರದಲ್ಲಿ ಕೈಕೊಂಡ ಶೈವಧರ್ಮ ಪ್ರಚಾರಕಾರ್ಯವನ್ನು, ದಕ್ಷಿಣದಲ್ಲಿ ತಾವು ನೆರವೇರಿಸುತ್ತಿರುವಂತೆ ಪಲ್ಲವರು ಶೈವಧರ್ಮಕ್ಕೆ ನೆರವನ್ನಿತ್ತಿರುವರು. ಇದರಿಂದ ಅವರು ವೈಷ್ಣವಧರ್ಮವನ್ನು ಕಡೆಗಣಿಸಿದರೆಂದು ಊಹಿಸಲಾಗದು. ಭಕ್ತಿ ಪಂಥಗಳೆನಿಸಿದ ಶೈವ-ವೈಷ್ಣವ ಧರ್ಮಗಳೆರಡೂ ಶಂಕರ, ಕುಮಾರಿಲಭಟ್ಟ, ರಾಮಾನುಜರು ಉದಿಸುವ ಮೊದಲೇ ಬೆಳೆದುಬಂದಿದ್ದುವು. ಹೀಗೆ ಪಲ್ಲವರ ಯುಗವು ಭಕ್ತಿಪಂಥಗಳ ಅಭ್ಯುದಯದ ಯುಗವಾಗಿದೆ. ಭಕ್ತಿಯಿಂದ ಆ ಕಾಲದ ಜನರು ನಾ ಮುಂದೆ ನೀ ಮುಂದೆ ಎಂದು ಆರಾಧ್ಯ ದೇವತೆಗಳ ಮಂದಿರಗಳನ್ನು ಕಟ್ಟಿಸಿದರು. ಆ ಕಾಲವ ಶಿಲ್ಪಿಗಳು ಸತ್ಯ-ಸೌಂದರ್ಯಗಳ ಆರಾಧಕರಾಗಿ, ಅಂತಸ್ಫೂರ್ತಿಯಿಂದ ಗುಡಿಗಳನ್ನು ಕಟ್ಟಿದರು; ವಿಗ್ರಹಗಳನ್ನು ನಿರ್ಮಿಸಿದರು. ಪಲ್ಲವ ಅರಸರೂ ಈ ದಿಶೆಯಲ್ಲಿ ಭಕ್ತಿಪುರಸ್ಸರವಾಗಿ ಕೆಲಸಮಾಡಿರುವರು. ಜಾಜ್ವಲ್ಯಮಾನವಾಗಿ ಹೊಳೆಯುತ್ತಿರುವ ಈ ಶೈವ ವೈಷ್ಣವ ಪಂಥಗಳ ಭಕ್ತಿಯೇ ಪಲ್ಲವರ ವಾಸ್ತು ಶಿಲ್ಪಗಳಿಗೆ ಸ್ಫೂರ್ತಿಯನ್ನು ನೀಡಿದೆ.

ಪಲ್ಲವರ ಕಾಲದ ವಾಸ್ತು ಮತ್ತು ಶಿಲ್ಪಕಲೆಗಳ ಅತ್ಯಂತ ಪುರಾತನ ಅವಶೇಷಗಳು ಇನ್ನೂ ವಿಶೇಷವಾಗಿ ಬೆಳಕಿಗೆ ಬಂದಂತಿಲ್ಲ. **ಕಂಚಿ, ನಾಮಲ್ಲಿಪುರಮ್, ಅಮರಾವತಿ, ಬದಾಮಿ** ಮೊದಲಾದ ಅನೇಕ ಸ್ಥಳಗಳಲ್ಲಿ ದೊರೆಯುವ ಪಲ್ಲವರ ಶಿಲ್ಪಕಲಾಕೃತಿಗಳು, ಅವರ ಅಳಿಕೆಯ ಉತ್ತರಾರ್ಧಕ್ಕೆ ಸಂಬಂಧಪಟ್ಟುವು. ಗೋದಾವರಿ ಹಾಗೂ ಕೃಷ್ಣಾ ನದಿಗಳ ಪೂರ್ವದಂಡೆಯ ಮೇಲೆ ಪಲ್ಲವರ ಶಿಲ್ಪಕಲೆಯ ಉತ್ತಮೋತ್ತಮ ಅವಶೇಷಗಳು ದೊರೆತಿವೆ. ಇವುಗಳಲ್ಲಿ ಉದಾಹರಣೆಗೆಂದು ಕೆಲವನ್ನು ತೆಗೆದುಕೊಂಡು, ಅವುಗಳ ವಿವರವನ್ನು ನೋಡೋಣ.

ಪಲ್ಲವರು ಉತ್ತರ ಹಿಂದುಸ್ತಾನದಿಂದ ಆರ್ಯಸಂಸ್ಕೃತಿಯ ಪುರಸ್ಕರ್ತರಾಗಿ ದಕ್ಷಿಣಕ್ಕೆ ಬಂದಂತೆ ಶ್ರೀ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಶ್ರೀ. ಭಾವರಾಜು ವೆಂಕಟ ಕೃಷ್ಣರಾಜು, ಶ್ರೀ. ಕೆ. ಪಿ. ಜಯಸ್ವಾಲ ಮೊದಲಾದ ಇತಿಹಾಸಜ್ಞರು ಅಭಿಪ್ರಾಯಪಡುತ್ತಾರೆ. ಅವರ ರಾಜಧಾನಿಯಾದ ಕಂಚಿಯು ದಕ್ಷಿಣೋತ್ತರ ಭರತಖಂಡದ ಸಂಸ್ಕೃತಿಯ ಕೇಂದ್ರವಾಗಿ ಪರಿಣಮಿಸಿತು. ಕಂಚಿಯು ದಕ್ಷಿಣದ ವಾರಣಾಸಿಯಾಯಿತು. ಅರಸರೂ ಭಕ್ತರೂ ಅಲ್ಲಿ ಶತಮಾನಗಳವರೆಗೆ ಅನೇಕ ಗುಡಿಗಳನ್ನು ಕಟ್ಟಿಸಿದರು. ಕಂಚಿಯೊಂದರಲ್ಲಿಯೇ ನಿಂತು ಪಲ್ಲವರ ವಾಸ್ತುಶಿಲ್ಪಗಳನ್ನು ಪೂರ್ತಿಯಾಗಿ ಅಭ್ಯಸಿಸಲು ಸಾಕಾಗುವಷ್ಟು ದೇವಾಲಯಗಳು ಅಲ್ಲಿವೆ. **ಶ್ರೀಪುರಾಂತಕೇಶ್ವರ, ಐರಾವತೇಶ್ವರ, ರಾಜಸಿಂಹೇಶ್ವರ, ಮುಕ್ತೇಶ್ವರ, ಕೈಲಾಸನಾಥ, ವೈಕುಂಠನಾಥ** ಮೊದಲಾದ ಕೆಲವು ಪ್ರಸಿದ್ಧ ಗುಡಿಗಳನ್ನು ಇಲ್ಲಿ ಹೆಸರಿಸಬಹುದು. ಒಂದು ಒಂದೂವರೆ ಸಾವಿರ ವರ್ಷಗಳ ಅವಧಿಯಲ್ಲಿ, ಬೇರೆ ಬೇರೆ ಕಾಲದ ಶಿಲ್ಪಿಗಳು ಇವುಗಳಲ್ಲಿ ಕೆಲವು ಗುಡಿಗಳನ್ನು ಮಾರ್ಪಡಿಸುತ್ತ ಬಂದಂತೆ ಕಂಡುಬರುತ್ತದೆ. ಆದುದರಿಂದ ಇವುಗಳ ಅತ್ಯಂತ ಪ್ರಾಚೀನ ಸ್ವರೂಪವನ್ನು ಕಂಡು ಹಿಡಿಯುವುದು ಕಷ್ಟಸಾಧ್ಯವಾಗಿದೆ. ಆದರೂ ಈ ಗುಡಿಗಳನ್ನೇ ಪಲ್ಲವರ ವಾಸ್ತುವಿನ ಉತ್ತಮ ನಿದರ್ಶನಗಳೆಂದು ಇಟ್ಟುಕೊಳ್ಳಲು ಯಾವ ಅಭ್ಯಂತರವೂ ಇಲ್ಲ. ಶ್ರೀಪುರಾಂತಕೇಶ್ವರ, ಐರಾವತೇಶ್ವರ ಗುಡಿಗಳು, ಪಲ್ಲವರ ಶಿಲ್ಪಕಲೆಯ ಶೈಶವ ಮಾದರಿಗಳೆಂದು ಪ್ರಾಚೀನ ಹಿಂದುಸ್ತಾನದ ಇತಿಹಾಸ ಬರೆದ ಶ್ರೀ. ಬ್ಯಾನರ್ಜಿಯವರು ಅಭಿಪ್ರಾಯಪಡುತ್ತಾರೆ. ಮ್ಯಾಮಲ್ಲಿಪುರ ಅಥವಾ ಮಹಾಬಲಿಪುರವೆಂಬ ಇನ್ನೊಂದು ಸ್ಥಳವು ಪಲ್ಲವರ ವಾಸ್ತು-ಶಿಲ್ಪಗಳ ಇತಿಹಾಸ ದೃಷ್ಟಿಯಿಂದ ಬಹು ಮಹತ್ವವಾದ್ದಾಗಿದೆ.

೩೦-೩೨ ವರ್ಷಗಳಿಂದಲೂ ಸಾವಿರಾರು ಜನರನ್ನು ರೋಗಮುಕ್ತರಾಗಿಸಿ ಅನುಭವಪಡೆದುಕೊಂಡ

ಶಕ್ತಿವರ್ಧಕ ಧಾತುಪೌಷ್ಟಿಕಘಾತ

ಕಾರಣಾಂತರ ಮುಖತ್ರದೊಂದಿಗೆ—ಸ್ವಪ್ನಸ್ಖಲನ—ವೀರ್ಯಸ್ಖಲನವಾಗುವುದು, ಸ್ವರತಿಯ ದುರಭ್ಯಾಸದಿಂದ ಉಂಟಾದ ಅಶಕ್ತತೆ, ನಪುಂಸಕತ್ವ, ಇಂದ್ರಿಯಶೈಥಿಲ್ಯ ಇವುಗಳನ್ನೆಲ್ಲ ಹೊಡೆದೋಡಿಸಿ, ವೀರ್ಯವನ್ನು ಶಕ್ತಿಯುಕ್ತವಾಗಿಸುವುದು. ಮಲಕಟ್ಟಿಯಾಗಿ ತುಂಬ ಹಸಿವೆಯಾಗುವುದು. ತರುಣರು ಇದರ ಪ್ರಯೋಜನ ಪಡೆಯುವುದಿಷ್ಟೆ ಅಲ್ಲ; ೬೦-೭೦ ವಯಸ್ಸಿನ ಪಡುಪುಳರೂ ಇದರ ಸೇವನೆಯಿಂದ ನವತಾರುಣ್ಯದ ಉತ್ಸಾಹ ಹೊಂದುವುದರಲ್ಲಿ ಸಂದೇಹವಿಲ್ಲ ಹೆಣ್ಣು ಮಕ್ಕಳ ರೆಕ್ಟಿಪ್ರದರ, ಶ್ವೇತಪ್ರದರ, ಬಂಜೆತನ ಅಥವಾ ಅದ ಮಕ್ಕಳು ಕೂಡಲೆ ಸಾಯುವುದು, ಮೊದಲಾದುವುಗಳ ಮೇಲೆ ಇದು ರಾಮಬಾಣವೇ ಆಗಿದೆ. ಇದರಲ್ಲಿ ಹಲವು ನಿಧಿಮೂಲಿಕೆ, ಭಸ್ಮ, ಸುವರ್ಣಮಾಲಿನೀವಸಂತ ಮೊದಲಾದ ಬೆಲೆಯುಳ್ಳ ಔಷಧಿಗಳನ್ನು ಕೂಡಿಸಲಾಗಿದೆ.

೧ ಡಬ್ಬಿಯ ಬೆಲೆ ೧೫ ರೂ. ೭ ದಿನಗಳಲ್ಲಿ ಗುಣ. ಸಂಪೂರ್ಣ ಬೆಲೆ ೬ ರೂ. ೧೫ ದಿನಗಳಲ್ಲಿ ಗುಣ. ಶ್ರೀಮಂತ ಸಿಟ್ಟು-ಸಾಧುಸಾಧಕರ ಸಲುವಾಗಿ ಸ್ಪೆಷಲ್ ಡಬ್ಬಿಗೆ ೧೬ ರೂ. ಕೂಡಲೇ ಗುಣ. ಇದರಲ್ಲಿ ಅನೇಕ ಬೆಲೆಯುಳ್ಳ, ಶಕ್ತಿವರ್ಧಕ ಔಷಧಗಳು ಕೂಡಿವೆ.

ಆರ್ಡರ್ ಜೊತೆಗೆ ಪ್ರತಿಯೊಂದು ಡಬ್ಬಿಗೆ ೧ ರೂ. ಯಂತೆ ಅಡ್ವಾನ್ಸು ಕಳುಹಿಸಬೇಕು. ಅದನ್ನು ಪಡಾವಣಿ ಉಳಿತ ಹಣಕ್ಕೆ ವಿ. ಪಿ. ಪತ್ರಾಯತ್ತವೆ. ಪತ್ರವೇನೂ ಇಲ್ಲ. ೧ಡಬ್ಬಿ ೨೮ ದಿನಕ್ಕೆ ಸಾಲುತ್ತದೆ. ೨ ಡಬ್ಬಿ ತೆಗೆದುಕೊಳ್ಳುವವರಿಗೆ ಅಂಚೆಯ ವೆಚ್ಚ ಇಲ್ಲ. ೪ ಡಬ್ಬಿ ಕೊಳ್ಳುವವರಿಗೆ ೧ ಡಬ್ಬಿ ಬಕ್ಷೀಸು. ಗುಣವಂತಿಗೆ ಅನೇಕ ಸರ್ಟಿಫಿಕೇಟುಗಳು ಬಂದಿವೆ.

ವಿಳಾಸ:— **ಮ್ಯಾ. ಡಿ. ಎಸ್. ಆ್ಯಂಡ್ ಕೊ. ಔಷಧಾಲಯ**

ಮು. ಪೋ. **ಮಿರಜ** (ಎಸ್. ಎಂ. ಸಿ.)

ಮಲೇರಿಯಾ
ಇನ್ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಮಾಮಲ್ಲಿಪುರವು ಪೂರ್ವಕರಾವಳಿಯ ಮೇಲೆ ಮದ್ರಾಸದಿಂದ ದಕ್ಷಿಣಕ್ಕೆ ೫೦ ಮೈಲುಗಳು ಅಂತರದಲ್ಲಿದೆ. ಇದು ಪಲ್ಲವರ ಹಡಗುಪಡೆಯ ನಿರ್ಮಾಣನಾಗಿದ್ದಿತು. ಈ ಸ್ಥಳದಲ್ಲಿ ಪಲ್ಲವರ ವಾಸ್ತುಶಿಲ್ಪದ ಮಹತ್ತ್ವದ ಕಲಾಕೃತಿಗಳನ್ನು ಕಾಣಬಹುದು. ಇಲ್ಲಿ ಸಮುದ್ರದ ದಂಡೆಯ ಮೇಲೆ ನಿಂತ ಗುಡಿಗಳೆರಡು ಕಂಚಿಯ ಸುಪ್ರಸಿದ್ಧ ರಾಜಸಿಂಹೇಶ್ವರ, ಮುಕ್ತೇಶ್ವರ ಗುಡಿಗಳನ್ನು ಹೋಲುತ್ತವೆ. ಒಂಟಗಲ್ಲಿನಲ್ಲಿ ಕೆತ್ತಿದ ಗುಡಿಗಳು ಹಾಗೂ ಗುಡ್ಡಗಳಲ್ಲಿ ಕೊರೆದ ಗುಡಿಗಳು ಎಂದು ಮಾಮಲ್ಲಿಪುರದ ಗುಡಿಗಳನ್ನು ಎರಡು ಗುಂಪುಗಳಾಗಿ ವಿಭಾಗಿಸಬಹುದು. ಬಹು ಸರಳವಾದ ರೀತಿಯಲ್ಲಿ ಕೆತ್ತಿದ ದ್ರೌಪದೀರಥವು, ಒಂಟಗಲ್ಲಿನಲ್ಲಿ ಕೆತ್ತಿದ ಕೃತಿಗಳಲ್ಲೆಲ್ಲ ಹಳೆಯದು. ಇದನ್ನು ಸಣ್ಣ ಬಂಡೆಯಲ್ಲಿ ಕೆತ್ತಲಾಗಿದೆ. ಈ ರಥಕ್ಕೆ ಗುಡಿಸಿಲಿನ ಚಪ್ಪರಾಕಾರದ ಮಾಳಿಗೆಯಿದೆ. ಈ ಸರಳ ಮಾದರಿಯ ಮುಂದಿನ ಮೆಟ್ಟಿಲೆಂದರೆ ಗೋಪುರಾಕಾರದ ಮಾಳಿಗೆಯ ಅರ್ಜುನ ರಥ. ಅಲ್ಲಿಯೇ ಇರುವ ಭೀಮ, ಧರ್ಮರಾಜ ರಥಗಳನ್ನು ಹೆಚ್ಚು ಮಹತ್ತ್ವಾಕಾಂಕ್ಷೆಯಿಂದ ಕೆತ್ತಿದಂತಿವೆ. ದ್ರಾವಿಡ ಪದ್ಧತಿಯ ವೈಶಿಷ್ಟ್ಯವೆನಿಸಿದ ಗೋಪುರದ ಉಗಮವನ್ನು ನಾವಿಲ್ಲಿ ಕಾಣುತ್ತೇವೆ. ತಂಜಾವರ, ಮಧುರಾ, ಶ್ರೀರಂಗಮ್ ಮೊದಲಾದ ಸ್ಥಳಗಳಲ್ಲಿ ಕಂಡುಬರುವ ದೇವಾಲಯಗಳ ಗೋಪುರಗಳ ಉಗಮ ಇಲ್ಲಿಯಿಂದಲೆ ಬಹುದು. ಮಾಮಲ್ಲಿಪುರದ ಗುಡ್ಡಗಳಲ್ಲಿ ಕೊರೆದ ಗವಿಗಳು ಚಿತ್ತಾಕರ್ಷಕವಾಗಿವೆ. ಬಾದಾಮಿಯ ಮೊದಲನೆಯ ಗವಿಯು ಮಾಮಲ್ಲಿಪುರದ ಗವಿಗಳನ್ನೇ ಹೋಲುತ್ತದೆ. ಇದನ್ನು ಪಲ್ಲವರೇ ಕೊರೆಯಿಸಿದರೆಂದು ಡಾ. ನಂದೀಮಠರವರು ಅಭಿಪ್ರಾಯ ಪಡುತ್ತಾರೆ. ಈ ಗವಿಗಳ ಗೋಡೆಗಳನ್ನೆಲ್ಲ ಮನುಷ್ಯರ ಹಾಗೂ ಪ್ರಾಣಿಗಳ ವಿಗ್ರಹಗಳಿಂದ ಮುಚ್ಚಿಬಿಟ್ಟಿರುವರು. ಈ ವಿಗ್ರಹಗಳು ನಿತ್ಯಜೀವನದಿಂದ ಎತ್ತಿ ಇಟ್ಟಿರುವಷ್ಟು ವಾಸ್ತವಿಕವಾಗಿವೆ; ಜೀವಕಳೆಯಿಂದ ಕೂಡಿಯುತ್ತವೆ. ಬಾದಾಮಿಯ ಮೊದಲನೆಯ ಗವಿಯಲ್ಲಿ ಕೆತ್ತಿದ ನಟರಾಜ, ಹರಿಹರೇಶ್ವರ, ನಾಗ-ನಾಗಿಣಿಯರು ಇವೇ ಮುಂತಾದ ಮೂರ್ತಿಗಳಲ್ಲಿ ಕಾಣುವ ಶಿಲ್ಪಕಲಾಕೌಶಲ್ಯವನ್ನು, ಶಿಲ್ಪಶಾಸ್ತ್ರಜ್ಞರು ಮನವಾರೆ ಹೊಗಳಿರುವರು. ಚಾಲುಕ್ಯರು ಕೆತ್ತಿಸಿದ ಮುಂದಿನ ಮಹತ್ತ್ವದ ವೈಷ್ಣವ ಗವಿಗೆ ಈ ಗವಿಯೇ ಸ್ಫೂರ್ತಿಯನ್ನಿತ್ತು ಮಾದರಿಯಾಗಿ ನಿಂತಿದೆ. ಅಲ್ಲಿಯ ಶಿಲ್ಪಕಲೆಯ ಮೊದಲ ಹೆಜ್ಜೆಗಳನ್ನು ಇಲ್ಲಿ ಕಾಣುತ್ತೇವೆ. ಚಾಲುಕ್ಯರ ಶಿಲ್ಪಕಲಾಮಂದಿರವು ಪಲ್ಲವರಿಟ್ಟ ತಳಹದಿಯ ಮೇಲೆ ನಿಂತಿದೆಯೆಂದು ಹೇಳಲು ಯಾವ ಆಭ್ಯಂತರವೂ ಇಲ್ಲ.

ಕಲಾದೃಷ್ಟಿಯಿಂದ ಪಲ್ಲವರ ಕಾಲದ ಶಿಲ್ಪ ಒಳ್ಳೇ ಪರಿಪೂರ್ಣಸ್ಥಿತಿಯನ್ನು ಮುಟ್ಟಿದೆಯೆಂದು ಹೇಳಲು ಬರುವಂತಿಲ್ಲ. ಕಲೆಯು ಆ ಕುಸುರು ಮುಂದೆ ಚಾಲುಕ್ಯ, ಹೊಯ್ಸಳರ ಕಾಲದಲ್ಲಿ ಬರಲಿದೆ. ಪಲ್ಲವರ ವಾಸ್ತು ಶಿಲ್ಪಗಳಿಗೆ ಐತಿಹಾಸಿಕ ಮಹತ್ತ್ವವಿದೆ. ಪಲ್ಲವರ ಶಿಲ್ಪಕೃತಿಗಳೇ ದಕ್ಷಿಣ ಭರತಖಂಡದ ಶಿಲ್ಪಕಲೆಯ ಅತ್ಯಂತ ಪ್ರಾಚೀನ ಅವಶೇಷಗಳೆಂದು ಶಿಲ್ಪಶಾಸ್ತ್ರಜ್ಞರ ಅಭಿಪ್ರಾಯವಿದೆ. ಪಲ್ಲವರು ಉತ್ತರದಿಂದ ಬಂದಿರಬಹುದಾದುದರಿಂದ, ದಕ್ಷಿಣೋತ್ತರ ಶಿಲ್ಪ ಮಾರ್ಗಗಳು ಅವರ ಕಾಲದ ಶಿಲ್ಪದಲ್ಲಿ ಬೆರೆತಿರುವುದನ್ನು ಕಾಣುತ್ತೇವೆ. ಅಮರಾವತಿಯ ಗುಡಿಗಳಲ್ಲಿ ಉತ್ತರದ ಪ್ರಭಾವವು ಒಡೆದು ಕಾಣುತ್ತಿರುವುದು ಈ ಮಾತಿಗೆ ನಿದರ್ಶನವಾಗಿದೆ. ಮಧುರಾಪದ್ಧತಿಯ ಪಳಗಿದ ಶಿಲ್ಪಿಗಳು ಪಲ್ಲವರ ಆಶ್ರಯಕ್ಕಾಗಿ ದಕ್ಷಿಣಕ್ಕೆ ಬಂದು ಅಮರಾವತಿಯ ಶಿಲ್ಪಿಗಳೊಡನೆ ಕೆಲಸ ಮಾಡಹೆತ್ತಿದುದರಿಂದ, ಇವೆರಡೂ ಪದ್ಧತಿಗಳು ಬೆರೆತು ಹೊಸಪೊಂಸು ಶಿಲ್ಪಪದ್ಧತಿಯು ಪ್ರಾರಂಭವಾಗಲು ಅನುವಾಯಿತು. ಮುಂಪೆ ಕದಂಬ, ಗಂಗ, ಚಲುಕ್ಯ, ಚೋಳ ಅರಸರ ಕಾಲದಲ್ಲಿ ಪಲ್ಲವರ ಶಿಲ್ಪವೇ ಬೆಳೆವಣಿಗೆ ಹೊಂದಿ ದ್ರಾವಿಡ-ಚಾಲುಕ್ಯ ಪದ್ಧತಿಗಳಾಗಿ ಪರಿಣಮಿಸಿದೆ. ಮಾಮಲ್ಲಿಪುರಮ್, ಕಂಚಿ ಮೊದಲಾದ ಸ್ಥಳಗಳಲ್ಲಿ ದಕ್ಷಿಣದ ಚಾಲುಕ್ಯ-ದ್ರಾವಿಡ ಪದ್ಧತಿಗಳ ಪೂರ್ವರೇಷೆಯನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ವಿಚಾರಿಸಿದಾಗ ಪಲ್ಲವರ ಶಿಲ್ಪ ಎಷ್ಟು ಮಹತ್ತ್ವದ್ದಾಗಿದೆಯೆಂಬುದು ಸ್ಪಷ್ಟವಾಗುವುದು.

ಪಲ್ಲವರ ವಾಸ್ತು, ಶಿಲ್ಪಗಳಿಗೆ ಇನ್ನೂ ಒಂದೆರಡು ದೃಷ್ಟಿಯಿಂದ

ಸೂಚಿ ಶಿಲ್ಪಕಲೆ
(ಸಚಿತ್ರ)

ಪ್ರಿನ್ಸಿಪಾಲ್ ಹಳಪೇಟ ಚಿಂತಾಮಣರಾಯರು ಬರೆದ ಹೊಲಿಗೆಯ ಕಲೆಯ ಸಮಗ್ರ ವಿಷಯ ಸಂಗ್ರಹವುಳ್ಳ ಪುಸ್ತಕ. ಮುಂಬೈ ಸರಕಾರದಿಂದ ಶಾಲೆ ಕಾಲೇಜುಗಳಿಗೆ ಪಠ್ಯಪುಸ್ತಕವೆಂದು ಮಂಜೂರಾಗಿದೆ. ಕೆಲವೇ ಪ್ರತಿಗಳು ಉಳಿದಿರುವದರಿಂದ ಇಂದೇ ತರಿಸಿಕೊಳ್ಳಿರಿ. ಬೆಲೆ ೨-೮-೦ ಅಂಚೆಯ ವೆಚ್ಚ ೦-೬-೦. ವ್ಹಿ. ಪಿ. ಯಿಂದ ಕಳಿಸಲಾಗುವದಿಲ್ಲ.

ಪ್ರತಿಗಳು ಸಿಗುವ ಸ್ಥಳ—

ಕರ್ನಾಟಕ ಹೊಲಿಗೆಯ ವಿದ್ಯಾಲಯ

ಗಾಂಧೀ ಚೌಕು, ಧಾರವಾಡ.

ಬಹಳ ಪ್ರಾಶಸ್ತ್ಯದೊರೆತಿದೆ, ಈ ಶಿಲ್ಪದಲ್ಲಿ ಗ್ರೀಸ, ಈಜಿಪ್ತ ಮೊದಲಾದ ದೇಶಗಳ ಶಿಲ್ಪದ ಹಲವು ಉತ್ತಮ ಲಕ್ಷಣಗಳು ಕಂಡು ಬರುತ್ತವೆ. 'These seventh century temples rival the more famous temples of Grace in their noble design and craftsmanship' ಎಂದರೆ 'ಏಳನೆಯ ಶತಮಾನದ ಈ ಗುಡಿಗಳು ಕಲೆಯ ಕುಸುರಿನಲ್ಲಿ ಗ್ರೀಸ್ ದೇಶದ ಪ್ರಸಿದ್ಧ ಗುಡಿಗಳೊಡನೆ ಸ್ಪರ್ಧಿಸುತ್ತವೆ' ಎಂದು ಶ್ರೀ. ಹ್ಯಾವೆಲ್ಲರವರು ಅಭಿಪ್ರಾಯ ಪಡುತ್ತಾರೆ. 'ಬೆಟ್ಟಗಳಲ್ಲಿ ಗವಿಗಳನ್ನು ಕೊರೆಯುವ ಪದ್ಧತಿ ನೊದಲು ಈಜಿಪ್ತ, ಪರ್ಸಿಯಾ ದೇಶಗಳಲ್ಲಿ ಪ್ರಾರಂಭವಾಯಿತೆಂದೂ, ಅಶೋಕ ಚಕ್ರವರ್ತಿಯು ಗಯೆಯ ಬಳಿಯ ಗವಿಗಳನ್ನು ಕೊರೆಯಿಸುವಾಗ ಈ ವಿಚಾರವನ್ನು ಎತ್ತಿಕೊಂಡನೆಂದೂ ಶ್ರೀ. ಬ್ಯಾನರ್ಜಿಯವರು ಹೇಳುತ್ತಾರೆ. ಗವಿಗಳನ್ನು ಕೊರೆಯುವಾಗ ಪಲ್ಲವಶಿಲ್ಪಿಗಳು ಈ ಮಾರ್ಗವನ್ನೇ ಅನುಸರಿಸುವುದನ್ನು ಕಾಣುತ್ತೇವೆ. ಹೀಗೆ ಜಗತ್ತಿನ ಹಲವು ಸುಪ್ರಸಿದ್ಧ ಶಿಲ್ಪಪದ್ಧತಿಗಳ ಕೆಲವು ಲಕ್ಷಣಗಳು ಪಲ್ಲವರ ಶಿಲ್ಪದಲ್ಲಿ ಕಂಡುಬರುತ್ತಿವೆಯೆಂಬುದು ಗಮನಾರ್ಹವಾಗಿದೆ. ಪಲ್ಲವರ ವಾಸ್ತು-ಶಿಲ್ಪಗಳೇ ಜಾವಾದ ಶಿಲ್ಪಪದ್ಧತಿಗೆ ಮಾತೃಕೆಯಾಗಿ ನಿಂತಿರುವುದೊಂದು ಹೆಮ್ಮೆಯ ಮಾತಾಗಿದೆ. ಪಲ್ಲವರ ಶಿಲ್ಪದಲ್ಲಿ ಆರ್ಯ-ದ್ರಾವಿಡ ಪದ್ಧತಿಗಳ ಪ್ರಾಚೀನ ರೂಪರೇಷೆಗಳನ್ನೂ ಅವುಗಳ ಸರಸ ಸಮ್ಮಿಲನವನ್ನೂ ಕಾಣುವುದೊಂದು ಆ ಶಿಲ್ಪದ ವೈಶಿಷ್ಟ್ಯವಾಗಿದೆ.

ಕಲೆಯು ಜನಾಂಗದ ಆಶೆ, ಆಕಾಂಕ್ಷೆ, ಆದರ್ಶಗಳ ಮೂರ್ತಸ್ವರೂಪವೆಂದು ಹೇಳುವರು. ಪಲ್ಲವರ ಶಿಲ್ಪವನ್ನು ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸಿದರೆ, ಆ ಕಾಲದ ಜನತೆಯ ಆದರ್ಶಗಳು ಸ್ಪಷ್ಟವಾಗಿ ಕಂಡು ಬರುತ್ತವೆ. ದೊಡ್ಡ ದೊಡ್ಡ ಬೆಟ್ಟಗಳಲ್ಲಿ ಭವ್ಯವಾದ ಸುಂದರವಾದ ಗವಿಗಳನ್ನು ಕೊರೆದಿರುವ ಆ ಕಾಲದ ಜನರ ತಾಳ್ಮೆಯನ್ನು ಬಣ್ಣಿಸಲು ಶಬ್ದ ಸಾಲದಾಗಿದೆ. ಇಂದಿನ ವಿಜ್ಞಾನಿಗಳು ಸಹ ಬೆರಳು ಕಚ್ಚುವಂತಹ ಅದ್ಭುತ ಕಾರ್ಯಗಳನ್ನು ಅಂದಿನ ಅವರ ತಾಳ್ಮೆ ಗೆಯ್ದಿರುವುದನ್ನು ಗಮನಿಸಬೇಕು. ಸಣ್ಣ ಸಣ್ಣ ಗುಡಿಗಳನ್ನು ಕಟ್ಟಿ ತೃಪ್ತಿ ಹೊಂದದೆ ಆ ಜನರು, ದೊಡ್ಡ ದೊಡ್ಡ ಗವಿಗಳನ್ನು ಕೊರೆದಿರುವುದನ್ನು ನೋಡಿದರೆ, ಅವರ ಜೀವನದ ಆದರ್ಶವೇ ಬೆಟ್ಟದಷ್ಟು ದೊಡ್ಡದಾಗಿರಬಹುದೆಂದು ಊಹಿಸಲು ಬರುವಂತಿದೆ. ಭವ್ಯತೆಯಲ್ಲಿ ಬಿಡಗನ್ನು ಕಾಣುವ ಕಣ್ಣು ಆ ಕಾಲದ ಶಿಲ್ಪಿಗಳಿಗಿದ್ದಿತು. ಇದಕ್ಕೆಲ್ಲ ಕಾರಣವಾಗಿ ನಿಂತ ಆ ಕಾಲದ ಜನತೆಯ ಉತ್ಕಟ ಭಕ್ತಿಯ ವಿಷಯವನ್ನು ಹಿಂದೆ ವಿವೇಚಿಸಲಾಗಿದೆ.

ಹೀಗೆ ಪಲ್ಲವರ ಕಾಲದ ವಾಸ್ತು-ಶಿಲ್ಪಗಳು ತನ್ಮೂವೇ ಆದ ವೈಶಿಷ್ಟ್ಯಗಳಿಂದ ಕೂಡಿಕೊಂಡಿವೆ. ಪಲ್ಲವರು ಉತ್ತರದಿಂದ ಬಂದು ದಕ್ಷಿಣದ ಎಲ್ಲ ಅರಸರೊಡನೆ ಒಂದೇ ಸವನೆ ಹೋರಾಟ ನಡಿಸಿದ್ದರೂ, ದಕ್ಷಿಣ ಭರತಖಂಡಕ್ಕೆ ಅಚ್ಚಳಿಯದ ಕಾಣಿಕೆಯನ್ನು ಸಲ್ಲಿಸಿರುವರು. ಸಾಂಸ್ಕೃತಿಕ ದೃಷ್ಟಿಯಿಂದ ಉತ್ತರದಲ್ಲಿ ಗುಪ್ತರು, ವಾಕಾಟಕರು ಮಾಡಿದ ಕಾರ್ಯವನ್ನೇ ದಕ್ಷಿಣದಲ್ಲಿ ಪಲ್ಲವರು ಚಾಲುಕ್ಯರು ನೆರವೇರಿಸಿರುವರೆಂದು ಹೇಳಬಹುದು. ಇಷ್ಟು ಪ್ರಾಶಸ್ತ್ಯವನ್ನು ಪಡೆದ ಪಲ್ಲವರ ವಾಸ್ತುಶಿಲ್ಪಗಳನ್ನು ಎಲ್ಲರೂ ಅವಲೋಕಿಸಬೇಕು. 'ನಗರೀಷು ಕಾಂಚೀ' ಎಂದು ಕಂಚಿ ಪಟ್ಟಣವು ಪ್ರಸಿದ್ಧಿಯನ್ನು ಪಡೆದಿದೆ. ಒಮ್ಮೆ ಹೋಗಿ ಕಂಚಿಯ ಕಾವಾಪ್ತಿಯ ದರ್ಶನ ತೆಗೆದುಕೊಂಡು ಬರಬೇಕು.

ಪೇಲ್ಟರಗತಿಯ ಗಡಿಯಾರಗಳು!

ಸ್ವಿಸ್ ತಯಾರಿಕೆಯ, ಸರಿಯಾದ ವೇಳೆ ತೋರಿಸುವ ಹೊಸ ಮಾದರಿಯ ಕೈಗಡಿಯಾರಗಳು. ನಾಲ್ಕು ವರ್ಷ ಗ್ಯಾರಂಟಿ. ಪಂಚು ಬಳೆವಾ ಚೌಸು ಆಕಾರದ ಕ್ರೋಮಿಯಮ್ ಕೇಸುಳ್ಳದ್ದು ರೂ. ೧೧-೪-೦. ಪೇಲ್ಟರಗತಿಯದು ರೂ. ೧೨-೮-೦ ಅತ್ಯುತ್ತಮ ರೂ. ೧೪-೪-೦. ಸೆಂಟರ್ ಸೆಕಂಡ್ ರೂ. ೧೮-೮-೦. ಕ್ರೋಮಿಯಮ್ ಕೇಸ್, ನಾಲ್ಕು ವಜ್ರಗಳು ೧೯ ರೂ. ೧೪ ವಜ್ರದ ಚರ್ಪಟಿ ಅಳವಡಿದ್ದು ರೂ. ೨೮. ಚೌಕಾಕೃತಿ ಕ್ರೋ. ರೂ. ೨೨. ಅತ್ಯುತ್ತಮ ರೂ. ೨೮. ೧೪ ವಜ್ರದ್ದು ರೂ. ೨೮. ರೋಲ್ಡ್ ಗೋಲ್ಡ್, ೧೦ ವರ್ಷ ಗ್ಯಾರಂಟಿ ರೂ. ೪೭. ಅತ್ಯುತ್ತಮ ರೂ. ೧೧. ಪೋಸ್ಟೇಜ್ ಬೇರೆ. ಎರಡರಷ್ಟಂತ ಹೆಚ್ಚು ತರಿಸುವವರಿಗೆ ಫೌಂಟನ್ ಪೆನ್ ಹಾಗು ಪೋ. ಖರ್ಚು ನಾವು ಕೊಡುವೆವು. ಟೈಮ್ ಪೀಸ್ ರೂ. ೧೫. ಉತ್ತಮ ರೂ. ೧೪.

CALCUTTA WATCH CO. (Sec. 1605)
Post Box No. 12203, -- CALCUTTA.

ಕನ್ನಡ ಒಗಟುಗಳು

ಶ್ರೀಮತಿ ಶಾಮಲಾ ಬೆಟಗೇರಿ

(ಉರುಟಣೆಯ ಪ್ರಾರಂಭದಲ್ಲಿ ನಿಂತು ಹೇಳಲು)

★

ಮನೆತನದಿ ಒಬ್ಬರೊಬ್ಬರ ಮನವ ನೋಯಿಸುತ
ಬಾಳುವುದು ಕಾಡುಬೀಳಿನ ಬದುಕು ನೋಡಿ,
ಆದಕೆಂದೆ ನಾವೀಗ * * * ರಾಯರೇ
ಬಾಳೋಣ ಮನೆಯ ನಂದನದಂತೆ ಮಾಡಿ ! ॥೧೩॥

ಪಡೆದವರು ಪ್ರೀತಿಯಲಿ ಸಲಹಿದರು; ಆದರಿಂದೆ
ಯಾವ ನೀತಿಗಳ ಅರಿಯದೆ ಬೆಳೆದೆ ನಾನು;
* * * ರಾಯರೂ ನನ್ನ ಕೊರತೆಯ ಮರೆತು
ಒಲವ ನೀಡುವರೆಂದು ನಂಬಿಕೊಂಡಿಹೆನು. ॥೧೪॥

ಹಡೆದವರನಗಲಿ, ಒಡನಾಡಿಗಳ ತೊರೆದು, ಈ
ಅಡಿಗಳೆಡೆಯಲಿ ಬಾಗಿ ಬಂದಿರುವೆನು;
ಆಡಿಗಡಿಗೆ * * * ರಾಯರೇ ತವುರವರ
ನೆನೆಯದೊಲು ಪ್ರೀತಿಯಲಿ ನೋಡಬಹುದೇನು? ॥೧೫॥

ಒಡವೆಗಳು ಒಂದನೊಂದನು ಹೊಂದಿ ಬಿಡದಂತೆ
ಒಂದುಗೂಡಿರುವುದೇ ಲಗ್ನದರ್ಥ;
* * * ರಾಯರೇ ಗಂಡು-ಹೆಣ್ಣಲಿ ಮನದ
ಹೊಂದಿಕೆಯೆ ಇಲ್ಲದಿರೆ ಎಲ್ಲ ವ್ಯರ್ಥ ! ॥೧೬॥

ಮೊದಲ ದರ್ಶನದೊಳೇ ಮನಮೆಚ್ಚಿ ನನ್ನನ್ನು
ಸ್ವೀಕರಿಸಿದಿರಿ ನೀವು ಒಲವಿನಿಂದ;
* * * ರಾಯರೇ ಒಲವು ಕೊನೆವರೆಗಿನ್ನು
ಅಲುಗದಂದದಿ ನಡೆವ ಹೊಣೆ ನನ್ನದೆಂದೆ. ॥೧೭॥

ಶಿಕ್ಷಣದ ಮೆಟ್ಟಿಲನು ದಿನದಿನವು ಏರುತ್ತ
ಹತ್ತಿ ನೀತಿಹಿರಿ ಸಂಸ್ಕೃತಿಯ ಶಿಖರವನು;
* * * ರಾಯರೇ ಕೆಳಗುಳಿದ ನನ್ನನೂ
ಕೈಗೊಟ್ಟು ಮೇಲಕ್ಕೆ ಕರೆದೊಯ್ವಿರೇನು ? ॥೧೮॥

ಚೆಲುವಿಕೆಗೆ ಸರಿಯಲ್ಲ, ಗುಣದಿ ಹೊಂದಿಕೆಯುಂಟೆ ?
ಶಿಕ್ಷಣದಿ ನೆಲಮುಗಿಲಿನಂತರ— ಇದೇನು ?
ಎಲ್ಲ ಬಗೆಯೊಳು ನಿಮಗೆ * * * ರಾಯರೇ
ಅಸಮಳಿಹ ನನ್ನನ್ನು ಮನ್ನಿಸುವಿರೇನು ? ॥೧೯॥

ಮಾನವನು ತನ್ನ ಸಂಕಲ್ಪದಳವರಿಯದೆಯೆ
ಏನೇನೊ ಕಾರ್ಯಗಳ ಹೂಡುತಿಹನಲ್ಲಾ !
ದೇವನಾಟವೆ ಬೇರೆ * * * ರಾಯರೇ
ಅವನ ಸಂಕಲ್ಪವೆಂದಿಗು ತಪ್ಪದಲ್ಲಾ ? ॥೨೦॥

ಸಮಳಲ್ಲ ನಿಮಗೆಂದು ಅರಿತಿಹೆನು ಮನದಲ್ಲಿ,
ಅದರೀ ದೈವ ಘಟನೆಯನು ನೋಡಿ ;
ಸರಿಯೆನಿಸಿ * * * ರಾಯರೇ ನನ್ನನ್ನು
ಇರಿಸಿಹನು ನಿಮ್ಮರ್ಧ ದೇಹವನೆ ಮಾಡಿ. ॥೨೧॥

ಅರ್ಧ ದೇಹವು ಎಂಬ ಅಧಿಕಾರ ದೊರೆತಿರಲು
ನನಗೆ ಶಿಕ್ಷಣ ಬೇರೆ ಬೇಕೆ ಇನ್ನು ?
* * * ರಾಯರೇ ಹೊಂದಿರುವ ಶಿಕ್ಷಣವು
ನನಗಾದರೂ ಶೋಭೆ ತಾರದೇನು ? ॥೨೨॥

ಕಲೆಯ ನೆಲೆಮನೆಯಾದ ಮಾನವನ ಜೀವನವ
ಹಳಿದು ' ಕಗ್ಗಾಡು ಇದು ' ಎನ್ನುವರು ನೋಡಿ;
* * * ರಾಯರೇ ನಲಿಯೋಣ ಬಾಳನ್ನು
ಚೆಲುವಿನಾ ಹೂದೋಟದೆಡೆಯ ಮಾಡಿ ॥೨೩॥

ಇಬ್ಬರೂ ಪ್ರೀತಿ-ವಿಶ್ವಾಸದಿಂದಿರುತಿರಲು
ಕಾಡೆಂಬ ಶಬ್ದ ತಾನೇ ಅಳಿಯಬಹುದು:
ಸರ್ವರಲಿ ಸ್ನೇಹರಸವಿರಿಸಿ ನಡೆದರೆ ಬಾಳು
* * * ರಾಯರೇ ಸ್ವರ್ಗಸಮವಹುದು. ॥೨೪॥

ಸಂಸಾರವೆಂಬ ಈ ಶರನಿಧಿಯ ಮಧ್ಯದಲಿ
ತತ್ತ್ವನಿಷ್ಠೆಯ ನೌಕೆಯೇರಿ ಸಾಗಿ,
* * * ರಾಯರೇ ನಾವಿಕರು ನಾವಾಗಿ
ಸೇರೋಣ ತೀರವನು ಸಹಜವಾಗಿ. ॥೨೫॥

ದೇವನಿಂದಲೆ ಪ್ರವರ್ತಿತವಾದ ಚಕ್ರವಿದು,
' ಘೋರ ದುಸ್ತರ ಶರಧಿ ' ಎನ್ನಬಹುದೆ ?
ಇದ್ದರೂ ಭಯವೇನು * * * ರಾಯರೇ
ಸಿದ್ಧವಿರೆ ಬಲವಾದ ಪ್ರೀತಿ ನೌಕೆ. ॥೨೬॥

ವಿ.ಸೂ:— ಮೇಲಿನ ಒಗಟುಗಳಲ್ಲಿ * * * ಹೀಗೆ ಚಿಹ್ನಗಳಿರುವಲ್ಲಿ, ಗಂಡನ ಹೆಸರನ್ನು ಕೂಡಿಸಿ ಹೇಳಬೇಕು. ಗೋವಿಂದ, ಗೋಪಾಲ, ಹನುಮಂತ, ನರಸಿಂಹ, ಶೇಷಾಂತ ಮೊದಲಾದ ಏಕ ಪಾತ್ರೆಯ ಹೆಸರುಗಳು ಸಹಜವಾಗಿ ಕೂಡುವವು. ರಾಮ, ಕೃಷ್ಣ, ದತ್ತ, ಶಂಭು ಮೊದಲಾದ ಪೂರ್ಣ ಪಾತ್ರೆಯ ಹೆಸರು ಕೂಡಿಸಿ ಹೇಳಬೇಕಾದಾಗ, ಹೆಸರುಗಳು ಹಿಂದೆ ಶ್ರೀಕಾರ ಹೊಂದಿಸಬೇಕು. —ಲೇ.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ನಾವು ಅಪೇಕ್ಷಿಸಿದಂತೆ 'ಪುಣೆಯ ತಾಯಿ' ಎಂಬ ಕತೆಯನ್ನು ವಿಮರ್ಶಿಸಿ, ಬೆನಶ್ಯಾಸ್ತ್ರದ ೨೩ ಜನರಿಂದ ಲೇಖನಗಳು ಬಂದಿವೆ. ಬಂದ ವಿಮರ್ಶಕರ ಅನುಕ್ರಮ ಹೀಗಿದೆ :

೧. ಶ್ರೀ. ದು. ನಿಂ. ಬೆಳಗಲಿ, ಐನಾಪುರ. ೨. ಶ್ರೀ. ಯು. ಎಸ್. ಶ್ರೀನಿವಾಸನ್, ಸವಣೂರು. ೩. ಶ್ರೀ. ಕೊ. ಸೋಗಿ, ತಾಂಬರಂ-ಮದರಾಸ್. ೪. ಶ್ರೀ. ಎಂ. ಜಿ. ಜಯರಾಮು, ಮಡಾಲಿಂಗಪುರ. ೫. ಶ್ರೀ. ನರ ನರಗುಂದ, ಬಾಗಲಕೋಟೆ. ೬. ಶ್ರೀ. ಎಚ್. ಎನ್. ದೇಶಪಾಂಡೆ, ವಿಜಾಪುರ. ೭. ಶ್ರೀ. ಭೀಮಶರ್ಮಾ, ೮. ಶ್ರೀ. ಜಿ. ಆರ್. ಸುಬ್ಬರಾವ್, ಶಿವಮೊಗ್ಗ. ೯. ಶ್ರೀ. ಗೋವಿಂದ ಗುಂಡ್ಮಿ ಇಂ. ಸಾ. ಸಾಂಗಲಿ. ೧೦. ಶ್ರೀ. ಕುಲಕರ್ಣಿ, ಹುಬ್ಬಳ್ಳಿ. ೧೧. ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ. ಎ. ಹೈದರಾಬಾದ್. ೧೨. ಶ್ರೀ. ಎನ್. ಚಾರ್ಯ, ಮೂಡುಗೆರೆ. ೧೩. ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ (ದ. ಕ.). ೧೪. ಶ್ರೀ. ಉಪೇಂ ಸಾಹಿತ್ಯೋ-ಕಾರವಾರ. ೧೫. ಶ್ರೀ. ಕೆ. ವಿ. ಸುಬ್ಬಣ್ಣ, ಶಿವಮೊಗ್ಗಾ. ೧೬. ಶ್ರೀ. ಪ. ಸು. ಭಟ್ಟ, ಶಿವಮೊಗ್ಗಾ, ೧೭. ಬಗೆಗೆ ಪರಿಚ-ಮೂಡಲಗಿ, ಗೋಕಾಕ. ೧೮. ಶ್ರೀಮತಿ ಪದ್ಮಾ, ಶಾರದಾ ಸ್ತ್ರೀ ಸಮಾಜ, ಬೆಂಗಳೂರು ನಗರ. ೧೯. ಶ್ರೀ. ಓದಿದಾಗ, ಶ್ರೀ. ಕುಸುಗಲ್ಲ, ವಿಜಾಪುರ. ೨೦. ಶ್ರೀ. ಜಿ. ಎಸ್. ಮಕರ್ ಎಂ. ಎ., ಬಿ. ಟಿ. ಪುಣೆ. ೨೧. ಶ್ರೀ. ಎಚ್ ಜಿಹ್ವ ಆತುರಜನಿತ ಹಾನೇರಿಸೇಟಿ—ಧಾರವಾಡ. ೨೨. ಶ್ರೀ. ಕೋ. ಸು. ಸೀತಾರಾಮ್, ಬೆಂಗಳೂರು. ೨೩. ಶ್ರೀ. ಜಯತೀ ಓಜೋದುತ್ತ ಮಣ್ಣೂರ, ಗದ್ವಾಲ.

ಎಂದಿಗಿಂತಲೂ ಹೆಚ್ಚು ಜನರು ಈ ಸಲ ಮೇಲಾಟದಲ್ಲಿ ಭಾಗವಹಿಸಿದ್ದುದು ತುಂಬ ಸಂತೋಷದ ಸ್ಪಷ್ಟವಾಗುತ್ತ ವಹಿಸಿದವರಿಗೆಲ್ಲ ಕೃತಜ್ಞತೆಯ ವಂದನೆಗಳು.

ಬಂದ ಎಲ್ಲ ವಿಮರ್ಶೆಗಳನ್ನೂ ವಿಮರ್ಶಿಸಿ ನಿರ್ಣಯಕೊಟ್ಟವರು—ಜಯಂತಿಯ ವಾಚಕರಿಗೆ ಸುಪರಿಚ ರಾದ ಶ್ರೀಮಾನ್ ಎನ್. ಎಸ್. ಗದಗಕರ್ ಬಿ. ಎ. ಅವರು. ಅವರ ನಿರ್ಣಯದಂತೆ ಶ್ರೀ. ಎಸ್. ಶ್ರೀಕಟಕರ ಸ್ವಯಂಕೃ ಅವರ ವಿಮರ್ಶೆ ಅತ್ಯುತ್ತಮ. ಶ್ರೀಯುತರುಗಳಾದ ಎಚ್. ಜೆ. ಉಪಾಧ್ಯಾಯ ಎಂ. ಎ.; ಜಿ. ಎಸ್. ಮ ಕತೆಗಳ ಹಿನ್ನೆ ಬಿ. ಟಿ.; ಕೆ. ವಿ. ಸುಬ್ಬಣ್ಣ ಶಿವಮೊಗ್ಗ; ಕೋ. ಸು. ಸೀತಾರಾಮ್, ಬೆಂಗಳೂರು ಈ ನಾಲ್ವರ ವಿಮರ್ಶೆ ಸಣ್ಣಕತೆಯೆಂ ಶ್ರೀಯುತರುಗಳಾದ ಎನ್. ಎಂ. ಕೊ. ಸೋಗಿ, ಉಪೇಂದ್ರನಾಯಕ, ಗೋವಿಂದ ಗುಂಡ್ಮಿ, ಎಚ್. ಎನ್ಂತಲೆ ಪ್ರತಿಯೊಂ ವಿಜಾಪುರ, ಎನ್. ಅನಂತಾಚಾರ್ಯ ಮೂಡುಗೆರೆ, ಶ್ರೀಮತಿ ಪದ್ಮಾ, ಬೆಂಗಳೂರು ಅವರ ವಿಮರ್ಶೆಗಳು ಜೆನ್ನ ಚಮತ್ಕೃತಿಯಿ ಸಾಮಾನ್ಯವಾಗಿವೆ. ಶ್ರೀಮಾನ್ ಜಿ. ಎಸ್. ಮಕರ್‌ರೊಬ್ಬರೇ ತೆಗೆದ ಕಾಲಾವಧಿಯು ದೋಷವು ಸಾಮಂಯ ಕಲ್ಪನೆಯಿಂ ಅವರ ಸೂಕ್ಷ್ಮನಿರೀಕ್ಷಣೆಗಾಗಿ ನಮ್ಮ ನಿರ್ಣಯಕಾರರು ತಮ್ಮ ಸಂತೋಷಪನ್ನೂ ಮೆಚ್ಚಿಕೆಯನ್ನೂ ವ್ಯಕ್ತಪಡಿಸಿದ್ದಾರೆ.

ಮುಂದಿನ ಸಂಚಿಕೆ ದೀಪಾವಳಿಯ ಸಂಚಿಕೆಯಾಗಿ ಪ್ರಕಟವಾಗಲಿದೆ. ಅದಕ್ಕಾಗಿ 'ನನ್ನ ಮೆಚ್ಚಿಕೆಯ ಪುಟಿಗಳಂತೆ ಆಗಿರಬೇಕು ಪತ್ರಿಕೆ' ಎಂಬ ತಲೆಬರೆಹವನ್ನಿರಿಸಿ, ತಮ್ಮ ಪ್ರೀತಿಯ ಪತ್ರಿಕೆಯ ವೈಶಿಷ್ಟ್ಯಗಳನ್ನು ಕುರಿತು ಬರೆದ ವಿಮರ್ಶೆಗಳನ್ನು ಇದೇ ಸಪ್ಟಂಬರ್ ೨೫ ರೊಳಗಾಗಿ ಕಳುಹಬೇಕು.

ಪುಣೆಯ ತಾಯಿ

(ವಿಮರ್ಶೆ)

ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ

ಸಣ್ಣಕತೆಯಾಗಲಿ, ಜೀವನಚಿತ್ರವಾಗಲಿ, ಕಾದಂಬರಿಯಾಗಲಿ ಓದುಗನ ಮೆಚ್ಚುಗೆಯನ್ನು ಪಡೆಯಬೇಕಿದ್ದರೆ, ಅದರಲ್ಲಿಯ ಯಾವ ನೊಬ್ಬ ವ್ಯಕ್ತಿಯ ಜೀವನವು ಒಂದು ವಿಧದಿಂದ ತನ್ನದರೊಂದಿಗೆ ಸಾಮರಸ್ಯ ಹೊಂದುವಂತಹದಾಗಿರಬೇಕು; ಇಲ್ಲವೆ ಅದರಲ್ಲಿಯ ಯಾವುದೊಂದು ಸನ್ನಿವೇಶವು ಎಂದಾದರೊಮ್ಮೆ ತಾನು ಕಂಡುದು, ಂದು ಕನಸಿನ ಕತೆ. ಉಂಡುದು ಆಗಿರಬೇಕು. ಜಾಣ್ಮೆಯುಳ್ಳ ದ ಸುದ್ದಿಯನ್ನೋದಿ, ಯಲ್ಲಿಯ ವ್ಯಕ್ತಿಗಳು, ಸನ್ನಿವೇಶಗಳು ಸವ 'ಅಳಿಯನ ಕೆಲವು ಓದುಗನಿಗಾದರೂ ಅನ್ವಯಿಸುವಂತೆ ದ ವಿಕೃತಸ್ವರೂಪ, ಇಂತಹ ಎಚ್ಚರಿಕೆಯಿಂದ ರಚಿಸಿದ ಕಲಾ ಸಂಸ್ಕೃತನಾದ ಗಂಡ, ಯಿಂದೊಡಗೂಡಿ, ಸರ್ವಮಾನ್ಯವಾಗುವು ಇವರ ಸಂಸಾರ ಜೇಗೆ

'ಪುಣೆಯ ತಾಯಿ' ಯನ್ನು ಸಾಕಷ್ಟು ಗಿ ರೂಪಿಸುವುದರಲ್ಲಿ ಕಲಾಕೃತಿಯೆನ್ನಲು ಅಡ್ಡಿಯಿಲ್ಲ. (ಇಲ್ಲಿ 'ಯಾವುದು ಸರಿ? ಹೇಳಿದ್ದಾರೆ.)

೧೬೧

ಶ್ಯಾಮಸುಂದರನ ಚಿತ್ರ ಪರಿಪೂರ್ಣವಾದುದು. ಇಂದಿನ ಯೊಬ್ಬನ ನಿಜರೂಪ ಇಲ್ಲಿ ಬಿಂಬಿತವಾಗಿದೆ. ಕತೆಯ ಯ ಭಾಗ—ಊಟದ ಡಬ್ಬಿಗಾಗಿ ಕಾಯುವ ಶ್ಯಾಮ-ನಡತೆ, ಭಾವನೆಗಳು—ವಿದ್ಯಾರ್ಥಿಜೀವನದಲ್ಲಿ ಅವನೇ ರೂ ಅನುಭವಿಸಿದುದೇ. ಊಟಕ್ಕೆ ತಣಿಯಾಗುತ್ತಿರುವ ದರನನ್ನು ಲೇಖಕರ ಕುಂಚ ಸ್ವಭಾವ ಸುಂದರವಾಗಿ

"ಶ್ಯಾಮಸುಂದರ ತನ್ನ ಖುರ್ಚಿಯೊಂದನ್ನು ಊಟದ ಮ್ಮಗೆ ಸರಿಸಿಕೊಂಡು, ಕೈಯಲ್ಲಿ ಸ್ವಲ್ಪ ನೀರು ಹಾಕಿ-ಬ್ಬಾಯೀ ಕೈತೊಳೆದುಕೊಂಡು, ಕೈಗಳ ತೋಳುಗಳನ್ನು ಅದ ಡಬ್ಬಿಯ ಹಿಡಿಕೆಗಳನ್ನು ಉಚ್ಚಹತ್ತಿದನು"—ಬಾಳ ಎತ್ತಿಕೊಂಡು ತಂದಿರಿಸುವಷ್ಟು, ಹೊರಗೆ ಹೋಗಿ ಪಡೇನ್ನಾಗಿ ತೊಳೆದುಕೊಂಡು ಬರುವಷ್ಟು ತಾಳ್ಮೆ ಯಾಯಲ್ಲ ಅಸ್ವಾಭಾವಿಕ. ಇದೇ ರೀತಿ ಚಿತ್ರಣದಲ್ಲಿ * * * ಪ್ರಕಾಶಿತವಾದ ಇನ್ನೊಂದು ಸಂದರ್ಭ, ಶ್ಯಾಮ-ಒಲವಂತಾಬಾಯಿಯನ್ನು ನೊದಲ ಬಾರಿಗೆ ಕಾಣುವ ಹಡೆದವಾದ ಕಲಾವಿದನಿಗೆ ಮಾತ್ರ ಸಿದ್ಧಿಸಿದ ಕತೆಹೇಳುವ ಅಡಿಗಳೆಯೆಳೆಯಾಗಿ ಕತೆಯನ್ನು ಬಿಡಿಸಿ, ಓದುಗನಿಗೆ ಅಡಿಗಡಿ ಹರಿಸುವ ಕ್ರಮವಿದು.

ನೆನೆಯುವ ಮಗಳೊಬ್ಬಳ ಮಾತೃಹೃದಯವನ್ನು ಸಾಕಷ್ಟು ಒಡನೆಗಾಗಿಯೇ ಲೇಖಕರು ಶಾಂತಾಬಾಯಿಯು ಒಂದುಗೂ ರುವರು. ಮಕ್ಕಳಿಲ್ಲದ, ಆದರಲ್ಲೂ ಹುಟ್ಟಿದ * * * ರಾಕೊಂಡ ಅವಳಿಗೆ, ತನ್ನ ಮಗನ ನೆನಪು, ಹೊಂದಿಕೆಂ ಅವನೂ ಇರಬಹುದಿತ್ತೇನೋ—ಎಂಬ ಭಾವ ಸಾಕಾದ ವಿಷಯ. ಆದರೆ, ಕೆಂಪು ಬಣ್ಣ, ನೊದಲ ಜಟ್ಟಿಯ ನೀಲಿನ ಮಚ್ಚೆ ಇವೆಲ್ಲ ಈ ಭಾವನೆ ಸ್ವೀಕರಿಸಿದೀ ವಂತೆ ಲೇಖಕರು ಜಾಣ್ಮೆಯಿಂದ ಅರಿಸಿ * * * ರಾ ದುಃಖಿನಿಗೆ ತನ್ನ ಮಗನ ಪ್ರಾಯದ ಯಾವ ಅಲುಗದಂದ ಕಣ್ಣೀರು ಹರಿಸಿ ಅಳುವುದು ಹಣೆಯಬರಹ ಶಿಕ್ಷಣದ ವೆ ದುವರಿಂದಲೇ ಮಗ ಸತ್ತು ಹತ್ತು ವರ್ಷದ ಹತ್ತಿ ನಿಂತಿ ವರನನ್ನು ಕಂಡಾಗ, ತನ್ನ ಮಗನೇ * * * ರಾಯ ದು ಪೊಡ್ಡಾಂವಾಗಿ ಬಂದಾನೇನೋ ಕೈಗೊಟ್ಟು ಸುಂದರನನ್ನೇ ಆರು ತಿಂಗಳ ಮಟ್ಟಿಗಾದರೂ ಚೆಲುವಿಕೆಗೆ ಸ್ನ ಬೆಂದ ತಾಯೊಡಲನ್ನು ಸ್ವಲ್ಪ ತಣಿಸಿ ಶಿಕ್ಷಣದಿ ನೇ ಎಲ್ಲ ಬಗೆಯೊ ಪೆಚ್ಚಾಗಿ ಈ ಕತೆಯ ಹಿರಿಮೆ ಉಡಿಕ ಅಸಮಳಿಹ ನ್ನ ಸೂಚ್ಯವಾಗಿ ಬಂದಿರುವ ಕಟುಸತ್ಯದ

ವಿ.ಸೂ:— ಮೇ ಆಶಿಕ್ಷಿತ ಹೆಂಗುಸೊಬ್ಬಳ ಸಂಸ್ಕೃತಿಯು ಸುಸುಂಕ, ಕರಗುಸುಂದರನಲ್ಲಿ ಕಾಣುವುದಿಲ್ಲ ಅ ಪ ಳ ಮೂದಲಾಡ ಹೂ ಬಂಗಾರವೆನ್ನುವುದನ್ನು ತೋರಿಸುವಾಗ, ಮೈಯು ಬಪುಳಾಗುವುದು. ಮಗನಂತೆ

ಪ್ರೀತಿಸಿ ಮಾಡಿದ ಅರಯಿಕೆಗಳನ್ನನುಭವಿಸಿದ ಶ್ಯಾಮಸುಂದರ, "ಶಾಂತಾಬಾಯಿ, ನೀನು ನನ್ನ ಅಳ್ಳ; ತಾಯಿ" ಎಂದ. ಆದರೆ ಇದೆಲ್ಲ ಹೊರಗಿನಿಂದ ಮಾತ್ರ; ಇಲ್ಲವಾದರೆ, ಅವಳ ಕರುಣಕಥೆಯನ್ನು ಎವೆಯಿಕ್ಕದೆ ನೋಡುತ್ತ ಕೇಳಿ, "ನೀನೇ ನನ್ನ ಮಗಾ ಅಂತ ತಿಳಿದಿದ್ದೆ .... ಆದ್ರ ಇನ್ನ ಮತ್ತ ...." ಎಂಬ ಅವಳ ಅಸಹಾಯ ಮರುಕದ ನುಡಿಗೆ ಉತ್ತರವಾಗಿ .... "ಶಾಂತಾಬಾಯಿ, ನಿನಗ ನಾನು ಪಗಾರದ ಸಂಬಂದ ಎಷ್ಟು ಕೊಡೋದದ?" ಎಂದು ಕೇಳುವುದರಲ್ಲಿ ಅರ್ಥವಿದೆಯೆ? ಇಲ್ಲಿಯೂ ಲೇಖಕರು ಶಾಂತಾಬಾಯಿಯನ್ನು ಜಾರಲು ಬಿಟ್ಟಿಲ್ಲ. "ಮತ್ತೆ ಆಕೆಯ ಕಡೆಗೆ ತಿರುಗಿದಾಗ, ಶಾಂತಾಬಾಯಿ ಇರಲೇ ಇಲ್ಲ!" ತಾಯ್ತನಕ್ಕಾಗಿ ಹಂಬಲಿಸುವ ಅವಳ ಕರುಣಾ ಹೃದಯವೊತ್ತಟ್ಟು, ಸಂಬಳಕ್ಕಾಗಿ ದುಡಿತವೆನ್ನುವ ಭಾವನೆಯ ಶ್ಯಾಮಸುಂದರನ ಶುಷ್ಕ ಹೃದಯವೊತ್ತಟ್ಟು. ಮಗನೆಂದು ಕರೆದ ತಾಯಿಗೆ, ಪಗಾರದ ಸಂಬಂಧ ಹಣ ಕೊಡುವನಂತೆ!

ಆದರೂ, ಕತೆ ಹೇಳುವಾಗ ಲೇಖಕರು ಒಂದೆರಡು ಕಡೆ ಹೆಜ್ಜೆ ತಪ್ಪಿದ್ದಾರೆ; ಕತೆಯ ಹದ ಸ್ವಲ್ಪ ಕೆಟ್ಟಿದೆ. ಶಾಂತಾಬಾಯಿ, ಶ್ಯಾಮಸುಂದರರೊಳಗೆ ತಾಯಿ-ಮಕ್ಕಳೊಳಗಿರುವಂತಹ ಸಂಬಂಧವನ್ನು ಕಲ್ಪಿಸಬೇಕಾದುದು ಕತೆಯ ಬೆಳೆವಣಿಗೆಗೆ ಉಚಿತವಾದುದು, ಅಗತ್ಯವಾದುದು. ಆದರೆ ಇದನ್ನು ಸಾಧಿಸಲು, ಕತೆಯ ಎರಡನೆಯ ಭಾಗದಲ್ಲಿ ಬಂದಂತೆ ಶಾಂತಾಬಾಯಿಯ ವಿವರಣೆ—"ಹಿಂದೊಮ್ಮೆ ಅಂದವಾಗಿದ್ದಿರಬಹುದಾದ ಕಣ್ಣಿಳ ಜೆಲುವನ್ನು .... " ಅಥವಾ, "ಆಕೆಯ ಮುಖವನ್ನು ಒಂದು ಸಲ ನೋಡಿದರೆ ಸಾಕು—ಅವಳು ತನ್ನ ವಯಸ್ಸಿನಲ್ಲಿ ಸಾಕಷ್ಟು ಜೆಲುವೆಯಾಗಿರಬಹುದೆಂದು ತಟ್ಟನೆ ಹೇಳಬಹುದು —" ಮೊದಲಾದ ವಾಕ್ಯಗಳನ್ನು ಕೊಟ್ಟುದು; ಇನ್ನೊಂದೆಡೆ, ನಾಲ್ಕನೆಯ ಭಾಗದಲ್ಲಿ, ಶಾಂತಾಬಾಯಿಯು ಶ್ಯಾಮಸುಂದರನ ಸ್ನೋಟೋ ನೋಡುತ್ತಿರುವುದನ್ನು ಹೇಳುವಾಗ ಬಳಸಿದ ರೀತಿ:— "ಹಾಫ್ ಪ್ಯಾಂಟಿನ ಬಲದ ಕಿಸೆಯಲ್ಲಿ ಸ್ವಲ್ಪೇ ಹೊರಗೆ ಕಾಣುವ ಕರವಸ್ತ್ರ; .... ಕಾಣುವ ಮೈಯೆಲ್ಲ ಹುರಿಕಟ್ಟಿನದು; ಅದೇ ಅಂಕುರಿಸಿವ ಮೀಸೆಗೆ ಫ್ರೆಂಚ್ ಕಟ್ಟು"— ಇವು ಸ್ವಲ್ಪ ಅಪ್ರಾಸಂಗಿಕವೇನೋ ಎನಿಸುವುದು. ಭಾವನಾವಶರಾಗಿ ಓದುವಾಗ ರಸಾಭಾಸಕ್ಕೆಡೆಗೊಡುವುದು.

ಸಣ್ಣ ಕತೆಯಲ್ಲಿ ಶೈಲಿ, ಭಾಷಾಸಂಬದ್ಧತೆಗಳು ಕಥಾ ವಿಷಯದಷ್ಟು ಪ್ರಾಮುಖ್ಯವಲ್ಲವಾದರೂ, ಅವುಗಳನ್ನು ತೊಡೆದು ಹಾಕಲು ಅಸಾಧ್ಯ. ಈ ಕತೆಯ ಶೈಲಿ ಸಾಕಷ್ಟು ಆಕರ್ಷಕವಾಗಿಯೇ ಇದೆ. ತಂತ್ರವೂ ನಾವೀನ್ಯವಿಂದ ಕೂಡಿದೆ. ತೊಡಗುನಿಕೆಯು ಮುಗಿತಾಯಕ್ಕೆಂಥ ಏನೋ ಅಂದವಾಗಿದೆ; ಕುತೂಹಲವನ್ನು ಕೆರಳಿಸುವಂತಿದೆ;

ಮೇಲೆ ಸೂಚಿಸಿದ ಒಂದೆರಡು ಅಪ್ರಾಸಂಗಿಕ ವಿಷಯಗಳು ಬಾರದಂತೆ ಜಾಗ್ರತೆ ವಹಿಸುತ್ತಿದ್ದರೆ, ಕತೆಯು— ಈಗ ಇರುವುದಕ್ಕಿಂತಲೂ ಮನೋಹರವಾಗುತ್ತಿತ್ತು.

೫೯ ಮಣಿ-ಮುತ್ತುಗಳು

(ಕಥಾಸಂಕಲನ)

ಬರೆದವರು: ಶ್ರೀ. ತಿ. ಶೇ. ಮಣಿ, ಹಿರಿಯೂರು

ಕನ್ನಡ ಸಾಹಿತ್ಯಲೋಕದಲ್ಲಿ ಇಂದು ಯಾವುದಾದರೊಂದು ಹೆಚ್ಚಾಗಿ ಬೆಳೆಯುತ್ತಲಿದ್ದರೆ, ಅದು ಸಣ್ಣ ಕತೆಗಳ ವಿಭಾಗವೇ ಎಂದು ಯಾರೂ ಹೇಳುವಂತಿದೆ. ಒಂದು ಕಾಲ ಹೀಗಿತ್ತು : ಹೊಸ ಲೇಖಕರ ಪ್ರಾರಂಭಕೃತಿಗಳು ತುಂಡುಪದ್ಯಗಳಾಗಿ ಹೊರಬರುತ್ತಿದ್ದುವು. ಅದೀಗ ಕಡಿಮೆಯಾಗಿ ಸಣ್ಣಕತೆಗಳ ಗದ್ಯರೂಪದಲ್ಲಿ ಹೊರಬರುತ್ತಲಿವೆ. ಎಂತಲೇ ದಿನಪತ್ರಿಕೆ, ವಾರಪತ್ರಿಕೆ, ಪಕ್ಷಪತ್ರಿಕೆ, ಮಾಸಪತ್ರಿಕೆ—ಯಾವುದರಲ್ಲಿ ನೋಡಿದರೂ ಸಣ್ಣಕತೆ ತಲೆಯೆತ್ತಿ ನಿಂತುಕೊಂಡೇ ಇರುವುದು. ಇವಲ್ಲದೆ ಸಂಕಲನರೂಪದಿಂದ ಬರುತ್ತಿರುವ ಸಣ್ಣಕತೆಗಳ ಲೆಕ್ಕ ಬೇರೆಯೆ.

ಒಂದು ಕಾಲದಲ್ಲಿ ಪದ್ಯಸಾಹಿತ್ಯವು ಹೇಗೆ ಯಾವ ಶಾಸ್ತ್ರಸೌಂದರ್ಯಗಳನ್ನೂ ಲೆಕ್ಕಿಸದೆ ಸ್ವೈರವಾಗಿ ಮುಂದೆಬರುತ್ತಿದ್ದಿತೋ ಹಾಗೆಯೆ ಇಂದು ಸಣ್ಣಕತೆಯೂ ತಂತ್ರ, ಚಮತ್ಕೃತಿ, ಸೌಂದರ್ಯಗಳಿಲ್ಲದೆ ಮುಂಗಾರುಮಳೆಯ ಹಳ್ಳನಾಗಿ ಹರಿಯುತ್ತಲಿದೆ. ಅಲ್ಲದೆ ನಮ್ಮಲ್ಲಿ ವ್ಯಾಪಾರದೃಷ್ಟಿಯನ್ನಿರಿಸಿಕೊಂಡು ನಡೆಯುವ ಪತ್ರಿಕೆಗಳ ಸಂಖ್ಯೆ ಹೆಚ್ಚಾದುದರಿಂದ, ಎಂತಹ ಸಣ್ಣಕತೆಗಳಿಗೂ ಪ್ರಕಟನೆ ಸಿಕ್ಕುತ್ತಲಿದೆ. ಇದರಿಂದ ಕನ್ನಡ ಸಣ್ಣಕತೆಯ ವಿಭಾಗದ ಗಾತ್ರ ಹೆಚ್ಚುತ್ತಲಿದೆಯಾದರೂ ಸತ್ತ್ವ ಕಡಿಮೆಯಾಗುತ್ತಲಿದೆ.

ಇಂತಹ ಕಾಲದಲ್ಲಿ ಶ್ರೀಮಾನ್ ತಿ. ಶೇ. ಮಣಿಯವರ 'ಮಣಿ-ಮುತ್ತುಗಳು' ಮುಂದೆ ಬಂದಿದೆ. ಲೇಖಕರ ಹೆಸರು ಹೊಸತಾಗಿ ಕಾಣುವುದರಿಂದ, ವಿಮರ್ಶಕರು ಈ ಸಂಕಲನವನ್ನೂ ಕೈಗೆ ತೆಗೆದುಕೊಂಡಾಗ, ಸ್ವಲ್ಪ ಕೀಳ್ಗಣ್ಣಿನಿಂದಲೇ ಇದನ್ನು ನೋಡಬಹುದು. ಆದರೆ ರಸಿಕ ಸಾಹಿತ್ಯಕರಾದ ಶ್ರೀ. ಶಿವರಾಮ ಕಾರಂತರು ಬರೆದ ಚಿಕ್ಕ ಮುನ್ನುಡಿಯನ್ನು ಓದಿದ ಮೇಲೆ, ಸ್ವಲ್ಪ ಕುತೂಹಲಗೊಳ್ಳಬಹುದು. ಅವರು ಮುನ್ನುಡಿಯಲ್ಲಿ:

"....ಓದತೊಡಗಿದೆ. ಕತೆಗಳ ಸವಿ, ಓಟ, ಅನುಭವ, ರೀತಿ, ಎಲ್ಲವನ್ನೂ ತಿರುವಿಹಾಕುವಂತೆ ಮಾಡಿದುವು. ಶ್ರೀ. ಮಣಿಯವರು ತಮ್ಮ ೧೫ ವರ್ಷಗಳ ಮೇಲಿನ ಬರೆಹಗಳನ್ನು ಇಷ್ಟು ದಿನ ಬಚ್ಚಿಟ್ಟುದಾಗಲಿ, ಅವು ಈ ತನಕ ಬೆಳಕನ್ನು ಕಾಣದಿದ್ದುದಾಗಲಿ, ಆಶ್ಚರ್ಯಹುಟ್ಟಿಸಿತು. ಇದು ಅವರ ಸಂಯಮದ ಮಹಿಮೆಯೋ ಅಥವಾ ನಮ್ಮ ಜನರ ವಾಙ್ಮನಾಭಿರುಚಿಯ ಇಲ್ಲವೆ ಪ್ರೋತ್ಸಾಹಶೂನ್ಯತೆಯ ಮಹಿಮೆಯೋ!"

"ಮಣಿಯವರ ಚಿತ್ರಣರೀತಿ ಸರಳವಾದದ್ದು. ಜನಸಂಭವದ ಒಸ್ಟೆಲೆಯಿಂದ ಬೆಳೆದುಬಂದುದು. ಹೊಂದಿಸಿಕೊಂಡ ಕತೆಗಳಲ್ಲೂ, ನಮ್ಮ ನಾಡಿಗೆ ಹೊಂದುವ ಆವರಣ ಕಲ್ಪಿಸಿಕೊಟ್ಟುದು ಕಾಣುತ್ತದೆ. ಅಲ್ಲದೆ ಮನಶ್ಶಾಸ್ತ್ರದ ಸಹಜವಿಕಾಸ, ಕಥಾವ್ಯಕ್ತಿಗಳಲ್ಲಿ ಕಾಣುತ್ತದೆಯೆಂದು ನನಗನಿಸುತ್ತದೆ. ಕನ್ನಡ ಸಣ್ಣಕತೆಗಳಲ್ಲಿ ಇವು ಮುತ್ತುಗಳೆ."

ಹೀಗೆಲ್ಲ ಬರೆದಿದ್ದಾರೆ. ಶ್ರೀ. ಕಾರಂತರು ದಾಕ್ಷಿಣ್ಯಕ್ಕಾಗಿ ಹೊಗಳುವವರಲ್ಲ—ಎಂಬ ತಿಳಿವಳಿಕೆಯುಳ್ಳವರಲ್ಲಂತೂ ಅವರ ಮುನ್ನುಡಿ, ಕುತೂಹಲವನ್ನು ಇನ್ನಿಷ್ಟು ಕೆರಳಿಸದಿರದು.

ಲೇಖಕರು ಪ್ರಾರಂಭದ 'ಅರಿಕೆ'ಯಲ್ಲಿ, ತಮ್ಮ ಸಾಹಿತ್ಯೋಪಾಸನೆಯ ಚರಿತ್ರೆಯನ್ನೂ, ಸಂಕಲಿತ ಕತೆಗಳ ಬಗೆಗೆ ಪರಿಚಯದ ಮಾತುಗಳನ್ನೂ ಹೇಳಿದ್ದಾರೆ. ಅವನ್ನು ಓದಿದಾಗ, ಶ್ರೀ. ಮಣಿಯವರ ಕತೆಗಳು ಗಾಂಧಾರೀಸಂತಾನದಂತಹ ಆತುರಜನಿತ ಅಸಕ್ವಕೃತಿಗಳಲ್ಲವೆಂಬುದು ಸ್ಪುಟವಾಗುವುದು. ಓದೋದುತ್ತ ಹೋದಂತೆ, ಲೇಖಕರ ತಾಳ್ಮೆ-ಸಂಯಮಗಳು ಅವರ ಸಾಹಿತ್ಯಪಾಕವನ್ನು ಹದಗೊಳಿಸಿನೆಯೆಂಬುದು ಸ್ಪಷ್ಟವಾಗುತ್ತ ಹೋಗುತ್ತದೆ.

ಇಲ್ಲಿ ಸಂಕಲಿತವಾದ ೧೫ ಕತೆಗಳಲ್ಲಿ, ೯ ಲೇಖಕರ ಸ್ವಯಂಕೃತಿಗಳು; ೫ ಇಂಗ್ಲಿಷಿನಲ್ಲಿ ಅವರು 'ಓದಿದ ಕತೆಗಳ ಒಸ್ಟೆಯನ್ನಿಟ್ಟುಕೊಂಡು ಬರೆದುವು.' ಲೇಖಕರು ಸಣ್ಣಕತೆಯೆಂಬ ರೇಸೆಂಬುದನ್ನು ಚೆನ್ನಾಗಿ ಬಲ್ಲರು. ಎಂತಲೆ ಪ್ರತಿಯೊಂದು ಕತೆಯಲ್ಲಿಯೂ ತಂತ್ರಕೌಶಲವಿದೆ. ಕಥನ ಚಮತ್ಕೃತಿಯು ವಾಸ್ತವವನ್ನು ಸಾಹಿತ್ಯವನ್ನಾಗಿಸುವ ಕಲೆಯ ಕಲ್ಪನೆಯು ಮನೋವಿಶ್ಲೇಷಣದ ಔಚಿತ್ಯವಿವೆ. ಎಂತಲೇ ಕತೆಗಳಲ್ಲಿ ಬರುವ ಯಾವ ಪಾತ್ರಗಳೂ ಲೇಖಕರ ಕೈಗೊಂಬೆಗಳಂತೆ ಆಗಿರದೆ, ಸ್ವತಂತ್ರ ವ್ಯಕ್ತಿತ್ವದಿಂದ ಕೂಡಿ ವ್ಯವಹರಿಸುತ್ತಿರುತ್ತವೆ.

ಮೊದಲನೆಯದಾದ 'ನನ್ನ ಕನಸು' ಒಂದು ಕನಸಿನ ಕತೆ. ವೃತ್ತಪತ್ರದಲ್ಲಿ ಬಂದ ಒಂದು ಪ್ರೇಮವೈಷಮ್ಯದ ಸುದ್ದಿಯನ್ನೋದಿ, ಕೆರಳಿದ ಮನಸ್ಸು ಕಂಡ ಹಳವಂಡವದು. 'ಅಳಿಯನ ಕೆಲವು ಪತ್ರಗಳು' ಎಂಬುದರಲ್ಲಿ ವಿಷಮದಾಂಪತ್ಯದ ವಿಕೃತಸ್ವರೂಪ, ಹೃದಯವಿದ್ರಾವಕವಾಗಿ ಮೂಡಿನಿಂತಿದೆ. ಸುಸಂಸ್ಕೃತನಾದ ಗಂಡ, ಹಟವಾದಿಯಾದ ಅಸಸಂಸ್ಕೃತ ಹೆಂಡತಿ—ಇವರ ಸಂಸಾರ ಹೇಗೆ ಒಡಕಾಗುವುದೆಂಬುದನ್ನು ಪರ್ಯಾಯವಾಗಿ ರೂಪಿಸುವುದರಲ್ಲಿ 'ಅಳಿಯನ ಪತ್ರಗಳು' ಯಶಸ್ವಿಯಾಗಿವೆ. 'ಯಾವುದು ಸರಿ?'

ಭಸ್ಮಕ್ಕೆ ಅಮೋಘ ವಿದ್ಯುತ್ ಶಕ್ತಿಯ

ಸುಗಂಧ ಕೇಶ {ತೈಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬ್ಯಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಕತೆಯಲ್ಲಿ, ಸುಶಿಕ್ಷಿತೆಯಾದ ಹೆಣ್ಣು ಲೈಂಗಿಕ ಜೀವನವನ್ನು ೀತಿಯಿಂದ ನಡೆಯಿಸಿ, ಯಾವುದರಲ್ಲಿಯೂ ತೃಪ್ತಿಯನ್ನು ಎಲ್ಲ ಕಡೆಗೂ ಮಾನವನ ಸ್ವಾರ್ಥವು ಕಂಡುಬಂದು ತತ್ತ್ವದ ಕಡೆಗೆ ಮನಸ್ಸು ತಿರುಗಿಸುತ್ತಾಳೆಂಬುದನ್ನು ವಲ್ಲಿ, ಲೇಖಕರ ಬಹುಶ್ರುತತ್ವ ಚೆನ್ನಾಗಿ ವ್ಯಕ್ತವಾಗು-

ೀಕವೋ ಪ್ರಣಯವೊ?' ಮತ್ತು 'ನನ್ನ ಮದುವೆ' ಳು ಕೇವಲ ಪ್ರಣಯಕತೆಗಳು. ಮೊದಲನೆಯದರಲ್ಲಿ ಸ್ವಲ್ಪ ಕಡಮೆ. ಎರಡನೆಯದು ದಿನಚರಿಯಲ್ಲಿ ಬರೆಯ-ದ್ದ ಬಹುಜನರ ಮನಸ್ಸನ್ನು ರಂಜಿಸುವಂತಿದೆ. ದಿಮ್ಮನ್ನು' ಎಂಬುದು ಲೋಕಕಥೆಯೊಂದರ ಕಲ್ಪನೆಯನ್ನು ಬರೆದ ಅದ್ಭುತರಮ್ಯಕಥೆ. 'ಮಾಲತಿ ಬರೆದ ಕತೆ'ಯ ಹಳೆಯದಾದರೂ ರೂಪು-ಸನ್ನಿವೇಶ ಹೊಸವು. 'ಕಿಟ್ಟು-ಓದಲು ಮನೋರಂಜಕವೆನಿಸಿದರೂ ವಸ್ತುವಿನಲ್ಲಿಯ ಭಾವಿಕತೆಯ ಮೂಲಕ ಅಭಾಸವೆನಿಸುವುದು.

ಮತ್ತೆ' 'ಚಿಕ್ಕೀ ಪರಿಣಯ' 'ವೀರಚೆನ್ನೀನ ಹಳ್ಳ' 'ಯಾರು ' ಮೊದಲಾದುವು ಇಂಗ್ಲಿಷಿನಿಂದ ದತ್ತು ಬಂದುವಾದರೂ ೀಪರಿಣಯ' ಒಂದನ್ನು ಬಿಟ್ಟರೆ, ಯಾವ ಕತೆಯೂ ನಮ್ಮ ನಾಡಿಗರಿಗೆ ಅಸ್ವಾಭಾವಿಕವೆನಿಸದಂತೆ ಹೊಂದಿಸಿಕೊಂಡಿದ್ದಾರೆ. ಕೊನೆಯ ಕತೆ 'ಮಣಿ' ಎಂಬುದರಲ್ಲಿ ಸಮಾಜದಿಂದ ಉಪೇಕ್ಷಿತನಾದ ಸಾಹಿತ್ಯಕನೊಬ್ಬನ ವಿಷಾದಾಂತ ಜೀವನದ ಹೃದಯಾಘಾತಕ ಕತೆಯಿದೆ.

ಯಾವ ಕತೆಯೂ ಓದಿ ಮೂಗುಮುದುರಿಸುವಂತಿಲ್ಲ. ಒಂದೆರಡು ಗುಣಗಳ ಕೊರತೆ ಕಂಡರೆ, ಮತ್ತೆ ಒಂದೆರಡು ಗುಣಗಳ ವಿಕಾಸ ಆ ಕೊರತೆಯನ್ನು ಮರೆಮಾಡಿರುತ್ತದೆ. ಇಂತಹ ಒಳ್ಳೆಯ ಕತೆಗಳನ್ನು ಬರೆಯಬಲ್ಲ ಶ್ರೀ. ಮಣಿಯವರೂ, ಬಯಲಿಗೆ ತಂದ ಶ್ರೀ. ಶಿವರಾಮು ಕಾರಂತರೂ ಕನ್ನಡರಸಿಕರ ಅಭಿನಂದನೆಗೆ ನಿಜವಾಗಿಯೂ ಪಾತ್ರರು.

ಮುದ್ರಣದೋಷಗಳು ಬೇಸರುಗೊಳಿಸುವಷ್ಟು ಉಳಿದುಕೊಂಡಿವೆ. ಕರಡುನೋಡುವವರು ಇನ್ನಿಷ್ಟು ಲಕ್ಷ್ಯವಿತ್ತು ಕೆಲಸ ಮಾಡಿದ್ದರೆ, ಈ ಪುಸ್ತಕವು ಹೆಸರಿಡಲು ಬಾರದಂತಹದಾಗುತ್ತಿತ್ತು. ಬೇಗನೆ ತಿನೆಯ ಅನೃತ್ತಿಯನ್ನು ಹಾಕುವಂತಾಗಿ, ಆಗಲಾದರೂ ಇದರ ಪರಿಶುದ್ಧವಾದ ಪ್ರತಿ ಕನ್ನಡಿಗರಿಗೆ ದೊರೆಯಲೆಂದು ಹಾರೈಸುವೆವು,

—ಬಿ. ಪಿ. ಎಸ್. ರಾವ್

ಸಣ್ಣ ಕತೆಯಲ್ಲಿ ಸ್ವಾರಸ್ಯ!

ಇದನ್ನು ಬಯಸುವವರಿಗೆ ಹದಿನಾರು ವರ್ಷಗಳಿಂದ ಪ್ರಿಯವಾಗಿರುವ

ಮಾಸಪತ್ರಿಕೆ

ಕತೆಗಾರ

ಪ್ರತಿ ಸಂಚಿಕೆಯಲ್ಲೂ

ಉತ್ತಮ ಸಣ್ಣಕತೆಗಳು,

ಕನ್ನಡ ಪತ್ರಿಕೆಗಳಲ್ಲಿ ಆಯಾ ತಿಂಗಳು ಪ್ರಕಟವಾದ ಕತೆಗಳ ಪರಿಚಯ,

ಚಿತ್ರರಂಗವೀಕ್ಷಣ, ಇನ್ನೂ ಇತರ.....?

ಇನ್ನೆಲ್ಲ ಅಂದವಾದ ಅಚ್ಚುಕಟ್ಟಿನೊಳಗೆ.

ಬಿಡಿಪ್ರತಿ ನಾಲ್ಕಾಣೆಗೆ ದೊರೆಯುವುದು.

ವಾರ್ಷಿಕ ಚಂದಾ ಮೂರು ರೂಪಾಯಿ

(ಅಂಚೆ ಉಚಿತ.)

ಪ್ರಕಾಶಕರು

ಆರ್. ಎನ್. ನ್ಯೂಸ್ ಏಜನ್ಸಿ,

೬೬೫, ಚಿಕ್ಕಪೇಟೆ. ಬೆಂಗಳೂರು, ೩.

ಉತ್ತರ ಕನ್ನಡ ಜಿಲ್ಲೆಯಲ್ಲಿಯ ಜನಪದ ಸಾಹಿತ್ಯ

ಸಂಗ್ರಾಹಕರು— ಶ್ರೀ. ಉಪೇಂದ್ರ ನಾಯಕ, ಕಾರವಾರ

★

ಮದುವೆಯ ಹಾಡುಗಳು

೧

ಬಾಗಿಲ ಮುಂದಿನ ಜೋಡು ತೆಂಗಿನ ಮರವ
ಬೇಡಿಕೊಳ್ಳೇ ನಾರಿ ಸೆಗೊಡ್ಡಿ,
ಬೇಡಿಕೊಳ್ಳೇ ನಾರಿ ಸೆಗೊಡ್ಡಿ, ಅಪ್ಪನ ಕೂಡೆ
ಕೊಟ್ಟಾಹೊರತು ಮೆಟ್ಟಲನಿಳಿ ಬೇಡಾ !

೨

ಹುಟ್ಟಿದ ಮಗಳು ಹೊಸ್ತಿಲ ಮೆಟ್ಟಿಳ್ವಾಗೆ
ಹೊಟ್ಟೆಯೊಳಗೆಲ್ಲಾ ತಳಮಳ
ಹೊಟ್ಟೆಯೊಳಗೆಲ್ಲಾ ತಳಮಳ ! ಕಂಗೆಡೆ
ನೀರ ಉದ್ದಿಕೊ ನಾರಿ ಸೆರಗಿನಲಿ !

೩

ಬಾಗಿಲ ಮುಂದೆ ಜೋಡು ಎರ್ಜಲ[೧] ಮರವಿತ್ತು
ಹೆಕ್ಕಿ ಮುಡಿವಂತ ಮಗಳಿತ್ತು
ಹೆಕ್ಕಿ ಮುಡಿವಂತ ಮಗಳಿತ್ತು ! ನೆಂಟರೆ
ಇಂದು ನಿಮ್ಮೊಡನೆ ಬರುವಕಳು.

ಲಾಲಿಸುವ ಹಾಡುಗಳು

೧

ಆಡುವ ನಮ್ಮಪ್ಪಗೆ ಬೇಡುಕ ಬಂದವರ್ಯಾರಿ ?
ನಾಡಗಿತ್ತಿಯಲ್ಲಾ, ಸಿರಿದೇವಿ !
ನಾಡಗಿತ್ತಿಯಲ್ಲಾ ಸಿರಿದೇವಿ ! ಬಂದವರು
ಆಡು ಬಾಲಯ್ಯನ ಕೊಡಲಾರೆ !

೨

ಎಲ್ಲವರ ಹಾಗೆ ಅಲ್ಲವೊ ನಮ್ ಕಮ್ಮ
ನೆರೆಯಂಗಿ[೧] ತೋಳು ನೆಗವೋರೆ[೨]
ನೆರೆಯಂಗಿ ತೋಳು ನೆಗವೋರೆ ! ತಮ್ಮಯ್ಯ
ಇದ್ದರೆ ಸಾಡಲ್ಲೊ ಮನೆಯೊಳಗೆ.

೩

ಕಾಣದಿರಲಾರೆ ಕನ್ನಡಿ ಮುಖದಾಕೆಯ
ಮಲ್ಲಿಗೆ ಹೂವಿನ ವರ್ಣದ
ಮಲ್ಲಿಗೆ ಹೂವಿನ ವರ್ಣದ ! ತಂಗಮ್ಮನ
ಕಾಣದರಗಳಿಗೆ ಇರಲಾರೆ.

* [ಮದುವೆ ಮುಗಿದ ಮೇಲೆ ಮಗಳು ಗಂಡನ ಮನೆಗೆ ಹೊರಡುವಾಗ ಹೇಳುವ ಹಾಡುಗಳವು]

೧ ಎರ್ಜಲ=ಎರ್ಜಲ ಹೂವಿನ ಮರ.

೧ ನೆರೆಯಂಗಿ = ನಿರಿಗೆಯಾಗುವಂತೆ ತಯಾರಿಸಿದ ಅಂಗಿ

೨ ನೆಗವೋರೆ = ನಗುನಗುತಿರುವ ತೋರೆ

ಹಾಡುಗಾರ್ತಿ

" ಹಾಡುಗಾರ್ತಿಯೆಂದು ಓಡೋಡಿ ಕರ್ತಂದೆ
ಬಾಗಿಲ ಹಿಡ್ಯಾ ಮನೆ ಹಿಡ್ಯಾ—
ಬಾಗಿಲ ಹಿಡ್ಯಾ ಮನೆ ಹಿಡ್ಯಾ—ಅತ್ತಿಗೆ
ಬಾಳಿಯ ಕೊಡ್ತೆ ಹೆಗುರ್ಣಾ "

" ಬಾಳಿ ವ್ಯಾಲ ಉಂಬೂಕೆ ಬಗೆಟ್ಟಿ ಬಲಿಲ್ಲಾ
ತಾರೆ ಅಣ್ಣಂಬು ಹರಿವಾಣ "
" ಹರಿವಾಣವಲ್ಲುಣ್ಣೂಕೆ ಹೆರ್ಯಪ್ಪನ ಮಗಳಲ್ಲಾ
ಕೇಳಿಯ ಬಾಳಿ ಹೆರ್ಗುರ್ಣಾ "

[ಮೇಲಿನ ಹಾಡಿನಲ್ಲಿ ನಾದಿನಿ ಅತ್ತಿಗೆ ಇವರಿಬ್ಬರೊಳಗೆ ಸಂವಾದವಿದೆ. ನಾದಿನಿಯು, ಹಾಡುಗಾರ್ತಿ ಅತ್ತಿಗೆಯನ್ನು ಹಾಡು ಹಾಡುವ ಬಗ್ಗೆ ಉತ್ಸುಕತೆಯಿಂದ ಕರೆಯುವಳು. ಆದರೆ ಅತ್ತಿಗೆಯು ಬಾಗಿಲು ಮನೆ ಹಿಡಿಯದಷ್ಟು ಉಬ್ಬಿ ಬಡಿವಾರ ತೋರಿಸುವುದನ್ನು ಕಂಡು 'ಬಾಳಿ ಎಲೆ ಕೊಡುವೆ ಹೊರಗೆ ಊಟ ಮಾಡು' ಎನ್ನುವಳು. ಅತ್ತಿಗೆ ಉತ್ತರ ರೂಪವಾಗಿ ಬಾಳಿಯ ಮೇಲೆ ಉಣ್ಣಲು ಬರೆಗೆಟ್ಟಿ ಅಂದರೆ ಹೊಟ್ಟೆಗಿಲ್ಲದೇ ಬರಲಿಲ್ಲವೆಂದು ತಿಳಿಸಿ ಹೇಳಿ, ಅಣ್ಣನು ಉಣ್ಣುವ ಹರಿವಾಣವನ್ನು ಕರಲು ಹೇಳುತ್ತಾಳೆ. ನಾದಿನಿ ಇನ್ನೂ ಬಿರುಸಾಗಿ 'ಹರಿವಾಣವಲ್ಲಿ ಉಣ್ಣಲಿಕ್ಕೆ ಹಿರಿಯಪ್ಪನ ಮಗಳಲ್ಲ; ಕೇಳಿಯ ಅರ್ಥಾತ್ ಕೆರಿ ಬಾಳಿಯನ್ನು ಹರಿದು ಅದರಲ್ಲಿ ಊಟ ಮಾಡು—ಅನ್ನುತ್ತಾಳೆ.]

ನಗೀಗೆ ನೇವಿದ್ಯ

(೧)

ಭೀಮಣ್ಣ ಓಣಿಯೊಳಗಿನ ಸಲೂನಿನಲ್ಲಿ ಕ್ಷೌರಮಾಡಿಸಿಕೊಳ್ಳುತ್ತ ಕುಳಿತಿದ್ದ. ಕೆಲಸಿಗ ಸಬ್ಬನ ಬಿಸಿ ನೀರನ್ನು ಬ್ರಶ್ಶಿನಿಂದ ಮುಖಕ್ಕೆ ಒರಸುತ್ತಿದ್ದ. ಅಷ್ಟರಲ್ಲಿ ಒಬ್ಬ ಹುಡುಗ ಓಡುತ್ತ ಒಳಗೆ ಬಂದು—"ರಾಮಣ್ಣಾ, ನಿಮ್ಮ ಹುನೀಗೆ ಬೆಂಕಿ ಹತ್ತೀದ" ಎಂದು ಕೂಗಿದ. ಟಣ್ಣನೆ ಕುಳಿತಲ್ಲಿಂದ ಜಿಗಿದು, ಕೋಟು-ಟೊಪ್ಪಿಗೆಯನ್ನು ಅಲ್ಲಿಯೇ ಬಿಟ್ಟು, ಭೀಮಣ್ಣ ವೇಗವಾಗಿಯೇ ಮನೆಯಕಡೆಗೆ ಓಡಿದ. ಅರ್ಧ ದಾರಿ ಬಂದಮೇಲೆ ಗಕ್ಕನೆ ನಿಂತು, ತನ್ನನ್ನೇ ಕೇಳಿಕೊಂಡ:—"ಎಲೆ ಇವನ, ನಾ ಯಾಕ ಹಿಂಗ ಹುಚ್ಚನ್ಹಾಂಗ ಓಡಿ ಬಂದೆ? ನನ್ನ ಹೆಸರು ರಾಮಣ್ಣನs ಅಲ್ಲ!"

(೨)

ಇಬ್ಬರು ಹುಚ್ಚರು ಬಿಸಿಲು ಕಾಯಿಸುತ್ತ ಆಸ್ಪತ್ರೆಯ ಕಟ್ಟೆಯ ಮೇಲೆ ಕುಳಿತಿದ್ದರು. ಹಾದಿಯ ಮೇಲೆ ಒಬ್ಬ ರೈತ ತನ್ನ ಬಂಡಿಯಲ್ಲಿ ಗೊಬ್ಬರ ಹೇರಿಕೊಂಡು ಹೊರಟಿದ್ದ.

ಒಬ್ಬ ಹುಚ್ಚ ಕೇಳಿದ:—"ಏ ಹಿರಿಯಾ, ಈ ಹೆಸಿಗೀ ಒಯಿದು ಏನು ಮಾಡ್ತೀ?"

ರೈತ—"ನನ್ನ ದ್ರಾಕ್ಷಿಗೆ ಹಾಕ್ತೀನಿ"

ಹುಚ್ಚ—(ಜೊತೆಯ ಹುಚ್ಚನಿಗೆ) "ನೋಡಿದ್ಯಾ, ಮಂದಿ ನಮಗಿಂತ ಹುಚ್ಚರು ಅಂತಾರ! ಹೇಸಿಗೀ ಒಯಿದು ದ್ರಾಕ್ಷಿಗೆ ಹಾಕುವವ ಮಾತ್ರ ಶಹಣ್ಯಾ!"

(೩)

ವಿಲಾಸ ಅಮೇರಿಕೆಗೆ ಕಲಿಯಲು ಹೊರಟಾಗ ಅವನ ಪ್ರೇಯಸಿ ವಿನೋದಿನಿ ವಿರಹವನ್ನು ನೆನೆದು ಎದೆ ಬಿರಿಯುವಂತೆ ಅತ್ತಳು. ಅಮೇರಿಕೆಗೆ ಹೋದಮೇಲೆ ವಿಲಾಸನು ಕೂಡ ಎರಡು ವರ್ಷ ಈ ವಿರಹವನ್ನು ಗಟ್ಟಿಜೀವಮಾಡಿ ಸಹಿಸಿದ. ಕೊನೆಗೆ ಒಂದು ದಿನ ವಿನೋದಿನಿಯಿಂದ ಪತ್ರ ಬಂದಿತು—'ನನ್ನ ಮದುವೆ ಒಬ್ಬ ದೊಡ್ಡ ಅಧಿಕಾರಿಯೊಂದಿಗೆ ನಿಶ್ಚಯವಾಗಿದೆ. ನಾನು ನಿನಗೆ ಕೊಟ್ಟ ನನ್ನ ಫೊಟೊ ಕೂಡಲೆ ತಿರುಗಿ ಕಳಿಸಬೇಕು.'

ವಿಲಾಸ, ತಾಯಿ ಮೊದಲ್ಗೊಂಡು ಸಿನೆಮಾ ತಾರೆಯ ವರೆಗೆ ತನ್ನ ಹತ್ತಿರ ಇದ್ದಬಿದ್ದ ಯಾವತ್ತೂ ಚಿತ್ರಗಳನ್ನೆಲ್ಲ ಕೂಡಿಸಿ ಒಂದು ಹೊರೆಮಾಡಿ, ವಿನೋದಿನಿಗೆ ಕಳುಹಿ, ಜೊತೆಗೆ ಒಂದು ಕಾಗದ ಬರೆದ: 'ಇದರಲ್ಲಿ ನಿನ್ನ ಚಿತ್ರ ಯಾವುದೊ ಅದನ್ನು ಆರಿಸಿಗೊಂಡು ಉಳಿದವುಗಳನ್ನು ನನ್ನ ಕಡೆಗೆ ತಿರುಗಿ ಕಳುಹು.'

(೪)

ಮುಂಬಯಿಯ ಭೇಂಡಿ ಬಜಾರದ ಒಬ್ಬ ಹೆಂಗುಸು ಟೆಲಿಫೋನಿನಲ್ಲಿ ಕೂಗಿಕೊಂಡಳು:— 'ಇಬ್ಬರು ತರುಣರು ಕಿಟಕಿ

ಯಿಂದ ನನ್ನ ಕೋಣೆಯಲ್ಲಿ ನುಗ್ಗಲು ಪ್ರಯತ್ನ ಮಾಡುತ್ತಿದ್ದಾರೆ.'

ಆಕೆಗೆ ಉತ್ತರದೊರೆಯಿತು:—'ಅಮ್ಮ ನೀನು ತಪ್ಪಿ ನಮ್ಮನ್ನು ಕರೆಯುವ ಇದ್ದೀ. ಇದು ಪೋಲಿಸ್ ರಾಣಿಯ ಬೆಂಕಿ ಆರಿಸುವ ಖಾತೆ.'

ಹೆಂಗುಸು ಮಾರ್ನುಡಿದಳು:—'ನಾ ಅದು ಗೊತ್ತಿದೆ. ನಿಮಗೇ ನಾನು ದದ್ದು. ಆ ತರುಣರಿಗೆ ಮೇಲೆ ಬರ ದೊಡ್ಡ ನಿಚ್ಚಣಿಕೆ ಬೇಕಾಗಿದೆ.'

(೫)

ರಾಬರ್ಟ್ ಬ್ರೌನಿಂಗನದು 'ಸಾಡೆಲೊ' ಎಂದು ಒಂದು ಕವನವಿದೆ. ಆ ಕಾಲದ ಒಳ್ಳೊಳ್ಳೆ ಕವಿಗಳಿಗೂ ಅದ ಒಂದು ಸಾಲಿಗೆ ಅರ್ಥ ಹಚ್ಚುವದಾಗಲಿ ಲಂಡನ್ ಕವಿಸಂಘದವರು ಒಮ್ಮೆ ಅ ನನ್ನೇ ಹಿಡಿದು, ಅದರ ಅರ್ಥ ಹೇಳೇ ಒತ್ತಾಯಪಡಿಸಿದರು. ಬ್ರೌನಿಂಗ ಅದನ್ನು ಒಂದು ಸಲ ಓದಿದ. ಎರಡ ಸಲ ಓದಿದ. ಕೊನೆಗೆ ಭುಜ ಹಾರಿ ನುಡಿದ—'ನಾನು ಇದನ್ನು ಬರೆದಾ ದೇವರು ಮತ್ತು ನಾನು ಇಬ್ಬರಿಗೇ ಇದ ಅರ್ಥ ಗೊತ್ತಿತ್ತು. ಈಗ ಮಾತ್ರ ಅವ ಗೊಬ್ಬನಿಗೇ ಗೊತ್ತಿದೆ.'

(೬)

'ದ್ಯಾವರೂ, ಕಣ್ಣಿಲ್ಲದ ಕುರುಡ ಭಿಕ್ಷಾ ನೀಡಿರಿ' ಎಂದು ಭಿಕ್ಷುಕ ಕೂಗುತ್ತಿದ್ದ. ಆ ಹಾದಿಯಲ್ಲಿ ನಡೆದ ಒಬ್ಬ ಸಿರಿವಂತ ಹೆಣ್ಣುಮಗಳಿಗೆ ಕನಿಕರವುಂಟಾಗಿ ಆಕೆ ಎರಡು ರೂಪಾಯಿಯ ನೋಟನ್ನು ಅವನ ಕೈಯಲ್ಲಿಟ್ಟಳು.

'ತಾಯಿ, ರುಪ-ರುಪಾಯದ ಎರಡು ನೋಟದ್ದರ ಕೊಡಿರಿ.' ಕೇಳಿದ ಭಿಕ್ಷುಕ.

'ಅಲ್ಲೊ, ಕುರುಡ ಎಂದು ಹೇಳ್ತೀ, ಎರಡು ರೂಪಾಯದ ನೋಟು ನಿನಗ್ಹ್ಯಾಂಗ ಕಂಡಿತು?'

'ನಾ ಕುರುಡಲ್ಲ ತಾಯಿ; ನನ್ನ ಜತಿಗಾರ ಕುರುಡ. ಅಂವ ಸಿನೆಮಾ ನೋಡಲಿಕ್ಕೆ ಹೋಗ್ಯಾನ. ದಿನಾ ಮೂಕ ಅಂತ ನಾ ಭಿಕ್ಷಾ ಬೇಡ್ತೀನಿ. ಇವತ್ತ ಅವನ ಬದಲೀ ಕುರುಡ ಅಂತ ಭಿಕ್ಷಕ್ಕ ನಿಂತೀನಿ.'

ಸಾದರ ಸ್ವೀಕಾರ

೩೬. **ಬಹುಮಾನ ಪಡೆದ ಬರೆಹಗಳು** (ಮನೋಹರ ಗ್ರಂಥಮಾಲೆ ವರ್ಷದ ಸಾಹಿತ್ಯಸ್ಪರ್ಧೆಯಲ್ಲಿ ಬಹುಮಾನ ಪಡೆದ ಕಥೆ, ಏಕಾಂಕ, ವ್ಯಕ್ತಿಚಿತ್ರಗಳ ಸಂಕಲನ). ಸಂಪಾದಕರು ಶ್ರೀಮಾನ್ ಜಿ. ಬಿ. ಜೋಶಿಯವರು. ಧಾರವಾಡದ ಮನೋಹರ ಗ್ರಂಥಮಾಲೆಯ ೯೫ ನೆಯ ಕುಸುಮ. ಕ್ರೌ. ಅ. ೧೫೨ ಪುಟಗಳು. ಬೆಲೆ ೧-೧೨-೦.

೩೭. **ಮುನಿಯನ ಮಾದರಿ** (ಬಹುಮಾನ ಪಡೆದ ಸಾಮಾಜಿಕ ಕಾದಂಬರಿ). ಲೇಖಕರು: ಶ್ರೀ. ಕೆ. ಎ. ಎನ್. ರಾವ್, ಬನಾರಸ. ಇದು ಮನೋಹರ ಗ್ರಂಥಮಾಲೆಯ ೯೬ನೆಯ ಕುಸುಮ. ಕ್ರೌ. ಅ. ೩೦ ಪುಟ. ಬೆಲೆ ೨-೧೨-೦.

೩೮. **ಅಮರವಾಣಿ** (ಮಾಸಪತ್ರಿಕೆಯ ೧ನೆಯ ವರ್ಷದ ೭ನೆಯ ಸಂಚಿಕೆ). ಸಂಪಾದಕರು ಶ್ರೀ. ಬಿ. ಎಂ. ವಿಶ್ವೇಶ್ವರಶಾಸ್ತ್ರಿ. ಸಹಸಂಪಾದಕರು ಶ್ರೀ. ಜಿ. ಎಂ. ಮರುಸಿದ್ಧೇಶ್ವರಶಾಸ್ತ್ರಿ 'ಕಾವ್ಯತೀರ್ಥ'. ಪ್ರಕಾಶಕರು ಪಂಡಿತ ಡಿ. ಸೂಗವೀರ ಶರ್ಮಾ ರಾಯಚೂರು (ಸೈಕ್ಲೋಸ್ಟೈಲ್). ಡೆ. ಅ. ೫೦ ಪುಟಗಳು. ವಾರ್ಷಿಕ ಚಂದಾ ೬-೦-೦.

ಹೈದರಾಬಾದ್ ಕರ್ನಾಟಕದ ತರುಣ ಸಾಹಿತ್ಯಾಭ್ಯಾಸಿಗಳು ಈ ಪತ್ರಿಕೆಯನ್ನು ಹೊರಡಿಸಿದ್ದಾರೆ. ಕವನ, ಕಥೆ, ಪ್ರಬಂಧ, ವಿವಿಧ ವಿಷಯಕ ಲೇಖನಗಳಿಂದ ಕೂಡಿದೆ. 'ಅಮರವಾಣಿ' ನಿಜವಾದ ಅಮರವಾಣಿಯಾಗಿ ಬಹುಕಾಲ ಬಾಳಲಿ.

೩೯. **ಕನಸು-ನೆನಸು** (ಕವನ ಸಂಕಲನ). ಬರೆದವರು ಶ್ರೀ. ಚಿದಾನಂದ, ಲಕ್ಕೊಂಗಲ. ಧಾರವಾಡದ ಪರ್ಣಕುಟಿ ಗ್ರಂಥಮಾಲೆಯ ಬಿಡಿಮುತ್ತು. ಕ್ರೌ. ೫೨ ಪುಟಗಳು. ಬೆಲೆ ೧-೦-೦.

೪೦. **ಕೊನೆಯ ದಾರಿ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು: ಶ್ರೀಮಾನ್ ಕೃಷ್ಣಮೂರ್ತಿ ಪುರಾಣಿಕರು. ಮೈಸೂರಿನ ಉಷಾಸಾಹಿತ್ಯಮಾಲೆಯ ೧೩-೧೭ನೆಯ ಪುಷ್ಪ. (೩ನೆಯ ವರ್ಷದ ೪-೫ ಗ್ರಂಥ). ಕ್ರೌ. ಅ. ೨೭೨ ಪುಟಗಳು. ಬೆಲೆ ೩-೦-೦.

೪೧. **ಸ್ಕೂಲ್ ಡೆ** (ಏಕಾಂಕ ಪ್ರಹಸನ). ಬರೆದವರು 'ಹಾರ್ಮೋನಿಯಂ ಮಾಸ್ತರ್'. ಪ್ರಕಾಶಕರು ವೀಣಾಪ್ರಕಟನಾಲಯ ಶಿವಮೊಗ್ಗ, ದ. ಕ. ಜಿಲ್ಲೆ. ಕ್ರೌ. ಅ. ೫೯ ಪುಟಗಳು. ಬೆಲೆ ೦-೬-೦.



೪೨. **The United States of A Secular State** (ಇಂಗ್ಲಿಷಿನಲ್ಲಿ ಪರಿಚಯಾತ್ಮಕ ಕಿರುಹೊತ್ತಿಗೆ). ಬರೆದವರು ಶ್ರೀಯುತ ಎಂ. ರಾಮಸ್ವಾಮಿ ಬಿ. ಎ., ಬಿ. ಎಲ್. ಮೈಸೂರು ಹೈಕೋರ್ಟಿನ ಅಡ್ವೋಕೇಟರು, ಬೆಂಗಳೂರು ಪ್ರಕಾಶಕರು: ಗೋಖಲೆ ಇನ್ಸ್ಟ್ಯೂಟ್ ಆಫ್ ಪಬ್ಲಿಕ್ ಎಫರ್ಸ್, ಬಸವನಗುಡಿ ಬೆಂಗಳೂರು. ಡೆ. ಅ. ೩೮ ಪುಟಗಳು ಬೆಲೆ ೧-೦-೦.

೪೩. **ಪುಷ್ಪ**, (ಹೊಸ ಮಾಸಪತ್ರಿಕೆ) ಸಂಪಾದಕರು ಶ್ರೀ. ಕೆ. ಪ್ರಭಾಕರರಾವ್ ಪ್ರಕಾಶಕರು: ಶ್ರೀ. ಆನಂದಕಿಟ್ಟಿ ಕಿದಿಯೂರು, 'ಪುಷ್ಪ' ಕಾರ್ಯಾಲಯ, ಉಡುಪಿ (ದ. ಕ.). ಕ್ರೌ. ಅ. ೪೮ ಪುಟಗಳು. ವಾ. ಚಂ. ೩-೦-೦. ಬಿಡಿಸಂಚಿಕೆಗೆ ೦-೩-೦.

ಸಂಪಾದಕ-ಪ್ರಕಾಶಕರಿನ್ನೂ ಎಳವರಯದವರೆಂದು ತೋರುವುದು. ಸಂಪಾದಕೀಯದಲ್ಲಿ ಬಂದಿರುವ ತೂಕವಿಲ್ಲವ ಮಾತುಗಳು, ಸಂಪಾದಕರ ಅನುಭವದಿಂ ಮುಂಪೆ ಸರಿಹೋದಾವೆಂದು ಸಹನೆಯಿಂದ ನೋಡುವುದು ಅವಶ್ಯಕ. 'ಪುಷ್ಪ' ನಿಜವಾದ ಪುಷ್ಪವಾಗಿ, ತನ್ನ ಮಕರಂದದಿಂದ ಕನ್ನಡಿಗರ ಮನವನ್ನು ತಣಿಸಲಿ.

೪೪. **ಮಾತನಾಡುವ ಕಲ್ಲು** (ಕಥಾಸಂಕಲನ). ಬರೆದವರು 'ಆನಂದಕಂದ'. ಪ್ರಕಾಶಕರು; ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೧೦೬ ಪುಟಗಳು. ಬೆಲೆ ೧-೪-೦.

೪೫. **ಸರ್ವಜ್ಞ ಸಂದೇಶ** (ದ್ವೈತ ಸಿದ್ಧಾಂತಪರಿಚಯಾತ್ಮಕ— ಪ್ರಚಾರಕ ಮಾಸಪತ್ರಿಕೆ.) ಸಂಪಾದಕರು ಪಂಡಿತ ಚೀಮನಹಳ್ಳಿ ರಘುನಾಥಾಚಾರ್ಯರು. ಪ್ರಕಾಶಕರು: ಸಿ. ಆರ್. ವಿ. ಆಚಾರ್ಯ ನಂ. ೭೩, 'ಹಯವದನ ಸದನ' ೬ನೆಯ ಬೀದಿ, ಚಾಮರಾಜಪೇಟೆ, ಬೆಂಗಳೂರು ಸಿಟಿ. ಡೆ. ಅ. ೪೮ ಪುಟಗಳು. ವಾ. ಚಂ. ೪-೦-೦.

ಸಂಸಾದಕರು ದ್ವೈತವೇದಾಂತದಲ್ಲಿ ವಿಶಾರದರು. ಬಹುಶ್ರುತರು. ಇವರ ಪ್ರಾಮಾಣಿಕ ಸಂಪಾದಕತ್ವದ ಪ್ರಯೋಜನವನ್ನು ದ್ವೈತಮತಾನುಯಾಯಿಗಳೂ ದ್ವೈತಮತಾಭ್ಯಾಸದ ಆಸಕ್ತಿಯುಳ್ಳವರೂ ಅವಶ್ಯವಾಗಿ ಪಡೆದುಕೊಳ್ಳಬೇಕು.

೪೬. **ಕನ್ನಡ ಕಾವ್ಯಭಾಂಡಾರ** ಭಾಗ ೧ (ಮುಗಿಲ ಮುತ್ತುಗಳು ೧). ೧೯೨೦–೩೦ ದಶಕದ ಪ್ರಾತಿನಿಧಿಕ ಕವನಸಂಗ್ರಹವಿದು. ಸಂಗ್ರಾಹಕರು ಶ್ರೀಯುತ ಕೃಷ್ಣಕುಮಾರ ಕಲ್ಲೂರ, ಮುಂಬಯಿ. ಪ್ರಕಾಶಕರು: ಭಾರತೀ ಪ್ರಕಾಶನಮಂದಿರ, ೧೦ ಬಿಸಮಿಲ್ಲಾ ಬಿಲ್ಡಿಂಗ್, ೧ನೆಯ ಮಾಳಿಗೆ, ದಾದರ— ಮುಂಬೈ. ಕ್ರೌ. ಅ. ೪೪ + ೨೪ ಪುಟಗಳು. ಬೆಲೆ ೧—೦—೦. (ಇದೇ ದಶಕದ ಪ್ರಾತಿನಿಧಿಕ ಕವನಸಂಕಲನದ ೨ನೆಯ ೩ನೆಯ ಭಾಗಗಳೂ ಹೊರಡಲಿವೆ.)

೪೭. **ದೊರೆಸಾನಿ** (ಸರಳರಗಳೆಯಲ್ಲಿ ಬರೆದ ಒಂದು ರೂಪಕ). ಲೇಖಕರು ಶ್ರೀಯುತ ಪುರಾಣಿಕ ಕೃಷ್ಣ ಮೂರ್ತಿ, ಗೋಕಾಕ. ಪ್ರಕಾಶಕರು ಶ್ರೀ. ಕೆ. ಟಿ. ಪುರಾಣಿಕ, 'ಸಾಹಿತ್ಯಸೇವಾಮಂದಿರ' ಗೋಕಾಕ, ಜಿಲ್ಲಾ ಬೆಳಗಾಂವಿ ಕ್ರೌ. ಅ. ೬೬ ಪುಟಗಳು. ಬೆಲೆ ೧—೦—೦.

೪೮. **ಮಾರ್ಕ್ಸ್‌ವಾದ** (ಪರಿಚಯಾತ್ಮಕ ಗ್ರಂಥ). ಲೇಖಕರು ಶ್ರೀಯುತ ಗೌರೀಶ ಕಾಯ್ಕಿಣಿ, ಗೋಕರ್ಣ. ಧಾರವಾಡದ ಮಿಂಚಿನಬಳ್ಳಿಯ ೧೧ನೆಯ ವರ್ಷದ ೪ನೆಯ ಕುಡಿ. ಕ್ರೌ. ಆ, ೧೬೨ ಪುಟಗಳು. ಬೆಲೆ ೨—೦—೦.

೪೯. **ಯಕ್ಷಗಾನ ಪರಿಷತ್ತಿನ ಅಧ್ಯಕ್ಷೀಯ ಭಾಷಣ** (ಶ್ರೀಮಾನ್ ಜಿ. ಆರ್. ಪಾಂಡೇಶ್ವರರ ಅಧ್ಯಕ್ಷತೆಯಲ್ಲಿ ಶಿರಸಿಯಲ್ಲಿ ನೇರಿದ ಪ್ರಥಮ ಕರ್ನಾಟಕ ಯಕ್ಷಗಾನ ನಾಟಕ ಪರಿಷತ್ತಿನ ಅಧ್ಯಕ್ಷರ ಪ್ರಾರಂಭ ಭಾಷಣ). ಕ್ರೌ. ಅ. ೨೯ ಪುಟಗಳು.

೫೦. **ಸೆರೆಯಿಂದ ಹೊರಗೆ** (ಕಥಾಸಂಕಲನ). ಲೇಖಕರು ಶ್ರೀ. ಬಸವರಾಜ ಕಟ್ಟಿಮನಿಯವರು. ಪ್ರಕಾಶಕರು ಶ್ರೀ. ಭಾಲಚಂದ್ರ ಘಾಣೇಕರ್, ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೧೬+೧೦೦ ಪುಟಗಳು. ಬೆಲೆ ೧—೪—೦.

೫೧. **ಮಹಾದೇವಿಯಕ್ಕ** (ಜೀವನ ಚರಿತ್ರ). ಲೇಖಕರು: ಶ್ರೀಮಾನ್ ಮಾ. ನಂ. ನಂಜಪ್ಪನವರು, ಬೆಂಗಳೂರು. ಪ್ರಕಾಶಕರು: ವೀರಶೈವ ಸಾಹಿತ್ಯ ಭಾಂಡಾರ, 'ಕಲ್ಯಾಣ ಭವನ' ೩೯ ಚಿಕ್ಕಪೇಟೆ, ಬೆಂಗಳೂರು ೨. ಕ್ರೌ. ಅ. ೨೨+೧೨೦ ಪುಟಗಳು. ಬೆಲೆ ೧— ೮—೦.

೫೨. **ಸ್ವಾತಂತ್ರ್ಯ ಸೂರ್ಯೋದಯ** (ರಾಜಕೀಯ ಪ್ರಬಂಧಗಳು). ಲೇಖಕರು ಶ್ರೀ. ಮಾ. ನಂ. ನಂಜಪ್ಪನವರು. ಪ್ರಕಾಶಕರು ಮೇಲಿನ ವೀರಶೈವ ಸಾಹಿತ್ಯ ಭಾಂಡಾರದವರೇ. ಕ್ರೌ.ಅ. ೪೦ ಪುಟಗಳು. ಬೆಲೆ ೦—೮—೦.

೫೩. **ಚಿನ್ಮೂಲಾದ್ರಿಯ ಲಾವಣಿ.** ಲೇಖಕರು ಮತ್ತು ಪ್ರಕಾಶಕರು ಮೇಲಿ ಹೇಳಿರುವವರೆ. ಕ್ರೌ. ಅ. ೧೦ ಪುಟಗಳು. ಬೆಲೆ ೦—೨—೦.

೫೪. **ಪ್ರಗತಿ** (ಹೊಸ ವಾರಪತ್ರಿಕೆ). ಅಖಿಲ ಕರ್ನಾಟಕದ ವಿದ್ಯಾರ್ಥಿಗಳ ವಾಣಿಯಿದು. ಸಂಪಾದಕರು ಶ್ರೀ. ಚೆನ್ನವೀರ ಕಣವಿಯವರು. ಕಾರ್ಯಾಲಯವು ಹುಬ್ಬಳ್ಳಿಯಲ್ಲಿದೆ. ಕ್ರೌ. ೧ಿದ ೮ ಪುಟಗಳು ಬಿಡಿ ಸಂಚಿಕೆಗೆ ೦—೧—೦.

೫೫. **ನವಯುಗ** (ದಿನಪತ್ರಿಕೆಯ ೩ನೆಯ ವರ್ಷದ ವಿಶೇಷ ಸಂಚಿಕೆ). ಸಂಪಾದಕರು ಶ್ರೀ. ತಿ. ರು. ನೇಸ್ವಿ ಬಿ.ಎ., ಎಂ. ಎಲ್. ಎ. ಪ್ರಕಾಶಕರು 'ನವಯುಗ' ಕಾರ್ಯಾಲಯ ಮುಬ್ಬಳ್ಳಿ. ಕ್ರೌ. ಫೋ. ೬೨ ಪುಟಗಳು. ಬೆಲೆ ೦—೧೦—೦.

ಕನ್ನಡ ನಾಡಿನಲ್ಲಿಯ ಸುಪ್ರಸಿದ್ಧರಾದ ಹಲವು ಜನ ಲೇಖಕರಿಂದ ಬರೆಯಿಸಿದ ವಿವಿಧ ಲೇಖನ, ಕವನ, ಪ್ರಬಂಧಗಳಿಂದ ಕೂಡಿದ ಸಂಗ್ರಾಹ್ಯವಾದ ಸಂಚಿಕೆಯಿದು. ಇಂತಹ ಸುಂದರ ಸಂಚಿಕೆಯನ್ನು ಒದ ಕೊಟ್ಟ ಸಂಪಾದಕರಿಗೆ ನಮ್ಮ ಧನ್ಯವಾ ಗಳು.

೫೬. **ಸುದರ್ಶನ** (ಹೊಸ ವ ಪತ್ರಿಕೆ). ಸಂಪಾದಕ ಮತ್ತು ಪ್ರಕಾಶಕರು ಶ್ರೀಮಾನ್ ನರಸಿಂಗ ನಾರಾಯ ಭಿಸೆ, ಹಿಂದಮಾತಾ ಮುದ್ರಣಾಲಯ ಗಾಂಧಿಚೌಕು, ಧಾರವಾಡ. ಕ್ರೌ. ೪ ೮ ಪುಟಗಳು. ವಾ. ಚಂ. ೨ ರೂವಾ ಬಿಡಿಸಂಚಿಕೆಗೆ ೦—೦—೬.

ಇದೊಂದು ಪಕ್ಷಾತೀತ ಪತ್ರಿಕೆಯೆ ಹೊರಟಿದೆ. ಎಷ್ಟೋ ಜನ ಆ ಕಾರ್ಯಕರ್ತರು, ಕಾರಣಾಂತರಗ ಹಿಂದೆ ಬಿದ್ದಿದ್ದು, ತಾವು ಹಿಂದೆ ಬಿದ್ದ ತಪ್ಪನ್ನು ಯಾರು ಯಾರ ತಲೆಯ ಮೇ ಹೇರಿ ಬೈಯುತ್ತಲಿರುವರು. ಬೈಯಬೆ ಗಿದ್ದವರು ಸದ್ಯ ರೂಢವಾಗಿರುವ ಎ ಪಕ್ಷಗಳಲ್ಲಿರುವುದರಿಂದ, ಬೈಯುವ ಪಕ್ಷಾತೀತರೆಂಬ ತತ್ತ್ವದ ಪರದೆಯ ಮರೆ ಮಾಡಿಕೊಂಡು, ಸೇಡನ್ನು ತೆ ಕೊಳ್ಳುತ್ತಿರುವುದು ಇಂದಿನ ಅನೇಕ ಪ ತೀತರ ಪದ್ಧತಿಯಾಗಿದೆ. ಶ್ರೀಮ ಭಿಸೆಯವರ ಸಂಪಾದಕತ್ವ ಇಂತಹ ತೀರಿಸಿಕೊಳ್ಳುವ 'ಪಕ್ಷಾತೀತ'ವಾಗ ಪ್ರಾಮಾಣಿಕವಾದ ಪಕ್ಷಾತೀತವಾ ಅವರ 'ಸುದರ್ಶನ'ದಿಂದ ಕನ್ನಡಿ ಕಲ್ಯಾಣವಾಗಲೆಂದು ಯಾರೂ ಹ ಯಿಸಬಹುದು.

೫೭. **ನಕ್ಷತ್ರಗಾನ** (ಕವನ ಸಂಕಲ ಲೇಖಕರು ಶ್ರೀಮಾನ್ ಡಿ. ಎಸ್. ಕ ಎಂ. ಎ., ಬಿ. ಟಿ. ಬೆಳಗಾಂವಿ. ಪ್ರ ಕರು ಶ್ರೀ. ಚ. ಚ. ಅಬಕಾರಿ, ಕರ್ನಾ ಪುಸ್ತಕ ಮಂದಿರ, ಬನಹಟ್ಟಿ, ಕ್ರೌ. ೧೧೪ ಪುಟಗಳು. ಬೆಲೆ ೧—೪—೦

೫೮. **ಮತಿವಂತನ ವಚನಗ** (ಪದ್ಯ ಗ್ರಂಥ) ಬರೆದವರು ಶ್ರೀ ಬ ರಾಜ, ಅಂಗಡಿ, ಬಂಕಾಪುರ. ಬ ಪುರದ ಬಸವರಾಜ ನಿಲಯದ ೩ನೆ ಪುಷ್ಪ. ಡಿ. ಗ್ರಿದ ೨೮ ಪುಟಗ ಬೆಲೆ ೦—೪—೦.



GREATEST ARTISTS • FINEST RECORDING

"HIS MASTER'S VOICE"

ತೀರ ಬಿಸಿಬಿಸಿಯಾದ

ಕನ್ನಡ ರೆಕಾರ್ಡುಗಳು

ಶ್ರೀ. ಬಾಳಪ್ಪಾ ಹುಕ್ಕೇರಿ

N 25925 — ಬಿಟ್ಟೇನೆಂದರೆ ಬಿಡದೀ ಮಾಯೆ / ನಾಳೆ ಬಪ್ಪುದು ನಮಗಿಂದೇ

ಶ್ರೀ. ಮಾಣಿಕರಾವ್ ಠಾಯಚೂರಕರ್

N 25928 — ಅಹುದಾದರಹುದೆನ್ನಿ (ಕನಕದಾಸ) / ಕಷ್ಟಪಟ್ಟರು ಇಲ್ಲ

★

ಕು. ಇಂದುಮತಿ ಮುಂಡೇವಾಡಿ ಬಿ.ಎ.

N 25922 — ಬೆಳಗಾಯಿತೂ ನೋಡಽ / ನಡಿ ಜಾಣಾ ಜಾತ್ರಿ ಕಡಿ

ಶ್ರೀಮತಿ ಲಕ್ಷ್ಮೀಬಾಯಿ ದಾತಾರ

N 25921 — ಬಾಲ ಬಂದ ನೋಡೆ (ಭೈರವಿ) / ಕೊಳಲ ಕೇಳಿ (ಬಿಗೇಶ್ರೀ)

ಶ್ರೀಮತಿ ಪಿ. ಸುಂದರಮ್ಮ ರಾಘವಯ್ಯ

★

N 25920 — ಚಿಂತೆ ಯಾತಕೊ / ವೃಂದಾವನದೊಳು

N 25927 — ಓಡಿ ಬಾರಯ್ಯ (ಭಾಗ ೧-೨)

★

ಭಕ್ತ ಪುರಂದರದಾಸ

ನಾಟಕ ಭಾಗ ೧-೪

ಪ್ರೊ. ಎನ್. ಕೆ. ಕುಲಕರ್ಣಿ, ಎಂ.ಎ. ಬಿ.ಟಿ.

"ಹಿಜ್ ಮಾಸ್ಟರ್ಸ್ ವಾಯಿಸ್" ಕನ್ನಡ ನಾಟ್ಯ ಸಂಘದಿಂದ

N 25929 ರಿಂದ N 25932 ರ ವರೆಗೆ

ನಿಮ್ಮಲ್ಲಿಯ ರೆಕಾರ್ಡು ವ್ಯಾಪಾರಿಗಳಲ್ಲಿ ನಮ್ಮ ಬೇರೆ ಕನ್ನಡ ರೆಕಾರ್ಡುಗಳ ಕ್ಯಾಟಲಾಗನ್ನು ಕೇಳಿ ಪಡೆಯಿರಿ!

THE GRAMOPHONE COMPANY LIMITED

CALCUTTA — BOMBAY — MADRAS — DELHI

ನಿಮ್ಮ ಮನೆ, ಹೊಲ ಅಥವಾ ಕಾರಖಾನೆಯಲ್ಲಿ ನೀರಿನ
ಸಮಸ್ಯೆ ಪರಿಹಾರವಾಗಬೇಕಿದ್ದರೆ

ಕಿರ್ಲೋಸ್ಕರ

'ಸೆಂಟ್ರಿಫ್ಯೂಗಲ್ ಪಂಪ'ನ್ನೇ

ಉಪಯೋಗಿಸಿರಿ



ಹೆಚ್ಚಿನ ವಿವರಗಳಿಗಾಗಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ.

ಇವರಿಗೆ ಬರೆಯಿರಿ.

Printed by Mr. V. Y. Jathar at the Karnatak Printing Works, Dharwar, and Published for the Proprietors, Jayanti Publications, by M. V. Melligatti at the Jayanti Office, Dharwar. 1974-49